ಸಂಶೋಧನೆ

ಏನು? ಏಕೆ? ಹೇಗೆ?

ಎಂ. ಚಂದ್ರ ಪೂಜಾರಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಶೋಧನೆ

ಏನು? ಏಕೆ? ಹೇಗೆ?

ಎಂ. ಚಂದ್ರ ಪೂಜಾರಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

SAMSHODHANE

ENU? EKE? HEGE?

by
Dr. M. Chandra Poojary
Professor
Dept. of Development Studies
Kannada University, Hampi
Vidyaránya 583 276

Published by
Dr. A. Subbanna Rai
Director, Prasaranga
Kannada University, Hampi
Vidyaranya 583 276

Pp: X+264, **Price: ₹ 160/-**

ISBN 978-93-80994-88-8

First Impression 2009

Second Impression 2011

www.kannadauniversity.org

ಬೆಲೆ : ₹ ೧೬೦/-

ಮುಖಪುಟ : ಕೆ.ಕೆ.ಮಕಾಳಿ

ಅಕ್ಷರ ಸಂಯೋಜನೆ
ವಿದ್ಯಾರಣ್ಯ ಗಣಕಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ ೫೮೩ ೨೭೬
ದೂರವಾಣಿ : ೦೮೩೯೪-೨೪೧೩೧೩

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ನಂ. ೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂರವಾಣಿ : ೦೮೦-೨೨೩೭೨೩೮೮

ಸ್ವಾನ್ ಪ್ರಿಂಟರ್ಸ್
www.svanprinters.com
✆: 080 - 2674 2233

ಶಬ್ದ ಪಾರಮಾರ್ಗಮಶಕ್ಯಂ

ಕರ್ನಾಟಕದ ಅಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿ ರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸ ಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ, ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ

ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುರುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲು ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆ ಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಸಮಾಜವಿಜ್ಞಾನಗಳ ವಿಷಯ ಕುರಿತು ಅದರಲ್ಲಿಯೂ ಸಂಶೋಧನೆ ಕುರಿತು ಕನ್ನಡದಲ್ಲಿ ಪ್ರಕಟಗೊಂಡ ಕೃತಿಗಳು ತುಂಬಾ ವಿರಳ. ಈ ಶೂನ್ಯ ನಿವಾರಣೆ ಎಂಬಂತೆ ಸಮಾಜವಿಜ್ಞಾನ ವಿಷಯ ಕುರಿತು ಹೊಸ ಹೊಸ ಚಿಂತನೆಗಳನ್ನು ಕನ್ನಡದ ಓದುಗರಿಗೆ ಉಣಬಡಿಸುತ್ತಿರುವ ವಿದ್ವಾಂಸರ ಸಾಲಿನಲ್ಲಿ ಡಾ. ಎಂ. ಚಂದ್ರ ಪೂಜಾರಿ ಅವರು ಒಬ್ಬರು. ಇವರು ಸಮಾಜ ಸಂಶೋಧನೆ ಕುರಿತು ಹಲವಾರು ಪುಸ್ತಕಗಳನ್ನು ರಚಿಸಿ ಕನ್ನಡದ ಓದುಗರಿಂದ ಮತ್ತು ಸಂಶೋಧಕರಿಂದ ಮನ್ನಣೆಯನ್ನು ಪಡೆದಿದ್ದಾರೆ. ಅದೇ ರೀತಿ "ಸಂಶೋಧನೆ-ಏನು? ಏಕೆ? ಹೇಗೆ?" ಎನ್ನುವ ಈ ಕೃತಿಯಲ್ಲಿ ಸಂಶೋಧನೆಯ ಸಾಂಪ್ರದಾಯಿಕ ವ್ಯಾಖ್ಯಾನ ಮತ್ತು ಸಂಶೋಧನೆಯ ದೃಷ್ಟಿಕೋನಗಳನ್ನು ಬದಲಾಯಿಸಲು ಪೂರಕವಾಗುವ ಸಾಕಷ್ಟು ನೆಲೆಗಳನ್ನು ನೀಡಿರುವುದು ವಿಶೇಷವಾಗಿದೆ. ಸಂಶೋಧನೆಯನ್ನು ಸತ್ಯ/ವಾದದ ಪ್ರತಿಪಾದನೆಯೆಂದು ವ್ಯಾಖ್ಯಾನಿಸಿರುವ ಇವರು, ಈಗಾಗಲೇ ಸ್ಥಾಪಿತ ಸತ್ಯ/ವಾದಗಳೊಂದಿಗೆ ಸಂವಾದ ನಡೆಸಿ

ತಮ್ಮ ಸತ್ಯ/ವಾದವನ್ನು ಪ್ರತಿಪಾದನೆ ಮಾಡುವುದು ಮತ್ತು ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳೊಂದಿಗೆ ಸಂವಾದ ನಡೆಸುವುದು ಇಲ್ಲಿ ಬಹುಮುಖ್ಯ ಅಂಶ. ಈಗಾಗಲೇ ಸ್ಥಾಪಿತವಾದ ಎಲ್ಲ ಬಗೆಯ ಸತ್ಯ/ವಾದಗಳೊಂದಿಗೆ ಸಂವಾದ ನಡೆಸಿ ಸತ್ಯ/ ಪ್ರತಿಪಾದನೆ ನಡೆದರೆ ಪ್ರತಿಪಾದಿತ ಸತ್ಯ ಹೆಚ್ಚು ವಸ್ತುನಿಷ್ಠ ಎಂದು ಚಂದ್ರ ಪೂಜಾರಿ ಅವರು ವಾದಿಸಿದ್ದಾರೆ. ಆದುದರಿಂದ ಇಲ್ಲಿ ವಸ್ತುನಿಷ್ಠತೆಯ ಪರೀಕ್ಷೆ ಪೊಸಿಟಿವಿಸ್ಟ್‌ಗಳು ಮುಂದಿಡುವ ಊಹೆಗಳ(ಹೈಪೋಥಿಸಿಸ್ ಟೆಸ್ಟಿಂಗ್) ಪರೀಕ್ಷೆಯಲ್ಲ. ಲೋಕಲ್ ಮತ್ತು ಗ್ಲೋಬಲ್ ಸ್ಥಾಪಿತ ಸತ್ಯಗಳೊಂದಿಗೆ ಸಂವಾದ ನಡೆಸಿ ಸತ್ಯ/ವಾದ ಪ್ರತಿಪಾದನೆ ನಡೆಸುವುದು ಇಲ್ಲಿ ವಸ್ತುನಿಷ್ಠೆಯ ಬಹುದೊಡ್ಡ ಪರೀಕ್ಷೆ. ಲೋಕಲ್ ಹಾಗೂ ಗ್ಲೋಬಲ್ ಸ್ಥಾಪಿತ ಸತ್ಯಗಳು ಅಧಿಕಾರವನ್ನು, ಸಂಪನ್ಮೂಲಗಳನ್ನು, ಸ್ಥಾನಮಾನ ಗಳನ್ನು ಸಮಾಜದ ವಿವಿಧ ವ್ಯಕ್ತಿ/ಕುಟುಂಬ/ಗುಂಪುಗಳ ನಡುವೆ ಅಸಮಾನವಾಗಿ ಹಂಚುವಲ್ಲಿ ಬಹುದೊಡ್ಡ ಪಾತ್ರ ವಹಿಸುತ್ತವೆ. ಸಂಪನ್ಮೂಲಗಳ ಸ್ಥಾನಮಾನಗಳ ಅಸಮಾನ ಹಂಚುವಿಕೆಗೆ ಕಾರಣವಾಗಿರುವ ಸತ್ಯ/ವಾದಗಳನ್ನು ಅಲ್ಲಗಳೆದು ಹೊಸ ಸತ್ಯ/ವಾದಗಳನ್ನು ಮುಂಚೂಣಿಗೆ ತರುವುದು ಸಂಶೋಧನೆಯ ಬಹುದೊಡ್ಡ ಜವಾಬ್ದಾರಿ ಕೂಡ ಎನ್ನುವುದು ಈ ಬರಹದ ಬಹುಮುಖ್ಯ ವಾದವಾಗಿ ಕಂಡುಬರುತ್ತದೆ. ಸಂಶೋಧನ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿರುವ ಈ ಗ್ರಂಥ ಇದೀಗ ಮರುಮುದ್ರಣವಾಗುತ್ತಿದೆ. ಮರುಮುದ್ರಿಸಲು ಒಪ್ಪಿದ ಡಾ. ಚಂದ್ರ ಪೂಜಾರಿ ಅವರಿಗೆ ಕನ್ನಡ ವಿಶ್ವವಿದ್ಯಾಲಯ ಆಭಾರಿಯಾಗಿದೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಎ. ಸುಬ್ಬಣ್ಣ ರೈ ಮತ್ತು ಸಹಾಯಕ ನಿರ್ದೇಶರಾದ ಶ್ರೀ ಬಿ.ಸುಜ್ಞಾನಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

ಡಾ.ಎ. ಮುರಿಗೆಪ್ಪ
ಕುಲಪತಿ

ಕೃತಜ್ಞತೆಗಳು

ಹಿರಿಯ ವಿದ್ವಾಂಸರುಗಳ ಜತೆ ನಡೆಸಿದ ಸಂಶೋಧನ ಯೋಜನೆಗಳು, ಚರ್ಚೆಗಳು ಹಾಗೂ ವೈಧಾನಿಕತೆ ಮೇಲಿನ ಅವರ ಉಪನ್ಯಾಸಗಳು ಸಂಶೋಧನ ವಿಧಿವಿಧಾನಗಳ ಮೇಲಿನ ನನ್ನ ಆಲೋಚನೆಗಳನ್ನು ದೊಡ್ಡ ಪ್ರಮಾಣದಲ್ಲಿ ಪ್ರಭಾವಿಸಿವೆ. ಡಾ.ವೆಲೇರಿಯನ್ ರಾಡ್ರಿಗಸ್, ಡಾ.ಸುರೇಂದ್ರರಾವ್, ಡಾ.ಕೆ.ವಿ.ನಾರಾಯಣ, ಡಾ.ಶಶಿಧರ್, ಡಾ.ಟಿ.ಎನ್. ಶ್ರೀಧರ, ಡಾ.ಹುಸೇನ್‌ಖಾನ್, ಡಾ.ಬಿ.ಶೇಷಾದ್ರಿ, ಡಾ.ಟಿ.ಆರ್. ಚಂದ್ರಶೇಖರ್ ಇವರುಗಳ ಜತೆಗಿನ ಸಂಶೋಧನ ಕೆಲಸಗಳು ಹಾಗೂ ಸಂಶೋಧನ ವಿದ್ಯಾರ್ಥಿಗಳ ಪ್ರಶ್ನೆಗಳು ಸಂಶೋಧನೆ ಮೇಲಿನ ನನ್ನ ಬರಹಗಳಿಗ ೆ ಹೊಸ ರೂಪ ಕೊಟ್ಟಿವೆ. ಡಾ.ವೆಲೇರಿಯನ್ ರಾಡ್ರಿಗಸ್, ಡಾ.ಸುರೇಂದ್ರರಾವ್ ಮತ್ತು ಡಾ.ಕೆ.ವಿ.ನಾರಾಯಣ ಇವರುಗಳು ಸಂಶೋಧನೆ ಮೇಲಿನ ನನ್ನ ಹಿಂದಿನ ಪುಸ್ತಕಗಳನ್ನು ಓದಿ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಈ ಪುಸ್ತಕದ ಕರಡು ಪ್ರತಿಯನ್ನು ಡಾ.ಸುರೇಂದ್ರರಾವ್, ಡಾ.ಕೆ.ವಿ.ನಾರಾಯಣ, ಡಾ.ಹುಸೇನ್‌ಖಾನ್ ಇವರುಗಳು ಓದಿ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಈ ಯೋಜನೆ ಮೇಲಿನ ಇವರ ಅಭಿಪ್ರಾಯಗಳನ್ನು ಪುಸ್ತಕದ ಕೊನೆಗೆ ನೀಡಿದ್ದೇನೆ. ಒಂದು ವರ್ಷದ ಅಧ್ಯಯನ ರಜೆ ನೀಡಿ ಸಂಶೋಧನ ವಿಧಿವಿಧಾನಗಳ ಮೇಲಿನ ಈ ಯೋಜನೆಗೆ ಕುಲಪತಿಗಳಾದ ಡಾ.ಎ.ಮುರಿಗೆಪ್ಪ, ಹಿಂದಿನ ಕುಲಸಚಿವರಾದ ಡಾ.ಹಿ.ಚಿ.ಬೋರಲಿಂಗಯ್ಯ ಹಾಗೂ ಇಂದಿನ ಕುಲಸಚಿವರು ಡಾ.ಮಂಜುನಾಥ ಬೇವಿನಕಟ್ಟಿ ಇವರುಗಳು ಪ್ರೋತ್ಸಾಹಿಸಿದ್ದಾರೆ. ವಿಭಾಗದ ಕಿರಿಯ ಸಹದ್ಯೋಗಿಗಳಾದ ಡಾ.ಎ.ಶ್ರೀಧರ್, ಡಾ.ಸಿದ್ಧಗಂಗಮ್ಮ, ಶ್ರೀ ಜನಾರ್ದನ ಇವರುಗಳು ನನ್ನ ಎಲ್ಲ ಬರಹಗಳನ್ನು ಪ್ರೋತ್ಸಾಹಿಸಿದ್ದಾರೆ. ನನ್ನ ಪತ್ನಿ ಜಲಜಾಕ್ಷಿ ಮತ್ತು ಮಗಳು ಶೆರಿನ್‌ಜಾಜಿ ನನ್ನ ಕನ್ನಡವನ್ನು ಟೀಕಿಸುತ್ತಾ ಸಾಮಾನ್ಯರಿಗೆ ಅರ್ಥವಾಗುವಂತೆ ಬರೆಯಲು ಒತ್ತಾಯಿಸಿದ್ದಾರೆ. ಇವರೆಲ್ಲರೂ ಈ ಪುಸ್ತಕ ರೂಪುಗೊಳ್ಳುವಲ್ಲಿ ನೇರವಾಗಿ ಮತ್ತು ಪರೋಕ್ಷವಾಗಿ ನನ್ನೊಂದಿಗೆ ಸಹಕರಿಸಿದ್ದಾರೆ. ಈ ಪುಸ್ತಕ ಹೊರತರುವಲ್ಲಿ ಡಾ. ಎ. ಸುಬ್ಬಣ್ಣ ರೈ, ಸುಜ್ಞಾನಮೂರ್ತಿ, ಕೆ.ಕೆ.ಮಕಾಳಿ, ಶ್ರೀಮತಿ ಬಿ.ರಶ್ಮಿ ಕೃಪಾಶಂಕರ್ ಸಹಕರಿಸಿದ್ದಾರೆ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

* * *

ಈ ಪುಸ್ತಕ ಮರುಮುದ್ರಣಗೊಳ್ಳಲು ಪ್ರೋತ್ಸಾಹಿಸಿದ ಮಾನ್ಯ ಕುಲಪತಿಗಳಾದ ಡಾ. ಎ. ಮುರಿಗೆಪ್ಪ ಅವರಿಗೂ ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೂ ಪುಸ್ತಕ ವಿನ್ಯಾಸ ಮಾಡಿ ಅಚ್ಚುಕಟ್ಟಾಗಿ ಪ್ರಕಟವಾಗಲು ಸಹಕರಿಸಿದ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೂ, ಕರಡು ತಿದ್ದಿ ಸಹಕರಿಸಿದ ಡಾ. ಎಸ್. ಮೋಹನ್ ಅವರಿಗೂ, ಮುಖಪುಟ ರೂಪಿಸಿದ ಶ್ರೀ ಕೆ.ಕೆ. ಮಕಾಳಿ ಅವರಿಗೂ ಹಾಗೂ ಪುಟವಿನ್ಯಾಸ ಮಾಡಿಕೊಟ್ಟ ಪ್ರಸಾರಾಂಗದ ಶ್ರೀ ಜೆ. ಶಿವಕುಮಾರ ಅವರಿಗೂ ನನ್ನ ಕೃತಜ್ಞತೆಗಳು.

ಎಂ. ಚಂದ್ರ ಪೂಜಾರಿ

ಪರಿವಿಡಿ

೧

ಪ್ರಸ್ತಾವನೆ

ಸಂಶೋಧನೆ ಅಂದರೇನು? ಯಾಕೆ ಸಂಶೋಧನೆ? ಹೇಗೆ ಸಂಶೋಧನೆ? ಇತ್ಯಾದಿಗಳು ಬಹುತೇಕ ಆರಂಭಿಕ ಸಂಶೋಧಕರನ್ನು ಕಾಡುವ ಪ್ರಶ್ನೆಗಳು. ಈ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲು ಈ ಪುಸ್ತಕದಲ್ಲಿ ಪ್ರಯತ್ನಿಸಿದ್ದೇನೆ. ಈ ಪ್ರಶ್ನೆಗಳು ಆರಂಭಿಕ ಸಂಶೋಧಕರನ್ನು ಏಕರೂಪದಲ್ಲಿ ಕಾಡುವುದಿಲ್ಲ. ಸಂಶೋಧನೆ ಒಬ್ಬರಿಗೆ ನಿಜದರ್ಶನ ಮಾಡುವ ಪ್ರಕ್ರಿಯೆಯಾಗಿ ಕಂಡರೆ ಮತ್ತೊಬ್ಬರಿಗೆ ಹೊಸತೇನನ್ನೋ ಹೇಳುವ ಅವಕಾಶದಂತೆ ಕಾಣಬಹುದು. ಒಬ್ಬರಿಗೆ ಈಗಾಗಲೇ ಹೇಳಿರುವುದನ್ನು ವಿಮರ್ಶಿಸುವ ಅವಕಾಶವನ್ನು ಸಂಶೋಧನೆ ನೀಡಿದರೆ ಮತ್ತೊಬ್ಬರಿಗೆ ಈಗಾಗಲೇ ಹೇಳಿರುವುದನ್ನು ಅಲ್ಲಗೆಳೆದು ಮತ್ತೇನನ್ನೋ ಹೇಳುವ ಸಾಧ್ಯತೆಯನ್ನು ಒದಗಿಸಬಹುದು. ಇನ್ನು ಕೆಲವರಿಗೆ ಸಂಶೋಧನೆ ಸಾಮಾಜಿಕ ಪರಿವರ್ತನೆಯ ಸಾಧನದಂತೆ ಕಾಣಬಹುದು. ಇದೇ ರೀತಿಯಲ್ಲಿ ಸಂಶೋಧನೆಯ ಅನುಭವ ಕೂಡ ಹಲವರಿಗೆ ಹಲವು ವಿಧ. ಕೆಲವರಿಗೆ ಸಂಶೋಧನೆಯೊಂದು ಕತ್ತಲು ಓಣಿಯ ಪಯಣ. ಬೆಳಕು ಕಾಣುವ ತವಕ. ಆದರೆ ಕಾಣುತ್ತಿಲ್ಲ. ಇನ್ನು ಕೆಲವರಿಗೆ ಅನಿವಾರ್ಯವಾಗಿ ಅನುಭವಿಸಬೇಕಾದ ಹಿಂಸೆ. ಹಿಂಸೆ ಅನುಭವಿಸಿದ ನಂತರ ಲಾಭ ಇದೆ ಎನ್ನುವ ಭರವಸೆ. ಆದುದರಿಂದ ಹಿಂಸೆಯನ್ನು ಅನುಭವಿಸಲು ಮಾನಸಿಕವಾಗಿ ರೆಡಿಯಾಗುವುದು. ಮತ್ತೆ ಕೆಲವರಿಗೆ ಇದೊಂದು ಬಗೆಯ ಅಮಲು. ಸಂಶೋಧನೆಯ ಇಡೀ ಪ್ರಕ್ರಿಯೆ ಎಲ್ಲವನ್ನು ಮರೆಸಿ ಬೇರೆಯದೇ ಲೋಕಕ್ಕೆ ಒಯ್ಯುತ್ತದೆ. ಸಂಶೋಧನೆ ಮುಗಿಸಿದ ನಂತರ ಎಲ್ಲವು ಖಾಲಿಯಾದ ಅನುಭವ. ಸಂಶೋಧನೆಯನ್ನು ಇಡೀ ವ್ಯಕ್ತಿತ್ವವನ್ನೇ ಬದಲಾಯಿಸುವ ಪ್ರಕ್ರಿಯೆಂದು ನೋಡುವವರಿದ್ದಾರೆ. ವಿಷಯವನ್ನು ಗ್ರಹಿಸುವ, ಜೀರ್ಣಿಸಿಕೊಳ್ಳುವ, ಮಂಡಿಸುವ ಇತ್ಯಾದಿ ವಿಧಾನಗಳನ್ನು ಹೊಸತಾಗಿ ಕಲಿಯುವ ದೃಷ್ಟಿಯಿಂದ ಸಂಶೋಧನೆಯನ್ನು ನೋಡುವವರಿದ್ದಾರೆ. ಇವರಿಗೆ ಸಂಶೋಧನೆ ಎಲ್ಲವನ್ನು ಹೊಸಬಗೆಯಲ್ಲಿ ನೋಡಲು, ಗ್ರಹಿಸಲು ಮತ್ತು ಮಂಡಿಸಲು ತರಬೇತಿಯಂತಾಗುತ್ತದೆ. ಹೀಗೆ ಸಂಶೋಧನೆಯನ್ನು ಹಲವು ಬಗೆಯಲ್ಲಿ ನೋಡುವವರನ್ನು

ಮತ್ತು ಅನುಭವಿಸು ಪವರನ್ನು ಕಾಣುತ್ತೇವೆ. ಹಲವು ಬಗೆಯಲ್ಲಿ ಸಂಶೋಧನೆಯನ್ನು ನೋಡುವುದು ಮತ್ತು ಅನುಭವಿಸುವುದು ಸಮಸ್ಯೆಯಲ್ಲ. ಆದರೆ ಇವೆಲ್ಲ ಬೇರೆ ಬೇರೆ ವ್ಯಕ್ತಿಗಳಿಗಾಗುವುದು ನಿಜವಾದ ಸಮಸ್ಯೆ ಎನ್ನುವ ಗ್ರಹಿತವಿದೆ.[1] ಅಂದರೆ ಇವೆಲ್ಲವು ಸಂಶೋಧನೆಯಲ್ಲಿ ತೊಡಗುವ ಪ್ರತಿಯೊಬ್ಬರಲ್ಲೂ ಆಗದಿರುವುದು ಸಮಸ್ಯೆ ಎನ್ನುವ ಗ್ರಹಿಕೆ ಇದೆ. ಸಂಶೋಧನೆಯಂತ ಒಂದು ಪ್ರಕ್ರಿಯೆ ಪ್ರತಿಯೊಬ್ಬರಿಗೂ ಬೇರೆ ಬೇರೆ ಕಾಣಲು ಮತ್ತು ಅನುಭವಕ್ಕೆ ಬರಲು ಕಾರಣವಿದೆ. ಹಲವಾರು ಜ್ಞಾನ ಶಾಖೆಗಳಿವೆ. ಹಲವಾರು ವಿಷಯಗಳಿವೆ. ಹಲವಾರು ಬಗೆಯ ಸಂಶೋಧನೆಗಳಿವೆ ಮತ್ತು ಹಲವಾರು ಸಂಶೋಧನ ವಿಧಾನಗಳೂ ಇವೆ. ಹೀಗಿರುವಾಗ ಎಲ್ಲರಿಗೂ ಸಂಶೋಧನೆ ಒಂದೇ ರೀತಿಯಲ್ಲಿ ಕಾಣಲು ಸಾಧ್ಯವೇ ಇಲ್ಲ. ಹಲವು ಜ್ಞಾನ ಶಾಖೆಗಳು, ಹಲವು ವಿಧಾನ ಇತ್ಯಾದಿಗಳಿರುವ ಸಂದರ್ಭದಲ್ಲಿ ಈ ಉತ್ತರ ಸರಿಯಾಗಬಹುದು. ಆದರೆ ಒಂದೇ ಜ್ಞಾನ ಶಾಖೆಯಲ್ಲಿ, ಒಂದೇ ವಿಷಯದ ಮೇಲೆ, ಒಂದೇ ಬಗೆಯ ಸಂಶೋಧನೆಯನ್ನು ಒಂದೇ ವಿಧಾನದಲ್ಲಿ ಮಾಡಿದಾಗಲೂ ಸಂಶೋಧನೆ ಹಲವು ರೀತಿಯಲ್ಲಿ ಕಾಣಬಹುದು ಮತ್ತು ಅನುಭವಕ್ಕೆ ಬರಬಹುದು. ಈ ವಿವಿಧತೆಯನ್ನು ಹೇಗೆ ವಿವರಿಸುವುದು? ಎನ್ನುವುದು ಮೊದಲಿನ ಪ್ರಶ್ನೆಯಾದರೆ ಇಂತಹ ವಿವಿಧತೆ ಬಗೆಗಿನ ಮೌಲ್ಯ ತೀರ್ಮಾನವೇನು? ಅಂದರೆ ವಿವಿಧತೆ ಒಳ್ಳೆಯದೇ ಅಥವಾ ಕೆಟ್ಟದೇ ಎನ್ನುವ ಪ್ರಶ್ನೆ. ಇವೆರಡು ಪ್ರತ್ಯೇಕ ಪ್ರಶ್ನೆಗಳಲ್ಲ. ಒಂದೇ ಪ್ರಶ್ನೆಯ ಎರಡು ಮುಖಗಳು. ವಿವಿಧತೆ ಯಾಕಿದೆ ಎನ್ನುವ ವಿವರಣೆಯಲ್ಲಿ ಅದರ ಕುರಿತ ಮೌಲ್ಯ ತೀರ್ಮಾನ ಕೂಡ ಇದೆ. ಈ ವಿವಿಧತೆ ಯಾಕಿದೆ? ಎನ್ನುವುದನ್ನು ಇಲ್ಲಿ ಪ್ರಸ್ತಾಪಿಸಲಾಗುವುದು.

ನಮ್ಮ ಸಾಮಾಜಿಕ ಬದುಕು ಚಾರಿತ್ರಿಕವಾಗಿ ಹಲವು ಗುಂಪುಗಳಾಗಿ ರೂಪುಗೊಂಡಿದೆ. ಇಂತಹ ಗುಂಪುಗಳನ್ನು ಗುರುತಿಸಲು ಜಾತಿ, ಸಮುದಾಯ, ಮತ, ಧರ್ಮ ಇತ್ಯಾದಿ ಪಾರಿಭಾಷೆಗಳನ್ನು ಬಳಸಲಾಗುತ್ತಿದೆ. ಭಾಷೆ, ಉಡುಗೆ ತೊಡುಗೆ, ಊಟ ಉಪಚಾರ, ದೇವರು ದಿಂಡ್ರು, ಕಸುಬು ಇತ್ಯಾದಿಗಳ (ಸಂಸ್ಕೃತಿಯ ಸಾಮಾನ್ಯ ವ್ಯಾಖ್ಯಾನ) ಕುರಿತಂತೆ ಗುಂಪು/ಪಂಗಡಗಳ ನಡುವೆ ಸಾಕಷ್ಟು ಪ್ರತ್ಯೇಕತೆ ಇತ್ತು ಮತ್ತು ಇದೆ. ಇಂತಹ ಪ್ರತ್ಯೇಕತೆಗಳ ನಡುವೆ ಸಾಕಷ್ಟು ಪೈಪೋಟಿ ಕೂಡ ಇತ್ತು ಮತ್ತು ಇದೆ. ಆದರೆ ಯಾವುದೋ ಒಂದು ಸಂಸ್ಕೃತಿಯ ಆಚಾರವಿಚಾರಗಳು ಸಮಷ್ಟಿಯ ಆಚಾರವಿಚಾರಗಳಾಗುವಂತೆ ಮಾಡುವಷ್ಟು ಅಧಿಕಾರ ಸಮಷ್ಟಿಯನ್ನು ಆವರಿಸಿಕೊಂಡಿರಲಿಲ್ಲ. ವಸಾಹತು ಮತ್ತು ನಂತರದ ವಸಾಹತೋತ್ತರ ಸಂದರ್ಭದಲ್ಲಿ ಇಂತಹ ಪ್ರತ್ಯೇಕತೆಗಳನ್ನು ಕಡಿಮೆ ಮಾಡಿ ಏಕತೆಯನ್ನು ರೂಪಿಸುವ ಸಾಕಷ್ಟು ಪ್ರಯತ್ನಗಳು ನಡೆಯುತ್ತಿವೆ. ಇದಕ್ಕೆ ಬಹುಮುಖ್ಯ ಕಾರಣ ಭಾಷೆ, ಉಡುಗೆ ತೊಡುಗೆ, ಊಟ ಉಪಚಾರ, ದೇವರು ದಿಂಡ್ರು, ಕಸುಬು ಇತ್ಯಾದಿಗಳಲ್ಲಿನ ಪ್ರತ್ಯೇಕತೆಗಳು ರಾಷ್ಟ್ರ/ರಾಜ್ಯ ನಿರ್ಮಾಣದ ದೃಷ್ಟಿಯಿಂದ ಒಳ್ಳೆಯದಲ್ಲ ಎನ್ನುವ ನಂಬಿಕೆ.[2] ಈ ನಂಬಿಕೆಯ ಹಿಂದೆ ಹಲವಾರು ಗ್ರಹಿಕೆಗಳು ಕೆಲಸ ಮಾಡುತ್ತಿವೆ. ಒಂದು, ಹಿಂದಿನ

ಜಾತಿ/ಧರ್ಮ/ಪಂಗಡವಾರು ಲೋಕದೃಷ್ಟಿಗಳು ಎಲ್ಲ ಒಟ್ಟು ಸೇರಿ ಸಮಾನರಾಗಿ ಬದುಕಲು ಪೂರಕವಾಗಿಲ್ಲ. ಎರಡು, ರಾಷ್ಟ್ರ/ರಾಜ್ಯ ನಿರ್ಮಾಣದ ದೃಷ್ಟಿಯಿಂದ ಒಂದು ಧರ್ಮ, ಒಂದು ಭಾಷೆ ಉತ್ತಮ. ಹಲವಾರು ಜಾತಿ/ಧರ್ಮಗಳು ಭಾಷೆಗಳು ಇರುವುದು ರಾಷ್ಟ್ರ ನಿರ್ಮಾಣದ ದೃಷ್ಟಿಯಿಂದ ಒಳ್ಳೆಯದಲ್ಲ. ಮೂರು, ಆಧುನಿಕ ಲೋಕದೃಷ್ಟಿ ಪಂಗಡವಾರು ಲೋಕದೃಷ್ಟಿಗಳ ನಕರಾತ್ಮಕ ಪ್ರಭಾವವನ್ನು ಕಡಿಮೆ ಮಾಡಿ ಎಲ್ಲರು ಒಟ್ಟಾಗಿ ಸಮಾನರಾಗಿ ಬದುಕಲು ಅನಿವಾರ್ಯ. ಅಂದರೆ ಆಧುನಿಕ ಲೋಕದೃಷ್ಟಿಯಲ್ಲಿ ಸಮಾನತೆ, ಸ್ವಾತಂತ್ರ್ಯ, ಸ್ವಾಯತ್ತತೆ, ಪಾರದರ್ಶಕತೆ, ಸಮಷ್ಟಿ ನಿರ್ಧಾರ ಇತ್ಯಾದಿ ಮೌಲ್ಯಗಳು ಮುಖ್ಯ ಭೂಮಿಕೆ ನಿಭಾಯಿಸುತ್ತವೆ ಎನ್ನುವ ನಂಬಿಕೆ ಕೂಡ ಇದೆ.[೩] ಆಧುನಿಕ ಲೋಕದೃಷ್ಟಿಯನ್ನು ರೂಪಿಸುವ ಬಹುದೊಡ್ಡ ಜವಾಬ್ದಾರಿಯನ್ನು ಆಧುನಿಕ ಶಿಕ್ಷಣ ಹೊಂದಿದೆ. ಶಿಕ್ಷಣ ಹೆಚ್ಚಿದಂತೆ ಹಿಂದಿನ ಜಾತಿ/ಧರ್ಮವಾರು ಲೋಕದೃಷ್ಟಿಗಳ ಪ್ರಭಾವ ಕಡಿಮೆ ಆಗಿ ಆಧುನಿಕ ಲೋಕದೃಷ್ಟಿ ರೂಪಿತವಾಗುತ್ತದೆ ಎನ್ನುವ ನಂಬಿಕೆ ಇದೆ. ಆದರೆ ಶಿಕ್ಷಣದ ಮೇಲಿನ ವಿಮರ್ಶಿತ ನಿಲುವು ಮತ್ತು ಶಿಕ್ಷಿತರ ನಡವಳಿಕೆಗಳು ಮೇಲಿನ ನಂಬಿಕೆಗಳನ್ನು ಅಲ್ಲಗೆಳೆಯುತ್ತಿವೆ.

ವಿಮರ್ಶಿತ ನಿಲುವಿನ ಅನುಸಾರ ಶಿಕ್ಷಣ ಎಷ್ಟೋ ಬಾರಿ ವಿವಿಧತೆಗಳನ್ನು ನಾಶ ಮಾಡುವ ಮತ್ತು ಯಾವುದೋ ಒಂದು ಬಗೆಯ ಏಕತೆಯನ್ನು(ಈ ಏಕತೆ ಮನುಷ್ಯ ವಿರೋಧಿ ಕೂಡ ಆಗಬಹುದು) ಸಾಧಿಸುವ ಸಾಧ್ಯತೆ ಕೂಡ ಇದೆ.[೪] ಈ ದೃಷ್ಟಿಯಿಂದ ಆಧುನಿಕ ಶಿಕ್ಷಣವನ್ನು ನೋಡಿದರೆ ಶಾಲೆಯ ವಾತಾವರಣ ಮತ್ತು ಸುಸಂಸ್ಕೃತರನ್ನು ಸೃಷ್ಟಿಸುವ ಶಿಕ್ಷಣ ಸಮಾಜದ ತಳಸ್ತರದ ಸಂಸ್ಕೃತಿಯನ್ನೇ ನಾಶ ಮಾಡುವ ಗುಮಾನಿ ಕಾಡುತ್ತಿದೆ. ಈ ಸಂದೇಹಕ್ಕೆ ಸಾಕಷ್ಟು ಕಾರಣಗಳಿವೆ. ಈ ಕಾರಣಗಳನ್ನು ಪ್ರಚಲಿತದಲ್ಲಿರುವ ಸಂಸ್ಕೃತಿ ಮತ್ತು ಶಿಕ್ಷಣದ ಸಂಬಂಧವನ್ನು ವಿಶ್ಲೇಷಿಸುವ ಮೂಲಕ ಅರ್ಥಮಾಡಿಕೊಳ್ಳ ಬಹುದು. ಪ್ರಚಲಿತದಲ್ಲಿರುವ ಸಂಸ್ಕೃತಿಯ ವ್ಯಾಖ್ಯಾನದಲ್ಲಿ ಬಹುಮುಖ್ಯ ಅಂಶಗಳೆಂದರೆ - ಉಡುಗೆ, ತೊಡುಗೆ, ಊಟ ಉಪಚಾರ, ದೇವರು ದಿಂಡ್ರು ಅಥವಾ ನಂಬಿಕೆ, ಭಾಷೆ ಇತ್ಯಾದಿಗಳು. ಶಿಕ್ಷಣ ಮತ್ತು ಇವುಗಳ ಸಂಬಂಧವನ್ನು ನೋಡುವ. ಮೊದಲಿಗೆ ಭಾಷೆಯ ಪ್ರಶ್ನೆಯನ್ನೇ ತೆಗೆದುಕೊಳ್ಳುವ, ಕನ್ನಡ ಕರ್ನಾಟಕದ ರಾಜ್ಯ ಭಾಷೆ, ಹಿಂದಿ ದೇಶದ ರಾಷ್ಟ್ರ ಭಾಷೆ ಮತ್ತು ಇಂಗ್ಲೀಷ್ ಉದ್ಯೋಗದ ಭಾಷೆ. ಕರ್ನಾಟಕದಲ್ಲಿ ಕನ್ನಡ/ಹಿಂದಿ/ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ನೀಡಬೇಕು. ಕರ್ನಾಟಕದ ಎಲ್ಲರ ಬಾಷೆ ಕನ್ನಡ/ಹಿಂದಿ/ಇಂಗ್ಲೀಷ್ ಭಾಷೆ ಅಲ್ಲ. ತುಳು, ಕೊಂಕಣಿ, ಮಲೆಯಾಳ, ಕೊಡವ, ಉರ್ದು ಹೀಗೆ ಹಲವಾರು ಭಾಷೆ ಮಾತಾಡುವ ಜನರಿದ್ದಾರೆ. ಇವರುಗಳ ಮಕ್ಕಳಿಗೆ ಅವರವರ ಮಾತೃಭಾಷೆಯಲ್ಲಿ ಶಿಕ್ಷಣ ನೀಡಿದರೆ ಉತ್ತಮ. ರಾಷ್ಟ್ರ ಮತ್ತು ಭಾಷೆಗೆ ಸಂಬಂಧ ಕಲ್ಪಿಸಿರುವುದರಿಂದ ಒಂದೇ ಭಾಷೆಯಲ್ಲಿ ಶಿಕ್ಷಣ ನೀಡುವುದು ಅನಿವಾರ್ಯ ಎಂದು ನಂಬಲಾಗಿದೆ. ಕನ್ನಡ/ಹಿಂದಿ/ ಇಂಗ್ಲೀಷ್ ಮಾತೃಭಾಷೆ ಅಲ್ಲದವರಿಗೆ ಕನ್ನಡ/ಹಿಂದಿ/ಇಂಗ್ಲೀಷ್ ಒಂದು ಹೊಸ ಭಾಷೆ. ಇವುಗಳಲ್ಲಿರುವ ಚಿಂತನೆಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಅವರು ಮೊದಲಿಗೆ

ಭಾಷೆಯನ್ನು ಕಲಿಯಬೇಕು. ನಂತರ ವಿಚಾರದ ಕಡೆಗೆ ಗಮನ ಹರಿಸಬೇಕು. ಕನ್ನಡ/ಹಿಂದಿ/ಇಂಗ್ಲೀಷೇತರರಿಗೆ ಕನ್ನಡ/ಹಿಂದಿ/ಇಂಗ್ಲೀಷ್ ಶಿಕ್ಷಣ ತಮ್ಮ ಮಾತೃಭಾಷೆಯ ಅನುಕೂಲತೆಯನ್ನು ತಿರಸ್ಕರಿಸುತ್ತದೆ. ಅಷ್ಟು ಮಾತ್ರವಲ್ಲ ಶಾಲೆಯ ಭಾಷೆ ಅಥವಾ ಶಿಕ್ಷಣದ ಭಾಷೆ ಮಗುವಿಗೆ ಪರಕೀಯವಾಗುವುದರಿಂದ ಪಠ್ಯಗಳ ಮೌಲ್ಯಗಳು ಕೂಡ ಪರಕೀಯವಾಗುವ ಸಾಧ್ಯತೆಗಳಿವೆ.[೫]

ಆಧುನಿಕ ಶಿಕ್ಷಣ ಭಾಷೆಯಂತೆ ಒಂದು ನಿರ್ದಿಷ್ಟ ಬಗೆಯ ಉಡುಗೆ-ತೊಡುಗೆಯನ್ನು ಮುಂಚೂಣಿಗೆ ತರುತ್ತದೆ. ಈ ಉಡುಗೆ-ತೊಡುಗೆ ವಿದ್ಯಾರ್ಥಿಯ ಕುಟುಂಬ ಅಥವಾ ಸಮುದಾಯದ ಜನರ ಉಡುಗೆ-ತೊಡುಗೆಯಲ್ಲ. ಎಷ್ಟೊ ಬಾರಿ ತಂದೆತಾಯಿಯನ್ನು ಶಾಲೆಗೆ ಕರೆದುಕೊಂಡು ಬನ್ನಿ ಎಂದಾಗ ವಿದ್ಯಾರ್ಥಿಗೆ ಇರುಸುಮುರುಸಾಗುವ ಸಾಧ್ಯತೆ ಇದೆ. ಪಾಲಕರಲ್ಲಿ ಶಾಲೆಗೆ ತಕ್ಕನಾದ ಉಡುಗೆ-ತೊಡುಗೆ ಮಾಡಿಕೊಳ್ಳಿಯೆಂದು ಹೇಳುವಂತಿಲ್ಲ. ಇಂತಹ ಸಮಸ್ಯೆಯಿಂದ ಹೊರಬರಲು ಎಷ್ಟೋ ಬಾರಿ ವಿದ್ಯಾರ್ಥಿಗಳು ಶಾಲೆಗೆ ತಕ್ಕನಾದ ಉಡುಗೆ-ತೊಡುಗೆ ಇರುವವರನ್ನು ಪಾಲಕರೆಂದು ಕರೆದುಕೊಂಡು ಹೋಗುವ ಸಾಧ್ಯತೆಯೂ ಇದೆ. ಆಧುನಿಕ ಶಿಕ್ಷಣ ಎಲ್ಲೂ ನೇರವಾಗಿ ಇಂತಹುದೇ ಊಟ ಮಾಡಿ ಎಂದು ಹೇಳುವುದಿಲ್ಲ. ಆದರೆ ಪರೋಕ್ಷವಾಗಿ ಊಟದ ಬಗ್ಗೆ ಸಾಕಷ್ಟು ಸಲಹೆಗಳು ಶಾಲೆಯಲ್ಲಿ ಸಿಗುತ್ತವೆ. ಶಾಲೆಯಲ್ಲಿ ನಡೆಯುವ ಶಾರದ ಪೂಜೆ, ಶಾಲೆಯ ವಾರ್ಷಿಕೋತ್ಸವ ಅಥವಾ ಇತರ ಸಂದರ್ಭದಲ್ಲಿ ನೀಡುವ ಊಟ ಅಥವಾ ಫಲಹಾರ ಇತ್ಯಾದಿಗಳು ಸಸ್ಯಾಹಾರಿ. ಬಹುತೇಕ ಶಾಲೆಗಳಲ್ಲಿ ಯಾವುದೇ ಸಂದರ್ಭದಲ್ಲೂ ಮಾಂಸಹಾರಿ ಊಟ ಇರುವುದಿಲ್ಲ. ಮಾಂಸಹಾರಿಗಳೇ ನಡೆಸುವ ಶಾಲೆಗಳಲ್ಲೂ ಮಾಂಸಹಾರಿ ಊಟ ಇಲ್ಲ. ಜತೆಗೆ ಶಾಲೆಯಲ್ಲಿ ಒಂದು ಕಾಲದಲ್ಲಿ ಬಹುತೇಕ ಶಿಕ್ಷಕರು ತರಕಾರಿ ತಿನ್ನುವವರು ಇದ್ದು, ಈವಾಗ ಮಾಂಸಹಾರಿಗಳಿದ್ದರೂ ಶಾಲೆಯಲ್ಲಿ ತರಕಾರಿ ಮಾತ್ರ ಎನ್ನುವ ಮನೋಭಾವನೆಯನ್ನು ರೂಢಿಸಿಕೊಂಡ ಮೇಷ್ಟ್ರುಗಳು ಇದ್ದಾರೆ. ಅವರು ಸೂಕ್ಷ್ಮ ಮನಸ್ಸಿನವರಲ್ಲದಿದ್ದರೆ ಮಾಂಸಹಾರಿ ಊಟದ ಬಗ್ಗೆ ಕೀಳಾಗಿ ಮಾತಾಡುವುದು ಇದೆ. ಮೇಷ್ಟ್ರು ಮಾತಾಡುವುದನ್ನು ಕೇಳಿ ವಿದ್ಯಾರ್ಥಿಗಳು ಮಾತಾಡುತ್ತಾರೆ. ಇದರಿಂದ ಮಾಂಸಹಾರಿ ವಿದ್ಯಾರ್ಥಿಗಳು ತಮ್ಮ ಊಟದ ಬಗ್ಗೆ ಕೀಳರಿಮೆ ಬೆಳೆಸಿಕೊಳ್ಳಬೇಕಾದ ಅನಿವಾರ್ಯತೆ ಇದೆ.[೬] ಬಿಸಿ ಊಟದ ಜತೆ ಮೊಟ್ಟೆ ಕೊಡುವುದರ ವಿರುದ್ಧ ಮಠಾಧೀಶರುಗಳು ವಿರೋಧಿಸಿರುವುದು ರಾಜ್ಯದಲ್ಲಿ ದೊಡ್ಡ ಸುದ್ಧಿಯಾಗಿದೆ. ಅವರ ಪ್ರಕಾರ ಮೊಟ್ಟೆ ಕೊಡುವುದು ನಮ್ಮ ಸಂಸ್ಕೃತಿಗೆ ವಿರುದ್ಧ. ಆದುದರಿಂದ ಮೊಟ್ಟೆ ಕೊಡುವುದು ಸರಿಯಲ್ಲ.[೭] ಬಹುತೇಕ ವಸತಿ ನಿಲಯಗಳಲ್ಲಿ ತರಕಾರಿ ಊಟ. ಯಾಕೆಂದರೆ ಎರಡು ಬಗೆಯ ಊಟ ತಯಾರಿಸುವುದು ಕಷ್ಟ ಮತ್ತು ಖರ್ಚು. ಆದುದರಿಂದ ಎಲ್ಲರಿಗೂ ತರಕಾರಿ ಊಟ. ಬಹುತೇಕರು ಮಾಂಸಹಾರಿಗಳಿದ್ದಾರೆ ಎಂದು ವಸತಿ ನಿಲಯಗಳಲ್ಲಿ ಮಾಂಸಹಾರಿ ಊಟ ನೀಡುವುದಿಲ್ಲ. ದೇವರು ದಿಂಡ್ರು ಪ್ರಶ್ನೆ ಬಂದರೆ ಶಾಲೆಯಲ್ಲಿ ಇರುವ ದೇವರ ಕಲ್ಪನೆಗೂ ಮಕ್ಕಳ ಮನೆಯ ದೇವರ ಕಲ್ಪನೆಗೂ ತುಂಬಾ ವ್ಯತ್ಯಾಸವಿದೆ. ಇಲ್ಲಿ ಶಾರದೆ, ಲಕ್ಷ್ಮಿ, ನಾರಾಯಣ, ರಾಮ

ಮುಂತಾದ ದೇವರಿದ್ದಾರೆ. ಆದರೆ ಮನೆಯಲ್ಲಿ ಬೇರೆ ಬೇರೆ ಸಮುದಾಯಗಳ ದೇವರುಗಳು ಬೇರೆ ಬೇರೆ. ಮುಸ್ಲಿಮರು ಕ್ರಿಶ್ಚಿಯನ್ನರ ದೇವರ ಕತೆ ಬಿಡಿ. ದಲಿತರ, ಕುರುಬರ, ನಾಯಕರ, ಒಕ್ಕಲಿಗರ ದೇವರ ಕಲ್ಪನೆಗಳು ಬೇರೆ ಇದೆ.

ಹೀಗೆ ಸುಸಂಸ್ಕೃತರನ್ನು ಸೃಷ್ಟಿಸುವ ನಮ್ಮ ಶಿಕ್ಷಣ ತಳಸ್ತರದ ವಿದ್ಯಾರ್ಥಿಯ ಹುಟ್ಟಿನ ಊಟ, ಉಡುಗೆ-ತೊಡುಗೆ, ಭಾಷೆ, ದೇವರು, ಕಸುಬು ಈ ಎಲ್ಲವನ್ನು ತಿರಸ್ಕರಿಸುತ್ತದೆ. ಹಲವು ಸಂಸ್ಕೃತಿಗಳು ವಿವಿಧತೆಯಲ್ಲಿ ಏಕತೆಯನ್ನು ಚಾರಿತ್ರಿಕವಾಗಿ ರೂಪಿಸಿಕೊಂಡಿರುವುದು ನಮ್ಮ ಸಮಾಜದ ಲಕ್ಷಣ. ಇಂತಹ ಬಹುತ್ವವನ್ನು ಶಿಕ್ಷಣ ನಿರಾಕರಿಸುತ್ತದೆ. ಯಾವುದೋ ಒಂದು ಬಗೆಯ ಭಾಷೆ, ಊಟ, ಉಡುಗೆ-ತೊಡುಗೆ ಇತ್ಯಾದಿಗಳನ್ನು ಶಿಕ್ಷಣ ಆದ್ಯತೆಗೊಳಿಸುತ್ತದೆ. ಇದರಿಂದಾಗಿ ಬಹುತ್ವವನ್ನು ಗೌರವಿಸುವ ಒಂದು ಪಾಠವನ್ನೇ ಶಿಕ್ಷಣ ಕೊಡುವುದಿಲ್ಲ. ಮತ್ತೊಬ್ಬರನ್ನು ಗೌರವಿಸುವುದೆಂದರೇನು? ಮತ್ತೊಬ್ಬರ ಭಾಷೆ, ಆಚಾರ ವಿಚಾರ, ಆಹಾರ, ಉಡುಗೆ-ತೊಡುಗೆ ಇತ್ಯಾದಿಗಳನ್ನು ಗೌರವಿಸುವುದು. ಇಂತಹ ಒಂದು ಪಾಠದ ಬದಲು ನಮ್ಮ ಶಿಕ್ಷಣ ರಾಷ್ಟ್ರ/ರಾಜ್ಯ ಕಟ್ಟಲು ಅನುಕೂಲವಾಗುವ ಅಧಿಕಾರ ಪ್ರೇರಿತ ಏಕತೆಯನ್ನು ಬೆಳೆಸಲು ಪ್ರಯತ್ನಿಸುತ್ತದೆ. ನಮ್ಮ ರಾಷ್ಟ್ರ ಕಟ್ಟುವವರು ವಿವಿಧತೆಯಲ್ಲಿ ಏಕತೆಯೆಂದು ಘೋಷಣೆ ಮಾಡಿದ್ದಾರೆ. ಆದರೆ ನಮ್ಮಲ್ಲಿ ಏಕತೆಯನ್ನು ರೂಪಿಸಲು ಮಾತ್ರ ಕಾರ್ಯಕ್ರಮಗಳಿವೆ. ವಿವಿಧತೆಯನ್ನು (ಒಂದೇ ಧರ್ಮದೊಳಗಿನ ವಿವಿಧತೆಗಳನ್ನು) ರಕ್ಷಿಸುವ ಕಾರ್ಯಕ್ರಮಗಳಿಲ್ಲ. ಇದಕ್ಕಿಂತಲೂ ಮತ್ತೊಂದು ದೊಡ್ಡ ಅಪಾಯ ಇರುವುದು ಶಾಲೆ ನಮ್ಮೆಲ್ಲರ ಸಂಸ್ಕೃತಿಯ ಗುಣ ಲಕ್ಷಣಗಳೆಂದು ಮಕ್ಕಳ ಮನಸ್ಸಿಗೆ ತುಂಬುವಂತ ಹಲವಾರು ವಿಚಾರಗಳು ಸಮಾಜದ ಬಹುದೊಡ್ಡ ಸಂಖ್ಯೆಯ ಮುಂದಿಯಲ್ಲಿ ಕೀಳರಿಮೆಯನ್ನು ಇಬ್ಬಂದಿತನವನ್ನು ಬೆಳೆಸುವ ಸಾಧ್ಯತೆ ಇದೆ. ಇದೇ ಸಂದರ್ಭದಲ್ಲಿ ಶಿಕ್ಷಣ ಪ್ರತಿಪಾದಿಸುವ ಭಾಷೆ, ಜೀವನ ಶೈಲಿ ಇತ್ಯಾದಿಗಳನ್ನು ನಮ್ಮದೇ ಸಂಸ್ಕೃತಿಯ ಕೆಲವು ಸಮುದಾಯಗಳು (ತುಂಬಾ ಕಡಿಮೆ ಸಂಖ್ಯೆಯಲ್ಲಿರುವ) ತಮ್ಮ ದಿನನಿತ್ಯದ ಬದುಕಿನಲ್ಲಿ ಆಚರಿಸುತ್ತಿವೆ. ಇವರುಗಳು ಭಾಷೆ, ಉಡುಗೆ-ತೊಡುಗೆ, ಊಟ, ದೇವರು ಮುಂತಾದವುಗಳು ಮತ್ತು ಶಾಲೆಯಲ್ಲಿ ಮುಂದಕ್ಕೆ ತರುವ ಸಂಸ್ಕೃತಿಯ ಗುಣಲಕ್ಷಣಗಳಿಗೂ ಸಾಕಷ್ಟು ಸಂಬಂಧ ಇದೆ. ಇದರಿಂದಾಗಿ ಈ ಹಿನ್ನೆಲೆಯಿಂದ ಬಂದ ಮಕ್ಕಳಿಗೆ ಶಾಲೆಯ ವ್ಯವಹಾರಗಳು ತಮ್ಮ ಮನೆಯ ವ್ಯವಹಾರಗಳಿಗೆ ಹತ್ತಿರವಾಗುತ್ತದೆ. ಇದು ಸಹಜವಾಗಿ ಇವರ ಆತ್ಮವಿಶ್ವಾಸವನ್ನು ವೃದ್ಧಿಸುತ್ತದೆ. ಶಾಲೆಯ ಪಠ್ಯ ಕ್ರಮಗಳನ್ನು, ಶಿಸ್ತುಗಳನ್ನು ಭಾಷೆಯನ್ನು ಜೀರ್ಣಿಸಿಕೊಳ್ಳಲು ಸುಲಭವಾಗುತ್ತದೆ. ಇದು ಕೇವಲ ಕೆಳ ಹಂತದ ಸಮಸ್ಯೆಯಲ್ಲ. ಮುಂದೆ ಹೋದಂತೆ ಈ ಸಮಸ್ಯೆ ಇನ್ನು ಹೆಚ್ಚು ಗಾಢವಾಗಿ ಕಾಡುತ್ತದೆ. ಸ್ನಾತಕ ಅಥವಾ ಸ್ನಾತಕೋತ್ತರ ಹಂತದಲ್ಲೂ ಹೆಚ್ಚು ಕಡಿಮೆ ಪ್ರಾಥಮಿಕ ಹಂತದಲ್ಲಿರುವ ಇಬ್ಬಂದಿತನವನ್ನು ಸೃಷ್ಟಿಸುವ ಶಿಕ್ಷಣ ಮುಂದುವರಿಯುತ್ತದೆ. ಈ ಸಮಸ್ಯೆಗಳ ಜತೆಗೆ ವರ್ಗ ಭಿನ್ನತೆಯನ್ನು ಬೆಳೆಸಲು ಶಿಕ್ಷಣ ತನ್ನದೇ ಕೊಡುಗೆ ನೀಡುತ್ತಿದೆ.

ಹಲವಾರು ವಿಧದ ಶಿಕ್ಷಣಗಳು ನಮ್ಮಲ್ಲಿ ಲಭ್ಯ. ತಳಸ್ತರದಲ್ಲಿ ರಾಜ್ಯ ಭಾಷೆ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಶಿಕ್ಷಣ ಇದೆ. ಅದೇ ರೀತಿಯಲ್ಲಿ ಗ್ರಾಮೀಣ ಜನರಿಗೆ ಮತ್ತು ಪೇಟೆ ಪಟ್ಟಣಗಳ ಜನರಿಗೆ ಬೇರೆ ಬೇರೆ ಶಿಕ್ಷಣ ಇದೆ. ಇನ್ನು ಕೇಂದ್ರ ಮತ್ತು ರಾಜ್ಯ ಪಠ್ಯ ಎನ್ನುವ ಮತ್ತೊಂದು ಬ್ರಾಂಡ್ ಕೂಡ ಇದೆ. ಅವರವರ (ಹಣಕಾಸಿನ) ಯೋಗ್ಯತೆಗನುಸಾರ ಜನರು ತಮಗೆ ಬೇಕಾದ ಶಿಕ್ಷಣವನ್ನು ಆರಿಸಿಕೊಳ್ಳಬಹುದು. ಈ ದೃಷ್ಟಿಯಿಂದ (ಶಿಕ್ಷಣ ಆಯ್ಕೆಯ ದೃಷ್ಟಿಯಿಂದ) ಭಾರತ ಶ್ರೀಮಂತ ದೇಶಗಳನ್ನು ಮೀರಿಸಿದೆ ಎನ್ನಬಹುದು. ಆದರೆ ಈ ಭಿನ್ನತೆಗಳು ಕೇವಲ ಪಠ್ಯ ಅಥವಾ ಭಾಷೆಯ ಭಿನ್ನತೆಗಳು ಮತ್ತು ಆಯ್ಕೆಗಳಿಗೆ ಸೀಮಿತವಾಗಿಲ್ಲ. ಭಾಷೆ ಅಥವಾ ಪಠ್ಯ ಆಯ್ಕೆಗಳಿಗಿಂತಲೂ ಹೆಚ್ಚಾಗಿ ಇವುಗಳು ವರ್ಗ ಭಿನ್ನತೆಯನ್ನು ಬೆಳೆಸುತ್ತಿವೆ. ಮೇಲಿನ ಕನ್ನಡ/ಇಂಗ್ಲೀಷ್ , ಗ್ರಾಮೀಣ/ಪೇಟೆ, ರಾಜ್ಯ/ಕೇಂದ್ರ, ಸರಕಾರಿ/ಖಾಸಗಿ ಇತ್ಯಾದಿಗಳಲ್ಲಿ ಮೊದಲಿನದ್ದು(ಕನ್ನಡ, ಗ್ರಾಮೀಣ, ಸರಕಾರಿ ಇತ್ಯಾದಿಗಳು) ಬಡವರ ಅನಾನುಕೂಲಸ್ಥರ ಶಿಕ್ಷಣವಾದರೆ ಎರಡನೇಯದ್ದು (ಇಂಗ್ಲೀಷ್, ಖಾಸಗಿ, ಪೇಟೆ ಇತ್ಯಾದಿಗಳು) ಉಳ್ಳವರ ಸ್ವತ್ತಾಗಿದೆ. ಇದೇ ಬಗೆಯ ವರ್ಗ ಪ್ರಶ್ನೆಯನ್ನು ಜೀವಂತ ಇಡುವ ಮತ್ತು ಬೆಳೆಸುವ ಶಿಕ್ಷಣ ಕ್ರಮ ಉನ್ನತ ಶಿಕ್ಷಣದಲ್ಲೂ ಇದೆ. ಮೂರು ಬಗೆಯ ವಿಶ್ವವಿದ್ಯಾಲಯಗಳು ಮತ್ತು ಹಲವಾರು ಬಗೆಯ ಸಂಶೋಧನ ಸಂಸ್ಥೆಗಳು ನಮ್ಮಲ್ಲಿ ಕೆಲಸ ಮಾಡುತ್ತಿವೆ. ಕೇಂದ್ರೀಯ ವಿಶ್ವವಿದ್ಯಾಲಯಗಳು, ರಾಜ್ಯ ವಿಶ್ವವಿದ್ಯಾಲಯಗಳು, ಖಾಸಗಿ ವಿಶ್ವವಿದ್ಯಾಲಯಗಳು (ಪರದೇಶಿ ವಿಶ್ವವಿದ್ಯಾಲಯಗಳು ಇನ್ನು ಬರಬೇಕಿದೆ) ಎನ್ನುವ ಮೂರು ವಿಶ್ವವಿದ್ಯಾಲಯಗಳು ಉನ್ನತ ಶಿಕ್ಷಣವನ್ನು ನೀಡುತ್ತಿವೆ.[೯] ಈ ಮೂರರಲ್ಲಿ ಸಂಪೂರ್ಣ ವಿಭಿನ್ನ ರೂಪದ ಶಿಕ್ಷಣ ಲಭ್ಯ. ಕೇಂದ್ರೀಯ ವಿಶ್ವವಿದ್ಯಾಲಯಗಳು ಕಡಿಮೆ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಹೊಂದಿರುವುದು ಮಾತ್ರವಲ್ಲ ಪಠ್ಯಗಳ ಆಯ್ಕೆಯ ಸ್ವಾತಂತ್ರ್ಯ ವಿದ್ಯಾರ್ಥಿಗಳಿಗೆ ಸಾಕಷ್ಟು ಇದೆ. ತಮ್ಮ ಆಸಕ್ತಿ ಕ್ಷೇತ್ರಗಳಲ್ಲಿ ಪಠ್ಯಗಳನ್ನು ರೂಪಿಸಿ ಕೋರ್ಸ್‌ಗಳನ್ನು ನೀಡುವ ಸ್ವಾತಂತ್ರ್ಯ ಮೇಸ್ಟ್ರುಗಳಿಗಿದೆ. ಇಲ್ಲಿನ ವಿದ್ಯಾರ್ಥಿಗಳು ಭಾರತದ ಆಡಳಿತ ಸೇವೆ, ಭಾರತದ ವಿದೇಶಿ ಸೇವೆ, ಎಂಬಿಎ ಮುಂತಾದ ಕಡೆಗಳಲ್ಲಿ ಉತ್ತಮ ನೌಕರಿ ಗಿಟ್ಟಿಸಿಕೊಳ್ಳುತ್ತಾರೆ. ಕೇಂದ್ರೀಯ ವಿಶ್ವವಿದ್ಯಾಲಯಗಳ ಶಿಕ್ಷಣ ಕ್ರಮ, ಸವಲತ್ತು ಇತ್ಯಾದಿಗಳಿಗೆ ಹೋಲಿಸಿದರೆ ರಾಜ್ಯ ವಿಶ್ವವಿದ್ಯಾಲಯಗಳ ಶಿಕ್ಷಣ, ಸವಲತ್ತುಗಳು ಸಂಪೂರ್ಣ ವಿರುದ್ಧ ಗುಣಲಕ್ಷಣಗಳನ್ನು ಹೊಂದಿವೆ. ರಾಜ್ಯ ವಿಶ್ವವಿದ್ಯಾಲಯಗಳ ಪ್ರತಿ ತರಗತಿಯಲ್ಲೂ ಅರುವತ್ತಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು, ಯಾವುದೋ ಕಾಲದಲ್ಲಿ ಸಿದ್ಧಪಡಿಸಿದ ಪಠ್ಯಗಳು, ಕೋರ್ಸ್‌ನೊಳಗೆ ಪಠ್ಯಗಳ ಸೀಮಿತ ಆಯ್ಕೆ ಇತ್ಯಾದಿಗಳು ಇಲ್ಲಿನ ಶಿಕ್ಷಣದ ಗುಣಲಕ್ಷಣ. ತಮ್ಮ ಆಸಕ್ತಿ ಕ್ಷೇತ್ರದಲ್ಲಿ ಪಠ್ಯಗಳನ್ನು ಸಿದ್ಧಪಡಿಸಿ ಕೋರ್ಸ್‌ಗಳನ್ನು ನೀಡುವ ಅವಕಾಶ ಮೇಸ್ಟ್ರುಗಳಿಗೆ ಇಲ್ಲ. ಸೆಮಿಸ್ಟರ್ ಪದ್ಧತಿ ಬಂದ ನಂತರ ಪಾಠ ಮಾಡುವುದು, ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವುದು, ಪರೀಕ್ಷೆ ಮಾಡುವುದು, ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವುದು

ಇವಿಷ್ಟೇ ಮೇಸ್ಟ್ರುಗಳ ಕೆಲಸ ಆಗಿದೆ. ತಾವು ಪಾಠ ಮಾಡುವ ಜ್ಞಾನ ಎಲ್ಲಿ? ಏಕೆ? ಹೇಗೆ ಸೃಷ್ಟಿಯಾಗಿದೆ? ಯಾರ ಆಸಕ್ತಿಯನ್ನು ಈ ಜ್ಞಾನ ಪೂರೈಸುತ್ತಿದೆ? ಇತ್ಯಾದಿ ಪ್ರಶ್ನೆಗಳನ್ನು ಕೇಳಿಕೊಳ್ಳುವಷ್ಟು ಪುರುಸೊತ್ತನ್ನು ಮೇಸ್ಟ್ರುಗಳಿಗೆ ಶಿಕ್ಷಣ ವ್ಯವಸ್ಥೆ ನೀಡಿಲ್ಲ.

ರಾಜ್ಯ ವಿಶ್ವವಿದ್ಯಾಲಯಗಳ (ಕಾಲೇಜುಗಳನ್ನು ಸೇರಿಸಿಕೊಂಡು) ಮೇಸ್ಟ್ರ ಸ್ಥಿತಿ ಮಾಡರ್ನ್ ಟೈಮ್ಸ್ ಚಲನಚಿತ್ರದಲ್ಲಿನ ಚಾರ್ಲಿ ಚಾಪ್ಲಿನ್ ತರಹ ಆಗಿದೆ. ಆತ (ಚಾಪ್ಲಿನ್) ಆಗತಾನೇ ಶುರುವಾದ ಆಧುನಿಕ ಕಾರ್ಖಾನೆಯಲ್ಲಿ ಕೆಲಸಗಾರ. ಆಧುನಿಕ ಕಾರ್ಖಾನೆಯ ಕೆಲಸವೆಲ್ಲ ಮೇಶಿನ್ ನಿರ್ಧಾರಿತ. ಮನುಷ್ಯರ ಪಾತ್ರವೇನಿದ್ದರೂ ಸಣ್ಣಪುಟ್ಟ ನೆಟ್ ಬೋಲ್ಟ್ ಟೈಟ್ ಮಾಡುವಂತಹ ಕೆಲಸ ಮಾತ್ರ. ಸರಕಿನ ಬಿಡಿಭಾಗಗಳು ಚಲಿಸುವ ಪಟ್ಟಿಯಲ್ಲಿ (ಕನ್‌ವೇಯರ್ ಬೆಲ್ಟ್) ಚಲಿಸುತ್ತಿರುತ್ತದೆ. ಚಲಿಸುವ ಪಟ್ಟಿಯ ವಿವಿಧ ಹಂತಗಳಲ್ಲಿ ಕೆಲಸಗಾರರು ಬಿಡಿಭಾಗಗಳ ನೆಟ್ ಬೋಲ್ಟ್ ಟೈಟ್ ಮಾಡುವಂತಹ ಸಣ್ಣಪುಟ್ಟ ಕೆಲಸಗಳನ್ನು ಮಾಡಲು ನಿಂತಿರುತ್ತಾರೆ. ಬಿಡಿಭಾಗ ಕೆಲಸಗಾರನ ಹತ್ತಿರ ಬಂದ ಕೂಡಲೇ ನಿರ್ದಿಷ್ಟ ಅವಧಿಯಲ್ಲಿ ಆತ ತನ್ನ ಪಾಲಿನ ಕೆಲಸ ಮಾಡಿ ಮುಗಿಸಬೇಕು. ಒಂದು ವೇಳೆ ನಿಗದಿತ ವೇಳೆಯಲ್ಲಿ ಕೆಲಸಗಾರ ತನ್ನ ಪಾಲಿನ ಕೆಲಸ ಮುಗಿಸಲು ವಿಫಲನಾದರೆ ಬಿಡಿಭಾಗ ಮುಂದಕ್ಕೆ ಹೋಗುತ್ತದೆ. ಕೆಲಸಗಾರ ಕೆಲಸ ಕಳೆದುಕೊಳ್ಳಬೇಕಾಗುತ್ತದೆ. ಈ ಭಯದಿಂದ ಕೆಲಸಗಾರ ಉಸಿರುಗಟ್ಟಿ ತನ್ನ ಪಾಲಿನ ಕೆಲಸ ಮಾಡುವುದರಲ್ಲಿ ಬಿದ್ದಿರುತ್ತಾನೆ. ಆತನಿಗೆ ಈ ಬಿಡಿಭಾಗದಿಂದ ಉತ್ಪನ್ನವಾಗುವ ಅಂತಿಮ ಸರಕು ಹೇಗಿರುತ್ತದೆ? ಆ ಸರಕಿನ ಬಳಕೆದಾರರು ಯಾರು? ಆ ಸರಕು ಯಾವ ಉದ್ದೇಶಕ್ಕೆ ಬಳಕೆಯಾಗುತ್ತದೆ? ಇತ್ಯಾದಿಗಳ ಬಗ್ಗೆ ಆಲೋಚಿಸಲು ಸಮಯವೇ ಇರುವುದಿಲ್ಲ. ಆತನ ಜ್ಞಾನ ಏನಿದ್ದರೂ ತಾನು ನಿರ್ವಹಿಸುವ ಬಿಡಿಭಾಗದ ಮೇಲಿನ ಸಣ್ಣ ಕೆಲಸದ ಬಗ್ಗೆ ಮಾತ್ರ. ಹೆಚ್ಚು ಕಡಿಮೆ ಇದೇ ಸ್ಥಿತಿ ಮೇಸ್ಟ್ರುಗಳದ್ದು. ರಾಜಕೀಯ ಶಾಸ್ತ್ರ ಪಾಠ ಮಾಡುವ ಮೇಸ್ಟ್ರಿಗೆ ಚರಿತ್ರೆ ಗೊತ್ತಿಲ್ಲ ಅಥವಾ ಬೇಕಿಲ್ಲ. ಚರಿತ್ರೆ ಮೇಸ್ಟ್ರಿಗೆ ಅರ್ಥಶಾಸ್ತ್ರ ಗೊತ್ತಿಲ್ಲ. ಅರ್ಥಶಾಸ್ತ್ರದವರಿಗೆ ಚರಿತ್ರೆ, ಸಮಾಜ, ರಾಜಕೀಯ ಯಾವುದೂ ಗೊತ್ತಿಲ್ಲ, ಮಾತ್ರವಲ್ಲ ಗೊತ್ತಿರುವುದು ಬೇಡ ಎನ್ನುವುದೇ ಶಿಕ್ಷಣ ನೀತಿಯ ಆಶಯ.[೯] ತಾವು ಪಾಠ ಮಾಡುವ ಜ್ಞಾನ ಎಲ್ಲಿ? ಯಾವಾಗ? ಯಾಕೆ ಸೃಷ್ಟಿಯಾಗಿದೆ? ಇದನ್ನು ತಾನು ಯಾಕೆ ಪಾಠ ಮಾಡಬೇಕು? ಈ ಜ್ಞಾನವನ್ನು ವಿದ್ಯಾರ್ಥಿಗಳಿಗೆ ನೀಡುವುದರಿಂದ ಸೃಷ್ಟಿಯಾಗುವ ಸಮಾಜ ಹೇಗಿರುತ್ತದೆ? ಇತ್ಯಾದಿ ಸಂಗತಿಗಳ ಬಗ್ಗೆ ಆಲೋಚಿಸಲೂ ಮೇಸ್ಟ್ರಿಗೆ ಪುರುಸೊತ್ತು ಇಲ್ಲ.

ತೊಂಬತ್ತರ ನಂತರ ಭಾರತ ಅಧಿಕೃತವಾಗಿ ಮಾರುಕಟ್ಟೆ ಅರ್ಥ ನೀತಿಯನ್ನು ಅನುಸರಿಸುತ್ತದೆ. ಮಾರುಕಟ್ಟೆ ನೀತಿ ಆರಂಭವಾಗುವುದರೊಂದಿಗೆ ಸರಕಾರದ ಶಿಕ್ಷಣ ನೀತಿ ಕೂಡ ಬದಲಾಗಿದೆ. ಶಿಕ್ಷಣಕ್ಕೂ ಮಾರುಕಟ್ಟೆಗೂ ನೇರ ಸಂಬಂಧ ಬೇಕೆಂದು ವಾದಿಸಲಾಗುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಬಂಡವಾಳ (ಸ್ಥಳೀಯ ಮತ್ತು ಪರದೇಶಿ) ಹೂಡುವುದನ್ನು ಪ್ರೋತ್ಸಾಹಿಸಲಾಗುತ್ತಿದೆ.[೧೦] ಶಿಕ್ಷಣ ಕೂಡ ಇತರ ವ್ಯಾಪಾರದಂತೆ ದುಡ್ಡು ಹಾಕಿ ದುಡ್ಡು

ತೆಗೆಯುವ ಒಂದು ದಂಧೆಯಾಗಿದೆ. ಅತೀ ಹೆಚ್ಚು ಲಾಭ ತರುವ ವ್ಯವಹಾರವನ್ನು ಮಾತ್ರ ವ್ಯಾಪಾರಿಗಳು ಶುರು ಮಾಡುತ್ತಾರೇ ಹೊರತು ನಷ್ಟ ತರುವ ವ್ಯಾಪಾರವನ್ನು ಬುದ್ಧಿವಂತ ವ್ಯಾಪಾರಿಗಳು ನಡೆಸುವುದಿಲ್ಲ. ಈ ಬೆಳವಣಿಗೆಗಳಿಂದಾಗಿ ಮಾರುಕಟ್ಟೆಗೆ ನೇರ ಸಂಬಂಧ ಇರುವ ಶಿಸ್ತುಗಳು ಮಾತ್ರ ಮಹತ್ವ ಪಡೆದು ಇತರ ಶಿಸ್ತುಗಳು ಸೊರಗಲಾರಂಭಿಸಿವೆ. ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ಶಿಸ್ತುಗಳಿಗೆ ಮಾತ್ರ ವಿದ್ಯಾರ್ಥಿಗಳು ಬರುತ್ತಾರೆ. ಕಾಮರ್ಸ್, ಮೆನೇಜ್‌ಮೆಂಟ್, ಅರ್ಥಶಾಸ್ತ್ರದಂತಹ ಸಮಾಜ ವಿಜ್ಞಾನಗಳು ಮಾತ್ರ ಬೇಡಿಕೆ ಪಡೆದು ಉಳಿದ ವಿಷಯಗಳು - ಚರಿತ್ರೆ, ಸಮಾಜಶಾಸ್ತ್ರ, ರಾಜಕೀಯ ಶಾಸ್ತ್ರ, ಮಾನವಶಾಸ್ತ್ರ ಇತ್ಯಾದಿಗಳು ಬೇಡಿಕೆ ಇಲ್ಲದೆ ಸೊರಗಿವೆ. ದುರಂತವೆಂದರೆ ಮಾರುಕಟ್ಟೆಯಲ್ಲಿ ಬೇಡಿಕೆಯಲ್ಲಿರುವ ಶಿಸ್ತುಗಳು ಆಧುನಿಕ ಸಮಾಜದ ಮೌಲ್ಯಗಳನ್ನು (ಸಮಾನತೆ, ಸ್ವಾತಂತ್ರ್ಯ, ಸ್ವಾಯತ್ತತೆ. ಪ್ರಜಾಪ್ರಭುತ್ವ ಇತ್ಯಾದಿ ಮೌಲ್ಯಗಳನ್ನು) ಪ್ರತಿಪಾದಿಸುತ್ತಿಲ್ಲ; ಬೇಡಿಕೆಯಿಲ್ಲದ ಶಿಸ್ತುಗಳು ಆಧುನಿಕ ಸಮಾಜದ ಮೌಲ್ಯಗಳನ್ನು ಹೆಚ್ಚು ಹೆಚ್ಚು ಪ್ರತಿಪಾದಿಸುತ್ತಿವೆ. ಆದರೆ ಇವುಗಳನ್ನು ಓದುವ ವಿದ್ಯಾರ್ಥಿಗಳೇ ಇಲ್ಲ. ಮಾರುಕಟ್ಟೆಯಲ್ಲಿ ಚರಿತ್ರೆಗೂ ಬೇಡಿಕೆ ಭರಿಸಬೇಕೆಂದು ಚರಿತ್ರೆಯನ್ನು ಗೈಡ್‌ಗಳನ್ನು ತರಬೇತುಗೊಳಿಸುವುದಕ್ಕೆ ಸೀಮಿತಗೊಳಿಸಲಾಗಿದೆ.[೧೦] ಸಮಾಜ ವಿಜ್ಞಾನದ ಇಂತಹ ಸ್ಥಿತಿಯಿಂದಾಗಿ ಸಮಾಜ ವಿಜ್ಞಾನ ಪ್ರತಿಪಾದಿಸುವ ಮೌಲ್ಯಗಳು ಶಿಕ್ಷಿತರ ಪ್ರಜ್ಞೆಯ ಭಾಗವಾಗುತ್ತಿಲ್ಲ. ಮೇಲಿನ ಸಮಸ್ಯೆಗಳಿಂದಾಗಿ ಸಮಾಜ ವಿಜ್ಞಾನಗಳು ನೀಡುವ ಜ್ಞಾನ ಮತ್ತು ದಿನನಿತ್ಯದ ಬದುಕಿನ ನಡುವೆ ಸಂಬಂಧ ಇಲ್ಲವಾಗಿದೆ. ಸಮಾಜಶಾಸ್ತ್ರಗಳನ್ನು ಕೇವಲ ಪದವಿಗಾಗಿ ಅಧ್ಯಯನ ಮಾಡುವುದು. ಆ ಸಮಾಜಶಾಸ್ತ್ರಗಳು ಹೇಳುವ ರೀತಿಯಲ್ಲಿ ಸಮಾಜನೂ ಇಲ್ಲ. ಅರ್ಥನೂ ಇಲ್ಲ ಮತ್ತು ರಾಜಕೀಯನೂ ಇಲ್ಲ.

ಸಮಾಜಶಾಸ್ತ್ರಗಳು ಹೇಳುವಂತೆ ಸಮಾಜ ಅಥವಾ ರಾಜಕೀಯ ಯಾಕಿರಬೇಕೆಂದು? ಕೇಳುವವರಿದ್ದಾರೆ. ವಿದ್ಯಾರ್ಥಿಗಳು ಕಲಿಯುವ ವಿಜ್ಞಾನ/ತಂತ್ರಜ್ಞಾನ ಮತ್ತು ಆಧುನಿಕ ಉತ್ಪಾದನೆಯ ನಡುವೆ ನೇರ ಸಂಬಂಧ ಬೇಕೆಂದು ಅಧಿಕಾರದಲ್ಲಿರುವ ಎಲ್ಲರೂ ಕಿರುಚಾಡುತ್ತಿದ್ದಾರೆ.[೧೧] ಸಂಶೋಧನ ಸಂಸ್ಥೆ/ವಿಶ್ವವಿದ್ಯಾಲಯಗಳು ಮತ್ತು ಕೈಗಾರಿಕೆಗಳ ನಡುವೆ ಸಂಬಂಧ ಅನಿವಾರ್ಯವೆಂದು ಸರಕಾರವೇ ಒತ್ತಡ ಹೇರುತ್ತಿದೆ. ಇದರಿಂದಾಗಿ ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿಗಳಲ್ಲಿ ಉದ್ಯಮಿಗಳು ಸದಸ್ಯರುಗಳಾಗಿದ್ದಾರೆ. ಉದ್ಯಮ ಬಯಸುವ ವಿಷಯಗಳನ್ನು ಪಠ್ಯಗಳನ್ನಾಗಿಸಲು ಅವರುಗಳು ಒತ್ತಡ ಹೇರುತ್ತಾರೆ. ಅಂದರೆ ವಿಶ್ವವಿದ್ಯಾಲಯಗಳು ಉದ್ಯಮಿಗಳು ಬಯಸುವ ಮಾನವ ಸಂಪನ್ಮೂಲಗಳನ್ನು ಸೃಷ್ಟಿಸುವ ತಾಣಗಳಾಗಬೇಕೆನ್ನುವ ಪ್ರಯತ್ನಗಳು ನಡೆಯುತ್ತಿವೆ. ಒಂದು ವೇಳೆ ನಮ್ಮ ಸಮಾಜ ಕೂಡ ಶ್ರೀಮಂತ ದೇಶಗಳಂತೆ ಇಂಡಸ್ಟ್ರಿಯಲ್ ಸೊಸೈಟಿಯಾಗಿರುತ್ತಿದ್ದರೆ (ಸಮಾಜದ ಬಹುತೇಕರು ಉದ್ಯೋಗ ಹಾಗೂ ಉತ್ಪನ್ನಗಳಿಗಾಗಿ ಉದ್ಯಮಗಳನ್ನು ನಂಬಿಕೊಂಡಿರುವ ಸ್ಥಿತಿ) ಇಂತಹ ಪ್ರಯತ್ನಗಳು ಅಪರಾಧವೇನಲ್ಲ. ಆದರೆ ನಮ್ಮಲ್ಲಿ ಇಂದು ಕೂಡ ಶೇ. ಅರುವತಕ್ಕಿಂತಲೂ ಹೆಚ್ಚು ಮಂದಿ ಕೃಷಿಯನ್ನೇ ನಂಬಿಕೊಂಡಿದ್ದಾರೆ.

ಇವರ ಬೇಕು ಬೇಡಗಳನ್ನು ಶಿಕ್ಷಣ ಪೂರೈಸುವುದು ಬೇಡವೇ? ಹಾಗೆಂದ ಕೂಡಲೇ ಕೃಷಿ ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿಗಳಲ್ಲಿ ಕೃಷಿಕರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಗಿದೆ ಎಂದು ಸಮಜಾಯಿಷಿಕೆ ನೀಡಬಹುದು. ಆದರೆ ಇದು ಕೇವಲ ತಂತ್ರಜ್ಞಾನದ ಪ್ರಶ್ನೆಯಲ್ಲ. ತಂತ್ರಜ್ಞಾನ ಉತ್ಪಾದನೆಯನ್ನು ಸುಧಾರಿಸಲು ಸಹಕರಿಸುತ್ತದೆ. ಸುಧಾರಿತ ಉತ್ಪಾದನೆಯನ್ನು ಹಂಚಿಕೊಂಡು ತಿನ್ನಬೇಕೇ ಅಥವಾ ಅನುಕೂಲಸ್ಥರು ಮಾತ್ರ ಅನುಭವಿಸಬೇಕೇ ಎನ್ನುವ ಪ್ರಶ್ನೆಗೆ ವಿಜ್ಞಾನ/ತಂತ್ರಜ್ಞಾನಗಳಲ್ಲಿ ಉತ್ತರವಿಲ್ಲ. ನಮ್ಮ ಹಾಗೆ ಇರುವ ಮತ್ತೊಬ್ಬರನ್ನು ಹೇಗೆ ನೋಡಬೇಕೆನ್ನುವ ಪ್ರಶ್ನೆಯನ್ನು ಕೂಡ ತಂತ್ರಜ್ಞಾನ ಉತ್ತರಿಸುವುದಿಲ್ಲ. ಈ ಎಲ್ಲ ಪ್ರಶ್ನೆಗಳಿಗೆ ಸಮಾಜದ ವಿಜ್ಞಾನಗಳಲ್ಲಿ ಉತ್ತರ ಹುಡುಕಬೇಕಾಗಿದೆ. ಯಾಕೆಂದರೆ ಸಾಮಾಜಿಕ ನ್ಯಾಯ, ಸಮಾನತೆ, ಸ್ವಾತಂತ್ರ್ಯ ಇತ್ಯಾದಿಗಳ ಚರ್ಚೆಯನ್ನು ಸಮಾಜ ವಿಜ್ಞಾನಗಳು ಒಳಗೊಂಡಿವೆ. ದುರಂತವೆಂದ್ಗರೆ ಈ ಎಲ್ಲದರ ಚರ್ಚೆಯನ್ನು(ಸಾಮಾಜಿಕ ನ್ಯಾಯ, ಸಮಾನತೆ, ಸ್ವಾತಂತ್ರ್ಯ ಇತ್ಯಾದಿಗಳನ್ನು) ಒಳಗೊಂಡಿರುವ ಸಮಾಜ ವಿಜ್ಞಾನಗಳು ಅಂಚಿಗೆ ಸರಿದು ಕೆಲವೊಂದು ಪರಿಣಿತಿಯನ್ನು (ಸ್ಕಿಲ್) ತರಬೇತಿ ನೀಡುವ ಸಮಾಜ ವಿಜ್ಞಾನಗಳು ಮಾತ್ರ ಬೇಡಿಕೆಯಲ್ಲಿವೆ.

ಉತ್ಪಾದನೆ ಹಾಗೂ ಮಾರುಕಟ್ಟೆಯಲ್ಲಿ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ವಿಸ್ತೃತವಾಗಿ ಬಳಕೆಯಾಗಬೇಕೆನ್ನುವ ಸಂದರ್ಭದಲ್ಲೇ ಸಾಮಾಜಿಕ, ರಾಜಕೀಯ ಹಾಗು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸನಾತನ ಆಚಾರ ವಿಚಾರಗಳೇ ಉತ್ತಮ ಎನ್ನುವ ನಿಲುವು ತಾಳಲಾಗುತ್ತಿದೆ. ಸಾಮಾಜಿಕ ಸಂಬಂಧಗಳು, ಸಂಸ್ಥೆಗಳು ಹಾಗು ಮೌಲ್ಯಗಳಿಗೆ ಸಂಬಂಧಿಸಿದಂತೆ ಶತಮಾನದಿಂದ ಆಚರಿಸುತ್ತಿರುವುದನ್ನೇ ಮುಂದುವರಿಸುವುದು ಆದರ್ಶ ಎಂದು ಪ್ರಚಾರಪಡಿಸಲಾಗುತ್ತಿದೆ. ಮಠಮಂದಿರಗಳು (ಚರ್ಚ್, ಮಸೀದಿ, ಗುರುದ್ವಾರ ಇತ್ಯಾದಿಗಳನ್ನು ಸೇರಿಸಿಕೊಂಡು) ನಮ್ಮಲ್ಲಿ ಕೇವಲ ನಂಬಿಕೆಯ ಅಥವಾ ಸಾಂಸ್ಕೃತಿಕ ಆಚರಣೆಯ ಕೇಂದ್ರಗಳಾಗಿ ಹಿಂದೆಯೂ ಇರಲಿಲ್ಲ; ಈಗಲೂ ಉಳಿದಿಲ್ಲ. ಜನರ ಶಿಕ್ಷಣ, ಆರೋಗ್ಯ ಇತ್ಯಾದಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಇವುಗಳು ಸಕ್ರಿಯವಾಗಿ ಪಾಲುಗೊಳ್ಳುತ್ತಿವೆ. ಜನರ ರಾಜಕೀಯ ತೀರ್ಮಾನಗಳನ್ನು ನೇರವಾಗಿ ಮತ್ತು ಪರೋಕ್ಷವಾಗಿ ಪ್ರಭಾವಿಸುತ್ತಿವೆ. ನಿರ್ದಿಷ್ಟ ಧೋರಣೆಗಳನ್ನು ಜಾರಿಗೆ ತರಬೇಕೆಂದು ರಾಜಕೀಯ ಪಕ್ಷಗಳ ಮೇಲೆ ಇತರ ಆಸಕ್ತ ಗುಂಪುಗಳಂತೆ (ಚೇಂಬರ್ ಆಫ್ ಕಾಮರ್ಸ್ ಅಥವಾ ಉದ್ಯಮಿಗಳ ರೀತಿಯಲ್ಲಿ) ಒತ್ತಡ ಹೇರುತ್ತಿವೆ. ಜನ ಸಾಮಾನ್ಯರ ಬದುಕಿನ ಬಹುಭಾಗವನ್ನು ಆವರಿಸಿಕೊಳ್ಳಲು ಮಠಮಂದಿರಗಳು ಪ್ರಯತ್ನಿಸುತ್ತಿವೆ.'' ಜನಸಾಮಾನ್ಯರ ಬದುಕಿನ ಹತೋಟಿಗಾಗಿ ಪ್ರಭುತ್ವ ಮತ್ತು ಮಠಮಂದಿರಗಳ ನಡುವೆ ಪೈಪೋಟಿ ನಡೆದಿರುವುದು ಶ್ರೀಮಂತ ದೇಶಗಳ ಅನುಭವ. ನಮ್ಮಲ್ಲಿ ಇಂತಹ ಪೈಪೋಟಿ ಮಠಮಂದಿರಗಳ ನಡುವೆ (ಹಿಂದು, ಮುಸ್ಲಿಂ, ಕ್ರಿಶ್ಚಿಯನ್, ಸಿಖ್ ಮುಂತಾದವುಗಳ ನಡುವೆ) ನಡೆಯುತ್ತಿದೆ. ಪ್ರಭುತ್ವ ಹಾಗೂ ಮಠ ಮಂದಿರಗಳು ಹೊಂದಾಣಿಕೆಯಲ್ಲಿವೆ. ಇದರಿಂದಾಗಿ ಜನರ ಬದುಕಿನ ಮೌಲ್ಯಗಳನ್ನು ಕೊಡಲು

ಮಠಮಂದಿರಗಳು ತಮ್ಮೊಳಗೆ ಪೈಪೋಟಿ ನಡೆಸುವುದು ಹೆಚ್ಚು ಕಾಣುತ್ತಿದೆಯೇ ಹೊರತು ಪ್ರಭುತ್ವ ಅಥವಾ ರಾಜಕೀಯ ಪಕ್ಷಗಳೊಂದಿಗೆ ಪೈಪೋಟಿ ನಡೆಸುವುದು ಕಾಣಬರುತ್ತಿಲ್ಲ. ಇವರುಗಳು ಜನಸಾಮಾನ್ಯರ ಮೌಲ್ಯಗಳನ್ನು ಕೊಡುವುದು ತಪ್ಪಲ್ಲ. ಆದರೆ ಇವುಗಳು ತಮ್ಮ ತಮ್ಮ ಅಸ್ತಿತ್ವದ ಉಳಿವಿಗೆ ಪೂರಕವಾಗುವ ಮೌಲ್ಯಗಳನ್ನು ಹೆಚ್ಚು ಹೆಚ್ಚು ಕೊಡುತ್ತಿವೆ. ಇದರಿಂದಾಗಿ ಲಿಂಗ, ಜಾತಿ, ಧರ್ಮ ಭೇದಗಳು, ತಿನ್ನುವುದು ಉಣ್ಣುವುದರಲ್ಲಿ ನಿರ್ಧಾರವಾಗುವ ಮೇಲು ಕೀಳುಗಳೂ ಇಂದು ಕೂಡ ಪ್ರಮುಖ ಸಮಸ್ಯೆಗಳಾಗಿ ಕಾಡುತ್ತಿವೆ. ವೇಷಭೂಷಣದಲ್ಲಿ ಆಧುನಿಕರಂತೆ ಕಾಣುವ, ಉನ್ನತ ಶಿಕ್ಷಣ ಪಡೆದು ಕೈತುಂಬ ಸಂಬಳ ತರುವ ಆಧುನಿಕ ಉದ್ಯೋಗಗಳಲ್ಲಿ ತೊಡಗಿದವರಲ್ಲೂ ಹದಿನೈದನೇ ಶತಮಾನದ ಜಾತಿ, ಲಿಂಗ, ಧರ್ಮ ಭೇದಗಳು ಜೀವಂತ ಇರುವುದು ಸಹಜವಾಗಿದೆ.[೮] ವಿಜ್ಞಾನ/ತಂತ್ರಜ್ಞಾನ ಮತ್ತು ನಮ್ಮ ಉತ್ಪಾದನೆ ಹಾಗು ಮಾರುಕಟ್ಟೆಯ ನಡುವೆ ನೇರ ಸಂಬಂಧ ಕಲ್ಪಿಸುವ ಸಂದರ್ಭದಲ್ಲಿ ಮಠಮಂದಿರಗಳು, ಮಸೀದಿ, ಚರ್ಚ್‌ಗಳು ಕೂಡ ಪ್ರಜಾಪ್ರಭುತ್ವ ಮಾದರಿಯಲ್ಲಿ ಸಂಘಟಿತವಾಗಿ ಬದುಕಲು ಪೂರಕವಾಗುವ ಮೌಲ್ಯಗಳನ್ನು ನೀಡುವ ತಾಣಗಳಾಗಿ ಪರಿವರ್ತನೆಗೊಳ್ಳಬೇಕಿತ್ತು.

ಮಠಮಂದಿರಗಳ ಈ ಬಗೆಯ ಪರಿವರ್ತನೆಯ ಮುತುವರ್ಜಿಯನ್ನು ರಾಜಕೀಯ ಪ್ರಕ್ರಿಯೆ ವಹಿಸಬೇಕಿತ್ತು. ಆದರೆ ಬಹುತೇಕ ರಾಜಕೀಯ ಪಕ್ಷಗಳು ಇಂತಹ ಜವಾಬ್ದಾರಿ ವಹಿಸುವ ಬದಲು ತಾವೇ ತಳಸ್ತರ ಜನವಿರೋಧಿ ಮೌಲ್ಯಗಳನ್ನು ಮುಂಚೂಣಿಗೆ ತರಲು ಪ್ರಯತ್ನಿಸುತ್ತಿವೆ. ಅಧಿಕಾರ ಗಳಿಕೆಗೆ ಹಾಗು ಗಳಿಸಿದ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಇವುಗಳು ಹೆಚ್ಚು ಹೆಚ್ಚು ಕೋಮುವಾದಿ ನೆಲೆಗಳನ್ನು ಆಶ್ರಯಿಸಿವೆ. ಕೆಲವು ಪಕ್ಷಗಳು ಜಾತಿ ಕೋಮುವಾದ ಅನುಸರಿಸಿದರೆ ಇನ್ನು ಕೆಲವು ಪಕ್ಷಗಳು ಧರ್ಮದ ಕೋಮುವಾದ ಬೆಳೆಸುತ್ತಿವೆ. ಇದರಿಂದಾಗಿ ಕಡಿಮೆ ಶಿಕ್ಷಣ ಪಡೆದವರು ಮತ್ತು ಶಾಲೆಗೆ ಹೋಗದವರು ಕೂಡ (ಶಿಕ್ಷಿತರಂತೆ) ಇಬ್ಬಂದಿತನವನ್ನು ಸೃಷ್ಟಿಸುವ ವಾತಾವರಣದಿಂದ ಹೊರಗುಳಿಯುವುದು ಕಷ್ಟವಾಗಿದೆ. ಶಿಕ್ಷಣ ಯಾವ ಬಗೆಯಲ್ಲಿ ಬಹುತ್ವನ್ನು ನಿರಾಕರಿಸುತ್ತದೋ ಅದೇ ಬಗೆಯಲ್ಲಿ ಕೋಮುವಾದ ಕೂಡ ಬಹುತ್ವವನ್ನು ನಿರಾಕರಿಸುತ್ತಿದೆ. ಭಾರತದಲ್ಲಿ ಹಿಂದು ಎನ್ನುವುದು ಹಲವಾರು ಜಾತಿಗಳ ಒಂದು ಫೆಡರೇಶನ್. ಪ್ರತಿ ಜಾತಿ ಹಾಗು ಸಮುದಾಯಕ್ಕೂ ತನ್ನದೇ ಸಂಸ್ಕೃತಿಯ ಕಲ್ಪನೆ ಮತ್ತು ಆಚರಣೆ ಇದೆ. ಇವರು ಭಾರತದಲ್ಲಿ ಬಹುತೇಕರು. ಶೇಕಡಾ ಎಂಬತ್ತರಷ್ಟು ಜನರಿರಬಹುದು. ಇವರೊಳಗಿನ ವಿವಿಧತೆಯನ್ನು ಕಾಪಾಡಲು ಕಾನೂನಿನ ಆಸರೆ ಇಲ್ಲ. ಜತೆಗೆ ಶಿಕ್ಷಣ ಕೂಡ ವಿಫಲವಾಗಿದೆ. ಆದರೆ ಧರ್ಮಗಳ(ಹಿಂದು, ಮುಸ್ಲಿಮ್, ಕ್ರಿಶ್ಚಿಯನ್‌ಗಳ) ನಡುವಿನ ವಿವಿಧತೆಯನ್ನು ರಕ್ಷಿಸಲು ನಮ್ಮಲ್ಲಿ ಅವಕಾಶ ನೀಡಲಾಗಿದೆ. ಪ್ರತಿ ಧಾರ್ಮಿಕ ಪಂಗಡಗಳು ತಮ್ಮ ಪ್ರತ್ಯೇಕತೆಯನ್ನು ಉಳಿಸಿ ಬೆಳೆಸಿಕೊಳ್ಳಲು ಅಥವಾ ತಮ್ಮ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳಲು ಅವಕಾಶವಿದೆ. ಆದರೆ ಸಮಾಜದ ಬಹುತೇಕರಿಗೆ ವಿವಿಧತೆಯ ಮಹತ್ವವನ್ನು ಮನವರಿಕೆ ಮಾಡುವ ಶಿಕ್ಷಣ ಇಲ್ಲದಿದ್ದರೆ ಅಲ್ಪಸಂಖ್ಯಾತರ

ವಿವಿಧತೆಯ ಹಕ್ಕು ರಕ್ಷಣೆಯಾದೀತೇ? ಕೇವಲ ವಿವಿಧತೆಯ ಹಕ್ಕು ಮಾತ್ರವಲ್ಲ ಯಾವುದೇ ಹಕ್ಕು ಕೂಡ ರಕ್ಷಣೆಯಾದೀತೇ? ಯಾಕೆಂದರೆ ಹಕ್ಕು ಆಚರಣೆಯ ರೂಪದಲ್ಲಿ ಇರಬೇಕಾದರೆ ಮತ್ತೊಬ್ಬರ ಇರುವಿಕೆಯನ್ನು ಗೌರವಿಸುವ ಪಾಠ ಬೇಕು. ಮತ್ತೊಬ್ಬರ ಇರುವಿಕೆಯನ್ನು ಗೌರವಿಸುವುದೆಂದರೇನು? ಮತ್ತೊಬ್ಬರ ಭಾಷೆ, ಉಡುಗೆ ತೊಡುಗೆ, ಕಸುಬು, ಊಟ ಉಪಚಾರ, ದೇವರು ದಿಂಡ್ರು ಇತ್ಯಾದಿಗಳನ್ನು ಗೌರವಿಸುವುದು. ಈ ಪಾಠವನ್ನು ತಮ್ಮ ಸಂಸ್ಕೃತಿ ನೀಡಲಿಲ್ಲ. ಶಿಕ್ಷಣವೂ ನೀಡುತ್ತಿಲ್ಲ. ಇದರಿಂದ ಓದಿದವರು ಕೂಡ ಮತ್ತೊಬ್ಬರ ಬದುಕನ್ನು/ಹಕ್ಕನ್ನು ಗೌರವಿಸದಿರುವ ಸ್ಥಿತಿ ನಿರ್ಮಾಣವಾಗಿದೆ. ಕೋಮುವಾದ ಬಲಗೊಳ್ಳುವುದರಿಂದ ಇಡೀ ಸಮಾಜ ಒಂದೋ ಜಾತಿವಾರು ಅಥವಾ ಧರ್ಮವಾರು - ಹಿಂದೂ ಮುಸ್ಲಿಮ್ ಕ್ರಿಶ್ಚಿಯನ್ ಎಂದು ಧ್ರುವೀಕರಣಗೊಂಡು ಸಮಾಜದೊಳಗಿನ ಇತರ ವೈರುಧ್ಯಗಳು ಮರೆಯಾಗುತ್ತಿವೆ.[೧೫] ಕೋಮುವಾದ ಕೂಡ ತನ್ನದೇ ಸಂಸ್ಕೃತಿಯನ್ನು ಮುಂದೂಡುತ್ತಿದೆ. ಕೋಮುವಾದಿಗಳು ಮುಂದೂಡುವ ಸಂಸ್ಕೃತಿ ಕಲ್ಪನೆಗೂ ನಮ್ಮ ಶಾಲೆ ಕಾಲೇಜುಗಳು ಪ್ರತಿಪಾದಿಸುವ ಸಂಸ್ಕೃತಿಗೂ ವಿಶೇಷ ವ್ಯತ್ಯಾಸವಿಲ್ಲ. ಕೋಮುವಾದ ಪ್ರತಿ ಪಾದಿಸುವ ಸಂಸ್ಕೃತಿಯಲ್ಲೂ ಉಡುಗೆ ತೊಡುಗೆ, ಊಟ ಉಪಚಾರ, ದೇವರು ದಿಂಡ್ರು, ಆಚಾರ ವಿಚಾರ, ತಳಸ್ತರದ ಜನರ ಸಮುದಾಯಗಳು ಚಾರಿತ್ರಿಕವಾಗಿ ರೂಪಿಸಿಕೊಂಡ ಉಡುಗೆ ತೊಡುಗೆ, ಊಟ ಉಪಹಾರ, ದೇವರು ದಿಂಡ್ರು, ಆಚಾರ ವಿಚಾರಗಳಿಗಿಂತ ಭಿನ್ನ. ಅಷ್ಟು ಮಾತ್ರವಲ್ಲ ಅಲ್ಪಸಂಖ್ಯಾತ ಮೇಲ್ಜಾತಿ ಸಂಸ್ಕೃತಿಯ ಗುಣಲಕ್ಷಣಗಳನ್ನು ಕೋಮುವಾದ ಮುಂಚೂಣಿಗೆ ತರುತ್ತಿದೆ. ಮುಸ್ಲಿಮರನ್ನು ಅಥವಾ ಅಲ್ಪಸಂಖ್ಯಾತರನ್ನು ಪ್ರತಿ ಕೋಮುಗಳ ಸ್ಥಾನದಲ್ಲಿ ನಿಲ್ಲಿಸಿ ಹಿಂದೂಗಳು ನಾವೆಲ್ಲ ಒಂದೇ ಎನ್ನುವ ಹುಸಿ ಘೋಷಣೆಯಡಿಯಲ್ಲಿ ಹಿಂದುಗಳಲ್ಲಿನ ಮೇಲ್ಜಾತಿ ಪರಂಪರೆಯನ್ನು ಎಲ್ಲರ ಮೇಲೆ ಹೇರಲಾಗುತ್ತಿದೆ. ಅಲ್ಪ ಸಂಖ್ಯಾತರನ್ನು ಸದೆಬಡಿಯುವ ಭರದಲ್ಲಿ ತಳಸ್ತರದ ಜನರಿಗೆ ಕೋಮುವಾದ ಪರೋಕ್ಷವಾಗಿ ತಮ್ಮ ಸಂಸ್ಕೃತಿಯ ಮೇಲೆ ಮಾಡುತ್ತಿರುವ ದಾಳಿ ಅರ್ಥವೇ ಆಗುತ್ತಿಲ್ಲ. ಇದರಿಂದಾಗಿ ಆಧುನಿಕ ಶಿಕ್ಷಣಕ್ಕೆ ತೆರೆದುಕೊಳ್ಳದವರಲ್ಲಿ ಅಥವಾ ಕಡಿಮೆ ಶಿಕ್ಷಣ ಪಡೆದವರಲ್ಲಿ ಕೂಡ ಶಿಕ್ಷಿತರಂತೆ ಹುಸಿ ಏಕತೆಯನ್ನು ಆರಾಧಿಸುವ ಗುಣ ಅಥವಾ ಬಹುತ್ವವನ್ನು ನಿರಾಕರಿಸುವ ಗುಣ ಅಥವಾ ಮತ್ತೊಬ್ಬರ ಇರುವಿಕೆಯನ್ನು ಅಲ್ಲಗಳೆಯುವ ಗುಣ ಬೇರೂರಿದೆಯೋ ಎನ್ನುವ ಸಂಧೇಹ ಕಾಡುತ್ತಿದೆ.

ಒಂದು ಕಾಲದಲ್ಲಿ ವಿಜ್ಞಾನ ತಂತ್ರಜ್ಞಾನಗಳು ಮತ್ತು ವಿವಿಧ ಕ್ಷೇತ್ರಗಳಲ್ಲಿ ಅವುಗಳ ಬಳಕೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿನ ನಕರಾತ್ಮಕ ಗುಣಗಳನ್ನು ಸರಿಪಡಿಸುವ ಸಾಧ್ಯತೆಯ ಬಗ್ಗೆ ನಂಬಿಕೆ ಇತ್ತು. ಸರಕು/ಸೇವೆಗಳ ಉತ್ಪಾದನೆ ಹಾಗು ವಿಲೇವಾರಿಯಲ್ಲಿ, ಆರೋಗ್ಯ ಕ್ಷೇತ್ರದಲ್ಲಿ, ಸಾಮಾನ್ಯ ಹಾಗೂ ಅಭಿವೃದ್ಧಿ ಆಡಳಿತಗಳಲ್ಲಿ ಆಧುನಿಕ ತಂತ್ರಜ್ಞಾನ ಹಾಗೂ ಸಂಸ್ಥೆಗಳನ್ನು ಅಳವಡಿಸಿದರೆ ಸಾಮಾಜಿಕ ಹಾಗು ಸಾಂಸ್ಕೃತಿಕ ಲೋಕದ ಹೊರಗಿಡುವ ಗುಣಗಳು ತಮ್ಮಿಂದ ತಾವೇ ಕಣ್ಮರೆಯಾಗುತ್ತವೆ ಎಂದು ನಂಬಲಾಗಿತ್ತು. ಆದರೆ ಆ ರೀತಿ

ಆಗಲಿಲ್ಲ. ಅದಕ್ಕೆ ಹಲವಾರು ವಿವರಣೆಗಳನ್ನು ನೀಡಲಾಗುತ್ತಿದೆ. ಅವುಗಳಲ್ಲಿ ಆರ್ಥಿಕ ವಿವರಣೆಗಳು ಹೆಚ್ಚು ಪ್ರಚಲಿತ. ಈ ವಿವರಣೆಯನುಸಾರ ನಮ್ಮಲ್ಲಿ ಕಮರ್ಶಿಯಲ್ ಕ್ಯಾಪಿಟಲ್ ಕಾರುಬಾರು ಮಾಡುತ್ತಿದೆಯೇ ಹೊರತು ಇಂಡಸ್ಟ್ರಿಯಲ್ ಕ್ಯಾಪಿಟಲ್ ಕಾರುಬಾರು ಮಾಡುತ್ತಿಲ್ಲ ಎನ್ನುವ ವಾದ. ಕಡಿಮೆ ಹಣ ಕೊಟ್ಟು ಸರಕು/ಸೇವೆಯನ್ನು ಖರೀದಿಸಿ ಹೆಚ್ಚು ಹಣಕ್ಕೆ ಮಾರುವುದು ಕಮರ್ಶಿಯಲ್ ಕ್ಯಾಪಿಟಲ್‌ನ ಮುಖ್ಯ ಗುಣ. ಸರಕು/ಸೇವಾ ಊಳಿಗಮಾನ್ಯ ಉತ್ಪಾದನ ಸಂಬಂಧದಿಂದ ಉತ್ಪಾದನೆಯಾಗಬಹುದು ಅಥವಾ ಬಿಟ್ಟಿ ಕೂಲಿ ಅಥವಾ ಗುಲಾಮ ಕೂಲಿಯಿಂದ ಉತ್ಪಾದನೆಯಾಗಬಹುದು. ಈ ಕುರಿತು ಕಮರ್ಶಿಯಲ್ ಕ್ಯಾಪಿಟಲ್ ತಲೆಕಡಿಸಿಕೊಳ್ಳುವುದಿಲ್ಲ. ವ್ಯಾಪಾರದಿಂದ ಅದಕ್ಕೆ ಲಾಭವಾದರೆ ಸಾಕು.[೧೬] ಅದೇ ರೀತಿಯಲ್ಲಿ ಉತ್ಪಾದನ ತಂತ್ರಜ್ಞಾನವನ್ನು ಸುಧಾರಿಸಲು ಕಮರ್ಶಿಯಲ್ ಕ್ಯಾಪಿಟಲ್ ವಿನಿಯೋಜನೆ ಮಾಡುವುದಿಲ್ಲ. ಕಮರ್ಶಿಯಲ್ ಕ್ಯಾಪಿಟಲ್ ನಮ್ಮಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಕಾರುಬಾರು ಮಾಡುವುದರಿಂದ ತಾಂತ್ರಿಕ ಆಧುನೀಕರಣದ ಜತೆ ಜತೆಗೆ ಹೊರಗಿಡುವ ಮೌಲ್ಯಗಳು ಕಾರುಬಾರು ಮಾಡುವ ವಿರೋಧಭಾಸ ಇರಬಹುದು ಎನ್ನುವ ಒಂದು ಉತ್ತರ ಸಾಧ್ಯ. ಆದರೆ ಈ ವಿವರಣೆಯನ್ನು ಒಪ್ಪುವುದು ಕಷ್ಟ. ಯಾಕೆಂದರೆ ಇಂಡಸ್ಟ್ರಿಯಲ್ ಕ್ಯಾಪಿಟಲ್ ಸಕ್ರಿಯವಾಗಿರುವಲ್ಲಿ ಕೂಡ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಲಯಗಳಲ್ಲಿ ಹೊರಗಿಡುವ ಮೌಲ್ಯಗಳನ್ನು ಯಥಾ ರೀತಿಯಲ್ಲಿ ಆಚರಿಸುವ ಸಾಕಷ್ಟು ಉದಾಹರಣೆಗಳಿವೆ. ಒಂದು ಕಾಲದಲ್ಲಿ ಸಾಮಾಜಿಕ ಸಂಬಂಧ, ಸಂಸ್ಥೆ, ಮೌಲ್ಯ ಇತ್ಯಾದಿಗಳ ಬಗ್ಗೆ ಇಂಡಸ್ಟ್ರಿಯಲ್ ಕ್ಯಾಪಿಟಲ್ ತನ್ನದೇ ಆದ ಕೆಲವೊಂದು ನಿಲುವುಗಳನ್ನು ಹೊಂದಿತ್ತು ಎನ್ನುವ ವಾದ ಇದೆ. ಉದಾಹರಣೆಗೆ ಆಧುನಿಕ ಗುರುತಿನ (ಪಕ್ಷ, ಪ್ರಜೆತನ, ಪಾಲಿಸಿ ಇತ್ಯಾದಿಗಳ) ನೆಲೆಯಲ್ಲಿ ರಾಜಕೀಯ ಪ್ರಕ್ರಿಯೆ ನಡೆಯಬೇಕು ಸಾಂಪ್ರದಾಯಿಕ ಗುರುತಿನ (ಜಾತಿ/ಧರ್ಮ ಇತ್ಯಾದಿಗಳ) ನೆಲೆಯಲ್ಲಿ ರಾಜಕೀಯ ಪ್ರಕ್ರಿಯೆ ನಡೆಯುವುದು ಆರೋಗ್ಯಕರವಲ್ಲವೆಂದು ವಾದಿಸುತ್ತಿತ್ತು. ಕಾಲಕ್ರಮೇಣ ರಾಜಕೀಯ ಪ್ರಕ್ರಿಯೆ ಯಾವ ನೆಲೆಯಲ್ಲಿ ನಡೆಯುತ್ತದೆ ಎನ್ನುವುದು ಇಂಡಸ್ಟ್ರಿಯಲ್ ಕ್ಯಾಪಿಟಲ್‌ಗೂ ಮುಖ್ಯವಾಗಲಿಲ್ಲ. ಯಾವುದೇ(ಆಧುನಿಕ ಇರಬಹುದು ಅಥವಾ ಸಾಂಪ್ರದಾಯಿಕ ಇರಬಹುದು) ನೆಲೆಯಲ್ಲಿ ನಡೆಯುವ ರಾಜಕೀಯ ಪ್ರಕ್ರಿಯೆಯಿಂದ ರೂಪುಗೊಳ್ಳುವ ರಾಜಕೀಯ ಅಧಿಕಾರ ಇಂಡಸ್ಟ್ರಿಯಲ್ ಕ್ಯಾಪಿಟಲ್ ಪರ ಕೆಲಸ ಮಾಡಿದರೆ ಸಾಕೆನ್ನುವ ತೀರ್ಮಾನಕ್ಕೆ ಇಂದು ಕ್ಯಾಪಿಟಲ್ ಬಂದಿದೆ.[೧೭] ಅಂದರೆ ಉತ್ಪಾದನೆಯ ಇನ್‌ಪುಟ್‌ಗಳನ್ನು(ಶ್ರಮಿಕರು, ಭೂಮಿ, ನೀರು, ಕಚ್ಚಾ ಸಾಮಾಗ್ರಿಗಳು ಮುಂತಾದವುಗಳನ್ನು) ಕ್ಯಾಪಿಟಲ್‌ನ ಬೆಳವಣಿಗೆಗೆ ಬಳಸಲು ಪೂರಕವಾಗುವ ಪರಿಸರವನ್ನು ರಾಜಕೀಯ ಅಧಿಕಾರ ಸೃಷ್ಟಿಸಿ ಬೆಳೆಸಬೇಕು. ಕಡಿಮೆ ದರದಲ್ಲಿ ಭೂಮಿ ನೀಡುವುದು, ಕಡಿಮೆ ಬಡ್ಡಿ ದರದಲ್ಲಿ ಸಾಲ ಒದಗಿಸುವುದು, ಪುಕ್ಕಟೆ ಅಥವಾ ಮಾರುಕಟ್ಟೆ ದರಗಿಂತ ಕಡಿಮೆ ಬೆಲೆಗೆ ಕಚ್ಚಾ ಸಾಮಾಗ್ರಿಗಳನ್ನು ಒದಗಿಸುವುದು, ಕಾರ್ಮಿಕರು ಸಂಘಟನೆಗೊಂಡು ಹೆಚ್ಚಿನ ಸಂಬಳ ಕೇಳದಂತಹ ಕೈಗಾರಿಕಾ ಸಂಬಂಧಗಳನ್ನು ರೂಪಿಸುವುದು

ಇತ್ಯಾದಿ ಸುಧಾರಣೆಗಳ ಮೂಲಕ ಉದ್ಯಮಿಗಳನ್ನು ಬೆಳೆಸಲು ಸರಕಾರ ಕ್ರಮ ಕೈಗೊಳ್ಳಬೇಕು. ಅದು ಬಿಟ್ಟು ರೈತರ ಸಾಲ ಮನ್ನಾ ಅಥವಾ ಬಡತನ ನಿವಾರಣೆ ಅಥವಾ ಶಿಕ್ಷಣ ಅಥವಾ ಆರೋಗ್ಯ ಇತ್ಯಾದಿಗಳ ಸುಧಾರಣೆಗೆಂದು ಸಾವಿರಾರು ಕೋಟಿ ವಿನಿಯೋಗಿಸುವುದನ್ನು ಇಂಡಸ್ಟ್ರಿಯಲ್ ಕ್ಯಾಪಿಟಲ್ ಕೂಡ ಇಷ್ಟಪಡುವುದಿಲ್ಲ.

ಹುಸಿ ಏಕತೆಯನ್ನು ಅಥವಾ ಬಹುತ್ವವನ್ನು ನಿರಾಕರಿಸುವ ಮತ್ತು ತೋರಿಕೆಯ ಆಧುನಿಕೆಯನ್ನು ಪ್ರದರ್ಶಿಸುವ ಮೇಲಿನ ಶಿಕ್ಷಣದ ಲಾಭ ಪಡೆದ ಸಮಾಜದ ಮೇಲ್ವರ್ಗ ಆರಂಭದಲ್ಲಿ ಸಾರ್ವಜನಿಕ ಉದ್ದಿಮೆಗಳಲ್ಲಿ ಮತ್ತು ಸಂಸ್ಥೆಗಳಲ್ಲಿ ಉದ್ಯೋಗ ಪಡೆದರು. ಸಾರ್ವಜನಿಕ ಉದ್ದಿಮೆಗಳಲ್ಲಿ ಆಧುನಿಕ ತಂತ್ರಜ್ಞಾನಗಳ ಬಳಕೆಯನ್ನು ಪ್ರಯೋಗ ಮೂಲಕ ಕಲಿಯಲಾರಂಭಿಸಿದರು. ಸಾರ್ವಜನಿಕ ಆರೋಗ್ಯ ಶಿಕ್ಷಣ ಸಂಸ್ಥೆಗಳಲ್ಲಿ ಸಾರ್ವಜನಿಕ ಸ್ಕಾಲರ್ ಶಿಪ್ಪಲ್ಲಿ ಓದಿದ ವೈದ್ಯರು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸಾರ್ವಜನಿಕ ದುಡ್ಡಿನಿಂದ ಖರೀದಿಸಿದ ಆಧುನಿಕ ಪರೀಕ್ಷಾ ಯಂತ್ರಗಳನ್ನು ಬಡರೋಗಿಗಳ ಮೇಲೆ ಪ್ರಯೋಗಿಸಿ ಕಲಿತರು. ಸಾರ್ವಜನಿಕ ಮೆನೇಜ್‌ಮೆಂಟ್ ಸಂಸ್ಥೆಗಳಲ್ಲಿ ಓದಿದವರು ಸಾರ್ವಜನಿಕ ಉದ್ದಿಮೆಗಳಲ್ಲಿ ಸಾರ್ವಜನಿಕ ದುಡ್ಡನ್ನು ಬೇಕಾಬಿಟ್ಟಿ ಬಳಸಿ ವ್ಯಾಪಾರ ವಹಿವಾಟು ಕಲಿತರು. ಹೀಗೆ ಸೆಕ್ಯುಲರ್ ರಾಜಕೀಯ ದಿಂದ ಮತ್ತು ಸಾರ್ವಜನಿಕ ವಿನಿಯೋಜನೆಯಿಂದ ಸ್ಥಾಪಿತವಾದ ಶಿಕ್ಷಣ, ಆರೋಗ್ಯ, ಉದ್ದಿಮೆ ಇತ್ಯಾದಿಗಳನ್ನು ಬಳಸಿಕೊಂಡು ಮಧ್ಯಮವರ್ಗ ರೂಪಿತವಾಗಿದೆ. ಇಂತಹ ಮಧ್ಯಮ ವರ್ಗ ಕಾಲಕ್ರಮೇಣ ಇಂಡಸ್ಟ್ರಿಯಲ್/ಕಾರ್ಪೊರೇಟ್ ಕ್ಯಾಪಿಟಲ್ ಜತೆ ಗುರುತಿಸಿಕೊಳ್ಳಲಾರಂಭಿಸಿತು. ರೈತರ ಸಾಲಮನ್ನಾ ಅಥವಾ ಬಡತನ ನಿವಾರಣೆ ಅಥವಾ ಶಿಕ್ಷಣ ಅಥವಾ ಆರೋಗ್ಯ ಇತ್ಯಾದಿಗಳ ಸುಧಾರಣೆಗೆಂದು ಸಾವಿರಾರು ಕೋಟಿ ವಿನಿಯೋಜಿಸು ವುದನ್ನು ಕಾರ್ಪೊರೇಟ್ ಕ್ಯಾಪಿಟಲ್ ಇಷ್ಟಪಡುವುದಿಲ್ಲ. ಕಾರ್ಪೊರೇಟ್ ಕ್ಯಾಪಿಟಲ್ ಜತೆ ಗುರುತಿಸಿಕೊಳ್ಳುವ ಮಧ್ಯಮ ವರ್ಗಕ್ಕೂ ಸಮಾಜದ ತಳಸ್ತರದ ಜನರನ್ನು ತಲುಪುವ ಮೇಲಿನ ಬಹುತೇಕ ಕ್ರಮಗಳು ಅಪಥ್ಯವಾಗಿದೆ. ಅಷ್ಟು ಮಾತ್ರವಲ್ಲ ಮಧ್ಯಮ ವರ್ಗ ಕೂಡ ರಾಜಕೀಯ ಪ್ರಕ್ರಿಯೆಯ ನೆಲೆಗಳನ್ನು (ಜಾತಿ/ಧರ್ಮ/ಭಾಷೆ/ಪ್ರದೇಶ ಇತ್ಯಾದಿ ನೆಲೆಗಳ) ಗಂಭೀರವಾಗಿ ಪರಿಗಣಿಸುವುದಿಲ್ಲ. ಔಪಚಾರಿಕ ವಾಗಿ ಅಥವಾ ಸಾರ್ವಜನಿಕವಾಗಿ ಸಾಂಪ್ರದಾಯಿಕ ನೆಲೆಯ ರಾಜಕೀಯವನ್ನು ಮಧ್ಯಮವರ್ಗ ಅಲ್ಲಗಳೆಯುತ್ತಿದೆ. ಅಷ್ಟುಮಾತ್ರವಲ್ಲ ಇಂತಹ ರಾಜಕೀಯ ಪ್ರಕ್ರಿಯೆಯಲ್ಲಿ ತಾವು ಭಾಗವಹಿಸುವುದಿಲ್ಲವೆಂದು ರಾಜಾರೋಷವಾಗಿ ಘೋಷಿಸಿಕೊಳ್ಳುತ್ತದೆ. ಆದರೆ ಯಾವುದೋ ನೆಲೆಯಲ್ಲಿ ರೂಪುಗೊಳ್ಳುವ ರಾಜಕೀಯ ಅಧಿಕಾರವನ್ನು ತಮ್ಮ ವರ್ಗದ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಬಳಸಿಕೊಳ್ಳುವುದರಲ್ಲಿ ಹಿಂದೆ ಬಿದ್ದಿಲ್ಲ. ಟಾಸ್ಕ್‌ಫೋರ್ಸ್ ಸಮಿತಿ, ಎಕ್ಸ್‌ಪೋರ್ಟ್ ಕಮಿಟಿ, ಸರಕಾರೇತರ ಸಂಸ್ಥೆ, ನಾಗರಿಕ ಸಮಿತಿ, ಲಾಬಿಯಿಂಗ್ ಪ್ರಕ್ರಿಯೆ, ಚೇಂಬರ್ಸ್ ಆಫ್ ಕಾಮರ್ಸ್, ಉದ್ದಿಮೆಗಳ ಸಂಘಟನೆ ಇತ್ಯಾದಿಗಳ ಮೂಲಕ ನಗರ ಪ್ರದೇಶದ ಮಧ್ಯಮವರ್ಗ ಬಡಜನರ ಭಾಗವಹಿಸುವಿಕೆ ಯಿಂದ ರೂಪುಗೊಳ್ಳುವ ರಾಜಕೀಯ ಅಧಿಕಾರದಲ್ಲಿ ತಮ್ಮ ಪಾಲಿಗೆ ಪ್ರಯತ್ನಿಸುತ್ತಿವೆ.[೧೮]

ನಮ್ಮ ಶಿಕ್ಷಣ, ಅರ್ಥ, ರಾಜಕೀಯ, ಮಠಮಂದಿರ ಇತ್ಯಾದಿ ವ್ಯವಸ್ಥೆಗಳನ್ನು ಆಧುನೀಕರಣ ಪ್ರಭಾವಿಸಿ ಒಂದು ಸಂಕೀರ್ಣ ಸಾಮಾಜಿಕ ಪರಿಸರವನ್ನು ಸೃಷ್ಟಿಸಿದೆ. ಇಂತಹ ಸಾಮಾಜಿಕ ಪರಿಸರದಲ್ಲಿ ಆಧುನಿಕತೆಯ ಗುರುತಿನಡಿಯಲ್ಲಿ ಏಕತೆಯನ್ನು ತರಲು ಒದ್ದಾಡುವುದು ಒಂದು ಕಡೆಯಲ್ಲಿ ನಡೆದರೆ ಹಲವಾರು ಗುರುತುಗಳು ಏಕ ಕಾಲದಲ್ಲಿ ಪ್ರಕಟಗೊಳ್ಳಲು ಪ್ರಯತ್ನಿಸುವುದು ಮತ್ತೊಂದೆಡೆ ಕಾಣುತ್ತಿದೆ. ಒಂದು ರಾಷ್ಟ್ರ(ನೇಶನ್). ಒಂದು ಭಾಷೆ, ಒಂದು ಧರ್ಮ, ಒಂದು ಆಸಕ್ತಿ, ಒಂದು ಕೇಂದ್ರ ಎನ್ನುವ ಆಧುನೀಕರಣ ಪ್ರತಿಪಾದಿಸುವ ಲಕ್ಷಣಗಳಿಗಿಂತ ಭಿನ್ನವಾದ ಹಲವು ರಾಷ್ಟ್ರಗಳು, ಹಲವು ಧರ್ಮಗಳು, ಹಲವು ಭಾಷೆಗಳು, ಹಲವು ಆಸಕ್ತಿಗಳು, ಹಲವು ಕೇಂದ್ರಗಳು ಇಂದಿನ ವಾಸ್ತವ. ಹಿಂದುಗಳು ನಾವೆಲ್ಲ ಒಂದೇ ಎನ್ನುವ ಘೋಷಣೆಗಳನ್ನು ಕೇಳುತ್ತಿರುವಾಗಲೇ ಹಲವಾರು ಜಾತಿಗಳು ಮತ್ತು ಅವುಗಳ ನಡುವಿನ ಮೇಲುಕೀಳುಗಳು ಬೇರೆ ಬೇರೆ ರೂಪದಲ್ಲಿ ಜೀವಂತ ಇವೆ. ಮತಾಂತರಗೊಂಡವರಲ್ಲೂ ಜಾತಿಗಳು ಜೀವಂತ ಇವೆ. ನಮ್ಮೆಲ್ಲ ಆಸಕ್ತಿಗಳೆಲ್ಲ ಒಂದೇ ಮತ್ತು ಈ ಆಸಕ್ತಿಗಳನ್ನು ಪೂರೈಸಲು ಪ್ರಭುತ್ವ ಮಾತ್ರ ಶಕ್ತ ಎನ್ನುವ ಆಧುನೀಕರಣದ ಗ್ರಹಿತ ಅಡಿಮೇಲಾಗಿದೆ. ಹಲವು ರಾಷ್ಟ್ರಗಳಿರುವಾಗ ಹಲವು ಆಸಕ್ತಿಗಳು ಇರಲೇಬೇಕು ಮತ್ತು ಇವುಗಳನ್ನು ಪ್ರಭುತ್ವ ಮಾತ್ರ ಪೂರೈಸಲು ಸಾಧ್ಯವಿಲ್ಲವೆಂದು ಈಗಾಗಲೇ ಸಾಬೀತಾಗಿದೆ. ಹಲವು ಆಸಕ್ತಿಗಳನ್ನು ಪ್ರಭುತ್ವ ಪೂರೈಸಲು ಸಾಧ್ಯವಿಲ್ಲವೆಂದು ಖಾಸಗಿ ಬಂಡವಾಳ ಮುಂಚೂಣಿಗೆ ಬಂತು. ಆದರೆ ಅದು ತನ್ನ ಮೂಲಗುಣದಲ್ಲಿ(ಲಾಭ ಮತ್ತು ಎಕ್ಯುಮ್ಯುಲೇಶನ್‌ಗಾಗಿ ವ್ಯವಹಾರ ನಡೆಸುವುದು) ರಾಜಿ ಮಾಡಿಕೊಳ್ಳಲಿಲ್ಲ. ಆವಾಗ ಸಿವಿಲ್ ಸೊಸೈಟಿ ಅಥವಾ ವ್ಯಕ್ತಿಗಳು ಸಂಘಟಿತರಾಗಿ ತಮ್ಮ ಆಸಕ್ತಿಗಳನ್ನು ಪೂರೈಸಿಕೊಳ್ಳಲು ಕ್ರಮವಹಿಸಬೇಕೆನ್ನುವ ಸ್ಥಿತಿ ನಿರ್ಮಾಣವಾಗಿದೆ. ಬಲವಾದ ಕೇಂದ್ರ ತನ್ನ ಅಧಿಕಾರದ ವ್ಯಾಪ್ತಿಯಲ್ಲಿ ಬರುವ ಎಲ್ಲರ ವ್ಯವಹಾರಗಳನ್ನು ನಿರ್ದೇಶಿಸುವ, ನಿಯಂತ್ರಿಸುವ ಸಾಧ್ಯತೆ ಇಂದಿಲ್ಲ. ಹಾಗೆಂದು ಬಲಹೀನರು ಇಂದು ಕೂಡ ತಮ್ಮ ಆಸಕ್ತಿಗನುಗುಣವಾಗಿ ತಮ್ಮ ಬದುಕನ್ನು ರೂಪಿಸಿಕೊಳ್ಳುವ ಸಾಧ್ಯತೆನೂ ಇಲ್ಲ. ವ್ಯಕ್ತಿ ಮತ್ತು ಪರಿಸರದ ಸಂಬಂಧದಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ. ಹಿಂದಿನ ಎಲ್ಲವನ್ನು ನಿಯಂತ್ರಿಸುವ ಪರಿಸರವನ್ನು ಇಂದು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಹಾಗೆಂದು ಎಲ್ಲರು ಎಲ್ಲ ಬಂಧನಗಳನ್ನು ಕಿತ್ತೊಗೆದು ಇಷ್ಟ ಬಂದ ಹಾಗೆ ಬದುಕುವ ಸ್ಥಿತಿ ಇಲ್ಲ. ಮಹಿಳೆಯರಿಗೆ ಹೋಲಿಸಿದರೆ ಪುರುಷರು, ಕೆಳಜಾತಿಗಳಿಗೆ ಹೋಲಿಸಿದರೆ ಮೇಲ್ಜಾತಿ ಜನರು, ಅನಕ್ಷರಸ್ಥರಿಗೆ ಹೋಲಿಸಿದರೆ ಅಕ್ಷರಸ್ಥರು, ಗ್ರಾಮೀಣ ಜನರಿಗೆ ಹೋಲಿಸಿದರೆ ಪೇಟೆ ಪಟ್ಟಣದವರು ಇವರೆಲ್ಲರಿಗೆ ತಮ್ಮ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿ ಬದುಕುಗಳ ಆಯ್ಕೆಯಲ್ಲಿ ವಿವಿಧ ಮಟ್ಟದ ಸ್ವಾತಂತ್ರ್ಯ ದೊರಕಿದೆ. ಇಂದು ಯಾವುದೇ ಸಮುದಾಯ, ಸಂಸ್ಥೆ, ಮೌಲ್ಯ ಇತ್ಯಾದಿಗಳ ಪರಿಧಿಗಳು ಸ್ಪಷ್ಟವಾಗಿಲ್ಲ. ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವ ಉದ್ದೇಶದಿಂದ ರೂಪಿತವಾದ ಸಂಘಟನೆಗಳು ರಾಜಕೀಯ ಚಟುವಟಿಕೆಗಳಲ್ಲಿ

ಪಾಲುಗೊಳ್ಳುವುದು ವಿಚಿತ್ರವಾಗುವುದಿಲ್ಲ. ಮಹಿಳೆಯರನ್ನು ದೇವಿಯರ ಸ್ಥಾನದಲ್ಲಿ ಇರಿಸಿ ಪೂಜಿಸುವ ಸಂದರ್ಭದಲ್ಲೇ ಪ್ರತಿ ಗುಂಪು ಘರ್ಷಣೆಯಲ್ಲೂ ಮಹಿಳೆಯರ ಮೇಲೆ ಸತತ ದೌರ್ಜನ್ಯ ನಡೆಸುವುದು ವಿರೋಧಭಾಸವಾಗುವುದಿಲ್ಲ. ನಾಯಿಬೆಕ್ಕು, ಮರಗಿಡ, ಕಲ್ಲುಬಂಡೆ ಈ ಎಲ್ಲವುಗಳಲ್ಲೂ ದೇವರನ್ನು ಕಾಣುವ ಜನರಿಗೆ ತಮ್ಮ ಹಾಗೆ ಇರುವ ಮತ್ತೊಬ್ಬರಲ್ಲಿ ಮನುಷತ್ವವನ್ನು ಕಾಣಲು ಸಾಧ್ಯವಾಗುವುದಿಲ್ಲ. ಭಾಷೆ, ಉಡುಗೆ ತೊಡುಗೆ, ಊಟ ಉಪಚಾರ ಇತ್ಯಾದಿಗಳಲ್ಲಿ ಪಕ್ಕಾ ಆಧುನಿಕರಂತೆ ಕಾಣುವವರು ದಿನನಿತ್ಯದ ಬದುಕಿನಲ್ಲಿ ಊಳಿಗಮಾನ್ಯ ಮೌಲ್ಯಗಳನ್ನು ಆಚರಿಸುವುದು ಅಸಹಜವಾಗುವುದಿಲ್ಲ. ಸಾವಿರಾರು ಜನ ಊಟಕ್ಕಿಲ್ಲದೆ, ವಸತಿ ಇಲ್ಲದೆ, ಶಿಕ್ಷಣ ಇಲ್ಲದೆ, ಆರೋಗ್ಯ ಇಲ್ಲದೆ ಹಿಂಸೆ ಪಡುವುದು ಹಿಂಸೆಯಾಗುವುದಿಲ್ಲ.

ಬಹುತ್ವವನ್ನು ನಿರಾಕರಿಸುವ ಮತ್ತು ತನ್ನ ಪರಿಸರದ ಜನರ ಕಷ್ಟಕಾರ್ಪಣ್ಯಗಳ ಬಗ್ಗೆ ದಿವ್ಯ ನಿರ್ಲಕ್ಷತೆಯನ್ನು ರೂಢಿಸುವ ಒಂದು ಬಗೆಯ ವಿರೋಧಭಾಸವನ್ನೊಳಗೊಂಡ ಹುಸಿ ಏಕತೆಯನ್ನು ಆಧುನೀಕರಣ ಸಾಧಿಸಿರುವುದನ್ನು ಮೇಲಿನ ವಿವರಣೆಯಿಂದ ಅರ್ಥಮಾಡಿಕೊಳ್ಳಬಹುದು. ಆಧುನಿಕ ಶಿಕ್ಷಣ ಪಡೆದ ಮಧ್ಯಮವರ್ಗ ಕಮರ್ಶಿಯಲ್ ಕ್ಯಾಪಿಟಲ್‌ನ ಗುಣಗಳನ್ನು ರೂಢಿಸಿಕೊಂಡಿರುವ ಇಂಡಸ್ಟ್ರಿಯಲ್ ಕ್ಯಾಪಿಟಲ್ ಜತೆಗೆ ಗುರುತಿಸಿಕೊಂಡಿದ್ದಾರೆ. ಶಿಕ್ಷಣ ಇಲ್ಲದವರನ್ನು ಮತ್ತು ಕಡಿಮೆ ಶಿಕ್ಷಣ ಪಡೆದವರನ್ನು ಕೋಮುವಾದಿ ರಾಜಕೀಯ ಹಾಗೂ ಮಠಮಂದಿರಗಳು ಪ್ರಭಾವಿಸುತ್ತಿವೆ. ಕೋಮುವಾದಿ ರಾಜಕೀಯ ಹಾಗೂ ಮಠಮಂದಿರಗಳು ಕೂಡ ಶಿಕ್ಷಣದ ರೀತಿಯಲ್ಲಿ ಮತ್ತೊಂದು ಬಗೆಯ ಏಕತೆಯನ್ನು ಸಾಧಿಸಲು ಪ್ರಯತ್ನಿಸುತ್ತವೆ. ಇವರೆಡು ಕೂಡ ಸಮಾಜದ ತಳಸ್ತರದ ಸಮುದಾಯಗಳಿಗೆ ದೊಡ್ಡ ಹಾನಿಯನ್ನು ಮಾಡಿವೆ. ಇವರುಗಳಿಗೆ ತಮ್ಮ ಭಾಷೆ, ಆಚಾರ ವಿಚಾರ ಇತ್ಯಾದಿಗಳ ಬಗ್ಗೆ ಕೀಳರಿಮೆ ಮೂಡಿಸುವುದು ಮಾತ್ರವಲ್ಲ; ಮತ್ತೊಬ್ಬರ ಭಾಷೆ ಆಚಾರ ವಿಚಾರಗಳನ್ನು ಬಗ್ಗೆ ಗೌರವಿಸಬೇಕೆನ್ನುವ ಒಂದು ಕನಿಷ್ಠ ಅಭ್ಯಾಸವನ್ನು ಕೂಡ ಮಾಡಿಸುತ್ತಿಲ್ಲ. ಇಂತಹ ಪರಿಸರದಲ್ಲಿ ಸಂಶೋಧನೆ ಹಲವರಿಗೆ ಹಲವು ವಿಧಗಳಲ್ಲಿ ಕಂಡರೆ ಅದೊಂದು ಆರೋಗ್ಯಕರ ಬೆಳವಣಿಗೆಯೆಂದು ಪರಿಗಣಿಸಬೇಕಾಗಿದೆ. ಯಾಕೆಂದರೆ ವಿವಿಧ ಸಾಮಾಜಿಕ ಹಿನ್ನೆಲೆಯಿಂದ ಬಂದವರು ಸಮಾಜವನ್ನು ಗ್ರಹಿಸುವ, ವಿಶ್ಲೇಷಿಸುವ ಹಾಗೂ ಮಂಡಿಸುವ ವಿಧಾನಗಳು ಕೂಡ ವಿವಿಧವಾಗಿರುತ್ತವೆ. ಆ ಕಾರಣಕ್ಕಾಗಿಯೇ ಒಂದೇ ಶಿಸ್ತಿನಲ್ಲಿ, ಒಂದೇ ವಿಷಯದ ಮೇಲೆ ಒಂದೇ ವಿಧಾನದಲ್ಲಿ ಸಂಶೋಧನೆ ನಡೆಸುವವರಿಗೆ ವಿವಿಧ ಉತ್ತರಗಳು ಸಿಗಬಹುದು. ವಿವಿಧ ಉತ್ತರಗಳು ಸಿಗುವುದು ಸರಿ ಕೂಡ. ಆದರೆ ಆಧುನಿಕ ಶಿಕ್ಷಣದಂತೆ ಸಂಶೋಧನೆಯ ವ್ಯಾಖ್ಯಾನ ಹಾಗೂ ಆಚರಣೆ ಕೂಡ ಯಾವುದೋ ಒಂದು ಬಗೆಯ ಏಕತೆಯನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದೆ. ಇದಕ್ಕಾಗಿ ತಾತ್ವಿಕ ಚಿಂತನೆಗಳಲ್ಲಿ, ಪಾರಿ ಭಾಷೆಗಳಲ್ಲಿ, ವಿಧಾನಗಳಲ್ಲಿ ಏಕತೆಯನ್ನು ತರಲು ಪ್ರಯತ್ನಿಸಲಾಗುತ್ತಿದೆ.

ಏಕತೆ ಅದರಷ್ಟಕ್ಕೆ ಅದು ಕೆಟ್ಟದಲ್ಲ. ಆದರೆ ಏಕತೆ ಮತ್ತು ಅಧಿಕಾರದ ಸಂಬಂಧ ಇಲ್ಲಿ ಮುಖ್ಯ. ಆಧುನೀಕರಣ, ರಾಷ್ಟ್ರೀಯತೆ, ಪ್ರಭುತ್ವ, ಪರಸ್ಪರ ಅವಲಂಬಿತ ಬದುಕು ಇತ್ಯಾದಿಗಳು ಆಧುನಿಕ ಸಮಾಜದ ಸೃಷ್ಟಿಗೆ ಅನಿವಾರ್ಯ ಎಂದು ನಂಬಲಾಗಿದೆ. ಆಧುನಿಕ ಸಮಾಜದಲ್ಲಿ ಎಲ್ಲರು ಒಟ್ಟಾಗಿ ಸಮಾನರಾಗಿ ಇರುತ್ತಾರೆ ಎಂದು ಗೃಹಿಸ ಲಾಗಿದೆ. ಈ ಎಲ್ಲ ಕಾರಣಗಳಿಂದಾಗಿ ವಿವಿಧ ಸಮುದಾಯಗಳ ಒಟ್ಟಾರೆ ಚಿತ್ರಣ ಮಹತ್ವ ಪಡೆದಿದೆ. ಎಲ್ಲರೂ ಒಟ್ಟಾಗಿ ಸಮಾನರಾಗಿ ಇರುವುದಕ್ಕಾಗಿ ಪ್ರತ್ಯೇಕತೆಗಳನ್ನು ಸೃಷ್ಟಿಸುವ ಹಳೆಯ ಪರಿಭಾಷೆಗಳು ಮಹತ್ವವಲ್ಲವೆಂದು ವಾದಿಸಲಾಗುತ್ತಿದೆ. ಯಾವುದೇ ಸಮುದಾಯದ ಒಟ್ಟಾರೆ ಚಿತ್ರಣ ಪಡೆಯುವ ದೃಷ್ಟಿಯಿಂದ ಸಮಾಜ ಸಂಶೋಧನೆಯ ಪಾರಿಭಾಷ ಪದಗಳು ಒಂದು ನಿರ್ದಿಷ್ಟ ಸಮುದಾಯ ಚಾರಿತ್ರಿಕವಾಗಿ ರೂಪಿಸಿಕೊಂಡ ಪಾರಿಭಾಷ ಪದಗಳಿಗಿಂತ ಹೆಚ್ಚು ಉಪಯುಕ್ತವೆಂದು ತಿಳಿಯಲಾಗಿದೆ. ಇಂತಹ ವಾತಾವರಣ ವಿವಿಧ ಸಾಮಾಜಿಕ ಹಿನ್ನೆಲೆಗಳಿಂದ ಬಂದ ಸಮಾಜ ಸಂಶೋಧಕರನ್ನು ಒಂದಲ್ಲ ಒಂದು ಬಗೆಯಲ್ಲಿ ಕಾಡುತ್ತದೆ. ಸಂಶೋಧನೆ ಮತ್ತು ಸಾಮಾಜಿಕ ಪರಿವರ್ತನೆ ನಡುವೆ ನೇರ ಸಂಬಂಧ ಬಯಸುವ ಸಮಾಜ ಸಂಶೋಧಕರು ಒಂದು ಬಗೆಯ ಇಬ್ಬಂದಿತನವನ್ನು ಅನುಭವಿಸುವ ಸಾಧ್ಯತೆನೂ ಇದೆ. ತಳಸ್ತರದ ಸಂಶೋಧಕರನ್ನು ಈ ವಾತಾವರಣ ಬೇರೆಯದೇ ರೂಪದಲ್ಲಿ ಪ್ರಭಾವಿಸುತ್ತದೆ. ತಾನು ಬದುಕುವ ಪರಿಸರದಿಂದ ರೂಢಿಸಿಕೊಂಡ ದೃಷ್ಟಿಕೋನದಿಂದ(ತಳಸ್ತರದ ದೃಷ್ಟಿಯಿಂದ) ಸಂಶೋಧನೆಯನ್ನು ನೋಡಬಾರದು. ಸಂಶೋಧನೆಗೆ ಪ್ರತ್ಯೇಕ ದೃಷ್ಟಿಕೋನ ರೂಢಿಸಿಕೊಳ್ಳ ಬೇಕೆಂದು ಸಮಾಜ ಸಂಶೋಧನೆಯ ವೈಧಾನಿಕತೆ ತಾಖೀತು ಮಾಡುತ್ತದೆ. ಅದಕ್ಕಾಗಿ ಯಜಮಾನಿಕೆಯಲ್ಲಿರುವ ಥಿಯರಿಗಳನ್ನು ಮತ್ತು ಪರಿಭಾಷೆಗಳನ್ನು ಪರಿಚಯ ಮಾಡಿಕೊಳ್ಳಲು ಪ್ರಯತ್ನಿಸಬೇಕು ಮತ್ತು ಸಂಶೋಧನೆಯನ್ನು ಹೊಸತಾಗಿ ಪರಿಚಯ ಮಾಡಿಕೊಂಡ ದೃಷ್ಟಿಕೋನದಿಂದ ನೋಡಬೇಕಾಗುತ್ತದೆ. ಅಷ್ಟು ಮಾತ್ರವಲ್ಲ ಬದುಕಿನಿಂದ ಬಂದ ದೃಷ್ಟಿಕೋನವನ್ನು ಸಂಶೋಧನೆಗಾಗಿ ರೂಢಿಸಿಕೊಂಡ ದೃಷ್ಟಿಕೋನದಿಂದ ಬೇರ್ಪಡಿಸಿ ನೋಡಬೇಕಾಗುತ್ತದೆ. ಇದರಿಂದಾಗಿ ಬದುಕಿನ ಸಮಸ್ಯೆಗಳೇ ಬೇರೆ ಸಂಶೋಧನ ಸಮಸ್ಯೆ ಗಳೇ ಬೇರೆ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಈ ಬಗೆಯ ಸಂಶೋಧನ ಪ್ರಕ್ರಿಯೆ ಎರಡು ರೀತಿಯ ಸಮಸ್ಯೆಗಳಿಗೆ ಎಡೆ ಮಾಡಿಕೊಡುತ್ತದೆ. ಒಂದು ಕಡೆ ಸಂಶೋಧನೆಯಲ್ಲಿ ತೊಡಗಿದ ತಳಸ್ತರದ ಸಂಶೋಧಕರು ಕೂಡ (ಇತರರಂತೆ) ತಳಸ್ತರದ ಜನರ ಬದುಕು ಕಟ್ಟಿಕೊಡುವ ಸಾಮಾಜಿಕ ನ್ಯಾಯ, ಸಮಾನತೆ, ನೆಮ್ಮದಿಯ ಬದುಕು ಇತ್ಯಾದಿಗಳ ಗಂಧಗಾಳಿಯೂ ಇಲ್ಲದ ತಳಸ್ತರದ ಥಿಯರಿಗಳನ್ನು(ತಳಸ್ತರದ ಉದ್ಧಾರಕ್ಕಾಗಿ) ನೇಯುತ್ತಿರುತ್ತಾರೆ. ಎಷ್ಟೋ ಬಾರಿ ಈ ಬಗೆಯಲ್ಲಿ ನೇಯುವ ಥಿಯರಿಗಳಲ್ಲಿ ಸಮಸ್ತ ತಳಸ್ತರದ ಬಿಡುಗಡೆಗಿಂತ ತಮ್ಮದೇ(ಸಂಶೋಧಕರು ಮತ್ತು ಅವರ ತಕ್ಷಣದ ಸಂಬಂಧಗಳ) ಬಿಡುಗಡೆಯ ಕಾಳಜಿಗಳು ಹೆಚ್ಚು ಅಭಿವ್ಯಕ್ತಗೊಳ್ಳುವುದು ಇದೆ. ಇನ್ನೊಂದೆಡೆ ಈ ಬಗೆಯ ಸಂಶೋಧನೆ ಹಾಗೂ

ಸಂಶೋಧನೆಗಾಗಿ ಸೃಷ್ಟಿಸುವ ತಾತ್ವಿಕತೆ ಹಾಗೂ ಪಾರಿಭಾಷೆಗಳು ತಳಸ್ತರದ ಬದುಕಿನಿಂದ ಚಾರಿತ್ರಿಕವಾಗಿ ರೂಪುಗೊಂಡ ತಾತ್ವಿಕತೆ ಹಾಗು ಪಾರಿಭಾಷೆಗಳಿಂದ ದೂರವಾಗಿರುತ್ತವೆ. ಈ ಎರಡೂ ಪರಸ್ಪರ ಸಂಧಿಸುವ ಸಾಧ್ಯತೆನೇ ಇರುವುದಿಲ್ಲ. ಹಾಗಾದಾಗ ತಳಸ್ತರದ ಅಧ್ಯಯನದ ಥಿಯರಿ ಮತ್ತು ಪರಿಭಾಷೆಗಳು ತಳಸ್ತರದ ಜನರ ಬದುಕನ್ನು ಅರ್ಥಮಾಡಿ ಕೊಳ್ಳುವುದಕ್ಕಿಂತ ಹೆಚ್ಚು ತಳಸ್ತರದ ಜನರನ್ನು ಕೇಂದ್ರೀಕೃತ ಅಧಿಕಾರ ಬಯಸುವ ರೂಪದಲ್ಲಿ ಕಟ್ಟಿಕೊಡಲು ಪೂರಕವಾಗುವ ಸಾಧ್ಯತೆ ಹೆಚ್ಚಿದೆ. ಅಂದರೆ ತಳಸ್ತರದ ಜನರನ್ನು ಯಾವುದೋ ಒಂದು ಬಗೆಯಲ್ಲಿ ಮುಖ್ಯವಾಹಿನಿಯೊಂದಿಗೆ ಜೋಡಿಸುವ ಕೆಲಸಕ್ಕೆ ಪೂರಕ ವಾಗುವ ಜ್ಞಾನ ಸೃಷ್ಟಿ ಮಾಡಲಾಗುತ್ತಿದೆ. ಇದು ಖಂಡಿತವಾಗಿಯೂ ತಳಸ್ತರದ ಜನರನ್ನು ಕಾಡುವ ಕೆಲವೊಂದು ಮೂಲಭೂತ ಸಮಸ್ಯೆಗಳಿಗೆ-ಸಮಾನತೆ, ಸ್ವಾಯತ್ತತೆ, ಮಾನ ಸಮ್ಮಾನ ಇತ್ಯಾದಿ ಸಮಸ್ಯೆಗಳಿಗೆ ಪರಿಹಾರವಾಗಲಿಕ್ಕಿಲ್ಲ.

ಸಂಶೋಧನೆ ನಿಜವಾಗಿಯೂ ನಮ್ಮ ಸಮಾಜದ ಬಹುತ್ವವನ್ನು ಉಳಿಸಿ ಬೆಳೆಸುವುದಕ್ಕೆ ಪೂರಕವಾಗುವ ಕೊಡುಗೆ ನೀಡಬೇಕಾದರೆ ಸಂಶೋಧನೆಯ ವ್ಯಾಖ್ಯಾನ, ಸಂಶೋಧನೆಯ ಕೊಡುಗೆ ಮತ್ತು ಸಂಶೋಧನೆಯ ವಿಧಿವಿಧಾನಗಳನ್ನು ಹೊಸದೃಷ್ಟಿಯಿಂದ ನೋಡುವ ಅಗತ್ಯವಿದೆ. ಈ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಪುಸ್ತಕದ ಅಧ್ಯಾಯಗಳನ್ನು ರಚಿಸಲಾಗಿದೆ. ಸಂಶೋಧನೆ ಅಂದರೇನು ಎನ್ನುವ ಅಧ್ಯಾಯ ಸಂಶೋಧನೆ ಯಾವುದೋ ಒಂದು ಬೆಳವಣಿಗೆಯ ಅಥವಾ ಪ್ರಕ್ರಿಯೆಯ ನಿಜವನ್ನು ಶೋಧಿಸುದಕ್ಕೆ ಸೀಮಿತವಲ್ಲ ಎಂದು ವಾದಿಸುತ್ತದೆ. ಅಂದರೆ ಬೆಳವಣಿಗೆ ನಡೆದಿದೆಯೋ ಇಲ್ಲವೇ ಎಂದು ಪರೀಕ್ಷಿಸುವುದು ಅಥವಾ ಬೆಳವಣಿಗೆಯ ನಿಜವನ್ನು ಶೋಧಿಸುವುದು ಸಂಶೋಧನೆಯ ಆದ್ಯತೆಯಲ್ಲ. ಬೆಳವಣಿಗೆಯ ಕಾರಣವನ್ನು ಅಥವಾ ಯಾಕೆ ಮತ್ತು ಹೇಗೆ ಬೆಳವಣಿಗೆ ನಡೆದಿದೆ ಎನ್ನುವುದನ್ನು ಪತ್ತೆ ಹಚ್ಚುವುದು ಕೂಡ ಸಂಶೋಧನೆಯ ಆದ್ಯತೆಯಾಗಬೇಕಿಲ್ಲ. ಪ್ರಕ್ರಿಯೆಯನ್ನು ಅಥವಾ ಬೆಳವಣಿಗೆಯನ್ನು ಯಾಕೆ ಮತ್ತು ಹೇಗೆ ನಡೆದಿದೆ ಎನ್ನುವುದನ್ನು ವಿವಿಧ ಆಸಕ್ತಿಗಳು ಕಟ್ಟಿಕೊಡುವ ಬಗೆಯನ್ನು ಅರ್ಥಮಾಡಿಕೊಳ್ಳುವುದು ಸಂಶೋಧನೆಯ ಮುಖ್ಯ ಆದ್ಯತೆಯಾಗಬೇಕಾಗಿದೆ. ಆದುದರಿಂದ ಸಂಶೋಧನೆ ಪರಿಶುದ್ಧ ಜ್ಞಾನದ ಅಥವಾ ಸತ್ಯದ ಹುಡುಕಾಟವಲ್ಲ; ವಾದದ ಪ್ರತಿಪಾದನೆ ಅಥವಾ ಸತ್ಯದ ಪ್ರತಿಪಾದನೆ. ಈಗಾಗಲೇ ಸ್ಥಾಪಿತವಾಗಿರುವ ವಾದ/ಸತ್ಯಗಳೊಂದಿಗೆ ಸಂವಾದ ನಡೆಸಿ ಸಂಶೋಧಕರು ತಮ್ಮ ವಾದವನ್ನು ಒಂದು ಒಪ್ಪಿತ ಚೌಕಟ್ಟಿನೊಳಗೆ ಸ್ಥಾಪಿಸುವ ಪ್ರಕ್ರಿಯೆಯನ್ನು ಸಂಶೋಧನೆಯೆಂದು ವ್ಯಾಖ್ಯಾನಿಸಲಾಗಿದೆ. ಈಗಾಗಲೇ ಸಂಗ್ರಹವಾದ ಆಧುನಿಕ ಹಾಗು ಸಾಂಪ್ರದಾಯಿಕ ಜ್ಞಾನದ (ಎಕ್ಯುಮ್ಯುಲೇಟೇಡ್ ಬಾಡಿ ಆಫ್ ನೋಲೆಡ್ಜ್) ವಿಮರ್ಶೆ ಸಂಶೋಧನೆಯ ತಾತ್ವಿಕ ಕೊಡುಗೆಯ ಚರ್ಚೆಯಲ್ಲಿ ಸಿಂಹಪಾಲು ಪಡೆಯಬೇಕಾಗಿದೆ. ಈಗಾಗಲೇ ಸಂಗ್ರಹವಾದ ಜ್ಞಾನ ಸ್ಥಾಪಿತ ಸತ್ಯದ ರೂಪದಲ್ಲಿ ಪ್ರಚಲಿತದಲ್ಲಿರುತ್ತದೆ. ಇಂತಹ ಸ್ಥಾಪಿತ ಸತ್ಯಗಳು

ಸಾಮಾಜಿಕ ಮೇಲಾಟಗಳನ್ನು, ಲಿಂಗಭೇದಗಳನ್ನು, ಸಂಪನ್ಮೂಲಗಳ ಅಸಮಾನ ಹೊಂದುವಿಕೆಗಳನ್ನು, ಅಧಿಕಾರದ ಏರುಪೇರುಗಳನ್ನು ಸಮರ್ಥಿಸಿಕೊಳ್ಳಲು ಬಳಕೆಯಾಗುತ್ತಿವೆ. ಅಷ್ಟು ಮಾತ್ರವಲ್ಲ ಮೇಲಿನ ಎಲ್ಲ ಅಸಮಾನತೆಗಳನ್ನು ಅಮೂರ್ತಗೊಳಿಸುವಲ್ಲಿ ಈಗಾಗಲೇ ಸಂಗ್ರಹವಾದ ಜ್ಞಾನದ ಪಾತ್ರ ದೊಡ್ಡದಿದೆ. ಇಂತಹ ಜ್ಞಾನವನ್ನು ಬೆತ್ತಲೆ ಗೊಳಿಸುವುದು ಅಸಮಾನವಾಗಿ ಹಂಚಿಕೆಯಾಗಿರುವ ಅಧಿಕಾರವನ್ನು ಅಲುಗಾಡಿಸಲು ಅನಿವಾರ್ಯ. ಯಾವ ವಿಧಾನಗಳಿಂದ ಜ್ಞಾನ ಸಂಗ್ರಹ ನಡೆದಿದೆ? ಈ ವೈಧಾನಿಕತೆಗಳು ಸೃಷ್ಟಿಸುವ ಜ್ಞಾನ ಯಾರ ಆಸಕ್ತಿಯನ್ನು ಪ್ರತಿಪಾದಿಸುತ್ತಿವೆ? ಹೇಗೆ ಪ್ರತಿಪಾದಿಸುತ್ತಿವೆ? ಉತ್ಪಾದಿತ ಜ್ಞಾನವನ್ನು ಹೇಗೆ ಜನಸಾಮಾನ್ಯರ ಪ್ರಜ್ಞೆಯ ಭಾಗವನ್ನಾಗಿಸಲಾಗುತ್ತಿದೆ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸುವುದು ಸಂಶೋಧನೆಯ ಉದ್ದೇಶಗಳಾಗಬೇಕೆಂದು ಎರಡನೇ ಅಧ್ಯಾಯದಲ್ಲಿ ವಾದಿಸಲಾಗಿದೆ. ಇಂತಹ ಉದ್ದೇಶವನ್ನು ಸಾಧಿಸಲು ಅನುಕೂಲವಾಗುವ ವಿಧಿವಿಧಾನಗಳನ್ನು (ವಿಷಯ ಆಯ್ಕೆ, ಸಮಸ್ಯೀಕರಣ, ಪ್ರಸ್ತಾವ, ಸಾಕ್ಷಿ ಪುರಾವೆಗಳು, ವಾದ ಮಂಡನೆ ಇತ್ಯಾದಿಗಳನ್ನು) ಪುಸ್ತಕದ ಮುಂದಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಸಂಶೋಧನೆಯ ಸಾಂಪ್ರದಾಯಿಕ ವ್ಯಾಖ್ಯಾನ ಹಾಗೂ ದೃಷ್ಟಿಕೋನ ಸಂಶೋಧಕರನ್ನು ಕೂಡ ಸಾಮಾನ್ಯರಿಗಿಂತ ಭಿನ್ನವಾಗಿ ಕಟ್ಟಿಕೊಡುತ್ತದೆ ಅಥವಾ ಸಾಮಾನ್ಯರಿಗಿರುವ ರಾಗದ್ವೇಷಗಳನ್ನು ಮೀರಿದ ವ್ಯಕ್ತಿತ್ವವನ್ನು ಆರೋಪಿಸುತ್ತವೆ.

೨. ಬೆನಡಿಕ್ಟ್ ಆಂಡರ್ ಸನ್, *ಇಮೇಂಜಿನ್ಡ್ ಕಮ್ಯೂನಿಟೀಸ್ - ರಿಫ್ಲೆಕ್ಷನ್ಸ್ ಆನ್ ದಿ ಒರಿಜಿನ ಆಂಡ್ ಸ್ಪ್ರೆಡ್ ಆಫ್ ನೇಶನಲಿಸಂ,* ಲಂಡನ್: ವಾರ್ಸೋ, ೧೯೮೩. ಬೆನಡಿಕ್ಟ್ ಆಂಡರ್ ಸನ್‌ನ ವಾದವನ್ನು ವಿಮರ್ಶೆ ಮಾಡುವ ಹಲವಾರು ಬರಹಗಳಿವೆ. ಅವುಗಳಲ್ಲಿ ಪಾರ್ಥಚಟರ್ಜಿಯವರ, 'ಹೂಸ್ ಇಮೇಜಿನ್ಡ್ ಕಮ್ಯುನಿಟಿ', ಲೇಖನ ಸರಳವಾಗಿದೆ, ಸಂಕ್ಷಿಪ್ತವಾಗಿದೆ ಮತ್ತು ಸುಲಭವಾಗಿ ಅರ್ಥವಾಗುತ್ತದೆ. ಈ ಲೇಖನ ಅವರ ಮೂರು ಪುಸ್ತಕಗಳನ್ನು ಸೇರಿಸಿ ಪ್ರಕಟಿಸಿದ *ದಿ ಪಾರ್ಥ ಚಟರ್ಜಿ ಓಮ್ನಿಬಸ್*(ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೯) ಪುಸ್ತಕದಲ್ಲಿ ಇದೆ.

೩. ವಿವರಗಳಿಗೆ ಈ ಕೆಳಗಿನ ಪುಸ್ತಕಗಳನ್ನು ನೋಡಬಹುದು ಇವಾ ಇಜಸಿ ಹೇಲಿ, *ಸೋಶಿಯಲ್ ಚೇಂಜ್ -ದಿ ಎಡ್ವಂಟ್ ಆಂಡ್ ಮೆಚುರೇಶನ್ ಆಫ್ ಮೊಡರ್ನ್ ಸೊಸೈಟಿ,* ಲಂಡನ್: ರೌಟ್ಲೆಡ್ಜ್ ಆಂಡ್ ಕೆಗನ್ ಪೌಲ್, ೧೯೮೧. ಎಂಕೀ ಎಮ್ ಎಮ್ ಹೂಗ್‌ವೆಲ್ಟ್, *ದಿ ಸೋಶಿಯಲಾಜಿ ಆಫ್ ಡೆವಲಪಿಂಗ್ ಸೊಸೈಟಿ,* ಲಂಡನ್: ಮೆಕ್ ಮಿಲನ್ ಪ್ರೆಸ್, ೧೯೭೬. ೨೪. ಎವರೆಟ್ ಇ ಹೇಗನ್, *ಆನ್ ದಿ ಥಿಯರಿ ಆಫ್ ಸೋಶಿಯಲ್ ಚೇಂಜ್-ಹೌ ಎಕನಾಮಿಕ್ ಗ್ರೋಥ್ ಬಿಗಿನ್ಸ್,* ನ್ಯೂಯಾರ್ಕ್: ಪೆಪ್ಪರ್ ಆಂಡ್ ಸ್ಪೆಮನ್ಸ್ ಇಂಕ್, ೧೯೬೨

೪. ವಿವರಗಳಿಗೆ ಈ ಕೆಳಗಿನ ಪುಸ್ತಕ ಮತ್ತು ಲೇಖನಗಳನ್ನು ನೋಡಬಹುದು. ಪಿ.ಬೋರ್ಡಿ, *ರಿಪ್ರೋಡಕ್ಷನ್ ಇನ್ ಎಜುಕೇಶನ್ : ಸೊಸೈಟಿ ಆಂಡ್ ಕಲ್ಚರ್,* ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೨೦೦೦, ಜೆ.ಬೈರನ್, 'ಲಿಂಗ್ವಿಸ್ಟಿಕ್ಸ್ ಆಂಡ್ ದಿ ಸ್ಟಡಿ ಆಫ್ ಲೇಂಗ್ವೇಜ್ ಸ್ಪೇಂಡರ್ ಡೈಸೇಶನ್', *ಕರೆಂಟ್ ಎಂಥ್ರೋಪಲಾಜಿ,* ೧೯(೨), ೧೯೭೮, ಪಿಯರ್ ಆರ್ ಡೇಸನ್

ಮತ್ತು ಅಬ್ದೆಜಲೀಲ್ ಅಕ್ಕರಿ(ಸಂ), *ಎಜುಕೇಶನಲ್ ಥಿಯರೀಸ್ ಆಂಡ್ ಪ್ರಾಕ್ಟೀಸಸ್ ಫ್ರೊಮ್ ದಿ ಮೇಜಾರಿಟಿ ವರ್ಲ್ಡ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೨೦೦೮

೫. ಈ ಕುರಿತು ಹೆಚ್ಚಿನ ವಿವರಗಳಿಗೆ ಈ ಕೆಳಗಿನ ಪುಸ್ತಕ ಮತ್ತು ಲೇಖನ ನೋಡಬಹುದು ಅಜಿತ್ ಕೆ. ಮೊಂತಿ, ಮಿನಾತಿ ಪಾಂಡೆ, ರಾಬರ್ಟ್ ಫಿಲಿಪ್‌ಸನ್ ಇವರುಗಳು ಸಂಪಾದಿಸಿದ, *ಮಲ್ಟಿಲಿಂಗ್ವಲ್ ಎಜುಕೇಶನ್ ಫಾರ್ ಸೋಶಿಯಲ್ ಜಸ್ಟೀಸ್* (ನ್ಯೂಡೆಲ್ಲಿ : ಓರಿಯಂಟ್ ಬ್ಲೇಕ್ ಸ್ವೇನ್, ೨೦೦೯), ವಿ.ಸೆಬೆಸ್ಟಿಯನ್, 'ಗಾಂಧಿ ಆಂಡ್ ದಿ ಸ್ಟೆಂಡರ್ಡ್ ಡೈಸೇಶನ್ ಆಫ್ ಗುಜರಾಥಿ', *ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*, ವಾಲ್ಯೂಂ XLIV, ನಂ.೩೧, ಆಗಸ್ಟ್ ೨೦೦೯.

೬. ಕನಿಮೊಜಿ ಕರಣಾನಿಧಿ, 'ಬ್ರೀಡಿಂಗ್ ಕಟೆಂಪ್ಟ್-ಎ ಡೆಲಿಬರೇಟ್ ಚೋಯಿಸ್', ದಿ ಹಿಂದು, ಡಿಸೆಂಬರ್ ೧೦, ೨೦೦೮

೭. ಈ ಕುರಿತು ಕರ್ನಾಟಕದ ಕನ್ನಡ ಹಾಗೂ ಇಂಗ್ಲೀಷ್ ಪ್ರೆಸ್ ಮಾಧ್ಯಮಗಳಲ್ಲಿ ದೊಡ್ಡ ಚರ್ಚೆಯೇ ನಡೆದಿದೆ. ಡೆಕ್ಕನ್ ಹೆರಾಲ್ಡ್ ಪತ್ರಿಕೆಯವರು ಶಾಲೆಯಲ್ಲಿ ಬಿಸಿ ಊಟದೊಂದಿಗೆ ಮೊಟ್ಟೆ ಕೊಡುವುದರ ಕುರಿತು ಓದುಗರ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಅಭಿಪ್ರಾಯ ನೀಡಿದವರಲ್ಲಿ ಬಹುತೇಕರು ಅಡ್ಡಗೋಡೆಯಲ್ಲಿ ದೀಪವಿಟ್ಟಂತೆ ಮಾತಾಡಿದರೆ ಉಳಿದವರು ಪರ ವಿರೋಧ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ವಿವರಗಳಿಗೆ, ಡೆಕ್ಕನ್ ಹೆರಾಲ್ಡ್ ೧೦ನೇ ಜನವರಿ, ೨೦೦೭, ಡೆಕ್ಕನ್ ಹೆರಾಲ್ಡ್, ೧೪ನೇ ಜನವರಿ, ೨೦೦೭, ಡೆಕ್ಕನ್ ಹೆರಾಲ್ಡ್ ವೆಬ್ ಸೈಟ್ ಮುಂತಾದವುಗಳನ್ನು ನೋಡಬಹುದು.

೮. ತೊಂಬತ್ತರ ಮಾರುಕಟ್ಟೆ ನೀತಿ ಬರುವ ತನಕ ಒಂದು ಬಗೆಯ ಉನ್ನತ ಶಿಕ್ಷಣ ಜಾರಿಯಲ್ಲಿದ್ದರೆ ಮಾರುಕಟ್ಟೆ ನೀತಿ ಜಾತಿಗೆ ಬಂದ ನಂತರ ಉನ್ನತ ಶಿಕ್ಷಣ ನೀತಿ ಕೂಡ ಬದಲಾಗಿದೆ. ಇದರಿಂದಾಗಿ ಇಂದು ಹಲವು ಬಗೆಯ ವಿಶ್ವವಿದ್ಯಾಲಯಗಳು, ಸಂಶೋಧನ ಸಂಸ್ಥೆಗಳು ಭಾರತದಲ್ಲಿ ಕಾರ್ಯನಿರ್ವಹಿಸುತ್ತಿವೆ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ಪುಸ್ತಕದಲ್ಲಿ ನೋಡಬಹುದು ಸುಖದೇವ್ ಥೋರಟ್ (ಸಂ), *ಹೈಯರ್ ಎಜುಕೇಶನ್ ಇನ್ ಇಂಡಿಯಾ - ಇಶ್ಯೂಸ್ ರಿಲೇಟೆಡ್ ಟು ಎಕ್ಸ್‌ಪಾನ್‌ಶನ್, ಇನ್ ಕ್ಲುಸಿವ್‌ನೆಸ್, ಕ್ವಾಲಿಟಿ ಆಂಡ್ ಫಿನಾನ್ಸ್*, ನ್ಯೂಡೆಲ್ಲಿ: ಯುನಿವರ್ಸಿಟಿ ಗ್ರ್ಯಾಂಟ್ಸ್ ಕಮಿಶನ್, ೨೦೦೮.

೯. ಕಡಿಮೆ ಸಂಗತಿ ಬಗ್ಗೆ ಹೆಚ್ಚು ಹೆಚ್ಚು ತಿಳಿದುಕೊಳ್ಳುವುದೇ ಪರಿಣಿತಿ ಎಂದು ವ್ಯಾಖ್ಯಾನಿಸಲಾಗಿದೆ (ಸ್ಪೆಷಲೈಸೇಶನ್ ಈಸ್ ನೋಯಿಂಗ್ ಮೋರ್ ಆಂಡ್ ಮೋರ್ ಎಬೌಟ್ ಲೆಸ್ ಆಂಡ್ ಲೆಸ್). ಈ ವ್ಯಾಖ್ಯಾನ ಸಮಾಜ ವಿಜ್ಞಾನದಲ್ಲಿ ಕೆಲಸ ಮಾಡುತ್ತಿದೆ. ಇದರ ಜತೆಗೆ ಸಮಾಜ ವಿಜ್ಞಾನದ ಥಿಯರಿ, ವಿಧಾನ, ಭಾಷೆ ಇತ್ಯಾದಿಗಳು ಕೂಡ ಸಮಾಜ ವಿಜ್ಞಾನವನ್ನು ಸಮಾಜವನ್ನು ಬಿಡಿಬಿಡಿಯಾಗಿ ನೋಡುವುದಕ್ಕೆ ಹೆಚ್ಚಿನ ಆದ್ಯತೆ ಕೊಡುವಂತೆ ಮಾಡಿವೆ.

೧೦. ಸೋಮನ್ ಚಟ್ಟೋಪಾಧ್ಯಾಯ, 'ದಿ ಮಾರ್ಕೆಟ್ ಇನ್ ಹೈಯರ್ ಎಜುಕೇಶನ್ - ಕನ್‌ಸರ್‌ನ್ ಫಾರ್ ಇಕ್ವಿಟಿ ಆಂಡ್ ಕ್ವಾಲಿಟಿ', *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*, ವಾಲ್ಯೂಂ XLIV, ನಂ.೨೯, ಜುಲೈ ೨೦೦೯, ಪು.೫೩-೬೧

೧೧. ಎಂ.ಎಸ್.ಎಸ್.ಪಾಂಡ್ಯನ್, 'ಸೋಶಿಯಲ್ ಸಯನ್ಸ್ ಇನ್ ಸೌತ್ ಇಂಡಿಯಾ', *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*, ಆಗೋಸ್ಟ್ ೩೧, ೨೦೦೨.

೧೨. ಅರ್ಥಶಾಸ್ತ್ರಜ್ಞ ಮನ್ ಮೋಹನ್ ಸಿಂಗ್ ಪ್ರಧಾನಿಯಾದ ನಂತರವಾದರೂ ಸಮಾಜ ವಿಜ್ಞಾನಕ್ಕೆ ಸ್ವಲ್ಪ ಮರ್ಯಾದೆ ಬರಬಹುದೋ ಏನೋ ಎನ್ನುವ ದೂರದ ಆಶೆ ಇತ್ತು. ಅದಕ್ಕೆ ಸರಿಯಾಗಿ

ಅವರು ಕೂಡ ಮೂಲಭೂತ ಸಂಶೋಧನೆಗೆ ವಿದ್ಯಾರ್ಥಿಗಳೇ ಬರುತ್ತಿಲ್ಲವೆಂದು ಹಲವು ಬಾರಿ ಮಾಧ್ಯಮಗಳಲ್ಲಿ ತಮ್ಮ ಎಕಾಡೆಮಿಕ್ ಕಾಳಜಿ ತೋರಿಸಿದ್ದರು. ಫಂಡಮೆಂಟಲ್ ರಿಸರ್ಚ್‌ಗೆ ಜನ ಬರುತ್ತಿಲ್ಲ ಎಂದು ಕೊರಗಿದ್ದು ಅವರು ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದಂತೆ ಅಲ್ಲ ವಿಜ್ಞಾನಕ್ಕೆ ಸಂಬಂಧಿಸಿದಂತೆ ಎಂದು ನಂತರ ಗೊತ್ತಾಯಿತು.

೧೩. ಈ ಕುರಿತ ಪ್ರಾಥಮಿಕ ಪರಿಚಯಕ್ಕೆ ಚಂದ್ರಪೂಜಾರಿ, *ಸಂಶೋಧನ ಜವಾಬ್ದಾರಿ*, ವಿದ್ಯಾರಣ್ಯ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೮, ಚಂದ್ರಪೂಜಾರಿ, *ರಾಜಕೀಯದ ಬಡತನ*, ಹೊಸಪೇಟೆ : ಸಿದ್ಧಾರ್ಥ ಪ್ರಕಾಶನ, ೨೦೦೮ ಪುಸ್ತಕಗಳನ್ನು ನೋಡಬಹುದು.

೧೪. ದೀಪಾಂಕರ್ ಗುಪ್ತಾ, *ಮಿಸ್ಟೇಕನ್ ಮೊಡರ್ನಿಟಿ - ಇಂಡಿಯಾ ಬಿಟ್ವೀನ್ ವರ್ಲ್ಡ್ಸ್*, ನ್ಯೂಡೆಲ್ಲಿ: ಹಾರ್ಪರ್ ಕೊಲಿನ್ಸ್ , ೨೦೦೦

೧೫. ಕೋಮುವಾದ ಮತ್ತು ಅದರ ಪರಿಣಾಮದ ಬಗ್ಗೆ ಹೆಚ್ಚಿನ ವಿವರಗಳಿಗೆ ಈ ಕೆಳಗಿನ ಬರಹಗಳನ್ನು ನೋಡಬಹುದು ಅಶುತೋಶ್ ವಾರ್ಷಿನಿ, *ಎಥ್ನಿಕ್ ಕಾನ್‌ಫ್ಲಿಕ್ಟ್ ಅಂಡ್ ಸಿವಿಲ್ ಸೊಸೈಟಿ ಹಿಂದೂಸ್ ಅಂಡ್ ಮುಸ್ಲಿಮ್ ಇನ್ ಇಂಡಿಯಾ*, ಯೇಲ್ : ಯೇಲ್ ಯುನಿವರ್ಸಿಟಿ ಪ್ರೆಸ್, ೨೦೦೨, ಮುಜಾಫರ್ ಅಸಾದಿ, 'ಕರ್ನಾಟಕ - ಕಮ್ಯುನಲ್ ವಾಯಿಲೆನ್ಸ್ ಇನ್ ಕೋಸ್ಟಲ್ ಬೆಲ್ಟ್', *ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ*, ಸಂಚಿಕೆ ೩೪, ಸಂಖ್ಯೆ ೮, ಫೆಬ್ರವರಿ ೧೯೯೯. ಪು.೪೪೬-೪೪೮, ಎಂ. ಚಂದ್ರಪೂಜಾರಿ, 'ಫಾರ್ಮ್ಡ್/ಕನ್‌ಸ್ಟ್ರಕ್ಟೆಟ್ ಕಮ್ಯುನಿಟೀಸ್ ಅಂಡ್ ಕಮ್ಯುನಲಿಸಂ- ಎ ಸ್ಟಡಿ ಆಫ್ ಗ್ರೋಥ್ ಆಫ್ ಕಮ್ಯುನಲಿಸಂ ಇನ್ ಕೋಸ್ಟಲ್ ಕರ್ನಾಟಕ', ಇಂಡಿಯನ್ ಜರ್ನಲ್ ಆಫ್ ಸೆಕ್ಯುಲರಿಸಂ, ಸಂಚಿಕೆ ೪, ಸಂಖ್ಯೆ ೧, ಏಪ್ರಿಲ್ -ಜೂನ್ ೨೦೦೦, ಪು.೧-೨೭

೧೬. ಕಮರ್ಶಿಯಲ್ ಕ್ಯಾಪಿಟಲ್ ಹಾಗೂ ಇಂಡಸ್ಟ್ರಿಯಲ್ ಕ್ಯಾಪಿಟಲ್‌ನ ವ್ಯತ್ಯಾಸವನ್ನು ಕಾರ್ಲ್ ಮಾರ್ಕ್ಸ್ ವಿಸ್ತೃತವಾಗಿ ಚರ್ಚಿಸಿದ್ದಾರೆ. ಹೆಚ್ಚಿನ ವಿವರಗಳಿಗೆ ಕಾರ್ಲ್‌ಮಾರ್ಕ್ಸ್, *ಕ್ಯಾಪಿಟಲ್ - ಎ ಕ್ರಿಟೀಕ್ ಆಫ್ ಪೊಲಿಟಿಕಲ್ ಎಕನಾಮಿ* - ೩ ವಾಲ್ಯೂಮ್ಸ್, ಮಾಸ್ಕೋ : ಪ್ರೊಗ್ರೆಸ್ ಪಬ್ಲಿಷರ್ಸ್, ೧೯೮೪ ಪುಸ್ತಕ ನೋಡಬಹುದು. ನಂತರದ ದಿನಗಳಲ್ಲಿ ಈ ಕುರಿತು ದೊಡ್ಡ ಚರ್ಚೆಯೇ ನಡೆದಿದೆ. ಈ ಚರ್ಚೆ ಟ್ರಾಸಿಶನ್ ಡಿಬೇಟ್ ಎಂದು ಹೆಸರು ಮಾಡಿದೆ. ಈ ಚರ್ಚೆಯಲ್ಲಿ ಪಶ್ಚಿಮ ಯುರೋಪ್‌ನ ಪರಿವರ್ತನೆಯಲ್ಲಿ ಕಮರ್ಶಿಯಲ್ ಕ್ಯಾಪಿಟಲ್‌ನ ಪಾತ್ರ ಇದೆಯೇ ಎನ್ನುವ ವಿಷಯ ಮಹತ್ವದ ಪಾತ್ರ ಪಡೆದಿದೆ. ಇದೇ ವಾದವನ್ನು ಬಳಸಿಕೊಂಡು ಅವಲಂಬನಾ ಸಿದ್ಧಾಂತ (ಡಿಪೆಂಡೆನ್ಸ್ ಥಿಯರಿ) ಕೂಡ ಹುಟ್ಟಿಕೊಂಡಿದೆ. ಈ ಎಲ್ಲ ವಿವರಗಳನ್ನು ಈ ಕೆಳಗಿನ ಪುಸ್ತಕಗಳಲ್ಲಿ ನೊಡಬಹುದು. ೧. ರಾಡ್ನಿ ಹಿಲ್ಟನ್(ಸಂ), *ದಿ ಟ್ರಾಂಸಿಶನ್ ಫ್ರಮ್ ಫ್ಯೂಡಲಿಸಂ ಟು ಕ್ಯಾಪಿಟಲಿಸಂ*, ಲಂಡನ್: ಅಸ್ ವಿನ್ ಬ್ರದರ್ಸ್, ೧೯೭೮. ೨. ಮೌರಿಸ್ ಡಾಬ್, *ಸ್ಟಡೀಸ್ ಇನ್ ದಿ ಡೆವಲಪ್‌ಮೆಂಟ್ ಆಫ್ ಕ್ಯಾಪಿಟಲಿಸಂ*, ಲಂಡನ್ : ರೊಟ್‌ಲೆಡ್ಜ್ ಅಂಡ್ ಕೆಗನ್ ಪೌಲ್, ೧೯೬೩, ೩. ಎಲೆನ್‌ಮೆಸಿನ್ಸ್ ವುಡ್, ದಿ ಒರಿಜಿನ್ ಆಫ್ ಕ್ಯಾಪಿಟಲಿಸಂ, ನ್ಯೂಯಾರ್ಕ್ : ಮಂಥ್ಲಿ ರಿವೀವ್ ಪ್ರೆಸ್, ೧೯೯೯, ೪. ಲಿಯೋ ಹ್ಯೂಬರ್ ಮೇಸ್, *ಮೇನ್ಸ್ ವರ್ಲ್ಡ್‌ಲಿ ಗೂಡ್ಸ್*, ನ್ಯೂಡೆಲ್ಲಿ : ಪೀಪಲ್ಸ್ ಪಬ್ಲಿಶಿಂಗ್ ಹೌಸ್, ೧೯೮೫. ೫. ಆಂಡ್ರೆ ಗುಂಥರ್ ಫ್ರಾಂಕ್ ಅವರ *ಡಿಪೆಂಡೆಂಟ್ ಎಕ್ಯುಮ್ಯುಲೇಶನ್ ಅಂಡ್ ಅಂಡರ್ ಡೆವಲಪ್‌ಮೆಂಟ್*, ಲಂಡನ್ : ಮೆಕ್‌ಮಿಲನ್ ಪ್ರೆಸ್ ಲಿಮಿಟೆಡ್, ೧೯೮೨.

೧೭. ಈ ಬಗೆಯ ವಾದವನ್ನು ಸಾಕಷ್ಟು ಸಂಶೋಧಕರು ಮಾಡುತ್ತಾರೆ. ಅವರಲ್ಲಿ ಪ್ರಮುಖರಾದ ಇಬ್ಬರ ಬರಹಗಳನ್ನು ಇಲ್ಲಿ ಕೊಟ್ಟಿದ್ದೇನೆ. ರಜನಿ ಕೊಥಾರಿಯವರ, *ರಿಥಿಂಕಿಂಗ್ ಡೆವಲಪ್*

ಮೆಂಟ್- ಇನ್ ಸರ್ಚ್ ಆಫ್ ಹ್ಯೂಮನ್ ಆಲ್ಟರ್ ನೇಟಿವ್ಸ್, (ಡೆಲ್ಲಿ: ಅಜಂತಾ ಪಬ್ಲಿಕೇಶನ್ಸ್, ೧೯೮೮), ಎ ಸ್ಕೋಬಾರ್ ಅವರ *ಎನ್‌ಕೌಂಟರಿಂಗ್ ಡೆವಲಪ್‌ಮೆಂಟ್ ದಿ ಮೇಕಿಂಗ್ ಅಂಡ್ ಅನ್ ಮೇಕಿಂಗ್ ಆಫ್ ದಿ ಥರ್ಡ್ ವರ್ಲ್ಡ್*, (ಪ್ರಿನ್ಸ್‌ಟನ್: ಪ್ರಿನ್ಸ್ ಟನ್ ಯುನಿವರ್ಸಿಟಿ, ೧೯೯೫) ಪುಸ್ತಕಗಳಲ್ಲಿ ಈ ವಾದವನ್ನು ನೋಡಬಹುದು.

೧೮. ಮಧ್ಯಮವರ್ಗ ರೂಪಿತವಾದ ಬಗೆ ಮತ್ತು ಅದರ ರಾಜಕೀಯದ ಸಂಕ್ಷಿಪ್ತ ಪರಿಚಯಕ್ಕೆ ಈ ಕೆಳಗಿನ ಲೇಖನ ಮತ್ತು ಪುಸ್ತಕವನ್ನು ನೋಡಬಹುದು. ಜೋನ್ ಹೇರಿಸ್, 'ಎಂಟಿನೋಮಿಸ್ ಆಫ್ ಎಂಪವರ್‌ಮೆಂಟ್-ಒಬ್ಸರ್ ವೇಶನ್ಸ್ ಆನ್ ಸಿವಿಲ್ ಸೊಸೈಟಿ ಆಂಡ್ ಅರ್ಬನ್ ಗವರ್ನೆನ್ಸ್ ಇನ್ ಇಂಡಿಯಾ', *ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*, ವಾಲ್ಯೂಮ್ XL ನಂ.೨೬, ಜೂನ್ ೨೦೦೭, ಪು.೨೭೧೬-೨೪, ಪವನ್ ಕೆ. ಕುಮಾರ್, *ದಿ ಗ್ರೇಟ್ ಇಂಡಿಯನ್ ಮಿಡ್ಲ್ ಕ್ಲಾಸ್*, ನ್ಯೂಡೆಲ್ಲಿ : ಪೆಂಗ್ವಿನ್ ಬುಕ್ಸ್, ೧೯೯೯.

೨

ಸಂಶೋಧನೆ ಅಂದರೇನು?

ಸಂಶೋಧನೆ ಅಂದರೇನೆಂದು ಸಂಶೋಧಕರನ್ನು ಕೇಳಿದರೆ ಅಥವಾ ಸಂಶೋಧನೆಯ ಮೇಲಿನ ಪುಸ್ತಕಗಳನ್ನು ನೋಡಿದರೆ ಹಲವು ಉತ್ತರಗಳು ಸಿಗುತ್ತವೆ. ಸಂಶೋಧನೆ ಅಂದರೆ ಸತ್ಯದ ಅನ್ವೇಷಣೆ. ಸಂಶೋಧನೆಯೆಂದರೆ ಹೊಸ ವಿಚಾರಗಳ ಹುಡುಕಾಟ. ಯಾವುದೋ ಒಂದು ವಿಷಯದ ಕುರಿತು ಈಗಾಗಲೇ ಹೇಳಿರುವುದಕ್ಕಿಂತ ಹೆಚ್ಚಿನದನ್ನು ಹೇಳುವುದು. ಹೊಸ ಸಂಗತಿಗಳ ಆವಿಷ್ಕಾರ. ಹೊಸ ದಿಕ್ಕಿನಿಂದ ಪ್ರವೇಶ ಮಾಡಿ-ಅದರಿಂದ ದೊರಕಿದ ಜ್ಞಾನವನ್ನು ಅನಾವರಣ ಮಾಡುವುದು. ಈಗಾಗಲೇ ಆಗಿರುವ ಅಧ್ಯಯನಗಳನ್ನು ವಿಮರ್ಶೆ ಮಾಡಿ ಕೊರತೆಗಳನ್ನು ತುಂಬಿಸಲು ಪ್ರಯತ್ನಿಸುವುದು. ಯಾವುದೋ ವಿಷಯದ ಮೇಲಿನ ಜ್ಞಾನದ ವ್ಯಾಪ್ತಿಯನ್ನು ವಿಸ್ತರಿಸಲು ಪ್ರಯತ್ನಿಸುವುದು. ಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಅಧ್ಯಯನ ಮಾಡಿ ಅವುಗಳ ಪರಿಹಾರಕ್ಕೆ ಪೂರಕವಾಗುವ ನೀತಿ ನಿರೂಪಣೆಗಳನ್ನು ರೂಪಿಸಲು ಪೂರಕವಾಗುವ ಜ್ಞಾನ ಸೃಷ್ಟಿಸುವುದು. ಈಗಾಗಲೇ ಸ್ಥಾಪಿತವಾದ ವಾದಗಳ ಸತ್ಯಾಸತ್ಯತೆಗಳನ್ನು ಹೊರತರುವುದು, ಮಸುಕಾಗಿರುವ ಸಂಗತಿಗಳನ್ನು ಸ್ಪಷ್ಟಗೊಳಿಸುವುದು ಹೀಗೆ ಸಂಶೋಧನೆಯ ಹಲವಾರು ವ್ಯಾಖ್ಯಾನಗಳಿವೆ.[೧] ಈ ಎಲ್ಲ ವ್ಯಾಖ್ಯಾನಗಳು ಖಂಡಿತವಾಗಿಯೂ ಸಂಶೋಧನೆಯ ಕೆಲವು ಆಯಾಮಗಳನ್ನು ಪರಿಚಯಿಸುತ್ತವೆ. ಆದರೆ ಇವುಗಳು ಸಂಶೋಧನೆಯ ಎಲ್ಲ ಆಯಾಮಗಳನ್ನು ಪರಿಚಯಿಸುವುದಿಲ್ಲ. ಯಾವುದೇ ಪ್ರಕ್ರಿಯೆಯ ಪರಿಪೂರ್ಣ ವ್ಯಾಖ್ಯಾನ ಅಥವಾ ಎಲ್ಲ ಆಯಾಮಗಳನ್ನು ಪರಿಚಯಿಸುವ ವ್ಯಾಖ್ಯಾನ ಆ ಪ್ರಕ್ರಿಯೆ ಏನೆಂದು ಹೇಳುವುದರೊಂದಿಗೆ ಯಾಕೆ? ಮತ್ತು ಹೇಗೆ? ಎನ್ನುವ ಪ್ರಶ್ನೆಗಳಿಗೂ ಉತ್ತರಿಸಬೇಕಾಗಿದೆ. ಆದರೆ ಮೇಲಿನ ವ್ಯಾಖ್ಯಾನಗಳು ಸಂಶೋಧನೆ ಏನೆಂದು ಹೇಳುತ್ತವೆ ಹೊರತು ಅವುಗಳನ್ನು ಅಥವಾ ಹುಡುಕಾಟಗಳನ್ನು ಯಾಕೆ ಮಾಡುತ್ತೇವೆ? ಮತ್ತು ಹೇಗೆ ಮಾಡುತ್ತೇವೆ? ಎನ್ನುವ ಪ್ರಶ್ನೆಗೆ ಅಲ್ಲಿ ಉತ್ತರವಿಲ್ಲ.

ಮೇಲಿನ ಹುಡುಕಾಟ, ಶೋಧ, ನಿರ್ವಚನೆ, ವಿಸ್ತರಣೆ ಮುಂತಾದವುಗಳನ್ನು ಸತ್ಯ ಪ್ರತಿಪಾದನೆಗೆ ಅಥವಾ ವಾದ ಪ್ರತಿಪಾದನೆಗಾಗಿ ಮಾಡುತ್ತೇವೆ. ಈ ಸತ್ಯ ಪ್ರತಿಪಾದನೆಯ ಕೆಲಸ ಈಗಾಗಲೇ ಸ್ಥಾಪಿತವಾದ ಸತ್ಯಗಳೊಂದಿಗೆ ಗುದ್ದಾಟ ನಡೆಸಿ ಅಥವಾ ವಾಗ್ವಾದ ನಡೆಸಿ ನಡೆಯುತ್ತದೆ. ಈಗಾಗಲೇ ಸ್ಥಾಪಿತ ವಾದಗಳೊಂದಿಗೆ ಸಂವಾದ ನಡೆಸುವುದು ಇಲ್ಲಿ ಬಹುಮುಖ್ಯ. ಈಗಾಗಲೇ ಸ್ಥಾಪಿತವಾದ ಎಲ್ಲ ಬಗೆಯ ವಾದಗಳೊಂದಿಗೆ ಸಂವಾದ ನಡೆಸಿ ಸತ್ಯ ಪ್ರತಿಪಾದನೆ ನಡೆದರೆ ಪ್ರತಿಪಾದಿತ ಸತ್ಯ ಹೆಚ್ಚು ವಸ್ತುನಿಷ್ಠ ಎನ್ನಬಹುದು. ಆದುದರಿಂದ ಇಲ್ಲಿ ವಸ್ತುನಿಷ್ಠತೆಯ ಪರೀಕ್ಷೆ ಪೊಸಿಟಿವಿಸ್ಟ್‌ಗಳು ಮುಂದೂಡುವ ಊಹೆಗಳ ಪರೀಕ್ಷೆಯಲ್ಲಿ (ಹೈಪೋಥೀಸಿಸ್ ಟೆಸ್ಟಿಂಗ್) ಅಡಗಿಲ್ಲ. ಲೋಕಲ್ ಮತ್ತು ಗ್ಲೋಬಲ್ ಸ್ಥಾಪಿತ ಸತ್ಯಗಳೊಂದಿಗೆ ಸಂವಾದ ನಡೆಸಿ ಸತ್ಯ/ವಾದ ಪ್ರತಿಪಾದನೆ ನಡೆಸುವುದು ಇಲ್ಲಿ ವಸ್ತುನಿಷ್ಠತೆಯ ಬಹುದೊಡ್ಡ ಪರೀಕ್ಷೆ. ವಾದ ಮಂಡನೆಯ ದೃಷ್ಟಿಯಿಂದ ಸಂಶೋಧನೆಯನ್ನು ವ್ಯಾಖ್ಯಾನಿಸುವುದಾದರೆ ಈಗಾಗಲೇ ಸ್ಥಾಪಿತವಾದ ಸತ್ಯ ಅಥವಾ ವಾದಗಳೊಂದಿಗೆ ವಾಗ್ವಾದ ನಡೆಸಿ ಒಂದು ಒಪ್ಪಿತ ಚೌಕಟ್ಟಿನೊಳಗೆ ತಮ್ಮ ಸತ್ಯವನ್ನು ಅಥವಾ ವಾದವನ್ನು ಸ್ಥಾಪಿಸಲು ಪ್ರಯತ್ನಿಸುವುದು ಹಾಗು ಸ್ಥಾಪಿಸುವ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವುದು ಸಂಶೋಧನೆಯಾಗುತ್ತದೆ.[೨] ಈ ದೃಷ್ಟಿಯಿಂದ ಸಂಶೋಧನೆಯನ್ನು ನೋಡಿದರೆ ಸಂಶೋಧನೆಯೆಂದರೆ ಸತ್ಯ ಶೋಧವೂ ಅಲ್ಲ ಮತ್ತು ಸತ್ಯಕ್ಕೊಂದು ಸಾರ್ವಕಾಲಿಕ ಮತ್ತು ಸರ್ವಪ್ರಾದೇಶಿಕ ರೂಪವೂ ಇಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಸಂಶೋಧನೆ ಸತ್ಯ ಶೋಧನೆಯ ಪ್ರಕ್ರಿಯೆಯಲ್ಲ; ಸತ್ಯ ಪ್ರತಿಪಾದನೆಯ ಪ್ರಕ್ರಿಯೆ ಮತ್ತು ಇದೊಂದು ಒಪ್ಪಿತ ಚೌಕಟ್ಟಿನೊಳಗೆ ನಡೆಯುವ ಪ್ರಕ್ರಿಯೆ. ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳೊಂದಿಗೆ ಸಂವಾದ ನಡೆಸುವುದು, ಸತ್ಯ/ವಾದ ಪ್ರತಿಪಾದನೆಯ ಪ್ರಕ್ರಿಯೆಗಳು ಹಾಗು ಸಮುದಾಯಗಳ ಒಪ್ಪಿಗೆ ಅಥವಾ ಒಪ್ಪಿತ ತೀರ್ಮಾನ ಇಲ್ಲಿ ಪ್ರಮುಖ. ಸಂರಚನಾವಾದಿಗಳು ಹೇಗೆ ಪದಕ್ಕೆ ಅರ್ಥ ಇಲ್ಲ; ಅರ್ಥವನ್ನು ದಿನನಿತ್ಯದ ಬದುಕಲ್ಲಿ ಸಮುದಾಯ ತುಂಬುತ್ತದೆ ಎನ್ನುತ್ತಾರೋ ಅದೇ ರೀತಿಯಲ್ಲಿ ಸತ್ಯ ತೀರ್ಮಾನ ಕೂಡ.[೩] ನಾಯಿ ಎನ್ನುವ ಪದ ನಾಯಿ ಎನ್ನುವ ನಾಲ್ಕು ಕಾಲಿನ ಪ್ರಾಣಿಯನ್ನೂ ಸೂಚಿಸುತ್ತದೆ ಎನ್ನುವುದು ಕನ್ನಡ ಭಾಷೆ ಸಮುದಾಯದೊಳಗೆ ಬರುವವರಿಗೆ ಮಾತ್ರ ಅರ್ಥವಾಗುತ್ತದೆ. ಈ ಸಮುದಾಯದಿಂದ ಹೊರಗಿನವರಿಗೆ ನಾಯಿ ಎನ್ನುವ ಪದ ಏನನ್ನು ಸೂಚಿಸುತ್ತದೆ ಎನ್ನುವುದು ಅರ್ಥವಾಗುವುದಿಲ್ಲ. ಕನ್ನಡ ಭಾಷಾ ಸಮುದಾಯದೊಳಗೆ ಬರುವವರು ನಾಯಿ ಪದವನ್ನು ನಾಲ್ಕು ಕಾಲಿನ ಪ್ರಾಣಿಯೊಂದನ್ನು ಗುರುತಿಸಲು ಸತತ ಉಪಯೋಗಿಸಿರುವುದರಿಂದ ಆ ಪದ ಒಂದು ನಿಶ್ಚಿತ ಅರ್ಥವನ್ನು ಪಡೆಯುತ್ತದೆ. ಇದೊಂದು ರೀತಿಯಲ್ಲಿ ಟ್ರಾಫಿಕ್ ಸಿಗ್ನಲ್ ಇದ್ದ ಹಾಗೆ. ಕೆಂಪು ಲೈಟ್ ಬಂದಾಗ ನಿಲ್ಲಬೇಕು. ಹಳದಿ ಬಂದಾಗ ರೆಡಿಯಾಗಬೇಕು ಮತ್ತು ಹಸಿರು ಬಂದಾಗ ಹೋಗಬೇಕೆನ್ನುವ ಅರ್ಥ ಗಾಡಿ ಓಡಿಸುವ ಜನರಿಗೆ ಮತ್ತು ನಗರದ ಪ್ರದೇಶದ ಜನರಿಗೆ ಮಾತ್ರ ಆಗಲು ಸಾಧ್ಯ.

ಈ ಟ್ರಾಫಿಕ್ ಸಿಗ್ನಲನ್ನು ಅಥವಾ ಇನ್ನ್ಯಾವುದೋ ವಿವಿಧ ಬಣ್ಣಗಳಿಗೆ ವಿವಿಧ ಅರ್ಥವನ್ನು ಕೊಡುವ ಕ್ರಮವನ್ನು ಯಾವುದೋ ಒಂದು ಸಂಸ್ಕೃತಿಯ ಜನರೆಲ್ಲ ಸೇರಿ ಚರ್ಚಿಸಿ ತೀರ್ಮಾನ ಮಾಡಿರುವುದಿಲ್ಲ. ಯಾರೋ ಕೆಲವರು ಈ ಕುರಿತು ತೀರ್ಮಾನಿಸುತ್ತಾರೆ. ಅಧಿಕಾರದಲ್ಲಿದ್ದವರಿಗೆ ಬಣ್ಣ ಮತ್ತು ಅದರ ಬಳಕೆ ಬಗ್ಗೆ ಮನವರಿಕೆ ಮಾಡುತ್ತಾರೆ ಅಥವಾ ಅಧಿಕಾರದಲ್ಲಿದವರೇ ಟ್ರಾಫಿಕ್ ಸಿಗ್ನಲ್ ಬಗ್ಗೆ ತಿಳಿದುಕೊಂಡಿರುವವರನ್ನು/ತಜ್ಞರನ್ನು ಸೇರಿಸಿ ಹೊಸಬಗೆಯ ಟ್ರಾಫಿಕ್ ಸಿಗ್ನಲ್ ರೂಪಿಸಲು ಸೂಚಿಸಬಹುದು. ಅಧಿಕಾರದಲ್ಲಿದವರಿಗೆ ಒಪ್ಪಿಗೆಯಾದರೆ ಬಣ್ಣ ಮತ್ತು ಅರ್ಥ ಜಾರಿಗೆ ಬರುತ್ತದೆ. ಅಧಿಕಾರ ಜಾರಿಗೆ ತರುವ ಬಣ್ಣ ಮತ್ತು ಅರ್ಥದ ಜೋಡನೆಯನ್ನು ಜನರು ಅನುಸರಿಸಬೇಕಾಗುತ್ತದೆ. ಆರಂಭದಲ್ಲಿ ಒತ್ತಾಯದ ಬಳಕೆ ನಂತರ ಅಭ್ಯಾಸ ಬಲದಿಂದ ಬಳಕೆ, ಕಾಲಕ್ರಮೇಣ ಇದು ಜನರ ಪ್ರಜ್ಞೆಯ ಭಾಗವಾಗುತ್ತದೆ. ಈ ಪ್ರಕ್ರಿಯೆಯನ್ನು ಯಾವುದೋ ಒಂದು ಭಾಷೆಯ ಲಿಪಿ ಅಧಿಕೃತಗೊಳ್ಳುವ ವಿಧಾನದ ಉದಾಹರಣೆಯಿಂದ ಇನ್ನು ಹೆಚ್ಚು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಹುದು.[೬] ತುಳು ಭಾಷೆಯನ್ನು ಹಲವಾರು ಲಕ್ಷ ಜನರು ಸಾವಿರಾರು ವರ್ಷಗಳಿಂದ ಮಾತಾಡುತ್ತಿದ್ದಾರೆ. ಆದರೆ ಆ ಭಾಷೆಗೆ ಲಿಪಿಯಿಲ್ಲ. ಜನರು ದಿನನಿತ್ಯದ ವ್ಯವಹಾರಗಳಲ್ಲಿ ಭಾಷೆಯನ್ನು ಬಳಸುವುದರಿಂದ ಆ ಭಾಷೆ ಇಂದು ಕೂಡ ಜೀವಂತ ಇದೆ. ಇದೇ ಸಂದರ್ಭದಲ್ಲಿ ತುಳು ಭಾಷೆಗೊಂದು ಲಿಪಿ ಹುಡುಕುವ ಪ್ರಯತ್ನ ಕೂಡ ನಡೆದಿದೆ. ಕೆಲವು ಲಿಪಿಗಳು ಸುದ್ದಿಯಲ್ಲಿವೆ. ಇನ್ನೂ ಕೂಡ ತುಳು ಲಿಪಿ ಅಂತಿಮಗೊಂಡಿಲ್ಲ. ಮುಂದೆ ಒಂದು ದಿನ ಯಾವುದೋ ಒಂದು ಲಿಪಿ ತುಳು ಲಿಪಿಯೆಂದು ಅಂಗೀಕಾರಗೊಳ್ಳಬಹುದು. ತುಳು ಮಾತಾಡುವ ಜನರೆಲ್ಲ ಲಿಪಿಯೊಂದನ್ನು ಬಳಸಿ ನಿರ್ದಿಷ್ಟ ಲಿಪಿಯನ್ನು ತುಳು ಲಿಪಿಯೆಂದು ಆಯ್ಕೆ ಮಾಡುವುದಿಲ್ಲ. ಭಾಷಾ ಪಂಡಿತರೆಂದು ಗುರುತಿಸಲ್ಪಟ್ಟ ಜನರನ್ನು ಸೇರಿಸಿ ಸಮಿತಿಯೊಂದನ್ನು ಅಧಿಕಾರದಲ್ಲಿರುವವರು ರಚಿಸಬಹುದು. ಈ ಸಮಿತಿ ತುಳು ಲಿಪಿಯೆಂದು ಮುಂಚೂಣಿಗೆ ಬಂದ ಲಿಪಿಗಳನ್ನು ಪರಿಶೀಲಿಸಿ ನಿರ್ದಿಷ್ಟ ಲಿಪಿಯೊಂದನ್ನು ತುಳು ಲಿಪಿಯಾಗಿ ಬಳಸಬಹುದೆಂದು ಶಿಫಾರಸ್ಸು ಮಾಡಬಹುದು. ಈ ಬಗೆಯಲ್ಲಿ ಅಧಿಕೃತಗೊಂಡ ಲಿಪಿಯನ್ನು ಜನರ ಪ್ರಜ್ಞೆಯ ಭಾಗವನ್ನಾಗಿಸಲಾಗುತ್ತದೆ. ಈ ಎಲ್ಲ ಉದಾಹರಣೆಗಳಲ್ಲಿ ಕಂಡು ಬರುವ ಮುಖ್ಯ ಅಂಶಗಳು ಇಂತಿವೆ. ಒಂದು, ಕೆಲವೊಂದು ಪ್ರಕ್ರಿಯೆಗಳನ್ನು ಗುರುತಿಸಲಾಗುವುದು, ಎರಡು, ಆ ಪ್ರಕ್ರಿಯೆಗಳಿಗೆ ನಿರ್ದಿಷ್ಟ ಅರ್ಥವನ್ನು ಕೊಡಲಾಗುವುದು ಮತ್ತು ಮೂರು, ಆ ಅರ್ಥಗಳನ್ನು ಬಹುತೇಕರ ಪ್ರಜ್ಞೆಯ ಭಾಗವನ್ನಾಗಿಸಲಾಗುವುದು ಅಥವಾ ಅರ್ಥಗಳಿಗೆ ಬಹುತೇಕರ ಒಪ್ಪಿಗೆಯನ್ನು ಪಡೆಯಲಾಗುವುದು. ಹೀಗೆ ಸಂಶೋಧನೆ ಕೂಡ. ಒಂದು ಒಪ್ಪಿತ ಚೌಕಟ್ಟಿನೊಳಗೆ ನಡೆಯುವ ಪ್ರಕ್ರಿಯೆ. ಕೆಲವೊಂದು ಪ್ರಕ್ರಿಯೆಗಳು, ಅವುಗಳಿಗೆ ಸಂಶೋಧನ ಪ್ರಕ್ರಿಯೆಗಳ ಅರ್ಥ, ಅವುಗಳ ಮೇಲೆ ಬಹುತೇಕರ ನಂಬಿಕೆ ಇತ್ಯಾದಿಗಳ ಇರುವಿಕೆ ಸಂಶೋಧನೆಯ ವ್ಯಾಖ್ಯಾನವನ್ನು ನಿರ್ಧರಿಸುತ್ತವೆ.

ಸತ್ಯದ ಪ್ರತಿಪಾದನೆಯ ಕೆಲಸವನ್ನು ಹೇಗೆ ಮಾಡುತ್ತೇವೆ? ಎನ್ನುವುದು ಎರಡನೇ ಪ್ರಶ್ನೆ, ಇದೊಂದು ಬಗೆಯಲ್ಲಿ ಕೋರ್ಟಲ್ಲಿ ವಾದ ಮಂಡಿಸಿದಂತೆ. ನ್ಯಾಯಾಧೀಶರ ಮುಂದೆ ವಕೀಲರು ಯಾವುದೋ ಒಂದು ಘಟನೆ ಯಾರಿಂದ? ಯಾವಾಗ? ಯಾಕೆ? ನಡೆದಿದೆ ಎನ್ನುವ ವಾದ ಮಂಡಿಸುತ್ತಾರೆ. ಪ್ರತಿವಾದಿ ವಕೀಲರು ವಾದಿ ವಕೀಲರ ವಾದಗಳನ್ನು ಅಲ್ಲಗೆಳೆದು ತಮ್ಮ ವಾದವನ್ನು ಪುರಾವೆ ಸಮೇತ ಮಂಡಿಸುತ್ತಾರೆ. ಎರಡು ಕಡೆಯ ವಾದಪ್ರತಿವಾದಗಳನ್ನು ನ್ಯಾಯಾಧೀಶರು ಆಲಿಸಿ ನ್ಯಾಯ ತೀರ್ಮಾನ ಮಾಡುತ್ತಾರೆ. ಯಾವುದೋ ಒಂದು ಘಟನೆ ನಡೆದಿದೆ ಮತ್ತು ಆ ಘಟನೆಯನ್ನು ಮಾಡಿದ್ದು (ಕಾರಣಕರ್ತ) ಈತನೇ ಎಂದು ವ್ಯಕ್ತಿಯೊಬ್ಬರ ಮೇಲೆ ಆರೋಪ ಹೊರಿಸಲಾಗಿದೆ. ಈ ವ್ಯಕ್ತಿಯ ಪರ ವಕೀಲರು ತಮ್ಮ ಕಕ್ಷಿದಾರರು ಘಟನೆಗೆ ಕಾರಣಕರ್ತರಲ್ಲ ಎಂದು ವಾದಿಸುತ್ತಾರೆ ಮತ್ತು ಆರೋಪ ಹೊರಿಸಿದವರ ವಕೀಲರು ಆರೋಪಿ ಘಟನೆಗೆ ಕಾರಣಕರ್ತರೆಂದು ವಾದಿಸುತ್ತಾರೆ. ಘಟನೆಗೆ ಕಾರಣಕರ್ತರಲ್ಲವೆಂದು ವಾದಿಸುವ ವಕೀಲರು ತಮ್ಮ ಕಕ್ಷಿದಾರರು ಘಟನೆ ಮಾಡಿಲ್ಲ ಎನ್ನುವುದನ್ನು ಸಾಬೀತು ಪಡಿಸಲು ಸಾಕ್ಷಿ ಪುರಾವೆಗಳ ಸಮೇತ ಪ್ರಯತ್ನಿಸುತ್ತಾರೆ. ಪುರಾವೆಗಳು ಬರಹ ರೂಪದಲ್ಲಿ ಇರಬಹುದು, ವಸ್ತು ರೂಪದಲ್ಲಿರಬಹುದು, ಛಾಯಚಿತ್ರ ರೂಪದಲ್ಲಿರಬಹುದು, ಚಲನಚಿತ್ರ ರೂಪದಲ್ಲಿರಬಹುದು. ಅದೇ ರೀತಿಯಲ್ಲಿ ಆರೋಪಿ ಘಟನೆಗೆ ಕಾರಣಕರ್ತರಲ್ಲ ಎಂದು ಹಲವಾರು ಸಾಕ್ಷಿಗಳ ಮೂಲಕ ಹೇಳಿಸಬಹುದು. ಆ ಕೊಲೆ ಸಂದರ್ಭದಲ್ಲಿ ಆರೋಪಿ ಘಟನೆ ನಡೆದ ಸ್ಥಳದಲ್ಲೇ ಇರಲಿಲ್ಲ ಅಥವಾ ಘಟನೆ ನಡೆಸಲು ಆರೋಪಿಗೆ ಯಾವುದೇ ಉದ್ದೇಶವೇ ಇಲ್ಲ ಅಥವಾ ಘಟನೆ ನಡೆಸಲು ಬಳಸಿರುವ ಆಯುಧವನ್ನು ಆರೋಪಿ ಬಳಸಿಯೇ ಇಲ್ಲ ಎಂದು ವಾದಿಸಬಹುದು. ಈ ರೀತಿಯಲ್ಲಿ ಆರೋಪಿ ಪರ ವಕೀಲರು ತಮ್ಮ ಕಕ್ಷಿದಾರರ ಮೇಲಿನ ಆರೋಪವನ್ನು ಅಲ್ಪಗೆಳೆಯಲು ಪುರಾವೆ, ಸಾಕ್ಷಿಗಳ ಸಹಾಯದಿಂದ ವಾದ ಮಂಡಿಸುತ್ತಾರೆ. ಆರೋಪಿಪರ ವಕೀಲರು ಮಂಡಿಸಿದ ವಾದಗಳನ್ನು ವಿಮರ್ಶಿಸಿ ಆಧಾರ ಸಮೇತ ಅಲ್ಲಗೆಳೆಯಲು ಆರೋಪವನ್ನು ಹೊರಿಸಿದ ಕಡೆಯವರ ವಕೀಲರು ಪ್ರಯತ್ನಿಸುತ್ತಾರೆ ಮತ್ತು ಆರೋಪಿ ಘಟನೆ ನಡೆಸಿದ್ದಾರೆಂದು ಸಾಧಿಸಲು ತಮ್ಮದೆ ಪುರಾವೆ ಹಾಗು ಸಾಕ್ಷಿಗಳನ್ನು ನ್ಯಾಯಾಧೀಶರ ಮುಂದೆ ಮಂಡಿಸುತ್ತಾರೆ. ಚಲನಚಿತ್ರಗಳಲ್ಲಿ ಅಥವಾ ಟಿವಿ ಸೀರಿಯಲ್‌ಗಳಲ್ಲಿ ನಡೆಯುವ ನ್ಯಾಯಾಲಯದ ದೃಶ್ಯಗಳಲ್ಲಿ ನ್ಯಾಯ ತೀರ್ಮಾನ ಪ್ರಕ್ರಿಯೆಯ ಜ್ಞಾನ ಇಲ್ಲದವರಿಗೆ ಆರೋಪಿಯ ಪರ ವಕೀಲರ ವಾದ ಮಂಡಿಸುವಾಗ ಆರೋಪಿ ನಿರಪರಾಧಿ ಎನ್ನುವ ಚಿತ್ರಣ ದೊರಕಿದಂತೆ ಆರೋಪಿ ಅಪರಾಧಿ ಎಂದು ವಾದಿಸುವ ವಕೀಲರು ತಮ್ಮ ವಾದ ಮಂಡಿಸುವಾಗ ಅದು ಕೂಡ ಸರಿ ಎಂದು ತೋರುತ್ತದೆ. ಆದರೆ ನಿಜ ಜೀವನದಲ್ಲಿ ನ್ಯಾಯಾಲಯದ ಕಲಾಪಗಳು ಜನಸಾಮಾನ್ಯರಿಗೆ ಏನೇನೂ ಅರ್ಥವಾಗುವುದಿಲ್ಲ. ಆರೋಪಿ ಮತ್ತು ಆರೋಪ ಹೊರಿಸಿ ದವರಿಗೆ ಅವರವರ ವಕೀಲರುಗಳು ಮಾಡುವ ವಾದದ ತಲೆಬುಡ ಅರ್ಥವಾಗುವುದಿಲ್ಲ. ಶಾಸ್ತ್ರಸಮ್ಮತವಾಗಿ ಮತ್ತು ಒಪ್ಪಿತ ವಿಧಿವಿಧಾನಗಳನ್ನು ಅನುಸರಿಸಿ

ನಡೆಯುವ ವಾಗ್ವಾದಗಳು ಜನಸಾಮಾನ್ಯರ ಗ್ರಹಿಸುವ ಶಕ್ತಿಯನ್ನು ಮೀರಿ ಇರುತ್ತವೆ. ನ್ಯಾಯ ಶಾಸ್ತ್ರದ ಪರಿಣತರಾದ ನ್ಯಾಯಾಧೀಶರು ಎರಡು ಕಡೆಯ ವಕೀಲರ ವಾದ ಪ್ರತಿವಾದಗಳನ್ನು ಆಲಿಸಿದ ನಂತರ ಆರೋಪಿಯ ಮೇಲಿನ ಆರೋಪ ಸಾಬೀತಾಗಿದೆಯೆಂದು ಶಿಕ್ಷೆ ವಿಧಿಸಬಹುದ ಅಥವಾ ಆರೋಪ ಸಾಬೀತಾಗಿಲ್ಲವೆಂದು ವ್ಯಕ್ತಿಯನ್ನು ಆರೋಪ ಮುಕ್ತ ಗೊಳಿಸಬಹುದು.

ನ್ಯಾಯಾಧೀಶರ ತೀರ್ಮಾನ ಅಂತಿಮ. ಒಂದು ವೇಳೆ ನ್ಯಾಯಾಧೀಶರ ತೀರ್ಮಾನ ಸರಿಯಲ್ಲವೆಂದು ಕಂಡುಬಂದರೆ ಸಂಬಂಧಪಟ್ಟವರು ಮೇಲಿನ ಕೋರ್ಟ್‌ಗೆ (ಹೈಕೋರ್ಟ್ ಅಥವಾ ಸುಪ್ರೀಂಕೋರ್ಟ್‌ಗೆ) ಪುನರ್ ಪರಿಶೀಲನ ಮನವಿ ಸಲ್ಲಿಸಬಹುದು. ಹೀಗೆ ಕಟ್ಟಕಡೆಯ ಕೋರ್ಟ್ ತನಕ ಹೋದ ನಂತರ ಸಿಗುವ ತೀರ್ಮಾನ ಅಂತಿಮ ಸತ್ಯ. ಆ ತೀರ್ಮಾನವು ಕೆಲವು ಬಾರಿ ಕೆಲವರಿಗೆ ಸತ್ಯ ಅಥವಾ ನ್ಯಾಯ ಅಲ್ಲವೆಂಧು ಕಂಡುಬರ ಬಹುದು. ನ್ಯಾಯ ಅಲ್ಲವೆಂದು ಖಾಸಗಿಯಾಗಿ ಅವರು ದುಃಖ ಪಡಬಹುದು. ಆದರೆ ಸಾರ್ವಜನಿಕವಾಗಿ ಅಂತಿಮ ನ್ಯಾಯವನ್ನು ಅಥವಾ ಸತ್ಯವನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಅಂತಿಮ ತೀರ್ಮಾನವನ್ನು ಸಾರ್ವಜನಿಕವಾಗಿ ಖಂಡಿಸುವುದು ಅಥವಾ ಒಪ್ಪುವುದಿಲ್ಲ ಎನ್ನುವುದು ನ್ಯಾಯಾಲಯದ ಖಂಡನೆಯಾಗುತ್ತದೆ. ಇದು ಶಿಕ್ಷಾರ್ಹ. ಹೀಗೆ ನ್ಯಾಯ ತೀರ್ಮಾನದ ಒಂದು ಒಪ್ಪಿತ ಚೌಕಟ್ಟಿನೊಳಗೆ ನ್ಯಾಯ/ಸತ್ಯ ತೀರ್ಮಾನವಾಗುತ್ತದೆ. ಈ ಒಪ್ಪಿತ ಚೌಕಟ್ಟಿನೊಳಗೆ ನ್ಯಾಯ/ಸತ್ಯ ತೀರ್ಮಾನವಾಗುತ್ತದೆ ಎನ್ನುವ ನಂಬಿಕೆ ಬಹುತೇಕರಲ್ಲಿ ಇರುವ ತನಕ ಒಪ್ಪಿತ ಚೌಕಟ್ಟಿನೊಳಗೆ ತೀರ್ಮಾನವಾಗುವುದನ್ನು ನ್ಯಾಯ/ ಸತ್ಯ ಎಂದು ಜನ ಒಪ್ಪಿಕೊಳ್ಳುತ್ತಾರೆ. ಕೆಲವು ಬಾರಿ ಸತ್ಯ ಸುಳ್ಳಾಗಬಹುದು ಅಥವಾ ಸುಳ್ಳು ಸತ್ಯವಾಗಬಹುದು. ಆದರೆ ಸತತವಾಗಿ ಸುಳ್ಳೇ ಗೆದ್ದರೆ ಅಥವಾ ಸತ್ಯ ಸೋತರೆ ನ್ಯಾಯ ತೀರ್ಮಾನದ ಚೌಕಟ್ಟು ಜನರ ನಂಬಿಕೆ ಕಳೆದುಕೊಳ್ಳುತ್ತದೆ. ಜನರ ನಂಬಿಕೆ ಕಳೆದುಕೊಂಡ ಚೌಕಟ್ಟಿನೊಳಗೆ ನಡೆಯುವ ನ್ಯಾಯ ತೀರ್ಮಾನಕ್ಕೆ ಬೆಲೆಯಿರುವುದಿಲ್ಲ ಅಥವಾ ಮೌಲ್ಯ ಇರುವುದಿಲ್ಲ. ಇದೇ ಸ್ಥಿತಿ (ಮೌಲ್ಯರಹಿತ ಸ್ಥಿತಿ) ಮುಂದುವರಿಯುವುದಿಲ್ಲ. ಒಂದು ಮೇಲೆ ಮುಂದುವರಿದರೆ ನ್ಯಾಯ ತೀರ್ಮಾನದ ಚೌಕಟ್ಟು ಬದಲಾಗಬೇಕಾಗುತ್ತದೆ. ಹೀಗೆ ನ್ಯಾಯ/ ಸತ್ಯ ತೀರ್ಮಾನ ಒಪ್ಪಿತ ಚೌಕಟ್ಟಿನೊಳಗೆ ನಡೆಯುವ ಪ್ರಕ್ರಿಯೆ. ಈ ಚೌಕಟ್ಟಿನೊಳಗೆ ಎರಡು ಸಂಗತಿಗಳು ಸೇರಿವೆ ಒಂದು, ಸಾಂಸ್ಥಿಕ ಸಂಗತಿ ಮತ್ತು ಎರಡು, ತಾತ್ವಿಕ ಸಂಗತಿ. ಸಾಂಸ್ಥಿಕ ಚೌಕಟ್ಟಿನ ವ್ಯಾಪ್ತಿಯಲ್ಲಿ ನ್ಯಾಯಾಧೀಶರು, ವಕೀಲರು, ಇತರ ಸಿಬ್ಬಂದಿಗಳು, ಅವರೊಳಗಿನ ಅಧಿಕಾರ ಸಂಬಂಧಗಳು, ಸ್ಥಾನಮಾನಗಳು, ಮೌಲ್ಯಗಳು ಮತ್ತು ಸಂಬಂಧಿತ ಇತರ ಸಂಗತಿಗಳು ಒಳಗೊಂಡಿವೆ. ನ್ಯಾಯದ ಕಲ್ಪನೆ, ಸತ್ಯದ ಕಲ್ಪನೆ ಇತ್ಯಾದಿಗಳಿಗೆ ಸಂಬಂಧಿಸಿದ ಸಂಕಥನಗಳು ಮತ್ತು ಪುರಾವೆ, ಪ್ರತಿ ಪುರಾವೆಗಳ ಸ್ವರೂಪ, ಸಾಕ್ಷಿ ಪ್ರತಿಸಾಕ್ಷಿಗಳನ್ನು ನ್ಯಾಯಾಲಯದಲ್ಲಿ ಪ್ರೊಡ್ಯುಸ್ ಮಾಡುವ ವಿಧಾನ, ವಾದ, ಪ್ರತಿವಾದ ಗಳನ್ನು ಮಂಡಿಸುವ ವಿಧಾನ ಇತ್ಯಾದಿಗಳು ತಾತ್ವಿಕ ಚೌಕಟ್ಟಿನೊಳಗೆ ಬರುತ್ತವೆ.

ನ್ಯಾಯ ತೀರ್ಮಾನ ಹೇಗೆ ಒಂದು ಒಪ್ಪಿತ ಚೌಕಟ್ಟಿನೊಳಗೆ ನಡೆಯುವ ಪ್ರಕ್ರಿಯೋ ಅದೇ ರೀತಿಯಲ್ಲಿ ಸಂಶೋಧನೆ ಕೂಡ ಒಂದು ಒಪ್ಪಿತ ಚೌಕಟ್ಟಿನೊಳಗೆ ನಡೆಯುವ ಸತ್ಯ ಪ್ರತಿಪಾದನೆಯ ಪ್ರಕ್ರಿಯೆ. ಕೋರ್ಟ್‌ನಲ್ಲಿ ಹೇಗೆ ಎರಡು ವಕೀಲರು ಒಂದು ವಿಷಯದ ಪರ ವಿರೋಧ ವಾದಗಳನ್ನು ಮಂಡಿಸುತ್ತಾರೋ ಅದೇ ರೀತಿಯಲ್ಲಿ ಸಂಶೋಧಕರು ಕೂಡ ಒಂದು ವಿಷಯದ ಪರ ವಿರೋಧ ವಾದಗಳನ್ನು ಮಂಡಿಸುತ್ತಾರೆ. ಆದರೆ ಇಲ್ಲೊಂದು ಸಣ್ಣ ವ್ಯತ್ಯಾಸವಿದೆ. ಕೋರ್ಟ್‌ನಲ್ಲಿ ವಿಷಯದ ಪರವಾದವನ್ನು ಒಬ್ಬ ವಕೀಲರು ಮಾಡಿದರೆ ವಿಷಯದ ವಿರೋದ ವಾದವನ್ನು ಮತ್ತೊಬ್ಬ ವಕೀಲರು ಮಾಡುತ್ತಾರೆ. ಆದರೆ ಸಂಶೋಧನೆಯಲ್ಲಿ ಎರಡೂ ವಾದಗಳನ್ನು-ವಿಷಯದ ಪರ ಮತ್ತು ವಿರೋಧ ವಾದಗಳನ್ನು-ಒಬ್ಬರೇ ಮಾಡುತ್ತಾರೆ. ಜತೆಗೆ ಪರ ವಾದಿಸುವವರಿಗೆ ವಿರೋಧ ವಾದಿಸುವವರು ಅಥವಾ ವಿರೋಧ ವಾದಿಸುವವರಿಗೆ ಪರ ವಾದಿಸುವವರು ಸಂಶೋಧನೆಯಲ್ಲಿ ಕೋರ್ಟ್‌ನಲ್ಲಿದ್ದಂತೆ ಪ್ರತ್ಯಕ್ಷ ಇರುವುದಿಲ್ಲ. ಈಗಾಗಲೇ ಮಂಡಿತ ಪರವಿರೋಧ ವಾದಗಳು ಬೇರೆ ಬೇರೆ ರೂಪದಲ್ಲಿ ಇರುತ್ತವೆ. ಅವುಗಳು ಪುಸ್ತಕ, ಲೇಖನ, ಪ್ರಬಂಧ, ವರದಿ ಇತ್ಯಾದಿಗಳ ರೂಪದಲ್ಲಿ ಮತ್ತೆ ಕೆಲವು ಮೌಖಿಕ ಕಥನಗಳ ರೂಪದಲ್ಲಿ ಇರಬಹುದು. ಈ ಎಲ್ಲ ಕಾರಣಗಳಿಂದಾಗಿ ಸಂಶೋಧನೆಯಲ್ಲಿ ಎಷ್ಟೋ ಬಾರಿ ಯಾವುದೋ ಒಂದು ವಾದ(ಪರ ಅಥವಾ ವಿರೋಧ) ಹೆಚ್ಚು ಬಲಯುತವಾಗಿ ಮತ್ತೊಂದು ವಾದ (ಪರ ಅಥವಾ ವಿರೋಧ) ಬಲಹೀನವಾಗಿರುವ ಸಾಧ್ಯತೆಗಳಿರುತ್ತವೆ. ವಕೀಲರುಗಳ ವಾದಗಳನ್ನು ಆಲಿಸಿ ನ್ಯಾಯಾಧೀಶರು ವಿಷಯದ ಪರ ಮಂಡಿಸಿದ ವಾದಗಳು ಸರಿಯೇ ಅಥವಾ ವಿಷಯದ ವಿರೋಧ ಮಂಡಿಸಿದ ವಾದಗಳು ಸರಿಯೇ ಎಂದು ತೀರ್ಮಾನಿಸುತ್ತಾರೆ. ಅದೇ ರೀತಿಯಲ್ಲಿ ಸಂಶೋಧಕರು ವಿಷಯದ ಪರವಿರೋಧ ಮಂಡಿಸಿರುವ ವಾದಗಳನ್ನು ಓದಿ ಮೌಲ್ಯಮಾಪಕರು ತೀರ್ಮಾನ ನೀಡುತ್ತಾರೆ. ಹೀಗೆ ಸಂಶೋಧನೆಯಲ್ಲಿ ವಕೀಲರ ಸ್ಥಾನದಲ್ಲಿ ಸಂಶೋಧಕರು ಮತ್ತು ನ್ಯಾಯಾಧೀಶರ ಸ್ಥಾನದಲ್ಲಿ ಮೌಲ್ಯಮಾಪಕರಿರುತ್ತಾರೆ. ಸಂಶೋಧನೆ ಕೂಡ ಒಂದು ಒಪ್ಪಿತ ಚೌಕಟ್ಟಿನೊಳಗೆ ನಡೆಯುವ ಪ್ರಕ್ರಿಯೆ. ಈ ಒಪ್ಪಿತ ಚೌಕಟ್ಟಿನೊಳಗೆ ಸಾಂಸ್ಥಿತಿಕ ಹಾಗು ತಾತ್ವಿಕ ಸಂಗತಿಗಳಿರುತ್ತವೆ.[೫] ಸಾಂಸ್ಥಿಕ ಚೌಕಟ್ಟಿನೊಳಗೆ ಸಂಶೋಧನ ಸಂಸ್ಥೆಗಳು. ಸಂಶೋಧಕ ಸಮುದಾಯ, ಅವರೊಳಗಿನ ಏಣಿಶ್ರೇಣಿಗಳು (ಪ್ರಾಧ್ಯಾಪಕರು, ಪ್ರವಾಚಕರು, ಉಪನ್ಯಾಸಕರು ಇತ್ಯಾದಿ), ಸಂಶೋಧನೆಗೆ ಧನಸಹಾಯ ಒದಗಿಸುವವರು, ಸಂಶೋಧನೆಯ ಫಲಿತವನ್ನು ಬಳಸುವವರು ಮುಂತಾದವರೆಲ್ಲ ಸೇರಿರುತ್ತಾರೆ. ವಿವಿಧ ವಿಷಯಗಳ ಮೇಲಿನ ಥಿಯರಿ, ಸತ್ಯದ ಸ್ವರೂಪದ ಮೇಲಿನ ಚರ್ಚೆ (ಒನ್‌ಟೋಲಾಜಿ), ಸಂಶೋಧಕರು ಮತ್ತು ಸಂಶೋಧನ ವಿಷಯದ ನಡುವಿನ ಸಂಬಂಧದ ಮೇಲಿನ ಚರ್ಚೆ (ಎಪಿಸ್ಟಮೋಲಾಜಿ), ಸಂಶೋಧನೆಯಲ್ಲಿ ಮೌಲ್ಯದ ಪಾತ್ರ (ಆಕ್ಸಿಯಲಾಜಿ), ಸಂಶೋಧನ ವಿಧಾನ, ಪಾರಿಭಾಷೆಗಳು, ಭಾಷೆ ಇತ್ಯಾದಿಗಳು ತಾತ್ವಿಕದ ವ್ಯಾಪ್ತಿಯೊಳಗೆ ಸೇರಿದ ಅಂಶಗಳು. ಕೋರ್ಟ್‌ನಲ್ಲಿ ಹೇಗೆ ನ್ಯಾಯ ತೀರ್ಮಾನವಾಗುತ್ತದೆ ಎನ್ನುವ ನಂಬಿಕೆ ಇದೆಯೋ ಹಾಗೆ ಸಂಶೋಧನೆಯ ಒಪ್ಪಿತ

ಚೌಕಟ್ಟಿನೊಳಗೆ ನಡೆಯುವ ಪ್ರಕ್ರಿಯೆಯಿಂದ ಸತ್ಯ ಪ್ರತಿಪಾದನೆಯಾಗುತ್ತದೆ ಎನ್ನುವ ನಂಬಿಕೆ ಕೆಲಸ ಮಾಡುತ್ತದೆ. ಈ ನಂಬಿಕೆ ಇರುವವರೆಗೆ ಸಂಶೋಧನ ಪ್ರಬಂಧಗಳಿಗೆ ಮತ್ತು ಡಿಗ್ರಿಗಳಿಗೆ ಮೌಲ್ಯ ಅಥವಾ ಬೆಲೆ ಇರುತ್ತದೆ. ಅಂದರೆ ಸಂಶೋಧನ ಡಿಗ್ರಿಗಳು ಕೆಲವೊಂದು ಉದ್ದೇಶಗಳಿಗೆ (ಉದ್ಯೋಗ, ಶಿಕ್ಷಣ, ಚಳವಳಿ, ಪರಿವರ್ತನೆ ಇತ್ಯಾದಿಗಳಿಗೆ) ಅರ್ಹತೆಯ ಮಾನದಂಡಗಳಾಗಿ ಮತ್ತು ಪ್ರೇರಕ ಶಕ್ತಿಗಳಾಗಿ ಬಳಕೆಯಾಗುತ್ತವೆ. ಒಪ್ಪಿತ ಚೌಕಟ್ಟಿನೊಳಗೆ ನಡೆಯುವ ಪ್ರಕ್ರಿಯೆ ಮೌಲ್ಯ ಕಳೆದು ಕೊಂಡರೆ ಅಥವಾ ಬಹುತೇಕರ ನಂಬಿಕೆ ಕಳೆದುಕೊಂಡರೆ ಚೌಕಟ್ಟು ಬದಲಾಗಬೇಕಾಗುತ್ತದೆ. ಅಂದರೆ ಸಂಶೋಧನೆಯ ಸಾಂಸ್ಥಿತಿಕ ಹಾಗು ತಾತ್ವಿಕ ಸಂಗತಿಗಳು ಬದಲಾಗಬೇಕಾಗುತ್ತವೆ.

ಒಪ್ಪಿತ ಚೌಕಟ್ಟು-ಸಾಂಸ್ಥಿತಿಕ ಹಾಗು ತಾತ್ವಿಕ ಸಂಗತಿಗಳು ಕಾಲಕ್ಕೆ ಕಾಲಕ್ಕೆ ಬದಲಾಗುತ್ತಿರುತ್ತದೆ ಮತ್ತು ಒಂದೇ ಕಾಲದಲ್ಲಿ ಹಲವಾರು ಬಗೆಯ ಸತ್ಯ ಪ್ರತಿಪಾದನೆಯ ಚೌಕಟ್ಟುಗಳಿರಬಹುದು. ಮೇಲೆ ನೋಡಿದ ನ್ಯಾಯ ತೀರ್ಮಾನದ ಏಕ ಚೌಕಟ್ಟನ್ನು ವಸಾಹತು ಸರಕಾರ ನಮ್ಮಲ್ಲಿ ಅಳವಡಿಸಿದೆ. ವಸಾಹತು ಮುನ್ನ ನಮ್ಮದೇ ಸಂಸ್ಕೃತಿಯಲ್ಲಿ ಹಲವಾರು ಬಗೆಯ ನ್ಯಾಯ ತೀರ್ಮಾನದ ಚೌಕಟ್ಟುಗಳಿದ್ದವು. ದೇವರ ಮುಂದೆ ಅಥವಾ ಭೂತದ ಮುಂದೆ ಸತ್ಯ ತೀರ್ಮಾನ ಮಾಡುವುದು. ಪಂಚಾಯಿತಿ ಕಟ್ಟೆಯಲ್ಲಿ ಸತ್ಯ ತೀರ್ಮಾನ ಮಾಡುವುದು ಇತ್ಯಾದಿಗಳು ನಮ್ಮ ಸಂಸ್ಕೃತಿಯ ನ್ಯಾಯ ತೀರ್ಮಾನದ ಚೌಕಟ್ಟುಗಳು. ಸತ್ಯ ಹಾಗೂ ನ್ಯಾಯ ತೀರ್ಮಾನದ ಒಪ್ಪಿತ ಚೌಕಟ್ಟಿನ ಸಾಂಸ್ಥಿಕ ಹಾಗೂ ತಾತ್ವಿಕ ಸಂಗತಿಗಳು ಒಟ್ಟಾರೆ ಪರಿಸರದ ಸಾಂಸ್ಥಿತಿಕ ಹಾಗು ತಾತ್ವಿಕ ಸಂಗತಿಗಳಿಂದ ಪ್ರಭಾವಿಸಲ್ಪಡುತ್ತದೆ. ವಸಾಹತು ಆಡಳಿತಕ್ಕೆ ಮುನ್ನ ದೇವಸ್ಥಾನಗಳು ಹಾಗು ಭೂತಸ್ಥಾನಗಳು ಸತ್ಯ/ನ್ಯಾಯ ತೀರ್ಮಾನದ ಪ್ರಮುಖ ಸ್ಥಳಗಳಾಗಿದ್ದವು.[1] ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುತ್ತು, ಸೀಮೆ, ಮಾಗಣೆ ಎನ್ನುವ ಆಡಳಿತ ಪ್ರದೇಶಗಳಿದ್ದವು. ಆಯಾಯ ಪ್ರದೇಶದ ಆರ್ಥಿಕ, ಸಾಂಸ್ಕೃತಿಕ ಸಮಸ್ಯೆಗಳನ್ನು ಆಯಾಮ ಪ್ರದೇಶಗಳ ಭೂತಗಳು ತೀರ್ಮಾನ ಮಾಡುವ ಕ್ರಮ ಕೂಡ ಇತ್ತು.[2] ಆ ಗುತ್ತು, ಸೀಮೆ ಮಾಗಣೆಗಳ ಯಜಮಾನರ ಹಿಡಿತದಲ್ಲಿ ಈ ಭೂತಗಳು ಕಾರ್ಯನಿರ್ವಹಿಸುತ್ತಿದ್ದವು. ವಸಾಹತು ಆಡಳಿತ ಶುರುವಾಗುವುದರೊಂದಿಗೆ ಗ್ರಾಮ, ತಾಲ್ಲೂಕು, ಜಿಲ್ಲೆ ಎನ್ನುವ ಹೊಸ ಆಡಳಿತ ಪ್ರದೇಶಗಳು ಸೃಷ್ಟಿಯಾದವು. ಕೋರ್ಟ್, ಪೋಲಿಸ್ ಕಚೇರಿಗಳು ನ್ಯಾಯ ತೀರ್ಮಾನದ ಹೊಸ ಸಾಂಸ್ಥಿತಿಕ ಚೌಕಟ್ಟುಗಳು ಬಂದವು. ಇದೇ ರೀತಿಯಲ್ಲಿ ವಸಾಹತು ಆಡಳಿತಕ್ಕೆ ಮುನ್ನ ಹುಟ್ಟು ಮತ್ತು ಜ್ಞಾನ ಸೃಷ್ಟಿಯ ನಡುವೆ ಸಂಬಂಧ ಕಲ್ಪಿಸಲಾಗಿತ್ತು. ತಾತ್ವಿಕವಾಗಿ ವರ್ಣಾಶ್ರಮ ಧರ್ಮ ಕಸುಬು ಮತ್ತು ವರ್ಣಗಳ ನಡುವೆ ಸಂಬಂಧ ಇದೆಯೆಂದು ಹೇಳುತ್ತದೆ. ಆದರೆ ವಾಸ್ತವದಲ್ಲಿ ಹುಟ್ಟು ಮತ್ತು ಕಸುಬು ನಡುವೆ ಸಂಬಂಧ ಚಾರಿತ್ರಿಕವಾಗಿ ರೂಪುಗೊಂಡಿದೆ. ಇಂತಹ ಸಂಸ್ಕೃತಿಯಲ್ಲಿ ಜ್ಞಾನ ಸೃಷ್ಟಿ ಮತ್ತು ಪ್ರಸಾರ ಸಮಾಜದ ಸಣ್ಣ ಗುಂಪಿನ ಕಸುಬಾಗಿತ್ತು ಎನ್ನುವ ನಂಬಿಕೆಗಳಿವೆ. ಅಗ್ರಹಾರಗಳು, ಮಠಗಳು,

ಪಠುಗಳು, ದೇವಸ್ಥಾನ, ಇವುಗಳಿಗೆ ಸಿಗುವ ದತ್ತಿ, ಉಂಬಳಿ, ರಾಜಾಶ್ರಯ ಇತ್ಯಾದಿಗಳು ಅಂದಿನ ಜ್ಞಾನ ಸೃಷ್ಟಿಯ ಸಾಂಸ್ಥಿತಿಕ ಚೌಕಟ್ಟು. ದೇವರು, ದೇವರು ಮನುಷ್ಯರ ಸಂಬಂಧ, ದೇವರನ್ನು ಒಲಿಸಿಕೊಳ್ಳುವ ವಿಧಾನ, ಹುಟ್ಟು ಮದುವೆ ಸಾವು? ಜಾತಿ, ಮತ, ನ್ಯಾಯ, ನೀತಿ ಇತ್ಯಾದಿಗಳು ತಾತ್ವಿಕ ಚೌಕಟ್ಟಿನೊಳಗೆ ಬರುತ್ತಿದ್ದ ಅಂಶಗಳು. ಆದರೆ ವಸಾಹತು ಆಡಳಿತದೊಂದಿಗೆ ಸಂಶೋಧನೆಯ ಸಾಂಸ್ಥಿಕ ಹಾಗು ತಾತ್ವಿಕ ಚೌಕಟ್ಟುಗಳ ಬದಲಾದವು. ವಸಾಹತು ಸರಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳು, ಆಧುನಿಕ ಶಿಕ್ಷಣ ಪಡೆದು ಸಂಶೋಧಕರೆಂದು ಗುರುತಿಸಲ್ಪಟ್ಟವರು ಸಂಶೋಧನೆ ಮಾಡಿ ಜ್ಞಾನ ಉತ್ಪಾದಿಸುವವರಾದರು. ಸಮಾಜ, ಅರ್ಥ, ರಾಜಕೀಯ, ಸಂಸ್ಕೃತಿ ಅಧ್ಯಯನಗಳು ಬಂದವು. ಸಂಶೋಧನ ವಿಧಿವಿಧಾನಗಳು ಬಂದವು. ಹೀಗೆ ಒಟ್ಟಾರೆ ಪರಿಸರದಲ್ಲಾಗುವ ಬದಲಾವಣೆಗಳು ಸತ್ಯ ಅಥವಾ ನ್ಯಾಯ ತೀರ್ಮಾನದ ಸಾಂಸ್ಥಿಕ ಹಾಗೂ ತಾತ್ವಿಕ ಚೌಕಟ್ಟುಗಳನ್ನು ಕೂಡ ಬದಲಾಯಿಸುತ್ತವೆ. ಒಪ್ಪಿತ ಚೌಕಟ್ಟು ಮತ್ತು ಒಟ್ಟಾರೆ ಪರಿಸರದ ಸಂಬಂಧ ನೇರವಾಗಿ ಗೋಚರಿಸದಿರಬಹುದು. ಅದೇ ರೀತಿಯಲ್ಲಿ ಒಂದರಲ್ಲಾಗುವ ಬದಲಾವಣೆಗಳು ಮತ್ತೊಂದರ ಮೇಲೆ ಮಾಡುವ ಪರಿಣಾಮಗಳು ತಕ್ಷಣ ಕಾಣದಿರಬಹುದು. ಆದರೆ ಆಳದಲ್ಲಿ ಒಂದು ಮತ್ತೊಂದನ್ನು ಪ್ರಭಾವಿಸುತ್ತಿರುವುದಂತು ನಿಜ ಅಥವಾ ಇವೆರಡು ಪರಸ್ಪರ ಸಂಬಂಧಿಸಿರುವುದಂತು ನಿಜ.

ನ್ಯಾಯ ಅಥವಾ ಸತ್ಯದ ಅಡಿಪಾಯ ನ್ಯಾಯ/ಸತ್ಯ ತೀರ್ಮಾನದ (ಚೌಕಟ್ಟು ಹಾಗೂ ಪ್ರಕ್ರಿಯೆ) ಪ್ರಕ್ರಿಯೆಯ ಮೇಲೆ ಬಹುತೇಕರಿಗೆ ಇರುವ ನಂಬಿಕೆ. ಈ ನಂಬಿಕೆಯನ್ನು ರೂಪಿಸುವ ವಿಧಾನ ಸಂಕೀರ್ಣವಾಗಿದೆ. ನಂಬಿಕೆಯನ್ನು ರೂಪಿಸುವ ಅಥವಾ ಸಮಾಜದ ಬಹುತೇಕರ ಒಪ್ಪಿಗೆ ಪಡೆಯುವ ವಿಧಾನಗಳು ಕಾಲ ಮತ್ತು ಪ್ರದೇಶಕ್ಕನುಗುಣವಾಗಿ ಭಿನ್ನವಾಗಿದೆ. ಇಂದು ವಯಸ್ಕರು ಮತ ಚಲಾಯಿಸಿ ತಮ್ಮನ್ನು ಆಡಳಿತ ಮಾಡಬೇಕಾದವರನ್ನು ಚುನಾಯಿಸುತ್ತಾರೆ. ಈ ರೀತಿ ಚುನಾಯಿಸಲ್ಪಟ್ಟವರು ನೀಡಬೇಕಾದ ಶಿಕ್ಷಣದ ಬಗ್ಗೆ, ಸಮಾಜದಲ್ಲಿ ನಡೆಯಬೇಕಾದ ಸಂಶೋಧನೆ ಬಗ್ಗೆ, ಶಿಕ್ಷಣ ಹಾಗೂ ಸಂಶೋಧನೆಗಳು ನಡೆಯಲು ಅನುಕೂಲವಾಗುವ ಸಾಂಸ್ಥಿಕ ಚೌಕಟ್ಟುಗಳ ಬಗ್ಗೆ, ಅವುಗಳಿಗೆ ನೀಡಬೇಕಾಗಿರುವ ಆದ್ಯತೆ ಮತ್ತು ಬೆಂಬಲಗಳ ಬಗ್ಗೆ ತೀರ್ಮಾನಿಸುತ್ತಾರೆ. ಚುನಾಯಿಸಲ್ಪಟ್ಟ ಸದಸ್ಯರು ನೇರವಾಗಿ ಮೇಲಿನವುಗಳನ್ನು ತೀರ್ಮಾನಿಸುವುದಿಲ್ಲ. ಆಯಾಯ ಕ್ಷೇತ್ರದಲ್ಲಿ ಪರಿಣಿತರೆಂದು ಅಧಿಕಾರಿ ವರ್ಗದಿಂದ ಗುರುತಿಸಲ್ಪಟ್ಟವರನ್ನು ಸೇರಿಸಿ ಸಮಿತಿಗಳನ್ನು ರಚಿಸುತ್ತಾರೆ. ಈ ಸಮಿತಿಗಳು ಶಿಕ್ಷಣ ಹಾಗೂ ಸಂಶೋಧನೆಗಳು ಹೇಗಿರಬೇಕೆಂದು ತೀರ್ಮಾನಿಸುತ್ತವೆ.[೮] ಈ ಸಮಿತಿಗಳು ಮಾಡುವ ಶಿಫಾರಸ್ಸುಗಳಲ್ಲಿ ಆಡಳಿತ ಪಕ್ಷಗಳ ಧೋರಣೆಗಳಿಗೆ ಅನುಕೂಲವಾಗುವ ಸಂಗತಿಗಳನ್ನು ಕಾರ್ಯರೂಪಕ್ಕೆ ತರುತ್ತವೆ. ಹೀಗೆ ಸಂಶೋಧನೆಯ ಸಾಂಸ್ಥಿಕ ಚೌಕಟ್ಟುಗಳು ನಿರ್ಮಾಣವಾಗುತ್ತವೆ. ಇಲ್ಲಿ ಸರಕಾರ/ಅಧಿಕಾರದ ಮಾನ್ಯತೆ ಮುಖ್ಯ. ಇಂತಹ ಸಂಸ್ಥೆಗಳಲ್ಲಿ ನಡೆದ ಸಂಶೋಧನೆಗಳು ಮಾನ್ಯತೆ ಪಡೆಯುತ್ತವೆ. ಅಧಿಕಾರ ಮಾನ್ಯತೆ ನೀಡದಿರುವ

ಸಂಸ್ಥೆಗಳು ಕೂಡ ಸಂಶೋಧನೆ ನಡೆಸಬಹುದು. ಆದರೆ ಅವುಗಳಿಗೆ ಮಾನ್ಯತೆ ಇರುವುದಿಲ್ಲ. ಹೀಗೆ ಸಂಶೋಧನೆಯ ಸಾಂಸ್ಕೃತಿಕ ಚೌಕಟ್ಟಿಗೂ ಅಧಿಕಾರಕ್ಕೂ ನೇರ ಸಂಬಂಧ ಇದೆ. ಸಮಾಜದ ಬಹುತೇಕ ವಯಸ್ಕರು ಮತದಾನ ಮಾಡಿ ಚುನಾಯಿಸಿದ ಜನಪ್ರತಿನಿಧಿಗಳೇ ಸಾಂಸ್ಥಿಕ ಚೌಕಟ್ಟನ್ನು ರೂಪಿಸಿದ್ದಾರೆ ಎನ್ನುವ ಚಿತ್ರಣ ಇಲ್ಲಿದೆ. ಅಂದರೆ ಪರೋಕ್ಷವಾಗಿ ಜನರೇ ತಮ್ಮ ಸಂಶೋಧನ ಚೌಕಟ್ಟನ್ನು ಹೀಗಿರಬೇಕೆಂದು ತೀರ್ಮಾನಿಸುತ್ತಾರೆ ಎನ್ನುವ ಚಿತ್ರಣ ಇದು.

ಸಂಶೋಧನೆಯ ಸಾಂಸ್ಥಿಕ ಚೌಕಟ್ಟಿಗೂ ಅಧಿಕಾರಕ್ಕೂ ಇರುವಷ್ಟು ನೇರ ಸಂಬಂಧ ಸಂಶೋಧನೆಯ ತಾತ್ವಿಕ ಚೌಕಟ್ಟಿಗೂ ಅಧಿಕಾರಕ್ಕೂ ಇಲ್ಲ. ಆದರೆ ಸಂಶೋಧನೆಯ ತಾತ್ವಿಕ ಚೌಕಟ್ಟಿಗೂ ಅಧಿಕಾರಕ್ಕೂ ಪರೋಕ್ಷ ಸಂಬಂಧ ಇದೆ. ಒನ್ ಟೋಲಾಜಿ (ಸತ್ಯದ ಸ್ವರೂಪದ ಮೇಲಿನ ಚರ್ಚೆ). ಎಪಿಸ್ಟಮೋಲಾಜಿ (ಸಂಶೋಧಕರು ಮತ್ತು ಸಂಶೋಧನ ವಿಷಯದ ನಡುವಿನ ಸಂಬಂಧದ ಮೇಲಿನ ಚರ್ಚೆ). ಆಕ್ಸಿಯಲಾಜಿ, (ಸಂಶೋಧನೆಯಲ್ಲಿ ಮೌಲ್ಯದ ಪಾತ್ರ), ಮೆಥಡ್ಸ್ (ಸಂಶೋಧನ ವಿಧಾನಗಳು), ಕೆಟಗರಿ (ಪರಿಭಾಷೆಗಳು), ಭಾಷೆ ಇತ್ಯಾದಿಗಳು ಸಂಶೋಧನೆಯ ತಾತ್ವಿಕ ಚೌಕಟ್ಟಿನೊಳಗೆ ಬರುವ ಪ್ರಮುಖ ಸಂಗತಿಗಳು. ಇವೆಲ್ಲ ಕುರಿತು ಒಂದೇ ಬಗೆಯಲ್ಲಿ ಆಲೋಚನೆ ಮಾಡಿಯೆಂದು ಅಥವಾ ದೃಷ್ಟಿಕೋನ ಬೆಳೆಸಿಕೊಳ್ಳಿಯೆಂದು ವಿದ್ವಾಂಸರನ್ನು ತಾಖೀತು ಮಾಡುವಷ್ಟು ಅಧಿಕಾರ ಯಾರಿಗೂ ಇರುವುದಿಲ್ಲ. ವಾಸ್ತವದಲ್ಲಿ ಇದಕ್ಕೆ ವಿರುದ್ಧ ಪ್ರತಿಕ್ರಿಯೆಗಳು ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಿರುತ್ತವೆ. ಅಂದರೆ ಅಧಿಕಾರ ಮುಂಚೂಣಿಗೆ ತರುವ ಅಥವಾ ಅಧಿಕಾರದ ತಾತ್ವಿಕ ನಿಲುವುಗಳನ್ನು ವಿರೋಧಿಸುವ ತಾತ್ವಿಕ ನಿಲುವುಗಳು ಚಾಲ್ತಿ ಯಲ್ಲಿರಬಹುದು. ಸಮಾಜ ಸಂಶೋಧನೆ ಮೇಲೆ ವರ್ತಮಾನದಲ್ಲಿ ನಡೆಯುತ್ತಿರುವ ಚರ್ಚೆಯನ್ನು ಗಮನಿಸಿದರೆ ಈ ಪ್ರಕ್ರಿಯೆಯನ್ನು ಹೆಚ್ಚು ಸ್ಪಷ್ಟವಾಗಿ ಅರ್ಥಮಾಡಿ ಕೊಳ್ಳಬಹುದು. ಸಮಾಜ ಸಂಶೋಧನೆ ವಿಜ್ಞಾನದ ವಿಧಾನವನ್ನು ಅನುಸರಿಸುತ್ತಿದೆ. ವಿಜ್ಞಾನದ ವಿಧಾನದಲ್ಲಿ ಸಂಶೋಧಕರು ಮತ್ತು ಅಧ್ಯಯನಕ್ಕೆ ಒಳಗಾಗುವ ಸಂಗತಿಗಳ ಸ್ವತಂತ್ರ ಹಾಗೂ ಖಚಿತ ಅಸ್ತಿತ್ವದ ಬಗ್ಗೆ ಯಾವುದೇ ಸಂದೇಹಗಳಿರಲಿಲ್ಲ. ಒಬ್ಜೆಕ್ಟಿವ್ ವರ್ಲ್ಡ್(ಸಮಾಜ) ಒಂದು ಇದೆ. ಅದು ನಮ್ಮ ಆಲೋಚನೆ ಅಥವಾ ಮನಸ್ಸಿನ ಸೃಷ್ಟಿಯಲ್ಲ, ನಮ್ಮ ಆಲೋಚನೆಯನ್ನು ಹೊರತುಪಡಿಸಿ ಕೂಡ ಅದು ಇದೆ. ಅದನ್ನು ಎಂಫಿರಿಕಲ್ ಆಗಿ ಅಥವಾ ಇತರ ವಿಧಾನಗಳಿಂದ ನಾವು ಪೂರ್ಣ ಅಥವಾ ಭಾಗಶಃ ಗ್ರಹಿಸಬಹುದು ಇತ್ಯಾದಿ ಗ್ರಹಿಕೆಗಳು ಕೆಲಸ ಮಾಡುತ್ತಿವೆ. ಅದೇ ರೀತಿಯಲ್ಲಿ ಸಂಶೋಧಕರು ಮೌಲ್ಯ ನಿರಾಪೇಕ್ಷತೆಯನ್ನು ಬೆಳೆಸಿಕೊಳ್ಳಬೇಕು. ಯಾಕೆಂದರೆ ಜ್ಞಾನ ಉತ್ಪಾದನೆಯ ಕಾರ್ಯದಲ್ಲಿ ತೊಡಗಿದವರು ವಿವಿಧ ಸಮುದಾಯ ಹಾಗೂ ವರ್ಗಗಳ ಹಿನ್ನೆಲೆಯಿಂದ ಬಂದಿರುತ್ತಾರೆ. ಅವರು ತಮ್ಮ ಸಮುದಾಯ ಅಥವಾ ವರ್ಗ ಆಸಕ್ತಿಯನ್ನು ಸಕ್ರಿಯವಾಗಿಟ್ಟುಕೊಂಡು ಉತ್ಪಾದಿಸುವ ಜ್ಞಾನ ಪಕ್ಷಪಾತಿಯಾಗಿರುವ ಸಾಧ್ಯತೆ ಇದೆ. ಪಕ್ಷಪಾತಿಯಾದ ಜ್ಞಾನ ಸಮಗ್ರತೆಯ ಒಳಿತಿನ ದೃಷ್ಟಿಯಿಂದ ಉಪಯೋಗವಿಲ್ಲ.

ಆ ಕಾರಣಕ್ಕಾಗಿ ಜ್ಞಾನ ಸಂಪಾದನೆಗೆ ಒಂದು ವಿಧದ ಐಸೋಲೇಶನ್ ಅಗತ್ಯ ಇದೆ ಎನ್ನುವ ವಾದ ಕೂಡ ವಿಜ್ಞಾನದ ವಿಧಾನದಲ್ಲಿ ಮಹತ್ವ ಪಡೆದಿದೆ.

ಆನ್‌ಟಲಾಜಿ, ಎಪಿಸ್ಟಮಲಾಜಿ ಹಾಗೂ ಆಕ್ಸಿಯಲಾಜಿಗಳ ಬಗ್ಗೆ ವಿಜ್ಞಾನ ಪ್ರತಿಪಾದಿಸುವ ಮೇಲಿನ ನಿಲುವುಗಳನ್ನು ಬಹಳ ಹಿಂದಿನಿಂದಲೇ ಟೀಕಿಸಲಾಗುತ್ತಿದೆ. ಅಷ್ಟು ಮಾತ್ರವಲ್ಲ ಬದಲಿ ನಿಲುವುಗಳನ್ನು ಅಭಿವೃದ್ಧಿಪಡಿಸಲಾಗಿದೆ. ಏಕಸತ್ಯದ ಬದಲು ಬಹುಸತ್ಯದ ನಿಲುವು ಪೊಸಿಟಿವಿಸಂನಲ್ಲಿ ಈ ಕೆಳಗಿನಂತೆ ಮುಂಚೂಣಿಗೆ ಬಂದಿದೆ. ವಿಜ್ಞಾನದಲ್ಲಿ ಕ್ವಾಂಟಮ್ ಮೆಕನಿಸಂ ಮತ್ತು ಪ್ರೊಬೆಬಿಲಿಟಿ ಥಿಯರಿ ವಿಜ್ಞಾನದ ಎಕ್ಸಾಟ್ ಸಯನ್ಸ್ ಪಟ್ಟವನ್ನು ಕಿತ್ತುಕೊಂಡು ಬಿಟ್ಟಿವೆ.[೯] ಅಲ್ಲಿಂದ ವಿಜ್ಞಾನದಲ್ಲೂ ಟು ಪ್ಲಸ್ ಟು ಅಂದರೆ ನಾಲ್ಕು ಆಗಬೇಕೆಂದಿಲ್ಲ ಎನ್ನುವ ಅಭಿಪ್ರಾಯ ಚಾಲ್ತಿಗೆ ಬಂದಿದೆ. ಮಾನವ ಶಾಸ್ತ್ರದಲ್ಲಿ ಎರಡು ದೃಷ್ಟಿಕೋನಗಳು ಮೇಲಾಟ ನಡೆಸುತ್ತಿದ್ದವು. ಒಂದು ಮತ್ತೊಂದು ಸಂಸ್ಕೃತಿಯಲ್ಲಿ ಸೇಮ್‌ನೆಸನ್ನು ಹುಡುಕಬೇಕು ಎನ್ನುವ ದೃಷ್ಟಿಕೋನ ಎರಡು, ಮತ್ತೊಂದು ಸಂಸ್ಕೃತಿಯಲ್ಲಿ ಭಿನ್ನತೆಯನ್ನು ಹುಡುಕಬೇಕು ಎನ್ನುವ ದೃಷ್ಟಿಕೋನ.[೧೦] ಇಲ್ಲಿ ಗಮನಿಸಬೇಕಾದ ಬಹು ಮುಖ್ಯ ಕೆಲವು ಅಂಶಗಳಿವೆ. ಒಂದು, ಎರಡು ದೃಷ್ಟಿಕೋನಗಳು ಒಂದು ವಿಚಾರದಲ್ಲಿ ಒಂದೇ ನಾಣ್ಯದ ಎರಡು ಮುಖಗಳಂತೆ-ಸೇಮ್‌ನೆಸ್ ಅಥವಾ ಭಿನ್ನತೆಗಳನ್ನು ಮತ್ತೊಂದು ಅಥವಾ ಪರಕೀಯ ಸಂಸ್ಕೃತಿಯಲ್ಲಿ (ಅಧ್ಯಯನಕಾರನ ಸಂಸ್ಕೃತಿಯಲ್ಲಿ ಅಲ್ಲ) ಹುಡುಕಬೇಕು ಎನ್ನುವ ವಿಚಾರದಲ್ಲಿ ಎರಡಲ್ಲೂ ಸಾಮ್ಯತೆ ಇದೆ. ಎರಡು, ಸೇಮ್‌ನೆಸ್ ಹುಡುಕುವವರಿಗೆ ಎಲ್ಲ ಸಂಸ್ಕೃತಿಗಳು ಕೆಲವೊಂದು ಮೂಲಭೂತ ಗುಣಗಳ ದೃಷ್ಟಿಯಿಂದ ಒಂದೇ ಆಗಿದೆ. ಈ ನಿಲುವಿನಿಂದ ಅಧ್ಯಯನ ಆರಂಭಿಸಿದರೆ ಸಂಸ್ಕೃತಿ ಗಳಲ್ಲಿರುವ ಸಮಾನ ಗುಣಲಕ್ಷಣಗಳನ್ನು ಪಟ್ಟಿ ಮಾಡಬಹುದು ಮತ್ತು ಸಂಸ್ಕೃತಿಗಳ ನಡುವೆ ವ್ಯವಹಾರ ಸುಲಭ ಸಾಧ್ಯ. ಸಂಸ್ಕೃತಿಗಳ ನಡುವೆ ಭಿನ್ನತೆಯನ್ನು ಹುಡುಕಬೇಕು ಎನ್ನುವವರು ಭಿನ್ನತೆಯನ್ನು ಗುರುತಿಸುವುದು ಸುಲಭ ಯಾಕೆಂದರೆ ಮತ್ತೊಂದು ಸಂಸ್ಕೃತಿಯ ಭಿನ್ನತೆ ಅಧ್ಯಯನಕಾರರಿಗೆ ಎದ್ದುಕಾಣುತ್ತದೆ. ಮೂರು, ಎರಡೂ ದೃಷ್ಟಿ ಕೋನಗಳು ಒಂದು ವಿಧದಲ್ಲಿ ಯುರೋ ಸೆಂಟರ್‌ಡ್ ಅಥವಾ ಪಶ್ಚಿಮ ಕೇಂದ್ರೀತ ನೆಲೆಯಿಂದ ಆರಂಭವಾಗಿದೆ. ಬೇಸ್ ಪಾಯಿಂಟ್ ಎರಡೂ ಸಂಸ್ಕೃತಿಗಳಿಗೂ ಪಶ್ಚಿಮದ ಸಂಸ್ಕೃತಿಗಳು.[೧೧] ಇವತ್ತು ಆಧುನಿಕೋತ್ತರ ಚಿಂತನೆಯ ಹೆಸರಲ್ಲಿ ಮುಂಚೂಣಿಗೆ ಬಂದಿರುವ ಸಂಸ್ಕೃತಿಕ ಅಧ್ಯಯನಗಳು ಮಾನವ ಅಧ್ಯಯನದ ಎರಡನೇ (ಮತ್ತೊಂದು ಸಂಸ್ಕೃತಿಯಲ್ಲಿ ಭಿನ್ನತೆಯನ್ನು ಹುಡುಕಬೇಕು) ವಿಚಾರಕ್ಕೆ ಹತ್ತಿರವಾಗಿದೆ. ಆದರೆ ಹಿಂದೆ ಭಿನ್ನತೆ ಇದೆ ಎನ್ನುವಾಗ ಭಿನ್ನತೆಯನ್ನು ಒಂದು ಆದರ್ಶರೂಪದಲ್ಲಿ ಕಟ್ಟಿಕೊಂಡಿಲ್ಲ. ಭಿನ್ನತೆ ಇದೆ ಎನ್ನುವ ವಿಚಾರ ಮತ್ತು ಎಲ್ಲ ಸಂಸ್ಕೃತಿಗಳು ಕಟ್ಟಕಡೆಗೆ ಒಂದೇ ಗುರಿಯತ್ತ ಚಲಿಸಬೇಕು ಎನ್ನು ವಿಚಾರಗಳ ನಡುವೆ ಅಕಾಡೆಮಿಕ್ ಭಿನ್ನತೆ ಮಾತ್ರ ಇತ್ತು. ಅಭಿವೃದ್ಧಿ ಅಥವಾ ಸಾಮಾಜಿಕ ಪರಿವರ್ತನೆ ವಿಚಾರದಲ್ಲಿ ಎಲ್ಲ ಸಂಸ್ಕೃತಿಗಳು

ಸಾಮ್ಯತೆ ಹೊಂದಿದೆ ಎನ್ನುವ ನಿಲುವು ಹೆಚ್ಚು ಮಾನ್ಯತೆ ಪಡೆದಿದೆ. ಆದರೆ ಇಂದು ಸ್ಥಿತಿ ಬದಲಾಗಿದೆ. ಭಿನ್ನತೆಯನ್ನು ಸಾಮಾಜಿಕ ಪರಿವರ್ತನೆಯ ವಿಚಾರದಲ್ಲೂ ಪರಿಗಣಿಸಬೇಕಾಗಿದೆ.

ಭಾಷಾಶಾಸ್ತ್ರದಲ್ಲೂ ವ್ಯಾಕರಣ ನಮ್ಮ ಭಾಷೆಯನ್ನು ಅಗೋಚರವಾಗಿ ಪ್ರಭಾವಿಸುತ್ತದೆ ಎಂದು ಸ್ಟ್ರಕ್ಚರಲಿಸಂ ವಾದಿಸುತ್ತದೆ. ''ವ್ಯಕ್ತಿಯೊಬ್ಬರು ಮೇಲ್ನೋಟಕ್ಕೆ ಋಷಿ ಬಂದಂತೆ ಭಾಷೆಯನ್ನು ಬಳಸಿದಂತೆ ಕಂಡರೂ ಆಳದಲ್ಲಿ ವ್ಯಾಕರಣ ಕೆಲಸ ಮಾಡುತ್ತಿದೆ. ಈ ವ್ಯಾಕರಣವನ್ನು ಅವರು ತಮ್ಮ ಸಂಸ್ಕೃತಿಯಿಂದ ಅಥವಾ ದಿನನಿತ್ಯದ ಬದುಕಿನಿಂದ ಕಲಿಯುತ್ತಾರೆ. ಅಂದರೆ ಜನಸಾಮಾನ್ಯರು ವ್ಯಾಕರಣವನ್ನು ಪ್ರತ್ಯೇಕವಾಗಿ ಕಲಿಯುವ ವ್ಯವಸ್ಥೆ ಇಲ್ಲ. ಭಾಷಾಶಾಸ್ತ್ರದ ಭಾಷೆ ಬಳಕೆ ಮತ್ತು ವ್ಯಾಕರಣ ಸಂಬಂಧವನ್ನು ಸಮಾಜಶಾಸ್ತ್ರಕ್ಕು ಅನ್ವಯಿಸಲಾಗಿದೆ.'' ಭಾಷೆಯನ್ನು ವ್ಯಾಕರಣ ಪ್ರಭಾವಿಸಿದಂತೆ ಸಾಮಾಜಿಕ ವ್ಯವಹಾರಗಳನ್ನು ಸಾಮಾಜಿಕ ಸ್ಟ್ರಕ್ಚರ್‌ಗಳು ಪ್ರಭಾವಿಸುತ್ತವೆ. ಜಾತಿ, ಧರ್ಮ, ವರ್ಗ ಇತ್ಯಾದಿ ಸಾಮಾಜಿಕ ಸ್ಟ್ರಕ್ಚರ್‌ಗಳು ವ್ಯಕ್ತಿಯೊಬ್ಬರ ದಿನನಿತ್ಯದ ವ್ಯವಹಾರಗಳನ್ನು ಪ್ರಭಾವಿಸುತ್ತವೆ. ನಿರ್ದಿಷ್ಟ ಭಾಷೆ ಬಳಸುವ ವ್ಯಕ್ತಿಗೆ ತಾನಾಡುವ ಭಾಷೆಯ ಒಳಪ್ರವಾಹವಾಗಿ ವ್ಯಾಕರಣ ಇದೆಯೆಂದು ಹೇಗೆ ತಿಳಿಯುವುದಿಲ್ಲವೋ ಅದೇ ರೀತಿ ದಿನನಿತ್ಯದ ತನ್ನ ವ್ಯವಹಾರಗಳನ್ನು ಸಾಮಾಜಿಕ ಸ್ಟ್ರಕ್ಚರ್ ಪ್ರಭಾವಿಸುತ್ತದೆ ಎನ್ನುವ ತಿಳುವಳಿಕೆನೂ ಇರುವುದಿಲ್ಲ. ಆದರೆ ಸಸೂರ್ ಭಾಷೆಯ ಮತ್ತು ವ್ಯಾಕರಣದ ಈ ಸಂಬಂಧವನ್ನು ಅಲ್ಲಗೆಳೆಯುತ್ತಾನೆ. ಅತನ ಪ್ರಕಾರ ಭಾಷೆ ಪದ ಮತ್ತು ವಾಕ್ಯಗಳ ಸಮೂಹ. ಪದಗಳನ್ನು ನಿರ್ದಿಷ್ಟ ರೂಪದಲ್ಲಿ ಜೋಡಿಸಿದಾಗ ಮುಖ್ಯ ಆಗುತ್ತದೆ ಮತ್ತು ನಿರ್ದಿಷ್ಟ ರೂಪದಲ್ಲಿ ಜೋಡಿಸಲ್ಪಟ್ಟ ಪದಗಳು ಅರ್ಥವನ್ನು ಕೊಡುತ್ತದೆ ಎನ್ನುವ ಭಾಷಾಶಾಸ್ತ್ರದ ನಿಲುವನ್ನು ಸಸೂರ್ ಅಲ್ಲಗೆಳೆಯುತ್ತಾನೆ.'' ಹೊರಗಿನ ಪ್ರಪಂಚದ ವಸ್ತು ಅಥವಾ ವಿಷಯಗಳನ್ನು ಹೇಳಲು ನಾವು ಪದಗಳನ್ನು ಬಳಸುತ್ತೇವೆ. ಉದಾಹರಣೆಗೆ ಬೆಕ್ಕು ಎನ್ನುವಾಗ ನಮ್ಮ ಮುಂದೆ ಬೆಕ್ಕಿನ ಒಂದು ಚಿತ್ರಣ ಬರುತ್ತದೆ ಅಥವಾ ಬೆಕ್ಕಿಂದ ಬೆಕ್ಕು ಎನ್ನುವ ಪದ ಹುಟ್ಟಿದೆ ಎಂದು ತಿಳಿಯುತ್ತೇವೆ. ಆದರೆ ಬೇರೆ ಬೇರೆ ಸಂಸ್ಕೃತಿಗಳು ಬೆಕ್ಕನ್ನು ಸೂಚಿಸಲು ಬೆಕ್ಕು ಎನ್ನುವ ಪದವನ್ನು ಬಳಸುವುದಿಲ್ಲ. ಇಂಗ್ಲೀಷಲ್ಲಿ ಕೇಟ್ ಎಂದರೆ ಇಂಗ್ಲೀಷ್ ಬಲ್ಲವರಿಗೆ ಬೆಕ್ಕೆಂದು ತಿಳಿಯುತ್ತದೆ. ಅದೇ ರೀತಿಯಲ್ಲಿ ತಮಿಳು, ಮಲೆಯಾಳ, ಹಿಂದಿ ಹೀಗೆ ಬೇರೆ ಬೇರೆ ಭಾಷೆಯಲ್ಲಿ ಬೇರೆ ಬೇರೆ ಪದಗಳು ಬೆಕ್ಕನ್ನು ಸೂಚಿಸಲು ಬಳಕೆಯಲ್ಲಿವೆ. ಅದುದರಿಂದ ಬೆಕ್ಕು ಎನ್ನುವ ಪದ ಬೆಕ್ಕು ಎನ್ನುವ ಪ್ರಾಣಿಯಿಂದ ಉದ್ಭವ ಆಗಿದೆ ಎನ್ನುವಂತಿಲ್ಲ. ಅದರ ಬದಲು ಭಾಷೆ ಸಮುದಾಯಗಳು ಕೆಲವೊಂದು ಪ್ರಾಣಿಗಳನ್ನು ಗುರುತಿಸಲು ಕೆಲವೊಂದು ಪದಗಳನ್ನು ಸೃಷ್ಟಿಸಿವೆ. ಆ ಪದಗಳಿಗೆ ಅರ್ಥಬರುವುದು ಪದ ಮತ್ತು ಅದು ಸೂಚಿಸುವ ವಸ್ತುವಿನಿಂದ ಅಲ್ಲ; ಆ ಪದಕ್ಕೆ ಅಂತಹ ಅರ್ಥ ಇದೆ ಎಂದು ಒಪ್ಪಿಕೊಂಡಿರುವ ಜನ ಸಮುದಾಯಗಳಿಂದ. ಇದೊಂದು ಬಗೆಯಲ್ಲಿ ಮಕ್ಕಳ ಆಟದಂತೆ. ಅಪ್ಪ, ಅಮ್ಮ, ಊಟ, ಆಟ ಇತ್ಯಾದಿಗಳನ್ನು ಆಟಕ್ಕಾಗಿ ಮಕ್ಕಳು ಒಪ್ಪಿಕೊಂಡಿರುತ್ತಾರೆ. ಅಂದರಂತೆ ಆಟ ಆಡುತ್ತಾರೆ. ಈ ಒಪ್ಪಂದವನ್ನು ಮುರಿದಾಗ ಆಟ ಮುಂದುವರಿಯುವುದಿಲ್ಲ ಅಥವಾ ಒಪ್ಪಂದವನ್ನು ಹೇರಲು ಪ್ರಯತ್ನಗಳು ನಡೆಯುತ್ತದೆ.

ರಸ್ತೆ ಬದಿಯ ಸೈನ್ ಬೋರ್ಡ್‌ಗಳ ರೀತಿಯಲ್ಲಿ. ಕೆಂಪು, ಹಳದಿ ಮತ್ತು ಹಸಿರು ಚಿಹ್ನೆಗಳ ರೀತಿಯಲ್ಲಿ, ಕೆಂಪು ಬಂದಾಗ ನಿಲ್ಲು, ಹಳದಿ ಬಂದಾಗ ರೇಡಿಯಾಗು ಮತ್ತು ಹಸಿರು ಬಂದಾಗ ಹೊರಡು ಎನ್ನುವ ಅರ್ಥ ನಮ್ಮ ಸಾಮಾಜಿಕ ಸಂಘಟನೆಗಳಿಂದ ಬಂದಿದೆ. ಇದೇ ರೀತಿಯಲ್ಲಿ ನಮ್ಮ ಭಾಷೆ ಕೂಡ ಅರ್ಥ ಪಡೆದುಕೊಳ್ಳುವುದು ಅದರ ಬಳಕೆಯಿಂದ ಅಂದರೆ ದಿನನಿತ್ಯದ ವ್ಯವಹಾರದಲ್ಲಿ ಭಾಷೆ ಅರ್ಥ ಪಡೆದುಕೊಳ್ಳುತ್ತದೆ ಹೊರತು ನಿರ್ದಿಷ್ಟ ಪದಕ್ಕೆ ನಿರ್ದಿಷ್ಟ ಅರ್ಥ ಇದೆ ಎನ್ನುವ ಕಾರಣಕ್ಕಾಗಿ ಅಲ್ಲ. ಆದುದರಿಂದ ಇಟಿಮಲಾಜಿ ಅಥವಾ ಪದದ ವ್ಯುತ್ಪತ್ತಿ ಅಥವಾ ಮೂಲ ಹುಡುಕುವುದರಿಂದ ಏನೇನು ಸಾಧಿಸಿದಂತಾಗುವುದಿಲ್ಲ ಎಂದು ಸಸೂರ್ ವಾದಿಸುತ್ತಾನೆ. ಇದೇ ಕ್ರಮವನ್ನು ಸಂಸ್ಕೃತಿ ಅಧ್ಯಯನಕ್ಕೂ ಅನ್ವಯಿಸಕೊಳ್ಳಬಹುದು. ಸಂಸ್ಕೃತಿ ಅಧ್ಯಯನ ಮಾಡುವಾಗ ಸಂಸ್ಕೃತಿಯ ಮೂಲವನ್ನು ಹುಡುಕುವುದು ಅಥವಾ ಸಂಸ್ಕೃತಿಯನ್ನು ಕೆಲವೊಂದು ಸ್ಥಾಪಿತ ಗುಣಲಕ್ಷಣಗಳೊಂದಿಗೆ ಗುರುತಿಸುವುದು ಒಂದು ಒಪ್ಪಿತ ವಿಧಾನ. ಆದರೆ ಈ ವಿಧಾನ ಒಂದು ವಿಧದಲ್ಲಿ ಭಾಷಾ ಶಾಸ್ತ್ರದಂತೆ ಪದದಲ್ಲೇ ಅರ್ಥ ಇದೆ ಎಂದು ಹೇಳಿದಂತಾಗುತ್ತದೆ. ದಿನನಿತ್ಯದ ಭಾಷೆಯ ಬಳಕೆಯಲ್ಲಿ ಹೇಗೆ ಅರ್ಥ ಪಡೆದುಕೊಳ್ಳುತ್ತದೋ ಇದೇ ರೀತಿಯಲ್ಲಿ ಸಂಸ್ಕೃತಿ ಕೂಡ ದಿನನಿತ್ಯದ ವ್ಯವಹಾರಗಳಲ್ಲಿ ವ್ಯಾಖ್ಯಾನಗೊಳ್ಳುತ್ತದೆ ಮತ್ತು ಅರ್ಥ ಪಡೆದುಕೊಳ್ಳುತ್ತದೆ. ಹೀಗೆ ಸಂಶೋಧನೆ ಕೂಡ. ಸಂಶೋಧನೆ ಎಂದರೆ ಸತ್ಯ ಅಥವಾ ಸುಳ್ಳಿನ ಹುಡುಕಾಟವಲ್ಲ. ಸತ್ಯ ಅಥವಾ ಸುಳ್ಳನ್ನು ಹೇಗೆ ಸಮುದಾಯಗಳು ಕಟ್ಟಿಕೊಳ್ಳುತ್ತವೆ ಎನ್ನುವುದನ್ನು ಅರ್ಥಮಾಡಿಕೊಳ್ಳುವುದು ಸಂಶೋಧನೆ.

ಸಂಶೋಧನೆಯ ತಾತ್ವಿಕ ನಿಲುವುಗಳು ಸತತವಾಗಿ ವಿಮರ್ಶೆಗೆ ಒಳಗಾಗುತ್ತಿವೆ. ಹೊಸ ಹೊಸ ತಾತ್ವಿಕ ನಿಲುವುಗಳು ಮುಂಚೂಣಿಗೆ ಬರುತ್ತಲೇ ಇರುತ್ತವೆ. ಜತೆಗೆ ಸಂಶೋಧನೆಯ ತಾತ್ವಿಕ ಚೌಕಟ್ಟನ್ನು ತೀರ್ಮಾನಿಸುವುದರಲ್ಲಿ ರಾಜಕೀಯ ಅಧಿಕಾರ ಮಹತ್ವದ ಪಾತ್ರ ವಹಿಸುವುದಿಲ್ಲ ಎನ್ನುವ ತೀರ್ಮಾನಕ್ಕೆ ಬರಬಹುದು. ರಾಜಕೀಯ ಅಧಿಕಾರಕ್ಕಿಂತ ಹೆಚ್ಚು ವಿವಿಧ ಚಿಂತನ ನೆಲೆಗಳು ತಮ್ಮದೇ ಕ್ರಮದಲ್ಲಿ ಸಂಶೋಧನೆಯ ತಾತ್ವಿಕ ನೆಲೆಗಟ್ಟನ್ನು ಪ್ರಭಾವಿಸಲು ಪ್ರಯತ್ನಿಸುತ್ತವೆ. ಸಂಶೋಧನೆಯ ತಾತ್ವಿಕ ಚೌಕಟ್ಟನ್ನು ನಿರ್ಮಿಸುವಲ್ಲಿ ಬಹುತ್ವ ಕೆಲಸ ಮಾಡುತ್ತಿದೆಯೆಂದು ಹೇಳಬಹುದು. ಆದರೆ ಸಂಶೋಧನ ಸಾಂಸ್ಥಿಕ ಚೌಕಟ್ಟನ್ನು ಪ್ರಜೆಗಳಿಂದ ಆಯ್ಕೆಯಾದ ಪ್ರತಿನಿಧಿಗಳೇ ತೀರ್ಮಾನಿಸಿದರೂ ಅದು ಪ್ರಜೆಗಳ ಆಶೋತ್ತರಗಳನ್ನು ಬಿಂಬಿಸುತ್ತದೆ ಎನ್ನಲಾಗುವುದಿಲ್ಲ. ಆದಕ್ಕೆ ಒಂದು ಕಾರಣ ಪರೋಕ್ಷ ಪ್ರಜಾಪ್ರಭುತ್ವ-ಪ್ರತಿನಿಧಿಗಳು ಪ್ರಜೆಗಳ ಪರವಾಗಿ ನಿರ್ಧಾರ ತಳೆಯುತ್ತಾರೆ. ಅಂದರೆ ಪ್ರಜೆಗಳಿಂದ ಆಯ್ಕೆಯಾದ ಪ್ರತಿನಿಧಿಗಳು ಎಂ.ಎಲ್.ಎ., ಎಂ.ಪಿ.ಗಳು ಪ್ರಜೆಗಳ ಪರವಾಗಿ ನಿರ್ಧಾರ ಕೈಗೊಳ್ಳುತ್ತಾರೆ. ತಾತ್ವಿಕವಾಗಿ ಜನಪ್ರತಿನಿಧಿಗಳು ಕೈಗೊಳ್ಳುವ ನಿರ್ಣಯಗಳು ಜನಪರವಾಗಿರಬೇಕು. ಆದರೆ ವಾಸ್ತವದಲ್ಲಿ ಆ ರೀತಿ ಇರುವುದಿಲ್ಲ. ಎಷ್ಟೋ ಸಂದರ್ಭ ಗಳಲ್ಲಿ ಜನ ಪ್ರತಿನಿಧಿಗಳು ತಳೆಯುವ ನಿರ್ಧಾರಗಳು ಜನರ ಆಸಕ್ತಿಗೆ ಪೂರಕವಾಗಿರುವುದಿಲ್ಲ. ಜನಪ್ರತಿನಿಧಿಗಳು ತಾವು ಪ್ರತಿನಿಧಿಸುವ ಜನರ ಆಸಕ್ತಿಗೆ ಪೂರಕವಾಗುವ ನಿರ್ಣಯಗಳ

ಬದಲು ತಮ್ಮ ಸ್ವಂತ (ಜನಪ್ರತಿನಿಧಿಗಳ) ಆಸಕ್ತಿಗಳಿಗೆ ಪೂರಕವಾಗುವ ನಿರ್ಣಯಗಳನ್ನು ಅಥವಾ ಪಾಲಿಸಿಗಳನ್ನು ಅಥವಾ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆ.[೧೫] ಈ ಸ್ಥಿತಿಗೆ ಬಹುದೊಡ್ಡ ಕಾರಣ ಪ್ರತಿನಿಧಿಗಳ ಮೂಲಕ ನಡೆಸುವ ಆಡಳಿತದ ಬಗ್ಗೆ ಪ್ರಜೆಗಳಿಗಿರುವ ತಿಳುವಳಿಕೆಯ ಕೊರತೆ, ಬಡತನ, ಅನಕ್ಷರತೆ, ಜನಮತ ಗಳಿಸಲು ಬಳಸುವ ತಂತ್ರ (ಜಾತಿ, ಧರ್ಮ, ಭಾಷೆ, ದುಡ್ಡು ಇತ್ಯಾದಿ) ಇತ್ಯಾದಿಗಳು ಪ್ರಜಾಪ್ರಭುತ್ವ ಆಡಳಿತ ತಿಳುವಳಿಕೆಯ ಕೊರತೆಯನ್ನು ಪ್ರಭಾವಿಸುತ್ತವೆ. ಈ ಎಲ್ಲ ಕಾರಣಗಳಿಂದ ಪ್ರಜೆಗಳ ಆಸಕ್ತಿಗೆ ಭಿನ್ನವಾದ ಆಸಕ್ತಿಗಳನ್ನು ಹೊಂದಿರುವವರು ಪ್ರತಿನಿಧಿಗಳಾಗಿ ಆಯ್ಕೆಯಾಗಬಹುದು. ಇಂಥವರು ತಮ್ಮ ಆಸಕ್ತಿಯನ್ನು ಮುಂದುವರಿಸಲು ಪೂರಕವಾಗುವ ಸಂಶೋಧನ ಸಾಂಸ್ಥಿಕ ಚೌಕಟ್ಟನ್ನು ಮತ್ತು ತಾತ್ವಿಕ ಚೌಕಟ್ಟನ್ನು ಮುಂಚೂಣಿಗೆ ತರಲು ಪ್ರಯತ್ನಿಸಬಹುದು. ನಮ್ಮಲ್ಲಿ ನಡೆಯುವ ಖಾಸಗೀಕರಣ (ಆರ್ಥಿಕ ನೀತಿ ಬದಲಾವಣೆಗಳು) ಇದಕ್ಕೆ ಉತ್ತಮ ಉದಾಹರಣೆಯಾಗಬಹುದು. ಖಾಸಗೀಕರಣ ಆರ್ಥಿಕ ನೀತಿಯನ್ನು ಜಾರಿಗೆ ತಂದ ರಾಜಕೀಯ ಪಕ್ಷ (ಕಾಂಗ್ರೆಸ್) ಖಾಸಗೀಕರಣಕ್ಕಾಗಿ ಮತ ಯಾಚಿಸಿಲ್ಲ. ಸೆಕ್ಯುಲರಿಸಂ, ಬಡತನ ನಿವಾರಣೆ ಇತ್ಯಾದಿ ಹೆಸರಲ್ಲಿ ಮತಯಾಚನೆ ಮಾಡಿದೆ. ಬಹುತೇಕ ಬಡವರು ತಮ್ಮ ಬಡತನ ನಿವಾರಣೆಯಾದೀತೆಂದು ಮತ ನೀಡಿದ್ದಾರೆ.

ಈ ಬಗೆಯಲ್ಲಿ ಆಯ್ಕೆಯಾದ ಸರಕಾರ ಖಾಸಗೀಕರಣಕ್ಕೆ ಒತ್ತು ನೀಡುವ ಆರ್ಥಿಕ ನೀತಿಯನ್ನು ಜಾರಿಗೆ ತಂದಿದೆ. ಖಾಸಗೀಕರಣ ಆರಂಭವಾದ ನಂತರ ಖಾಸಗಿ ಸಂಶೋಧನ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಮಾತ್ರ ಹೆಚ್ಚಾಗಿರುವುದಿಲ್ಲ. ಮಾರುಕಟ್ಟೆ ಆರ್ಥಿಕ ವ್ಯವಸ್ಥೆಗೆ ಪೂರಕವಾದ ತಾತ್ವಿಕ ಚಿಂತನೆಗಳು ಮುಂಚೂಣಿಗೆ ಬಂದಿವೆ. ಅಷ್ಟುಮಾತ್ರವಲ್ಲ ಅವುಗಳು ಯಾಜಮಾನಿಕ ಸ್ಥಾನವನ್ನು ಪಡೆದಿವೆ.[೧೬] ಯಜಮಾನಿಕ ಸ್ಥಾನದಲ್ಲಿರುವ ತಾತ್ವಿಕ ಚಿಂತನೆಗಳು ಹೆಚ್ಚು ಹೆಚ್ಚು ಪ್ರಚಾರದಲ್ಲಿರುತ್ತವೆ ಮತ್ತು ಹೆಚ್ಚು ಹೆಚ್ಚು ಬಳಕೆಯಲ್ಲಿರುತ್ತವೆ. ಅಂದರೆ ಇವುಗಳು ನೇರವಾಗಿ ಸಂಶೋಧಕರ ಜ್ಞಾನದ ಪರಿಮಿತಿಯನ್ನು ಪ್ರಭಾವಿಸುತ್ತವೆ. ನಾವು ಕೇಳುವ ಸಂಶೋಧನ ಪ್ರಶ್ನೆ ನಮ್ಮ ಜ್ಞಾನದ ಪರಿಮಿತಿ ಯೊಳಗಿರುತ್ತದೆ. ಈಗಾಗಲೇ ಆಗಿರುವ ಎಲ್ಲ ಸಂಶೋಧನೆಗಳನ್ನು ನೋಡುವುದು ಸಂಶೋಧನ ಪ್ರಶ್ನೆ ರೂಪಿಸಿಕೊಳ್ಳುವಲ್ಲಿ ಮಹತ್ವದ ಹಂತ. ಯಜಮಾನಿಕೆಯಲ್ಲಿರುವ ತಾತ್ವಿಕ ಚಿಂತನೆಗಳೇ ಬೇರೆ ಬೇರೆ ರೂಪದಲ್ಲಿ ಈಗಾಗಲೇ ಆಗಿರುವ ಸಂಶೋಧನೆಗಳ ರೂಪದಲ್ಲಿ ಸಂಶೋಧಕರನ್ನು ಎಲ್ಲ ಕಡೆ ಎದುರಾಗುತ್ತವೆ. ವಾಸ್ತವದಲ್ಲಿ ಒಂದೇ ತಾತ್ವಿಕ ನಿಲುವಿನ ವಿವಿಧ ಆಯಾಮಗಳನ್ನು ನೋಡುವುದಾದರೂ ಆರಂಭಿಕ ಸಂಶೋಧಕರಿಗೆ ವಿವಿಧ ತಾತ್ವಿಕ ನಿಲುವುಗಳನ್ನು ನೋಡಿದ ಪರಿಣಾಮವನ್ನು ಮಾಡುತ್ತವೆ. ಜತೆಗೆ ಆ ಸಂಶೋಧನೆಗಳ ಮೂಲಭೂತ ಗ್ರಹಿತಗಳು ಸಂಶೋಧಕರ ಸಂಶೋಧನ ಪ್ರಶ್ನೆಗಳನ್ನು ನಿರ್ವಹಿಸುತ್ತವೆ. ನಿಯೋಕ್ಲಾಸಿಕಲ್ ಎಕಾನಮಿಕ್ಸ್‌ನ ಮೂಲಭೂತ ಗ್ರಹಿತಗಳು ಮುಕ್ತ ಮಾರುಕಟ್ಟೆ, ಸಂಪನ್ಮೂಲಗಳ ಖಾಸಗಿ ಹೊಂದುವಿಕೆ ಇತ್ಯಾದಿಗಳು. ನಿಯೋಕ್ಲಾಸಿಕಲ್ ಎಕಾನಮಿಕ್ಸ್‌ನ ಮಿತಿಯೊಳಗೆ ಸಂಶೋಧನೆ ಮಾಡುವವರು

ಈ ಮೂಲಭೂತ ಗ್ರಹಿಕೆಗಳನ್ನು ಅಲ್ಲಗೆಳೆಯುವ ಸಂಶೋಧನ ಪ್ರಶ್ನೆ ಕೇಳಲು ಸಾಧ್ಯವೇ ಇಲ್ಲ. ನಿಯೋ ಕ್ಲಾಸಿಕಲ್ ಎಕಾನಮಿಕ್ಸ್‌ನ ತಿಳುವಳಿಕೆ ಅನುಸಾರ ಸಂಬಳ ಏರಿಸಿದರೆ ಉದ್ಯೋಗ ಸೃಷ್ಟಿಯಾಗುವುದು ಕಡಿಮೆ ಆಗುತ್ತದೆ ಎನ್ನುವ ಗ್ರಹಿತವಿದೆ. ಯಾಕೆಂದರೆ ಸಂಬಳ ಹೆಚ್ಚಿಸಿದರೆ ಬಂಡವಾಳ ಶೇಖರಣೆಗೆ ಹೊಡೆತ ಬೀಳುವುದು ಮತ್ತು ಬಂಡವಾಳ ಶೇಖರಣ ಹೊಡೆತ ಬಿದ್ದರೆ ವಿನಿಯೋಜನೆ ಮಾಡುವುದು ಕಡಿಮೆಯಾಗುತ್ತದೆ. ಹಣವಿದ್ದವರ ವಿನಿಯೋಜನೆಯಿಂದಲೇ ಅರ್ಥ ವ್ಯವಸ್ಥೆ ನಡೆಯುವುದು. ಯಾಕೆಂದರೆ ಸಂಬಳ ಹೆಚ್ಚು ಪಡೆದ ನೌಕರರು ತಮ್ಮ ಹೆಚ್ಚಿನ ಸಂಬಳವನ್ನು ಹೆಚ್ಚಿನ ಸವಲತ್ತುಗಳನ್ನು ಖರೀದಿಸಲು ಬಳಸುತ್ತಾರೆ; ಉಳಿತಾಯ ಮಾಡುವುದಿಲ್ಲ. ಉಳಿತಾಯ ಮಾಡದಿದ್ದರೆ ಅದು ಬಂಡವಾಳವಾಗಿ ಪರಿವರ್ತನೆಗೊಳ್ಳು ವುದಿಲ್ಲ. ಆದುದರಿಂದ ಬಂಡವಾಳವನ್ನು ವೃದ್ಧಿಸುವ ಎಲ್ಲ ಕ್ರಮಗಳು ಸಕರಾತ್ಮಕವಾಗಿ ಕಂಡು ಬಂಡವಾಳವನ್ನು ಕುಗ್ಗಿಸುವ ಕ್ರಮಗಳು ನಕರಾತ್ಮಕವಾಗಿ ಕಾಣುತ್ತವೆ. ಇಂತಹ ದೃಷ್ಟಿಕೋನ ಸಂಶೋಧನ ಪ್ರಶ್ನೆಗಳನ್ನು ಮತ್ತು ಆ ಮೂಲಕ ಮಂಡಿಸುವ ವಾದಗಳನ್ನು ಪ್ರಭಾವಿಸುತ್ತವೆ.

ಸಂಶೋಧನೆಯನ್ನು ವಾದ ಪ್ರತಿಪಾದನೆಯ ಪ್ರಕ್ರಿಯೆ ಎಂದು ವ್ಯಾಖ್ಯಾನಿಸಿದ ಕೂಡಲೇ ಹಲವಾರು ಪ್ರಶ್ನೆಗಳು ಅಥವಾ ಸಮಸ್ಯೆಗಳು ಎದುರಾಗುತ್ತವೆ. ಯಾವುದೋ ಒಂದು ಸಂಗತಿಯ ವಿವಿಧ ಆಯಾಮಗಳನ್ನು ಪರಿಚಯಿಸುವ ವಿವರಣಾತ್ಮಕ ಥೀಸಿಸ್ ಒಂದು ಸಂಶೋಧನೆಯಲ್ಲವೇ ಎನ್ನುವ ಪ್ರಶ್ನೆ ಮೂಡುತ್ತದೆ. ಇಲ್ಲಿ ವಾದ ಏನೇನೂ ಇಲ್ಲ. ಯಾವುದೋ ಒಂದು ಊರು, ಅಲ್ಲಿ ಇರುವ ಒಟ್ಟು ಕುಟುಂಬಗಳು ಅವುಗಳ ಜಾತಿ ಯಾ ಧರ್ಮವಾರು ವಿಂಗಡನೆ, ಆ ಕುಟುಂಬಗಳ ಆರ್ಥಿಕ ಸಾಮಾಜಿಕ ಸ್ಥಾನಮಾನ ಇತ್ಯಾದಿಗಳನ್ನು ಬಿಡಿಬಿಡಿಯಾಗಿ ವಿವರಿಸಲಾಗುವುದು. ಅವುಗಳು ಎಲ್ಲಿವೆ? ಹೇಗಿವೆ? ಏನಾಗಿವೆ? ಇತ್ಯಾದಿ ಪ್ರಶ್ನೆಗಳಿಗೆ ಮಾತ್ರ ಸಂಶೋಧನೆಯಲ್ಲಿ ಉತ್ತರಿಸಲು ಪ್ರಯತ್ನಿಸ ಲಾಗುವುದು. ಇಡೀ ಸಂಶೋಧನೆಯಲ್ಲಿ ಎಲ್ಲಿ ಕೂಡ ಅವುಗಳು ಆ ರೀತಿಯಲ್ಲಿ ಯಾಕಿವೆ? ಅಥವಾ ಹೆಚ್ಚು ಕಡಿಮೆ ಇದ್ದರೆ ಯಾಕೆ ಹೆಚ್ಚು ಕಡಿಮೆ ಇವೆ? ಎನ್ನುವ ಪ್ರಶ್ನೆಯನ್ನು ಹಾಕಿ ಕೊಂಡಿಲ್ಲ. ಇಂತಹ ಸಂಶೋಧನೆಗಳನ್ನು ವಾದ ಮಂಡನೆಯೆಂದು ಪರಿಗಣಿಸುವುದು ಹೇಗೆ? ಅದೇ ರೀತಿಯಲ್ಲಿ ತುಲನಾತ್ಮಕ ಸಂಶೋಧನೆಯಲ್ಲಿ ಎರಡು ಸಂಗತಿಗಳನ್ನು ಹೋಲಿಸಿ ಒಂದು ಮತ್ತೊಂದಕ್ಕಿಂತ ಭಿನ್ನ ಅಥವಾ ಒಂದು ಮತ್ತೊಂದರೊಂದಿಗೆ ಯಾವೆಲ್ಲ ಸಂಗತಿಗಳಲ್ಲಿ ಸಾಮ್ಯತೆ ಹೊಂದಿದೆ ಎಂದು ಹೇಳಲಾಗುವುದು. ಒಂದು ಮತ್ತೊಂದಕ್ಕಿಂತ ಉತ್ತಮ ಅಥವಾ ಕೆಟ್ಟದು ಎನ್ನುವ ತೀರ್ಮಾನಕ್ಕೆ ಬರುವುದಿಲ್ಲ. ಇಂತಹ ಸಂದರ್ಭದಲ್ಲಿ ಸಂಶೋಧನೆಯನ್ನು ವಾದ ಮಂಡನೆಯೆಂದು ನೋಡುವುದು ಹೇಗೆ? ಎಂದು ಪ್ರಶ್ನಿಸಬಹುದು. ಮೇಲ್ನೋಟಕ್ಕೆ ಈ ಪ್ರಶ್ನೆ ಸರಿಯೆಂದು ಕಾಣಬಹುದು. ಆದರೆ ಇಂತಹ ವಿವರಣಾತ್ಮಕ ಪ್ರಬಂಧಗಳನ್ನು ವಿಮರ್ಶಾತ್ಮಕವಾಗಿ ಓದಿದರೆ ಅಲ್ಲೂ ಅಡಗಿರುವ ವಾದ ಪ್ರತಿಪಾದನೆಯ ಪ್ರಕ್ರಿಯೆಯನ್ನು ಅರ್ಥಮಾಡಿ ಕೊಳ್ಳಬಹುದು. ಆಯ್ಕೆಗಳು ವಾದ ಪ್ರತಿಪಾದನೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಸಂಶೋಧನ ವಿಷಯ ಆಯ್ಕೆಯಿಂದಲೇ ವಾದ ಪ್ರತಿಪಾದನೆ ಆರಂಭವಾಗುತ್ತದೆ. ಹಲವಾರು ಸಂಶೋಧನ ಸಮಸ್ಯೆಗಳು ಸಂಶೋಧಕರ ಮುಂದಿರುವಾಗ ಯಾವುದೋ ಒಂದು ವಿಷಯವನ್ನು ಆಯ್ಕೆ ಮಾಡಿಕೊಂಡು ಸಂಶೋಧನೆ ನಡೆಸುತ್ತಾರೆ. ಸಂಶೋಧನೆಗೆ ಅರ್ಹವಾಗಿರುವ ಹಲವಾರು ಇತರ ಸಮಸ್ಯೆಗಳು ಆಯ್ಕೆಯಾಗುವುದಿಲ್ಲ. ನಿರ್ದಿಷ್ಟ ವಿಷಯ ಆಯ್ಕೆ ಮಾಡಲು ಪ್ರತಿ ಸಂಶೋಧಕರು ಅವರದ್ದೇ ಆದ ತರ್ಕಗಳನ್ನು ನೀಡಬೇಕು. ಅಂದರೆ ವಿಷಯ ಆಯ್ಕೆಯಿಂದಲೇ ಆರಿಸಿಕೊಂಡ ವಿಷಯದ ಪರವಾದ ವಾದವನ್ನು ಸಂಶೋಧಕರು ಮಂಡಿಸಲಾರಂಭಿಸುತ್ತಾರೆ.[೧೭] ವಿವರಣಾತ್ಮಕ ಸಂಶೋಧನ ವಿಷಯವೊಂದರ ವ್ಯಾಪ್ತಿಯೊಳಗೆ ಹಲವಾರು ವಿವರಣಾಯೋಗ್ಯ ಸಂಗತಿಗಳಿರಬಹುದು. ಆದರೆ ಸಂಶೋಧಕರು ಎಲ್ಲ ಸಂಗತಿಗಳನ್ನು ವಿವರಿಸುತ್ತಾರೆ ಎನ್ನುವ ಗ್ಯಾರಂಟಿ ಇರುವುದಿಲ್ಲ. ಒಂದು ವೇಳೆ ಎಲ್ಲ ಸಂಗತಿಗಳನ್ನು ಪರಿಗಣಿಸಿದರೂ ಎಲ್ಲವನ್ನು ಸಮ ಪ್ರಮಾಣದಲ್ಲಿ ಪರಿಗಣಿಸುತ್ತಾರೆ ಎನ್ನಲಾಗುವುದಿಲ್ಲ. ಗೊತ್ತಿದ್ದೊ ಗೊತ್ತಿಲ್ಲದೆಯೋ ಕೆಲವೊಂದು ಸಂಗತಿಗಳು ಹೆಚ್ಚಿನ ಪ್ರಾಮುಖ್ಯತೆ ಪಡೆದು ಇನ್ನು ಕೆಲವು ಸಂಗತಿಗಳು ಮಹತ್ವ ಪಡೆಯದಿರಬಹುದು. ಈ ಬಗೆಯಲ್ಲಿ ಮಾಡುವ ವ್ಯತ್ಯಾಸಗಳನ್ನು ಯಾಕೆ ಮಾಡಿದ್ದೇವೆಯೆಂದು ಸಂಶೋಧಕರು ವಿವರಿಸಬಹುದು ಅಥವಾ ವಿವರಿಸದಿರಬಹುದು. ವಿವರಿಸಿದರೆ ಮಹತ್ವ ನೀಡಿರುವ ಸಂಗತಿಗಳ ಪರ ಸಂಶೋಧಕರು ಮಾಡುವ ವಾದ ನೇರ ಗೋಚರವಾಗುತ್ತದೆ. ವಿವರಿಸದಿದ್ದರೆ ಕೆಲವು ಸಂಗತಿಗಳು ಪ್ರಾಮುಖ್ಯತೆ ಪಡೆದು ಮತ್ತೆ ಕೆಲವು ಪ್ರಾಮುಖ್ಯತೆ ಪಡೆಯದಿರುವ ಮೂಲಕ ಸಂಶೋಧಕರ ವಾದ ಪರೋಕ್ಷವಾಗಿ ಸಾಧಿತವಾಗುತ್ತದೆ.

ತುಲನಾತ್ಮಕ ಸಂಶೋಧನೆಗಳಲ್ಲಿ ಎರಡು ಅಥವಾ ಹೆಚ್ಚಿನ ಸಂಗತಿಗಳನ್ನು ಹೋಲಿಸಿ ಅವುಗಳ ನಡುವೆ ಇರುವ ಸಾಮ್ಯತೆಗಳನ್ನು ಅಥವಾ ವ್ಯಾತ್ಯಾಸಗಳನ್ನು ವಿವರಿಸಲಾಗುವುದು. ವ್ಯತ್ಯಾಸ ಹಾಗೂ ಸಾಮ್ಯತೆಗಳನ್ನು ಮಾತ್ರ ಹೇಳಲಾಗುತ್ತದೆ ಒಂದು ಮತ್ತೊಂದಕ್ಕಿಂತ ಉತ್ತಮ ಅಥವಾ ಕೆಟ್ಟದು ಎನ್ನುವ ಮೌಲ್ಯ ತೀರ್ಮಾನ ಮಾಡುತ್ತಿಲ್ಲ ಎನ್ನಬಹುದು. ಈ ವಾದ ಮಾಡಲು ಬಹುಮುಖ್ಯ ಆಧಾರ ವಿಜ್ಞಾನದ ವಿಧಾನ ಅನುಸರಿಸುವ ಫೇಕ್ಟ್ ಬೇರೆ ಮೌಲ್ಯ ಬೇರೆ ಎನ್ನುವ ನಿಲುವು. ಭಾರತದ ಜನಸಂಖ್ಯೆ ನೂರು ಕೋಟಿ ದಾಟಿದೆ ಎನ್ನುವುದು ಮೇಲ್ನೋಟಕ್ಕೆ ಕೇವಲ ಒಂದು ಫೇಕ್ಟ್. ಇಲ್ಲಿ ಜಾಸ್ತಿಯಾಯಿತು ಅಥವಾ ಕಡಿಮೆ ಆಯಿತು ಎನ್ನುವ ಮೌಲ್ಯ ತೀರ್ಮಾನ ಏನೂ ಇಲ್ಲ ಎಂದು ವಾದಿಸಬಹುದು. ಆದರೆ ಇದೇ ಫೇಕ್ಟ್‌ನ್ನು ಹೇಳುವ ವಿಧಾನದಲ್ಲಿ ಈ ಫೇಕ್ಟ್ ಮೌಲ್ಯ ತೀರ್ಮಾನವನ್ನು ಒಳಗೊಂಡಿದೆಯೋ ಇಲ್ಲವೇ ಎಂದು ತೀರ್ಮಾನಿಸಬಹುದು. ಭಾರತದ ಜನಸಂಖ್ಯೆ ಒಂದು ಕೋಟಿ! ಎಂದು ಆಶ್ಚರ್ಯ ಚಿಹ್ನೆಯ ಜತೆಗೆ ಹೇಳಿದರೆ ಖಂಡಿತವಾಗಿಯೂ ಇಷ್ಟೊಂದು ಜನಸಂಖ್ಯೆಯೇ ಎನ್ನುವ ಮೌಲ್ಯ ತೀರ್ಮಾನ ಇದೆ. ಹೀಗೆ ಏನನ್ನು ಹೇಳುತ್ತೇವೆ ಎನ್ನುವುದು ಮೌಲ್ಯ ತೀರ್ಮಾನವನ್ನು ಒಳಗೊಂಡಿರದಿರಬಹುದು. ಆದರೆ ಹೇಗೆ ಹೇಳುತ್ತೇವೆ ಎನ್ನುವುದು ಮೌಲ್ಯ ತೀರ್ಮಾನವನ್ನು ಒಳಗೊಂಡಿರುತ್ತದೆ. ಎರಡು ಸಂಸ್ಕೃತಿಗಳನ್ನು ಹೋಲಿಸಿ ಒಂದು ಸಂಸ್ಕೃತಿಯ ಜನರು ಬಿಳಿ ಚರ್ಮದವರು, ಆರಡಿಗಿಂತ

ಹೆಚ್ಚು ಎತ್ತರ ಇದ್ದಾರೆ. ಬಹುತೇಕರು ಆರೋಗ್ಯ ದೇಹ ಪ್ರಕೃತಿಯನ್ನು ಹೊಂದಿದ್ದಾರೆ ಮತ್ತೊಂದು ಸಂಸ್ಕೃತಿಯ ಜನರು ಕಪ್ಪಿದ್ದಾರೆ, ಕುಳ್ಳಗಿದ್ದಾರೆ, ಕೃಶದೇಹ ಹೊಂದಿದ್ದಾರೆ ಎನ್ನುವ ಹೇಳಿಕೆ ಮೌಲ್ಯರಹಿತ ಹೇಳಿಕೆಯೇ? ಖಂಡಿತವಾಗಿಯೂ ಒಂದು ಸಂಸ್ಕೃತಿಯ ಜನರ ಬಣ್ಣ, ಎತ್ತರ ಮತ್ತು ಆರೋಗ್ಯಗಳ ದೃಷ್ಟಿಯಿಂದ ಮತ್ತೊಂದು ಸಂಸ್ಕೃತಿಯ ಜನರಿಗಿಂತ ಉತ್ತಮವಾಗಿದ್ದಾರೆ ಎನ್ನುವ ಮೌಲ್ಯ ತೀರ್ಮಾನ ಕೂಡ ಮೇಲಿನ ಹೇಳಿಕೆಯಲ್ಲಿ ಅಂತರ್ಗತಗೊಂಡಿದೆ. ಈ ಬಗೆಯ ಮೌಲ್ಯ ತೀರ್ಮಾನಗಳ ಜತೆಗೆ ಮೇಲಿನ ಪುಟಗಳಲ್ಲಿ ನೋಡಿದ ಯುರೋಸೆಂಟರ್‌ಡನೆಸ್ ಸಾಮ್ಯತೆಯನ್ನು ಮತ್ತು ವ್ಯತ್ಯಾಸವನ್ನು ಯಾವುದೋ ಒಂದು ಆದರ್ಶ ರೂಪದ ವ್ಯವಸ್ಥೆಯೊಂದಿಗೆ ತುಲನಾತ್ಮಕವಾಗಿ ನೋಡಿ ತೀರ್ಮಾನಿಸುವ ಪದ್ಧತಿ ಈಗಲೂ ಚಾಲ್ತಿಯಲ್ಲಿದೆ. ಪಶ್ಚಿಮದ ಶ್ರೀಮಂತ ದೇಶಗಳ ಸಂಸ್ಕೃತಿಗೆ ಹೋಲಿಸಿ ಮೌಲ್ಯ ತೀರ್ಮಾನ ಮಾಡುವುದು ಹೆಚ್ಚಿನ ಪ್ರಮಾಣದಲ್ಲಿ ಟೀಕೆಗೆ ಒಳಗಾಗಿದೆ. ಆದಾಗ್ಯೂ ನಮ್ಮ ಅಭಿವೃದ್ಧಿ ನೀತಿಗಳು ಇಂದು ಕೂಡ ಶ್ರೀಮಂತ ದೇಶಗಳ ಬೆಳವಣಿಗೆಯನ್ನು ಆಧರಿಸಿಯೇ ರೂಪುಗೊಳ್ಳುವುದು ಇನ್ನೂ ಕಡಿಮೆ ಆಗಿಲ್ಲ. ಜತೆಗೆ ಒಂದೇ ದೇಶ ಅಥವಾ ರಾಜ್ಯದೊಳಗಿನ ವಿವಿಧ ಸಂಸ್ಕೃತಿಗಳ ಹೋಲಿಸಿ ಮೌಲ್ಯ ತೀರ್ಮಾನ ಮಾಡುವುದು ಮತ್ತು ನಿರ್ಧಾರಕ್ಕೆ ಬರುವುದು ಕಡಿಮೆ ಆಗಿಲ್ಲ. ಆದುದರಿಂದ ತುಲನಾತ್ಮಕ ಅಧ್ಯಯನಗಳಲ್ಲಿ ಎರಡು ಸಂಗತಿಗಳ ಹೋಲಿಕೆ ಮಾತ್ರ ಇದೆ ವಾದ ಮಂಡನೆ ಏನೇನೂ ಇಲ್ಲ ಎನ್ನುವ ವಾದ ಸರಿಯಲ್ಲ. ಅಲ್ಲೂ ಮೌಲ್ಯ ತೀರ್ಮಾನಗಳಿವೆ ಮತ್ತು ವಾದ ಮಂಡನೆಗಳಿವೆ.

ಸಂಶೋಧನೆಯನ್ನು ಒಂದು ಒಪ್ಪಿತ ಚೌಕಟ್ಟಿನೊಳಗೆ ನಡೆಯುವ ವಾದ ಮಂಡನೆ ಅಥವಾ ಸತ್ಯ ಪ್ರತಿಪಾದನೆಯೆಂದು ವ್ಯಾಖ್ಯಾನಿಸುವುದಾದರೆ ವಾದ ಮಂಡಿಸುವ ಕಲೆಯನ್ನು ಕರಗತ ಮಾಡಿಕೊಂಡ ಯಾರು ಕೂಡ ಸುಳ್ಳನ್ನು ಸತ್ಯ ಮಾಡಬಹುದು ಅಥವಾ ಸತ್ಯವನ್ನು ಸುಳ್ಳು ಮಾಡಬಹುದ್ದಲ್ಲವೇ ಎನ್ನುವ ಪ್ರಶ್ನೆ ಮೂಡುತ್ತದೆ. ಸಂಶೋಧನೆಯನ್ನು ಒಂದು ಒಪ್ಪಿತ ಚೌಕಟ್ಟಿನೊಳಗೆ ನಡೆಯುವ ವಾದ ಮಂಡನೆಯ ದೃಷ್ಟಿಯಿಂದ ನೋಡುವುದಾದರೆ ಇಲ್ಲಿ ಸತ್ಯ ಅಥವಾ ಸುಳ್ಳಿನ ಪ್ರಶ್ನೆಗಳೇ ಬರುವುದಿಲ್ಲ. ಈ ವ್ಯಾಖ್ಯಾನದಲ್ಲಿ ಎದ್ದು ಕಾಣುವ ಅಂಶಗಳೆಂದರೆ ಒಂದು ಒಪ್ಪಿತ ಚೌಕಟ್ಟು, ಅದರೊಳಗೆ ನಡೆಯುವ ವಾದ ಪ್ರತಿಪಾದನ ಪ್ರಕ್ರಿಯೆ ಮತ್ತು ಇವುಗಳ ಬಗ್ಗೆ ಬಹುತೇಕರಿಗಿರುವ ನಂಬಿಕೆ. ಸಾಂಸ್ಥಿಕ ಚೌಕಟ್ಟು ಹೇಗೆ ನಿರ್ಮಾಣವಾಗುತ್ತದೆ ಮತ್ತು ವಾದ ಪ್ರತಿಪಾದನೆಯನ್ನು ಹೇಗೆ ಮಾಡಲಾಗುತ್ತದೆ ಎಂದು ಹಿಂದಿನ ಪುಟಗಳಲ್ಲಿ ನೋಡಿದ್ದೇವೆ. ವಯಸ್ಕರ ಮತದಾನ ಮೂಲಕ ಆಯ್ಕೆಗೊಂಡ ಪ್ರತಿನಿಧಿಗಳು ಸೃಷ್ಟಿಸುವ ಸಾಂಸ್ಥಿಕ ಚೌಕಟ್ಟನ್ನು ಬಹುತೇಕರ ಒಪ್ಪಿಗೆಯಿಂದ ಸೃಷ್ಟಿಸಿದ ಚೌಕಟ್ಟೆಂದು ವ್ಯಾಖ್ಯಾನಿಸಲಾಗುತ್ತಿದೆಯೆಂದು ಹಿಂದಿನ ಪುಟಗಳಲ್ಲಿ ನೋಡಿದ್ದೇವೆ. ಇಲ್ಲಿ ಬಹುತೇಕರ ನಂಬಿಕೆಯನ್ನು ಹೇಗೆ ಗುರುತಿಸಲಾಗುತ್ತದೆ ಎನ್ನುವುದನ್ನು ನೋಡುವ. ಬಹುತೇಕರ ಒಪ್ಪಿಗೆ ಪಡೆಯುವ ಪ್ರಕ್ರಿಯೆಯನ್ನು ಹೇಗೆ ಸಾಂಸ್ಥೀಕರಣ ಗೊಳಿಸಲಾಗಿದೆಯೋ ಅದೇ ರೀತಿಯಲ್ಲಿ ನಂಬಿಕೆಯನ್ನು ಪ್ರಕಟಪಡಿಸುವುದನ್ನು ಕೂಡ

ಸಾಂಸ್ಥೀಕರಣಗೊಳಿಸಲಾಗಿದೆ. ಸಮಾಜದ ಎಲ್ಲರೊಂದಿಗೆ ಚರ್ಚಿಸಿ ಸಂಶೋಧನ ಚೌಕಟ್ಟಿನ ಮೇಲಿನ ನಂಬಿಕೆಯನ್ನು ಪರಿಶೀಲಿಸುವುದಿಲ್ಲ. ಮಾಧ್ಯಮಗಳು, ಸಂಶೋಧನ ಸಂಸ್ಥೆಗಳು, ಪಬ್ಲಿಕ್ ಡೊಮೈನ್‌ನಲ್ಲಿರುವ ವಿದ್ವಾಂಸರು ಮುಂತಾದವರುಗಳು ಜನರ ಒಪ್ಪಿಗೆಯನ್ನು ಪ್ರತಿನಿಧೀಕರಿಸುವ ಮುಖ್ಯ ಏಜನ್ಸಿಗಳೆಂದು ಪರಿಗಣಿಸಲಾಗಿದೆ. ಇವರುಗಳು ಸಂಶೋಧನ ಚೌಕಟ್ಟು ಅದರ ಮೂಲ ಉದ್ದೇಶಕ್ಕನುಗುಣವಾಗಿ ಕಾರ್ಯನಿರ್ವಹಿಸುವುದಿಲ್ಲ ಎಂದು ಅಭಿಪ್ರಾಯಪಟ್ಟರೆ ಸಂಶೋಧನ ಚೌಕಟ್ಟು ಬಹುತೇಕರ ನಂಬಿಕೆಯನ್ನು ಕಳೆದು ಕೊಂಡಿದೆ ಎನ್ನುವ ತೀರ್ಮಾನಕ್ಕೆ ಬರಲಾಗುವುದು.[೧೮] ಜನರ ನಂಬಿಕೆಯನ್ನು ಪ್ರತಿನಿಧೀಕರಿಸುವ ಏಜನ್ಸಿಗಳು ಪ್ರತಿಪಾದಿಸುವ ಅಭಿಪ್ರಾಯಕ್ಕೂ ಜನ ಸಾಮಾನ್ಯರ ಅಭಿಪ್ರಾಯಕ್ಕೂ ತುಂಬಾ ವ್ಯತ್ಯಾಸ ಇರಬಹುದು. ಈ ವ್ಯತ್ಯಾಸಕ್ಕೆ ಬಹುಮುಖ್ಯ ಕಾರಣ ಸಮಾಜದಲ್ಲಿರುವ ಅಸಮಾನತೆಗಳು. ಈ ಅಸಮಾನತೆಗಳಿಂದಾಗಿ ಒಂದು ಸಮಷ್ಟಿಯೊಳಗೆ ಹಲವಾರು ಸಮಾಜಗಳು ರೂಪುಗೊಂಡಿವೆ ಮತ್ತು ಈ ಸಮಾಜಗಳು ಬಹುತೇಕ ಸಂದರ್ಭಗಳಲ್ಲಿ ವಿಭಿನ್ನ ಆಸಕ್ತಿಗಳನ್ನು ಪ್ರತಿನಿಧಿಸುತ್ತವೆ. ಇದರಿಂದಾಗಿ ಸಂಶೋಧನ ಕ್ಷೇತ್ರದ ಬೆಳವಣಿಗೆ ಮತ್ತು ಜನರ ದಿನನಿತ್ಯದ ಬದುಕಿಗೂ ಇರುವ ಸಂಬಂಧ ಅರಿವೇ ಇಲ್ಲದಿರುವ ಬಹುದೊಡ್ಡ ವರ್ಗ ರೂಪುಗೊಂಡಿದೆ. ಜತೆಗೆ ಸಮಾಜದ ಬೇರೆ ಬೇರೆ ವರ್ಗಕ್ಕೆ ಸೇರಿದವರು ಅವರವರ ವರ್ಗಾಸಕ್ತಿಗನುಗುಣವಾಗಿ ಒಂದೇ ವಿಷಯವನ್ನು ಸರಿಯೆಂದೋ ಅಥವಾ ತಪ್ಪೆಂದೋ ಪರಿಗಣಿಸಬಹುದು. ಹಿಂದುಳಿದವರ್ಗದವರಿಗೆ ಮೀಸಲಾತಿ ನೀಡುವುದು ಮೇಲ್ಜಾತಿ ವಿದ್ಯಾರ್ಥಿಗಳ ಪ್ರಕಾರ ಸರಿಯಲ್ಲ. ಆದರೆ ಹಿಂದುಳಿದ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳ ಪ್ರಕಾರ ಸರಿ. ಇಂತವರು ಮೀಸಲಾತಿ ಮೇಲಿನ ಸಂಶೋಧನ ಬರಹಗಳನ್ನು ಅವರವರ ಆಸಕ್ತಿಗನುಗುಣವಾಗಿ ವಿಮರ್ಶೆ ಮಾಡಬಹುದು ಮತ್ತು ಇಡೀ ಸಂಶೋಧನ ಪ್ರಕ್ರಿಯೆಯನ್ನು ಮೌಲ್ಯಮಾಪನ ಕೂಡ ಮಾಡಬಹುದು. ಹೀಗೆ ಸಂಶೋಧನೆಯಲ್ಲಿ ಸತ್ಯ ಸುಳ್ಳುಗಳಿಲ್ಲ ಆಸಕ್ತಿಗಳು (ಸ್ವಹಿತಾಸಕ್ತಿ ಇರಬಹುದು ಅಥವಾ ಸ್ವಜನ ಆಸಕ್ತಿ ಇರಬಹುದು ಅಥವಾ ವರ್ಗ ಆಸಕ್ತಿನೂ ಇರಬಹುದು) ಮಾತ್ರ ಜೀವಂತ ಇರುವುದು.

ಸಂಶೋಧನೆಯಲ್ಲಿ ಆಸಕ್ತಿಗಳು ಪ್ರಮುಖ ಪಾತ್ರವಹಿಸುತ್ತದೆ ಎನ್ನುವುದನ್ನು ಜ್ಞಾನ ಸೋಶಿಯಲ್ ಲೆಜಿಟಮೆಸಿ ಪಡೆಯುವ ವಿಧಾನದಿಂದಲೂ ಅರ್ಥಮಾಡಿಕೊಳ್ಳಬಹುದು. ಸಾಮಾನ್ಯ ತಿಳುವಳಿಕೆ ಪ್ರಕಾರ ಒಪ್ಪಿತ ಚೌಕಟ್ಟಿನೊಳಗೆ ಸೃಷ್ಟಿಯಾಗುವ ಜ್ಞಾನ ಅದರ ಬಲದಿಂದಲೇ ಜನಸಾಮಾನ್ಯರಿಗೆ ತಲುಪಿ ಅವರ ಪ್ರಜ್ಞೆಯ ಭಾಗವಾಗಬೇಕು. ಅಂತಹ ಜ್ಞಾನವನ್ನು ಗಟ್ಟಿ ಜ್ಞಾನವೆಂದೂ ಇಲ್ಲವಾದರೆ ಜೊಳ್ಳು ಅಥವಾ ಪೊಳ್ಳು ಜ್ಞಾನ ಎಂದು ಸಾಮಾನ್ಯ ತಿಳುವಳಿಕೆ ವ್ಯಾಖ್ಯಾನಿಸುತ್ತದೆ. ಆದರೆ ಸಾಮಾನ್ಯ ತಿಳುವಳಿಕೆ ಪ್ರಕಾರ ಸಂಶೋಧನೆಯಿಂದ ಉತ್ಪಾದಿತ ಜ್ಞಾನದ ಸೋಶಿಯಲ್ ಲೆಜಿಟಮೆಸಿ ಪ್ರಕ್ರಿಯೆ ನಡೆಯುವುದಿಲ್ಲ. ವಾಸ್ತವದಲ್ಲಿ ಒಪ್ಪಿತ ಚೌಕಟ್ಟಿನೊಳಗೆ ಅಥವಾ ಹೊರಗೆ ಸೃಷ್ಟಿಯಾದ ಜ್ಞಾನ ಅದರಷ್ಟಕ್ಕೆ ಅದು ಚಲಿಸಿ ಜನರ ಹತ್ತಿರ ಹೋಗುವುದಿಲ್ಲ. ಸೃಷ್ಟಿಯಾದ ಜ್ಞಾನವನ್ನು ಜನರ ಹತ್ತಿರ ಒಯ್ಯಲು ವಿವಿಧ ಮಾರ್ಗಗಳಿವೆ. ಅಧಿಕೃತ ಸಂಸ್ಥೆಗಳು (ಶಾಲೆ, ಕಾಲೇಜು,

ವಿಶ್ವವಿದ್ಯಾಲಯ, ಸಂಶೋಧನ ಸಂಸ್ಥೆಗಳು, ಸಂಶೋಧನ ಪತ್ರಿಕೆಗಳು, ವರದಿಗಳು), ಸರಕಾರೇತರ ಸಂಸ್ಥೆಗಳು, ರಾಜಕೀಯ ಪಕ್ಷಗಳು, ಮಠ ಮಂದಿರಗಳು, ಮನೋರಂಜನ ಮಾಧ್ಯಮಗಳು, ಸರಕಾರ, ಸುದ್ದಿ ಮಾಧ್ಯಮ ಮುಂತಾದವುಗಳು ವರ್ತಮಾನದಲ್ಲಿ ಜ್ಞಾನವನ್ನು ಜನರತ್ತ ಒಯ್ಯುವ ವಿವಿಧ ಮಾರ್ಗಗಳು. ಈ ಮೇಲಿನ ವಿವಿಧ ಸಂಸ್ಥೆಗಳು (ಮಾರ್ಗಗಳು) ಸಮಾಜದ ವಿವಿಧ ಆಸಕ್ತಿಗಳನ್ನು ಪ್ರತಿನಿಧೀಕರಿಸುತ್ತಿವೆ. ಆಯಾಮ ಸಂಸ್ಥೆಗಳ ಆಸಕ್ತಿಗಳನ್ನು ಉಳಿಸುವ ಮತ್ತು ಬೆಳೆಸುವ ಜ್ಞಾನವನ್ನು ಆಯಾಮ ಸಂಸ್ಥೆ ಹೆಚ್ಚು ಹೆಚ್ಚು ಜನರತ್ತ ಒಯ್ಯುವ ಸಂದರ್ಭದಲ್ಲೇ ತಮ್ಮ ಹಿತಾಸಕ್ತಿಗಳ ಮೇಲೆ ನಕರಾತ್ಮಾಕ ಪರಿಣಾಮ ಬೀರುವ ಜ್ಞಾನವನ್ನು ಗುಪ್ತವಾಗಿ ಇರಿಸಬಹುದು. ಈ ಹಿನ್ನೆಲೆಯಲ್ಲಿ ವಿವಿಧ ಸಂಸ್ಥೆಗಳ ಆಸಕ್ತಿ ಹಾಗು ಜ್ಞಾನವನ್ನು ಜನರತ್ತ ಒಯ್ಯುವ ಸಾಧ್ಯತೆಯನ್ನು ಎರಡು ದೃಷ್ಟಿಕೋನದಿಂದ ನೋಡಬಹುದು. ಯಾವ ಲೋಕ ದೃಷ್ಟಿಯನ್ನು ನಿರ್ದಿಷ್ಟ ಜ್ಞಾನ ಬಿಂಬಿಸುತ್ತದೆ ಎನ್ನುವುದು ಒಂದನೇ ದೃಷ್ಟಿಕೋನವಾದರೆ ಜ್ಞಾನ ಸೃಷ್ಟಿಸುವವರ ಹಿನ್ನೆಲೆ ಏನು ಎನ್ನುವುದು ಎರಡನೇ ದೃಷ್ಟಿಕೋನ. ಒಂದು ನಿರ್ದಿಷ್ಟ ಲೋಕದೃಷ್ಟಿಯನ್ನು ಪ್ರತಿಪಾದಿಸುವ ಮಾಧ್ಯಮವಾಗಲಿ ಅಥವಾ ಸರಕಾರವಾಗಲಿ ಅಥವಾ ಸಂಸ್ಥೆಯಾಗಲಿ ಅವುಗಳ ಲೋಕದೃಷ್ಟಿಗೆ ಸಂಪೂರ್ಣ ವಿರುದ್ಧವಾದ ಲೋಕದೃಷ್ಟಿಯನ್ನು ಪ್ರತಿಪಾದಿಸುವ ಜ್ಞಾನವನ್ನು ಜನರತ್ತ ಒಯ್ಯುತ್ತಾವೆಂದು ನಂಬುವುದು ಮೂರ್ಖತನ. ಇದರಿಂದಾಗಿ ಉತ್ಪಾದಿತ ಜ್ಞಾನ ಎಲ್ಲರಿಗೂ ಏಕಪ್ರಕಾರದಲ್ಲಿ ಅಥವಾ ಒಂದೇ ರೂಪದಲ್ಲಿ ತಲುಪಿಸುವುದಿಲ್ಲ. ಎಷ್ಟೋ ಸಂದರ್ಭದಲ್ಲಿ ಸೃಷ್ಟಿಯಾಗುವ ಜ್ಞಾನ ಬದಲಿ ಲೋಕದೃಷ್ಟಿಯನ್ನು ಅಥವಾ ಯಾವುದೇ ಲೋಕದೃಷ್ಟಿಯನ್ನು ಬಿಂಬಿಸದಿರಬಹುದು. ಇಂತಹ ಜ್ಞಾನವನ್ನು ಪ್ರತಿಯೊಬ್ಬರು ಅವರವರ ಹಾವಭಾವಕ್ಕೆ ಅನುಸಾರ ಬಳಸಿಕೊಳ್ಳಬಹುದು. ಇಂತಹ ಜ್ಞಾನ ಸೃಷ್ಟಿಸುವವರ ಹಿನ್ನೆಲೆ (ಸಾಮಾಜಿಕ, ರಾಜಕೀಯ, ಕೆಲವು ಸಂದರ್ಭದಲ್ಲಿ ಆರ್ಥಿಕ ಹಿನ್ನೆಲೆಗಳು) ಮತ್ತು ಆ ಹಿನ್ನೆಲೆಯನ್ನು ತಾವು ಸೃಷ್ಟಿಸಿದ ಜ್ಞಾನವನ್ನು ವಿವಿಧ ಮಾರ್ಗಗಳ ಮೂಲಕ ಜ್ಞಾನ ಜನರತ್ತ ತಲುಪಿಸಲು ಬಳಸಿಕೊಳ್ಳುವ ಚಾಕಚಕ್ಯತೆಗನುಸಾರ ಜ್ಞಾನ ಚಲಿಸಬಹುದು.

ಸಮುದಾಯಗಳು ಶ್ರೇಣಿಕೃತವಾಗಿರುವುದು ಎಲ್ಲ ಸಮಾಜಗಳ ಲಕ್ಷಣ. ಮೇಲ್ವರ್ಗಗಳ ಆಸಕ್ತಿಗಳನ್ನು ಉಳಿಸಿಬೆಳೆಸಲು ಸಹಕರಿಸುವ ಜ್ಞಾನವನ್ನು ಅವರು ಉದ್ದೇಶಪೂರಿತವಾಗಿಯೇ ಹೆಚ್ಚು ಹೆಚ್ಚು ಸೃಷ್ಟಿಸಲು ಪ್ರೋತ್ಸಾಹಿಸಬಹುದು. ಜತೆಗೆ ತಮ್ಮ (ಮೇಲ್ವರ್ಗಗಳ) ಆಸಕ್ತಿಗಳನ್ನು ಪ್ರತಿನಿಧಿಸುವ ಜ್ಞಾನವನ್ನು ಹೆಚ್ಚು ಹೆಚ್ಚು ಜನರತ್ತ ಒಯ್ಯಲು ಕ್ರಮವಹಿಸ ಬಹುದು. ಮೇಲ್ವರ್ಗಗಳು ಪ್ರತಿಪಾದಿಸುವ ಮೌಲ್ಯಗಳು ಇಡೀ ಸಮಾಜದಲ್ಲಿ ಆಚರಣೆ ಯಲ್ಲಿರುವ ಮೌಲ್ಯಗಳೆನ್ನುವ ಒಂದು ಹುಸಿ ಚಿತ್ರಣ ನೀಡಲು ಇಂತಹ ಜ್ಞಾನಗಳು ಸತತ ಪ್ರಯತ್ನಿಸುತ್ತವೆ. ಇದೇ ಕಾರಣಕ್ಕಾಗಿ ಮೇಲ್ವರ್ಗಗಳ ಆಸಕ್ತಿಗಳಿಗೆ ಪೂರಕವಾದ ಜ್ಞಾನವನ್ನು ಸೃಷ್ಟಿಸುವವರನ್ನು ಮೇಲ್ವರ್ಗಗಳು ಗುರುತಿಸಿ ಪ್ರೋತ್ಸಾಹಿಸುವುದು ಸರ್ವೇಸಾಮಾನ್ಯ. ಇಂತಹ ಬೆಳವಣಿಗೆಯನ್ನು ಜ್ಞಾನ ಉತ್ಪಾದಿಸುವವರು ಮೇಲ್ವರ್ಗ/ಮೇಲ್ಜಾತಿಗೆ ಸೇರಿದ್ದಾರೆ. ಆ ಕಾರಣಕ್ಕಾಗಿ ಅವರುಗಳು ಸೃಷ್ಟಿಸಿದ ಜ್ಞಾನ ಹೆಚ್ಚು ಪ್ರಚಾರ ಪಡೆದಿದೆ ಎಂದು

ವಿಶ್ಲೇಷಿಸುವುದು ಸಾಮಾನ್ಯ. ಇದು ಸರಿಯಾದ ವಾದವಲ್ಲ. ಯಾಕೆಂದರೆ ಮೇಲ್ಜಾತಿ/ವರ್ಗಕ್ಕೆ ಸೇರಿದವರು ತಮ್ಮ ಜಾತಿ/ವರ್ಗ ಆಸಕ್ತಿಗೆ ವಿರುದ್ಧವಾದ ಜ್ಞಾನವನ್ನು ಸತತವಾಗಿ ಉತ್ಪಾದಿಸಿದರೆ ಅಂತವರನ್ನು ಅವರ ವರ್ಗ ಹಿನ್ನೆಲೆಯ ಕಾರಣಕ್ಕಾಗಿ ಮೇಲ್ವರ್ಗ ಸ್ವೀಕರಿಸುವುದಿಲ್ಲ. ಆದುದರಿಂದ ಇಲ್ಲಿ ಉತ್ಪಾದಿತ ಜ್ಞಾನ ಮೇಲ್ವರ್ಗಗಳ ಆಸಕ್ತಿಗಳನ್ನು ಎಷ್ಟು ಪ್ರತಿಪಾದಿಸುತ್ತದೆ ಎನ್ನುವುದು ಮುಖ್ಯವೇ ಹೊರತು ಯಾರು ಉತ್ಪಾದಿಸುತ್ತಾರೆನ್ನುವ ಪ್ರಶ್ನೆ ಮುಖ್ಯ ಅಲ್ಲ. ಆದುದರಿಂದ ಒಂದು ಒಪ್ಪಿತ ಚೌಕಟ್ಟಿನೊಳಗೆ ಸೃಷ್ಟಿಯಾಗುವ ಜ್ಞಾನದ ಸೋಶಿಯಲ್ ಲೆಜಿಟಮೆಸಿಗೆ ಅಥವಾ ಬಹುತೇಕರ ಒಪ್ಪಿಗೆ ಪರೀಕ್ಷೆಗೆ ಆ ಜ್ಞಾನ ನಿಜವಾಗಿಯೂ ಬಹುತೇಕರ ಆಸಕ್ತಿಗಳಿಗನು ಗುಣವಾಗಿದೆ ಎನ್ನುವುದು ಮುಖ್ಯವಲ್ಲ. ಬಹುತೇಕರ ಅಭಿಪ್ರಾಯವನ್ನು ಕಟ್ಟಿಕೊಡುವ ಏಜನ್ಸಿಗಳ ದೃಷ್ಟಿಯಿಂದ ಜ್ಞಾನ ಬಹುತೇಕರ ಆಸಕ್ತಿಗಳಿಗನುಗುಣವಾಗಿದೆ ಎನ್ನುವ ಸರ್ಟಿಫಿಕೇಟ್ ಮುಖ್ಯ. ಇಂತಹ ಜ್ಞಾನವನ್ನು ಜನರತ್ತ ಒಯ್ಯುವ ವಿವಿಧ ಮಾರ್ಗಗಳು ತಮ್ಮ ಆಸಕ್ತಿಗಳಿಗನುಗುಣವಾಗಿ ಜನರತ್ತ ಒಯ್ಯುತ್ತಾವೆ. ಅಂದರೆ ತಮ್ಮ ಆಸಕ್ತಿಯನ್ನು ನೇರವಾಗಿ ಮತ್ತು ಪರೋಕ್ಷವಾಗಿ ಬಿಂಬಿಸುವ ಜ್ಞಾನವನ್ನು ಹೆಚ್ಚು ಹೆಚ್ಚು ಜನರತ್ತ ಒಯ್ಯುತ್ತಾರೆ. ಹೀಗೆ ಎರಡೂ ಕಡೆಯಲ್ಲೂ - ಸಂಶೋಧನ ಚೌಕಟ್ಟಿನ ಮೇಲಿನ ನಂಬಿಕೆಯನ್ನು ಪಡೆಯುವಲ್ಲಿ ಮತ್ತು ಸಂಶೋಧನ ಸೃಷ್ಟಿಸಿದ ಜ್ಞಾನದ ಮೇಲಿನ ಒಪ್ಪಿಗೆ ಯನ್ನು ಪಡೆಯುವಲ್ಲಿ ಜನಸಾಮಾನ್ಯರ ಪಾತ್ರ ಅಲ್ಪ. ಮಾಧ್ಯಮಗಳು, ಸಂಶೋಧನ ಸಂಸ್ಥೆಗಳು, ಸಂಶೋಧನ ಪತ್ರಿಕೆಗಳು, ವರದಿಗಳು, ಪಬ್ಲಿಕ್ ಡೊಮೈನ್‌ನಲ್ಲಿರುವ ವಿದ್ವಾಂಸರು ಮುಂತಾದವರುಗಳು ಸಂಶೋಧನ ಚೌಕಟ್ಟಿನ ಮೇಲಿನ ಜನರ ಒಪ್ಪಿಗೆಯನ್ನು ಪ್ರತಿನಿಧೀಕರಿಸುತ್ತಾರೆ. ನಿರ್ದಿಷ್ಟ ಜ್ಞಾನಕ್ಕೆ ಸೋಶಿಯಲ್ ಲೆಜಿಟಮೆಸಿ ಇದೆಯೋ ಎನ್ನುವ ಪರೀಕ್ಷೆಯಾಗಬೇಕಾದರೆ ಆ ಜ್ಞಾನವನ್ನು ಜನ ಸಾಮಾನ್ಯರತ್ತ ಒಯ್ಯಬೇಕು. ವಿವಿಧ ಸಂಸ್ಥೆ ಗಳು (ಮಾರ್ಗಗಳು) ಜ್ಞಾನವನ್ನು ಜನಸಾಮಾನ್ಯರತ್ತ ಒಯ್ಯುತ್ತವೆ. ಆದರೆ ಅವುಗಳು ತಮ್ಮ ಆಸಕ್ತಿಗಳಿಗನು ಗುಣವಾಗಿ ನಿರ್ಧಿಷ್ಟ ಜ್ಞಾನವನ್ನು ಸಾಮಾನ್ಯರಿಗೆ ತಲುಪಿಸುತ್ತದೆ. ಹೀಗೆ ಎರಡೂ ಕಡೆ ವರ್ಗಾಸಕ್ತಿಗಳೇ ಮುಖ್ಯವಾಗುತ್ತವೆ ಹೊರತು ಉತ್ಪಾದಿತ ಜ್ಞಾನ ನಿಜ ವಾಗಿಯೂ ಸತ್ಯ ಪ್ರತಿಪಾದನೆ ಮಾಡುತ್ತಿದೆ ಎನ್ನುವುದು ಮುಖ್ಯವಲ್ಲ. ಅಂದರೆ ಉತ್ಪಾದಿತ ಜ್ಞಾನ ಸಮಾಜದ ಬಹುತೇಕರ ಆಸಕ್ತಿಗಳಿಗನು ಗುಣವಾಗಿದೆಯೇ ಎನ್ನುವುದಕ್ಕಿಂತ ಹೆಚ್ಚು ಒಪ್ಪಿತ ಚೌಕಟ್ಟನ್ನು ಪ್ರತಿನಿಧೀಕರಿಸುವವರ ಮತ್ತು ಜ್ಞಾನವನ್ನು ಜನರತ್ತ ಒಯ್ಯುವವರ ಮರ್ಜಿಗನುಸಾರ ಜ್ಞಾನ ಲೆಜಟಿಮೆಸಿ ಪಡೆಯುತ್ತದೆ.

ಜ್ಞಾನ ಉತ್ಪಾದನೆಗೂ ಆಸಕ್ತಿಗಳಿಗು(ವರ್ಗಾಸಕ್ತಿಯನ್ನು ಸೇರಿಸಿಕೊಂಡು) ಇರುವ ನೇರ ಸಂಬಂಧ ಮೇಲಿನ ಚರ್ಚೆಯಿಂದ ಸ್ಪಷ್ಟವಾಗಬಹುದು. ಈ ಸಂಬಂಧ ಸಂಶೋಧನೆಯ ಹಲವಾರು ಒಪ್ಪಿತ ಚೌಕಟ್ಟುಗಳ ಸೃಷ್ಟಿಗೆ ಮತ್ತು ಅವುಗಳು ಶ್ರೇಣಿಕೃತ ಇರುವಿಕೆಗೆ ಕಾರಣವಾಗಿದೆ. ಸಂಶೋಧನೆಯ ಹಲವಾರು ಚೌಕಟ್ಟುಗಳು ಮತ್ತು ಅವುಗಳ ಶ್ರೇಣಿಕೃತ ಇರುವಿಕೆಯ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಜ್ಞಾನ ಉತ್ಪಾದನೆಯಲ್ಲಿ

ವಿಜ್ಞಾನದ ಪಾತ್ರ ಮತ್ತು ಉತ್ತಮ ಸಮಾಜದ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಬೇಕು. ವಿಜ್ಞಾನದ ಬಹುದೊಡ್ಡ ಸಾಧನೆ ಪ್ರಕೃತಿ ನಿಯಮಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅವುಗಳನ್ನು ಬಳಸಿಕೊಂಡು ತಂತ್ರಜ್ಞಾನಗಳನ್ನು ಸೃಷ್ಟಿಸುವುದು. ವಿಜ್ಞಾನದ ವಿಧಾನದಲ್ಲಿ ಕಂಡುಕೊಂಡ ಈ ಸತ್ಯ (ಪ್ರಕೃತಿಗೆ ಸಂಬಂಧಿಸಿದ ಸತ್ಯ) ಪ್ರಯೋಗಕ್ಕಾಗಿ ಆಯ್ಕೆ ಮಾಡಿಕೊಂಡ ಮಾದರಿಗಳಿಗೆ ಮಾತ್ರ ಅನ್ವಯವಾಗುವುದಿಲ್ಲ; ಇಡೀ ವಿಶ್ವಕ್ಕೆ ಅನ್ವಯವಾಗುತ್ತದೆ. ಇಡೀ ವಿಶ್ವಕ್ಕೆ ಅನ್ವಯವಾಗುವ ಪ್ರಕೃತಿ ನಿಯಮವನ್ನು ಕಂಡುಕೊಳ್ಳುವುದು ವಿಜ್ಞಾನಿಗಳ ಕಾಯಕವಾದರೆ ವಿಶ್ವದ ಎಲ್ಲ ಸಮಾಜ ಗಳಿಗೂ ಅನ್ವಯವಾಗುವ ಅಥವಾ ಅರ್ಥಮಾಡಿಕೊಳ್ಳಲು ಸಹಕರಿಸುವ ಯುನಿವರ್ಸಲ್ ನಿಯಮಗಳನ್ನು ಕಂಡುಕೊಳ್ಳುವುದು ಸಮಾಜ ವಿಜ್ಞಾನಿಗಳ ಕಾಯಕವೆಂದು ತಿಳಿಯಲಾಯಿತು.[೧೯] ಸಮಾಜ ಶಾಸ್ತ್ರಗಳು ತಮ್ಮ ಮೇಲೆ ಹೇರಿಕೊಂಡ ಯುನಿವರ್ಸಲ್ ನಿಯಮಗಳನ್ನು ಸಂಶೋಧಿಸುವ ಜವಾಬ್ದಾರಿ ಅವುಗಳ (ಸಮಾಜಶಾಸ್ತ್ರಗಳ) ಅಧ್ಯಯನ ವಸ್ತುಗಳನ್ನು ಹಾಗೂ ವಿಧಾನಗಳನ್ನು ಕೂಡ ಪ್ರಭಾವಿಸಿದವು. ಅವುಗಳು ವಿಸ್ತಾರವಾದ ಕ್ಷೇತ್ರಗಳನ್ನು ತಮ್ಮ ಅಧ್ಯಯನ ಕ್ಷೇತ್ರಗಳನ್ನಾಗಿ ಮಾಡಿಕೊಂಡವು. ಉದಾಹರಣೆಗೆ ಜಾಗತಿಕ ಚರಿತ್ರೆ ಅಥವಾ ಜಾಗತಿಕ ಅರ್ಥ ವ್ಯವಸ್ಥೆ ಅಥವಾ ಜಾಗತಿಕ ರಾಜಕೀಯ ವ್ಯವಸ್ಥೆ ಇತ್ಯಾದಿಗಳು ಅವುಗಳ ಅಧ್ಯಯನ ವಿಷಯಗಳಾದವು. ಇಡೀ ಪ್ರಪಂಚದ ಎಲ್ಲ ವ್ಯವಹಾರಗಳನ್ನು ವಿವರಿಸುವ ಕಾಯಕವನ್ನು ಸಮಾಜ ವಿಜ್ಞಾನಗಳು ಹಮ್ಮಿಕೊಂಡವು. ಈ ಕಾಯಕಕ್ಕೆ ವಿಜ್ಞಾನದ ವೈಧಾನಿಕ ಅಂಶಗಳನ್ನು- ಅಂಕಿ ಅಂಶಗಳು, ಹೈಪೋಥಿಸೀಸ್‌ಗಳು, ಪರೀಕ್ಷೆಗಳು ಇತ್ಯಾದಿಗಳನ್ನು-ಸಮಾಜ ವಿಜ್ಞಾನಗಳು ಅನುಸರಿಸಲಾರಂಭಿಸಿದವು. ಹದಿನೆಂಟನೇ ಶತಮಾನದ ಕೊನೆಯವರೆಗೆ ಅಥವಾ ಹತ್ತೊಂಬತ್ತನೇ ಆರಂಭದವರೆಗೆ ನಾಗರಿಕ ಸಮಾಜದ ಅರ್ಥ, ಚರಿತ್ರೆ, ಸಮಾಜ ಮತ್ತು ರಾಜಕೀಯವನ್ನು ನಾಗರಿಕ ಸಮಾಜಕ್ಕೆ ಸೇರಿದವರೇ ಕಟ್ಟಿಕೊಡುವ ಕೆಲಸವನ್ನು ಈ ನಾಲ್ಕು ಸಮಾಜ ವಿಜ್ಞಾನಗಳು(ಚರಿತ್ರೆ, ಅರ್ಥ, ಸಮಾಜ, ರಾಜಕೀಯ ಶಾಸ್ತ್ರಗಳು) ಮಾಡಿದವು.

ಎರಡನೇ ಮಹಾಯುದ್ಧ ನಂತರ ಒಂದು ಹೊಸ ಸ್ಥಿತಿ ನಿರ್ಮಾಣವಾಯಿತು. ವಸಾಹತುಗಳೆಲ್ಲ ಒಂದೊಂದಾಗಿ ಸ್ವತಂತ್ರಗೊಂಡವು. ಹೊಸತಾಗಿ ಸ್ವತಂತ್ರಗೊಂಡ ದೇಶಗಳು ಅಭಿವೃದ್ಧಿಯ ಹೆಸರಿನಲ್ಲಿ ತಮ್ಮನ್ನಾಳಿದ ಶ್ರೀಮಂತ ರಾಷ್ಟ್ರಗಳ ಪಡಿಯಚ್ಚಾಗಲು ಪ್ರಯತ್ನಿಸುತ್ತಿದ್ದವು. ಪಶ್ಚಿಮದ ತಂತ್ರಜ್ಞಾನದ ಆಧುನಿಕತೆಯನ್ನು ತಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳುವ ಮೂಲಕ ಪರಿವರ್ತನೆಗೆ ಪ್ರಯತ್ನಿಸುತ್ತಿದ್ದವು. ಇದರ ಪ್ರಯತ್ನದ ಹಿಂದೆ ಸ್ಟ್ರಕ್ಚರಲ್ ಫಂಕ್ಷನಲಿಸಂನ ಪ್ರಭಾವ ಇತ್ತು. ಪಶ್ಚಿಮದ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ಸಾಮಾಜಿಕ ಪರಿವರ್ತನೆ ಸಾಧ್ಯ ಎನ್ನುವುದು ಸ್ಟ್ರಕ್ಚರಲ್ ಫಂಕ್ಷನಲಿಸಂನ ಒಂದು ಮುಖ್ಯ ಗ್ರಹಿಕೆಯೇ ಆಗಿತ್ತು. ಅಂದರೆ ಪಶ್ಚಿಮದ ವಿಜ್ಞಾನ ತಂತ್ರಜ್ಞಾನಗಳನ್ನು ತಮ್ಮ ಉತ್ಪಾದನಾ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡರೆ ಸಾಮಾಜಿಕ, ರಾಜಕೀಯ ಹಾಗೂ

ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಪರಿವರ್ತನೆ ಸಾಧ್ಯ ಎನ್ನುವ ನಿಲುವು ಈ ವಿಧಾನದ ಕೊಡುಗೆ. ಹೀಗೆ ಹಿಂದುಳಿದ ದೇಶಗಳು ತಮ್ಮ ಪರಿವರ್ತನೆಗಾಗಿ ಶ್ರೀಮಂತ ರಾಷ್ಟ್ರಗಳ ಮಾದರಿಗಳನ್ನು ಅನುಸರಿಸಲು ಆರಂಭಿಸಿದವು. ಪರಿಣಾಮವಾಗಿ ಈ ಪರಿವರ್ತನೆಯನ್ನು ಅಧ್ಯಯನ ಮಾಡುವ ಹೊಸತೊಂದು ಕಾಯಕ ಸಮಾಜ ಶಾಸ್ತ್ರಜ್ಞರಿಗೆ ದೊರಕಿತು. ಈ ಬದಲಾದ ಪರಿಸರದಲ್ಲಿ ಸಾಂಸ್ಕೃತಿಕ ಸಂಪರ್ಕ, ಸಾಮಾಜಿಕ ಪರಿವರ್ತನೆ, ಆಧುನೀಕರಣ, ನಗರೀಕರಣ, ಪಾಶ್ಚಿಮಾತ್ಯೀಕರಣ ಇತ್ಯಾದಿ ಪರಿಕಲ್ಪನೆಗಳು ಸಮಾಜ ಶಾಸ್ತ್ರದಲ್ಲಿ ರಾರಾಜಿಸತೊಡಗಿದವು.[೨೦] ಹದಿನೆಂಟನೇ ಶತಮಾನದಿಂದಲೇ ನಮ್ಮ ಶಿಕ್ಷಣ ವ್ಯವಸ್ಥೆ ಆಮೂಲಾಗ್ರ ಬದಲಾವಣೆ ಹೊಂದಿದೆ. ಐವತ್ತರ ದಶಕದಿಂದ ನಮ್ಮ ಶಾಲಾ ಕಾಲೇಜುಗಳು (ವಿಶ್ವವಿದ್ಯಾಲಯಗಳನ್ನು ಸೇರಿಸಿಕೊಂಡು) ಆಧುನಿಕ ಕ್ಷೇತ್ರದಲ್ಲಿ (ಕೈಗಾರಿಕೆ, ಬ್ಯಾಂಕಿಂಗ್, ಸಾರಿಗೆ, ಸಂಪರ್ಕ, ಇನ್‌ಸೂರೆನ್ಸ್ ಇತ್ಯಾದಿಗಳಲ್ಲಿ) ದುಡಿಯಲು ಮಾನವ ಸಂಪನ್ಮೂಲ ಪೂರೈಸುವ ತಾಣಗಳಾಗಿವೆ. ಆಧುನೀಕರಣ ಥಿಯರಿ ಪ್ರಕಾರ ನಮ್ಮ ಸಮಾಜ ಪರಿವರ್ತನೆಯಾಗಿದೆಯೇ? ಆಗಿಲ್ಲವಾದರೆ ಯಾಕೆ ಆಗಿಲ್ಲ? ಹೇಗೆ ನಮ್ಮ ಸಮಾಜವನ್ನು ಆಧುನೀಕರಣಗೊಳಿಸಬಹುದು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕೆಲಸವನ್ನು ಬಹುತೇಕ ಸಂಶೋಧನಾ ಕೇಂದ್ರಗಳು ಆರಂಭಿಸಿದವು. ನಂತರದ ದಿನಗಳಲ್ಲಿ ಬಹುತೇಕ ವಿದ್ವಾಂಸರ ಕೆಲಸ ಪಶ್ಚಿಮದ ಶ್ರೀಮಂತ ದೇಶಗಳ ವಿದ್ವಾಂಸರಿಂದ ಬಂದ ಥಿಯರಿಗಳನ್ನು ತಮ್ಮ ಸಾಮಾಜಿಕ ಪರಿಸರದಲ್ಲಿ ಅನ್ವಯಿಸಿ ತಮ್ಮ ಸಾಮಾಜಿಕ ಪರಿಸರ ಯಜಮಾನಿಕೆಯಲ್ಲಿರುವ ಥಿಯರಿಯಿಂದ ಎಷ್ಟು ದೂರ ಇದೆ ಅಥವಾ ಹತ್ತಿರ ಇದೆ ಎಂದು ತೋರಿಸುವುದಾಯಿತು.

ವಿದ್ವಾಂಸರಿಗೆ ಯಜಮಾನಿಕೆಯಲ್ಲಿನ ಥಿಯರಿ ಮೂಲಕ ತಮ್ಮ ಸಂಶೋಧನ ಸಮಸ್ಯೆಗಳನ್ನು ಅಧ್ಯಯನ ಮಾಡುವ ಅನಿವಾರ್ಯತೆ ಯಾಕಿದೆ? ನಮ್ಮಲ್ಲಿ ಶೇಕಡಾ ತೊಂಬತೊಂಬತ್ತು ಮಂದಿ ಉದ್ಯೋಗಕ್ಕಾಗಿ ಅಧ್ಯಯನ ಮಾಡುವವರು. ಉದ್ಯೋಗಕ್ಕಾಗಿ ಅಧ್ಯಯನ ಮಾಡುವಾಗ ಯಾವ ವಿಷಯವನ್ನು ಅಧ್ಯಯನ ಮಾಡಿದರೆ ಅತೀ ಹೆಚ್ಚು ಸಂಬಳ ಬರುವ ಉದ್ಯೋಗ ಖಾತ್ರಿ ಎನ್ನುವ ವಿಷಯ ಮಹತ್ವ ಪಡೆದು ಉಳಿದೆಲ್ಲ ಅಂಶಗಳು ನಗಣ್ಯವಾಗುತ್ತವೆ. ಉದ್ಯೋಗ ದೊರೆತ ನಂತರ ಮುಂಬಡ್ತಿ ಪಡೆಯುವ ಚಿಂತೆ ಆರಂಭವಾಗುತ್ತದೆ. ಹೈಸ್ಕೂಲು ಮೇಸ್ಟ್ರಿಗೆ ಜೂನಿಯರ್ ಕಾಲೇಜು ಅಧ್ಯಾಪಕರಾಗುವ ಹಂಬಲ, ಜೂನಿಯರ್ ಕಾಲೇಜು ಅಧ್ಯಾಪಕರಿಗೆ ಸೀನಿಯರ್ ಕಾಲೇಜು ಉಪನ್ಯಾಸಕರಾಗುವ ಕನಸು, ಸೀನಿಯರ್ ಕಾಲೇಜು ಉಪನ್ಯಾಸಕರಿಗೆ ಯುನಿವರ್ಸಿಟಿ ಉಪನ್ಯಾಸಕರಾಗುವ ಕನಸು ಮತ್ತು ಯುನಿವರ್ಸಿಟಿ ಅಧ್ಯಾಪಕರಿಗೆ ಅದಕ್ಕಿಂತಲೂ ದೊಡ್ಡ ಸಂಸ್ಥೆಯಲ್ಲಿ ಉದ್ಯೋಗ ಗಿಟ್ಟಿಸುವ ಕಾತರ. ಹೀಗೆ ಮೇಲ್ಮುಖವಾಗಿ ಚಲಿಸುವ ಈ ಹಂಬಲಕ್ಕೆ ಕೊನೆಯೇ ಇರುವುದಿಲ್ಲ.[೨೧] ಈ ಎಲ್ಲ ಚಲನೆಗೂ ತಕ್ಕಮಟ್ಟಿನ ಅಕಾಡೆಮಿಕ್ ತಯಾರಿಯೂ ಇರಬೇಕಾಗುತ್ತದೆ. ಪಿಹೆಚ್.ಡಿ ಪದವಿಯ ಜತೆಗೆ ಸಾಕಷ್ಟು ಸಂಖ್ಯೆಯಲ್ಲಿ ಸಂಶೋಧನ ಲೇಖನಗಳು ಮತ್ತು

ಪುಸ್ತಕಗಳು ಅಭ್ಯರ್ಥಿಯ ಹೆಸರಲ್ಲಿ ಇರಬೇಕಾಗುತ್ತದೆ. ಇವುಗಳೆಲ್ಲದರ ಜತೆಗೆ ಪ್ರತಿಷ್ಠಿತ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳ ವಿದ್ವಾಂಸರ ಸಂಪರ್ಕನೂ ಇರಬೇಕಾಗುತ್ತದೆ. ಇಂತಹ ಪ್ರತಿಷ್ಠಿತ ಸಂಸ್ಥೆಗಳ ವಿದ್ವಾಂಸರು ಅಭ್ಯರ್ಥಿಯನ್ನು ಗಮನಿಸಬೇಕಾದರೆ ಅಭ್ಯರ್ಥಿಗೆ (ಇತರ ಸಂಗತಿಗಳೊಂದಿಗೆ) ಯಜಮಾನಿಕೆಯಲ್ಲಿರುವ ಥಿಯರಿಗಳ ಮೇಲೆ ಸಾಕಷ್ಟು ಹಿಡಿತನೂ ಇರಬೇಕು. ಯಜಮಾನಿಕೆಯಲ್ಲಿರುವ ಥಿಯರಿಗಳ ಮೇಲೆ ಹಿಡಿತ ಬರಬೇಕಾದರೆ ಅವುಗಳನ್ನು ಆಳವಾಗಿ ಅಧ್ಯಯನ ಮಾಡಬೇಕಾಗುತ್ತದೆ ಮತ್ತು ಅವುಗಳ ಚೌಕಟ್ಟಿನಿಂದ ಸಂಶೋಧನೆ ನಡೆಸಬೇಕಾಗುತ್ತದೆ. ಹೀಗೆ ಸಮಾಜ ಸಂಶೋಧಕರಿಗೆ ಎಲ್ಲ ಹಂತಗಳಲ್ಲೂ ಯಜಮಾನಿಕೆಯಲ್ಲಿರುವ ಥಿಯರಿಗಳ ಮೂಲಕ ಅಧ್ಯಯನ ಮಾಡುವ ಅನಿವಾರ್ಯತೆ ಕಾಡುತ್ತದೆ. ಇದರ ಪರಿಣಾಮವಾಗಿ ಒಬ್ಬ ಉತ್ತಮ ಸಮಾಜ ಸಂಶೋಧಕ ರೆಂದು ಗುರುತಿಸಿಕೊಳ್ಳಬೇಕಾದರೆ ಅವರು ಪ್ರತಿಷ್ಠಿತ ಸಂಶೋಧಕರಿಂದ (ರಿಸರ್ಚ್ ಕಮ್ಯುನಿಟಿ ಯಿಂದ) ಗುರುತಿಸಲ್ಪಟ್ಟರೆ ಸಾಕು."[೨೨] ಯಾವ ಸಮಾಜವನ್ನು ಅಧ್ಯಯನ ಮಾಡುತ್ತಾರೋ ಆ ಸಮಾಜ ಮತ್ತು ಅಲ್ಲಿನ ಜನರು ಅಧ್ಯಯನಕಾರರನ್ನು ಗುರುತಿಸುವ ಅಗತ್ಯವಿಲ್ಲ. ಹೀಗೆ ಸಮಾಜ ಅಧ್ಯಯನಕಾರರಿಗೆ ಯುನಿವರ್ಸಲ್ ನೊಂದಿಗೆ ಗುರುತಿಸಿಕೊಳ್ಳುವುದು ಅನಿವಾರ್ಯ ವಾಗುತ್ತದೆಯೇ ಹೊರತು ಸ್ಥಳೀಯ ಪರಿಸರದೊಂದಿಗೆ ಗುರುತಿಸಿಕೊಳ್ಳುವುದು(ಅಂದರೆ ಅಧ್ಯಯನಕಾರರಾಗಿ) ಅನಿವಾರ್ಯವಾಗುವುದಿಲ್ಲ. ಹೀಗಾಗಿ ತಮ್ಮ ಪರಿಸರವನ್ನು ಅರ್ಥಮಾಡಿ ಕೊಳ್ಳಲು ಪೂರಕವಾಗುವ ತಮ್ಮದೇ ಕೆಟಗರಿಗಳನ್ನು ಸೃಷ್ಟಿಸಿಕೊಳ್ಳುವುದು ಸಮಾಜ ಅಧ್ಯಯನಕಾರರಿಗೆ ದೊಡ್ಡ ಚಾಲೇಂಜ್ ಆಗಿದೆ. ಆ ಕೆಲಸಕ್ಕೆ ಹೊರಟರೆ ಅದಕ್ಕೆ ಪ್ರತಿಷ್ಠಿತ ಸಂಶೋಧಕರ ಮನ್ನಣೆ ಸಿಗುವುದರ ಬಗ್ಗೆ ಸಂದೇಹಗಳೂ ಇವೆ.

ರಾಷ್ಟ್ರೀಯ ಮಟ್ಟದಲ್ಲಿನ ಪ್ರತಿಷ್ಠಿತ ಸಂಶೋಧನ ಸಂಸ್ಥೆಗಳಲ್ಲಿ ಅವಕಾಶ ಗಿಟ್ಟಿಸ ಬೇಕಾದರೆ ಯಜಮಾನಿಕೆಯಲ್ಲಿರುವ ಥಿಯರಿಗಳನ್ನು ಜೀರ್ಣಿಸಿಕೊಂಡಿರಬೇಕೆಂದು ಮೇಲಿನ ಪ್ಯಾರಾದಲ್ಲಿ ನೋಡಿದ್ದೇವೆ. ಆದರೆ ಇದೇ ಸಂದರ್ಭದಲ್ಲಿ ಯಾಕೆ ಈ ಪ್ರತಿಷ್ಠಿತ ಸಂಸ್ಥೆ ಗಳಾದರೂ ನಮ್ಮ ಪರಿಸರಕ್ಕೆ ಪೂರಕವಾಗುವ ಸಂಶೋಧನ ಅಜಂಡಾಗಳ ಬಗ್ಗೆ (ಥಿಯರಿ, ವಿಧಾನ, ಭಾಷೆ ಇತ್ಯಾದಿಗಳ ಬಗ್ಗೆ) ಚಿಂತಿಸಬಾರದೆನ್ನುವ ಹೊಸ ಪ್ರಶ್ನೆ ಮೂಡುತ್ತದೆ. ಈ ಪ್ರಶ್ನೆ ಯಾಕೆಂದರೆ ಸಂಶೋಧನ ಸಂಸ್ಥೆ ಈಗಾಗಲೇ ಪ್ರತಿಷ್ಠಿತವಾಗಿರುವುದರಿಂದ ಅದಕ್ಕೆ ಯಾರ ಹಂಗಿಲ್ಲ. ತನ್ನ ಸಂಶೋಧನ ಅಜಂಡಾವನ್ನು ತನಗೆ ಬೇಕಾದ ರೂಪದಲ್ಲಿ ನಿರ್ಧರಿಸಿದರೆ ಅದನ್ನು ಕೇಳುವವರು ಯಾರು ಇಲ್ಲ ಇತ್ಯಾದಿ ಕಾರಣಗಳನ್ನು ಮುಂದಿಡ ಬಹುದು. ಜತೆಗೆ ಪ್ರತಿಷ್ಠಿತ ಸಂಸ್ಥೆಯಲ್ಲಿನ ವಿದ್ವಾಂಸರು ಸ್ಥಳೀಯ ಪರಿಸರಕ್ಕೆ ಪೂರಕ ವಾಗುವ ಸಂಶೋಧನ ಅಜಂಡಾಗಳನ್ನು ಮುಂದಿಟ್ಟರೆ ಅಸಂಖ್ಯಾತ ಅನಾಮಧೇಯ ಸಂಶೋಧಕರು ಅವರನ್ನು(ಪ್ರತಿಷ್ಠಿತ ಸಂಶೋಧಕರನ್ನು) ಅನುಸರಿಸಬಹುದು. ಈ ಪ್ರಕ್ರಿಯೆ ಯಿಂದ ಸಮಾಜ ಸಂಶೋಧನೆಯ ಸ್ವರೂಪವೇ ಬದಲಾಗಬಹುದು.[೨೩] ಆದರೆ ವಾಸ್ತವದಲ್ಲಿ

ಬೇರೆಯೇ ಪ್ರಕ್ರಿಯೆ ನಡೆಯುತ್ತಿದೆ. ರಾಷ್ಟ್ರೀಯ ಮಟ್ಟದಲ್ಲಿ ಸಂಸ್ಥೆಯೊಂದು ಪ್ರತಿಷ್ಠಿತವಾಗ ಬೇಕಾದರೆ ಅದಕ್ಕೆ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಬೇಕು. ಅಂತರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಬೇಕಾದರೆ ಅಂತರಾಷ್ಟ್ರೀಯ ಮಟ್ಟದಲ್ಲಿ ಯಜಮಾನಿಕೆಯಲ್ಲಿರುವ ಸಂಸ್ಥೆಗಳು ಮತ್ತು ಅವುಗಳಲ್ಲಿ ಮಾನ್ಯತೆ ಪಡೆದಿರುವ ಥಿಯರಿ, ವಿಧಾನ, ಭಾಷೆ ಇತ್ಯಾದಿಗಳ ಮೇಲೆ ಹಿಡಿತ ಬೇಕು. ಹಾಗೆಂದು ಅಂತರಾಷ್ಟ್ರೀಯ ಮಟ್ಟದಲ್ಲಿ ಯಜಮಾನಿಕೆಯಲ್ಲಿರುವ ಥಿಯರಿ ಅಥವಾ ವಿಧಾನಗಳನ್ನು ಪ್ರಶ್ನಿಸುವ ಅಥವಾ ಬದಲೀ ಥಿಯರಿ ಹಾಗು ವಿಧಾನ ಗಳನ್ನು ಮುಂದಿಡುವ ಸಂಸ್ಥೆಗಳೇ ಇಲ್ಲವೆಂದಲ್ಲ. ಸಾಕಷ್ಟು ಇವೆ. ಆದರೆ ಅಲ್ಲೂ ಯಜಮಾನಿಕೆಯಲ್ಲಿರುವ ಆರ್ಥಿಕ ಹಾಗೂ ರಾಜಕೀಯ ಆಸಕ್ತಿಗಳನ್ನು ಕಾಪಾಡುವ ಮತ್ತು ಬೆಳೆಸುವ ಸಂಸ್ಥೆ, ಥಿಯರಿ ಹಾಗೂ ವಿಧಾನಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರಕಿ ಪ್ರಶ್ನಿಸುವ ಸಂಸ್ಥೆ, ಥಿಯರಿ, ವಿಧಾನ ಇತ್ಯಾದಿಗಳು ಪ್ರೋತ್ಸಾಹವಿಲ್ಲದೆ ಮೂಲೆ ಗುಂಪಾಗುತ್ತವೆ. ನಮ್ಮ ರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಸಂಸ್ಥೆಗಳು ಅಂತರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಸಂಸ್ಥೆ ಗಳೊಂದಿಗೆ ಸಂಬಂಧ ಇಟ್ಟುಕೊಂಡರೆ ಮಾತ್ರ ನಮ್ಮವರಿಗೂ ಅಂತರಾಷ್ಟ್ರೀಯ ಮಾನ್ಯತೆ ಲಭ್ಯ. ಅದು ಬಿಟ್ಟು ಅಂತರಾಷ್ಟ್ರೀಯ ಮಟ್ಟದಲ್ಲಿ ಯಜಮಾನಿಕೆಯಲ್ಲಿರುವ ಸಂಸ್ಥೆ, ಥಿಯರಿ, ವಿಧಾನ ಇತ್ಯಾದಿಗಳನ್ನು ಪ್ರಶ್ನಿಸುವ ಸಂಸ್ಥೆ, ಥಿಯರಿ, ವಿಧಾನಗಳೊಂದಿಗೆ ಸಂಬಂಧ ಇಟ್ಟುಕೊಂಡರೆ ನಮ್ಮವರೂ ಕೂಡ ಅಂತರಾಷ್ಟ್ರೀಯ ಮಟ್ಟದ ಪ್ರೋತ್ಸಾಹವಿಲ್ಲದೆ, ಮಾನ್ಯತೆಯಿಲ್ಲದೆ ಸೊರಗಬೇಕಾಗುತ್ತದೆ. ಆದುದರಿಂದ ಸಹಜವಾಗಿಯೇ ನಮ್ಮಲ್ಲಿನ ಬಹುತೇಕರು ಯಜಮಾನಿಕೆಯಲ್ಲಿರುವ ಸಂಸ್ಥೆಗಳೊಂದಿಗೆ (ವರ್ಲ್ಡ್ ಬ್ಯಾಂಕ್, ಪ್ರತಿಷ್ಠಿತ ಅಮೇರಿಕನ್ ವಿಶ್ವವಿದ್ಯಾಲಯ ಹಾಗು ಸಂಶೋಧನ ಸಂಸ್ಥೆಗಳು, ಪ್ರತಿಷ್ಠಿತ ಯುರೋಪಿಯನ್ ವಿಶ್ವವಿದ್ಯಾಲಯ ಹಾಗು ಸಂಶೋಧನ ಸಂಸ್ಥೆಗಳು ಇತ್ಯಾದಿಗಳೊಂದಿಗೆ) ಸಂಬಂಧ ಇಟ್ಟು ಕೊಳ್ಳುತ್ತಾರೆ. ಅಂದರೆ ಅಂತರಾಷ್ಟ್ರೀಯ ಪ್ರತಿಷ್ಠಿತ ಸಂಸ್ಥೆಗಳ ಸಂಶೋಧನ ಅಜಂಡಾಗಳನ್ನು ಮುಂದುವರಿಸಲು ಪೈಪೋಟಿ ನಡೆಸುತ್ತಾರೆ. ಹೀಗೆ ರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಸಂಸ್ಥೆಗಳು ಯಜಮಾನಿಕೆಯಲ್ಲಿರುವ ಥಿಯರಿ, ವಿಧಾನ, ಭಾಷೆ ಇತ್ಯಾದಿಗಳನ್ನು ಪಸರಿಸುವ ವಾಹಕ ಗಳಾಗುತ್ತಿವೆ. ಈ ಎಲ್ಲ ಬೆಳವಣಿಗೆಗಳಿಂದ ಮೆಟಾ/ಮೆಗಾ/ಯುನಿವರ್ಸಲ್ ನೆರೆಟಿವ್‌ಗಳು ಪ್ರಾಮುಖ್ಯತೆ ಪಡೆದು ಲೋಕಲ್ ನೆರೆಟಿವ್‌ಗಳು ಸಮಾಜ ಸಂಶೋಧನೆಗಳಲ್ಲಿ ಪ್ರಾಮುಖ್ಯತೆ ಇಲ್ಲದೆ ಮೂಲೆ ಗುಂಪಾಗಿವೆ.[೨೨]

ಬಲಾಢ್ಯ ಸಂಸ್ಕೃತಿಗಳ ಅನುಭವದ ನೆಲೆಯಲ್ಲಿ ರೂಪುಗೊಂಡ ಥಿಯರಿ, ವಿಧಾನ, ಭಾಷೆ ಮುಂತಾದವುಗಳನ್ನು ಅಲ್ಲಗೆಳೆಯಲು ಸ್ಥಳೀಯ ಭಾಷೆಯಲ್ಲಿ ಸಂಶೋಧನೆ ನಡೆಸುವ ಅನಿವಾರ್ಯತೆ ಇದೆಯೆನ್ನುವ ವಾದ ಇದೆ. ಕರ್ನಾಟಕದಲ್ಲಾದರೆ ಕನ್ನಡದಲ್ಲಿ ಸಂಶೋಧನ ಪ್ರಬಂಧಗಳನ್ನು ರಚಿಸಿದರೆ ಸಂಶೋಧನ ಫಲಿತವನ್ನು ಜನರ ಪ್ರಜ್ಞೆಯ ಭಾಗವನ್ನಾಗಿಸಲು ಸುಲಭ ಎನ್ನುವ ವಾದ ಇದು. ತಳಸ್ತರ ಆಸಕ್ತಿಗಳನ್ನು ಪ್ರತಿನಿಧಿಸುವ ಸಂಶೋಧನ

ಬರಹಗಳು ಇಂಗ್ಲೀಷ್ ಅಥವಾ ಜನಸಾಮಾನ್ಯರ ಭಾಷೆಗಿಂತ ಭಿನ್ನ ಭಾಷೆಯಲ್ಲಿದ್ದರೆ ಅದು ಜನಸಾಮಾನ್ಯರಿಗೆ ತಲುಪುವುದು ಕಷ್ಟ. ಕನ್ನಡದಲ್ಲಿ ಅಥವಾ ಜನಸಾಮಾನ್ಯರ ಭಾಷೆಯಲ್ಲಿ ಬಂದರೆ ಇಂಗ್ಲೀಷ್‌ನಲ್ಲಿ ಕೆಲವೇ ಮಂದಿಗಳ ಗಮನಕ್ಕೆ ಬಂದ ವಿಚಾರಗಳು ಕನ್ನಡದಲ್ಲಿ ಅಥವಾ ಜನಸಾಮಾನ್ಯರ ಭಾಷೆಯಲ್ಲಿದ್ದರೆ ಇನ್ನೂ ಹೆಚ್ಚಿನ ಓದುಗರನ್ನು ತಲುಪಬಹುದು. ಅಷ್ಟು ಮಾತ್ರವಲ್ಲ ಬಹುತೇಕರಿಗೆ ಅರ್ಥವಾಗುವ ರೀತಿಯಲ್ಲಿ ಸರಳವಾಗಿ ಚಿಂತನೆಗಳನ್ನು ಮಂಡಿಸಿದರೆ ಸಾಮಾನ್ಯರು ಕೂಡ ಓದಿ ತಳಸ್ತರದ ಜನರ ಸ್ಥಿತಿಗತಿಗಳನ್ನು ಮತ್ತು ಅವರ ಆ ಸ್ಥಿತಿಗತಿಗಳಿಗೆ ಕಾರಣವಾದ ಅಂಶಗಳನ್ನು ಅರ್ಥಮಾಡಿಕೊಳ್ಳಬಹುದು. ಬಡತನ, ಅಸಮಾನತೆ, ಶೋಷಣೆ ಇತ್ಯಾದಿಗಳ ಹೊಸ ಆಯಾಮಗಳ ಪರಿಚಯ ಓದುಗರ ದೃಷ್ಟಿಕೋನವನ್ನು ಪರಿವರ್ತಿಸಬಹುದು. ದೃಷ್ಟಿಕೋನದ ಪರಿವರ್ತನೆ ಎಲ್ಲ ವಿಧದ ಪರಿವರ್ತನೆಗೆ ಅಡಿಪಾಯ. ಬಡತನ, ಅಸಮಾನತೆ, ಶೋಷಣೆ ಇತ್ಯಾದಿಗಳು ಮಾನವ ಸೃಷ್ಟಿ ಎನ್ನುವ ದೃಷ್ಟಿಕೋನ ಇರುವವರ ನಡವಳಿಕೆಗೂ ಇವೆಲ್ಲವು ದೇವರ ಸೃಷ್ಟಿ ಎಂದು ನಂಬುವವರ ಅಥವಾ ಲಿಂಗ, ಜಾತಿ, ಧರ್ಮ, ವರ್ಗ ಇತ್ಯಾದಿ ಭೇದಭಾವಗಳು ಸಹಜ ಎನ್ನುವ ದೃಷ್ಟಿಕೋನ ಇರುವವರ ನಡವಳಿಕೆಗೂ ಅಜಗಜಾಂತರ ವ್ಯತ್ಯಾಸವಿದೆ. ಎಲ್ಲ ಜನರು ಸಮಾನರು ಎನ್ನುವ ದೃಷ್ಟಿಕೋನ ಬಲವಾಗಿ ಬೇರೂರಿದರೆ ವಿವಿಧ ಗುರುತಿನ (ಜಾತಿ, ಧರ್ಮ, ಲಿಂಗ, ವರ್ಗ ಇತ್ಯಾದಿ ಗುರುತಿನ) ನೆಲೆಯಲ್ಲಿ ನಡೆಯುವ ಅಸಮಾನತೆಗಳ ವಿರುದ್ಧ ಶೋಷಿತರನ್ನು ಸಂಘಟಿಸುವುದು ಸುಲಭ ಇತ್ಯಾದಿ ವಾದಗಳ ಮೂಲಕ ಭಾಷೆ ಮತ್ತು ಸಂಶೋಧನೆಯ ಸಂಬಂಧವನ್ನು ವಿಶ್ಲೇಷಿಸಬಹುದು. ಆದರೆ ಭಾಷೆ ಮತ್ತು ಸಂಶೋಧನೆ ನಡುವಿನ ಸಂಬಂಧ ಇಷ್ಟೊಂದು ಸರಳವಾಗಿಲ್ಲ. ಸ್ಥಳೀಯ ಭಾಷೆಯಲ್ಲಿ ಸಂಶೋಧನೆ ನಡೆದ ಕೂಡಲೇ ಅದು ಜನರ ಪ್ರಜ್ಞೆಯ ಭಾಗವಾಗುತ್ತದೆ ಎಂದು ನಂಬುವುದು ಜ್ಞಾನ ಉತ್ಪಾದನೆ ಮತ್ತು ಜ್ಞಾನದ ಚಲನೆಯ ಸೀಮಿತ ತಿಳುವಳಿಕೆಯ ಪರಿಣಾಮ. ಜ್ಞಾನ ಉತ್ಪಾದನೆಯನ್ನು ಒಂದು ಒಪ್ಪಿತ ಚೌಕಟ್ಟಿನೊಳಗೆ ನಡೆಯುವ ಪ್ರಕ್ರಿಯೆಂದು ವ್ಯಾಖ್ಯಾನಿಸಿಕೊಂಡಿದ್ದೇವೆ. ಸಾಂಸ್ಥಿಕ ಹಾಗು ತಾತ್ವಿಕ ಚೌಕಟ್ಟುಗಳು ಸೇರಿ ಒಪ್ಪಿತ ಚೌಕಟ್ಟು ಸೃಷ್ಟಿಯಾಗುತ್ತದೆ. ಇಂತಹ ಒಪ್ಪಿತ ಚೌಕಟ್ಟು ನಿಗದಿಪಡಿಸುವ ಪ್ರಕ್ರಿಯೆ, ಇವುಗಳನುಸಾರ ನಡೆಯುವ ಸಂಶೋಧನೆ, ಇವುಗಳ ಮೇಲೆ ಬಹುತೇಕರಿಗಿರುವ ನಂಬಿಕೆ ಇತ್ಯಾದಿಗಳು ಜ್ಞಾನ ಉತ್ಪಾದನೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಸಂಶೋಧನೆ, ಜ್ಞಾನ, ತಾತ್ವಿಕತೆ, ವೈಧಾನಿಕತೆ, ಪರಿಭಾಷೆ, ಭಾಷೆ ಇತ್ಯಾದಿಗಳನ್ನು ಸಂಶೋಧನೆಯ ಒಪ್ಪಿತ ಚೌಕಟ್ಟು ವ್ಯಾಖ್ಯಾನಿಸುತ್ತದೆ. ಸಂಶೋಧನೆಯ ಈ ಚೌಕಟ್ಟಿನಿಂದ ಕನ್ನಡ ಭಾಷೆ ಮತ್ತು ಅದರಲ್ಲಿ ಉತ್ಪಾದನೆಯಾಗುವ ಜ್ಞಾನದ ಸಂಬಂಧವನ್ನು ವಿಶ್ಲೇಷಿಸಿದರೆ ಹೊಸತೊಂದು ಆಯಾಮ ಪರಿಚಯವಾಗಬಹುದು. ಕನ್ನಡದ ಸಂಶೋಧನ ಚೌಕಟ್ಟು ತನ್ನದೇ ಸಾಂಸ್ಥಿಕ ಹಾಗೂ ತಾತ್ವಿಕ ಚೌಕಟ್ಟುಗಳನ್ನು ನಿರ್ದೇಶಿಸುತ್ತಿವೆ. ಇಂತಹ ಸಂಶೋಧನ ಚೌಕಟ್ಟುಗಳು

ಪುರಸ್ಕರಿಸುವ ವೈಧಾನಿಕತೆ, ತಾತ್ವಿಕತೆ, ಪರಿಭಾಷೆ ಇತ್ಯಾದಿಗಳನ್ನು ಬಳಸಿಕೊಂಡು ಉತ್ಪಾದನೆಯಾಗುವ ಜ್ಞಾನವನ್ನು ಕನ್ನಡದಲ್ಲಿ ಉತ್ಪಾದನೆಯಾಗುವ ಜ್ಞಾನವೆಂದು ವ್ಯಾಖ್ಯಾನಿಸಲಾಗುವುದು. ಇವುಗಳು ಪ್ರತಿಪಾದಿಸುವ ವೈಧಾನಿಕತೆ, ಪರಿಭಾಷೆ, ತಾತ್ವಿಕತೆ ಇತ್ಯಾದಿಗಳನ್ನು ಬಳಸದೆ ಉತ್ಪಾದಿಸಲ್ಪಡುವ ಜ್ಞಾನ ಅವುಗಳು ಕನ್ನಡ ಭಾಷೆಯಲ್ಲಿದ್ದರು ಕನ್ನಡದಲ್ಲಿ ಉತ್ಪಾದಿತ ಜ್ಞಾನದ ವ್ಯಾಖ್ಯಾನದಿಂದ ಹೊರಗುಳಿಯುತ್ತವೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಕನ್ನಡ ಭಾಷೆಯಲ್ಲಿ ನಡೆಯುವ ಸಮಾಜ ಸಂಶೋಧನೆಗಳು. ಸಮಾಜ ಸಂಶೋಧನೆಗಳು ಕನ್ನಡ ಭಾಷೆಯಲ್ಲಿವೆಯೇ ಹೊರತು ಕನ್ನಡದ ತಾತ್ವಿಕ ಚೌಕಟ್ಟಿನಲ್ಲಿ(ತಾತ್ವಿಕ ಚರ್ಚೆಗಳು, ಭಾಷೆ, ಪರಿಭಾಷೆ, ವೈಧಾನಿಕತೆ ಇತ್ಯಾದಿಗಳು) ನಡೆಯುತ್ತಿಲ್ಲ. ಸಮಾಜ ಸಂಶೋಧನೆ ತನ್ನದೇ ವೈಧಾನಿಕತೆ, ತಾತ್ವಿಕತೆ, ಪರಿಭಾಷೆಗಳನ್ನು ಬಳಸಿಕೊಂಡು ಕನ್ನಡದಲ್ಲಿ ಜ್ಞಾನ ಉತ್ಪಾದಿಸುತ್ತಿದೆ.

ಈ ಬಗೆಯಲ್ಲಿ ಉತ್ಪಾದಿಸಲ್ಪಟ್ಟ ಸಮಾಜ ಸಂಶೋಧನ ಜ್ಞಾನವನ್ನು ಜನಸಾಮಾನ್ಯರತ್ತ ಒಯ್ಯಲು ಕನ್ನಡದ ಸಂಶೋಧನ ಚೌಕಟ್ಟು ಮುಂಚೂಣಿಗೆ ತಂದಿರುವ ವ್ಯವಸ್ಥೆಗಳ ಮೇಲೆ ಭರವಸೆ ಇಡಲಾಗುತ್ತಿದೆ. ಕನ್ನಡ ವಿಶ್ವವಿದ್ಯಾಲಯ, ಕನ್ನಡ ಪ್ರಾಧಿಕಾರ, ಸಾಹಿತ್ಯ ಪರಿಷತ್ ಮುಂತಾದ ಸಾಂಸ್ಥಿಕ ಚೌಕಟ್ಟುಗಳು ಕನ್ನಡ ಜ್ಞಾನ ಉತ್ಪಾದನೆ ಮತ್ತು ಚಲನೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಇವುಗಳಲ್ಲಿ ಕನ್ನಡದ ಸಂಶೋಧನ ಚೌಕಟ್ಟು ಪ್ರತಿಪಾದಿಸುವ ತಾತ್ವಿಕತೆ ಹಾಗು ಪರಿಭಾಷೆಗೆ ಬದ್ಧತೆ ಹೊಂದಿರುವವರೇ ಹೆಚ್ಚಿದ್ದಾರೆ. ಸಮಾಜ ಸಂಶೋಧನ ತಾತ್ವಿಕತೆಗಳನ್ನು ಹಾಗು ಪರಿಭಾಷೆಗಳನ್ನು ಬಳಸಿಕೊಂಡು ಸೃಷ್ಟಿಯಾದ ಜ್ಞಾನ ಇವರುಗಳಿಗೆ ಸಹಜವಾಗಿಯೇ ಪರಕೀಯವಾಗುತ್ತವೆ. ಇವುಗಳನ್ನು ಜನರತ್ತ ಒಯ್ಯಲು (ಪ್ರಕಟಿಸುವುದು, ವಿಮರ್ಶಿಸುವುದು, ವಿಶ್ಲೇಷಿಸುವುದು, ಚರ್ಚಿಸುವುದು ಇತ್ಯಾದಿಗಳ ಮೂಲಕ) ಇವರುಗಳು ವಿಶೇಷ ಆಸಕ್ತಿ ತೋರಿಸದಿರಬಹುದು. ಇವುಗಳ ಜತೆಗೆ ಕನ್ನಡ ಪತ್ರಿಕೆಗಳು ಹಾಗು ಇತರ ಮಾಧ್ಯಮಗಳು ಕೂಡ ಕನ್ನಡದ ಸಂಶೋಧನ ಚೌಕಟ್ಟಿನಲ್ಲಿ ಉತ್ಪಾದಿತ ಜ್ಞಾನವನ್ನು ಹೆಚ್ಚು ಹೆಚ್ಚು ಜನರಿಗೆ ಪರಿಚಯಿಸುವುದರಿಂದ ಸಮಾಜ ಸಂಶೋಧನ ಚೌಕಟ್ಟುಗಳು ಉತ್ಪಾದಿಸುವ ಜ್ಞಾನ ಕನ್ನಡದಲ್ಲಿದ್ದರೂ ಜನರಿಗೆ ಅಪರಿಚಿತವಾಗುತ್ತವೆ. ಈ ಸಮಸ್ಯೆಗಳಿಂದ ಹೊರಬರಲು ಕನ್ನಡದ ಸಂಶೋಧನ ಚೌಕಟ್ಟಿನಲ್ಲಿ ಸಂಶೋಧನ ಮಾಡುವುದು ಪರಿಹಾರವಲ್ಲ. ಯಾಕೆಂದರೆ ಕನ್ನಡದ ಸಂಶೋಧನ ಚೌಕಟ್ಟು ತನ್ನದೇ ಸಮಸ್ಯೆಗಳನ್ನು ಎದುರಿಸುತ್ತಿದೆ. ಕನ್ನಡದ ಸಂಶೋಧನ ಚೌಕಟ್ಟು ಉತ್ಪಾದಿಸುವ ಜ್ಞಾನದ ಇತಿಮಿತಿಗಳನ್ನು ಮುಂದಿನ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ್ದೇನೆ. ಈ ಹಿನ್ನೆಲೆಯಲ್ಲಿ ಸಮಾಜ ಸಂಶೋಧನ ಚೌಕಟ್ಟನ್ನು ಬಲಪಡಿಸುವುದು ಈ ಸಮಸ್ಯೆಗೆ ದೂರಗಾಮಿ ಪರಿಹಾರವಾಗಬಹುದು. ಸಮಾಜ ಸಂಶೋಧನ ಚೌಕಟ್ಟನ್ನು (ಸಾಂಸ್ಥಿಕ ಹಾಗು ತಾತ್ವಿಕ ಚೌಕಟ್ಟುಗಳನ್ನು) ಬಲಪಡಿಸುವುದರ ಜತೆಜತೆಗೆ ಸಮಾಜ

ಸಂಶೋಧನ ಸಮುದಾಯವನ್ನು ರೂಪಿಸಿವುದು ಕೂಡ ಈ ಸಮಸ್ಯೆಗೆ ಉತ್ತಮ ಪರಿಹಾರ ವಾಗಬಹುದು ಹೊರತು ಕನ್ನಡದಲ್ಲಿ (ಭಾಷೆಯಲ್ಲಿ) ಸಂಶೋಧನೆ ನಡೆಸಿದ ಕೂಡಲೇ ಕ್ರಾಂತಿಯಾಗುತ್ತದೆ ಎಂದು ತಿಳಿಯುವುದು ಅವಾಸ್ತವ.

ಒಟ್ಟಾರೆ ಪರಿಸರದ ದೃಷ್ಟಿಯಿಂದ ನೋಡಿದರೆ ಸಂಶೋಧನೆ ಏಕಾಂತದಲ್ಲಿ ನಡೆಯುವ ಪ್ರಕ್ರಿಯೆಯಲ್ಲ, ಒಟ್ಟಾರೆ ಸಾಮಾಜಿಕ ಪರಿಸರದಲ್ಲಿ ನಡೆಯುವ ಪ್ರಕ್ರಿಯೆ. ಆದುದರಿಂದ ಸಂಶೋಧಕರ ಸಂದರ್ಭದಲ್ಲಿ ಯಜಮಾನಿಕೆಯಲ್ಲಿರುವ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಸಂಗತಿಗಳು ಡೈಲೆಕ್ಟಿಕ್ ನೆಲೆಯಲ್ಲಿ ಸಂಶೋಧಕರನ್ನು ಮತ್ತು ಸಂಶೋಧನೆಯನ್ನು ಪ್ರಭಾವಿಸುತ್ತವೆ. ಡೈಲೆಕ್ಟಿಕ್ ನೆಲೆಯಲ್ಲಿ ಅಂದರೆ ಯಜಮಾನಿಕೆ ಯಲ್ಲಿರುವ ಸಂಗತಿಗಳನ್ನು ಒಪ್ಪುವ ಮತ್ತು ವಿರೋಧಿಸುವ ನೆಲೆಯಲ್ಲಿ ಸಂಶೋಧನೆ ಪ್ರಭಾವಕ್ಕೆ ಒಳಗಾಗುತ್ತವೆ. ಸಂಶೋಧನ ಪ್ರಕ್ರಿಯೆಗೆ ಸೀಮಿತವಾಗಿ ನೋಡುವುದಾದರೆ ಸಂಶೋಧನೆ ಯಾವುದೋ ಒಂದು ಬೆಳವಣಿಗೆಯ ಅಥವಾ ಪ್ರಕ್ರಿಯೆಯ ನಿಜವನ್ನು ಶೋಧಿಸುವುದಕ್ಕೆ ಸೀಮಿತವಲ್ಲ. ಅಂದರೆ ಬೆಳವಣಿಗೆ ನಡೆದಿದೆಯೋ ಇಲ್ಲವೇ ಎಂದು ಪರೀಕ್ಷಿಸುವುದು ಅಥವಾ ಬೆಳವಣಿಗೆಯ ನಿಜವನ್ನು ಶೋಧಿಸುವುದು ಸಂಶೋಧನೆಯ ಆದ್ಯತೆಯಲ್ಲ. ಬೆಳವಣಿಗೆಯ ಕಾರಣವನ್ನು ಅಥವಾ ಯಾಕೆ ಮತ್ತು ಹೇಗೆ ಬೆಳವಣಿಗೆ ನಡೆದಿದೆ ಎನ್ನುವುದನ್ನು ಪತ್ತೆ ಹಚ್ಚುವುದು ಕೂಡ ಸಂಶೋಧನೆಯ ಆದ್ಯತೆಯಾಗಬೇಕಿಲ್ಲ. ಪ್ರಕ್ರಿಯೆಯನ್ನು ಅಥವಾ ಬೆಳವಣಿಗೆಯನ್ನು ಯಾಕೆ ಮತ್ತು ಹೇಗೆ ನಡೆದಿದೆ ಎನ್ನುವುದನ್ನು ವಿವಿಧ ಆಸಕ್ತಿಗಳು ಕಟ್ಟಿಕೊಡುವ ಬಗೆಯನ್ನು ಅರ್ಥಮಾಡಿಕೊಳ್ಳುವುದು ಸಂಶೋಧನೆಯ ಮುಖ್ಯ ಆದ್ಯತೆಯಾಬೇಕಾಗಿದೆ. ಆದುದರಿಂದ ಸಂಶೋಧನೆ ಪರಿಶುದ್ಧ ಜ್ಞಾನದ ಅಥವಾ ಸತ್ಯದ ಹುಡುಕಾಟವಲ್ಲ; ವಾದದ ಪ್ರತಿಪಾದನೆ ಅಥವಾ ಸತ್ಯದ ಪ್ರತಿಪಾದನೆ. ಈಗಾಗಲೇ ಸ್ಥಾಪಿತವಾಗಿರುವ ವಾದಗಳ/ಸತ್ಯಗಳೊಂದಿಗೆ ಸಂವಾದ ನಡೆಸಿ ಸಂಶೋಧಕರು ತಮ್ಮ ವಾದವನ್ನು ಸ್ಥಾಪಿಸುತ್ತಾರೆ. ಆದುದರಿಂದ ವಿಚಾರವೊಂದನ್ನು ಸತ್ಯವೆಂದು ಹೇಗೆ ಪ್ರತಿಪಾದಿಸಲಾಗುತ್ತಿದೆಯೆಂದು ಅಧ್ಯಯನ ಮಾಡುವುದು ಕೂಡ ಸಂಶೋಧನೆಯಾಗುತ್ತದೆ. ಇದೊಂದು ಬಗೆಯಲ್ಲಿ ಕೋರ್ಟಲ್ಲಿ ವಾದ ಮಂಡಿಸಿದಂತೆ. ನ್ಯಾಯಾಧೀಶರ ಮುಂದೆ ವಕೀಲರು ವಾದ ಮಂಡಿಸುತ್ತಾರೆ. ವಕೀಲರ ವಾದವನ್ನು ಪ್ರತಿವಾದಿಗಳು ಅಲ್ಲಗೆಳೆಯುತ್ತಾರೆ. ತನ್ನ ವಾದದ ಸಮರ್ಥನೆಗೆ ಪುರಾವೆಯ ಮೇಲೆ ಪುರಾವೆಗಳನ್ನು ಒದಗಿಸುತ್ತಾ ವಕೀಲರು ತಮ್ಮ ವಾದವನ್ನು ಸ್ಥಾಪಿಸುತ್ತಾರೆ. ಎಷ್ಟೋ ಬಾರಿ ಸುಳ್ಳು ಸತ್ಯವಾಗಬಹುದು ಸತ್ಯ ಸುಳ್ಳಾಗಬಹುದು. ನ್ಯಾಯಾಧೀಶರು ಒಮ್ಮೆ ವಾದ ಸರಿಯೆಂದು ಒಪ್ಪಿಕೊಂಡರೆ ಸತ್ಯ ಸುಳ್ಳು ಏನೇ ಇರಲಿ ಸತ್ಯವಾಗುತ್ತದೆ. ಹೆಚ್ಚೆಂದರೆ ಕೇಸ್ ಮೇಲಿನ ಕೋರ್ಟ್‌ಗೆ ಹೋಗುತ್ತದೆ. ಮೇಲಿನ ಕೋರ್ಟಲ್ಲಿ ತೀರ್ಮಾನವಾದುದನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಇದೇ ರೀತಿ ಸಂಶೋಧನೆ ಕೂಡ. ವಕೀಲರು ಅಥವಾ ನ್ಯಾಯಾಧೀಶರು ಇವೆರಲ್ಲ ಹೇಗೆ ಪಕ್ಷಪಾತವಿಲ್ಲದೆ ನ್ಯಾಯ ತೀರ್ಮಾನ ಮಾಡುತ್ತಾರೆ ಎಂದು ನಂಬುತ್ತೇವೆಯೋ ಇಲ್ಲೂ ಸಂಶೋಧಕರು

ಮತ್ತು ಮೌಲ್ಯಮಾಪಕರು ನಿಷ್ಪಕ್ಷಪಾತವಾಗಿ ಜ್ಞಾನ ಉತ್ಪಾದಿಸುತ್ತಾರೆಂದು ನಂಬುತ್ತೇವೆ. ಸಂಶೋಧನ ಚೌಕಟ್ಟಿನ ಮೇಲಿನ ನಂಬಿಕೆಯನ್ನು ಮತ್ತು ಉತ್ಪಾದಿತ ಜ್ಞಾನದ ಮೇಲಿನ ಜನಸಾಮಾನ್ಯರ ಒಪ್ಪಿಗೆಯನ್ನು ಪರೋಕ್ಷವಾಗಿ ಪ್ರತಿನಿಧಿಗಳ ಮೂಲಕ ಸಂಗ್ರಹಿಸಲಾಗುತ್ತದೆ. ಇವರುಗಳು ಚುನಾಯಿತ ಪ್ರತಿನಿಧಿಗಳಲ್ಲ; ವಿಷಯದ ಮೇಲಿತ ತಜ್ಞತೆ, ಸಂಸ್ಥೆಗಳ ಯಜಮಾನಿಕೆ, ಬಂಡವಾಳ ಹೊಂದಿರುವುದು ಇತ್ಯಾದಿಗಳು ಈ ಪ್ರತಿನಿಧಿಗಳ ಆಯ್ಕೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಅಂದರೆ ತಾತ್ವಿಕವಾಗಿ ವಿವಿಧ ಆಸಕ್ತಿಗಳು ಪ್ರತಿನಿಧಿಸುವ ಪ್ರತಿನಿಧಿಗಳು ಇಲ್ಲು ಇದ್ದಾರೆ. ಆದರೂ ಮೇಲ್ವರ್ಗಗಳ ಆಸಕ್ತಿಗಳನ್ನು ಪ್ರತಿನಿಧಿಸುವ ಜ್ಞಾನಗಳು ಹೆಚ್ಚಿನ ಪ್ರಮಾಣದಲ್ಲಿ ಚೌಕಟ್ಟಿನ ಲೆಜಟಮೆಸಿಯನ್ನು ಮತ್ತು ಜ್ಞಾನದ ಲೆಜಿಟಮೆಸಿಯನ್ನು ಪ್ರತಿನಿಧೀಕರಿಸುವವರಿಂದ ಒಪ್ಪಿಗೆಯನ್ನು ಪಡೆದು ಮೇಲ್ವರ್ಗಗಳ ಆಸಕ್ತಿಗಳನ್ನು ಪ್ರತಿನಿಧಿಸುವ ಜ್ಞಾನಗಳು ಬಹುತೇಕರ ಒಪ್ಪಿಗೆ ಪಡೆದ ಜ್ಞಾನದ ಚಿತ್ರಣ ಪಡೆಯುತ್ತವೆ.

ಜ್ಞಾನ ಉತ್ಪಾದನೆಗೂ ವರ್ಗಸಕ್ತಿಗಳ ನಡುವೆ ಇರುವ ಸಂಬಂಧ ಸಂಶೋಧನೆಯ ಒಪ್ಪಿತ ಚೌಕಟ್ಟಿನ ಏಣಿಶ್ರೇಣಿಗಳನ್ನು ನಿರ್ಣಯಿಸುತ್ತವೆ. ಇಲ್ಲಿ ಅಧಿಕಾರದ ಪ್ರಶ್ನೆಯನ್ನು ಪ್ರತ್ಯೇಕವಾಗಿ ಚರ್ಚಿಸುವ ಬದಲು ಅದು ಸಂಶೋಧನೆಯ ವ್ಯಾಖ್ಯಾನದೊಳಗೆ ಸೇರಿದೆ ಎನ್ನುವ ರೀತಿಯಲ್ಲಿ ಚರ್ಚಿಸಲಾಗಿದೆ. ಸಂಶೋಧನೆಯನ್ನು ಒಂದು ಒಪ್ಪಿತ ಚೌಕಟ್ಟಿನೊಳಗೆ ನೋಡುವುದು ಮತ್ತು ಆ ಒಪ್ಪಿತ ಚೌಕಟ್ಟು ಸಾಂಸ್ಥಿಕ ಹಾಗೂ ತಾತ್ವಿಕ ವಿಚಾರಗಳನ್ನು ಒಳಗೊಂಡಿರುವುದು ಅಧಿಕಾರದ ಒಳಗೊಳ್ಳುವಿಕೆಗೆ ಮುಖ್ಯ. ಸಾಂಸ್ಥಿಕ ಚೌಕಟ್ಟು ನೇರವಾಗಿ ಸಂಸ್ಥೆಯ ಒಟ್ಟಾರೆ ಅಧಿಕಾರವನ್ನು ಮತ್ತು ಆ ಒಟ್ಟಾರೆ ಅಧಿಕಾರ ವಿವಿಧ ಅಧಿಕಾರದ ಸ್ಥಾನಗಳ ನಡುವೆ ಹೇಗೆ ಹಂಚಿಹೋಗಿದೆ ಎನ್ನುವುದನ್ನು ಸೂಚಿಸುತ್ತದೆ. ಒಪ್ಪಿತ ಚೌಕಟ್ಟಿನಲ್ಲಿ ಸಾಂಸ್ಥಿಕ ಸಂಗತಿಗಳು ಪ್ರಕಾರವಾಗಿ ಎದ್ದು ಕಾಣುತ್ತಿದ್ದು (ಸಂಸ್ಥೆ, ಅಲ್ಲಿನ ವಿವಿಧ ಹುದ್ದೆಗಳು, ಆ ಹುದ್ದೆಗಳಲ್ಲಿರುವವರ ಅಧಿಕಾರಗಳು, ನೀತಿ ನಿಯಮಗಳು ಇತ್ಯಾದಿಗಳು) ತಾತ್ವಿಕ ಪ್ರಶ್ನೆಗಳು ಮಹತ್ವದ ಸಂಗತಿಗಳಾಗದಿದ್ದರೆ ಒಪ್ಪಿತ ಚೌಕಟ್ಟಿನಲ್ಲಿ ರಾಜಕೀಯ ಅಧಿಕಾರದ ಪ್ರಶ್ನೆ ಮುಂಚೂಣಿಯಲ್ಲಿದೆ ಎನ್ನುವ ಅರ್ಥ. ತಾತ್ವಿಕ ಸಂಗತಿಗಳನ್ನು ಸಾಂಸ್ಥಿಕ ಚೌಕಟ್ಟಿನೊಳಗೆ ಇರುವವರೇ ನಿರ್ಧರಿಸುವುದಿಲ್ಲ; ಒಟ್ಟಾರೆ ಪರಿಸರದಲ್ಲಿರುವ ಎಲ್ಲರು ತಾತ್ವಿಕ ಪರಿಸರವನ್ನು ಪ್ರಭಾವಿಸುತ್ತ ಇರುತ್ತಾರೆ. ಈ ದೃಷ್ಟಿಯಿಂದ ಇದೊಂದು ಡೆಮಾಕ್ರಟಿಕ್ ಸ್ಪೇಸ್. ಆದರೆ ಸಾಂಸ್ಥಿಕ ಸ್ಪೇಸ್ ಅಗಲ್ಲ; ಇಲ್ಲಿ ನಿರ್ದಿಷ್ಟ ಏಣಿಶ್ರೇಣಿಗಳಿರುತ್ತವೆ ಮತ್ತು ಇಲ್ಲಿ ಅಧಿಕೃತವಾಗಿ ಇರುವವರು ಮಾತ್ರ ಅಧಿಕಾರ ಚಲಾಯಿಸಬಹುದು. ಇದು ಡೆಮಾಕ್ರಟಿಕ್ ಸ್ಪೇಸ್ ಅಲ್ಲ. ಹೆಚ್ಚು ಅಧಿಕಾರವುಳ್ಳ ಪ್ರದೇಶದಲ್ಲಿರುವ ಜ್ಞಾನ ಉತ್ಪಾದನೆಯ ಕೇಂದ್ರಗಳು ಕೂಡ ಹೆಚ್ಚು ಅಧಿಕಾರಯುತ ವಾಗಿರುವುದು ಕಂಡುಬರುತ್ತದೆ. ಹೆಚ್ಚು ಅಧಿಕಾರಯುತ ಅಂದರೆ ಅಂತಹ ಕೇಂದ್ರಗಳಲ್ಲಿ ಸೃಷ್ಟಿಯಾಗುವ ಜ್ಞಾನ ಮತ್ತು ಜ್ಞಾನ ಉತ್ಪಾದನೆಯ ಪ್ರಕ್ರಿಯೆ ಕಡಿಮೆ ಅಧಿಕಾರವುಳ್ಳ

ಪ್ರದೇಶಗಳ ಜ್ಞಾನಕ್ಕೆ ಮತ್ತು ಜ್ಞಾನ ಉತ್ಪಾದನೆ ಪ್ರಕ್ರಿಯೆಗೆ ನಾಯಕತ್ವವನ್ನು ಕೊಡು ವುದು, ಪ್ರಭಾವಿಸುವುದು, ಚಾಲ್ತಿಯಲ್ಲಿರುವುದು ಇತ್ಯಾದಿಗಳು ನಡೆಯುತ್ತದೆ. ಜ್ಞಾನ ಉತ್ಪಾದನೆ ಪ್ರಕ್ರಿಯೆ ಅಧಿಕಾರದೊಂದಿಗೆ ನೇರ ಸಂಬಂಧ ಹೊಂದಿರುವುದರಿಂದ ಮತ್ತು ಕೇಂದ್ರೀಕೃತ ಅಧಿಕಾರ ಇರುವಿಕೆಯನ್ನು ಒಪ್ಪಿಕೊಂಡಿರುವ ಸಮಾಜಗಳಲ್ಲಿ ಇವೆಲ್ಲ ಸಹಜ ಎನ್ನುವ ರೀತಿಯಲ್ಲಿ ನಡೆಯುತ್ತವೆ. ವಾಸ್ತವದಲ್ಲಿ ಆಧುನಿಕೋತ್ತರ ಚಿಂತನೆಗಳು ಜ್ಞಾನ ಉತ್ಪಾದನೆಯ ಚೌಕಟ್ಟಿನಲ್ಲಿರುವ ಈ ಬಗೆಯ ದಂದ್ವಗಳನ್ನು ಪರಿಹರಿಸಲು ಪ್ರಯತ್ನಿಸಿವೆ. ಸಂಶೋಧನೆಯ ತಾತ್ವಿಕ ಚಿಂತನೆಗಳನ್ನು ಸಮಸ್ಯೀಕರಿಸಿ ಒಂದು ಸತ್ಯದ ಕಲ್ಪನೆಯನ್ನು (ಒಂದು ಕೇಂದ್ರದ ಕಲ್ಪನೆ) ಒಡೆದು ಹಲವು ಸತ್ಯದ ಕಲ್ಪನೆಯನ್ನು (ಹಲವು ಕೇಂದ್ರಗಳ ಕಲ್ಪನೆಯನ್ನು) ಚಾಲ್ತಿಗೆ ತಂದವು. ಆದರೆ ಎಷ್ಟೋ ಬಾರಿ ಈ ಬಗೆಯ ತಾತ್ವಿಕ ಚಿಂತನೆಗಳು ಆಚರಣೆಗಳಾಗಿ ಮಾರ್ಪಾಟುಗೊಳ್ಳುವುದಿಲ್ಲ. ಸಂಶೋಧನ ಕೊಡುಗೆಯ ಮೇಲಿನ ಮುಂದಿನ ಅಧ್ಯಾಯದಲ್ಲಿ ಸಂಶೋಧನೆಯ ತಾತ್ವಿಕ ಹಾಗು ಪಾಲಿಸಿ ಕೊಡುಗೆಗಳು ಹಾಗು ಅವುಗಳು ಆಚರಣೆಗಳಾಗಿ ಪರಿವರ್ತನೆಗೊಳ್ಳುವ ಅಥವಾ ಗೊಳ್ಳದಿರುವ ಸಮಸ್ಯೆಗಳನ್ನು ಚರ್ಚಿಸಿದ್ದೇನೆ.

ಕೊನೆ ಟಿಪ್ಪಣಿಗಳು

೧. ಸಂಶೋಧನ ವಿದ್ಯಾರ್ಥಿಗಳಿಗೆ ಕಮ್ಮಟಗಳನ್ನು ಸಂಘಟಿಸಿದ ಸಂದರ್ಭದಲ್ಲಿ ಅವರಲ್ಲಿ ಸಂಶೋಧನೆಯ ವ್ಯಾಖ್ಯಾನ ಏನೆಂದು ಕೇಳಿದಾಗ ಮೇಲಿನ ವ್ಯಾಖ್ಯಾನಗಳು ದೊರಕಿವೆ. ಸಂಶೋಧನ ವಿಧಾನಗಳ ಮೇಲಿನ ಪುಸ್ತಕಗಳಲ್ಲೂ ಹೆಚ್ಚು ಕಡಿಮೆ ಮೇಲಿನದ್ದೇ ಅರ್ಥಕೊಡುವ ಸಂಶೋಧನೆಯ ವ್ಯಾಖ್ಯಾನಗಳಿವೆ. ೧. ರತಿ ಶಪೇಕರ್, *ಎ ಟೆಕ್ಸ್ಟ್ ಬುಕ್ ಆಫ್ ಸೋಶಿಯಲ್ ರಿಸರ್ಚ್*, ಡೆಲ್ಲಿ: ಡೊಮಿನೆಂಟ್ ಪಬ್ಲಿಷರ್ಸ್, ೨೦೦೪, ೨. ಮನೋಜ್ ಶರ್ಮ, ರಿಸರ್ಚ್ ಮೆಥಡಾಲಜಿ, ನ್ಯೂಡೆಲ್ಲಿ: ಅನ್‌ಮೋಲ್ ಪಬ್ಲಿಕೇಸನ್ಸ್, ೨೦೦೪, ೩. ಆರವಿಂದ್ ಕುಮಾರ್, *ರಿಸರ್ಚ್ ಮೆಥಡಾಲಜಿ ಇನ್ ಸೋಶಿಯಲ್ ಸಯನ್ಸ್*, ನ್ಯೂಡೆಲ್ಲಿ : ಸರೂಪ್ ಅಂಡ್ ಸನ್ಸ್, ೨೦೦೨, ೪. ಡೇವಿಡ್ ಹಾಲ್ ಅಂಡ್ ಇರ್ನೆ ಹಾಲ್, *ಪ್ರಾಕ್ಟಿಕಲ್ ಸೋಶಿಯಲ್ ರಿಸರ್ಚ್*, ಲಂಡನ್ : ಮೆಕ್‌ಮಿಲನ್ ಪ್ರೆಸ್ ಲಿಮಿಟೆಡ್, ೧೯೯೬, ೫. ಪೀಟರ್ ಹೆಚ್ ಮಾನ್, *ಮೆಥಡ್ ಆಫ್ ಸೋಶಿಯಲ್ ಇನ್‌ವೆಸ್ಟಿಗೇಶನ್*, ನ್ಯೂಯಾರ್ಕ್ : ಬೆಸಿಲ್ ಬ್ಲೇಕ್‌ವೆಲ್, ೧೯೮೫, ೬. ಆಂಡ್ರ್ಯ ಸೇಯರ್, *ಮೆಥಡ್ ಇನ್ ಸೋಶಿಯಲ್ ಸಯನ್ಸ್ - ಎ ರಿಯಲಿಸ್ಟ್ ಎಪ್ರೋಚ್*, ಲಂಡನ್ : ಹಚ್ಚಿನ್‌ಸನ್, ೧೯೮೪.

೨. ಬಹುತೇಕ ಆರಂಭಿಕ ಸಂಶೋಧಕರಲ್ಲಿ ಈ ವಾದ ಮಂಡನೆಯ ಕಲ್ಪನೆ ಇಲ್ಲದೆಯೇ ಸಂಶೋಧನೆ ನಡೆಯುತ್ತದೆ. ಸಂಶೋಧನೆಯನ್ನು ಹಲವಾರು ತುಂಡುಗಳಾಗಿ ಅಥವಾ ಭಾಗಗಳಾಗಿ ನೋಡಲಾಗುತ್ತದೆ. ವಿಷಯ ಆಯ್ಕೆ, ಪ್ರಸ್ತಾವ ರಚನೆ, ಸಾಹಿತ್ಯ ಸಮೀಕ್ಷೆ, ಕ್ಷೇತ್ರಕಾರ್ಯ, ಅಂಕಿ ಅಂಶಗಳ ಪರಿಷ್ಕರಣೆ, ಕೋಷ್ಟಕ ರಚನೆ, ಪ್ರಬಂಧ ರಚನೆ, ಪರಾಮರ್ಶನ ಪುಸ್ತಕಗಳ ಪಟ್ಟಿ ಇತ್ಯಾದಿ ಭಾಗಗಳಾಗಿ ಸಂಶೋಧನೆಯನ್ನು ನೋಡಲಾಗುತ್ತದೆ. ಹೀಗೆ ನೋಡುವಾಗ ಈ ಎಲ್ಲ ಪ್ರಕ್ರಿಯೆಗಳನ್ನು ಯಾತಕ್ಕಾಗಿ ಮಾಡುತ್ತೇವೆ ಎನ್ನುವ ಪ್ರಶ್ನೆ ಮೂಲೆಗುಂಪಾಗಿ ಪ್ರತಿ ಭಾಗ ಮಾತ್ರ ಸಂಶೋಧಕರ ಮುಖ್ಯ ಆದ್ಯತೆಯಾಗುತ್ತದೆ. ಇದು ಸಂಶೋಧನೆಯ ಒಂದು ವ್ಯಾಖ್ಯಾನ. ಇದುವೇ ಅಂತಿಮ ಅಥವಾ ಇದುವೇ ಪರಿಪೂರ್ಣವಾದ ವ್ಯಾಖ್ಯಾನ ಎನ್ನುವ ಅರ್ಥ ಇಲ್ಲಿಲ್ಲ. ಈ ದೃಷ್ಟಿಯಿಂದಲೂ ಸಂಶೋಧನೆಯನ್ನು ನೋಡಬಹುದು ಮತ್ತು ಈ ದೃಷ್ಟಿಯಿಂದ ಯಾಕೆ ನೋಡಬೇಕು ಎನ್ನುವ ವಿವರಣೆಯನ್ನು ಈ ಅಧ್ಯಾಯ ಕೊಡುತ್ತಿದೆ.

೩. ಆಧುನಿಕೋತ್ತರ ಚಿಂತನೆಗಳು ಕುರಿತ ವಿವರಗಳನ್ನು ನಾನು ಈ ಕೆಳಗಿನ ಪುಸ್ತಕಗಳಿಂದ ಪಡೆದಿದ್ದೇನೆ. ಜಾನ್ ಸ್ಟರಕ್ (ಸಂ), ಸ್ಟ್ರಕ್ಚರಲಿಸಂ ಆಂಡ್ ಸಿನ್ಸ್ ಫ್ರೋಮ್ ಲೆವಿಸ್ಟ್ರಾಸ್ ಟು ಡೆರಿಡಾ, ಆಕ್ಸ್‌ಫರ್ಡ್: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೭೯, ಜೇಮ್ಸ್ ಡಿ ಫೇಬಿಯನ್(ಸಂ), ಮೈಕೆಲ್ ಫುಕೋ ಎಸೆಯನ್ಶಿಯಲ್ ವರ್ಕ್ಸ್ ಆಫ್ ಫುಕೋ, ೧೯೫೪-೧೯೮೪, ವ್ಯಾಲ್ಯೂಂ ೩, ಲಂಡನ್ : ಪೆಂಗ್ವಿನ್ ಬುಕ್ಸ್, ೧೯೯೪. ಈ ಓದಿನ ಜತೆಗೆ ಆರ್.ಶಶಿಧರ್ ಅವರ ಸಂಸ್ಕೃತಿ ಅಧ್ಯಯನ, ಪ್ರಬಂಧ (ಈ ಅಪ್ರಕಟಿತ ಪ್ರಬಂಧವನ್ನು ಅವರು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗ ಸಂಘಟಿಸಿದ ಸಮಾಜ, ಸಂಸ್ಕೃತಿ ಅಧ್ಯಯನ ಕಮ್ಮಟ ೭-೧೨ ಆಗಸ್ಟ್, ೨೦೦೮ರಲ್ಲಿ ಮಂಡಿಸಿದ್ದಾರೆ) ಹೆಚ್ಚು ಉಪಯುಕ್ತವಾಗಿದೆ.

೪. ಏಕೀಕೃತ ಕರ್ನಾಟಕದ ವಿವಿಧ ಪ್ರದೇಶದಲ್ಲಿ ಬೇರೆ ಬೇರೆ ಭಾಷೆಗಳಿದ್ದವು ಮತ್ತು ಬೇರೆ ಬೇರೆ ಪ್ರದೇಶಗಳಲ್ಲಿ ಕನ್ನಡ ಕೂಡ ಬೇರೆ ಬೇರೆ ಇತ್ತು. ಈ ವಿವಿಧತೆಯನ್ನು ಬದಿಗಿಟ್ಟು ಒಂದು ಅಧಿಕೃತ ಅಥವಾ ಪರಿಷ್ಕೃತ ಕನ್ನಡವನ್ನು ಮುಂಚೂಣಿಗೆ ತರಲಾಯಿತು. ಇದಕ್ಕಾಗಿ ಕನ್ನಡ ಪಂಡಿತರ ಸಮಿತಿಯನ್ನು ರೂಪಿಸಲಾಯಿತು. ಈ ಸಮಿತಿ ಕರ್ನಾಟಕದ ಅಧಿಕೃತ ಕನ್ನಡವನ್ನು ತೀರ್ಮಾನಿಸಿದೆ. ಈ ಕನ್ನಡದಲ್ಲಿ ಸಾಕಷ್ಟು ಸಂಸ್ಕೃತ ಭಾಷೆಯ ಪ್ರಭಾವ ಇತ್ತು. ಇದೇ ಕನ್ನಡವನ್ನು ಪಠ್ಯಗಳಲ್ಲಿ, ಕಚೇರಿಗಳಲ್ಲಿ ಬಳಕೆಗೆ ತರಲಾಯಿತು. ಹೆಚ್ಚು ಕಡಿಮೆ ಇದೇ ಬಗೆಯ ಪ್ರಕ್ರಿಯೆ ಇಂದು ಕಂಪ್ಯೂಟರ್‌ನಲ್ಲಿ ಬಳಸುವ ಕನ್ನಡ ಲಿಪಿಯ ಬಗ್ಗೆನೂ ನಡೆಯುತ್ತಿದೆ. ಬರಹ ಕರ್ನಾಟಕದ ಅಧಿಕೃತ ಕಂಪ್ಯೂಟರ್ ಕನ್ನಡದ ಸ್ಥಾನವನ್ನು ಪಡೆದಿದೆ. ಕರ್ನಾಟಕದಲ್ಲಿ ಮಾತ್ರ ಈ ಪ್ರಕ್ರಿಯೆ ನಡೆದಿರುವುದಲ್ಲ. ದೇಶದ ಎಲ್ಲ ರಾಜ್ಯಗಳಲ್ಲೂ ಆಯಾಯ ರಾಜ್ಯ ಭಾಷೆ ಇದೇ ರೀತಿಯಲ್ಲಿ ತೀರ್ಮಾನವಾಗಿದೆ. ಗುಜರಾತಿನಲ್ಲಿ ಭಾಷ ಪರಿಷ್ಕರಣೆ ಬಗ್ಗೆ ನಡೆದಿರುವ ಪ್ರಕ್ರಿಯೆಯನ್ನು ವಿ. ಸಬೇಸ್ಟೇಯನ್, ಅವರ 'ಗಾಂಧಿ ಆಂಡ್ ದಿ ಸ್ಟೇಂಡರ್ಡೈಸೇಶನ್ ಆಫ್ ಗುಜರಾಥಿ'(*ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*, ವಾಲ್ಯೂಮ್ XLIV, ನಂ.೩೦, ಆಗಸ್ಟ್ ೨೦೦೯, ಪು.೯೪.೧೦೧) ಲೇಖನದಲ್ಲಿ ನೋಡಬಹುದು.

೫. ಈ ಮಾದರಿಯನ್ನು ನಾನು ಥಾಮಸ್ ಕುನ್‌ನ ಪೆರಾಡೈಮ್ ಪರಿಭಾಷೆಯನ್ನು ಬಳಸಿಕೊಂಡು ರೂಪಿಸಿದ್ದೇನೆ. ಥಾಮಸ್ ಕುನ್‌ನ ಪೆರಾಡೈಮ್‌ಲ್ಲಿ ಎರಡು ಅಂಶಗಳು ಅಡಕವಾಗಿವೆ. ಒಂದು, ವಿದ್ವಾಂಸತ್ವಕ್ಕೆ ಸಂಬಂಧಿಸಿದ್ದು ಮತ್ತೊಂದು ಸಾಂಸ್ಥಿಕ ಚೌಕಟ್ಟಿಗೆ ಸಂಬಂಧಿಸಿದ್ದು. ಥಿಯರಿ, ವಿಧಾನ, ಪರಿಭಾಷ ಪದಗಳು, ಭಾಷೆ ಇತ್ಯಾದಿಗಳು ವಿದ್ವಾಂಸತ್ವಕ್ಕೆ ಸೇರಿದ ಅಂಶಗಳು. ಸಾಂಸ್ಥಿಕ ಚೌಕಟ್ಟಿನೊಳಗೆ ಸಂಶೋಧನ ಸಂಸ್ಥೆಗಳು, ಸಂಶೋಧಕ ಸಮುದಾಯ ಧನಸಹಾಯ ಒದಗಿಸುವವರು, ಸಂಶೋಧನೆಯ ಫಲಿತವನ್ನು ಬಳಸುವವರು ಮುಂತಾದವರೆಲ್ಲ ಸೇರಿರುತ್ತಾರೆ. ಯಜಮಾನಿಕೆಯಲ್ಲಿರುವ ಥಿಯರಿ, ವಿಧಾನ, ಪರಿಭಾಷೆ ಇತ್ಯಾದಿಗಳ ಮೇಲಿನ ಹಿಡಿತ ಈ ಸಮುದಾಯದೊಳಗೆ ಸೇರಲು ಅರ್ಹತೆ. ಅಲ್ಲಿನ ಏಣಿಶ್ರೇಣಿಗಳು ಕಿರಿಯರು ಹಿರಿಯರನ್ನು ಅನುಸರಿಸುವುದು ಅನಿವಾರ್ಯವಾಗಿಸುತ್ತವೆ. ಇದರಿಂದಾಗಿ ಒಂದು ಪೆರಾಡೈಮ್ ಒಳಗೆ ಸೇರಿದವರಿಗೆ ಮಾತ್ರ ಥಿಯರಿ, ವಿಧಾನ ಇತ್ಯಾದಿಗಳು ಅವುಗಳ ಮೂಲ ಉದ್ದೇಶಕ್ಕನುಗುಣವಾಗಿ ಅರ್ಥವಾಗುವುದು. ಇದೊಂದು ಭಾಷೆ ಸಮುದಾಯ ವಿದ್ದಂತೆ. ಭಾಷೆ ಸಮುದಾಯದೊಳಗೆ ಸೇರಿದವರಿಗೆ ಮಾತ್ರ ಭಾಷೆಯೊಳಗೆ ಪ್ರಯೋಗವಾಗುವ ಪದಗಳು ಅವರು ಊಹಿಸುವ ಅರ್ಥಕೊಡುವುದು. ಭಾಷೆ ಸಮುದಾಯ ವ್ಯಾಪ್ತಿಯೊಳಗೆ ಸೇರಿ ಭಾಷೆ ಬಳಕೆಯನ್ನು ಅರ್ಥಮಾಡಿಕೊಳ್ಳದ ಹೊರಗಿನವರಿಗೆ ಪದಗಳು ಭಾಷೆ ಸಮುದಾಯದೊಳಗಿನವರಿಗೆ ಕೊಡುವ ಅರ್ಥವನ್ನು ಕೊಡುವುದಿಲ್ಲ. ಮೇಲಿನ ವಿಚಾರಗಳನ್ನು ಥಾಮಸ್ ಕುನ್ ತಮ್ಮ ಪುಸ್ತಕ, ದಿ *ಸ್ಟ್ರಕ್ಚರ್ ಆಫ್ ಸೈಯಿಂಟಿಫಿಕ್ ರೆವಲ್ಯೂಶನ್* (ಚಿಕಾಗೋ : ಚಿಕಾಗೊ ಯುನಿರ್ವಸಿಟಿ ಪ್ರೆಸ್,

೧೯೭೦) ಪುಸ್ತಕದಲ್ಲಿ ಚರ್ಚಿಸಿದ್ದಾರೆ. ನಾನು ಈ ವಿಚಾರಗಳನ್ನು ಡೆವಿಡ್ ಲಾಜರ್, 'ಸಿಲೆಕ್ಟಡ್ ಇಸ್ಯೂಸ್ ಇನ್ ದಿ ಫಿಲೋಸಪಿ ಆಫ್ ಸೋಶಿಯಲ್ ಸಯನ್ಸ್‌ಸ್ ಲೇಖನದಿಂದ ಪಡೆದಿದ್ದೇನೆ. ಈ ಲೇಖನ ಕ್ಲೈವ್‌ಸೀಲ್(ಸಂ) *ರಿಸರ್ಚಿಂಗ್ ಸೊಸೈಟಿ ಅಂಡ್ ಕಲ್ಚರ್,* ನ್ಯೂಡೆಲ್ಲಿ : ಸೇಜ್, ೧೯೯೮, ಪು.೭-೨೨) ಪುಸ್ತಕದಲ್ಲಿ ಪ್ರಕಟವಾಗಿದೆ.

೬. ಹೆಚ್ಚಿನ ವಿವರಗಳಿಗೆ ರಾಜಾರಾಮ ಹೆಗಡೆ, *ಲೌಕಿಕ-ಅಲೌಕಿಕ ಭಾರತೀಯ ಇತಿಹಾಸದಲ್ಲಿ ಪ್ರಭುತ್ವ ರಚನೆ ಮತ್ತು ಮತ ಸಂಪ್ರದಾಯಗಳು,* ಮಲ್ಲಾಡಿಹಳ್ಳಿ: ಆನಂದಕಂದ ಗ್ರಂಥಮಾಲೆ, ೨೦೦೧, ಕೆ.ಚಿನ್ನಪ್ಪ ಗೌಡ, *ಭೂತಾರಾಧನೆ- ಜಾನಪದೀಯ ಅಧ್ಯಯನ,* ಮಂಗಳ ಗಂಗೋತ್ರಿ: ಮದಿಪು ಪ್ರಕಾಶನ, ೧೯೯೦ ಮುಂತಾದ ಬರಹಗಳನ್ನು ನೋಡಬಹುದು.

೭. ಕೆ.ಚಿನ್ನಪ್ಪಗೌಡ, *ಭೂತಾರಾಧನೆ - ಜಾನಪದೀಯ ಅಧ್ಯಯನ,* ಮಂಗಳ ಗಂಗೋತ್ರಿ : ಮದಿಪು ಪ್ರಕಾಶನ, ೧೯೯೦

೮. ಉನ್ನತ ಶಿಕ್ಷಣದ ಬಗ್ಗೆ ತೀರ್ಮಾನಿಸಲು ಭಾರತ ಸರಕಾರ ಹಲವಾರು ಸಮಿತಿಗಳನ್ನು ನೇಮಿಸಿದೆ. ೧೯೪೮-೪೯ರಲ್ಲಿ ದಿ ಯುನಿವರ್ಸಿಟಿ ಎಜುಕೇಶನ್ ಕಮಿಶನ್ ನೇಮಕವಾಗಿದೆ. ೧೯೬೨ರಲ್ಲಿ ದಿ ಕೋಥಾರಿ ಕಮಿಶನ್ ನೇಮಕವಾಗಿದೆ. ೧೯೬೪-೬೬ರಲ್ಲಿ ದಿ ಎಜುಕೇಶನ್ ಕಮಿಶನ್ ನೇಮಕವಾಗಿದೆ ಮತ್ತು ಇತ್ತೀಚೆಗೆ ಯಶಪಾಲ್ ಕಮಿಶನ್ ಆನ್ ಹೈಯರ್ ಎಜುಕೇಶನ್ ನೇಮಕವಾಗಿದೆ. ಈ ಎಲ್ಲ ಸಮಿತಿಗಳು ಉನ್ನತ ಶಿಕ್ಷಣ, ಸಂಶೋಧನೆ ಇತ್ಯಾದಿಗಳ ಬಗ್ಗೆ ತೀರ್ಮಾನ ತಳೆಯುತ್ತವೆ. ಈ ಸಮಿತಿಗಳ ಶಿಫಾರಸ್ಸುಗಳನ್ನು ಸರಕಾರ ಸಂಪೂರ್ಣವಾಗಿ ಅಥವಾ ಭಾಗಶಃ ಕಾರ್ಯರೂಪಕ್ಕೆ ತರಬಹುದು.

೯. ಈ ಸ್ಥಿತಿಯನ್ನು ಪೋಸ್ಟ್ ಪೊಸಿಟಿವಿಸ್ಟ್ ಪೊಸಿಶನ್ ಎಂದು ಗುರುತಿಸುತ್ತಾರೆ. ಇದರ ಮುಖ್ಯ ಗುಣಲಕ್ಷಣಗಳು ಇಂತಿವೆ. ೧. ಸಂಶೋಧಕರು ಹೊಂದಿರುವ ಮೌಲ್ಯಗಳಿಂದ ಸಂಶೋಧನೆ ಪ್ರಭಾವಿತವಾಗುತ್ತದೆ. ೨. ಸಂಶೋಧಕರ ತಾತ್ವಿಕ ನಿಲುವುಗಳು ಸಂಶೋಧನೆಯನ್ನು ಪ್ರಭಾವಿಸುತ್ತವೆ. ೩. ಪ್ರಕೃತಿಯ ಬಗ್ಗೆ ನಮ್ಮ ತಿಳುವಳಿಕೆ ರಚಿತವಾದುದು ಅಂದರೆ ನಾವೇ ಕಟ್ಟಿಕೊಂಡಿರುವ ತಿಳುವಳಿಕೆ. ಪೋಸ್ಟ್ ಪೊಸಿಟಿವಿಸ್ಟ್ ಸ್ಥಿತಿಯನ್ನು ಪರಿಚಯಿಸುವ ಬರಹಗಳು ಇಂತಿವೆ. ಕೆ.ಆರ್.ಪೊಪ್ಪರ್, ದಿ *ಲಾಜಿಕ್ ಆಫ್ ಸೈಯಿಂಟಿಫಿಕ್ ಡಿಸ್ಕವರಿ,* ನ್ಯೂಯಾರ್ಕ್; ಬೇಸಿಕ್ ಬುಕ್ಸ್, ೧೯೫೯, ಎನ್.ಆರ್. ಹೇನ್‌ಸನ್, *ಪೇಟರ್ನ್ಸ್ ಆಫ್ ಡಿಸ್ಕವರಿ ಎನ್ ಇನ್‌ಕ್ವಯರಿ ಇನ್‌ಟು ದಿ ಕನ್‌ಸಪ್ಚುವಲ್ ಫೌಂಡೇಶನ್ ಆಫ್ ಸಯನ್ಸ್,* ಕೇಂಬ್ರಿಡ್ಜ್ : ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್, ೧೯೫೮.

೧೦. ಮಾನವ ಶಾಸ್ತ್ರಜ್ಞರಾದ ಫ್ರೇಜರ್, ರೆಡ್ ಕ್ಲಿಪ್‌ಬ್ರೌನ್, ಮಲಿನೊವಿಸ್ಕಿ ಮುಂತಾದವರು ಎಲ್ಲ ಸಂಸ್ಕೃತಿಗಳು ಒಂದೇ ಎಂದು ವಾದಿಸುವವರು. ಇವರ ಪ್ರಕಾರ ಒಂದು ಸಂಸ್ಕೃತಿ ಮತ್ತು ಇನ್ನೊಂದು ಸಂಸ್ಕೃತಿಯಲ್ಲಿರುವ ಹೋಲಿಕೆಗಳನ್ನು ಗುರುತಿಸುವುದು ಮಾನವ ಸಂಶೋಧಕರ ಮುಖ್ಯ ಕೆಲಸ. ಈ ಕುರಿತು ಹೆಚ್ಚಿನ ವಿವರಗಳಿಗೆ ಇ.ಆರ್.ಲೀಚ್, ಅವರ 'ದಿ ಎಪಿಸ್ಟೋಮಲಾಜಿಕಲ್ ಬೇಗ್ರೌಂಡ್ ಟು ಮಲಿನೋವಿಸ್ಕಿಸ್ ಎಂಪಿರಿಸಿಸಂ'', ಇನ್ ಆರ್ ಪರ್ಥ್ (ಸಂ), *ಮೇನ್ ಆಂಡ್ ಕಲ್ಚರ್,* ಲಂಡನ್ : ರೌಟ್‌ಲೆಡ್ಜ್ ಅಂಡ್ ಕೆಗನ್ ಪೌಲ್, ೧೯೫೭ ಲೇಖನ ನೋಡಬಹುದು. ಮತ್ತೊಂದು ಸಂಸ್ಕೃತಿಯಲ್ಲಿ ಭಿನ್ನತೆಯನ್ನು ಗುರುತಿಸುವುದು ಸಂಶೋಧಕರ ಮುಖ್ಯ ಕೆಲಸ ಎಂದು ಇವಾನ್ಸ್ ಪ್ರಿಚರ್ಡ್ ವಾದಿಸುತ್ತಾನೆ. ಈತನ ನಿಲುವುಗಳನ್ನು ಇವಾನ್ಸ್ ಪ್ರಿಚರ್ಡ್, 'ದಿ ಕಂಪೇರಿಟಿವ್ ಮೆಥಡ್ಸ್ ಇನ್ ಸೋಶಿಯಲ್ ಆಂಥ್ರಪಾಲಜಿ'', ಇನ್ *ದಿ ಪೋಸಿಶನ್ ಆಫ್ ವಿಮೆನ್ ಇನ್ ಪ್ರಿಮಿಟಿವ್ ಸೊಸೈಟೀಸ್ ಆಂಡ್ ಅದರ್ ಎಸ್ಸೇಸ್,* ಲಂಡನ್ : ಫೇಬರ್ ಅಂಡ್ ಫೇಬರ್, ೧೯೬೫, ಇವಾನ್ಸ್ ಪ್ರಿಚರ್ಡ್,

ಸೋಶಿಯಲ್ ಆಂಥ್ರಪಾಲಜಿ, ಲಂಡನ್ : ಕೊಹೆನ್ ಆಂಡ್ ವೆಸ್ಟ್, ೧೯೫೫ ಪುಸ್ತಕಗಳಲ್ಲಿ ನೋಡಬಹುದು.

೧೧. ಪೇಬಿಯನ್, *ಟೈಮ್ ಆಂಡ್ ದಿ ಅದರ್,* ನ್ಯೂಯಾರ್ಕ್ : ಕೊಲಂಬಿಯಾ ಯುನಿವರ್ಸಿಟಿ ಪ್ರೆಸ್, ೧೯೮೩, ಆಂಡ್ರೆ, ಬಿಟೆ, ಸೋಶಿಯಲಾಜಿ - *ಎಸ್ಸೇಸ್ ಆನ್ ಎಪ್ರೋಚ್ ಆಂಡ್ ಮೆಥಡ್,* ನ್ಯೂಡೆಲ್ಲಿ; ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೨೦೦೨.

೧೨. ಜಾನ್ ಸ್ಪರಕ್(ಸಂ), *ಸ್ಟ್ರಕ್ಚರಲಿಸಂ ಆಂಡ್ ಸಿನ್ಸ್ ಫ್ರೂಮ್ ಲೆವಿಸ್ಟ್ರಾಸ್ ಟು ಡೆರಿಡಾ,* ಆಕ್ಸ್‌ಫರ್ಡ್: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೭೯, ಜಾನ್ ಸ್ಪರಕ್, *ಸ್ಟ್ರಕ್ಚರಲಿಸಂ,* ಆಕ್ಸ್‌ಫರ್ಡ್' : ಬ್ಲೇಕ್ ವೆಲ್ ಪಬ್ಲಿಷಿಂಗ್, ೨೦೦೩.

೧೩. ಲೆವಿಸ್ಟ್ರಾಸ್, *ಮಿಥ್ ಆಂಡ್ ಮೀನಿಂಗ್,* ಲಂಡನ್ : ರಾಟ್‌ಲೆಡ್ಜ್, ೨೦೦೧

೧೪. ಜಾನ್‌ಸ್ಪರಕ್, *ಸ್ಟ್ರಕ್ಚರಲಿಸಂ,* ಆಕ್ಸ್‌ಫಡ್ : ಬ್ಲೇಕ್‌ವೆಲ್ ಪಬ್ಲಿಷಿಂಗ್, ೨೦೦೩

೧೫. ಪ್ರಣಾಬ್ ಬಾರ್ದನ್, 'ಡಿಸೆಂಟ್ರಲೈಸೇಶನ್ ಅಫ್ ಗವರ್ನೆನ್ಸ್ ಆಂಡ್ ಡೆವಲಪ್‌ಮೆಂಟ್, 'ಜರ್ನಲ್ ಅಫಾ ಎಕಾನಮಿಕ್ ಪರ್ಸ್‌ಪೆಕ್ಟಿವ್, ವಾ.೧೬, ನಂ.೪, ೨೦೦೨ ಇನ್ ವಿನೋದ್ ವ್ಯಾಸುಲು, 'ಟ್ರಾನ್ಸ್‌ಫಾರ್‌ಮೇಶನ್ ಇನ್ ಗವರ್ನೆನ್ಸ್ ಸಿನ್ಸ್ ೧೯೯೦ಸ್-ಸಮ್ ರಿಫ್ಲೆಕ್ಷನ್ಸ್', *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,* ವಾ, ೩೯, ನಂ.೨೩, ಜೂನ್ ೨೦೦೪, ಪು.೨೩೭೭-೮೫

೧೬. ಈ ಕುರಿತು ಹೆಚ್ಚಿನ ವಿವರಗಳಿಗೆ ಈ ಕೆಳಗಿನ ಲೇಖನಗಳನ್ನು ನೋಡಬಹುದು ಇಗ್ನೇಸಿಯೋ ರೆಮನೆಟ್, 'ದಿ ಒನ್ ಆಂಡ್ ಒನ್ಲಿ ವೇ ಅಫ್ ಥಿಂಕಿಂಗ್', ಮಜೀದ್ ರೆಹಮಾನ್ ಆಂಡ್ ವಿಕ್ಟೋರಿಯಾ ಬೋತ್ರೆ, (ಸಂ), *ದಿ ಪೋಸ್ಟ್ ಡವೆಲಪ್‌ಮೆಂಟ್ ರೀಡರ್,* ಲಂಡಂನ್ : ಜೆಡ್ ಬುಕ್ಸ್, ೧೯೯೭, ಪು.೧೭೯-೮೧, ಜೇಮ್ಸ್ ಪೆಟ್ರಾಸ್, 'ದಿ ನ್ಯೂ ಕಲ್ಚರಲ್ ಡೊಮಿನೇಶನ್ ಬೈ ದಿ ಮೀಡಿಯಾ' *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,* ಆಗೋಸ್ಟ್, ೧೯೯೪

೧೭. ಕ್ರಿಯೆಗಳು ಮತ್ತು ಪ್ರತಿಕ್ರಿಯೆಗಳು ಮಾನವನ ಹುಟ್ಟಿನಿಂದಲೇ ಇವೆ. ಜತೆಗೆ ಕ್ರಿಯೆ ಮತ್ತು ಪ್ರತಿಕ್ರಿಯೆಗಳಿಗೆ ಅವುಗಳದ್ದೇ ಆದ ಪ್ರೇರಣೆಗಳು ಕೂಡ ಇವೆ. ಹೀಗೆ ಕ್ರಿಯೆಗಳಲ್ಲಿ ಮತ್ತು ಅವುಗಳ ಪ್ರೇರಣೆಗಳಲ್ಲಿ ಕಾಲಕಾಲಕ್ಕೆ ವಿಶೇಷ ಬದಲಾವಣೆಗಳು ಇಲ್ಲ. ಆದರೆ ಕ್ರಿಯೆಗಳು ಹಾಗೂ ಪ್ರತಿಕ್ರಿಯೆಗಳಿಗೆ ನೀಡುವ ಕಾರಣಗಳು ಅಥವಾ ವಿವರಣೆಗಳು ಕಾಲಕಾಲಕ್ಕೆ ಬದಲಾಗುತ್ತಿವೆ. ವಿವರಣೆಗಳು ನಿರ್ದಿಷ್ಟ ಕ್ರಿಯೆ ಅಥವಾ ಪ್ರತಿಕ್ರಿಯೆಯನ್ನು ಸರಿಯೆಂದು ಸಾಬೀತು ಮಾಡುತ್ತವೆ. ವಿಲ್‌ಫ್ರೆಡ್ ಪರೆಟೋ, *ದಿ ಮೈಂಡ್ ಆಂಡ್ ಸೊಸೈಟಿ,* (ಮಿನಿಯೋ ಪೋಲಿಸ್; ಯುನಿವರ್ಸಿಟಿ ಆಫ್ ಮಿನಿಸೋಟ ಪ್ರೆಸ್, ೧೯೧೬) ಪುಸ್ತಕದ ಚರ್ಚೆಯನ್ನು ಬರ್ಟ್ ಎನ್ ಆಡಮ್ಸ್ ಆಂಡ್ ಆರ್ ಎ ಸೈದಿ, *ಸೋಶಿಯಲಾಜಿಕಲ್ ಥಿಯರಿ,* ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೨೦೦೧, ಪುಸ್ತಕದಿಂದ ತೆಗೆದುಕೊಂಡಿದ್ದೇನೆ.

೧೮ ಭಾರತದಲ್ಲಿ ಸಮಾಜ ಸಂಶೋಧನೆಯನ್ನು ಸುಧಾರಿಸುವ ಉದ್ದೇಶದಿಂದ ಇಂಡಿಯನ್ ಕೌನ್ಸಿಲ್ ಫಾರ್ ಸೋಶಿಯಲ್ ಸಯನ್ಸ್ ರಿಸರ್ಚ್ ಎನ್ನುವ ಸಂಸ್ಥೆಯನ್ನು ಹುಟ್ಟು ಹಾಕಲಾಗಿದೆ. ಈ ಸಂಸ್ಥೆ ದೇಶದ ಬೇರೆ ಬೇರೆ ಕಡೆ ಸುಮಾರು ೩೭ ಸಮಾಜ ಸಂಶೋಧನ ಸಂಸ್ಥೆಗಳನ್ನು ಹುಟ್ಟು ಹಾಕಿದೆ. ಈ ಸಂಸ್ಥೆಗಳ ಸಂಶೋಧನೆಯ ಗುಣಮಟ್ಟ ಅಧ್ಯಯನಕ್ಕಾಗಿ ಕಾಲಕಾಲಕ್ಕೆ ಅಧ್ಯಯನ ಸಮಿತಿಗಳನ್ನು ನೇಮಕ ಮಾಡಲಾಗುವುದು. ಇತ್ತೀಚಿನ ದಿನಗಳಲ್ಲಿ ಡಾ. ವೈದ್ಯನಾಥನ್ ನೇತೃತ್ವದಲ್ಲಿ ಗುಣಮಟ್ಟ ಅಧ್ಯಯನ ಸಮಿತಿ ನೇಮಕವಾಗಿತ್ತು. ಆ ಸಮಿತಿ ಐಸಿಎಸ್‌ಎಸ್‌ಆರ್ ಸಂಸ್ಥೆಗಳ ಸಂಶೋಧನ ಗುಣಮಟ್ಟ ತುಂಬ ಕುಸಿದಿದೆ ಎಂದು ಅಭಿಪ್ರಾಯ ಪಟ್ಟಿದೆ ಮತ್ತು

ಸುಧಾರಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಚಿಸಿದೆ. ಈ ಸಮಿತಿಯ ತೀರ್ಮಾನಗಳು ಆ ಸಂಸ್ಥೆಗಳ ಗುಣಮಟ್ಟವನ್ನು ತೀರ್ಮಾನಿಸುತ್ತವೆ ಹೊರತು ಆ ಸಂಸ್ಥೆಗಳ ಸಂಶೋಧನೆಗಳನ್ನು ಬಳಸುವ ಇತರ ಪಾಲುದಾರರು ನೇರವಾಗಿ ಮೌಲ್ಯಮಾಪನದಲ್ಲಿ ಪಾಲುಗೊಳ್ಳುವುದಿಲ್ಲ.

೧೯. ವಿಜ್ಞಾನದ ವಿಧಾನವನ್ನು ಸಮಾಜಿ ಸಂಶೋಧನೆಗೆ ಅನ್ವಯಿಸುವ ಅಗತ್ಯದ ನಿಲುವುಗಳನ್ನು ಆಗಸ್ಟ್ ಕಾಮ್ಟೆ (*ಎ ಬ್ರೀಫ್ ಎಪ್ರಸೈಲ್ ಆಫ್ ಮೊಡರ್ನ್ ಹಿಸ್ಟರಿ*), ಡರ್ಕ್‌ಹೇಮ್, (*ದಿ ರೂಲ್ಸ್ ಆಫ್ ಸೋಶಿಯಲಾಜಿಕಲ್ ಮೆಥಡ್ಸ್*, ನ್ಯೂಯಾರ್ಕ್: ದಿ ಫ್ರಿ ಪ್ರೆಸ್, ೧೯೩೩), ಹರ್ಬರ್ಟ್ ಸ್ಪೆನ್ಸರ್ (*ದಿ ಇವೋಲ್ಯುಶನ್ ಆಫ್ ಸೊಸೈಟಿ*) ಬರಹಗಳಲ್ಲಿ ವ್ಯಕ್ತಪಡಿಸಿದ್ದಾರೆ. ನಾನು ಡರ್ಕ್‌ಹೇಮ್‌ನ ನಿಲುವಿನ ವಿವರಗಳನ್ನು ಟೋನಿ ಬಾರ್‌ನೆಟ್ ಅವರ, *ಸೋಶಿಯಲಾಜಿ ಆಂಡ್ ಡೆವಲಪ್‌ಮೆಂಟ್* (ಲಂಡನ್ : ರಾಟ್‌ಲೆಡ್ಜ್, ೧೯೮೮) ಪುಸ್ತಕದಿಂದ ಮತ್ತು ಕಾಮ್ಟೆಯ ಅಭಿಪ್ರಾಯಗಳನ್ನು ಆರ್. ಪ್ಲೆಚರ್ ಅವರ, *ದಿ ಕ್ರಸೀಸ್ ಆಫ್ ಇಂಡಸ್ಟ್ರೀಯಲ್ ಸಿವಿಲೈಜೇಶನ್* ಪುಸ್ತಕಗಳಿಂದ ಪಡೆದಿದ್ದೇನೆ. ಹಿಂದಿನ ಸಮಾಜಶಾಸ್ತ್ರಜ್ಞರ ವಿಜ್ಞಾನದ ವಿಧಾನದ ಪರ ಧೋರಣೆಯನ್ನು ಇಮೆನ್ವಲ್ ವೆಲ್ ಸ್ಟೇಯಿನ್, 'ಸೋಶಿಯಲ್ ಸಯನ್ಸ್ ಆಂಡ್ ದಿ ಕ್ವೆಸ್ಟ್ ಫಾರ್ ಎ ಜಸ್ಟ್ ಸೊಸೈಟಿ, 'ಲೇಖನದಲ್ಲಿ ವಿವರಿಸಿದ್ದಾರೆ.

೨೦ ವಸಾಹತೋತ್ತರ ಸಂದರ್ಭದಲ್ಲಿ ಮಾನವಶಾಸ್ತ್ರ ಸಂಶೋಧನೆ ಮೇಲೆ ಬ್ರಿಟಿಷ್, ಡಚ್, ಫ್ರೆಂಚ್ ಚಿಂತನೆಗಳ ಪ್ರಭಾವ ಕಡಿಮೆ ಆಯಿತು. ಆದರೆ ಅಮೇರಿಕಾದ ಪ್ರಭಾವ ಹೆಚ್ಚಾಯಿತು. ಸೋಲ್ ಟೇಕ್ಸ್ ಮತ್ತು ಇತರರು ಸಂಪಾದಿಸಿದ ಪಿಫ್ಥ್ ಇಂಟರ್‌ನೇಶನಲ್ ಡೈರೆಕ್ಟರಿ ಆಫ್ ಅಥ್ರೋಪಲಾಜಿಸ್ಟ್ಸ್ (ಚಿಕಾಗೋ : ಚಿಕಾಗೋ ಯುನಿವರ್ಸಟಿ ಪ್ರೆಸ್, ೧೯೭೫) - ಈ ವಿವರಗಳನ್ನು ಎಲ್.ಪಿ.ವಿದ್ಯಾರ್ಥಿಯವರ, *ಟ್ರೆಂಡ್ಸ್ ಇನ್ ವರ್ಲ್ಡ್ ಅಂಥ್ರೋಪಲಾಜಿ,* ಡೆಲ್ಲಿ : ಕನ್‌ಸಪ್ಟ್ ಪಬ್ಲಿಕೇಶನ್ ಕಂಪೆನಿ, ೧೯೭೯ ಪುಸ್ತಕದಿಂದ ಪಡೆಯಲಾಗಿದೆ)ಯಲ್ಲಿ ನೋಂದಾಯಿಸಿದ ಒಟ್ಟು ೪೭೬೫ ಮಾನವಶಾಸ್ತ್ರಜ್ಞರಲ್ಲಿ ಸುಮಾರು ಅರ್ಧದಷ್ಟು ಮಾನವಶಾಸ್ತ್ರಜ್ಞರು ಅಮೇರಿಕಾ ಮತ್ತು ಕೆನಡಾದವರಾದರೆ ಕಾಲು ಭಾಗ ಯೂರೋಪಿಯನ್‌ರಾಗಿದ್ದರು. ಬಹುತೇಕ ಮಾನವಶಾಸ್ತ್ರ ಸಂಶೋಧನೆಗಳಿಗೆ ಮಾಹಿತಿ ಒದಗಿಸುವ ಅಥವಾ ಕ್ಷೇತ್ರವಾಗಿ ಕೆಲಸ ಮಾಡಿದ ಏಶ್ಯಾ, ಆಫ್ರಿಕಾ ಮತ್ತು ಲ್ಯಾಟೀನ್ ಅಮೇರಿಕಾಗಳಿಂದ ಕೆಲವೇ ಕೆಲವು ಮಾನವಶಾಸ್ತ್ರಜ್ಞರಿದ್ದರು (ಶೇ.೨೫ರಷ್ಟು). ಅಮೇರಿಕ ಆಧುನೀಕರಣ ಥಿಯರಿಯ ಬಹುದೊಡ್ಡ ಪ್ರತಿಪಾದಿಯಾಗಿತ್ತು. ಆದುದರಿಂದ ಮಾನವಶಾಸ್ತ್ರ ಕೂಡ ಆಧುನೀಕರಣ ಥಿಯರಿ ಅಂಶಗಳನ್ನೇ ಹೆಚ್ಚು ಹೆಚ್ಚಾಗಿ ಬಿಂಬಿಸುತ್ತಿತ್ತು.

೨೧. ಮೋಟಿವೇಶನ್ (ಪ್ರೇರಣಾ) ಥಿಯರಿಗಳು ಈ ಕುರಿತು ಸಾಕಷ್ಟು ಬೆಳಕು ಚೆಲ್ಲುತ್ತವೆ. ಮೂಲ ಭೂತ ಅವಶ್ಯಕತೆಗಳ ಕೊರತೆ ಸಂದರ್ಭದಲ್ಲಿ ಅವುಗಳನ್ನು ಪೂರೈಸಿಕೊಳ್ಳುವುದು ಮನುಷ್ಯನ ಮೊದಲ ಆದ್ಯತೆ ಆಗುತ್ತದೆ. ಮೂಲಭೂತ ಅವಶ್ಯಕತೆಗಳು ಪೂರೈಕೆ ಆದ ನಂತರ ಹೆಸರು ಮಾಡುವುದು. ನಾಲ್ಕು ಜನರು ನನ್ನ ಗುರುತಿಸಬೇಕು ಇದಕ್ಕಾಗಿ ನಾನು ಏನಾದರೂ ಸಾಧಿಸ ಬೇಕೆಂಬ ಬಯಕೆ ಬಲಗೊಳ್ಳುತ್ತದೆ. ಹೀಗೆ ಮೇಲ್‌ಮುಖವಾಗಿ ಚಲಿಸುವ ಮನುಷ್ಯನ ಬಯಕೆಗೆ ಕೊನೆಯೇ ಇಲ್ಲ. ಮೇಸ್ಲೋನ ಮೋಟಿವೇಶನ್ ಥಿಯರಿ ಮತ್ತು ಮೆಕ್ ಲೇಂಡ್, *ದಿ ಎಚೀವಿಂಗ್ ಸೊಸೈಟಿ,* ಬಾಂಬೆ: ವಕೀಲ್ಸ್, ಪೆಪರ್ ಆಂಡ್ ಸೈಮನ್ಸ್ ಲಿಮಿಟೆಡ್, ೧೯೬೧

೨೨. ದಾಮಸ್ ಕುನ್, *ದಿ ಸ್ಟ್ರಕ್ಚರ್ ಆಫ್ ಸೈಯಿಂಟಿಪಿಕ್ ರೆವಲ್ಯೂಶನ್* (ಚಿಕಾಗೋ : ಚಿಕಾಗೋ ಯುನಿರ್ವಸಿಟಿ ಪ್ರೆಸ್, ೧೯೭೦) ಪುಸ್ತಕದಲ್ಲಿ ಚರ್ಚಿಸಿದ್ದಾರೆ. ನಾನು ಈ ವಿಚಾರಗಳನ್ನು ಡೆವಿಡ್ ಲಾಜರ್, 'ಸಿಲೆಕ್ಟಡ್ ಇಸ್ಸ್ಯೂಸ್ ಇನ್ ದಿ ಫಿಲೋಸಫಿ ಆಫ್ ಸೋಶಿಯಲ್ ಸಯನ್ಸ್‌ಸ್', ಲೇಖನದಿಂದ ಪಡೆದಿದ್ದೇನೆ. ಈ ಲೇಖನ ಕ್ಲೈವ್ ಸೀಲ್ ಸಂಪಾದಿಸಿದ, *ರಿಸರ್ಚಿಂಗ್ ಸೊಸೈಟಿ*

ಅಂಡ್ ಕಲ್ಚರ್, (ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೧೯೯೮, ಪು. ೭-೨೨) ಪುಸ್ತಕದಲ್ಲಿ ಪ್ರಕಟವಾಗಿದೆ.

೨೩. ಭಾರತದಲ್ಲಿ ಸಮಾಜ ವಿಜ್ಞಾನದಲ್ಲಿ ಉನ್ನತ ಸಾಧನೆ ಮಾಡಿದ ಹಲವಾರು ವಿದ್ವಾಂಸರುಗಳನ್ನು ಒಂದೇ ಸ್ಥಳದಲ್ಲಿ ನೋಡಬೇಕಾದರೆ ಹೊಸದೆಹಲಿಯ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯಕ್ಕೆ ಹೋಗಬೇಕು. ೨೦೦೭ರಲ್ಲಿ ನನಗೂ ಅಲ್ಲಿಗೆ ಹೋಗುವ ಒಂದು ಅವಕಾಶ ದೊರೆಯಿತು. ಆ ಸಂದರ್ಭದಲ್ಲಿ ನಾನು ಮೇಲಿನ ಪ್ರಶ್ನೆಯನ್ನು ಅಲ್ಲಿನ ಕೆಲವು ವಿದ್ವಾಂಸರುಗಳಿಗೆ ಕೇಳಿದೆ. ಆವಾಗ ಅವರು ಈ ವಿವರಣೆ ನೀಡಿದರು. ಅವರ ಪ್ರಕಾರ ಅಂತರಾಷ್ಟ್ರೀಯ ಪ್ರತಿಷ್ಠಿತ ವಿದ್ವಾಂಸರುಗಳು ತಮ್ಮ ಆಶಯವನ್ನು ಆಹ್ವಾನಿತ ಭಾರತದ ಸಂಶೋಧಕರ ಮುಂದಿಡುತ್ತಾರೆ ಮತ್ತು ಆ ಕೆಲಸದಲ್ಲಿ ಭಾಗವಹಿಸಲು ವಿದ್ವಾಂಸರನ್ನು ಕೇಳಿಕೊಳ್ಳುತ್ತಾರೆ. ಬಹುತೇಕ ಪ್ರತಿಷ್ಠಿತ ಸಂಸ್ಥೆಯ ವಿದ್ವಾಂಸರುಗಳು ಈ ಆಹ್ವಾನವನ್ನು ತಿರಸ್ಕರಿಸುವುದಿಲ್ಲ, ಪ್ರತಿಷ್ಠಿತ ಸಂಸ್ಥೆಗಳಲ್ಲಿರುವ ಹೆಸರು ಮಾಡದ ಸಣ್ಣಪುಟ್ಟ ವಿದ್ವಾಂಸರುಗಳು ತಾವೇ ಮುಂದೆ ಹೋಗಿ ಅಂತರಾಷ್ಟ್ರೀಯ ವಿದ್ವಾಂಸರ ಸಂಶೋಧನೆಯಲ್ಲಿ ಪಾಲುಗೊಳ್ಳುವ ಉತ್ಸಾಹವನ್ನು ತೋಡಿಕೊಳ್ಳುತ್ತಾರೆ. ಹೀಗೆ ಅಂತರಾಷ್ಟ್ರೀಯ ವಿದ್ವಾಂಸರುಗಳ ಥಿಯರಿ ಪರೀಕ್ಷೆ ಮಾಡುವ ಪ್ರಕ್ರಿಯೆ ಮುಂದುವರಿಯುತ್ತದೆ.

೨೪. ರಾಘವೇಂದ್ರ ರಾವ್ ಅವರ ಪುಸ್ತಕ *ಇಮೇಜಿನಿಂಗ್ ಅನ್‌ಇಮೇಜಿನೇಬಲ್ ಕಮ್ಯುನಿಟೀಸ್ - ಪೊಲಿಟಿಕಲ್ ಆಂಡ್ ಸೋಶಿಯಲ್ ಡಿಸ್ಕೋರ್ಸ್ ಇನ್ ಮೊಡರ್ನ್ ಕರ್ನಾಟಕ*, (ವಿದ್ಯಾರಣ್ಯ: ಪ್ರಸಾರಾಂಗ, ಕ.ವಿ.ಹಂ., ೨೦೦೦) ಪ್ರಕಟವಾಗುವ ತನಕ ಬಹುತೇಕ ಸಮಾಜ ಶಾಸ್ತ್ರಜ್ಞರಿಗೆ ಹರ್ಡೇಕರ್ ಮಂಜಪ್ಪ, ಆಲೂರು ವೆಂಕಟರಾವ್ ಮುಂತಾದವರು ಕರ್ನಾಟಕದ ಪೊಲಿಟಿಕಲ್ ಥಿಂಕರ್ಸ್ ಎನ್ನುವ ವಿಚಾರ ಗಮನಕ್ಕೆ ಬಂದಿರಲಿಕ್ಕಿಲ್ಲ. ಹಾಗೆಂದು ಸಮಾಜಶಾಸ್ತ್ರದ ಇಂಗ್ಲೀಷ್ ಓದುಗರ ಗಮನಕ್ಕೆ ರಾಘವೇಂದ್ರರಾವ್ ಅವರ ಪುಸ್ತಕ ಬಂದಿರಬಹುದೆನ್ನಲು ಸಾಧ್ಯವಿಲ್ಲ. ಯಾಕೆಂದರೆ ರಾವ್ ಅವರು ದೊಡ್ಡ ದೊಡ್ಡ ಥಿಯರಿ ದೊಡ್ಡ ದೊಡ್ಡ ವಾಗ್ವಾದಗಳೊಂದಿಗೆ ತಮ್ಮ ಬರಹವನ್ನು ಗುರುತಿಸಲು ಪ್ರಯತ್ನಿಸಿಲ್ಲ.

೩

ಯಾಕೆ ಸಂಶೋಧನೆ?

ಯಾಕೆ ಸಂಶೋಧನೆಯೆಂದು ಸಂಶೋಧಕರನ್ನು ಕೇಳಿದರೆ ಹಲವಾರು ಉತ್ತಗಳು ಸಿಗುತ್ತವೆ. ಸ್ನಾತಕೋತ್ತರ ಪದವಿ ಗಳಿಸಿದರೂ ಉದ್ಯೋಗ ಸಿಗಲಿಲ್ಲ; ಪಿಹೆಚ್.ಡಿ ಡಿಗ್ರಿಯಿಂದಲಾದರೂ ಉದ್ಯೋಗ ಸಿಗಬಹುದೇ ಎನ್ನುವ ಕಾರಣಕ್ಕಾಗಿ ಸಂಶೋಧನೆ. ಉದ್ಯೋಗ ಖಾಯಂ ಆಗಿಲ್ಲ. ಪಿಹೆಚ್.ಡಿ ಅಥವಾ ಎಂ.ಫಿಲ್ ಡಿಗ್ರಿಯಿಂದ ಉದ್ಯೋಗ ಖಾಯಂ ಆಗುತ್ತದೆ. ಆದುದರಿಂದ ಸಂಶೋಧನೆ. ಮುಂಬಡ್ತಿಗೆ ಪಿಹೆಚ್.ಡಿ ಕಡ್ಡಾಯ ಮಾಡಿದ್ದಾರೆ. ಆದುದರಿಂದ ಸಂಶೋಧನೆ. ಹೀಗೆ ಸಂಶೋಧಕರ ಸಮಸ್ಯೆ ಪರಿಹಾರಕ್ಕಾಗಿ ಸಾಕಷ್ಟು ಸಂಶೋಧನೆಗಳು ನಡೆಯುತ್ತವೆ. ಮೂಲಭೂತ ಅವಶ್ಯಕತೆಗಳ ಕೊರತೆ ಅನುಭವಿಸುವ ಸಾಕಷ್ಟು ಕುಟುಂಬಗಳಿರುವ ನಮ್ಮಂತಹ ಸಮಾಜದಲ್ಲಿ ಅವುಗಳ ಪರಿಹಾರಕ್ಕಾಗಿ ಸಂಶೋಧನೆ ಆರಂಭಿಸುವುದು ಅಪರಾಧವೇನಲ್ಲ. ವ್ಯಕ್ತಿ ಬದುಕಿ ಉಳಿದ ನಂತರ ಆದರ್ಶಗಳನ್ನು ಸಾಧಿಸುವ ಪ್ರಶ್ನೆ. ಇಂತಹ ಸ್ಥಿತಿಯಲ್ಲಿ ಆರಂಭವಾಗುವ ಸಂಶೋಧನೆಗಳಿಂದಲೂ ದೂರಗಾಮಿ ಪರಿಣಾಮ ಬೀರುವ ಜ್ಞಾನ ಉತ್ಪಾದನೆಯಾಗ ಬಹುದು. ಯಾವುದೋ ಒಂದು ಕ್ಷೇತ್ರದಲ್ಲಿ ಅಥವಾ ಯಾವುದೋ ಒಂದು ಸಮುದಾಯದ ಮೇಲೆ ಏನೇನೂ ಕೆಲಸ ಆಗಿಲ್ಲ ಎನ್ನುವ ಕಾರಣಕ್ಕಾಗಿ ಇನ್ನು ಕೆಲವು ಸಂಶೋಧನೆಗಳು ನಡೆಯುತ್ತವೆ. ಇನ್ನು ಕೆಲವು ಸಂಶೋಧನೆಗಳು ನಿರ್ದಿಷ್ಟ ವಿಷಯದಲ್ಲಿ ವಿಶೇಷ ಕೆಲಸವಾಗಿಲ್ಲ ಅಥವಾ ಆಗಿದ್ದರೂ ಕೆಲವೊಂದು ಆಯಾಮ ಗಳನ್ನು ಮಾತ್ರ ನೋಡಿದ್ದಾರೆ ಇನ್ನು ಕೆಲವು ಆಯಾಮಗಳನ್ನು ನೋಡಿಯೇ ಇಲ್ಲ ಎನ್ನುವ ಕಾರಣಕ್ಕಾಗಿ ನಡೆಯುತ್ತವೆ. ಕೃತಿಗಳು ಅಭಿವ್ಯಕ್ತಪಡಿಸುವ ಆಯಾಮಗಳ ಪರಿಧಿಯನ್ನು ಹಿಗ್ಗಿಸುವ ದೃಷ್ಟಿಯಿಂದ ಸಂಶೋಧನೆ. ಯಾವುದೋ ವಿಷಯದ ಮೇಲೆ ಈಗಾಗಲೇ ಆಗಿರುವ ಸಂಶೋಧನೆಗಳು ಮಹತ್ವದಸೇನನ್ನೂ ಹೇಳಿಲ್ಲ. ಸಂಶೋಧನೆ ನಡೆಸಿ ಆ ವಿಷಯದ ಮಹತ್ವವನ್ನು ಜಗಜ್ಜಾಹೀರು ಮಾಡುವ ಉದ್ದೇಶ ದಿಂದ ಸಂಶೋಧನೆ. ಇನ್ನು ಕೆಲವರಿಗೆ ಎಷ್ಟು ಓದಿದರು ಬರೆದರು ತೃಪ್ತಿಯಾಗದ

ಜ್ಞಾನದಾಹ. ಅಂತಹ ಜ್ಞಾನ ದಾಹ ಸಂಶೋಧನೆಯಿಂದಲಾದರೂ ಕೊನೆಗಾಣಬಹುದೇ ಎನ್ನುವ ದೃಷ್ಟಿಯಿಂದ ಸಂಶೋಧನೆ. ಮತ್ತೆ ಕೆಲವರಿಗೆ ಹಲವಾರು ಕ್ಷೇತ್ರಗಳಲ್ಲಿ ಹಲವಾರು ಡಿಗ್ರಿಗಳಿವೆ. ಆದರೆ ಪಿಹೆಚ್.ಡಿ ಡಿಗ್ರಿಯೊಂದು ಲಭ್ಯವಾಗಿಲ್ಲ. ಆದುದರಿಂದ ಪಿಹೆಚ್.ಡಿ ಡಿಗ್ರಿ ಸಂಗ್ರಹಿಸುವ ದೃಷ್ಟಿಯಿಂದ (ಹಳೇ ಕಾರು ಅಥವಾ ಅಂಚೆ ಚೀಟಿ ಸಂಗ್ರಹಿಸುವ ರೀತಿಯಲ್ಲಿ) ಸಂಶೋಧನೆ.[೧] ಹೀಗೆ ಹಲವಾರು ಕಾರಣಗಳಿಗೆ ಸಂಶೋಧನೆ ನಡೆಯುತ್ತವೆ.

ಯಾಕೆ ಸಂಶೋಧನೆ ಎನ್ನುವ ಪ್ರಶ್ನೆಗೆ ವಿವಿಧ ಗುಂಪಿಗೆ ಸೇರಿದವರು ವಿವಿಧ ರೀತಿಯಲ್ಲಿ ಉತ್ತರಿಸುವಂತೆ ಯಾಕೆ ಸಂಶೋಧನೆಯೆನ್ನುವ ಪ್ರಶ್ನೆಯನ್ನು ವಿವಿಧ ವರ್ಗಕ್ಕೆ ಸೇರಿದವರು ವಿವಿಧ ರೀತಿಯಲ್ಲಿ ಕೇಳುತ್ತಾರೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮಾಹಿತಿ ನೀಡುವವರು ಅಥವಾ ಅಧ್ಯಯನಕ್ಕೆ ಒಳಗಾಗುವವರು ಮಾಹಿತಿ ನೀಡುವುದರಿಂದ ತಮಗೇನು ಲಾಭ ಎಂದು ನೇರವಾಗಿ ಕೇಳುತ್ತಾರೆ. ಅಂದರೆ ಯಾತಕ್ಕಾಗಿ ಸಂಶೋಧನೆ ಅಥವಾ ಯಾತಕ್ಕಾಗಿ ಅವರು ಸಂಶೋಧಕರೊಂದಿಗೆ ಸಹಕರಿಸಬೇಕೆಂದು ಕೇಳುತ್ತಾರೆ. ಊರವರು, ಆಸಕ್ತರು ಕೆಲವು ಬಾರಿ ಕುತೂಹಲದಿಂದ ಮತ್ತೆ ಕೆಲವು ಬಾರಿ ಉದ್ದೇಶಪೂರ್ವಕವಾಗಿಯೇ ಸಂಶೋಧನೆಯಿಂದ ತಮ್ಮ ಊರಿಗೇನು ಉಪಯೋಗವಿದೆ? ಎಂದು ನೇರವಾಗಿ ಕೇಳುತ್ತಾರೆ. ಸಂಶೋಧನೆಗೆ ಸಂಬಂಧಿಸಿದ ಮಾಹಿತಿ ನೀಡುವುದರಿಂದ ತಮಗೇನು ತೊಂದರೆಯಿಲ್ವೇ? ಎಂದು ವ್ಯಾಪಾರಿಗಳು, ಉದ್ಯಮಸ್ಥರು ಪ್ರಶ್ನಿಸುತ್ತಾರೆ.[೨] ಉದ್ಯೋಗದ ಸಂದರ್ಶನ ಸಂದರ್ಭದಲ್ಲಿ ಅಥವಾ ಮಹಾಪ್ರಬಂಧದ ಸಂದರ್ಶನದ ಸಂದರ್ಭದಲ್ಲಿ ತಜ್ಞರು ತಮ್ಮ ಸಂಶೋಧನೆಯ ಕೊಡುಗೆಯೇನೆಂದು ಕೇಳುತ್ತಾರೆ. ಇದು ಕೂಡ ಯಾಕೆ ಸಂಶೋಧನೆ ಎನ್ನುವುದರ ಮತ್ತೊಂದು ರೂಪ. ಈ ಎಲ್ಲ ಸಂದರ್ಭಗಳಲ್ಲಿ ಈ ಕೆಳಗಿನ ಉತ್ತರಗಳು ಸಿಗುತ್ತವೆ. ಆದರ್ಶ ಸಮಾಜ ಅಥವಾ ಉತ್ತಮ ಸಮಾಜ ಕುರಿತಂತೆ ಈಗಾಗಲೇ ಸಂಗ್ರಹವಾದ ಜ್ಞಾನವನ್ನು ಪ್ರಶ್ನಿಸುವ ಅಥವಾ ವಿಮರ್ಶಿಸುವ ಉದ್ದೇಶದಿಂದ ಸಂಶೋಧನೆ ನಡೆದಿದೆ ಎನ್ನವುದು ಮೊದಲಿಗೆ ಸಿಗುವ ಉತ್ತರ. ಈಗಾಗಲೇ ಸಂಗ್ರಹವಾದ ಜ್ಞಾನ ಪರಿಗಣಿಸಿರುವ ಆಯಾಮಗಳು, ಪರಿಗಣಿಸದಿರುವ ಆಯಾಮಗಳು, ಜ್ಞಾನ ಸಂಗ್ರಹಿಸಲು ಅನುಸರಿಸುವ ವಿಧಾನಗಳು ಇತ್ಯಾದಿಗಳು ಈಗಾಗಲೇ ಸಂಗ್ರಹವಾದ ಜ್ಞಾನದ ವಿಮರ್ಶೆಯ ವ್ಯಾಪ್ತಿಯಲ್ಲಿ ಬರುವ ಸಾಮಾನ್ಯ ಸಂಗತಿಗಳು. ಈ ಎಲ್ಲ ಸಾಧ್ಯತೆಗಳನ್ನು ಸಂಶೋಧನೆಯ ತಾತ್ವಿಕ ಕೊಡುಗೆಗಳೆಂದು ವ್ಯಾಖ್ಯಾನಿಸಬಹುದು.

ಈಗಾಗಲೇ ಸಂಗ್ರಹವಾದ ಜ್ಞಾನದಿಂದ ಮುಂಚೂಣಿಗೆ ತರಲು ಉದ್ದೇಶಿಸಿರುವ ಸಂಬಂಧಗಳು, ಸಂಸ್ಥೆಗಳು ಮತ್ತು ಮೌಲ್ಯಗಳನ್ನು ವಿಮರ್ಶಿಸುವುದು ಸಂಶೋಧನೆಯ ಎರಡನೆಯ ಕೊಡುಗೆ. ಇದನ್ನು ಅನ್ವಯಿಕ ಅಥವಾ ಪಾಲಿಸಿ ಸಂಶೋಧನೆಯೆಂದು ವ್ಯಾಖ್ಯಾನಿಸಬಹುದು. ನಿರ್ದಿಷ್ಟ ಪಾಲಿಸಿ ಅದರ ಮೂಲ ಉದ್ದೇಶಕ್ಕನುಗುಣವಾಗಿ ಕಾರ್ಯರೂಪಕ್ಕೆ ಬಂದಿದೆಯೇ ಇಲ್ಲವೇ ಎಂದು ನೋಡುವುದು. ಒಂದು ವೇಳೆ

ಅದರ ಮೂಲ ಉದ್ದೇಶಕ್ಕನುಗುಣವಾಗಿ ಕಾರ್ಯರೂಪಕ್ಕೆ ಬರದಿದ್ದರೆ ಕಾರಣಗಳನ್ನು ಹುಡುಕಿ ಆ ಕಾರಣಗಳನ್ನು ಅಥವಾ ಅಡೆತಡೆಗಳನ್ನು ನಿವಾರಿಸಲು ಕ್ರಮಗಳನ್ನು ಸೂಚಿಸುವುದು ಬಹುತೇಕ ಪಾಲಿಸಿ ಸಂಶೋಧನೆಗಳ ಉದ್ದೇಶಗಳು.[೩] ಈ ರೀತಿಯಲ್ಲಿ ತಾತ್ವಿಕ ಹಾಗು ಪಾಲಿಸಿ ಸಂಶೋಧನೆಗಳು ಈಗಾಗಲೇ ಸಂಗ್ರಹವಾದ ಜ್ಞಾನ ಮತ್ತು ಅದರ ಅನ್ವಯಿಕೆಯ ವಿಮರ್ಶೆಗೆ ಹೆಚ್ಚು ಒತ್ತು ನೀಡುತ್ತಿವೆ. ಜ್ಞಾನ ಹೇಗೆ ಸಂಗ್ರಹವಾಗಿದೆ? ಯಾರಿಂದ ಸಂಗ್ರಹವಾಗಿದೆ? ಯಾಕಾಗಿ ಸಂಗ್ರಹವಾಗಿದೆ? ಯಾವ ಸಂದರ್ಭದಲ್ಲಿ ಸಂಗ್ರಹವಾಗಿದೆ? ಯಾರ ಹಿತಾಸಕ್ತಿಯನ್ನು ಸಂಗ್ರಹಿಸಿದ ಜ್ಞಾನ ಕಾಪಾಡುತ್ತಿದೆ? ಇತ್ಯಾದಿ ಪ್ರಶ್ನೆಗಳು ಬಹುತೇಕ ತಾತ್ವಿಕ ಸಂಶೋಧನೆಗಳಲ್ಲಿ ಕಾಣುವುದೇ ಇಲ್ಲ. ಇದೇ ರೀತಿಯಲ್ಲಿ ಪಾಲಿಸಿ ಹೇಗೆ ರೂಪಿತವಾಗಿದೆ? ಯಾರು ಪಾಲಿಸಿ ರೂಪಿಸಿದ್ದಾರೆ? ಪಾಲಿಸಿ ರೂಪಿಸುವ ಅಧಿಕಾರ ಅವರಿಗೆ ಹೇಗೆ ಬಂತು? ರೂಪಿತ ಪಾಲಿಸಿ ಯಾರ ಆಸಕ್ತಿಗಳನ್ನು ಪ್ರತಿನಿಧೀಕರಿಸುತ್ತಿವೆ? ಇತ್ಯಾದಿ ಪ್ರಶ್ನೆಗಳು ಬಹುತೇಕ ಪಾಲಿಸಿ ಸಂಶೋಧನೆಗಳಲ್ಲಿ ಮುಖ್ಯ ಭೂಮಿಕೆ ನಿಭಾಯಿಸುತ್ತಿಲ್ಲ. ಈ ಪ್ರಶ್ನೆಗಳನ್ನು ಕೇಳಿಕೊಳ್ಳದ ತಾತ್ವಿಕ ಹಾಗು ಪಾಲಿಸಿ ಸಂಶೋಧನೆಗಳು ಲಕ್ಷಾಂತರ ನಡೆದರು ಈಗಾಗಲೇ ಸ್ಥಾಪಿತವಾದ ಸತ್ಯಗಳ ಅಸ್ತಿತ್ವಕ್ಕೆ ಧಕ್ಕೆ ಬರುವುದಿಲ್ಲ. ಸ್ಥಾಪಿತ ಸತ್ಯಗಳು ಬದಲಾಗದಿದ್ದರೆ ಜನಸಾಮಾನ್ಯರ ಲೋಕದೃಷ್ಟಿಗಳು ಬದಲಾಗುವುದಿಲ್ಲ; ಜನರ ಲೋಕದೃಷ್ಟಿಗಳು ಬದಲಾಗದಿದ್ದರೆ ಮೂಲಭೂತ ಸಾಮಾಜಿಕ ಪರಿವರ್ತನೆಗಳು ಸಾಧ್ಯವಾಗುವುದಿಲ್ಲ. ಜನರ ಲೋಕದೃಷ್ಟಿಗಳನ್ನು ಬದಲಾಯಿಸುವ ಮೂಲಕ ಸಾಮಾಜಿಕ ಪರಿವರ್ತನೆಗೆ ಪ್ರಯತ್ನಿಸುವ ತಾತ್ವಿಕ ಹಾಗು ಪಾಲಿಸಿ ಸಂಶೋಧನೆಗಳು ಸಾಧ್ಯವಾಗಬೇಕಾದರೆ ಸಂಶೋಧನೆಯ ವ್ಯಾಪ್ತಿಯನ್ನು ಹಿಗ್ಗಿಸಬೇಕಾಗುತ್ತದೆ. ತಾತ್ವಿಕ ಸಂಶೋಧನೆ ಸಂಗ್ರಹವಾದ ಆಧುನಿಕ ಜ್ಞಾನವನ್ನು ಪ್ರಶ್ನಿಸುವಷ್ಟೇ ಮಹತ್ವವನ್ನು ಸಂಗ್ರಹವಾದ ಸಾಂಪ್ರದಾಯಿಕ ಜ್ಞಾನವನ್ನು ಪ್ರಶ್ನಿಸಲು ಕೊಡಬೇಕಾಗಿದೆ. ಜತೆಗೆ ಜ್ಞಾನ ಸಂಗ್ರಹದ ವೈಧಾನಿಕತೆ, ಉದ್ದೇಶ, ಬಳಕೆ ಇತ್ಯಾದಿಗಳ ಮೇಲೂ ಗಮನ ಹರಿಸಬೇಕಾಗಿದೆ. ಈ ಅಧ್ಯಾಯದಲ್ಲಿ ಈ ಎರಡು ಕೊಡುಗೆಗಳನ್ನು ವಿಶ್ಲೇಷಿಸುವುದರ ಜತೆಗೆ ಸಂಶೋಧಕರು ಗಮನಹರಿಸಬೇಕಾದ ಇತರ ಅಂಶಗಳನ್ನು ಚರ್ಚಿಸಿದ್ದೇನೆ. ಅಧ್ಯಾಯದ ವಿವರಗಳನ್ನು ಎರಡು ಭಾಗದಲ್ಲಿ ನೀಡಿದ್ದೇನೆ. ಭಾಗ ಒಂದರಲ್ಲಿ ಯಾಕೆ ಸಂಶೋಧನೆ ಎನ್ನುವ ಪ್ರಶ್ನೆಗೆ ಉತ್ತರಿಸುತ್ತಾ ಅನ್ವಯಿಕ ಸಂಶೋಧನೆಯ ಇತಿಮಿತಿಗಳನ್ನು ವಿಶ್ಲೇಷಿಸಿದ್ದೇನೆ. ಅಧ್ಯಾಯದ ಎರಡನೇ ಭಾಗದಲ್ಲಿ ತಾತ್ವಿಕ ಕೊಡುಗೆಯನ್ನು ವಿಮರ್ಶಿಸುತ್ತಾ ಸಂಶೋಧಕರು ಗಮನಿಸಬೇಕಾದ ಇತರ ಅಂಶಗಳನ್ನು ಚರ್ಚಿಸಿದ್ದೇನೆ.

ಭಾಗ ೧

ಪ್ರಸ್ತಾವನೆಯ ಕೊನೆಭಾಗದಲ್ಲಿ ಯಾಕೆ ಸಂಶೋಧನೆ ಎನ್ನುವ ಪ್ರಶ್ನೆಗೆ ಸಂಬಂಧಿಸಿದ ಕೆಲವೊಂದು ಅಂಶಗಳನ್ನು ನೀಡಿದ್ದೆ. ಅವುಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಈ

ಅಧ್ಯಾಯದ ಚರ್ಚೆಯನ್ನು ಮುಂದುವರಿಸುವ. ಈಗಾಗಲೇ ಸಂಗ್ರಹವಾದ ಜ್ಞಾನ ಸ್ಥಾಪಿತ ಸತ್ಯಗಳ ರೂಪದಲ್ಲಿ ಪ್ರಚಲಿತದಲ್ಲಿರುತ್ತದೆ. ಇಂತಹ ಸ್ಥಾಪಿತ ಸತ್ಯಗಳು ಸಾಮಾಜಿಕ ಮೇಲುಕೀಳುಗಳನ್ನು, ಲಿಂಗಭೇಧಗಳನ್ನು, ಸಂಪನ್ಮೂಲಗಳ ಅಸಮಾನ ಹೊಂದುವಿಕೆಯನ್ನು, ಅಧಿಕಾರದ ಏರುಪೇರುಗಳನ್ನು ಸಮರ್ಥಿಸಿಕೊಳ್ಳಲು ಬಳಕೆಯಾಗುತ್ತಿವೆ. ಅಷ್ಟು ಮಾತ್ರವಲ್ಲ ಮೇಲಿನ ಎಲ್ಲ ಅಸಮಾನತೆಗಳನ್ನು ಅಮೂರ್ತಗೊಳಿಸುವಲ್ಲಿ ಸ್ಥಾಪಿತ ಸತ್ಯಗಳ ಅಥವಾ ಈಗಾಗಲೇ ಸಂಗ್ರಹವಾದ ಜ್ಞಾನದ ಪಾತ್ರ ದೊಡ್ಡದಿದೆ. ಇಂತಹ ಜ್ಞಾನವನ್ನು ಬೆತ್ತಲೆಗೊಳಿಸುವುದು ಅಸಮಾನವಾಗಿ ಹಂಚಿಕೆಯಾಗಿರುವ ಅಧಿಕಾರವನ್ನು ಅಲುಗಾಡಿಸಲು ಅನಿವಾರ್ಯ. ಈ ಎಲ್ಲ ಅಂಶಗಳು ಒಂದು ವಿಷಯದತ್ತ ಬೊಟ್ಟು ಮಾಡುತ್ತಿವೆ. ಅದೇನೆಂದರೆ ವಿಚಾರ, ಆಚಾರ ಮತ್ತು ಅಧಿಕಾರಗಳು ನೇರವಾಗಿ ಸಂಬಂಧಿಸಿವೆ ಎನ್ನುವುದನ್ನು ಇವುಗಳು ದೃಢಪಡಿಸುತ್ತಿವೆ. ವಿಚಾರಗಳು ನಮ್ಮ ಆಚಾರಗಳನ್ನು (ನಡವಳಿಕೆಗಳನ್ನು) ಪ್ರಭಾವಿಸುತ್ತವೆ. ನಿರ್ದಿಷ್ಟ ನಡವಳಿಕೆಗಳು ನಾವು ವ್ಯವಹರಿಸುವವರೊಂದಿಗಿನ ನಮ್ಮ ಸಂಬಂಧವನ್ನು ಪ್ರತಿಫಲಿಸುತ್ತವೆ. ಕೆಲವೊಂದು ಉದಾಹರಣೆಯ ಮೂಲಕ ವಿಚಾರ, ಆಚಾರ ಮತ್ತು ಅಧಿಕಾರ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ. ಹೆಣ್ಣುಗಂಡು ಸಮಾನರಲ್ಲ, ಹೆಣ್ಣು ಗಂಡಿಗಿಂತ ಕೆಳಗೆ, ಪತಿಯೇ ಪರದೈವ ಇತ್ಯಾದಿ ವಿಚಾರಗಳು ಕಾರುಬಾರು ಮಾಡುತ್ತಿದ್ದ ಸಂದರ್ಭದಲ್ಲಿನ ಗಂಡಹೆಂಡತಿಯರ ಸಂಬಂಧವನ್ನು ನೋಡುವ. ಆರುವತ್ತು ಎಪ್ಪತರ ದಶಕದ ಚಲನ ಚಿತ್ರಗಳಲ್ಲಿ ಕಡ್ಡಾಯವಾಗಿ ಇರಲೇಬೇಕಾದ ಒಂದು ದೃಶ್ಯವನ್ನು ನೆನಪಿಸಿಕೊಂಡರೆ ಮೇಲಿನ ವಿಚಾರ ಆಚಾರ ಅಧಿಕಾರದ ಸಂಬಂಧಗಳು ಚೆನ್ನಾಗಿ ಅರ್ಥವಾಗಬಹುದು.

ಗಂಟೆ ಏಳಾದರೂ ಗಂಡ ಮಲಗಿರುತ್ತಾನೆ, ಹೆಂಡತಿ ಮುಂಜಾನೆ ಬೇಗ ಎದ್ದು ಮಿಂದು ಮಡಿಬಟ್ಟೆ ಉಟ್ಟು ಬಿಸಿಬಿಸಿ ಚಾ/ಕಾಫಿನೋ ಕಪ್‌ಲ್ಲಿ ಹಿಡಿದು, 'ರೀ ಏಳ್ರೀ ಆಫೀಸಿಗೆ ಹೋಗುವ ಹೊತ್ತಾಯಿತು' ಎನ್ನುತ್ತಾಳೆ. ಆತ ಕಷ್ಟಪಟ್ಟು ಎದ್ದು ಬಿಸಿಬಿಸಿ ಕಾಫಿ ಹೀರಿ, ಪೇಪರ್ ಹಿಡಿದು ಈಸೀಚೇರಲ್ಲಿ ವಿಶ್ರಮಿಸುತ್ತಾನೆ. ಪತಿಯೇ ಪರದೈವ, ಪತಿ (ಪುರುಷ) ಪತ್ನಿಗಿಂತ (ಮಹಿಳೆಗಿಂತ) ಮೇಲೆ, ಪತಿಯ ಸೇವೆ ಮಾಡುವುದು ಉತ್ತಮ ಪತ್ನಿಯ ಲಕ್ಷಣ ಇತ್ಯಾದಿ ವಿಚಾರಗಳು ಪತಿ ಪತ್ನಿಯರ ಸಂಬಂಧವನ್ನು ಪ್ರಭಾವಿಸುತ್ತಿದ್ದ ಕಾಲ ಅದು. ಇಂತಹ ವೈಚಾರಿಕತೆ ಯಜಮಾನಿಕೆ ನಡೆಸುವ ಪರಿಸರದಲ್ಲಿ ಗಂಡಸರು ಹೆಚ್ಚು ಅಧಿಕಾರ ಹೊಂದಿರುವುದು ಮತ್ತು ಮಹಿಳೆಯರು ಎರಡನೇ ದರ್ಜೆ ಪ್ರಜೆಗಳ ತರಹ ಬದುಕುವುದು ಸಹಜವಾಗುತ್ತದೆ. ಇದೇ ರೀತಿ ಜಾತಿ ಬೇಧಗಳು ಕೂಡ. ಜಾತಿ ದೇವರ ಸೃಷ್ಟಿ. ಕೆಲವರು ಬ್ರಹ್ಮನ ತಲೆಯಿಂದ, ಮತ್ತೆ ಕೆಲವರು ದೇಹದಿಂದ, ಇನ್ನು ಕೆಲವರು ಕಾಲಿನಿಂದ ಸೃಷ್ಟಿಯಾದವರು. ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮದ ಫಲವಾಗಿ ಕೆಲವರು ಮೇಲ್‌ಸ್ತರದಲ್ಲಿ ಮತ್ತೆ ಕೆಲವರು

ಕೆಳಸ್ತರದಲ್ಲಿ ಹುಟ್ಟುತ್ತಾರೆ. ಇದನ್ನು ಮನುಷ್ಯ ಪ್ರಯತ್ನದಿಂದ ಏರುಪೇರು ಮಾಡಲು ಸಾಧ್ಯವಿಲ್ಲ. ಯಾವ ಸ್ತರದಲ್ಲಿ ಹುಟ್ಟಿದ್ದೇವೆಯೋ ಆ ಸ್ತರದ ಕರ್ಮಗಳನ್ನು ಪ್ರಶ್ನಿಸದೆ ಮಾಡಿದರೆ ಮುಂದಿನ ಜನ್ಮದಲ್ಲಿ ಮೇಲ್‌ಸ್ತರದಲ್ಲಿ ಹುಟ್ಟಬಹುದು. ಇವೆಲ್ಲ ಜಾತಿ ಸೃಷ್ಟಿಯ ಕೆಲವು ಸಂಕಥನಗಳು. ಈ ಎಲ್ಲ ಸಂಕಥನಗಳನ್ನು ಪ್ರಶ್ನಿಸದೆ ನಂಬುವವರಿಗೆ ಮೇಲ್‌ಸ್ತರದ ಜನರೊಂದಿಗೆ ವ್ಯವಹರಿಸುವಾಗ ತಗ್ಗಿಬಗ್ಗಿ ನಡೆಯುವುದು ಅಸಹಜವಾಗುವುದಿಲ್ಲ. ಅದೇ ರೀತಿಯಲ್ಲಿ ಮೇಲ್‌ಸ್ತರದವರಿಗೆ ತಳಸ್ತರದ ಜನರನ್ನು ಕೆಟ್ಟದಾಗಿ ನಡೆಸಿಕೊಳ್ಳುವುದು ಅಸಹಜವಾಗುವುದಿಲ್ಲ. ಈ ವೈಚಾರಿಕತೆಗಳು ವಿವಿಧ ಜಾತಿ ಜನರ ವ್ಯವಹಾರಗಳನ್ನು ನಿರ್ದೇಶಿಸುವುದರ ಜತೆಗೆ ಮೇಲ್ಜಾತಿ ಜನರಿಗೆ ಕೆಳಜಾತಿ ಜನರ ಮೇಲೆ ವಿಶೇಷ ಅಧಿಕಾರ ಚಲಾವಣೆಗೆ ಅವಕಾಶ ಮಾಡಿಕೊಡುತ್ತದೆ.

ಭಾರತದಲ್ಲಿ ಹಿಂದುಗಳು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಆದುದರಿಂದ ಇದು ಹಿಂದೂ ರಾಷ್ಟ್ರ. ಹಿಂದುಗಳಲ್ಲದವರು ಇಲ್ಲಿ ಇರಲೇಬಾರದೆಂದು ಹೇಳುವುದಿಲ್ಲ. ಆದರೆ ಅವರು ಹಿಂದೂಗಳಿಗೆ ಸಮನಾಗಿ ಇರಲು ಸಾಧ್ಯವಿಲ್ಲ. ಈ ಬಗೆಯ ವಾದವನ್ನು ಹಿಂದೂ ರಾಷ್ಟ್ರೀಯವಾದಿಗಳು ಮಾಡುತ್ತಾರೆ. ಒಂದು ವೇಳೆ ಈ ವಾದವನ್ನು ನಂಬಿದರೆ ಮುಸ್ಲಿಮರನ್ನು, ಕ್ರಿಶ್ಚಿಯನ್ನರನ್ನು, ಸಿಖ್‌ರನ್ನು ಎರಡನೇ ದರ್ಜೆ ಪ್ರಜೆಗಳ ರೀತಿಯಲ್ಲಿ ನಡೆಸಿಕೊಳ್ಳುವುದು ಸಮಸ್ಯೆಯಾಗುವುದಿಲ್ಲ. ಕ್ಷುಲಕ ಕಾರಣಕ್ಕಾಗಿ ಎರಡು ಕೋಮಿಗೆ ಸೇರಿದ ಇಬ್ಬರ ನಡುವೆ ನಡೆಯುವ ಸಣ್ಣ ಜಗಳ ಕೂಡ ದೊಡ್ಡ ಕೋಮುಗಲಭೆಗೆ ಕಾರಣವಾಗಬಹುದು. ಹಲವಾರು ಪ್ರಾಣ ಕಳೆದುಕೊಳ್ಳಬಹುದು. ಆಸ್ತಿಪಾಸ್ತಿ ನಷ್ಟವಾಗಬಹುದು. ಹಿಂದೂ ರಾಷ್ಟ್ರೀಯತೆಯ ಸಂಕಥನವನ್ನು ನಂಬಿದರೆ ಈ ಎಲ್ಲವು ಸಹಜವಾಗುತ್ತವೆ. ಮತ್ತೊಂದು ಕೋಮುವನ್ನು ನಕರಾತ್ಮಕವಾಗಿ ಕಟ್ಟಿಕೊಳ್ಳುವ ಕೋಮುವಾದಕ್ಕೆ ಬದ್ಧತೆ ತೋರುವವರಿಗೆ ಮತ್ತೊಂದು ಕೋಮಿನ ಜನರನ್ನು ಹಿಂಸಿಸುವುದು, ಎರಡನೇ ದರ್ಜೆ ಪ್ರಜೆಗಳ ತರಹ ನಡೆಸಿಕೊಳ್ಳುವುದು ಅಮಾನುಷ ಆಗುವುದಿಲ್ಲ. ಮೇಲಿನ ಎಲ್ಲ ಉದಾಹರಣೆಗಳಲ್ಲಿ ನಮ್ಮ ಸಮಾಜದಲ್ಲಿ ಚಾರಿತ್ರಿಕವಾಗಿ ಚಲಾವಣೆಯಲ್ಲಿದ್ದ ಕೆಲವೊಂದು ಸಂಬಂಧಗಳು ಮತ್ತು ಅವುಗಳನ್ನು ಗಟ್ಟಿಗೊಳಿಸಲು ಬಳಕೆಯಾಗುವ ವೈಚಾರಿಕತೆಗಳ ಮೇಲೆ ಬೆಳಕು ಚೆಲ್ಲುತ್ತವೆ. ಅಷ್ಟು ಮಾತ್ರವಲ್ಲ ಇಂತಹ ವೈಚಾರಿಕತೆಗಳು ಪುರುಷರಿಗೆ ಮಹಿಳೆಯರ ಮೇಲೆ, ಮೇಲ್‌ಜಾತಿಗೆ ತಳಸ್ತರದ ಜನರ ಮೇಲೆ ಮತ್ತು ಬಲಾಢ್ಯ ಕೋಮಿಗೆ ಅಲ್ಪಸಂಖ್ಯಾತರ ಮೇಲೆ ಹೆಚ್ಚಿನ ಅಧಿಕಾರ ಚಲಾಯಿಸಲು ಪರವಾನಿಗೆ ನೀಡುತ್ತವೆ. ಲಿಂಗ/ಜಾತಿ/ಧರ್ಮಗಳನ್ನು ಮೇಲೆ ವಿವರಿಸಿದ ರೂಪದಲ್ಲಿ ಕಟ್ಟಿಕೊಳ್ಳಲು ಬಳಸುವ ವೈಚಾರಿಕತೆಗಳನ್ನು ಪ್ರಶ್ನಿಸದೆ ಈ ಅಧಿಕಾರ ಸಂಬಂಧವನ್ನು ಏರುಪೇರು ಮಾಡಲು ಸಾಧ್ಯವಿಲ್ಲ. ನಿರ್ದಿಷ್ಟ ಅಧಿಕಾರ ಸಂಬಂಧವನ್ನು ಗಟ್ಟಿಗೊಳಿಸುವ ವೈಚಾರಿಕೆಯನ್ನು ಪ್ರಶ್ನಿಸುವುದು ಅಧಿಕಾರದ ಸಮಾನ ಹಂಚುವಿಕೆಯತ್ತ ಮೊದಲ ಹೆಜ್ಜೆ. ಇದು ಸಂಶೋಧನೆಯ ಬಹುದೊಡ್ಡ ಜವಾಬ್ದಾರಿ ಕೂಡ.

ವಸಾಹತು ಮತ್ತು ನಂತರದ ಆಧುನೀಕರಣಗಳು ಮೇಲಿನ ಚಾರಿತ್ರಿಕವಾಗಿ ರೂಪಿತವಾದ ಮೇಲುಕೀಳುಗಳನ್ನು ಅಲ್ಪಸ್ವಲ್ಪ ಸಡಿಲಗೊಳಿಸಿವೆ. ಆದರೆ ಇದೇ ಸಂದರ್ಭದಲ್ಲಿ ಆಧುನೀಕರಣ ಹೊಸಬಗೆಯ ಮೇಲುಕೀಳುಗಳನ್ನು ಸೃಷ್ಟಿಸಿದೆ. ಅನಕ್ಷರಸ್ಥ/ಅಕ್ಷರಸ್ಥ, ಹಳ್ಳಿ/ಪೇಟೆ, ಕನ್ನಡ/ಇಂಗ್ಲೀಷ್, ನಾಟಿ ಔಷಧಿ/ಅಲೋಪಥಿ, ಕೃಷಿ/ಕೈಗಾರಿಕೆ ಇತ್ಯಾದಿಗಳು ಆಧುನೀಕರಣ ಸೃಷ್ಟಿಸಿರುವ ಹೊಸಬಗೆಯ ಮೇಲುಕೀಳುಗಳು. ಮೇಲಿನವುಗಳಲ್ಲಿ ಮೊದಲಿನವುಗಳು (ಅನಕ್ಷರಸ್ಥ, ಹಳ್ಳಿ, ಕನ್ನಡ, ನಾಟಿ ಔಷಧಿ, ಕೃಷಿ ಇತ್ಯಾದಿಗಳು) ಆದರ್ಶ ಅಲ್ಲ. ಇವತ್ತಲ್ಲ ನಾಳೆಯಾದರೂ ನಾಶ ಹೊಂದುತ್ತವೆ ಮತ್ತು ನಾಶ ಹೊಂದಲೇಬೇಕಾಗಿದೆ. ಅಕ್ಷರಸ್ಥ, ಪೇಟೆ, ಇಂಗ್ಲೀಷ್, ಕೈಗಾರಿಕೆ ಇತ್ಯಾದಿಗಳು ಆದರ್ಶಗಳು ಮತ್ತು ಮುಂದುವರಿಯಬೇಕಾಗಿದೆ. ಇಂತಹ ಸ್ಥಿತಿ ನಾವು ಅಪ್ಪಿಕೊಂಡ ಆಧುನೀಕರಣದಿಂದ ಸೃಷ್ಟಿಯಾಗಿದೆ. ಇದನ್ನು ಗಟ್ಟಿಗೊಳಿಸುವ ವೈಚಾರಿಕತೆಗಳನ್ನು ಪಶ್ಚಿಮದ ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳು ಮಾಡುತ್ತಿವೆ. ಇತ್ತೀಚಿನ ವರ್ಲ್ಡ್ ಸೋಶಿಯಲ್ ಸಯನ್ಸ್ ರಿಪೋರ್ಟ್ ಪ್ರ ಕಾರ ಪ್ರಪಂಚದಲ್ಲಿ ಇಂದು ಪ್ರಕಟವಾಗುವ ಸಮಾಜ ವಿಜ್ಞಾನ ಪುಸ್ತಕ ಮತ್ತು ಪತ್ರಿಕೆಗಳಲ್ಲಿ ಶೇಕಡಾ ೩೫ರಷ್ಟು ಅಮೇರಿಕಾದಲ್ಲಿ ಮತ್ತು ಶೇಕಡಾ ೩೧ರಷ್ಟು ಪಶ್ಚಿಮ ಯುರೋಪಿನ ದೇಶಗಳಲ್ಲಿ ಪ್ರಕಟವಾಗುತ್ತಿವೆ. ಅತೀ ಹೆಚ್ಚಿನ ಜನಸಂಖ್ಯೆ ಮತ್ತು ತುಂಬಾ ಸಂಕೀರ್ಣ ಸಾಮಾಜಿಕ ಸಂಬಂಧಗಳು, ಸಂಸ್ಥೆಗಳು ಮತ್ತು ಮೌಲ್ಯಗಳನ್ನು ಹೊಂದಿರುವ ಆಫ್ರಿಕಾ ಮತ್ತು ದಕ್ಷಿಣ ಏಶಿಯಾದಲ್ಲಿ ಅತ್ಯಲ್ಪ (ಶೇಕಡಾ ೫) ಸಮಾಜ ವಿಜ್ಞಾನ ಪುಸ್ತಕ ಮತ್ತು ಪತ್ರಿಕೆಗಳು ಪ್ರಕಟವಾಗುತ್ತಿವೆ. ಪ್ರಕಟವಾಗುವ ಪುಸ್ತಕ ಮತ್ತು ಪತ್ರಿಕೆಗಳಲ್ಲಿ ಶೇಕಡಾ ತೊಂಬತ್ತರಷ್ಟು ಇಂಗ್ಲೀಷ್ (೭೬%), ಫ್ರೆಂಚ್ (೭%) ಮತ್ತು ಜರ್ಮನ್ (೭%) ಭಾಷೆಗಳಲ್ಲಿವೆ. ಈ ಮೂರು ಭಾಷೆಗಳನ್ನು ಹೊರತುಪಡಿಸಿದ ರಾಷ್ಟ್ರೀಯ ಭಾಷೆಗಳನ್ನು ಹೊಂದಿರುವ ದೇಶಗಳು ಹೆಚ್ಚು ಕಡಿಮೆ ಶೇಕಡಾ ತೊಂಬತ್ತರಷ್ಟಿವೆ. ಆದಾಗ್ಯೂ ಅವುಗಳು ಶೇಕಡಾ ಹತ್ತರಷ್ಟು ಸಮಾಜ ಜ್ಞಾನ ಉತ್ಪಾದಿಸುತ್ತಿಲ್ಲ. ಜ್ಞಾನ ಉತ್ಪಾದನೆಯಲ್ಲಿ ಬಲಿಷ್ಠ ರಾಷ್ಟ್ರಗಳ ಪ್ರಾಬಲ್ಯವನ್ನು ಮತ್ತೊಂದು ಅಂಕಿ ಅಂಶ ಕೂಡ ದೃಢಪಡಿಸುತ್ತಿದೆ. ಅಮೇರಿಕಾ ಮತ್ತು ಪಶ್ಚಿಮ ಯುರೋಪಿನಲ್ಲಿ ಸೃಷ್ಟಿಯಾದ ಜ್ಞಾನವನ್ನು ಇನ್ನಿತರ ದೇಶಗಳಲ್ಲಿ ಹೆಚ್ಚು ಹೆಚ್ಚು ಉಲ್ಲೇಖಿಸುತ್ತಾರೆ. ಆದರೆ ಇತರ ದೇಶಗಳಲ್ಲಿ ಸೃಷ್ಟಿಯಾಗುವ ಅತ್ಯಲ್ಪ ಜ್ಞಾನವನ್ನು ಕೂಡ ಅಮೇರಿಕಾ ಅಥವಾ ಯುರೋಪಿನ ವಿದ್ವಾಂಸರು ಉಲ್ಲೇಖಿಸುವುದಿಲ್ಲ.

ಮೇಲಿನ ಪುರಾವೆಗಳನ್ನು ಇಟ್ಟುಕೊಂಡು ನಿರ್ಧಾರಕ್ಕೆ ಬರುವುದಾದರೆ ಸಮಾಜ ವಿಜ್ಞಾನದ ಜ್ಞಾನ ಉತ್ಪಾದನೆ/ಅನುಭೋಗ ಮತ್ತು ಬಹುರಾಷ್ಟ್ರೀಯ ಕಂಪೆನಿಗಳ ಸರಕು/ಸೇವೆಗಳ ಉತ್ಪಾದನೆ/ಅನುಭೋಗಗಳ ನಡುವೆ ನೇರ ಹೋಲಿಕೆ ಇದೆಯೆನ್ನ ಬಹುದು. ಹೆಚ್ಚು ಕಡಿಮೆ ಅದೇ ಮಾದರಿಯ ಶ್ರೇಣೀಕರಣ ಇಲ್ಲೂ ಇದೆ. ಪರಿವರ್ತನೆ/ಅಭಿವೃದ್ಧಿ/ಪ್ರಗತಿ ಅಂದರೇನು? ಸಾಮಾಜಿಕ ನ್ಯಾಯ ಅಂದರೇನು? ಪ್ರಜಾಪ್ರಭುತ್ವ ಅಂದರೇನು? ಎಂದು ಶ್ರೀಮಂತ ದೇಶಗಳ ಸಂಶೋಧಕರು ವ್ಯಾಖ್ಯಾನಿಸುತ್ತಾರೆ.

ಇಂತಹ ನವಸಮಾಜದ ನಿರ್ಮಾಣಕ್ಕೆ ಪೂರಕವಾಗುವ ಜ್ಞಾನಗಳು ಯಾವುದೆಂದು ಕೂಡ ಅವರೇ ತೀರ್ಮಾನಿಸುತ್ತಾರೆ. ಆದರ್ಶ ಸಮಾಜದ ನಿರ್ಮಾಣಕ್ಕೆ ಪೂರಕವಾಗುವ ವಿಜ್ಞಾನ ಹೇಗಿರಬೇಕು? ಸಮಾಜ ವಿಜ್ಞಾನ ಹೇಗಿರಬೇಕು? ಇವುಗಳ -ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳ-ಜ್ಞಾನವನ್ನು ಹೇಗೆ ಉತ್ಪಾದಿಸಬೇಕು ಇತ್ಯಾದಿಗಳನ್ನು ಬಲಿಷ್ಠ ದೇಶಗಳ ವಿದ್ವಾಂಸರುಗಳು ತೀರ್ಮಾನಿಸುತ್ತಾರೆ. ಬಹುರಾಷ್ಟ್ರೀಯ ಕಂಪೆನಿಗಳು ತಮ್ಮ ಸರಕುಗಳ ಬಿಡಿ ಭಾಗಗಳನ್ನು ಪ್ರಪಂಚದ ವಿವಿಧ ಭಾಗಗಳಲ್ಲಿ ಉತ್ಪಾದಿಸಿ ಇನ್ಯಾವುದೋ ಕೇಂದ್ರದಲ್ಲಿ ಜೋಡಿಸಿದಂತೆ ಶ್ರೀಮಂತ ದೇಶಗಳು ನೇಯುವ ಥಿಯರಿಗಳಿಗೆ ಪ್ರಪಂಚದ ವಿವಿಧ ಭಾಗಗಳಲ್ಲಿ ಪುರಾವೆಗಳನ್ನು ಹುಡುಕಲಾಗುವುದು ಮತ್ತು ಬಹುತೇಕರಿಗೆ ಅನ್ವಯವಾಗುವ ಸಮಾಜ ಥಿಯರಿಗಳನ್ನು ನೇಯಲಾಗುವುದು. ನಮ್ಮಂತಹ ಬಡದೇಶಗಳ ಬಹುತೇಕ ವಿದ್ವಾಂಸರ ಕೆಲಸ ಪಶ್ಚಿಮದ ಶ್ರೀಮಂತ ದೇಶಗಳ ವಿದ್ವಾಂಸರಿಂದ ಬಂದ ಥಿಯರಿಗಳನ್ನು ತಮ್ಮ ಸಾಮಾಜಿಕ ಪರಿಸರದಲ್ಲಿ ಅನ್ವಯಿಸಿ ತಮ್ಮ ಸಾಮಾಜಿಕ ಪರಿಸರ ಯಜಮಾನಿಕೆಯಲ್ಲಿರುವ ಥಿಯರಿಯಿಂದ ಎಷ್ಟು ದೂರ ಇದೆ ಅಥವಾ ಹತ್ತಿರ ಇದೆ ಎಂದು ತೋರಿಸುವುದಾಗಿದೆ.

ಬಹುತೇಕರು ಈ ಸಮಸ್ಯೆಯನ್ನು ಈಸ್ಟ್ ವರ್ಸಸ್ ವೆಸ್ಟ್ ಪ್ರಶ್ನೆಯಾಗಿಸುತ್ತಾರೆ. ಅದರಲ್ಲೂ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ಪ್ರತಿಪಾದಿಸುವವರು ಒಂದು ಹೆಜ್ಜೆ ಮುಂದೆ ಹೋಗಿ, ನಾವು ಹಿಂದಿನಿಂದಲೇ ಹೇಳುತ್ತಾ ಬಂದಿದ್ದೇವೆ, ಈಗ ನೋಡಿ ಅಂಕಿಅಂಶಗಳು ಕೂಡ ನಮ್ಮ ವಾದವನ್ನು ದೃಢಪಡಿಸುತ್ತಿವೆ ಎಂದು ಹೇಳಬಹುದು. ಆದರೆ ಇದು ಕೇವಲ ಈಸ್ಟ್ ವರ್ಸಸ್ ವೆಸ್ಟ್ ಪ್ರಶ್ನೆ ಅಲ್ಲ. ಅಷ್ಟುಮಾತ್ರವಲ್ಲ ಈ ಚೌಕಟ್ಟಿನೊಳಗೆ ಈ ಸಮಸ್ಯೆಗೆ ಪರಿಹಾರನೂ ಇಲ್ಲ. ಯಾಕೆಂದರೆ ಇದು ಬಲಾಢ್ಯರು ತಮ್ಮ ಲೋಕದೃಷ್ಟಿಯನ್ನು ಇತರರ ಮೇಲೆ ಹೇರುವ ಪ್ರಯತ್ನ. ಈ ಬಗೆಯ ಪ್ರಯತ್ನ ಗ್ಲೋಬಲ್ ಮಟ್ಟದಲ್ಲಿ ಹೇಗಿದೆಯೋ ಅದೇ ರೀತಿಯಲ್ಲಿ ಸ್ಥಳೀಯವಾಗಿಯೂ ಇದೆ. ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಜ್ಞಾನ ಉತ್ಪಾದಿಸುವವರು ತಮ್ಮ ಲೋಕ ದೃಷ್ಟಿಯನ್ನು ವಿಜ್ಞಾನ ತಂತ್ರಜ್ಞಾನಗಳ (ಆಧುನೀಕರಣ/ಜಾಗತೀಕರಣದ) ಹೆಸರಿನಲ್ಲಿ ಯುನಿವರ್ಸಲೈಸ್ ಮಾಡಲು ಪ್ರಯತ್ನಿಸುತ್ತಿದ್ದಾರೆ. ಇಂತಹ ಯುನಿವರ್ಸಲೈಸೇಶನನ್ನು ಪ್ರಶ್ನಿಸುವ ಸ್ಥಳೀಯ ಬಲಾಢ್ಯರು ಅತಿಯಾದ ಸ್ವಾಯತ್ತತೆಯನ್ನು ಪ್ರತಿಪಾದಿಸುವ ಮತ್ತು ಎಲ್ಲವೂ ತನ್ನೊಳಗೆ ಇದೆ ಎಂದು ವಾದಿಸುವ ಸಮಾಜ/ಸಂಸ್ಕೃತಿ ಕಲ್ಪನೆಗಳನ್ನು ಮುಂಚೂಣಿಗೆ ತರುತ್ತಾರೆ. ಅವರ ಪ್ರಕಾರ ಪರಿವರ್ತನೆಯನ್ನು ಕೂಡ ಈ ಸ್ವಾಯತ್ತ ಸಮಾಜ/ಸಂಸ್ಕೃತಿ ಅಂತರ್ಗತವಾಗಿ ಹುಟ್ಟುಹಾಕುತ್ತದೆ ಮತ್ತು ನಿರ್ವಹಿಸುತ್ತದೆ. ಒಂದು ವೇಳೆ ಹೊರಗಿನ ಸಮಾಜದ ಸಂಪರ್ಕ ಅನಿವಾರ್ಯವಾದರೆ ತನ್ನ ಹಿತಕ್ಕೆ ಏನೆಲ್ಲ ಬೇಕೋ ಅವುಗಳನ್ನು ಮಾತ್ರ ಸ್ವೀಕರಿಸಿ ಉಳಿದವುಗಳನ್ನು ತಿರಸ್ಕರಿಸುವ ಶಕ್ತಿ ಸ್ವಾಯತ್ತ ಸಮಾಜಕ್ಕಿದೆ ಎಂದು ವಾದಿಸುತ್ತಾರೆ. ಕೆಲವೊಂದು ಕ್ಷೇತ್ರಗಳಲ್ಲಿ (ಅರ್ಥ, ವಿಜ್ಞಾನ, ತಂತ್ರಜ್ಞಾನ, ರಾಜಕೀಯ ಇತ್ಯಾದಿಗಳಲ್ಲಿ) ಪರಕೀಯ ಸಂಸ್ಥೆ ಹಾಗು ಜ್ಞಾನ ಪರಂಪರೆಗಳನ್ನು ಬಳಸಿಕೊಳ್ಳುವುದು

ಅನಿವಾರ್ಯವಾದರೆ ಅವುಗಳನ್ನು ದೇಶೀಕರಿಸಲಾಗುವುದು. ಉದಾಹರಣೆಗೆ ಆಧುನಿಕ ಸಂಸ್ಥೆಯೊಳಗಿನ (ರಾಜಕೀಯ ಪಕ್ಷ ಇರಬಹುದು ಅಥವಾ ಇತರ ಸಂಸ್ಥೆಗಳಿರಬಹುದು) ಸಂಬಂಧಗಳನ್ನು ಕುಟುಂಬದೊಳಗಿನ ಸಂಬಂಧಗಳಿಗೆ ಸಮೀಕರಿಸಲಾಗುವುದು, ರಾಷ್ಟ್ರೀಯತೆಯನ್ನು ಹಿಂದೂ ರಾಷ್ಟ್ರೀಯತೆಯೆಂದು ನಿರ್ವಚಿಸುವುದು, ಭಾಷೆಯನ್ನು ತಾತ್ವಿಕತೆಯ ಸ್ಥಾನಕ್ಕೇರಿಸುವುದು, ಕುಟುಂಬ/ಸಮುದಾಯ ಬದ್ಧತೆಯನ್ನು ಸಾಮಾಜಿಕ ಬದ್ಧತೆಗೆ ಸಮೀಕರಿಸುವುದು ಇತ್ಯಾದಿ ಸಂಕಥನಗಳ ಮೂಲಕ ಪರಕೀಯ ಸಂಸ್ಥೆ ಮತ್ತು ಜ್ಞಾನ ಪರಂಪರೆಗಳನ್ನು ದೇಶೀಕರಿಸಲಾಗುವುದು. ಈ ಬಗೆಯ ಸ್ವಾಯತ್ತ ಸಮಾಜ/ಸಂಸ್ಕೃತಿ ಸಂಕಥನಗಳು ತಮ್ಮ ತಮ್ಮ ಸಮಾಜದಲ್ಲಿ ಚಾರಿತ್ರಿಕವಾಗಿ ರೂಪಿತ ಏಣಿಶ್ರೇಣಿಗಳನ್ನು ಯಥಾಸ್ಥಿತಿಯಲ್ಲಿಟ್ಟುಕೊಂಡು ಪಶ್ಚಿಮದ ಸಮಾಜಗಳು ಮುಂಚೂಣಿಗೆ ತರುವ ವಿಜ್ಞಾನ/ತಂತ್ರಜ್ಞಾನಗಳ ಲಾಭಗಳನ್ನು ಪಡೆಯಲು ನೆರವಾಗುತ್ತಿವೆ. ಪಶ್ಚಿಮದ ಬಲಾಢ್ಯರು ತಮ್ಮ ಲೋಕದೃಷ್ಟಿಯನ್ನು ಆಧುನೀಕರಣ/ಜಾಗತೀಕರಣದ ಹೆಸರಲ್ಲಿ ಇತರರ ಮೇಲೆ ಹೇರಲು ಪ್ರಯತ್ನಿಸಿದರೆ ಸ್ಥಳೀಯ ಬಲಾಢ್ಯರು ಸ್ವಾಯತ್ತ ಸಮಾಜ/ಸಂಸ್ಕೃತಿ ಹೆಸರಲ್ಲಿ ತಮ್ಮ ಸ್ಥಳೀಯ ಯಜಮಾನಿಕೆಗೆ ಚ್ಯುತಿ ಬಾರದಂತೆ ಇವುಗಳ (ಆಧುನೀಕರಣ/ಜಾಗತೀಕರಣಗಳ) ಲಾಭ ಪಡೆಯುವ ತಂತ್ರಗಾರಿಕೆ ಈಸ್ಟ್ ವರ್ಸಸ್ ವೆಸ್ಟ್ ಚರ್ಚೆಯಲ್ಲಿ ಅಡಗಿದೆ. ಆದುದರಿಂದ ಪಶ್ಚಿಮದ ಶ್ರೀಮಂತ ರಾಷ್ಟ್ರಗಳು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸುವ ಸಮಾಜ ಜ್ಞಾನವನ್ನು ಈಸ್ಟ್ ವರ್ಸಸ್ ವೆಸ್ಟ್ ಸಮಸ್ಯೆಯೆಂದು ನೋಡುವ ಬದಲು ಬಹುಮುಖ್ಯವಾಗಿ ಇದೊಂದು ಅಧಿಕಾರದ ಡಿಸ್ಟ್ರಿಬ್ಯುಶನ್ ಸಮಸ್ಯೆಯೆಂದು ನೋಡಬೇಕಾಗಿದೆ.

ವಿಚಾರಗಳು ನಮ್ಮ ಆಚಾರಗಳನ್ನು ಅಥವಾ ಇತರರೊಂದಿಗಿನ ನಮ್ಮ ವ್ಯವಹಾರ ಗಳನ್ನು ಪ್ರಭಾವಿಸುತ್ತವೆ. ನಡೆನುಡಿಗಳು ನಮ್ಮ ಮತ್ತು ಇತರರ ನಡುವಿನ ಅಧಿಕಾರ ಸಂಬಂಧಗಳನ್ನು ಪ್ರತಿಬಿಂಬಿಸುತ್ತವೆ. ಮೇಲಿನ ಕೆಲವು ಉದಾಹರಣೆಗಳ ಮೂಲಕ ಈ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದೇವೆ. ಅಧ್ಯಾಯದ ಮುಂದಿನ ಭಾಗದಲ್ಲಿ ಆಧುನೀಕರಣ/ಅಭಿವೃದ್ಧಿ ಸೃಷ್ಟಿಸುವ ಅಧಿಕಾರದ ಏರುಪೇರುಗಳನ್ನು ವಿಸ್ತೃತವಾಗಿ ಚರ್ಚಿಸಿದ್ದೇನೆ. ಇದಕ್ಕೆ ಸಂಬಂಧಿಸಿದ ಚರ್ಚೆಗಳು ಸ್ಥೂಲವಾಗಿ ಎರಡು ಮೂರು ವಿಚಾರಗಳ ಸುತ್ತ ಗಿರಕಿ ಹೊಡೆಯುತ್ತಿವೆ. ಯಾವುದೋ ಒಂದು ಅಥವಾ ಕೆಲವು ಕೇಂದ್ರಗಳು ಅಭಿವೃದ್ಧಿಯನ್ನು ನಿರ್ದೇಶಿಸುವ ಸ್ಥಿತಿ ಪಾಲಿಸಿ ಸಂಶೋಧನೆಯ ದೃಷ್ಟಿಯಿಂದ ವಿಶೇಷ ಆಶಾದಾಯಕವಲ್ಲ ಎನ್ನುವುದು ಮೊದಲನೇ ದೃಷ್ಟಿಕೋನ. ಹಲವು ಕೇಂದ್ರಗಳು ಇರುವುದು ಮತ್ತು ಅವುಗಳು ತಮ್ಮ ಬೇಕು ಬೇಡಗಳಿಗನುಸಾರ ತಮ್ಮ ಆದ್ಯತೆಗಳನ್ನು ನೋಡುವ ದೃಷ್ಟಿಯಿಂದ ಸಂಶೋಧನೆಯ ಪಾಲಿಸಿ ಕೊಡುಗೆಯನ್ನು ನೋಡುವುದು ಎರಡನೇ ದೃಷ್ಟಿಕೋನ. ಹಲವು ಕೇಂದ್ರಗಳು ಮಾತ್ರ ಇರುವುದಲ್ಲ. ಹಲವು ಆಸಕ್ತಿಗಳು (ಮೇಲ್ವರ್ಗ, ಮಧ್ಯಮವರ್ಗ ಮತ್ತು ತಳವರ್ಗ) ಕೂಡ ಇರುತ್ತವೆ. ಬಹುತೇಕ ಸಂಶೋಧನೆಗಳು ಸಮಷ್ಟಿಯನ್ನು ಪ್ರತಿನಿಧೀಕರಿಸುವ ಹೆಸರಲ್ಲಿ ಮೇಲ್ವರ್ಗ ಅಥವಾ ಮಧ್ಯಮವರ್ಗಗಳ ಆಸಕ್ತಿಗಳನ್ನು

ಪ್ರತಿಪಾದಿಸುತ್ತಿರುತ್ತವೆ. ಸಮಾಜದ ತಳಸ್ತರದ ಹಿತಾಸಕ್ತಿಗಳನ್ನು ಪ್ರತಿಪಾದಿಸುವ ಸಂಶೋಧನೆಗಳು ಮಾತ್ರ ನಿಜವಾದ ಪಾಲಿಸಿ ಕೊಡುಗೆಯನ್ನು ನೀಡಲು ಸಾಧ್ಯ ಎನ್ನುವುದು ಮೂರನೇ ದೃಷ್ಟಿಕೋನ.[೪] ಆಧುನೀಕರಣದೊಂದಿಗೆ ಪ್ರಪಂಚದ ಬಹುತೇಕ ರಾಷ್ಟ್ರಗಳು ಒಂದೇ ಬಗೆಯ ಅಭಿವೃದ್ಧಿ ನೀತಿಯನ್ನು ಅನುಸರಿಸುತ್ತಿವೆ. ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಸರಕು ಮತ್ತು ಸೇವೆಗಳ ಉತ್ಪಾದನೆಯಲ್ಲಿ ತೊಡಗಿಸುವುದು ಮತ್ತು ಸರಕು ಮತ್ತು ಸೇವೆಗಳು ವಿಲೇವಾರಿಗೆ ಸರಕಾರಿ ಅಥವಾ ಮಾರುಕಟ್ಟೆ ವ್ಯವಸ್ಥೆಯನ್ನು ಅಥವಾ ಅರೆ ಮಾರುಕಟ್ಟೆ ಮತ್ತು ಅರೆ ಸರಕಾರಿ ವ್ಯವಸ್ಥೆಯನ್ನು ಅವಲಂಬಿಸುವುದು ಆಧುನೀಕರಣದಲ್ಲಿ ಅನುಸರಿಸುತ್ತಿರುವ ಅಭಿವೃದ್ಧಿ ನೀತಿ.[೫] ಇಂತಹ ನೀತಿಯನ್ನು ಅಂತರಾಷ್ಟ್ರೀಯ ಅಧಿಕಾರ ಕೇಂದ್ರಗಳು ನಿರ್ವಚಿಸುತ್ತಿವೆ. ಹಲವಾರು ದೇಶಗಳ ಸಮುದಾಯಗಳಲ್ಲಿ ನಮ್ಮದೂ ಒಂದು ದೇಶ. ಅಂತರಾಷ್ಟ್ರೀಯ ಪರಿಸರದಲ್ಲಿ ಆಗುತ್ತಿರುವ ಬದಲಾವಣೆಗಳಿಂದ ನಮ್ಮಂತಹ ಬಡದೇಶಗಳು ಪ್ರತ್ಯೇಕ ಉಳಿಯಲು ಸಾಧ್ಯವಿಲ್ಲ. ಅಂದ ಮಾತ್ರಕ್ಕೆ ಬಡದೇಶಗಳಿಗೆ ಏನೇನೂ ಆಯ್ಕೆಗಳಿಲ್ಲದ ಸ್ಥಿತಿ ಇದೆಯೆಂದಲ್ಲ. ಆದರೆ ಇದೊಂದು ಸೀಮಿತ ಆಯ್ಕೆಯ ಸ್ಥಿತಿ. ತೊಂಬತ್ತರ ದಶಕದಿಂದ ನಮ್ಮಲ್ಲೂ ಉದಾರೀಕರಣ ಅಥವಾ ಜಾಗತೀಕರಣ ಅಥವಾ ಖಾಸಗೀಕರಣ ಪ್ರಕ್ರಿಯೆ ಆರಂಭವಾಗಿದೆ. ನಮ್ಮಲ್ಲಿನ ರಾಜಕೀಯ ಪಕ್ಷಗಳು ಅವುಗಳ ಸ್ಥಾನಕ್ಕೆ ಅನುಸಾರ (ಆಡಳಿತ ಅಥವಾ ವಿರೋಧ ಪಕ್ಷ) ಜಾಗತೀಕರಣ ಪ್ರಕ್ರಿಯೆ ಕುರಿತು ನಿಲುವು ತಾಳಿವೆ. ಆಡಳಿತದಲ್ಲಿರುವಾಗ ಹೊಸ ಆರ್ಥಿಕ ನೀತಿಯನ್ನು ಬೆಂಬಲಿಸುವ ಮತ್ತು ವಿರೋಧ ಪಕ್ಷದ ಸ್ಥಾನದಲ್ಲಿ ವಿರೋಧಿಸುವ ಒಂದು ದ್ವಂದ್ವ ನೀತಿಯನ್ನು ನಮ್ಮ ರಾಜಕೀಯ ಪಕ್ಷಗಳು ಮಾಡುತ್ತಲೇ ಬಂದಿವೆ.

ನಮ್ಮಲ್ಲಿ ಖಾಸಗೀಕರಣ ಪ್ರಕ್ರಿಯೆ ಆರಂಭಿಸಿದವರು ಕಾಂಗ್ರೆಸಿಗರು. ಆವಾಗ ವಿರೋಧ ಪಕ್ಷದಲ್ಲಿ ಇದ್ದ ಬಿಜೆಪಿಯವರು ಅದನ್ನು ವಿರೋಧಿಸಿದ್ದರು. ಆದರೆ ಕೆಲ ಕಾಲ ನಂತರ ಕೇಂದ್ರದಲ್ಲಿ ಬಿಜೆಪಿಯವರು ಅಧಿಕಾರಕ್ಕೆ ಬಂದರು. ಅವರು ಖಾಸಗೀಕರಣ ಪ್ರಕ್ರಿಯೆಯನ್ನು ಇನ್ನೂ ವಿಸ್ತರಿಸಿದರು.[೬] ಹೀಗೆ ಯಾವುದೇ ಪಕ್ಷ ಆಡಳಿತ ನಡೆಸಿದರು ಸ್ಟ್ರಕ್ಚರಲ್ ಎಜೆಸ್ಟ್ಮೆಂಟ್ ಪ್ರಕ್ರಿಯೆ ಆರಂಭಿಸಿದ ನಂತರ ಅಭಿವೃದ್ಧಿ ಸಂಬಂಧಿಸಿದಂತೆ ಕೇಳಿಕೊಳ್ಳಬಹುದಾದ ಪ್ರಶ್ನೆಗಳು ತುಂಬಾ ಸೀಮಿತವಾದವು. ಪೂರ್ಣ ಖಾಸಗೀಕರಣವೇ ಅಥವಾ ಅರೆ ಖಾಸಗೀಕರಣವೇ? ಪರದೇಶಿ ಬಂಡವಾಳದ ಮಿತಿಯನ್ನು ಶೇಕಡಾ ಐವತ್ತಕ್ಕೆ ಸೀಮಿತಗೊಳಿಸುವುದೇ ಅಥವಾ ಶೇಕಡಾ ಎಪ್ಪತ್ತಕ್ಕೆ ಏರಿಸದೇ? ಕೈಗಾರಿಕೆ ವಲಯವನ್ನು ಮಾತ್ರ ಪರದೇಶಿ ಬಂಡವಾಳಕ್ಕೆ ತೆರೆಯುವುದೇ ಅಥವಾ ಎಲ್ಲ ವಲಯಗಳನ್ನು ಪರದೇಶಿ ವಲಯಕ್ಕೆ ಮುಕ್ತವಾಗಿ ಬಿಡುವುದೇ? ಉನ್ನತ ಶಿಕ್ಷಣಗಳಲ್ಲಿ ಪರದೇಶಿ ಪಾಲುಗೊಳ್ಳುವಿಕೆಯನ್ನು ಬೆಂಬಲಿಸುವುದೇ? ಗ್ರಾಮೀಣಾಭಿವೃದ್ಧಿಯನ್ನು ಹಿಂದಿನಂತೆ ಸರಕಾರದ ಮುಂದಾಳತ್ವದಲ್ಲಿ ನಡೆಸುವುದೇ ಅಥವಾ ಕೆಲವೊಂದು ಸಂಸ್ಥೆಗಳನ್ನು (ನೀರಿನ ಸೊಸೈಟಿ, ಪಂಚಾಯತ್, ಶಾಲಾ ಉಸ್ತುವಾರಿ ಸಮಿತಿ ಇತ್ಯಾದಿ)

ಹುಟ್ಟು ಹಾಕಿ ಸರಕಾರ ಮತ್ತು ಜನರ ಸಹಭಾಗಿತ್ವದಿಂದ ನಡೆಸುವುದೇ? ಇತ್ಯಾದಿ ಪ್ರಶ್ನೆಗಳು ಮಾತ್ರ ಕೇಳಬಹುದಾಗಿದೆ. ಮೇಲ್ನೋಟಕ್ಕೆ ಈ ಎಲ್ಲ ಪ್ರಶ್ನೆಗಳು ಬೇರೆ ಬೇರೆಯಾಗಿ ಕಂಡರೂ ಆಳದಲ್ಲಿ ಇವೆಲ್ಲವು ಒಂದೇ ವಿಚಾರದ ವಿವಿಧ ಮಗ್ಗುಲುಗಳನ್ನು ಪ್ರತಿನಿಧೀಕರಿಸುತ್ತಿವೆ. ಈ ದೃಷ್ಟಿಯಿಂದ ನಮ್ಮಲ್ಲಿನ ಪಾಲಿಸಿ ಸಂಶೋಧನೆಗಳೆಂದು ಕರೆಸಿಕೊಳ್ಳುವ ಸಂಶೋಧನೆಗಳು ಯಾವುದೇ ಮೂಲಭೂತ ಪರಿವರ್ತನೆಗಳನ್ನು ತರಬಹುದಾದ ಹೊಸತನವನ್ನು ಹೊಂದಿರುವುದಿಲ್ಲ. ಇಂತಹ ಸಂಶೋಧನೆಗಳು ಮಾಡುವ ದೊಡ್ಡ ಕೆಲಸವೆಂದರೆ ಅಧಿಕಾರ ಕೇಂದ್ರಗಳು ಮುಂಚೂಣಿಗೆ ತಂದ ಪಾಲಿಸಿಗಳು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬಂದಿವೆ? ಒಂದು ವೇಳೆ ಆ ಪಾಲಿಸಿಗಳು ಅವುಗಳ ಮೂಲ ಉದ್ದೇಶಕ್ಕನುಗುಣವಾಗಿ ಕಾರ್ಯಗತಗೊಳ್ಳದಿದ್ದರೆ ಯಾಕೆ ಕಾರ್ಯಗತಗೊಂಡಿಲ್ಲ? ಪಾಲಿಸಿಗಳನ್ನು ಮೂಲಭೂತ ಉದ್ದೇಶಕ್ಕನುಗುಣವಾಗಿ ಕಾರ್ಯಗತಗೊಳಿಸಬೇಕಾದರೆ ಏನು ಮಾಡಬೇಕು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸಲು ಬಹುತೇಕ ಪಾಲಿಸಿ ಸಂಶೋಧನೆಗಳು ತಮ್ಮ ಶ್ರಮ ವ್ಯಯ ಮಾಡುತ್ತಿವೆ.

ಇಡೀ ಪ್ರಪಂಚದ ಎಲ್ಲ ವ್ಯವಹಾರಗಳನ್ನು ಒಂದೆರಡು ಅಧಿಕಾರ ಕೇಂದ್ರಗಳು ನಿರ್ಧರಿಸುತ್ತವೆ ಅಥವಾ ಒಂದು ಅಥವಾ ಕೆಲವು ಕೇಂದ್ರಗಳು ಎಲ್ಲವನ್ನು ವ್ಯಾಖ್ಯಾನಿಸುತ್ತವೆ, ನಿಯಂತ್ರಿಸುತ್ತವೆ ಎನ್ನುವ ಮೇಲಿನ ವಾದವನ್ನು ಒಪ್ಪಲಾಸಾಧ್ಯ. ಪ್ರತಿ ರಾಷ್ಟ್ರ ತನ್ನ ಬೇಕುಬೇಡಗಳಿಗನುಸಾರ ಪಾಲಿಸಿಗಳನ್ನು ರೂಪಿಸಿಕೊಳ್ಳಲು ಸಾಧ್ಯವಿದೆ.[೭] ವಸಾಹತ್ತೋತರ ಬೆಳವಣಿಗೆಗಳು ಮೇಲಿನ ಏಕ ಅಥವಾ ಕೆಲವು ಕೇಂದ್ರ ನಿರ್ದೇಶಿತ ಅಭಿವೃದ್ಧಿಗಳಿಗಿಂತ ಭಿನ್ನ ಮಾದರಿಗಳು ಸಾಧ್ಯ ಎಂದು ತೋರಿಸುವುದಕ್ಕೆ ಸಾಕಷ್ಟು ಪುರಾವೆಗಳನ್ನು ನೀಡುತ್ತವೆ. ನಮ್ಮದೇ ದೇಶದ ಉದಾಹರಣೆ ತೆಗೆದುಕೊಂಡರೆ ಸುಮಾರು ಎಂಬತ್ತರ ದಶಕದವರೆಗೂ ಇಡೀ ದೇಶಕ್ಕೊಂದು ಸಾರ್ವಜನಿಕ ಆಸಕ್ತಿಯನ್ನು ಮತ್ತು ಆ ಸಾರ್ವಜನಿಕ ಆಸಕ್ತಿಯನ್ನು ಪೂರೈಸಲು ಸರಕಾರ ಮಾತ್ರ ಶಕ್ತ ಎನ್ನುವ ಮಾದರಿ ಚಾಲ್ತಿಯಲ್ಲಿತ್ತು.[೮] ಈ ಸತ್ಯ ಅರ್ಥವಾಗಬೇಕಾದರೆ ಸುಮಾರು ಎಂಬತ್ತರ ದಶಕದವರೆಗೆ ನಮ್ಮ ರಾಜಕೀಯ ಹಾಗೂ ಆರ್ಥಿಕ ಪರಿಸರದಲ್ಲಿ ಚಾಲ್ತಿಯಲ್ಲಿದ್ದ ಕೆಲವೊಂದು ಮೌಲ್ಯಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಐವತ್ತರ ದಶಕದಿಂದ ಹೆಚ್ಚು ಕಡಿಮೆ ಎಂಬತ್ತರ ಮಧ್ಯ ಭಾಗದವರೆಗೂ 'ಸೆಕ್ಯುಲರ್ ' ಪದಕ್ಕೆ ತಕ್ಕಮಟ್ಟಿನ ಮರ್ಯಾದೆ ಇತ್ತು. ಶಾಲೆ ಕಾಲೇಜುಗಳಲ್ಲಿ, ಕೋರ್ಟ್ ಕಚೇರಿಗಳಲ್ಲಿ ಜಾತಿ/ಧರ್ಮದ ನೆಲೆಯಲ್ಲಿ ಗುರುತಿಸಿಕೊಳ್ಳುವುದು ಮರ್ಯಾದೆಯ ಸಂಗತಿಯಾಗಿರಲಿಲ್ಲ. ಅಂದರೆ ಸೆಕ್ಯುಲರಿಸಂ ಒಂದು ಮೌಲ್ಯವಾಗಿ ಸಾರ್ವಜನಿಕ ಸ್ಪೇಸ್‌ಲ್ಲಿ ಸ್ವೀಕೃತವಾಗಿತ್ತು. ಇದರ ಅರ್ಥ ಆವಾಗ ಜಾತಿ/ಧರ್ಮದ ಪ್ರಭಾವ ಇರಲಿಲ್ಲವೆಂದಲ್ಲ. ಆವಾಗಲೂ ಇತ್ತು. ಆದರೆ ಆವಾಗ ಅದೊಂದು ಒಳಪ್ರವಾಹದ ರೂಪದಲ್ಲಿ ಇತ್ತು. ಸಾರ್ವಜನಿಕವಾಗಿ ಯಾರು ಕೂಡ ತಾನು ಸೆಕ್ಯುಲರ್ ಅಲ್ಲ ಅಥವಾ ಸೆಕ್ಯುಲರ್ ಪದದ ಅರ್ಥ ಗೊತ್ತಿಲ್ಲ ಎಂದು ಹೇಳಿಕೊಳ್ಳುವುದು ಫ್ಯಾಶನ್ ಆಗಿರಲಿಲ್ಲ. ಸಾರ್ವಜನಿಕ

ಉದ್ದಿಮೆಗಳು, ಬೇಂಕ್ ರಾಷ್ಟ್ರೀಕರಣ, ಸಾರಿಗೆ ಸಂಪರ್ಕ ವ್ಯವಸ್ಥೆಯ ರಾಷ್ಟ್ರೀಕರಣ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆ, ಸಾರ್ವಜನಿಕ ಆರೋಗ್ಯ ವ್ಯವಸ್ಥೆ, ಭೂಸುಧಾರಣೆ, ನಿರುದ್ಯೋಗ ನಿವಾರಣೆ, ಬಡತನ ನಿವಾರಣೆ (ಗರೀಬಿ ಹಠಾವೋ) ಇತ್ಯಾದಿಗಳು ಎಂಬತ್ತರ ದಶಕದವರೆಗೆ ಆರ್ಥಿಕ ಕ್ಷೇತ್ರದಲ್ಲಿ ಕೇಳಿ ಬರುತ್ತಿದ್ದ ಘೋಷಣೆಗಳು. ತುಂಬಾ ಸರಳೀಕೃತವಾಗಿ ಹೇಳುವುದಾದರೆ ಎಂಬತ್ತರ ದಶಕದವರೆಗೂ ರಾಜಕೀಯ ಕ್ಷೇತ್ರದಲ್ಲಿ 'ಸೆಕ್ಯುಲರ್' ಎನ್ನುವ ಪದಕ್ಕೆ ಇದ್ದ ಸ್ಥಾನಮಾನ ಆರ್ಥಿಕ ಕ್ಷೇತ್ರದಲ್ಲಿ 'ಸಾರ್ವಜನಿಕ' ಎನ್ನುವ ಪದಕ್ಕೆ ಇತ್ತು. 'ಜಾತಿ/ಧರ್ಮ' ಎನ್ನುವ ಪದಗಳನ್ನು ಸಾರ್ವಜನಿಕವಾಗಿ ಹೆಮ್ಮೆಯಿಂದ ಹೇಳಿಕೊಳ್ಳುವುದು ಹೇಗೆ ಕಷ್ಟವಾಗಿತ್ತೊ ಹೆಚ್ಚು ಕಡಿಮೆ ಅಷ್ಟೇ ಕಷ್ಟ 'ಖಾಸಗಿ' ಎನ್ನುವ ಪದ ಬಳಸುವಾಗಲೂ ಎದುರಿಸಬೇಕಿತ್ತು.

ಇಂತಹ ರಾಜಕೀಯ ಹಾಗೂ ಆರ್ಥಿಕ ಪರಿಸರ ಒಂದು ಕಡೆಯಿಂದ ಸಣ್ಣ ಪ್ರಮಾಣದ (ಶೇ.೨೦ ರಿಂದ ೩೦ರಷ್ಟು) ಬಲಿಷ್ಠ ಮಧ್ಯಮವರ್ಗವನ್ನು ಸೃಷ್ಟಿಸಿದರೆ ಮತ್ತೊಂದೆಡೆ ಅಸಂಖ್ಯಾತ (ಶೇ.೪೦ ರಿಂದ ೫೦ರಷ್ಟು) ಬಡವರನ್ನು ಸೃಷ್ಟಿಸಿತು.[೯] ಈ ಮಧ್ಯಮವರ್ಗ ರೂಪುಗೊಂಡ ಬಗೆ ಮತ್ತು ಅದು ಒಟ್ಟಾರೆ ಬೆಳವಣಿಗೆಗಳ ಬಗ್ಗೆ ಹೊಂದಿರುವ ಧೋರಣೆಗಳನ್ನು ಪರಿಶೀಲಿಸುವ. ಎರಡೂ ಕ್ಷೇತ್ರಗಳಲ್ಲೂ (ರಾಜಕೀಯ ಮತ್ತು ಆರ್ಥಿಕ) ಸಮುದಾಯದ ಅಥವಾ ಸಮಷ್ಠಿಯ ಸಂಪನ್ಮೂಲಗಳನ್ನು ಧಾರಾಳವಾಗಿ ಬಳಸಿಕೊಂಡು ಇಂದಿನ ಮಧ್ಯಮ ವರ್ಗ ರೂಪುಗೊಂಡಿದೆ. ಕೋಟಿಗಟ್ಟಲೆ ಸಾರ್ವಜನಿಕ ದುಡ್ಡನ್ನು ವಿನಿಯೋಜನೆ ಮಾಡಿ ಬೆರಳಣಿಕೆಯಷ್ಟು ರಾಷ್ಟ್ರೀಯ ವಿಜ್ಞಾನ ಸಂಸ್ಥೆಗಳನ್ನು (ಇಂಡಿಯನ್ ಇನ್‌ಸ್ಟಿಟ್ಯುಟ್ ಆಫ್ ಸಯನ್ಸ್‌ಗಳನ್ನು), ಕೇಂದ್ರೀಯ ವಿಶ್ವವಿದ್ಯಾಲಯಗಳನ್ನು, ರಾಷ್ಟ್ರೀಯ ಆರೋಗ್ಯ ಸಂಸ್ಥೆಗಳನ್ನು, ರಾಷ್ಟ್ರೀಯ ಕೈಗಾರಿಕ ಸಂಸ್ಥೆಗಳನ್ನು, ರಾಷ್ಟ್ರೀಯ ಕೃಷಿ ಸಂಸ್ಥೆಗಳನ್ನು, ಇಂಡಿಯನ್ ಮೆನೇಜ್‌ಮೆಂಟ್ ಸಂಸ್ಥೆಗಳನ್ನು, ರಾಷ್ಟ್ರೀಯ ಸಮಾಜ ವಿಜ್ಞಾನ ಸಂಸ್ಥೆಗಳನ್ನು ರೂಪಿಸಲಾಯಿತು. ಕೇಂದ್ರೀಯ ಸರಕಾರದ ನೀತಿಯನ್ನು ಅನುಸರಿಸಿ ರಾಜ್ಯ ಸರಕಾರಗಳು ರಾಜ್ಯ ಮಟ್ಟದ ಸಂಸ್ಥೆಗಳನ್ನು, ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದವು. ಆದರೆ ಇದೇ ಸಂದರ್ಭದಲ್ಲಿ ಮತ್ತು ಈವಾಗಲೂ ತಾಲ್ಲೂಕು ಅಥವಾ ಗ್ರಾಮೀಣ ಮಟ್ಟದ ಲಕ್ಷಗಟ್ಟಲೆ ಶಾಲೆಗಳು ಉತ್ತಮ ಪ್ರಯೋಗಾಲಯಗಳಿಲ್ಲದೆ, ಬೋಧಕರಿಲ್ಲದೆ, ಆಟೋಟ ಚಟುವಟಿಕೆಗಳಿಲ್ಲದೆ ನರಳುತ್ತಿದ್ದವು ಮತ್ತು ನರಳುತ್ತಿವೆ. ಅಂದರೆ ಕೋಟಿಗಟ್ಟಲೆ ದುಡ್ಡು ವಿನಿಯೋಜನೆ ಮಾಡಿ ಕೆಲವೇ ಕೆಲವು ರಾಷ್ಟ್ರೀಯ ಮಟ್ಟದ ಮಾದರಿ ಸಂಸ್ಥೆಗಳನ್ನು ರೂಪಿಸುವ ಸಂದರ್ಭದಲ್ಲೇ ಕೋಟಿಗಟ್ಟಲೆ ತಳಸ್ತರದ ಸಂಸ್ಥೆಗಳನ್ನು ಏನೇನೂ ವಿನಿಯೋಜನೆ ಮಾಡದೆ ನರಳುವಂತೆ ನೋಡಿಕೊಳ್ಳಲಾಗಿದೆ. ಅಂದಿನ ಮೇಲ್ಜಾತಿ/ಮೇಲ್ವರ್ಗ ಜನರು ಇಂತಹ ಪ್ರತಿಷ್ಠಿತ ರಾಷ್ಟ್ರೀಯ ಸಂಸ್ಥೆಗಳ ಹೆಚ್ಚಿನ ಲಾಭ ಪಡೆದರು. ಇವುಗಳ ಜತೆಗೆ ಸ್ಥಾಪಿತವಾದ ಸಾರ್ವಜನಿಕ ಉದ್ದಿಮೆಗಳಲ್ಲಿ ಶ್ರೀಮಂತ ದೇಶಗಳ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಲಾಯಿತು. ಸಾರ್ವಜನಿಕ ಸಂಸ್ಥೆಗಳಲ್ಲಿ ಓದಿದವರು

ಸಾರ್ವಜನಿಕ ಉದ್ದಿಮೆಗಳಲ್ಲಿ ಆಧುನಿಕ ತಂತ್ರಜ್ಞಾನಗಳ ಬಳಕೆಯನ್ನು ಪ್ರಯೋಗ ಮೂಲಕ ಕಲಿಯಲಾರಂಭಿಸಿದರು ಅಥವಾ ಟ್ರಯಲ್ ಅಂಡ್ ಎರರ್ ಮೂಲಕ ಕಲಿತರು. ಸಾರ್ವಜನಿಕ ಆರೋಗ್ಯ ಶಿಕ್ಷಣ ಸಂಸ್ಥೆಗಳಲ್ಲಿ ಸಾರ್ವಜನಿಕ ಸ್ಕಾಲರ್ ಶಿಪ್ಪಲ್ಲಿ ಓದಿದ ವೈದ್ಯರು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸಾರ್ವಜನಿಕ ದುಡ್ಡಿನಿಂದ ಖರೀದಿಸಿದ ಆಧುನಿಕ ಪರೀಕ್ಷಾ ಯಂತ್ರಗಳನ್ನು ಬಡ ರೋಗಿಗಳ ಮೇಲೆ ಪ್ರಯೋಗಿಸಿ ವೈದ್ಯಕೀಯ ಕಲಿತರು. ಸಾರ್ವಜನಿಕ ಮೆನೇಜ್‌ಮೆಂಟ್ ಸಂಸ್ಥೆಗಳಲ್ಲಿ ಓದಿದವರು ಸಾರ್ವಜನಿಕ ಉದ್ದಿಮೆಗಳಲ್ಲಿ ಸಾರ್ವಜನಿಕ ದುಡ್ಡನ್ನು ಬೇಕಾಬಿಟ್ಟಿ ಬಳಸಿ ವ್ಯಾಪಾರ ವಹಿವಾಟು ಕಲಿತರು. ಹೀಗೆ ಸೆಕ್ಯುಲರ್ ರಾಜಕೀಯದಿಂದ ಮತ್ತು ಸಾರ್ವಜನಿಕ ವಿನಿಯೋಜನೆಯಿಂದ ಸ್ಥಾಪಿತವಾದ ಶಿಕ್ಷಣ, ಆರೋಗ್ಯ, ಉದ್ದಿಮೆ ಇತ್ಯಾದಿಗಳನ್ನು ಬಳಸಿಕೊಂಡು ಇಂದಿನ ಮಧ್ಯಮ ವರ್ಗ ರೂಪಿತವಾಗಿದೆ.

ಎಂಬತ್ತರ ದಶಕದವರೆಗೆ ನಡೆದ ಅಭಿವೃದ್ಧಿ ರಾಜಕಾರಣ ಮಧ್ಯಮ ವರ್ಗವನ್ನು ಹೇಗೆ ರೂಪಿಸಿತೋ ಅದೇ ಸಂದರ್ಭದಲ್ಲಿ ಸಮಾಜದ ಬಹುದೊಡ್ಡ ವರ್ಗವನ್ನು (ಶೇ.೪೦ ರಿಂದ ೫೦ರಷ್ಟು) ಒಂದು ಅತಂತ್ರ ಸ್ಥಿತಿಗೆ ತಲ್ಲಿತು.[೧೦] ಒಂದು ಕಡೆಯಿಂದ ಈ ವರ್ಗ ತಮ್ಮ ಸಾಂಪ್ರದಾಯಿಕ ಬದುಕನ್ನು ಕಳೆದುಕೊಂಡರೆ ಇನ್ನೊಂದೆಡೆ ಆಧುನೀಕರಣ ಭರವಸೆ ನೀಡಿದ ಆಧುನಿಕ ಬದುಕು ಇವರಿಗೆ ಗಗನ ಕುಸುಮಗಳಾದವು. ಇವರನ್ನು ಎಲ್ಲ ಜಾತಿ ಧರ್ಮಗಳಲ್ಲೂ ನೋಡಬಹುದು. ದಲಿತರು, ಬುಡಕಟ್ಟು ಜನರು, ಕಡಿಮೆ ಸಂಖ್ಯೆಯಲ್ಲಿರುವ ಹಿಂದುಳಿದ ಜಾತಿ ಜನರು ಈ ಬಗೆಯಲ್ಲಿ ಅತಂತ್ರ ಸ್ಥಿತಿಗೆ ತಳ್ಳಲ್ಪಟ್ಟವರಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದಾರೆ.[೧೧] ಮತಾಂತರದಿಂದಲಾದರೂ ತಮ್ಮ ಸಾಮಾಜಿಕ ಹೀನಸ್ಥಿತಿಯನ್ನು ಬದಲಾಯಿಸಿಕೊಳ್ಳಬೇಕೆಂಬ ಇವರ ಪ್ರಯತ್ನ ಫಲ ನೀಡಲಿಲ್ಲ. ಮತಾಂತರಗೊಂಡ ದಲಿತರ ಬದುಕು ಕೆಲವೊಂದು ಭೌತಿಕ ಸವಲತ್ತುಗಳಿಂದ ವರ್ಣಾಶ್ರಮದಲ್ಲೇ ಉಳಿದ ದಲಿತರಿಂದ ಉತ್ತಮಗೊಂಡದ್ದು ಬಿಟ್ಟರೆ ಹೊಸಧರ್ಮದಲ್ಲೂ ಇವರ ದಲಿತಪಟ್ಟ (ಏಣಿಯ ಬುಡದಲ್ಲಿರುವ ಸ್ಥಿತಿ) ಬದಲಾಗಲಿಲ್ಲ. ಇದರಿಂದಾಗಿ ದಲಿತ ಹಿನ್ನೆಲೆಯಿಂದ ಕ್ರಿಶ್ಚಿಯನ್ ಹಾಗು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡವರಲ್ಲೂ ಇವರನ್ನು ದೊಡ್ಡ ಸಂಖ್ಯೆಯಲ್ಲಿ ನೋಡಬಹುದು. ಸ್ವತಂತ್ರ ಭಾರತ ಅನುಸರಿಸಿದ ತಾಂತ್ರಿಕ ಆಧುನೀಕರಣ (ಆಧುನಿಕ ಮೌಲ್ಯ ರಹಿತ ಆಧುನೀಕರಣ) ಈ ತಳಸ್ತರದ ಜನರ ಸಾಂಪ್ರದಾಯಿಕ ಬದುಕನ್ನು (ಕಸುಬು, ವಸತಿ, ಭಾಷೆ, ಉಡುಗೆ ತೊಡುಗೆ, ಊಟ ಇತ್ಯಾದಿಗಳನ್ನು) ಕಸಿದುಕೊಂಡಿದೆ. ಕೃಷಿಗೆ ನೀರಾವರಿ ವ್ಯವಸ್ಥೆ ಮಾಡಲು ಕಟ್ಟಿದ ದೊಡ್ಡ ದೊಡ್ಡ ಅಣೆಕಟ್ಟುಗಳು, ಮಿಲಿಟರಿ ಉದ್ದೇಶಕ್ಕಾಗಿ ವಶಪಡಿಸಿಕೊಂಡ ಭೂಮಿ, ಅರಣ್ಯ ಸಂರಕ್ಷಣೆಯ ಹೆಸರಲ್ಲಿ, ರಾಷ್ಟ್ರೀಯ ಉದ್ಯಾನವನದ ಹೆಸರಲ್ಲಿ, ವನ್ಯ ಜೀವಿಗಳ ರಕ್ಷಣೆಯ ಹೆಸರಲ್ಲಿ ನಡೆದ ಯೋಜನೆಗಳು ಲಕ್ಷಾಂತರ ಬುಡಕಟ್ಟು ಜನರ ಬದುಕನ್ನು ಬುಡಮೇಲುಗೊಳಿಸಿವೆ. ಮೇಲಿನ ಯೋಜನೆಗಳ ಜತೆಗೆ ರೈಲ್ವೆ ಯೋಜನೆಗಳು,

ಕೈಗಾರಿಕೆಗಳ ಅಭಿವೃದ್ಧಿ ಯೋಜನೆಗಳು ಲಕ್ಷಾಂತರ ಸಣ್ಣಪುಟ್ಟ ರೈತರನ್ನು ಭೂಮಿ ಕಳೆದುಕೊಳ್ಳುವಂತ ಮಾಡಿವೆ. ದಿನಬಳಕೆಯ ವಸ್ತುಗಳನ್ನು ಆಧುನಿಕ ತಂತ್ರಜ್ಞಾನ ಉತ್ಪಾದಿಸಲು ಆರಂಭವಾದ ನಂತರ ಸ್ಥಳೀಯ ಸಾಂಪ್ರದಾಯಿಕ ಕಸುಬುದಾರರು ತಮ್ಮ ಆದಾಯ ಮೂಲಗಳನ್ನು ಕಳೆದುಕೊಂಡರು.[೧೨] ಆಧುನಿಕ ತಂತ್ರಜ್ಞಾನವನ್ನು ಎರಡು ರೀತಿಯಿಂದ ದಕ್ಕಿಸಿಕೊಳ್ಳಬಹುದು. ಒಂದು ಬಂಡವಾಳ ವಿನಿಯೋಜಿಸಿ ವಿಕ್ರಯಿಸುವುದು ಎರಡು ಆಧುನಿಕ ತಂತ್ರಜ್ಞಾನದ ಶಿಕ್ಷಣ/ತರಬೇತಿ ಪಡೆಯುವುದು. ಮೇಲೆ ನೋಡಿದ ತಳಸ್ತರದ ಜನರಿಗೆ ಈ ಎರಡೂ ಮೂಲಗಳು ಲಭ್ಯವಾಗಲಿಲ್ಲ. ಇದರಿಂದಾಗಿ ಇವರುಗಳು ತಾಂತ್ರಿಕ ಆಧುನೀಕರಣದ ಲಾಭ ಪಡೆಯಲಾಗಲಿಲ್ಲ. ಇಂತಹ ದುಃಸ್ಥಿತಿಯಲ್ಲಿ ಇವರ ಸಹಾಯಕ್ಕೆ ಬಂದ ಒಂದೇ ಒಂದು ಊರುಗೋಲೆಂದರೆ ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆ. ಸಾಮಾಜಿಕ ಚಳವಳಿಗಳನ್ನು ಮತ್ತು ಪ್ರತಿ ಐದು ವರ್ಷಕ್ಕೊಮ್ಮೆ ಬರುವ ಚುನಾವಣೆಯನ್ನು ತಳಸ್ತರದ ಜನರು ತಮ್ಮ ಇತಿಮಿತಿಯೊಳಗೆ ಬಳಸಿಕೊಂಡಿದ್ದಾರೆ. ತಮ್ಮ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಪಕ್ಷಗಳನ್ನು ಗೆಲ್ಲಿಸುವ ಮತ್ತು ಅವಶ್ಯಕತೆಗಳನ್ನು ಸತತವಾಗಿ ಪೂರೈಸದಿರುವ ಪಕ್ಷಗಳನ್ನು ಸೋಲಿಸುವ ಮೂಲಕ ರಾಜಕೀಯ ಪಕ್ಷಗಳಿಗೆ ಎಚ್ಚರಿಕೆಯನ್ನು ನೀಡುತ್ತಾರೆ. ಆದಾಗ್ಯೂ ಜಾತಿ, ಧರ್ಮ, ಹಣ, ಹೆಂಡ, ಸೀರೆ ಇತ್ಯಾದಿ ಆಮಿಷಗಳನ್ನೊಡ್ಡಿ ಓಟು ಪಡೆಯುವ ಮೂಲಕ ಬಡಜನರ ಬಿಡುಗಡೆಗಿರುವ ಒಂದೇ ಒಂದು ಅಸ್ತ್ರವನ್ನು ಕೂಡ ನಿರುಪಯುಕ್ತಗೊಳಿಸಲು ಪ್ರಯತ್ನಗಳು ನಡೆಯುತ್ತಿವೆ.[೧೩]

ಬಡವರು ಪ್ರಜಾಪ್ರಭುತ್ವ ರಾಜಕೀಯ ಪ್ರಕ್ರಿಯೆಯನ್ನು ತಮ್ಮ ಬಿಡುಗಡೆಯ ಒಂದು ಅವಕಾಶವೆಂದು ತಿಳಿದರೆ ಮೇಲ್ವರ್ಗ ಮತ್ತು ಮಧ್ಯಮವರ್ಗ ಇಡೀ ರಾಜಕೀಯ ಪ್ರಕ್ರಿಯೆಯನ್ನು ಸಂಶಯದಿಂದ ನೋಡುತ್ತಿವೆ. ಸರಕಾರ ಎಲ್ಲ ಕ್ಷೇತ್ರಗಳಲ್ಲಿ ಮುಂದಾಳತ್ವ ವಹಿಸಿ ತಮ್ಮನ್ನು ಉದ್ಧಾರ ಮಾಡಲೆಂದು ಬಡವರು ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸಿದರೆ ಸರಕಾರ ಎಲ್ಲ ಕ್ಷೇತ್ರಗಳಲ್ಲಿ ಮೂಗು ತೂರಿಸುವುದೇ ನಮ್ಮಲ್ಲೇ ಸಮಸ್ಯೆಗಳಿಗೆ ಕಾರಣವೆಂದು ಮೇಲ್ವರ್ಗ ಮತ್ತು ಮಧ್ಯಮವರ್ಗ ವಾದಿಸುತ್ತಿವೆ. ಮೇಲ್ವರ್ಗ ಮತ್ತ ಮಧ್ಯಮವರ್ಗ ಬಲಗೊಂಡಂತೆ ಹಿಂದಿನ ಇಡೀ ದೇಶಕ್ಕೊಂದು ಸಾರ್ವಜನಿಕ ಆಸಕ್ತಿ ಇದೆ ಮತ್ತು ಅದನ್ನು ಪೂರೈಸಲು ಸರಕಾರ ಮಾತ್ರ ಶಕ್ತ ಎನ್ನುವ ಹಿಂದಿನ ವಾದ ಶಕ್ತಿಕಳಕೊಂಡಿದೆ. ನಿಧಾನವಾಗಿ ಹಲವಾರು ಸಾರ್ವಜನಿಕ ಆಸಕ್ತಿಗಳಿವೆ ಮತ್ತು ಅವುಗಳನ್ನು ಪೂರೈಸಲು ಸರಕಾರಕ್ಕೆ ಸಾಧ್ಯವಿಲ್ಲ. ಖಾಸಗಿ ಬಂಡವಾಳ ಸಾರ್ವಜನಿಕ ಆಸಕ್ತಿಗಳನ್ನು ಪೂರೈಸಲು ಸಕ್ರಿಯ ಪಾತ್ರವಹಿಸಬೇಕೆಂಬ ವಾದಗಳು ಮಂಚೂಣಿಗೆ ಬಂದವು. ಖಾಸಗಿ ಅಥವಾ ಕಾರ್ಪೋರೇಟ್ ಬಂಡವಾಳ ಪರ ವಕಲಾತ್ತು ನಡೆಸುವುದು ಫ್ಯಾಶನ್ ಆಯಿತು.[೧೪] ಅರ್ಥವ್ಯವಸ್ಥೆ ಮೇಲೆ ಸರಕಾರ ಯಾವುದೇ ವಿಧದ ನೀತಿ ನಿಯಮಗಳನ್ನು ಹೇರುವುದು ಸರಿಯಲ್ಲ ಎನ್ನುವ ವಾದ ಹೆಚ್ಚು ಹೆಚ್ಚು ಪ್ರಚಾರಗೊಳ್ಳುತ್ತಿದೆ. ಸರಕಾರದ ಹತೋಟಿ ಅತಿಯಾಗಿರುವುದರಿಂದಲೇ ನಮ್ಮಲ್ಲಿ ಕೆಲವೇ ಬ್ರಾಂಡ್‌ಗಳ ಕಾರುಗಳು, ಟಿವಿಗಳು,

ಬೈಕ್‌ಗಳು, ಫ್ರಿಜ್‌ಗಳು ದೊರೆಯುವಂತಾಯಿತು. ಸರಕಾರಿ ಆಸ್ಪತ್ರೆ, ಸರಕಾರಿ ವಿಶ್ವ ವಿದ್ಯಾಲಯ, ಸರಕಾರಿ ನೀರು ಪೂರೈಕೆ ಹೀಗೆ ಎಲ್ಲವೂ ಸರಕಾರಿಮಯವಾಗಿತ್ತು. ಸರಕಾರ ತನ್ನ ಹಿಡಿತವನ್ನು ಸಡಿಲಗೊಳಿಸಿದ ನಂತರ ನಮ್ಮಲ್ಲಿ ಹಲವು ಬಗೆಯ ಕಾರುಗಳು ಮತ್ತು ಇತರ ಅನುಭೋಗ ಸರಕುಗಳು ಧಾರಾಳವಾಗಿ ದೊರಕುವಂತಾಯಿತೆಂದು ಮೇಲ್ವರ್ಗ ಮತ್ತು ಮಧ್ಯಮ ವರ್ಗ ಖುಶಿ ಪಡುತ್ತಿವೆ. ಆದುದರಿಂದ ಎಲ್ಲ ಕ್ಷೇತ್ರಗಳಲ್ಲೂ (ಆರೋಗ್ಯ, ಶಿಕ್ಷಣ, ಕುಡಿಯುವ ನೀರು ಇತ್ಯಾದಿಗಳನ್ನು ಸೇರಿಸಿಕೊಂಡು) ಖಾಸಗಿ ನೇತೃತ್ವದಲ್ಲಿ ವ್ಯವಹಾರ ನಡೆಸಿದಾಗ ಮಾತ್ರ ನಮ್ಮ ಸಮಾಜ ಉದ್ಧಾರವಾಗಬಹುದೆಂದು ಮೇಲ್ವರ್ಗ ಮತ್ತು ಮಧ್ಯಮ ವರ್ಗ ವಾದಿಸುತ್ತಿವೆ. ಪುಕ್ಸಟ್ಟೆಯಾಗಿ ಯಾರಿಗೂ (ಬಡವರು, ಊಟಕ್ಕಿಲ್ಲದವರು, ಸೂರಿಲ್ಲದವರು ಮುಂತಾದವರಿಗೆ) ಏನನ್ನೂ ಕೊಡಬಾರದು. ಪ್ರತಿಯೊಬ್ಬರೂ ತಾವು ಪಡೆಯುವ ಸೇವೆಯ ಸ್ವಲ್ಪಾಂಶವನ್ನಾದರೂ ಸಂದಾಯ ಮಾಡಿಯೇ ಪಡೆಯಬೇಕು. ಹಾಗಿದ್ದರೆ ಮಾತ್ರ ಸೇವೆ ಪಡೆಯುವವರಿಗೆ ತಾವು ಪಡೆಯುವ ಸೇವೆಯ ಮೌಲ್ಯದ ಅರಿವು ಸಾಧ್ಯ ಇತ್ಯಾದಿ ವಾದಗಳನ್ನು ಮುಂದಿಟ್ಟು ಕುಡಿಯುವ ನೀರಿನಿಂದ ಹಿಡಿದು ಶಿಕ್ಷಣ, ಆರೋಗ್ಯ ಎಲ್ಲವನ್ನು ಖಾಸಗೀಕರಣಗೊಳಿಸಲಾಗಿದೆ.[೧೩೯] ಒಂದು ಕಡೆಯಿಂದ ರಾಜಕೀಯ ಪ್ರಕ್ರಿಯೆಯನ್ನೇ ಅಪಮೌಲ್ಯಗೊಳಿಸುವುದು ಮತ್ತೊಂದೆಡೆಯಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕಾರ್ಪೊರೇಟ್ ಕ್ಯಾಪಿಟಲ್‌ನೊಂದಿಗೆ ಗುರುತಿಸಿಕೊಳ್ಳುವುದು ಮಾತ್ರ ಈ ಎಲ್ಲ ಸಮಸ್ಯೆಗಳಿಗೆ ಪರಿಹಾರವೆಂದು ಮೇಲ್ವರ್ಗ ಮತ್ತು ಮಧ್ಯಮವರ್ಗ ತಿಳಿದಂತಿದೆ. ಅಂತರಾಷ್ಟ್ರೀಯ ಕ್ಯಾಪಿಟಲ್‌ಗೆ ಮಾರುಕಟ್ಟೇತರ ನಿಯಂತ್ರಣಗಳಿಗೆ ಒಳಪಡುವುದು ಅಥವಾ ರಾಜಕೀಯ ಅಧಿಕಾರದ ನಿಯಂತ್ರಣದೊಳಗೆ ವ್ಯವಹರಿಸುವುದು ಇಷ್ಟದ ಸಂಗತಿಯಲ್ಲ. ರಾಷ್ಟ್ರೀಯ ಕ್ಯಾಪಿಟಲ್ ಅಂತರಾಷ್ಟ್ರೀಯ ಕ್ಯಾಪಿಟಲನ್ನು ಅನುಸರಿಸುತ್ತಿರುವುದರಿಂದ ಅದಕ್ಕೂ ರಾಜಕೀಯ ಅಧಿಕಾರದ ನಿಯಂತ್ರಣವೆಂದರೆ ಒಂದು ಬಗೆಯ ಅಲರ್ಜಿ ಇದೆ.

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕ್ಯಾಪಿಟಲ್‌ಗಳಿಗೆ ರಾಜಕೀಯ ಅಧಿಕಾರದ ಬಗ್ಗೆ ಅಲರ್ಜಿ ಇದೆ ಎಂದಾಕ್ಷಣ ಇವೆರಡೂ ರಾಜಕೀಯ ಅಧಿಕಾರ ಪ್ರಕ್ರಿಯೆಯನ್ನೇ ನಿರಾಕರಿಸುತ್ತವೆ ಎಂದಲ್ಲ. ಇದಕ್ಕೆ ವಿರುದ್ಧವಾಗಿ ವಾಸ್ತವದಲ್ಲಿ ಎರಡೂ ಕ್ಯಾಪಿಟಲ್ ಕೂಡ ಬಲವಾದ ಪ್ರಭುತ್ವವನ್ನು ಬಯಸುತ್ತವೆ. ಒಂದು ಕಾಲದಲ್ಲಿ ಪ್ರಭುತ್ವ ರೂಪುಗೊಳ್ಳುವುದರ ಬಗ್ಗೆ ಕ್ಯಾಪಿಟಲ್ ತನ್ನದೇ ಆದ ಕೆಲವೊಂದು ನಿಲುವುಗಳನ್ನು ಹೊಂದಿತ್ತು. ಅಂದರೆ ಆಧುನಿಕ ಗುರುತಿನ (ಪಕ್ಷ, ಪ್ರಜೆತನ, ಪಾಲಿಸಿ ಇತ್ಯಾದಿಗಳ) ನೆಲೆಯಲ್ಲಿ ರಾಜಕೀಯ ಪ್ರಕ್ರಿಯೆ ನಡೆಯಬೇಕು ಸಾಂಪ್ರದಾಯಿಕ ಗುರುತಿನ (ಜಾತಿ/ಧರ್ಮ ಇತ್ಯಾದಿಗಳ) ನೆಲೆಯಲ್ಲಿ ರಾಜಕೀಯ ಪ್ರಕ್ರಿಯೆ ನಡೆಯುವುದು ಆರೋಗ್ಯಕರವಲ್ಲವೆಂದು ವಾದಿಸುತ್ತಿತ್ತು. ಕಾಲಕ್ರಮೇಣ ರಾಜಕೀಯ ಪ್ರಕ್ರಿಯೆ ಯಾವ ನೆಲೆಯಲ್ಲಿ ನಡೆಯುತ್ತದೆ ಎನ್ನುವುದು ಕ್ಯಾಪಿಟಲ್‌ಗೆ ಮುಖ್ಯವಾಗಲಿಲ್ಲ. ಯಾವುದೇ (ಆಧುನಿಕ ಇರಬಹುದು ಅಥವಾ ಸಾಂಪ್ರದಾಯಿಕ ಇರಬಹುದು) ನೆಲೆಯಲ್ಲಿ ನಡೆಯುವ ರಾಜಕೀಯ ಪ್ರಕ್ರಿಯೆಯಿಂದ ರೂಪುಗೊಳ್ಳುವ

ರಾಜಕೀಯ ಅಧಿಕಾರ ಕ್ಯಾಪಿಟಲ್ ಪರ ಕೆಲಸ ಮಾಡಿದರೆ ಸಾಕೆನ್ನುವ ತೀರ್ಮಾನಕ್ಕೆ ಇಂದು ಕ್ಯಾಪಿಟಲ್ ಬಂದಿದೆ. ಅಂದರೆ ಉತ್ಪಾದನೆಯ ಇನ್‌ಪುಟ್‌ಗಳನ್ನು (ಶ್ರಮಿಕರು, ಭೂಮಿ, ನೀರು, ಕಚ್ಚಾ ಸಾಮಗ್ರಿಗಳು ಮುಂತಾದವುಗಳನ್ನು) ಕ್ಯಾಪಿಟಲ್ ನ ಬೆಳವಣಿಗೆಗೆ ಬಳಸಲು ಪೂರಕವಾಗುವ ಪರಿಸರವನ್ನು ರಾಜಕೀಯ ಅಧಿಕಾರ ಸೃಷ್ಟಿಸಿ ಬೆಳೆಸಬೇಕು. ಕಡಿಮೆ ದರದಲ್ಲಿ ಭೂಮಿ ನೀಡುವುದು, ಕಡಿಮೆ ಬಡ್ಡಿ ದರದಲ್ಲಿ ಸಾಲ ಒದಗಿಸುವುದು, ಪುಕ್ಸಟ್ಟೆ ಅಥವಾ ಮಾರುಕಟ್ಟೆ ದರಕ್ಕಿಂತ ಕಡಿಮೆ ಬೆಲೆಗೆ ಕಚ್ಚಾ ಸಾಮಗ್ರಿಗಳನ್ನು ಒದಗಿಸುವುದು, ಕಾರ್ಮಿಕರು ಸಂಘಟನೆಗೊಂಡು ಹೆಚ್ಚಿನ ಸಂಬಳ ಕೇಳದಂತಹ ಕೈಗಾರಿಕಾ ಸಂಬಂಧಗಳನ್ನು ರೂಪಿಸುವುದು ಇತ್ಯಾದಿ ಸುಧಾರಣೆಗಳ ಮೂಲಕ ಉದ್ಯಮಿಗಳನ್ನು ಬೆಳೆಸಲು ಸರಕಾರ ಕ್ರಮಕೈಗೊಳ್ಳಬೇಕು. ಅದು ಬಿಟ್ಟು ರೈತರ ಸಾಲಮನ್ನಾ ಅಥವಾ ಬಡತನ ನಿವಾರಣೆ ಅಥವಾ ಶಿಕ್ಷಣ ಅಥವಾ ಆರೋಗ್ಯ ಇತ್ಯಾದಿಗಳ ಸುಧಾರಣೆಗೆಂದು ಸಾವಿರಾರು ಕೋಟಿ ವಿನಿಯೋಜಿಸುವುದನ್ನು ಕ್ಯಾಪಿಟಲ್ ಇಷ್ಟಪಡು ವುದಿಲ್ಲ. ಕಾರ್ಪೋರೇಟ್ ಕ್ಯಾಪಿಟಲ್ ಜತೆ ಗುರುತಿಸಿಕೊಳ್ಳುವ ಮೇಲ್ವರ್ಗ ಮತ್ತು ಮಧ್ಯಮ ವರ್ಗಕ್ಕೂ ಸಮಾಜದ ತಳಸ್ತರದ ಜನರನ್ನು ತಲುಪುವ ಮೇಲಿನ ಬಹುತೇಕ ಕ್ರಮಗಳು ಅಪಥ್ಯವಾಗಿದೆ. ಅಂದರೆ ಪರೋಕ್ಷವಾಗಿ ಮಧ್ಯಮವರ್ಗ ಕೂಡ ರಾಜಕೀಯ ಪ್ರಕ್ರಿಯೆಯ ನೆಲೆಗಳನ್ನು (ಜಾತಿ/ಧರ್ಮ/ಭಾಷೆ/ಪ್ರದೇಶ ಇತ್ಯಾದಿ ನೆಲೆಗಳ) ಬಗ್ಗೆ ಗಂಭೀರವಾಗಿ ಪರಿಗಣಿಸುವುದಿಲ್ಲ. ಔಪಚಾರಿಕವಾಗಿ ಅಥವಾ ಸಾರ್ವಜನಿಕವಾಗಿ ಸಾಂಪ್ರದಾಯಿಕ ನೆಲೆಯ ರಾಜಕೀಯವನ್ನು ಮೇಲ್ವರ್ಗ ಮತ್ತು ಮಧ್ಯಮವರ್ಗ ಅಲ್ಲಗೆಳೆ ಯುತ್ತಿದೆ. ಅಷ್ಟು ಮಾತ್ರವಲ್ಲ ಇಂತಹ ರಾಜಕೀಯ ಪ್ರಕ್ರಿಯೆಯಲ್ಲಿ ತಾವು ಭಾಗವಹಿಸು ವುದಿಲ್ಲವೆಂದು ರಾಜಾರೋಷವಾಗಿ ಘೋಷಿಸಿಕೊಳ್ಳುತ್ತದೆ. ಆದರೆ ಯಾವುದೋ ನೆಲೆಯಲ್ಲಿ ರೂಪುಗೊಳ್ಳುವ ರಾಜಕೀಯ ಅಧಿಕಾರವನ್ನು ತಮ್ಮ ವರ್ಗದ ಹಿತಾಸಕ್ತಿಗಳನ್ನು ಈಡೇರಿಸಿ ಕೊಳ್ಳಲು ಬಳಸಿಕೊಳ್ಳುವುದರಲ್ಲಿ ಹಿಂದೆ ಬಿದ್ದಿಲ್ಲ. ಟಾಸ್ಕ್ ಫೋರ್ಸ್ ಸಮಿತಿ, ಎಕ್ಸ್‌ಪರ್ಟ್ ಕಮಿಟಿ, ಸರಕಾರೇತರ ಸಂಸ್ಥೆ, ನಾಗರಿಕ ಸಮಿತಿ, ಲಾಬಿಯಿಂಗ್ ಪ್ರಕ್ರಿಯೆ, ಚೇಂಬರ್ಸ್ ಆಫ್ ಕಾಮರ್ಸ್, ಉದ್ದಿಮೆಗಳ ಸಂಘಟನೆ ಇತ್ಯಾದಿಗಳ ಮೂಲಕ ನಗರ ಪ್ರದೇಶದ ಮೇಲ್ವರ್ಗ ಮತ್ತು ಮಧ್ಯಮವರ್ಗ ಬಡಜನರ ಭಾಗವಹಿಸುವಿಕೆಯಿಂದ ರೂಪುಗೊಳ್ಳುವ ರಾಜಕೀಯ ಅಧಿಕಾರದಲ್ಲಿ ತಮ್ಮ ಪಾಲಿಗೆ ಪ್ರಯತ್ನಿಸುತ್ತಿವೆ.[೨]

ವಸಾಹತ್ತೋತರ ಸಂದರ್ಭದಲ್ಲಿ ನಮ್ಮಲ್ಲಿ ನಿರ್ಮಾಣವಾದ ಒಂದು ಸಂಕೀರ್ಣ ಸ್ಥಿತಿಯನ್ನು ಮೇಲಿನ ವಿವರಗಳು ನೀಡುತ್ತಿವೆ. ಜಾತಿ, ಧರ್ಮಗಳ ಗುರುತುಗಳೊಂದು ಕಡೆಯಿಂದ ತಮ್ಮ ಯಜಮಾನಿಕೆಗೆ ಪ್ರಯತ್ನಿಸಿದರೆ ಪ್ರತಿ ಜಾತಿ/ಧರ್ಮಗಳಿಂದ ಆಧುನೀಕರಣದ ಲಾಭ ಪಡೆದು ರೂಪಿತವಾದ ಮೇಲ್ವರ್ಗ ಮತ್ತು ಮಧ್ಯಮ ವರ್ಗ ತಮ್ಮ ಯಜಮಾನಿಕೆಗೆ ಮತ್ತೊಂದೆಡೆ ಪ್ರಯತ್ನಿಸುತ್ತಿವೆ. ಆಧುನೀಕರಣದಿಂದ ಲಾಭ ಪಡೆದ ಶ್ರೀಮಂತ ಮತ್ತು ಮಧ್ಯಮವರ್ಗ ಪ್ರಗತಿಯ ದ್ಯೋತಕಗಳಾಗಿ ಪ್ರಭುತ್ವ ಬೆಂಬಲಿತ ವಿಜ್ಞಾನ, ತಂತ್ರಜ್ಞಾನ, ಬಂಡವಾಳ, ಮಾರುಕಟ್ಟೆ ಇತ್ಯಾದಿಗಳನ್ನು ಸ್ಥಳೀಯ ಸಂಸ್ಕೃತಿಯಲ್ಲಿ

ತುಂಬಾ ರಭಸದಲ್ಲಿ ಅಳವಡಿಸಲು ಪ್ರಯತ್ನಿಸುತ್ತಿವೆ. ಈ ಬಗೆಯ ಆಧುನೀಕರಣಕ್ಕೆ ಅಥವಾ ಜಾಗತೀಕರಣಕ್ಕೆ ಸ್ಥಳೀಯ ಸಂಸ್ಕೃತಿ ನೆಲೆಯಲ್ಲಿ ವಿರೋಧವನ್ನು ಅಥವಾ ಪ್ರತಿ ನೆಲೆಗಳನ್ನು ಕಟ್ಟಿಕೊಳ್ಳಲು ನಮ್ಮ ಸಂಸ್ಕೃತಿ (ಧಾರ್ಮಿಕ ನೆಲೆಯಲ್ಲಿ) ಪ್ರಯತ್ನಿಸಲಾಗುತ್ತಿದೆ. ಆಧುನಿಕ ಮೌಲ್ಯರಹಿತ ತಾಂತ್ರಿಕ ಆಧುನೀಕರಣ ಹೇಗೆ ಶ್ರೀಮಂತ ಹಾಗೂ ಮೇಲ್ ಮಧ್ಯಮವರ್ಗಗಳ ಆಸಕ್ತಿಗಳನ್ನು ಪೂರೈಸುತ್ತದೋ ಅದೇ ರೀತಿಯಲ್ಲಿ ಸಂಸ್ಕೃತಿ ನೆಲೆಯಲ್ಲಿ ಕಟ್ಟಿಕೊಳ್ಳುವ ಪ್ರತಿರೋಧಗಳು ಕೂಡ ತಳಸ್ತರದ ಜನರ ಆಸಕ್ತಿ ವಿರುದ್ಧವಾಗಿವೆ. ತಳಸ್ತರದ ಜನರು ಎರಡೂ ಕಡೆಯಿಂದಲೂ ನಷ್ಟ ಅನುಭವಿಸಬೇಕಾಗಿದೆ. ಪಾಲಿಸಿ ಸಂಶೋಧನೆಗಳು ತಳಸ್ತರದ ಜನರ ಈ ಬಿಕ್ಕಟ್ಟನ್ನು ಹೆಚ್ಚು ಹೆಚ್ಚು ಶೋಧಿಸಿ ಇವುಗಳ ಪರಿಹಾರಕ್ಕೆ ಪ್ರಯತ್ನಿಸಬೇಕಿತ್ತು. ಆದರೆ ಈವಾಗ ಪಾಲಿಸಿ ಸಂಶೋಧನೆಯ ಹೆಸರಲ್ಲಿ ತಾಂತ್ರಿಕ ಆಧುನೀಕರಣವನ್ನು ಎಲ್ಲ ಕ್ಷೇತ್ರಗಳಿಗೆ ಹರಡುವ ಪ್ರಯತ್ನಗಳು ನಡೆಯುತ್ತಿವೆ. ಇಂತಹ ಪಾಲಿಸಿ ಸಂಶೋಧನೆಗಳು ವಿವಿಧ ವರ್ಗಗಳು, ಇವುಗಳ ಸಾರ್ವಜನಿಕ ಆಸಕ್ತಿಗಳು, ಅವುಗಳ ನಡುವೆ ಇರುವ ವ್ಯತ್ಯಾಸಗಳು, ಒಂದರ ಅಭಿವೃದ್ಧಿ ಮತ್ತೊಂದರ ಅನಾಭಿವೃದ್ಧಿಗೆ ಕಾರಣವಾಗುವ ಸಾಧ್ಯತೆ, ಪಾಲಿಸಿ ರೂಪುಗೊಳ್ಳುವ ವಿಧಾನ ಇತ್ಯಾದಿಗಳ ಮೇಲೆ ವಿಶೇಷ ಗಮನ ಹರಿಸುತ್ತಿಲ್ಲ. ಇಂದು ಕೂಡ ಪಾಲಿಸಿ ಸಂಶೋಧನೆ ಅವರವರ ಯೋಗ್ಯತೆಗನುಸಾರ(ಬಡವರಿಗೆ ಕನಿಷ್ಠ, ಮಧ್ಯಮ ವರ್ಗಕ್ಕೆ ಸುಧಾರಿತ ಮತ್ತು ಶ್ರೀಮಂತ ವರ್ಗಕ್ಕೆ ಉತ್ತಮ) ಅಭಿವೃದ್ಧಿ ಲಾಭಗಳನ್ನು ಧಾಟಿಸುವುದನ್ನೇ ತನ್ನ ಧ್ಯೇಯವನ್ನಾಗಿಸಿಕೊಂಡಿದೆ. ಪಾಲಿಸಿಗಳ ವಿಮರ್ಶೆ(ಪಾಲಿಸಿಯಲ್ಲೇ ದೋಷ ಇದೆಯೆಂದು ತಿಳಿಯುವುದು) ಅಥವಾ ಅವುಗಳ ಅನುಷ್ಠಾನಗಳ ಕೊರತೆಗಳ(ಪಾಲಿಸಿ ಸರಿ ಇದೆ ಅನುಷ್ಠಾನ ಸರಿ ಇಲ್ಲ ಎನ್ನು ಧೋರಣೆ) ಮೇಲೆ ಸಂಶೋಧನೆಗಳು ಹೆಚ್ಚು ಗಮನ ಹರಿಸಿವೆ. ಇಂತಹ ಒಂದು ಪ್ರಕ್ರಿಯೆಯನ್ನು ಬುಡಮೇಲು ಮಾಡುವ(ಬಡವರಿಗೆ ಹೆಚ್ಚಿನ ಆದ್ಯತೆ, ಮಧ್ಯಮವರ್ಗಕ್ಕೆ ಸಾಧಾರಣ ಮತ್ತು ಶ್ರೀಮಂತ ವರ್ಗಕ್ಕೆ ಕನಿಷ್ಠ ಅಭಿವೃದ್ಧಿ ಲಾಭ ನೀಡುವ) ಅಭಿವೃದ್ಧಿ ಪ್ರಕ್ರಿಯೆಯನ್ನು ಪ್ರತಿಪಾದಿಸುವ ಪಾಲಿಸಿ ಸಂಶೋಧನೆಗಳು ಹೆಚ್ಚು ಹೆಚ್ಚು ನಡೆಯಬೇಕಾಗಿದೆ. ಇದು ಸಾಧ್ಯವಾಗಬೇಕಾದರೆ ಪಾಲಿಸಿ ರೂಪಿತವಾಗುವ ವಿಧಾನದ ಮೇಲೆ ಹೆಚ್ಚು ಸಂಶೋಧನೆ ನಡೆಯಬೇಕಾಗಿದೆ. ಯಾರು ಪಾಲಿಸಿ ರೂಪಿಸುತ್ತಿದ್ದಾರೆ? ಪಾಲಿಸಿ ರೂಪಿಸುವ ಅಧಿಕಾರವನ್ನು ಅವರ ಹೇಗೆ ತಮ್ಮದಾಗಿಸಿಕೊಂಡಿದ್ದಾರೆ? ರೂಪಿತ ಪಾಲಿಸಿಗಳು ಯಾರ ಹಿತಾಸಕ್ತಿಗಳನ್ನು ಹೆಚ್ಚು ಪ್ರತಿನಿಧೀಕರಿಸುತ್ತಿವೆ? ಇತ್ಯಾದಿ ಪ್ರಶ್ನೆಗಳನ್ನು ಕೇಳುವ ಪಾಲಿಸಿ ಸಂಶೋಧನೆಗಳು ಆದ್ಯತೆ ಪಡೆಯಬೇಕು. ಅಧ್ಯಾಯದ ಮುಂದಿನ ಭಾಗದಲ್ಲಿ ಸಂಶೋಧನೆಯ ತಾತ್ವಿಕ ಕೊಡುಗೆಯ ಇತಿಮಿತಿಗಳನ್ನು ಚರ್ಚಿಸುತ್ತಾ ಇತರ ಕೊಡುಗೆಗಳ ಸಾಧ್ಯತೆಯನ್ನು ಪರಿಶೀಲಿಸಲಾಗಿದೆ.

ಭಾಗ ೨

ಎರಡು ಬಗೆಯ ಸಂಶೋಧನೆಗಳು ಆಧುನಿಕ ಜ್ಞಾನ ಸಂಗ್ರಹದ (ಎಕ್ಯುಮ್ಯುಲೇಟೆಡ್ ಬಾಡಿ ಆಫ್ ನೋಲೆಡ್ಜ್) ಮುಖ್ಯ ಮೂಲಗಳಾಗಿವೆ. ಒಂದು ಡಿಡಕ್ಟಿವ್ ವಿಧಾನದಿಂದ

ಮಾಡುವ ಸಂಶೋಧನೆ ಮತ್ತೊಂದು ಇಂಡಕ್ಟಿವ್ ವಿಧಾನದಿಂದ ಮಾಡುವ ಸಂಶೋಧನೆ. ಇಂಡಕ್ಟಿವ್ ಮತ್ತು ಡಿಡಕ್ಟಿವ್ ಎರಡೂ ವಿಧಾನಗಳು ಕೂಡ ಬಲಾಢ್ಯರ ಲೋಕದೃಷ್ಟಿಗಳಿಗೆ ಪೂರಕವಾಗಿ ಸಾಮಾನ್ಯರ ಲೋಕದೃಷ್ಟಿಗಳನ್ನು ರೂಪಿಸುವ ಕೆಲಸವನ್ನು ಮಾಡುತ್ತಿವೆ. ಬಲಾಢ್ಯರ ದೃಷ್ಟಿಕೋನಗಳಿಗನುಗುಣವಾಗಿ ಇತರರ ದೃಷ್ಟಿಕೋನಗಳನ್ನು ರೂಪಿಸುವ ಪ್ರಕ್ರಿಯೆಯನ್ನು ಗಟ್ಟಿಗೊಳಿಸುವಲ್ಲಿ ಸಂಶೋಧನೆಯ ಶ್ರೇಣೀಕೃತ ಒಪ್ಪಿತ ಚೌಕಟ್ಟುಗಳು ಸಕ್ರಿಯ ಪಾತ್ರ ನಿರ್ವಹಿಸುತ್ತಿವೆ. ಸಂಶೋಧನೆಯ ಚೌಕಟ್ಟಿನ ಶ್ರೇಣೀಕೃತ ಇರುವಿಕೆಯ ಬಗ್ಗೆ ಹಿಂದಿನ ಅಧ್ಯಯನದಲ್ಲಿ ಗಮನ ಸೆಳೆಯಲಾಗಿದೆ. ಈ ಬಗೆಯ ಶ್ರೇಣೀಕೃತ ಇರುವಿಕೆ ಸಂಶೋಧನೆಯ ತಾತ್ವಿಕ ಕೊಡುಗೆಯನ್ನು ಹೇಗೆ ಪ್ರಭಾವಿಸುತ್ತದೆ ಎನ್ನುವುದನ್ನು ಪರಿಶೀಲಿಸುವ. ರಾಷ್ಟ್ರೀಯ ಮಟ್ಟದಲ್ಲಿ ಸಂಶೋಧನ ಸಂಸ್ಥೆಯೊಂದು ಪ್ರತಿಷ್ಠಿತ ವಾಗಬೇಕಾದರೆ ಅದಕ್ಕೆ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಬೇಕು. ಅಂತರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಬೇಕಾದರೆ ಅಂತರಾಷ್ಟ್ರೀಯ ಮಟ್ಟದಲ್ಲಿ ಯಜಮಾನಿಕೆಯಲ್ಲಿರುವ ಸಂಸ್ಥೆಗಳು ಮತ್ತು ಅವುಗಳಲ್ಲಿ ಮಾನ್ಯತೆ ಪಡೆದಿರುವ ಥಿಯರಿ, ವಿಧಾನ, ಭಾಷೆ ಇತ್ಯಾದಿಗಳ ಮೇಲೆ ಹಿಡಿತ ಬೇಕು. ಹಾಗೆಂದು ಅಂತರಾಷ್ಟ್ರೀಯ ಮಟ್ಟದಲ್ಲಿ ಯಜಮಾನಿಕೆ ಯಲ್ಲಿರುವ ಥಿಯರಿ ಅಥವಾ ವಿಧಾನಗಳಿಗೆ ಪ್ರಶ್ನಿಸುವ ಅಥವಾ ಬದಲೀ ಥಿಯರಿ ಹಾಗೂ ವಿಧಾನಗಳನ್ನು ಮುಂದಿಡುವ ಸಂಸ್ಥೆಗಳೇ ಇಲ್ಲವೆಂದಲ್ಲ. ಸಾಕಷ್ಟು ಇವೆ. ಆದರೆ ಅಲ್ಲೂ ಯಜಮಾನಿಕೆಯಲ್ಲಿರುವ ಆರ್ಥಿಕ ಹಾಗೂ ರಾಜಕೀಯ ಆಸಕ್ತಿಗಳನ್ನು ಕಾಪಾಡುವ ಮತ್ತು ಬೆಳೆಸುವ ಸಂಸ್ಥೆ, ಥಿಯರಿ ಹಾಗೂ ವಿಧಾನಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರಕಿ ಪ್ರಶ್ನಿಸುವ ಸಂಸ್ಥೆ, ಥಿಯರಿ, ವಿಧಾನ ಇತ್ಯಾದಿಗಳು ಪ್ರೋತ್ಸಾಹವಿಲ್ಲದೆ ಮೂಲೆಗುಂಪಾಗುತ್ತವೆ.

ನಮ್ಮ ರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಸಂಸ್ಥೆಗಳು ಅಂತರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧ ಇಟ್ಟುಕೊಂಡರೆ ಮಾತ್ರ ನಮ್ಮವರಿಗೂ ಅಂತರಾಷ್ಟ್ರೀಯ ಮಾನ್ಯತೆ ಲಭ್ಯ. ಅದು ಬಿಟ್ಟು ಅಂತರಾಷ್ಟ್ರೀಯ ಮಟ್ಟದಲ್ಲಿ ಯಜಮಾನಿಕೆಯಲ್ಲಿರುವ ಸಂಸ್ಥೆ. ಥಿಯರಿ, ವಿಧಾನ ಇತ್ಯಾದಿಗಳನ್ನು ಪ್ರಶ್ನಿಸುವ ಸಂಸ್ಥೆ, ಥಿಯರಿ, ವಿಧಾನಗಳೊಂದಿಗೆ ಸಂಬಂಧ ಇಟ್ಟುಕೊಂಡರೆ ನಮ್ಮವರೂ ಕೂಡ ಅಂತರಾಷ್ಟ್ರೀಯ ಮಟ್ಟದ ಪ್ರೋತ್ಸಾಹವಿಲ್ಲದೆ, ಮಾನ್ಯತೆಯಿಲ್ಲದೆ ಸೊರಗಬೇಕಾಗುತ್ತದೆ. ಆದುದರಿಂದ ಸಹಜವಾಗಿಯೇ ನಮ್ಮಲ್ಲಿನ ಬಹುತೇಕರು ಯಜಮಾನಿಕೆಯಲ್ಲಿರುವ ಸಂಸ್ಥೆಗಳೊಂದಿಗೆ (ವರ್ಲ್ಡ್ ಬ್ಯಾಂಕ್, ಪ್ರತಿಷ್ಠಿತ ಅಮೇರಿಕನ್ ವಿಶ್ವವಿದ್ಯಾಲಯ ಹಾಗೂ ಸಂಶೋದನ ಸಂಸ್ಥೆಗಳು, ಪ್ರತಿಷ್ಠಿತ ಯುರೋಪಿಯನ್ ವಿಶ್ವವಿದ್ಯಾಲಯ ಹಾಗೂ ಸಂಶೋಧನ ಸಂಸ್ಥೆಗಳು ಇತ್ಯಾದಿಗಳೊಂದಿಗೆ) ಸಂಬಂಧ ಇಟ್ಟುಕೊಳ್ಳುತ್ತಾರೆ. ಅಂದರೆ ಅಂತರಾಷ್ಟ್ರೀಯ ಪ್ರತಿಷ್ಠಿತ ಸಂಸ್ಥೆಗಳ ಸಂಶೋಧನ ಅಜಂಡಾಗಳನ್ನು ಮುಂದುವರಿಸಲು ಪೈಪೋಟಿ ನಡೆಸುತ್ತಾರೆ. ಹೀಗೆ ರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಸಂಸ್ಥೆಗಳು ಯಜಮಾನಿಕೆಯಲ್ಲಿರುವ ಥಿಯರಿ, ವಿಧಾನ, ಭಾಷೆ ಇತ್ಯಾದಿಗಳನ್ನು ಪಸರಿಸುವ ವಾಹಕಗಳಾಗುತ್ತಿವೆ. ಸಣ್ಣ ಪುಟ್ಟ ಸಂಶೋಧಕರಿಗೆ ಮತ್ತು ಸಂಶೋಧನ

ಸಂಸ್ಥೆಗಳಿಗೆ ರಾಷ್ಟ್ರೀಯ ಮಟ್ಟದ ಸಂಶೋಧನ ಸಂಸ್ಥೆಗಳ ಮತ್ತು ಸಂಶೋಧಕರ ಮಾನ್ಯತೆ ಬೇಕಾದರೆ ಅವರುಗಳು ರಾಷ್ಟ್ರೀಯ ಸಂಸ್ಥೆಗಳ ಮಾದರಿಯಲ್ಲೇ ಥಿಯರಿ, ವಿಧಾನ, ಭಾಷೆ ಇತ್ಯಾದಿಗಳನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಈ ಎಲ್ಲ ಬೆಳವಣಿಗೆಗಳಿಂದ ಮೆಟಾ/ಮೆಗಾ/ಯುನಿವರ್ಸಲ್ ನೆರೆಟಿವ್ಸ್‌ಗಳು ಪ್ರಾಮುಖ್ಯತೆ ಪಡೆದು ಲೋಕಲ್ ನೆರೆಟಿವ್ಸ್‌ಗಳು ಸಮಾಜ ಸಂಶೋಧನೆಗಳಲ್ಲಿ ಪ್ರಾಮುಖ್ಯತೆ ಇಲ್ಲದೆ ಮೂಲೆಗುಂಪಾಗುತ್ತವೆ.[೧೭] ಇದರಿಂದಾಗಿ ಸಮಾಜ ಸಂಶೋಧಕರು ತಾವು ಹುಟ್ಟಿ ಬೆಳೆದ ಸಮಾಜ/ಸಂಸ್ಕೃತಿಯಲ್ಲಿ ವ್ಯಕ್ತಿ, ಸಂಸ್ಥೆ, ಮೌಲ್ಯಗಳ ಕುರಿತು ರೂಪುಗೊಳ್ಳುವ ವ್ಯಾಖ್ಯಾನ ಹಾಗೂ ಅವುಗಳ ನಡುವಿನ ಸಂಬಂಧಗಳ ಸ್ವರೂಪ ಕುರಿತ ವಿವರಣೆಗಳ (ಥಿಯರಿ) ನೆಲೆಯಲ್ಲಿ ತನ್ನ ಸಂಶೋಧನ ಪರಿಭಾಷೆಗಳನ್ನು ರೂಪಿಸಿಕೊಳ್ಳುವುದು ಅಸಾಧ್ಯವಾಗಿದೆ. ಅಷ್ಟು ಮಾತ್ರವಲ್ಲ ಯಾವುದೋ ಕೆಲವು ಬಗೆಯ ವಿವರಣೆ, ವೈಧಾನಿಕತೆ, ಪರಿಭಾಷೆ ಇತ್ಯಾದಿಗಳು (ಯಜಮಾನಿಕೆಯಲ್ಲಿರುವ ವಿವರಣೆ) ಮಾನ್ಯತೆ ಪಡೆದು ಉಳಿದೆಲ್ಲ ವಿವರಣೆಗಳು, ಪರಿಭಾಷೆಗಳೂ ಅಂಚಿಗೆ ಸರಿಯಲ್ಪಟ್ಟ ಸ್ಥಿತಿಯನ್ನು ಸಮಾಜ ಸಂಶೋಧಕರು ಎದುರಿಸಬೇಕಾಗಿದೆ. ಮುಖ್ಯವಾಹಿನಿಯ ತಾತ್ವಿಕತೆ ಹಾಗು ಪರಿಭಾಷೆಗಳು ಈ ಬಗೆಯ ಮಾನ್ಯತೆ ಪಡೆಯಲು ಅವುಗಳ ವಿವರಿಸುವ ಶಕ್ತಿಯೇ ಕಾರಣ ಎನ್ನುವ ಒಂದು ಸಾಮಾನ್ಯ ಗ್ರಹಿಕೆ ಬಹುತೇಕ ಸಂಶೋಧಕರ ತಿಳುವಳಿಕೆಯ ಭಾಗವಾಗಿರುವುದು ಕೂಡ ಈ ಸ್ಥಿತಿಗೆ ಕಾರಣವಾಗಿದೆ.[೧೮] ಆದರೆ ಇದು ಅಷ್ಟು ಸರಳವೆಂದು ನನಗನಿಸುವುದಿಲ್ಲ. ಪರಿಭಾಷೆಗಳ ವಿವರಿಸುವ ಶಕ್ತಿಯ ಜತೆಗೆ ಆ ವಿವರಣೆಗಳು ಯಾವ ಉದ್ದೇಶವನ್ನು ಈಡೇರಿಸಲು ನೆರವಾಗುತ್ತವೆ ಎನ್ನುವುದು ಕೂಡ ತಾತ್ವಿಕತೆ/ಪರಿಭಾಷೆಗಳ ಪ್ರಾಮುಖ್ಯತೆಯನ್ನು ನಿರ್ಧರಿಸುವಲ್ಲಿ ಪ್ರಧಾನ ಭೂಮಿಕೆ ನಿಭಾಯಿಸುತ್ತವೆ.[೧೯]

ತಾತ್ವಿಕ/ಪರಿಭಾಷೆಗಳ ಪ್ರಾಮುಖ್ಯತೆ ಮತ್ತು ಅವುಗಳು ಈಡೇರಿಸುವ ಉದ್ದೇಶಗಳ ನಡುವಿನ ಸಂಬಂಧ ಅರ್ಥಮಾಡಿಕೊಳ್ಳಲು ಸಮಾಜದ ತಳಸ್ತರದಲ್ಲಿರುವ ದಲಿತರ ಅಧ್ಯಯನದ ಉದಾಹರಣೆಯೊಂದನ್ನು ಪರಿಶೀಲಿಸುವ. ದಲಿತ ಬದುಕನ್ನು ಯಥಾ ರೀತಿಯಲ್ಲಿ ಕಟ್ಟಿಕೊಡಲು ದಲಿತರು ತಮ್ಮ ದಿನನಿತ್ಯದ ಬದುಕಿನ ಅನುಭವಗಳನ್ನು ಹಂಚಿಕೊಳ್ಳಲು ಬಳಸುವ ಪಾರಿಭಾಷೆಗಳನ್ನು ಅಧ್ಯಯನದಲ್ಲಿ ಬಳಸಬೇಕಾಗುತ್ತದೆ. ಪ್ರದೇಶವಾರು ಚದುರಿ ಹೋಗಿರುವ ದಲಿತರು ತಮ್ಮ ಸುಖದುಃಖಗಳನ್ನು ಮಾನ-ಸಮ್ಮಾನ ಗಳನ್ನು ವಿಭಿನ್ನ ಪರಿಭಾಷೆಗಳ ಮೂಲಕ ಕಟ್ಟಿಕೊಂಡಿದ್ದಾರೆ. ಹಲವು ಬಾರಿ ಇಂತಹ ಪರಿಭಾಷೆಗಳು ಪರಸ್ಪರ ಸಂವಾದ ನಡೆಸಲು ವಿಫಲವಾಗುತ್ತವೆ; ಪ್ರತ್ಯೇಕವಾಗಿ ನಿಲ್ಲುತ್ತವೆ. ಅಂದರೆ ಒಂದೇ ಭಾಷಾ ಸಮುದಾಯಕ್ಕೆ ಸೇರಿದ ಆದರೆ ಪ್ರಾದೇಶಿಕ ಭಿನ್ನತೆ ಇರುವ ಪರಿಭಾಷೆಗಳು ಸಂವಾದ ನಡೆಸಲು ವಿಫಲವಾಗುತ್ತವೆ. ಒಂದು ಪ್ರದೇಶದ ದಲಿತ ಬದುಕನ್ನು ಕಟ್ಟಿಕೊಡಲು ಬಳಸುವ ಪರಿಭಾಷೆಗಳು ಮತ್ತೊಂದು ಪ್ರದೇಶದ ದಲಿತ ಬದುಕನ್ನು ವಿವರಿಸಲು ವಿಫಲವಾಗುತ್ತವೆ. ಈ ಕಾರಣದಿಂದ (ಪರಿಭಾಷೆಗಳು ಸಂವಾದ ನಡೆಸಲು ವಿಫಲವಾಗುವುದರಿಂದ) ಈ ಪರಿಭಾಷೆಗಳನ್ನು ಬಳಸಿ ದಲಿತ ಲೋಕದ ಕುರಿತು ಒಂದು

ಸಾಮಾನ್ಯ ನಿಲುವಿಗೆ (ತಾತ್ವಿಕ ನಿಲುವಿಗೆ) ಬರುವುದು ಕಷ್ಟವಾಗುತ್ತದೆ. ದಲಿತ ಲೋಕದ ಒಟ್ಟಾರೆ ಚಿತ್ರಣ ಪಡೆಯಲು ತಾತ್ವಿಕ ನಿಲುವಿನ ಅಗತ್ಯವಿದೆ ಅಥವಾ ತಾತ್ವಿಕ ನಿಲುವಿನಿಂದ(ಸಾಮಾನ್ಯ ನಿಲುವಿನಿಂದ) ದಲಿತ ಲೋಕದ ಒಟ್ಟಾರೆ ಚಿತ್ರಣ ಪಡೆಯಲು ಸಾಧ್ಯ. ದಲಿತ ಲೋಕದ ಒಟ್ಟಾರೆ ಅಥವಾ ಸಾಮಾನ್ಯ ಚಿತ್ರಣ ಪಡೆಯುವ ಅನಿವಾರ್ಯತೆ ಯಾದರೂ ಯಾಕಿದೆ? ಎನ್ನುವ ಪ್ರಶ್ನೆ ನಮ್ಮನ್ನು ನೇರವಾಗಿ ವಿವರಣೆ ಯಾವ ಉದ್ದೇಶವನ್ನು ಈಡೇರಿಸಲು ನೆರವಾಗುತ್ತದೆ ಎನ್ನುವ ಪ್ರಶ್ನೆಯೊಂದಿಗೆ ಮುಖಾಮುಖಿ ಯಾಗಿಸುತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ದಲಿತ ಲೋಕದ ಒಟ್ಟಾರೆ ಚಿತ್ರಣ ಯಾಕೆ ಬೇಕೆನ್ನುವ ಪ್ರಶ್ನೆ ನಮ್ಮನ್ನು ನೇರವಾಗಿ ಜ್ಞಾನ ಮತ್ತು ಅಧಿಕಾರದ ಪ್ರಶ್ನೆಯೊಂದಿಗೆ ಮುಖಾಮುಖಿಯಾಗಿಸುತ್ತದೆ. ಆಧುನೀಕರಣ, ರಾಷ್ಟ್ರೀಯತೆ, ಪ್ರಭುತ್ವ, ಪರಸ್ಪರ ಅವಲಂಬಿತ ಬದುಕು ಇತ್ಯಾದಿಗಳು ಹೊಸ ಸಮಾಜದ ಸೃಷ್ಟಿಗೆ ಅನಿವಾರ್ಯ ಎಂದು ನಂಬಲಾಗಿದೆ. ಹೊಸ ಸಮಾಜದಲ್ಲಿ ಎಲ್ಲರು ಒಟ್ಟಾಗಿ ಸಮಾನರಾಗಿ ಇರುತ್ತಾರೆ. ಎಲ್ಲರೂ ಒಟ್ಟಾಗಿ ಸಮಾನರಾಗಿ ಇರುವುದಕ್ಕಾಗಿ ಪ್ರತ್ಯೇಕತೆಗಳನ್ನು ಸೃಷ್ಟಿಸುವ ಹಳೆಯ ಪರಿಭಾಷೆಗಳನ್ನು ತಿರಸ್ಕರಿಸಬೇಕು. ಇವೇ ಕಾರಣಗಳಿಗಾಗಿ ಯಾವುದೇ ಸಮುದಾಯದ ಒಟ್ಟಾರೆ ಚಿತ್ರಣ ಪಡೆಯುವ ದೃಷ್ಟಿಯಿಂದ ಸಮಾಜ ಸಂಶೋಧನೆಯ ಪರಿಭಾಷೆ ಪದಗಳು ಒಂದು ನಿರ್ದಿಷ್ಟ ಸಮುದಾಯ ಚಾರಿತ್ರಿಕವಾಗಿ ರೂಪಿಸಿಕೊಂಡ ಪರಿಭಾಷೆ ಪದಗಳಿಗಿಂತ ಹೆಚ್ಚು ಉಪಯುಕ್ತವೆಂದು ತಿಳಿಯಲಾಗಿದೆ. ಇತರ ಕಾರಣಗಳ ಜತೆಗೆ ಈ ಕಾರಣಕ್ಕಾಗಿ ಸಮಾಜ ಸಂಶೋಧನೆ ಅಧಿಕಾರಕ್ಕೂ ಹತ್ತಿರವಾಗಿದೆ. ಹೀಗೆ ಮೇಲಿನ ಎರಡು ಪರಿಭಾಷೆ ಗಳಲ್ಲಿ (ಸಮಾಜ ಸಂಶೋಧನೆಯ ಪರಿಭಾಷೆಗಳು ಮತ್ತು ದಲಿತ ಲೋಕದ ಪರಿಭಾಷೆ ಗಳು) ಮೊದಲಿನದರ (ಸಮಾಜ ಸಂಶೋಧನೆಯ) ಪ್ರಭಾವ ಮತ್ತು ಪರಿಣಾಮ ಗಣನೀಯ. ಸಮಾಜ ಸಂಶೋಧನೆಯ ಪರಿಭಾಷೆಗಳನ್ನು ಯಾರು ಕೂಡ ನಿರಾಕರಿಸಲು ಸಾಧ್ಯವಿಲ್ಲದ ಅಥವಾ ಅದೊಂದು ಆಯ್ಕೆ ರಹಿತ ಸ್ಥಿತಿ ಇದೆ.[೨೦] ದಲಿತ ಪರಿಭಾಷೆಗಳನ್ನು ಜೀರ್ಣಿಸಿ ಕೊಳ್ಳುವ ಅಥವಾ ಬಿಡುವ ಸ್ವಾತಂತ್ರ್ಯ ಎಲ್ಲರಿಗೂ ಇದೆ.

ಇಂತಹ ವಾತಾವರಣ ಎಲ್ಲ ಸಮಾಜ ಸಂಶೋಧಕರನ್ನು ಒಂದಲ್ಲ ಒಂದು ಬಗೆಯಲ್ಲಿ ಕಾಡುತ್ತದೆ. ಇದರಿಂದಾಗಿ ಸಂಶೋಧನೆ ಮತ್ತು ಸಾಮಾಜಿಕ ಪರಿವರ್ತನೆ ನಡುವೆ ನೇರ ಸಂಬಂಧ ಬಯಸುವ ಸಮಾಜ ಸಂಶೋಧಕರು ಒಂದು ಬಗೆಯ ಇಬ್ಬಂದಿತನವನ್ನು ಅನುಭವಿಸುವ ಸಾಧ್ಯತೆನೂ ಇದೆ. ದಲಿತ ಹಾಗೂ ತಳಸ್ತರದ ಸಂಶೋಧಕರನ್ನು ಈ ವಾತಾವರಣ ಬೇರೆಯದೇ ರೂಪದಲ್ಲಿ ಪ್ರಭಾವಿಸಬಹುದು. ತಾನು ಬದುಕುವ ಪರಿಸರದಿಂದ ರೂಢಿಸಿಕೊಂಡ ದೃಷ್ಟಿಕೋನದಿಂದ (ದಲಿತತ್ವದ ದೃಷ್ಟಿಯಿಂದ) ಸಂಶೋಧನೆಯನ್ನು ನೋಡಬಾರದು ಸಂಶೋಧನೆಗೆ ಪ್ರತ್ಯೇಕ ದೃಷ್ಟಿಕೋನ ರೂಢಿಸಿಕೊಳ್ಳಬೇಕೆಂದು ಸಮಾಜ ಸಂಶೋಧನೆಯ ವೈಧಾನಿಕತೆ ತಾಕೀತು ಮಾಡುತ್ತದೆ. ಇದು ಸಮಾಜ ಅಥವಾ ಕನ್ನಡ ಸಂಶೋಧನೆಯ ಸಮಸ್ಯೆಯಲ್ಲ. ಇದು ಸಂಶೋಧನ

ಚೌಕಟ್ಟಿನ ಸ್ಥಾನಮಾನದ ಪ್ರಶ್ನೆ. ಯಜಮಾನಿಕೆಯಲ್ಲಿರುವ ಸಂಶೋಧನ ಚೌಕಟ್ಟಿನಲ್ಲಿ ಜ್ಞಾನ ಉತ್ಪಾದಿಸುವುದು ಉತ್ಪಾದಿತ ಜ್ಞಾನ ಸಮಾಜದ ಮುಖ್ಯವಾಹಿನಿಯ ಭಾಗವಾಗಲು ಅಗತ್ಯ. ಅದಕ್ಕಾಗಿ ಯಜಮಾನಿಕೆಯಲ್ಲಿರುವ ಥಿಯರಿಗಳನ್ನು ಮತ್ತು ಪರಿಭಾಷೆಗಳನ್ನು ಪರಿಚಯ ಮಾಡಿಕೊಳ್ಳಲು ಪ್ರಯತ್ನಿಸಬೇಕು ಮತ್ತು ಸಂಶೋಧನೆಯನ್ನು ಹೊಸದಾಗಿ ಪರಿಚಯ ಮಾಡಿಕೊಂಡ ದೃಷ್ಟಿಕೋನದಿಂದ ನೋಡಬೇಕಾಗುತ್ತದೆ. ಅಷ್ಟು ಮಾತ್ರವಲ್ಲ ಬದುಕಿನಿಂದ ಬಂದ ದೃಷ್ಟಿಕೋನವನ್ನು ಸಂಶೋಧನೆಗಾಗಿ ರೂಢಿಸಿಕೊಂಡ ದೃಷ್ಟಿಕೋನದಿಂದ ಬೇರ್ಪಡಿಸಿ ನೋಡಬೇಕಾಗುತ್ತದೆ.[೨೧] ಇದರಿಂದಾಗಿ ಬದುಕಿನ ಸಮಸ್ಯೆಗಳೇ ಬೇರೆ ಸಂಶೋಧನ ಸಮಸ್ಯೆಗಳೇ ಬೇರೆ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಈ ಬಗೆಯ ಸಂಶೋಧನ ಪ್ರಕ್ರಿಯೆ ಎರಡು ರೀತಿಯ ಸಮಸ್ಯೆಗಳಿಗೆ ಎಡೆಮಾಡಿಕೊಡುತ್ತದೆ. ಒಂದು ಕಡೆ ಸಂಶೋಧನೆಯಲ್ಲಿ ತೊಡಗಿದ ತಳಸ್ತರದವರು/ದಲಿತರು ಕೂಡ (ದಲಿತೇತರರಂತೆ) ದಲಿತ ಲೋಕ ಕಟ್ಟಿಕೊಡುವ ಸಾಮಾಜಿಕ ನ್ಯಾಯ, ಸಮಾನತೆ, ನೆಮ್ಮದಿಯ ಬದುಕು ಇತ್ಯಾದಿಗಳ ಗಂಧಗಾಳಿಯೂ ಇಲ್ಲದ ದಲಿತ ಥಿಯರಿಗಳನ್ನು (ದಲಿತರ ಉದ್ಧಾರಕ್ಕಾಗಿ) ನೇಯುತ್ತಿರುತ್ತಾರೆ. ಎಷ್ಟೋ ಬಾರಿ ಈ ಬಗೆಯಲ್ಲಿ ನೇಯುವ ಥಿಯರಿಗಳಲ್ಲಿ ಸಮಸ್ತ ದಲಿತ ಲೋಕದ ಬಿಡುಗಡೆಗಿಂತ ತಮ್ಮದೇ (ಸಂಶೋಧಕರು ಮತ್ತು ಅವರ ತಕ್ಷಣದ ಸಂಬಂಧಗಳ) ಬಿಡುಗಡೆಯ ಕಾಳಜಿಗಳು ಹೆಚ್ಚು ಅಭಿವ್ಯಕ್ತಗೊಳ್ಳುವುದು ಇದೆ. ಇನ್ನೊಂದೆಡೆ ಈ ಬಗೆಯ ಸಂಶೋಧನೆ ಹಾಗೂ ಸಂಶೋಧನೆಗಾಗಿ ಸೃಷ್ಟಿಸುವ ತಾತ್ವಿಕತೆ ಹಾಗು ಪರಿಭಾಷೆಗಳು ದಲಿತ ಬದುಕಿನಿಂದ ಚಾರಿತ್ರಿಕವಾಗಿ ರೂಪುಗೊಂಡ ತಾತ್ವಿಕತೆ ಹಾಗು ಪರಿಭಾಷೆಗಳಿಂದ ದೂರವಾಗಿರುತ್ತವೆ. ಈ ಎರಡೂ ಪರಸ್ಪರ ಸಂಧಿಸುವ ಸಾಧ್ಯತೆನೇ ಇರುವುದಿಲ್ಲ. ಹಾಗಾದಾಗ ದಲಿತ ಅಧ್ಯಯನದ ಥಿಯರಿ ಮತ್ತು ಪರಿಭಾಷೆಗಳು ದಲಿತ ಲೋಕವನ್ನು ಅರ್ಥಮಾಡಿಕೊಳ್ಳುವುದಕ್ಕಿಂತ ಹೆಚ್ಚು ದಲಿತ ಲೋಕವನ್ನು ಕೇಂದ್ರೀಕೃತ ಅಧಿಕಾರ ಬಯಸುವ ರೂಪದಲ್ಲಿ ಕಟ್ಟಿಕೊಡಲು ಪೂರಕವಾಗಿದೆ. ಅಂದರೆ ದಲಿತರನ್ನು ಯಾವುದೋ ಒಂದು ಬಗೆಯಲ್ಲಿ ಮುಖ್ಯವಾಹಿನಿಯೊಂದಿಗೆ ಜೋಡಿಸುವ ಕೆಲಸಕ್ಕೆ ಪೂರಕವಾಗುವ ಜ್ಞಾನ ಸೃಷ್ಟಿ ಮಾಡಲಾಗುತ್ತಿದೆ. ಇದು ಖಂಡಿತವಾಗಿಯೂ ದಲಿತರನ್ನು ಕಾಡುವ ಕೆಲವೊಂದು ಮೂಲಭೂತ ಸಮಸ್ಯೆಗಳಿಗೆ-ಸಮಾನತೆ, ಸ್ವಾಯತ್ತತೆ, ಮಾನ ಸಮ್ಮಾನ ಇತ್ಯಾದಿ ಸಮಸ್ಯೆಗಳಿಗೆ ಪರಿಹಾರವಾಗಲಿಕ್ಕಿಲ್ಲ.

ಚಾಲ್ತಿಯಲ್ಲಿರುವ ಇಂಡಕ್ಟಿವ್ ಹಾಗೂ ಡಿಡಕ್ಟಿವ್ ವಿಧಾನಗಳಿಂದ ಥಿಯರಿ ಕಟ್ಟುವ ಕ್ರಮ ವಾಸ್ತವದಲ್ಲಿ ಯಾಜಮಾನಿಕೆ ಸ್ಥಾಪಿಸುವ ಕ್ರಮ ಎನ್ನುವುದು ಮೇಲಿನ ಚರ್ಚೆಯಿಂದ ಸ್ಪಷ್ಟವಾಗಬಹುದು. ಇದು ಬಲಾಢ್ಯರ ಲೋಕದೃಷ್ಟಿಗನುಸಾರ ಇತರರ ಲೋಕದೃಷ್ಟಿಯನ್ನು ರೂಪಿಸಲು ಪ್ರಯತ್ನಿಸುತ್ತದೆ. ಅಂತರಾಷ್ಟ್ರೀಯ ಮಟ್ಟದಿಂದ ರಾಷ್ಟ್ರೀಯ, ರಾಜ್ಯ ಮತ್ತು ಅದಕ್ಕಿಂತಲೂ ತಳಸ್ತರದಲ್ಲೂ ಇದೇ ಕ್ರಮದಲ್ಲಿ ಥಿಯರಿ ಕಟ್ಟುವ ಅಥವಾ ಸಂಶೋಧನ ಪ್ರಕ್ರಿಯೆ ನಡೆಸಲು ಶ್ರೇಣಿಕೃತ ಸಂಶೋಧನ ಚೌಕಟ್ಟುಗಳು ಸಹಕರಿಸುತ್ತವೆ. ಈ ಬಗೆಯ

ತಾತ್ವಿಕತೆಯನ್ನು ರೂಪಿಸಿಕೊಳ್ಳುವ ಕ್ರಮ ಮೇಲ್‌ಸ್ತರದಲ್ಲಿ ಶ್ರೀಮಂತ ರಾಷ್ಟ್ರಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿ ಹಾಗೂ ರಾಜಕೀಯ ಸಂಸ್ಥೆ ಗಳನ್ನು, ಸಂಬಂಧಗಳನ್ನು ಹಾಗೂ ಮೌಲ್ಯಗಳನ್ನು ಯುನಿವರ್ಸಲ್ ಥಿಯರಿಗಳ ಹೆಸರಲ್ಲಿ ಮುಂಚೂಣಿಗೆ ತರುತ್ತವೆ. ಈ ಬಗೆಯ ಆಧುನೀಕರಣಕ್ಕೆ ಅಥವಾ ಜಾಗತೀಕರಣಕ್ಕೆ ಸ್ಥಳೀಯ ಸಂಸ್ಕೃತಿ ನೆಲೆಯಲ್ಲಿ ವಿರೋಧವನ್ನು ಅಥವಾ ಪ್ರತಿ ನೆಲೆಗಳನ್ನು ಕಟ್ಟಿಕೊಳ್ಳಲು ಪ್ರಯತ್ನಿಸಲಾಗುತ್ತಿದೆಯೆಂದು ಹಿಂದಿನ ಪುಟಗಳಲ್ಲಿ ನೋಡಿದ್ದೇವೆ. ಈ ಕೆಲಸವನ್ನು ಸ್ಥಳೀಯ ಬಲಾಢ್ಯರು ಮಾಡುತ್ತಿರುತ್ತಾರೆ. ಇವರುಗಳು ಯುನವರ್ಸಲ್ ಥಿಯರಿಗಳು ಕಟ್ಟಿಕೊಡುವ ಲೋಕದೃಷ್ಟಿಗಳನ್ನು ಅಲ್ಲಗೆಳೆಯುವ ಉದ್ದೇಶದಿಂದ ಸ್ಥಳೀಯ ಸಂಸ್ಕೃತಿ ಲೋಕದೃಷ್ಟಿಗಳನ್ನು ಮುಂಚೂಣಿಗೆ ತರುತ್ತಾರೆ. ವಾಸ್ತವದಲ್ಲಿ ಎರಡೂ ಕಡೆಯಲ್ಲೂ - ಯುನಿವರ್ಸಲ್ ಥಿಯರಿಗಳ ರೂಪದಲ್ಲಿ ಅಂತರಾಷ್ಟ್ರೀಯ ಯಜಮಾನಿಕ ವರ್ಗದ ಮೌಲ್ಯಗಳು ಪ್ರತಿಪಾದನೆಗೊಂಡರೆ ಸ್ಥಳೀಯ ಸಂಸ್ಕೃತಿಯ ಲೋಕದೃಷ್ಟಿಯ ಹೆಸರಲ್ಲಿ ಸ್ಥಳೀಯ ಬಲಾಢ್ಯರ ಮೌಲ್ಯಗಳು ಪ್ರತಿಪಾದನೆ ಗೊಳ್ಳುತ್ತವೆ. ಮಠಮಂದಿರಗಳು, ಮಸೀದಿ ಚರ್ಚುಗಳು, ಕಲಾಪ್ರಕಾರಗಳು, ಜಾತಿ ಸಂಘಟನೆಗಳು, ರಾಜಕೀಯ ಪಕ್ಷಗಳು, ಕೆಲವು ಹವ್ಯಾಸಿ ಸಮಾಜ ಚಿಂತಕರು, ಕೆಲವು ಸಾಹಿತಿಗಳು ಮುಂತಾದವರು ಸ್ಥಳೀಯ ಬಲಾಢ್ಯರ ಮೌಲ್ಯಗಳನ್ನು ಇಡೀ ಸಂಸ್ಕೃತಿಯ ಮೌಲ್ಯಗಳೆಂದು ಬಿಂಬಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಾರೆ. ಇವರು ಕಟ್ಟಿಕೊಡುವ ಪ್ರತಿರೋಧಗಳಲ್ಲಿ ವೈಭವೀಕೃತ, ಆದರ್ಶಪ್ರಾಯವಾದ, ಸಮಷ್ಟಿಯ ಒಳಿತನ್ನು ಸಾಧಿಸಿದ ಭೂತ, ಯಾವುದೋ ಕಾರಣ ದಿಂದ (ಬಹುತೇಕ ಸಂದರ್ಭದಲ್ಲಿ ಆಧುನೀಕರಣದಿಂದ) ಕಳೆದುಹೋದ ಗತ ವೈಭವ ಮತ್ತು ಅದನ್ನು ಪುನರ್ ಗಳಿಸಬೇಕಾದರೆ ಅಥವಾ ಸ್ಥಾಪಿಸ ಬೇಕಾದರೆ ಆಗಬೇಕಾಗಿರುವ ಪರಿವರ್ತನೆ ಇತ್ಯಾದಿಗಳು ಪ್ರಮುಖ. ನಾವು, ನಮ್ಮದು, ಕಳೆದುಕೊಂಡ ನೋವು ಮತ್ತು ಅದನ್ನು ಪುನರ್ ಸ್ಥಾಪಿಸುವ ಛಲ ಇಲ್ಲೆಲ್ಲ ಎದ್ದು ಕಾಣವು ಸಂಗತಿಗಳು. ಆದರೆ ಈ ಸಂಕಥನಗಳು ಎಲ್ಲೂ ಕೂಡ ಸಮಾನತೆ (ಸಮುದಾಯಗಳ ನಡುವೆ, ಲಿಂಗಗಳ ನಡುವೆ, ವ್ಯಕ್ತಿಗಳ ನಡುವೆ), ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಇತ್ಯಾದಿ ಗಳನ್ನು ಆದರ್ಶವೆಂದು ಸಾರುವುದಿಲ್ಲ.

ಈ ಸಮಾಜ ಸಂಕಥನಗಳು ಕೆಲವು ಬಾರಿ ಪರಸ್ಪರ ಸಂಬಂಧವಿಲ್ಲದ ಮತ್ತೆ ಕೆಲವು ಬಾರಿ ಪರಸ್ಪರ ವಿರುದ್ಧವೆನ್ನುವ ಎರಡು ಲೋಕಗಳನ್ನು ಸೃಷ್ಟಿಸುತ್ತವೆ. ಶತಮಾನಗಳಿಂದ ಜನಸಾಮಾನ್ಯರು ರೂಢಿಸಿಕೊಂಡು ಬಂದಿರುವ ಜೀವನ ಕ್ರಮ ಮತ್ತು ಜ್ಞಾನ ಪರಂಪರೆಯ ಆಧಾರದಲ್ಲಿ ಕಟ್ಟಿಕೊಳ್ಳಲಾಗಿದೆನ್ನುವ ಒಂದು (ಸ್ಥಳೀಯ ಸಂಸ್ಕೃತಿ) ಲೋಕ. ಆಧುನಿಕ ಶಿಕ್ಷಣ, ರಾಜಕೀಯ, ಅರ್ಥ, ಕಾನೂನು, ಆರೋಗ್ಯ ಇತ್ಯಾದಿಗಳ ಮೂಲಕ ನಿರ್ಮಿಸಲು ಹೊರಟಿರುವ ಹೊಸ ಸಮಾಜದ ಕಲ್ಪನೆ ಮತ್ತೊಂದು (ಆಧುನಿಕ) ಲೋಕ. ಎಲ್ಲ ಬಗೆಯ ಸ್ವಾಯತ್ತತೆಗಳನ್ನು ಮೊದಲಿನ ಲೋಕಕ್ಕೆ ಆರೋಪಿಸಲಾಗಿದೆ. ಪರಿವರ್ತನೆಯನ್ನು ಕೂಡ ಈ ಸ್ವಾಯತ್ತ ಸಮಾಜ ಅಂತರ್ಗತವಾಗಿ ಹುಟ್ಟು ಹಾಕುತ್ತದೆ ಮತ್ತು ನಿರ್ವಹಿಸುತ್ತದೆ.

ಆದುದರಿಂದ ಆಂತರಿಕ ಪರಿವರ್ತನೆಗೆ ಹೊರಗಿನ ಸಮಾಜ/ಸಂಸ್ಕೃತಿಯ ಸಂಪರ್ಕ ಮತ್ತು ಪ್ರೇರಣೆ ಅಗತ್ಯವಿಲ್ಲವೆಂದು ಬಗೆಯಲಾಗುತ್ತದೆ.[೨೨] ಒಂದು ವೇಳೆ ಹೊರಗಿನ ಸಮಾಜದ ಸಂಪರ್ಕ ಅನಿವಾರ್ಯವಾದರೆ ತನ್ನ ಹಿತಕ್ಕೆ ಏನೆಲ್ಲ ಬೇಕೋ ಅವುಗಳನ್ನು ಮಾತ್ರ ಸ್ವೀಕರಿಸಿ ಉಳಿದವುಗಳನ್ನು ತಿರಸ್ಕರಿಸುವ ಶಕ್ತಿ ಸ್ವಾಯತ್ತ ಸಮಾಜಕ್ಕಿದೆ. ಕೆಲವೊಂದು ಕ್ಷೇತ್ರಗಳಲ್ಲಿ (ಅರ್ಥ, ತಂತ್ರಜ್ಞಾನ, ರಾಜಕೀಯ ಇತ್ಯಾದಿಗಳಲ್ಲಿ) ಪರಕೀಯ ಸಂಸ್ಥೆ ಹಾಗೂ ಜ್ಞಾನ ಪರಂಪರೆಗಳನ್ನು ಬಳಸಿಕೊಳ್ಳುವುದು ಅನಿವಾರ್ಯವಾದರೆ ಅವುಗಳನ್ನು ದೇಶೀಕರಿಸಲಾಗುವುದು. ಆಧುನಿಕ ಸಮಾಜ ಪಠ್ಯಗಳು ಕೊಡುವ ವೃತ್ತಿ ಕೌಶಲಗಳನ್ನು ಮೈಗೂಡಿಸಿಕೊಂಡು ಆರ್ಥಿಕ ಸ್ವಾಯತ್ತತೆ ಸಾಧಿಸುವುದರ ಪರ ಈ ಸಂಕಥನ ಇದೆ. ಆದರೆ ಸಮಾಜ ಪಠ್ಯಗಳು ಸಾರುವ ಮೌಲ್ಯಗಳನ್ನು (ಸಮಾನತೆ, ಸ್ವಾತಂತ್ರ್ಯ ಇತ್ಯಾದಿಗಳನ್ನು) ಪರಕೀಯ ಸ್ಥಾನದಲ್ಲಿರಿಸುತ್ತದೆ. ಪಠ್ಯಗಳು ಸಾರುವ ಮೌಲ್ಯಗಳು ಪರಕೀಯವಾಗುದರಿಂದ ಅವುಗಳನ್ನು ಮೈಗೂಡಿಸಿಕೊಳ್ಳುವ ಅಥವಾ ದಿನನಿತ್ಯದ ಬದುಕಿನಲ್ಲಿ ಆಚರಿಸುವ ಅಗತ್ಯವಿಲ್ಲ. ಇದರಿಂದಾಗಿ ವೇಷಭೂಷಣಗಳಲ್ಲಿ, ಊಟ ತಿಂಡಿಗಳಲ್ಲಿ, ಮಾತುಕತೆಗಳಲ್ಲಿ ಆಧುನಿಕತೆಯನ್ನು ಪ್ರದರ್ಶಿಸುವ ಸಂದರ್ಭದಲ್ಲೇ ಬಹುತೇಕ ವ್ಯವಹಾರಗಳಲ್ಲಿ ಊಳಿಗಮಾನ್ಯ ಮೌಲ್ಯಗಳನ್ನು ಆಚರಿಸುವುದು ವಿರೋಧಭಾಸವಾಗುವುದಿಲ್ಲ. ಹೀಗೆ ಸಮಾಜ ಸಂಶೋಧನೆ ಪ್ರತಿಪಾದಿಸಬೇಕಾಗಿರುವ ಮೌಲ್ಯಗಳು (ಸಮಾನತೆ, ಸ್ವಾತಂತ್ರ್ಯ ಇತ್ಯಾದಿಗಳು) ಜನರ ಪ್ರಜ್ಞೆಯ ಭಾಗವಾಗದಂತೆ ನೋಡಿಕೊಳ್ಳುವಲ್ಲಿ ಅಥವಾ ಪರಕೀಯವಾಗಿಯೇ ಉಳಿಸುವಲ್ಲಿ ಮೇಲಿನ ಏಜನ್ಸಿಗಳು (ಮಠಮಂದಿರುಗಳು, ಮಸೀದಿ, ಚರ್ಚು ಇತ್ಯಾದಿಗಳು) ಸೃಷ್ಟಿಸುವ ನಮ್ಮ ಸಮಾಜ/ಸಂಸ್ಕೃತಿ ಕಲ್ಪನೆ ಪಾತ್ರ ಕೂಡ ಇದೆ. ತಳಸ್ತರದಲ್ಲಿ ಈ ಬಗೆಯ ಸಂಶೋಧನ ಕ್ರಮ ಸಮಷ್ಟಿಯ ನೆನಪನ್ನು ಪುನರ್‌ಸೃಷ್ಟಿಸುವ ನೆಪದಲ್ಲಿ ಬಹುತೇಕ ಸಂದರ್ಭದಲ್ಲಿ ಆಯಾಯ ಸಮಾಜದ ಮೇಲ್‌ವರ್ಗಗಳ ಆಸಕ್ತಿಗಳು, ಅಭಿಪ್ರಾಯಗಳು, ಚರಿತ್ರೆಗಳು ಇಡೀ ಸಮಾಜದ ಆಸಕ್ತಿಗಳಾಗಿ, ಅಭಿಪ್ರಾಯಗಳಾಗಿ, ಚರಿತ್ರೆಗಳಾಗಿ ಮಂಡಿಸಲ್ಪಡುತ್ತವೆ.[೨೩]

ಸ್ಥಳೀಯ ಸಂಸ್ಕೃತಿ ಸಂಶೋಧನ ಚೌಕಟ್ಟುಗಳು ಉತ್ಪಾದಿಸುವ ಜ್ಞಾನ ಬಹುತೇಕ ಸಂದರ್ಭದಲ್ಲಿ ಮತ್ತೊಬ್ಬರ ಇರುವಿಕೆಯನ್ನು ಅಲ್ಲಗೆಳೆಯುವ, ಹುಟ್ಟಿನ ಹಿನ್ನೆಲೆ ಸಾಧಿತ ಹಿನ್ನೆಲೆಗಿಂತ ಪ್ರಾಮುಖ್ಯತೆ ಪಡೆಯುವ, ಮಾತು ಮತ್ತು ಕೃತಿ ನಡುವೆ ಸಂಬಂಧ ಇಲ್ಲದಿರುವ, ಕುಟುಂಬ ಮತ್ತು ಸಮುದಾಯದ ಬದ್ಧತೆಯನ್ನು ಸಮಷ್ಟಿಯ ಬದ್ಧತೆಗೆ ಸಮೀಕರಿಸುವ ಇತ್ಯಾದಿ ವಿಶ್ವಮಾನವ ವಿರೋಧಿ ಮೌಲ್ಯಗಳನ್ನು ತನ್ನ ಒಳಪ್ರವಾಹ ವನ್ನಾಗಿಸಿಕೊಂಡಿವೆ. ಈ ಎರಡೂ ಕೂಡ-ವಿಜ್ಞಾನ/ತಂತ್ರಜ್ಞಾನ ಪ್ರತಿಪಾದಿಸುವ ಅತಿಯಾದ ಯುನಿವರ್ಸಾಲಿಟಿ ಮತ್ತು ಕಲ್ಚರ್ ಕಲ್ಪನೆಗಳು ಪ್ರತಿಪಾದಿಸುವ ಸ್ಥಳೀಯತೆ-ತಳಸ್ತರದ ಜನರ ಸಮಸ್ಯೆಗಳಿಗೆ ಸರಿಯಾದ ಪರಿಹಾರವಲ್ಲ. ವಿಶ್ವಮಾನವನನ್ನು ರೂಪಿಸಲು ಸಹಕಾರಿಯಾಗ ಬಹುದಾದ ಮನುಷತ್ವ, ಸಮಾನತೆ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಪಾರದರ್ಶಕತೆ,

ಸಾರ್ವಜನಿಕ ಜವಾಬ್ದಾರಿ ಇತ್ಯಾದಿ ಗುಣಗಳನ್ನು ಸ್ಥಳೀಯ ಸಂಸ್ಕೃತಿಯಲ್ಲಿ ಆಚರಣೆಗೆ ತರಲು ಪ್ರಯತ್ನಿಸುವುದು ನಮ್ಮ ಇಂದಿನ ಸಮಸ್ಯೆಗಳಿಗೆ ದೂರಗಾಮಿ ಪರಿಹಾರವಾಗಬಹುದು. ಈ ಎಲ್ಲ ಮೌಲ್ಯಗಳನ್ನು ಸಮಾಜ ಸಂಶೋಧನೆ ಪ್ರತಿಪಾದಿಸಲು ಸಾಧ್ಯವಾದರೆ ವಿಜ್ಞಾನ/ತಂತ್ರಜ್ಞಾನ ಪ್ರತಿಪಾದಿಸುವ ಅತಿಯಾದ ಯುನಿವರ್ಸಾಲಿಟಿ ಮತ್ತು ಕಲ್ಚರ್ ಕಲ್ಪನೆಗಳು ಪ್ರತಿಪಾದಿಸುವ ಸ್ಥಳೀಯತೆಗಳಿಂದ ಆಗುವ ಅನಾಹುತವನ್ನು ತಪ್ಪಿಸಲು ಸಮಾಜ ಅಧ್ಯಯನಕ್ಕೆ ಸಾಧ್ಯ. ಆದರೆ ಈಗ ಸಮಾಜ ಸಂಶೋಧನೆ ಕೂಡ ವಿಜ್ಞಾನದ ವಿಧಾನವನ್ನು ಹೆಚ್ಚು ಹೆಚ್ಚು ಪ್ರತಿಪಾದಿಸುವುದರಿಂದ ಮತ್ತು ಜನರ ಪ್ರಜ್ಞೆಯ ಭಾಗವಾಗುವ ಜ್ಞಾನವನ್ನು ಮೇಲೆ ಹೇಳಿದ ಸಂಸ್ಕೃತಿ ಕಲ್ಪನೆಗಳು ತುಂಬುವುದರಿಂದ ಸಮಾಜ ಅಧ್ಯಯನ ಕೂಡ ಜನರಿಗೆ ಪರಕೀಯವಾಗಿದೆ. ಈ ದ್ವಂದ್ವಗಳಿಂದಾಗಿ ನಮ್ಮಲ್ಲಿ ಸಮಾಜ ಶಾಸ್ತ್ರಗಳು ಸೃಷ್ಟಿಸುವ ಜ್ಞಾನ ಮತ್ತು ಸ್ಥಳೀಯ ಸಮಾಜಗಳ ದಿನನಿತ್ಯದ ಬದುಕು ಸಮಾನಾಂತರ ರೇಖೆಗಳಲ್ಲಿ ಚಲಿಸುತ್ತಿರುವ ಚಿತ್ರಣ ಇದೆ. ಅಂದರೆ ತರಗತಿಗಳಲ್ಲಿ ಕಲಿಯುವ ಪಾಠಗಳಿಗೂ ದಿನನಿತ್ಯದ ಬದುಕಿನ ವ್ಯವಹಾರಗಳಿಗೂ ಏನೇನು ಸಂಬಂಧ ಇಲ್ಲ ಎನ್ನುವ ಸ್ಥಿತಿ ಇದೆ. ಇವುಗಳನ್ನು ಅರ್ಥಮಾಡಿಕೊಳ್ಳಲು ಎರಡು ಉದಾಹರಣೆಗಳನ್ನು ನೋಡುವ. ಒಂದು, ಸಮಾಜ ವಿಜ್ಞಾನ ಪಠ್ಯಗಳಲ್ಲಿರುವ ಅಧಿಕಾರ ಕಲ್ಪನೆ ಮತ್ತು ಆಚರಣೆ ಮತ್ತು ಸ್ಥಳೀಯ ಪರಿಸರದಲ್ಲಿರುವ ಅಧಿಕಾರದ ಕಲ್ಪನೆ ಮತ್ತು ಆಚರಣೆ. ಎರಡು, ಸಮಾಜ ಪಠ್ಯಗಳು ಪ್ರತಿಪಾದಿಸುವ ಮೌಲ್ಯಗಳು ಮತ್ತು ದಿನನಿತ್ಯದ ಬದುಕಿನಲ್ಲಿ ಅನುಸರಿಸುತ್ತಿರುವ ಮೌಲ್ಯಗಳು.

ಮೊದಲಿಗೆ ಸಮಾಜ ವಿಜ್ಞಾನಗಳು ಕಟ್ಟಿಕೊಡುವ ಅಧಿಕಾರದ ಕಲ್ಪನೆಯನ್ನು ನೋಡುವ. ಸಮಾಜ ವಿಜ್ಞಾನಗಳು ಅಧಿಕಾರವನ್ನು ಇತರ ವಿಷಯಗಳಂತೆ(ಅರ್ಥ, ಸಮಾಜ ಇತ್ಯಾದಿಗಳಂತೆ) ಮಹತ್ವದೆಂದು ನೋಡದಿದ್ದರೂ ನಕರಾತ್ಮಕವಾಗಿ ಕಟ್ಟಿ ಕೊಟ್ಟಿಲ್ಲ. ಆಧುನೀಕರಣ ಥಿಯರಿಗಳು ಅಧಿಕಾರವನ್ನು ವಿಶ್ಲೇಷಿಸಿರುವ ದೃಷ್ಟಿಕೋನವನ್ನು ಪರಿಶೀಲಿಸುವ. ಈ ಥಿಯರಿಗಳು ಸ್ಟ್ರಕ್ಚರಲ್ ಫಂಕ್ಷನಲಿಸ್ಟ್ ಹಿನ್ನೆಲೆಯಿಂದ ಬಂದವು. ಸ್ಟ್ರಕ್ಚರಲ್ ಫಂಕ್ಷನಲಿಸಂ ಮೂಲತಃ ಜೀವಶಾಸ್ತ್ರದ ನೆಲೆಯಿಂದ ಬಂದಿದೆ.[೨೪] ದೇಹದ ಅಂಗಾಂಗಗಳು ಬೇರೆ ಬೇರೆ ಮತ್ತು ಅವು ಮಾಡುವ ಕೆಲಸಗಳು (ಫಂಕ್ಷನ್‌ಗಳು) ಬೇರೆ ಬೇರೆಯಾದವು. ಆದರೂ ಈ ಅಂಗಾಂಗಳ ನಡುವಿನ ಸಂಬಂಧ ಪರಸ್ಪರ ಪೂರಕವಾದುದು. ಇಡೀ ದೇಹದ ಕಾರ್ಯ ನಿರ್ವಹಣೆಗೆ ಇವು ಒಂದಾಗಿ ಸಹಕರಿಸುತ್ತವೆ. ಇವೇ ತರ್ಕ ಸ್ಟ್ರಕ್ಚರಲ್ ಫಂಕ್ಷನಲಿಸಂ ಥಿಯರಿಯಲ್ಲಿ ಕೆಲಸ ಮಾಡುತ್ತದೆ. ಸ್ಟ್ರಕ್ಚರಲ್ ಫಂಕ್ಷನಲಿಸಂ ಸಮಾಜವನ್ನು ಜೀವಸೆಲೆಯುಳ್ಳ ವ್ಯವಸ್ಥೆಗೆ ಹೋಲಿಸುತ್ತದೆ. ದೇಹದಲ್ಲಿ ಹಲವಾರು ಅಂಗಾಂಗಗಳಿರುವಂತೆ ಸಾಮಾಜಿಕ ವ್ಯವಸ್ಥೆಯೊಂದರಲ್ಲಿ ಪರಸ್ಪರ ಸಂಬಂಧಿಸಿದ ಹಲವಾರು ಉಪ-ವ್ಯವಸ್ಥೆಗಳಿರುತ್ತವೆ (ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಇತ್ಯಾದಿ ಉಪ-ವ್ಯವಸ್ಥೆಗಳು ಅಥವಾ ಸಬ್‌ಸಿಸ್ಟಮ್ಸ್‌ಗಳಿರುತ್ತವೆ). ಉಪ-ವ್ಯವಸ್ಥೆಗಳ ನಡುವಿನ ಈ ಸಂಬಂಧ ಸಂಘರ್ಷವಿಲ್ಲದ ಒಂದು ಬಗೆಯ ಸಾಮರಸ್ಯದ ಸಂಬಂಧ. ಒಂದು ಉಪ-ವ್ಯವಸ್ಥೆಯಲ್ಲಾಗುವ ಪರಿವರ್ತನೆ

ಅನಿವಾರ್ಯವಾಗಿ ಇತರ ಉಪ-ವ್ಯವಸ್ಥೆಗಳಲ್ಲೂ ಪರಿವರ್ತನೆಗೆ ಕಾರಣವಾಗುತ್ತದೆ.[೨೫] ಸ್ಟ್ರಕ್ಚರಲ್ ಫಂಕ್ಷನಲಿಸ್ಟ್‌ಗಳ ಪ್ರಕಾರ ಅಧಿಕಾರ ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಸಂಗತಿ. ರಾಜಕೀಯ ಪ್ರಕ್ರಿಯೆಗಳಿಂದ ಅಧಿಕಾರ ಉತ್ಪನ್ನವಾಗುತ್ತದೆ. ಈ ಬಗೆಯಲ್ಲಿ ಉತ್ಪನ್ನವಾಗುವ ಅಧಿಕಾರ ವಿವಿಧ ಉಪ-ವ್ಯವಸ್ಥೆಗಳ ನಡುವೆ ಮತ್ತು ಅವುಗಳೊಳಗೆ ಬರುವ ವ್ಯಕ್ತಿಗಳ ನಡುವಿನ ಸಂಬಂಧಗಳನ್ನು ಜೋಡಿಸಲು (ಇಂಟಗ್ರೇಟ್ ಮಾಡಲು) ನೆರವಾಗುತ್ತದೆ.[೨೬]

ವ್ಯವಸ್ಥೆಯೊಳಗಿರುವ ವ್ಯಕ್ತಿಗಳ ಚಟುವಟಿಕೆಗಳನ್ನು ವಿವರಿಸಲು ವಿನಿಮಯ ಸಿದ್ಧಾಂತ ವನ್ನು ಬಳಸಲಾಗಿದೆ.[೨೭] ಈ ಸಿದ್ಧಾಂತ ಪ್ರಕಾರ ವ್ಯಕ್ತಿ ಇತರರೊಂದಿಗೆ ಕೇವಲ ಒಪ್ಪಂದ ಆಧಾರಿತ ಸಂಬಂಧ ಇಟ್ಟುಕೊಳ್ಳುತ್ತಾನೆ. ಆ ಸಂಬಂಧ ಕೂಡ ತನ್ನ ವೈಯಕ್ತಿಕ ಲಾಭ ನಷ್ಟಗಳ ಲೆಕ್ಕಚಾರದಲ್ಲಿ ನಡೆಯುತ್ತದೆ ಎನ್ನುವ ಗೃಹಿತ ಇದೆ. ಭೌತಿಕ ಮತ್ತು ಸಾಂಸ್ಕೃತಿಕ ಸಂಪನ್ಮೂಲಗಳ ಪೂರೈಕೆ ಅವುಗಳ ಬೇಡಿಕೆಗಿಂತ ಕಡಿಮೆ ಪ್ರಮಾಣದಲ್ಲಿರುತ್ತದೆ. ಇಂತಹ ಕೊರತೆ ಸನ್ನಿವೇಶದಲ್ಲಿ ಈ ಸಂಪನ್ಮೂಲಗಳನ್ನು ಹೊಂದಲು ವ್ಯಕ್ತಿಗಳ ನಡುವೆ ಸ್ಪರ್ಧೆ ಅನಿವಾರ್ಯ. ಈ ಸ್ಪರ್ಧೆಯನ್ನು ಹದ್ದುಬಸ್ತಿನಲ್ಲಿಡದಿದ್ದರೆ ಒಂದು ಬಗೆಯ ಜಂಗಲ್ ರಾಜ್ಯ ಸೃಷ್ಟಿಯಾಗಬಹುದು. ಈ ಸ್ಪರ್ಧೆಯನ್ನು ಹದ್ದುಬಸ್ತಿನಲ್ಲಿಡುವ ಕೆಲಸವನ್ನು ಅಧಿಕಾರ ಮಾಡುತ್ತದೆ. ಹೀಗೆ ಬಲಪಂಥೀಯ ಸ್ಟ್ರಕ್ಚರಲ್ ಫಂಕ್ಷನಲಿಸ್ಟ್ ಥಿಯರಿಗಳಲ್ಲಿ ಅಧಿಕಾರಕ್ಕೆ ಪೋಲೀಸರ ಸ್ಥಾನವನ್ನು ನೀಡಲಾಗಿದೆ. ಅಧಿಕಾರ ಮತ್ತು ಅದರ ವಿವರಣೆ ಬಗ್ಗೆ ಮೇಕ್ಸ್ ವೇಬರ್ ಶಕ್ತಿಶಾಲಿಯಾದ ಥೀಸಿಸ್ ಮಂಡಿಸಿದ್ದ.[೨೮] ವೇಬರ್‌ನ ಥಿಸಿಸ್‌ನ ಆಧರಿಸಿ ಆತನ ಅನುಯಾಯಿಗಳು ಅಧಿಕಾರದ ಮತ್ತೊಂದು ವ್ಯಾಖ್ಯಾನವನ್ನು ಕೊಟ್ಟಿದ್ದಾರೆ. ಇಲ್ಲಿ ರಾಜಕೀಯ ಕ್ಷೇತ್ರವನ್ನು ಒಂದು ಉತ್ಪಾದನಾ ವ್ಯವಸ್ಥೆಗೆ ಹೋಲಿಸಲಾಗಿದೆ. ಆರ್ಥಿಕ ಕ್ಷೇತ್ರದಲ್ಲಿ ಜನರು ಸರಕು/ಸೇವೆಗಳನ್ನು ಬಯಸಿದಂತೆ ರಾಜಕೀಯ ಕ್ಷೇತ್ರದಿಂದ ಜನರು ನಾಯಕತ್ವ ಮತ್ತು ಸ್ಥಿರತೆಯನ್ನು ಬಯಸುತ್ತಾರೆಂದು ಗ್ರಹಿಸಲಾಗಿದೆ. ಸರಕು/ಸೇವೆ ಪಡೆಯಲು ಜನರು ಹಣ ಸಂದಾಯ ಮಾಡಿದಂತೆ ರಾಜಕೀಯ ನಾಯಕತ್ವ/ಸ್ಥಿರತೆ ಪಡೆಯಲು ಜನರು ತಮ್ಮ ಬೆಂಬಲವನ್ನು (ಮತದಾನ ಅಥವಾ ಇತರ ವಿಧಾನಗಳ ಮೂಲಕ) ವಿನಿಮಯ ಮಾಡಿಕೊಳ್ಳುತ್ತಾರೆ. ಹಣ ಮತ್ತು ಅಧಿಕಾರ ನಡುವೆ ಕೆಲವೊಂದು ಸಾಮ್ಯತೆಗಳನ್ನು ಗುರುತಿಸಲಾಗಿದೆ. ಕರೆನ್ಸಿಗಳನ್ನು ಅಚ್ಚು ಹಾಕುವಾಗ ಅದರ ಮೌಲ್ಯಕ್ಕೆ ಸರಿ ಪ್ರಮಾಣದ ಚಿನ್ನ ಇರಬೇಕೆಂಬ ಒಂದು ತಾಂತ್ರಿಕ ನಿಯಮ ಇತ್ತು. ಆದರೆ ಅಷ್ಟು ಮಾತ್ರಕ್ಕೆ ಒಂದು ಕರೆನ್ಸಿ ವಿನಿಮಯದ ಮಾಧ್ಯಮವಾಗಿ ಕೆಲಸ ಮಾಡಲು ಸಾಧ್ಯವಿಲ್ಲ. ಒಂದು ಕರೆನ್ಸಿ ವಿನಿಮಯದ ಮಾಧ್ಯಮವಾಗಿ ಕೆಲಸ ಮಾಡಬೇಕಾದರೆ ಅದನ್ನು ಆ ರೂಪದಲ್ಲಿ ಸಮಷ್ಠಿ ಒಪ್ಪಿಕೊಳ್ಳಬೇಕು. ಇದೇ ರೀತಿಯಲ್ಲಿ ಅಧಿಕಾರದ ಹಿಂದೆ ಬಲ (ಫೋರ್ಸ್) ಇದೆ. ಆದರೆ ಬಲವೇ ಅಧಿಕಾರವಲ್ಲ. ಜನರ ಬೆಂಬಲ ಅಥವಾ ಸಮಷ್ಠಿಯ ಒಪ್ಪಿಗೆ ಅಧಿಕಾರದ ಚಲಾವಣೆಗೆ ಅಗತ್ಯ. ಸಮಷ್ಠಿ ಹಾಗು ಅಧಿಕಾರದ ನಡುವೆ ಒಂದು ಬಗೆಯ ವಿನಿಮಯದ

ಸಂಬಂಧ ಕಲ್ಪಿಸಲಾಯಿತು.[೨೯] ಹೀಗೆ ಅಧಿಕಾರಕ್ಕೆ ಸಮಾಜ ವಿಜ್ಞಾನ ಎರಡನೇ ದರ್ಜೆಯ ಸ್ಥಾನವನ್ನು ನೀಡಿದೆ.

ಸ್ಥಳೀಯ ಪರಿಸರದಲ್ಲಿ ಜ್ಞಾನದ ಸ್ಥಾನಮಾನಕ್ಕೆ ಹೋಲಿಸಿದರೆ ಅಧಿಕಾರ ತುಂಬಾ ಕೆಳಸ್ಥಿತಿಯಲ್ಲಿದೆ. ಇವರೆಡರ ಕುರಿತು ಚಾಲ್ತಿಯಲ್ಲಿರುವ ಕೆಲವೊಂದು ನಿಲುವುಗಳು ಇಂದಿವೆ. ಒಂದು, ಅವರೆಡು ಪರಸ್ಪರ ವಿರುದ್ಧ ಲೋಕಗಳು ಅಥವಾ ಮೌಲ್ಯಗಳು. ಅಧಿಕಾರ ಇದ್ದಲ್ಲಿ ಜ್ಞಾನ ಇರಲು ಸಾಧ್ಯ ಇಲ್ಲ ಅಥವಾ ಜ್ಞಾನ ಇದ್ದಲ್ಲಿ ಅಧಿಕಾರ ಇರಲು ಸಾಧ್ಯವಿಲ್ಲ. ಎರಡು, ಅಧಿಕಾರ ಒಂದು ನಕರಾತ್ಮಕ ಪ್ರಕ್ರಿಯೆ. ಜ್ಞಾನ ಒಂದು ಸಕರಾತ್ಮಕ ಪ್ರಕ್ರಿಯೆ. ಮೂರು, ಅಧಿಕಾರದ ಆಸೆ, ಅದಕ್ಕಾಗಿ ಹೋರಾಟ ಇತ್ಯಾದಿಗಳು ಉತ್ತಮರು ಮಾಡುವ ಕೆಲಸ ಅಲ್ಲ; ಜ್ಞಾನದ ಆಸೆ, ಅದರ ಸಾಧನೆಗಾಗಿ ಮಾಡುವ ಪ್ರಯತ್ನ ಇವೆಲ್ಲ ಉತ್ತಮರು ಮಾಡುವ ಕೆಲಸಗಳು. ನಾಲ್ಕು, ಈ ಎಲ್ಲ ಲಕ್ಷಣಗಳಿಂದ ನಮ್ಮ ಮೌಲ್ಯ ವ್ಯವಸ್ಥೆಯಲ್ಲಿ ಅಧಿಕಾರ ಜ್ಞಾನಕ್ಕಿಂತ ಬಹಳ ಕೆಳಗಿನ ಸ್ಥಾನ ಪಡೆದಿದೆ. ಆದರೆ ಮೌಲ್ಯ ವ್ಯವಸ್ಥೆಯಲ್ಲಿ ಜ್ಞಾನಕ್ಕಿಂತ ಸಾಕಷ್ಟು ಕೆಳಮಟ್ಟದಲ್ಲಿರುವ ಅಧಿಕಾರಕ್ಕಾಗಿ ಸಾಕಷ್ಟು ಕಿತ್ತಾಟ ನಡೆಯುವುದನ್ನು ನೋಡುತ್ತೇವೆ. ಇದೊಂದು ಬಗೆಯ ದ್ವಂದತೆ ಅಥವಾ ಇಬ್ಬಂದಿತನ ಸೃಷ್ಟಿಸುತ್ತಿದೆ. ಅಧಿಕಾರವನ್ನು ನಕರಾತ್ಮಕವಾಗಿ ಕಲ್ಪಿಸಿಕೊಳ್ಳುವುದರಿಂದ ಸಮಾಜ ಹಲವಾರು ದುಷ್ಪರಿಣಾಮಗಳನ್ನು ಕೂಡ ಎದುರಿಸಬೇಕಾಗಿದೆ. ಒಂದು, ಹೆಚ್ಚು ಹೆಚ್ಚು ನೆಗೆಟೀವ್ ವ್ಯಕ್ತಿಗಳು ಅಧಿಕಾರದತ್ತ ಬಂದು ಪೊಸಿಟೀವ್ ವ್ಯಕ್ತಿಗಳು ಅಧಿಕಾರದಿಂದ ದೂರ ಸರಿಯಬಹುದು. ಎರಡು, ಅಧಿಕಾರವನ್ನು ಮತ್ತು ಅಧಿಕಾರದಲ್ಲಿರುವವರನ್ನು ನೆಗೆಟೀವ್ ಆಗಿ ಚಿತ್ರಿಸುವುದರಿಂದ ಅದರೊಳಗಿರುವ ಪೊಸಿಟೀವ್ ಎಲಿಮೆಂಟ್ಸ್‌ಗಳು ಕೂಡ ಕ್ರಮೇಣ ನೆಗೆಟೀವ್ ಆಗಿ ಪರಿವರ್ತನೆಗೊಳ್ಳುವ ಸಾಧ್ಯತೆ ಇದೆ. ಅಂದರೆ ಹೆಚ್ಚು ಹೆಚ್ಚು ನೆಗೆಟೀವ್ ವ್ಯಕ್ತಿಗಳು ಅಧಿಕರ ಸ್ಥಾನಗಳನ್ನು ಆವರಿಸಿಕೊಂಡರೆ ಕಡಿಮೆ ಸಂಖ್ಯೆಯಲ್ಲಿರುವ ಒಳ್ಳೆಯ ಜನರು ಒಂದೋ ಅಧಿಕಾರ ಸ್ಥಾನದಿಂದ ದೂರ ಸರಿಯಬೇಕು ಅಥವಾ ಬಹುತೇಕರ ಹಾದಿಯನ್ನು ತುಳಿಯಬೇಕು. ಮೂರು, ಅಧಿಕಾರ ಮತ್ತು ಅಧಿಕಾರದಲ್ಲಿರುವವರನ್ನು ನೆಗೆಟೀವ್ ಆಗಿ ನೋಡುವುದರಿಂದ ಅವರುಗಳು (ಅಧಿಕಾರದಲ್ಲಿರುವವರು) ಸಮಾಜದಿಂದ ಒಳ್ಳೆಯವರೆಂದು ಗುರುತಿಸಿಕೊಳ್ಳುವುದು ಕಷ್ಟವಾಗುತ್ತದೆ. ಇಡೀ ಸಮಾಜ ತಮ್ಮನ್ನು ಕೆಟ್ಟವರೆಂದು ಅಥವಾ ನೆಗೆಟೀವ್ ವ್ಯಕ್ತಿಗಳೆಂದು ಪರಿಗಣಿಸುವುದು ಅವರಲ್ಲೊಂದು ಬಗೆಯ ಅಭದ್ರತೆಯನ್ನು ತುಂಬುತ್ತದೆ. ಈ ಅಭದ್ರತೆಯನ್ನು ಹೋಗಲಾಡಿಸಲು ಅವರು ನಕರಾತ್ಮಕ ಮಾರ್ಗಗಳನ್ನು ಅನುಸರಿಸಬಹುದು. ಉತ್ತಮ ಸೇವೆ ನೀಡಿ ಒಳ್ಳೆಯ ಅಧಿಕಾರಿ ಎನ್ನಿಸಿಕೊಳ್ಳುವ ಸಾಧ್ಯತೆ ಇಲ್ಲವೇ ಇಲ್ಲ. ಯಾಕೆಂದರೆ ಒಟ್ಟು ಸಮಾಜ ಅಧಿಕಾರವನ್ನು ನೆಗೆಟೀವ್ ಆಗಿ ನೋಡುತ್ತದೆ. ಈ ಸಂದರ್ಭದಲ್ಲಿ ತಮ್ಮ ಇನ್‌ಸೆಕ್ಯುರಿಟಿಯನ್ನು ಹೋಗಲಾಡಿಸಲು ದುಡ್ಡು ಆಸ್ತಿ ಮುಂತಾದ ಮಾನವ ಸಂಬಂಧಗಳನ್ನು ಹೊರತುಪಡಿಸಿದ ಮೇಟಿರಿಯಲ್ ಸೆಕ್ಯುರಿಟಿಗೆ ಪ್ರಯತ್ನಿಸಬಹುದು. ಅಧಿಕಾರದ ಚಿತ್ರಣ ಮತ್ತು ಅಧಿಕಾರ

ಮತ್ತು ಜ್ಞಾನವನ್ನು ಸಂಬಂಧ ಸಕರಾತ್ಮಕ ಮುಖಗಳನ್ನು ಜನರ ಪ್ರಜ್ಞೆಯ ಭಾಗವಾಗಿಸುವುದು ಈ ಎಲ್ಲ ಸಮಸ್ಯೆಗಳಿಗೆ ಪರಿಹಾರವಾಗಬಹುದು. ಆದರೆ ಅದು ಇಂದು ಆಚರಣೆಯಲ್ಲಿರುವ ಸಮಾಜ ಸಂಶೋಧನೆಯಿಂದ ಸಾಧ್ಯವಾಗುತ್ತಿಲ್ಲ.

ಅಧಿಕಾರ ಕುರಿತಂತೆ ಥಿಯರಿ ಬೇರೆ ಪ್ರಾಕ್ಟೀಸ್ ಬೇರೆ ಎನ್ನುವ ಸ್ಥಿತಿ ಸಮಾಜಶಾಸ್ತ್ರಗಳು ಪ್ರತಿಪಾದಿಸುವ ಮೌಲ್ಯಗಳಿಗೂ ಅನ್ವಯವಾಗುತ್ತದೆ. ಸಮಾನತೆ, ಸ್ವಾತಂತ್ರ್ಯ, ಪಾರದರ್ಶಕತೆ, ಪ್ರಜಾಪ್ರಭುತ್ವ ಮೌಲ್ಯ ಇತ್ಯಾದಿಗಳನ್ನು ಸಮಾಜ ಪಠ್ಯಗಳು ಒಳಗೊಂಡಿವೆಯೆಂದು ನಂಬಲಾಗಿದೆ. ಅವುಗಳನ್ನು ಬೋಧಿಸುವ ಮೇಸ್ಟ್ರುಗಳು ಮತ್ತು ಕಲಿಯುವ ವಿದ್ಯಾರ್ಥಿಗಳು ಪಠ್ಯಗಳು ಸಾರುವ ಮೌಲ್ಯಗಳಿಗಿಂತ ಸಂಪೂರ್ಣ ಭಿನ್ನ ಮೌಲ್ಯಗಳನ್ನು ತಮ್ಮ ದಿನನಿತ್ಯದ ಬದುಕಿನಲ್ಲಿ ಆಚರಿಸುತ್ತಿರುತ್ತಾರೆ. ಮೇಲ್ವರ್ಗದವರಿಗೆ ಇಂತಹ ಒಂದು ಸ್ಥಿತಿ ಅಭಾಸ ಅನ್ನಿಸಿದಿರಬಹುದು. ಯಾಕೆಂದರೆ ಅವರದ್ದೇ ವರ್ಗದ ಮೌಲ್ಯಗಳು ನಮ್ಮ ಸಂಸ್ಕೃತಿಯ ಹೆಸರಲ್ಲಿ ದಿನನಿತ್ಯದ ಬದುಕಲ್ಲಿ ಆಚರಣೆಯಲ್ಲಿದೆ. ಶಾಲೆಯ ಶಾರದ ಪೂಜೆ, ವಸತಿ ನಿಲಯಗಳ ಸಸ್ಯಾಹಾರಿ ಊಟ, ಬಿಸಿಯೂಟಕ್ಕೆ ಮೊಟ್ಟೆಯ ಬದಲು ಹಾಲು, ಟಿವಿ ಸೀರಿಯಲ್‌ಗಳಲ್ಲಿ ಬರುವ ಪಾತ್ರಗಳ ಹೆಸರುಗಳು, ಪಬ್ಲಿಕ್ ಡೊಮೈನ್‌ಲ್ಲಿ ಇರುವವರು, ಮಂತ್ರಿಗಳು ಅಧಿಕಾರ ಸ್ವೀಕರಿಸುವಾಗ ನಡೆಸುವ ಪೂಜೆ ಪುನಸ್ಕಾರಗಳು ಇತ್ಯಾದಿಗಳಲ್ಲೇ ಸ್ಥಳೀಯ ಮೇಲ್ವರ್ಗಗಳ ಸಂಸ್ಕೃತಿಯನ್ನು ಬಿಂಬಿಸುತ್ತಿವೆ. ಮನೆಯಲ್ಲಿರುವುದನ್ನೇ ಹೊರಗು ನೋಡಿದಾಗ ಮನೆಯಲ್ಲಿದ್ದಷ್ಟೇ ಸುಖ ಇದೆ ಮತ್ತು ಆತ್ಮವಿಶ್ವಾಸ ವೃದ್ಧಿಯಾಗುತ್ತದೆ. ಆದರೆ ಕೆಳವರ್ಗದ ಜನರ ಕತೆಯೇನು? ಭಾಷೆ, ಆಹಾರ, ಉಡುಗೆ ತೊಡಗು, ದೇವರು ದಿಂಡ್ರು ಎಲ್ಲವೂ ಮನೆಯಿಂದ ಹೊರಗೆ ಹೋದಾಗ ಬದಲಾಗುತ್ತದೆ. ಅಷ್ಟು ಮಾತ್ರವಲ್ಲ ಶಾಲೆಯಲ್ಲಿ ಮತ್ತೊಂದು ಶಾಕ್-ಮನೆಯಲ್ಲೂ ಮನೆಯ ಹೊರಗು ಇಲ್ಲದನ್ನು ಶಾಲೆಯಲ್ಲಿ ಹೇಳುತ್ತಿರುತ್ತಾರೆ. ರಾಜಕೀಯ ಶಾಸ್ತ್ರದ ಮೇಸ್ಟ್ರು ಭಾರತದ ಸಂವಿಧಾನ ಪಾಠ ಮಾಡುತ್ತಾರೆ. ಸಂವಿಧಾನದ ಆರ್ಟಿಕಲ್ ೧೫ ರಿಂದ ಹತ್ತೊಂಬತ್ತರ ಪ್ರಕಾರ ಭಾರತದ ಪ್ರತಿಯೊಬ್ಬ ಪ್ರಜೆಯ ಸಮಾನರು. ಸಾರ್ವಜನಿಕ ಸ್ಥಳಗಳಲ್ಲಿ, ಶಿಕ್ಷಣದಲ್ಲಿ, ಉದ್ಯೋಗಕ್ಕೆ ಆಯ್ಕೆ ನಡೆಸುವಾಗ ಜಾತಿ, ಧರ್ಮ, ಲಿಂಗ ಇತ್ಯಾದಿಗಳ ಕಾರಣಕ್ಕಾಗಿ ಬೇಧಭಾವ ಮಾಡಬಾರದು. ಎಲ್ಲರಿಗೂ ಸಮಾನ ಅವಕಾಶ ನೀಡಬೇಕು. ಆದರೆ ವಿದ್ಯಾರ್ಥಿಗಳು ಹಳ್ಳಿಯ ಚಾದ ಅಂಗಡಿಯಿಂದ ಡೆಲ್ಲಿಯ ಪಾರ್ಲಿಮೆಂಟು ತನಕ ಜಾತಿ, ಧರ್ಮಗಳು, ಲಿಂಗ ವರ್ಗಗಳು ಕಾರುಬಾರು ಮಾಡುತ್ತಿರುವುದು ನೋಡುತ್ತಿರುತ್ತಾರೆ. ಉತ್ಪಾದನಾ ಪರಿಕರಗಳ (ಇನ್ ಪುಟ್‌ಗಳು) ಅಡ್ಡಿ ಅಂತಕಗಳಿಲ್ಲದೆ ಚಲಿಸಿದರೆ ಉತ್ತಮ ಆರ್ಥಿಕ ಪ್ರಗತಿ ಸಾಧ್ಯ ಎಂದು ಅರ್ಥಶಾಸ್ತ್ರದ ಮೇಸ್ಟ್ರು ಪಾಠ ಮಾಡುತ್ತಾರೆ. ಶ್ರಮಿಕರು ಸಂಘಟಿತರಾಗುವುದರಿಂದ ಉತ್ಪಾದನಾ ಪರಿಕರಗಳ ಅಡ್ಡಿ ಆತಂಕಗಳಿಲ್ಲದ ಚಲನೆ ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ. ಆದರೆ ಶೇಕಡಾ ಹತ್ತರಷ್ಟು ಕಾರ್ಮಿಕರು ಕೂಡ ನಮ್ಮಲ್ಲಿ ಸಂಘಟಿತರಾಗಿಲ್ಲ ಎನ್ನುವ ಸತ್ಯ ಸ್ವಲ್ಪ ಕಣ್ಣುಬಿಟ್ಟು ನೋಡಿದರು ತಿಳಿಯುತ್ತದೆ. ಕಾರ್ಮಿಕ ಸಂಘಟಗಳಿಗಿಂತ ಹೆಚ್ಚು

ಕೋಮುವಾದ ಶ್ರಮಿಕರನ್ನು ಆಯಾಯ ಕೋಮುಗಳಿಗೆ ಸೀಮಿತಗೊಳಿಸುತ್ತಿದೆ. ಇದರಿಂದಾಗ ಎಲ್ಲ ಕೋಮಿನ ಅನುಕೂಲಸ್ಥರಿಗೆ ಕಡಿಮೆ ಕೂಲಿಗೆ ಶ್ರಮಿಕರು (ಅವರವರ ಕೋಮಿನ ಜನರು) ಪೂರೈಕೆಯಾಗುವ ಸ್ಥಿತಿ ನಿರ್ಮಾಣವಾಗುತ್ತಿದೆ. ಶಿಕ್ಷಣಕ್ಕೂ ಕೌಟುಂಬಿಕ ಬದುಕಿಗೂ ನೇರ ಸಂಬಂಧ ಇದೆ ಎಂದು ಸಮಾಜಶಾಸ್ತ್ರ ಮೇಸ್ಟ್ರು ಪಾಠ ಮಾಡುತ್ತಾರೆ. ಶಿಕ್ಷಣ ಪಡೆದ ಸದಸ್ಯರಿರುವ ಕುಟುಂಬಗಳಲ್ಲಿ ಲಿಂಗಭೇದ ಇರುವುದಿಲ್ಲ. ಆದರೆ ಬಹುತೇಕ ಮನೆಗಳಲ್ಲಿ ಊಟ, ಶಿಕ್ಷಣ, ಆರೋಗ್ಯ, ಉದ್ಯೋಗ ಎಲ್ಲದರಲ್ಲೂ ಪುರುಷರ ನಂತರ ಮಹಿಳೆಗೆ ಆದ್ಯತೆ ಆಚರಣೆಯಲ್ಲಿದೆ. ಹೀಗೆ ತಳಸ್ತರದವರಿಗೆ ಪಠ್ಯಗಳಲ್ಲಿರುವ ಮೌಲ್ಯಗಳು ಹಾಗು ತಮ್ಮದೇ ಪರಿಸರದಲ್ಲಿ 'ನಮ್ಮ ಸಂಸ್ಕೃತಿಯ ಹೆಸರಲ್ಲಿ' ಕಾರುಬಾರು ಮಾಡುವ ಮೌಲ್ಯ ಗಳು ಎರಡೂ ಕೂಡ ಪರಕೀಯವಾಗುತ್ತವೆ. ಎರಡೂ ಕಡೆಗಳಲ್ಲೂ ಅವರಿಗೆ ತಮ್ಮತನ ಕಾಣುವುದಿಲ್ಲ. ಇಂತಹ ಜ್ಞಾನ ಹಾಗು ಪರಿಸರ ಅವರ ವಿಶ್ವಾಸವನ್ನು ವೃದ್ಧಿಸುವುದಕ್ಕಿಂತ ಕುಗ್ಗಿಸುವುದೇ ಹೆಚ್ಚು.

ಮೇಲಿನ ಕ್ರಮದಲ್ಲಿ ಉತ್ಪಾದಿಸಲ್ಪಟ್ಟ ಜ್ಞಾನ ಮೇಲ್ವರ್ಗಗಳ ಆಸಕ್ತಿಗಳನ್ನು ಹೆಚ್ಚು ಪ್ರತಿನಿಧಿಕರಿಸುತ್ತದೆ. ಮೇಲ್ವರ್ಗಗಳ ಮೌಲ್ಯಗಳನ್ನು ಮತ್ತು ಲೋಕದೃಷ್ಟಿಗಳನ್ನು ಪ್ರತಿಪಾದಿಸುವ ಜ್ಞಾನವನ್ನು ಹೆಚ್ಚು ಹೆಚ್ಚು ಜನಸಾಮಾನ್ಯರ ಪ್ರಜ್ಞೆಯ ಭಾಗ ಮಾಡಲಾಗುತ್ತಿದೆ. ಇದರಿಂದಾಗಿ ಯಾವುದೋ ಒಂದು ಬಗೆಯ ಸಾಮಾಜಿಕ ಸಂಬಂಧಗಳ, ಸಂಸ್ಥೆಗಳ, ಮೌಲ್ಯಗಳ ಕಲ್ಪನೆಗಳೇ ಆದರ್ಶ ಮತ್ತು ಅಂತಿಮ ಎಂದು ಬಹುತೇಕರು ಗ್ರಹಿಸುವಂತಾಗುತ್ತದೆ. ಮೇಲಿನ ಸಮಸ್ಯೆಗಳಿಂದಾಗಿ ಸಮಾಜ ವಿಜ್ಞಾನಗಳು ನೀಡುವ ಜ್ಞಾನ ಮತ್ತು ದಿನನಿತ್ಯದ ಬದುಕಿನ ನಡುವೆ ಸಂಬಂಧ ಇಲ್ಲವಾಗಿದೆ. ಸಮಾಜ ಶಾಸ್ತ್ರಗಳನ್ನು ಕೇವಲ ಡಿಗ್ರಿಗಾಗಿ ಅಧ್ಯಯನ ಮಾಡುವುದು. ಆ ಸಮಾಜ ಶಾಸ್ತ್ರಗಳು ಹೇಳುವ ರೀತಿಯಲ್ಲ ಸಮಾಜ ಇಲ್ಲ, ಅರ್ಥನೂ ಇಲ್ಲ ಮತ್ತು ರಾಜಕೀಯನೂ ಇಲ್ಲ. ಈ ಬಗೆಯ ಜ್ಞಾನ ವಿದ್ಯಾರ್ಥಿಗಳಲ್ಲಿ ಒಂದು ಕಡೆಯಿಂದ ಇಬ್ಬಂದಿತನವನ್ನು ಬೆಳೆಸಿದರೆ ಮತ್ತೊಂದು ಕಡೆಯಲ್ಲಿ ಗಳಿಸಿದ ಜ್ಞಾನದ ಅನ್ವಯಿಕೆಯನ್ನು ಕುಗ್ಗಿಸಿದೆ. ತಾವು ಬದುಕುವ ಪರಿಸರದಲ್ಲಿನ ಮೌಲ್ಯಗಳು ಮತ್ತು ತಾವು ಓದಿದ ಪಠ್ಯಗಳು ಸಾರುವ ಮೌಲ್ಯಗಳ ನಡುವೆ ಅಜಗಜಾಂತರ ವ್ಯತ್ಯಾಸ ಇದೆ. ಓದಿದ ಮೌಲ್ಯಕ್ಕಿಂತ ಸಂಪೂರ್ಣ ವಿರುದ್ಧವಾದ ಮೌಲಿಕ ಜಗತ್ತಿನಲ್ಲಿ ವ್ಯವಹರಿಸಬೇಕಾಗಿದೆ. ಸೂಕ್ಷ್ಮ ಮನಸ್ಸಿನವರಿಗೆ ಈ ವ್ಯತ್ಯಾಸಗಳು ಅರಿವಾಗುತ್ತದೆ. ಆದರೆ ಬಹುತೇಕರು ಓದಿಗೂ ಬದುಕಿಗೂ ಸಂಬಂಧ ಇಲ್ಲ; ಓದು ಏನಿದ್ದರೂ ತಮ್ಮ ಅವಶ್ಯಕತೆಯನ್ನು ಪೂರೈಸಲು ಆದಾಯದ ಒಂದು ಮೂಲ ಎನ್ನುವ ಸತ್ಯವನ್ನು ಬಹುಬೇಗ ಕಂಡುಕೊಳ್ಳುತ್ತಾರೆ. ಅಷ್ಟು ಮಾತ್ರವಲ್ಲ ಬದುಕನ್ನೆ ಎರಡು ಭಾಗಗಳಾಗಿ ಮಾಡಿಕೊಂಡು ಬದುಕಲಾರಂಭಿಸುತ್ತಾರೆ. ಓದು, ಉದ್ಯೋಗ ಮತ್ತು ಕೆಲವೊಂದು ಸಾರ್ವಜನಿಕ ವ್ಯವಹಾರಗಳಲ್ಲಿ ಶಿಕ್ಷಣದಿಂದ ಪಡೆದ ಮೌಲ್ಯಗಳು ಬಳಕೆಯಾದರೆ ಉಳಿದ ಕಡೆಗಳಲ್ಲಿ-ಖಾಸಗಿ ಬದುಕು, ಸ್ಥಳೀಯ ಪರಿಸರಗಳಲ್ಲಿ ಶಿಕ್ಷಣ ಸಾರುವ ಮೌಲ್ಯಕ್ಕಿಂತ ವಿರುದ್ಧವಾದ

ಮೌಲ್ಯ ಪ್ರಕಾರ ಬದುಕಲಾರಂಭಿಸುತ್ತಾರೆ. ಇನ್ನು ಸಮಾಜ ವಿಜ್ಞಾನಗಳು ನೀಡುವ ಜ್ಞಾನಕ್ಕೆ ಸ್ಥಳೀಯ ಅನ್ವಯಿಕೆ ಇರುವುದಿಲ್ಲ. ಸಮಾಜ ವಿಜ್ಞಾನದಲ್ಲಿ ಪಿಹೆಚ್.ಡಿ ಮಾಡಿದವರು ಕೂಡ ತಮ್ಮ ಸ್ಥಳೀಯ ಸಮಾಜ, ಅರ್ಥ, ರಾಜಕೀಯ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಸ್ಥಿತಿಯಲ್ಲಿ ಇಲ್ಲ. ರಾಜಕೀಯ ಶಾಸ್ತ್ರದ ವಿದ್ಯಾರ್ಥಿಗೆ ಪಂಚಾಯತ್ ರಾಜಕೀಯದ ಅರಿವಿರುವುದಿಲ್ಲ ಅಥವಾ ಅರಿವಿದ್ದರು ಅದರಲ್ಲಿ ಸಕ್ರಿಯವಾಗಿ ಭಾಗವಾಗಿಸುವ ನೈಪುಣ್ಯ ಇರುವುದಿಲ್ಲ. ಅರ್ಥಶಾಸ್ತ್ರದ ವಿದ್ಯಾರ್ಥಿಯ ಬೇಡಿಕೆ, ಪೂರೈಕೆ ಮೇಲಿನ ಜ್ಞಾನ, ಮಾರುಕಟ್ಟೆ ಮೇಲಿನ ಜ್ಞಾನ ಸ್ಥಳೀಯ ಜನರ ಮಾರುಕಟ್ಟೆ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ. ಹೀಗೆ ಬಹುತೇಕ ಸಮಾಜ ವಿಜ್ಞಾನಗಳು ಸ್ಥಳೀಯ ಅನ್ವಯಿಕೆ ಇಲ್ಲದೆ ಸೊರಗಿವೆ. ಬಹುತೇಕ ಸಂದರ್ಭಗಳಲ್ಲಿ ತಾತ್ವಿಕ ಅಥವಾ ಪಾಲಿಸಿ ಕೊಡುಗೆಗಳನ್ನು ನೀಡುವ ಸಂಶೋಧನೆಗಳು ಸರಕಾರದ ಪಾಲಿಸಿಯನ್ನು ವಿಮರ್ಶಿಸಿಲು ಕಾರ್ಪೋರೇಟ್ ಆಸಕ್ತಿಗಳನ್ನು ರೇಶನಲೈಸ್ ಮಾಡಲು ಬಳಕೆಯಾಗುತ್ತಿದೆ. ಇಂತಹ ಸ್ಥಿತಿಗೆ ಪರಿಹಾರವೆಂದರೆ ಈಗಿನ ಸ್ಥಿತಿಯನ್ನ ತಲೆಕೆಳಗೆ ಮಾಡಿ ನೋಡುವುದು. ಆದರೆ ಬಹುತೇಕ ಸಂಶೋಧಕರಿಗೆ ಇದು ಸಾಧ್ಯವಾಗುತ್ತಿಲ್ಲ; ಅಸಹಜವಾಗುತ್ತಿದೆ. ಇದರಿಂದಾಗಿ ತಾತ್ವಿಕ ಹಾಗೂ ಪಾಲಿಸಿ ಸಂಶೋಧನೆಯ ಹೆಸರಲ್ಲಿ ಈಗಾಗಲೇ ಸ್ಥಾಪಿತವಾದ ಹಿತಾಸಕ್ತಿಗಳನ್ನು ರಕ್ಷಿಸುವ ಕೆಲಸ ಮುಂದುವರಿಯುತ್ತಲೇ ಇರುತ್ತದೆ. ಉತ್ಪಾದಿತ ಜ್ಞಾನ ತಳಸ್ತರದ ಜನರ ಆಸಕ್ತಿಗಳನ್ನು ಪ್ರತಿಪಾದಿಸಬೇಕಾದರೆ ಈಗಿನ ಸ್ಥಿತಿಯನ್ನು ತಲೆಕೆಳಗೆ ಮಾಡಿ ನೋಡುವ ಉದ್ದೇಶವನ್ನು ಸಂಶೋಧನೆ ಹೊಂದಿರಬೇಕು.

ಜ್ಞಾನದ ಉತ್ಪಾದನೆ ಹಾಗೂ ಚಲನೆ ವರ್ಗಾಸಕ್ತಿಯೊಂದಿಗೆ ಹೊಂದಿರುವ ನೇರ ಸಂಬಂಧವನ್ನು ಹಿಂದಿನ ಅಧ್ಯಾಯದಲ್ಲಿ ನೋಡಿದ್ದೇವೆ. ಇದರಿಂದಾಗಿ ಮೇಲ್ವರ್ಗಗಳ ಆಸಕ್ತಿಗಳನ್ನು ಉಳಿಸಿ ಬೆಳೆಸುವ ಜ್ಞಾನಗಳು ಹೆಚ್ಚು ಹೆಚ್ಚು ಉತ್ಪಾದಿಸಲ್ಪಡುತ್ತಿವೆ ಮತ್ತು ಜನರತ್ತ ಒಯ್ಯಲ್ಪಡುತ್ತವೆ ಎನ್ನುವ ಅಂಶವನ್ನು ಕೂಡ ಚರ್ಚಿಸಿದ್ದೇವೆ. ಆದುದರಿಂದ ತಳವರ್ಗದ ಆಸಕ್ತಿಗಳನ್ನು ಪ್ರತಿನಿಧಿಸುವ ಜ್ಞಾನ ಉತ್ಪಾದಿಸುವುದು ಸಮಸ್ಯಾತ್ಮಕವಾಗಿರುವುದು ಮಾತ್ರವಲ್ಲ ಉತ್ಪಾದಿತ ಜ್ಞಾನವನ್ನು ತಳವರ್ಗಕ್ಕೆ ತಲುಪಿಸುವುದು ಕೂಡ ಸಮಸ್ಯಾತ್ಮಕವಾಗಿದೆ. ಈಗಾಗಲೇ ಸಂಗ್ರಹವಾದ ಆಧುನಿಕ ಹಾಗೂ ಸಾಂಪ್ರದಾಯಿಕ ಜ್ಞಾನದ (ಎಕ್ಯುಮ್ಯುಲೆಟೇಡ್ ಬಾಡಿ ಆಫ್ ನೋಲೆಡ್ಜ್) ವಿಮರ್ಶೆ ಸಂಶೋಧನೆಯ ತಾತ್ವಿಕ ಕೊಡುಗೆಯ ಚರ್ಚೆಯಲ್ಲಿ ಸಿಂಹಪಾಲು ಪಡೆಯಬೇಕಾಗಿದೆ. ಈಗಾಗಲೇ ಸಂಗ್ರಹವಾದ ಜ್ಞಾನ ಸ್ಥಾಪಿತ ಸತ್ಯದ ರೂಪದಲ್ಲಿ ಪ್ರಚಲಿತದಲ್ಲಿರುತ್ತದೆ. ಇಂತಹ ಸ್ಥಾಪಿತ ಸತ್ಯಗಳು ಸಾಮಾಜಿಕ ಮೇಲು ಕೀಳುಗಳನ್ನು, ಲಿಂಗ ಬೇಧಗಳನ್ನು, ಸಂಪನ್ಮೂಲಗಳ ಅಸಮಾನ ಹೊಂದುವಿಕೆಯನ್ನು, ಅಧಿಕಾರದ ಏರುಪೇರುಗಳನ್ನು ಸಮರ್ಥಿಸಿಕೊಳ್ಳಲು ಬಳಕೆಯಾಗುತ್ತಿವೆ. ಅಷ್ಟು ಮಾತ್ರವಲ್ಲ ಮೇಲಿನ ಎಲ್ಲ ಅಸಮಾನತೆಗಳನ್ನು ಅಮೂರ್ತಗೊಳಿಸುವಲ್ಲಿ ಈಗಾಗಲೇ ಸಂಗ್ರಹವಾದ ಜ್ಞಾನದ ಪಾತ್ರ ದೊಡ್ಡದಿದೆ. ಇಂತಹ ಜ್ಞಾನವನ್ನು ಬೆತ್ತಲೆ

ಗೊಳಿಸುವುದು ಅಸಮಾನವಾಗಿ ಹಂಚಿಕೆಯಾಗಿರುವ ಅ[illegible]ವನ್ನು ಅಲುಗಾಡಿಸಲು ಅನಿವಾರ್ಯ. ಯಾವ ವಿಧಾನಗಳಿಂದ ಜ್ಞಾನ ಸಂಗ್ರಹ ಸ[illegible]ುದೆ? ಈ ವೈಧಾನಿಕಗಳು ಸೃಷ್ಟಿಸುವ ಜ್ಞಾನ ಯಾರ ಆಸಕ್ತಿಯನ್ನು ಪ್ರತಿಪಾದಿಸುತ್ತಿವೆ? ಹೇಗೆ ಪ್ರತಿಪಾದಿಸುತ್ತಿವೆ? ಉತ್ಪಾದಿತ ಜ್ಞಾನವನ್ನು ಹೇಗೆ ಜನಸಾಮಾನ್ಯರ ಪ್ರಜ್ಞೆಯ ಭಾಗವನ್ನಾಗಿಸಲಾಗುತ್ತಿದೆ? ಇತ್ಯಾದಿ ಪ್ರಶ್ನೆಗಳಿಗೆ ಸಂಶೋಧನೆಯ ತಾತ್ವಿಕ ಕೊಡುಗೆ ಉತ್ತರಿಸಬೇಕು. ಈಗಾಗಲೇ ಸ್ಥಾಪಿತವಾದ ಆಧುನಿಕ ಹಾಗೂ ಸಾಂಪ್ರದಾಯಿಕ ಸತ್ಯಗಳನ್ನು (ಸಂಗ್ರಹವಾದ ಜ್ಞಾನವನ್ನು) ಮತ್ತು ಇಂತಹ ಜ್ಞಾನ ಪ್ರತಿಪಾದಿಸುವ ಎಲ್ಲ ಬಗೆಯ ಅಧಿಕಾರ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವ ಉದ್ದೇಶದಿಂದ ಸಂಶೋಧನೆ ನಡೆಯಬೇಕಾಗಿದೆ. ಜತೆಗೆ ಇಂತಹ ಅಧಿಕಾರ ಸಂಬಂಧಗಳನ್ನು ಹೊಸಬಗೆಯಲ್ಲಿ ರೂಪಿಸಿಕೊಳ್ಳಲು ಮತ್ತು ಹೊಸ ಬಗೆಯಲ್ಲಿ ರೂಪಿಸಿಕೊಂಡ ಜ್ಞಾನವನ್ನು ಜನರ ಪ್ರಜ್ಞೆಯ ಭಾಗವಾಗಿಸಲು ಪೂರಕವಾಗಿರುವ ವಿಧಾನಗಳನ್ನು ಕಂಡುಕೊಳ್ಳುವ ಉದ್ದೇಶವನ್ನು ಸಂಶೋಧನೆ ಹೊಂದಬೇಕಾಗಿದೆ. ಇಂತಹ ಸಂಶೋಧನೆ ಹೇಗೆ ಸಾಧ್ಯ ಎನ್ನುವ ಚರ್ಚೆಯನ್ನು ಮುಂದಿನ ಅಧ್ಯಾಯದಲ್ಲಿ ಮಾಡಿದ್ದೇನೆ.

ಕೊನೆ ಟಿಪ್ಪಣಿಗಳು

೧. ಸಂಶೋಧನ ವಿಧಾನಗಳ ಮೇಲಿನ ಕಮ್ಮಟದ ಸಂದರ್ಭದಲ್ಲಿ ಯಾಕೆ ಸಂಶೋಧನೆ ಎನ್ನುವ ಪ್ರಶ್ನೆಗೆ ಆರಂಭಿಕ ಸಂಶೋಧಕರು ನೀಡಿರುವ ಉತ್ತರಗಳು ಇವೆಲ್ಲ.

೨. ಈ ಕುರಿತ ಹೆಚ್ಚಿನ ವಿವರಗಳಿಗೆ ಚಂದ್ರ ಪೂಜಾರಿ, *ಸಮಾಜ ಸಂಶೋಧನೆ*, ಪ್ರಸಾರಾಂಗ : ಕನ್ನಡ ವಿಶ್ವವಿದ್ಯಾಲಯ, ೨೦೦೫, ಚಂದ್ರ ಪೂಜಾರಿ, *ಸಂಶೋಧಕರು ಮತ್ತು ಕ್ಷೇತ್ರಕಾರ್ಯ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೫, ಪುಸ್ತಕಗಳನ್ನು ನೋಡಬಹುದು.

೩. ವಿಜ್ಞಾನದಲ್ಲಿ ಫಂಡಮೆಂಟಲ್ ರಿಸರ್ಚ್ ಮತ್ತು ಎಪ್ಲೈಡ್ ರಿಸರ್ಚ್ ಎನ್ನುವ ವಿಂಗಡನೆಗಳು ಸಮಾಜ ವಿಜ್ಞಾನದಲ್ಲಿ ಥಿಯರೇಟಿಕಲ್ ರಿಸರ್ಚ್ ಮತ್ತು ಪಾಲಿಸಿ ರಿಸರ್ಚ್ ಎನ್ನುವ ರೂಪ ಪಡೆದಿವೆ. ಸಂಶೋಧನೆಯ ಸಾಂಪ್ರದಾಯಿಕ ನಿಲುವಿನ ಅನುಸಾರ ಈ ಬಗೆಯ ವಿಂಗಡನೆಗಳು ಅಗತ್ಯ. ಥಿರೆಟಿಕಲ್ ರಿಸರ್ಚ್‌ಗಳಿಂದ ಊಹೆಗಳನ್ನು ರೂಪಿಸಿಕೊಂಡು ಅವುಗಳನ್ನು ದಿನನಿತ್ಯದ ಬದುಕಿನೊಂದಿಗೆ ಹೋಲಿಸಿ ನೋಡಲಾಗುವುದು ಅಥವಾ ಆ ಊಹೆಗಳನುಸಾರ ದಿನನಿತ್ಯದ ಬದುಕು ಇದೆಯೇ ಎಂದು ಪರೀಕ್ಷಿಸಲಾಗುವುದು. ಊಹೆಗಳನುಸಾರ ದಿನನಿತ್ಯದ ಬದುಕು ಇಲ್ಲದಿದ್ದರೆ ಊಹೆ ಸರಿಯಲ್ಲ ಮತ್ತು ಥಿಯರಿ ಕೂಡ ಮಾರ್ಪಾಟುಗೊಳ್ಳಬೇಕು ಎನ್ನುವ ತೀರ್ಮಾನಕ್ಕೆ ಬರಲಾಗುವುದು. ಆದರೆ ಇಂದು ಈ ಬಗೆಯ ಸಂಶೋಧನೆಗಳಿಗೆ ವಿಶೇಷ ಪುರಸ್ಕಾರ ಇಲ್ಲ. ಇವುಗಳ ಬದಲು ದಿನನಿತ್ಯದ ಬದುಕಿನಿಂದ ಊಹೆಗಳನ್ನು ರೂಪಿಸಿಕೊಂಡು ಅವುಗಳನ್ನು ಬೇರೆ ಬೇರೆ ಸಂದರ್ಭ ಮತ್ತು ಕಾಲದಲ್ಲಿ ಅನ್ವಯಿಸುತ್ತಾ ಜನರಲೈಸೇಶನ್‌ಗೆ ಪ್ರಯತ್ನಿಸುವುದು ಅಥವಾ ಥಿಯರೈಸೇಶನ್‌ಗೆ ಪ್ರಯತ್ನಿಸುವುದು ಇಂದಿನ ಸಂಶೋಧನೆಯ ತಿರುಳು. ಹೆಚ್ಚಿನ ವಿವರಗಳಿಗೆ, ಕಾಥಿ ಶರ್ಮೇಜ್, *ಕನ್‌ಸ್ಟ್ರಕ್ಟಿಂಗ್ ಗ್ರೌಂಡೆಡ್ ಥಿಯರಿ*, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೨೦೦೬, ವಿಕಿ ಎಲ್ ಪ್ಲಾನೊ ಕ್ಲರ್ಕ್ ಅಂಡ್ ಜಾನ್ ಡಬ್ಲ್ಯು ಕ್ರಾಸ್ ವೆಲ್, *ದಿ ಮಿಕ್ಸ್‌ಡ್ ಮೆಥಡ್ ರೀಡರ್*, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೨೦೦೮ ಪುಸ್ತಕಗಳನ್ನು ನೋಡಬಹುದು.

೪. ಬೆನೆಡಿಕ್ಟ್ ಆಂಡರ್ ಸನ್ ತನ್ನ ಪುಸ್ತಕದಲ್ಲಿ(*ಇಮೇಜಿಂನ್ಡ್ ಕಮ್ಯುನಿಟೀಸ್ - ರಿಫ್ಲೇಕ್ಷನ್ಸ್ ಆನ್ ದಿ ಓರಿಜಿನ್ ಆಂಡ್ ಸ್ಪೆಡ್ ಆಫ್ ನೇಶನಲಿಸಂ*, ಲಂಡನ್, ವಾರ್ಸೋ, ೧೯೮೩) ರಾಷ್ಟ್ರೀಯತೆ

ಯನ್ನು ಒಂದು ಭಾಷೆ, ಒಂದು ಧರ್ಮ ಒಂದು ಆಸಕ್ತಿಯ ದೃಷ್ಟಿಯಿಂದ ವ್ಯಾಖ್ಯಾನಿಸಿದ್ದಾನೆ. ಈ ನಿಲುವು ಬದಲಾಗಿ ಹಲವು ಧರ್ಮ, ಹಲವು ಭಾಷೆಗಳು ಮತ್ತು ಹಲವು ಆಸಕ್ತಿಗಳಿರುವ ರಾಷ್ಟ್ರಗಳ ಕಲ್ಪನೆಗಳು ಚರ್ಚೆಗೆ ಬಂದವು ವಿವಿಧ ಆಸಕ್ತಿಗಳನ್ನು ಪ್ರತಿನಿಧೀಕರಿಸಲು ಸರಕಾರದ ಸ್ತರಗಳನ್ನು ಹೆಚ್ಚಿಸುವ ಅಗತ್ಯವನ್ನು ಮನಗಾಣಲಾಯಿತು. ಜನಸಾಮಾನ್ಯರು ನಿಜವಾಗಿಯೂ ಅಧಿಕಾರಹೊಂದಬೇಕಾದರೆ ನಿಜವಾದ ವಿಕೇಂದ್ರೀಕರಣ ನಡೆಯಬೇಕಾಗಿದೆ ಎನ್ನುವ ನಿಲುವುಗಳು ನಂತರ ಹೆಚ್ಚು ಹೆಚ್ಚು ಕೇಳಬರಲಾರಂಭಿಸಿವೆ. ಇಂತಹ ನಿಲುವುಗಳನ್ನು ಪ್ರತಿಪಾದಿಸುವ ಮುಖ್ಯ ಬರಹಗಳು ಇಂತಿವೆ. ಮೆಕಿಂತೋಶ್, 'ಕ್ವೆಶ್ಚನಿಂಗ್ ದ ಸ್ಟೇಟ್', ವೈಟ್ಸ್, ಮೆಕಿಂತೋಶ್ ಮತ್ತು ಹೆವಿಟ್(ಸಂ). *ಡೆವಲಪ್‌ಮೆಂಟ್ ಪಾಲಿಸಿ ಅಂಡ್ ಪಬ್ಲಿಕ್ ಆ್ಯಕ್ಷನ್*, ಆಕ್ಸ್‌ಫರ್ಡ್ : ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೨, ಪ್ರಣಾಬ್ ಬರ್ಧನ್, 'ಡಿಸೆಂಟ್ರಲೈಸೇಶನ್ ಆಫ್ ಗವರ್ನೆನ್ಸ್ ಅಂಡ್ ಡೆವಲಪ್‌ಮೆಂಟ್', *ಜರ್ನಲ್ ಆಫ್ ಎಕಾನಮಿಕ್ ಪರ್ಸ್‌ಪೆಕ್ಟಿವ್* ಈ ವಾ.೧೬, ನಂ.೪, ೨೦೦೨. ಇನ್ ವಿನೋದ್ ವ್ಯಾಸುಲು, 'ಟ್ರಾನ್ಸ್‌ಫಾರ್‌ಮೇಶನ್ ಇನ್ ಗವರ್ನೆನ್ಸ್ ಸಿನ್ಸ್ ೧೯೯೦ಸ್ - ಸಮ್ ರಿಫ್ಲೆಕ್ಷನ್ಸ್'. *ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ*, ವಾ.೩೯. ನಂ.೨೩, ಜೂನ್ ೨೦೦೪, ಪು.೨೩೭೭-೮೫. ವಿನೋದ್ ವ್ಯಾಸುಲು, 'ಟ್ರಾನ್ಸ್ ಫಾರ್ ಮೇಶನ್ ಇನ್ ಗವರ್ನೆನ್ಸ್ ಸಿನ್ಸ್ ೧೯೯೦ಸ್- ಸಮ್ ರಿಫ್ಲೆಕ್ಷನ್ಸ್'. *ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ*, ವಾ.೩೯. ನಂ.೨೩, ಜೂನ್ ೨೦೦೪, ಪು.೨೩೭೭-೮೫

೫. ಈ ಬಗೆಯ ಆಧುನೀಕರಣದ ವಿಮರ್ಶೆಗೆ ಈ ಕೆಳಗಿನ ಪುಸ್ತಕಗಳನ್ನು ನೋಡಬಹುದು. ಉಪೇಂದ್ರ ಬಕ್ಷಿ ಅಂಡ್ ಬಿಕು ಪರೇಕ್ (ಸಂ). *ಕ್ರೈಸಿಸ್ ಅಂಡ್ ಚೇಂಜ್ ಇನ್ ಕಾಂಟೆಂಪರರಿ ಇಂಡಿಯಾ*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಷನ್ಸ್ , ೧೯೯೫. ಪಾರ್ಥ ಚಟರ್ಜಿ, *ದಿ ಪಾರ್ಥ ಚಟರ್ಜಿ ಒಮ್ನಿಬಸ್*, ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯುನಿರ್ವಸಿಟಿ ಪ್ರೆಸ್, ೧೯೯೯ ಮತ್ತು ಪ್ರಣಾಬ್ ಬರ್ಧನ್, ಪೊಲಿಟಿಕಲ್ ಎಕಾನಮಿ ಆಫ್ ಡೆವಲಪ್‌ಮೆಂಟ್ ಇನ್ ಇಂಡಿಯಾ. ಆಕ್ಸ್‌ಫರ್ಡ್: ಆಕ್ಸ್‌ಫರ್ಡ್ ಯುನಿರ್ವಸಿಟಿ ಪ್ರೆಸ್, ೧೯೮೪.

೬. ರಾಷ್ಟ್ರೀಯ ಮಾರುಕಟ್ಟೆಯನ್ನು ಅಂತರಾಷ್ಟ್ರೀಯ ಮಾರುಕಟ್ಟೆಯೊಂದಿಗೆ ಜೋಡಿಸುವ ಕೆಲಸ ಇನ್ನೂ ಜೋರಾಗಿ ನಡೆಯಿತು. ದುರಂತವೆಂದರೆ ಬಿಜೆಪಿ ತನ್ನ ಹಿಂದೂ ರಾಷ್ಟ್ರೀಯತೆಯ ಸಾರ್ವಭೌಮತ್ವವನ್ನು ಜಗತ್ತಿಗೆ ಸಾರಲು ಸ್ಫೋಟಿಸಿದ ನ್ಯೂಕ್ಲಿಯರ್ ಬಾಂಬ್ ಪರದೇಶಿ ಬಂಡವಾಳದ ಮೇಲಿನ ನಿಯಂತ್ರಣವನ್ನು ಇನ್ನೂ ಸಡಿಲಿಸುವಂತೆ ಮಾಡಿ ನಮ್ಮ ಆರ್ಥಿಕ ಸಾರ್ವಭೌಮತ್ವವನ್ನು ಪ್ರಶ್ನಿಸುವ ಸ್ಥಿತಿ ನಿರ್ಮಾಣವಾಯಿತು. ಈ ಬಾಂಬ್ ಎಬ್ಬಿಸಿದ ರಾಡಿಯಿಂದ ಹೊರಬರಲು ಹಲವಾರು ಸವಲತ್ತುಗಳನ್ನು ಪರದೇಶಿ ಬಂಡವಾಳಕ್ಕೆ ನೀಡಬೇಕಾಯಿತು. ಆಂತರಿಕವಾಗಿ ಇಂಡಿಯನ್ ಎಲೆಕ್ಟ್ರಿಸಿಟಿ ಏಕ್ಟ್ ೧೯೧೦ ಮತ್ತು ಎಲೆಕ್ಟ್ರಿಸಿಟಿ ಸಪ್ಲಾಯಿಸ್ ಏಕ್ಟ್ ೧೯೪೮ಗಳನ್ನು ತಿದ್ದುಪಡಿ ಖಾಸಗಿ ಬಂಡಾಳ ಪಾಲುಗೊಳ್ಳಲು ಅವಕಾಶ ಮಾಡಿಕೊಡಲಾಯಿತು. ದಿ ಅರ್ಬನ್ ಲ್ಯಾಂಡ್(ಸೀಲಿಂಗ್ ಅಂಡ್ ರೆಗ್ಯುಲೇಶನ್) ೧೯೭೬ನ್ನು ರದ್ದುಗೊಳಿಸಿ ದುಡ್ಡಿದ್ದವರು ಎಷ್ಟು ಬೇಕಾದರು ರಿಯಲ್ ಎಸ್ಟೇಟ್ ವ್ಯಾಪಾರದಲ್ಲಿ ವಿನಿಯೋಜಿಸಲು ವ್ಯವಸ್ಥೆ ಮಾಡಲಾಯಿತು. ಹಲವಾರು ಸರಕುಗಳ ಆಮದು ಮೇಲೆ ಇದ್ದ ನಿರ್ಬಂಧವನ್ನು ತೆಗೆದು ಹಾಕಲಾಯಿತು ಹೀಗೆ ಹಲವಾರು ಕ್ರಮಗಳ ಮೂಲಕ ಆಂತರಿಕ ಬಂಡವಾಳದ ವಿನಿಯೋಜನೆಗೆ ಅವಕಾಶ ಕಲ್ಪಿಸಲಾಯಿತು. ಈ ಮಾಹಿತಿಗಳ ಮೂಲ ಸುಮಿತ್ ಸರ್ಕಾರ್, 'ದಿ ಬಿ.ಜೆ.ಪಿ ಬಾಂಬ್ ಅಂಡ್ ಎಸ್ಪೆಕ್ಟ್ಸ್ ಆಫ್ ನೇಶನಲಿಸಂ'. *ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ*, ವಾಲ್ಯೂಮ್ ೩೩, ನಂ.೨೭, ೧೯೯೮, ಚಿರಂಜೀಬ್ ಸೇನ್, 'ದಿ ಬಜೆಟ್ ಗವರ್ನಮೆಂಟ್ ಸ್ಟೈಲ್

ಅಂಡ್ ಸಸ್ಟೇಯಿನೆಬಿಲಿಟಿ ಆಫ್ ಎಕಾನಮಿಕ್ ಡೆವಲಪ್‌ಮೆಂಟ್ ಇನ್ ಇಂಡಿಯಾ', *ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ*, ವಾಲ್ಯೂಮ್ ೩೩, ನಂ.೪೫, ೧೯೯೮ ಮತ್ತು, ಗವರ್ನರ್‌ಮೆಂಟ್ ಆಫ್ ಇಂಡಿಯಾ, ಎಕಾನಮಿಕ್ ಸರ್ವೇ- ೧೯೯೮-೯೯, ನ್ಯೂಡೆಲ್ಲಿ: ಮಿನಿಸ್ಟ್ರಿ ಆಫ್ ಫಿನಾನ್ಸ್, ೧೯೯೯.

೭. ಬೆನೆಡಿಕ್ಟ್‌ನ ನಿಲುವನ್ನು ಪಾರ್ಥ ಚಟರ್ಜಿ ಭಾರತದ ಅನುಭವವನ್ನು ಗಮನದಲ್ಲಿಟ್ಟುಕೊಂಡು ಕಟುವಾಗಿ ಟೀಕಿಸಿದ್ದಾರೆ. ಹಲವು ಭಾಷೆ, ಹಲವು ಧರ್ಮಗಳಿರುವುದು ಭಾರತದಂತಹ ದೇಶದಲ್ಲಿ ಸಾಮಾನ್ಯ ಸಂಗತಿ. ಹೀಗಿದ್ದುಕೊಂಡು ಒಂದು ರಾಷ್ಟ್ರವನ್ನು ಕಟ್ಟಿಕೊಳ್ಳಬಹುದೆಂದು ಪಾರ್ಥ ಚಟರ್ಜಿ, ಹೋಸ್ ಇಮೇಜ್ನ್ಡ್ ಕಮ್ಯುನಿಟಿ, ಎನ್ನುವ ತಮ್ಮ ಲೇಖನದಲ್ಲಿ ವಾದಿಸುತ್ತಾರೆ. ಈ ಲೇಖನ ಅವರ ಮೂರು ಪುಸ್ತಕಗಳ ಸಂಗ್ರಹ, *ಪಾರ್ಥಚಟರ್ಜಿ ಬಿಮ್ನಿಬಸ್* (ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯುನಿವರ್ಸಿಟಿ, ೧೯೯೯) ಎನ್ನುವ ಪುಸ್ತಕದಲ್ಲಿ ಪ್ರಕಟವಾಗಿದೆ.

೮. ಈ ಕೆಳಗಿನ ಪುಸ್ತಕಗಳನ್ನು ನೋಡಬಹುದು. ರುಡಾಲ್ಫ್ ಅಂಡ್ ಸುಸಾನ್ ಹೋಬರ್ ರುಡಾಲ್ಫ್, *ಇನ್ ಪರ್‌ಸ್ಯೂಟ್ ಆಫ್ ಲಕ್ಷ್ಮಿ-ದಿ ಪೊಲಿಟಿಕಲ್ ಎಕಾನಮಿ ಆಫ್ ಇಂಡಿಯನ್ ಸ್ಟೇಟ್*, ಲಂಡನ್ : ಚಿಕಾಗೋ ಯುನಿರ್ವಸಿಟಿ ಪ್ರೆಸ್, ೧೯೮೭, ಸುಗತ ಬೋಸ್ ಅಂಡ್ ಆಯೇಶ ಜಲಾಲ್(ಸಂ), *ನೇಶನಲಿಸಂ, ಡೆಮಾಕ್ರಸಿ ಅಂಡ್ ಡೆವಲಪ್ ಮೆಂಟ್-ಸ್ಟೇಟ್ ಅಂಡ್ ಪೊಲಿಟಿಕ್ಸ್ ಇನ್ ಇಂಡಿಯಾ*, ನ್ಯೂಡೆಲ್ಲಿ: ಆಕ್ಸ್ ಫರ್ಡ್ ಯುನಿರ್ವಸಿಟಿ ಪ್ರೆಸ್, ೧೯೯೯.

೯. ನಮ್ಮಲ್ಲಿ ರೂಪುಗೊಂಡ ಮಧ್ಯಮ ವರ್ಗ ಮತ್ತು ಅದರ ಗುಣಲಕ್ಷಣಗಳ ಬಗ್ಗೆ ಹೆಚ್ಚಿನ ವಿವರಗಳಿಗೆ ಪವನ್ ಕೆ. ವರ್ಮ, *ದಿ ಗ್ರೇಟ್ ಇಂಡಿಯನ್ ಮಿಡ್ಲ್ ಕ್ಲಾಸ್*, ನ್ಯೂಡೆಲ್ಲಿ : ಪೆಂಗ್ವಿನ್ ಬುಕ್ಸ್, ೧೯೯೮ ಪುಸ್ತಕವನ್ನು ನೋಡಬಹುದು. ಇಂಟರ್ ನೇಶನಲ್ ಫುಡ್ ಪಾಲಿಸಿ ರಿಸರ್ಚ್ ಇನ್ ಸ್ಟಿಟ್ಯುಟ್‌ನವರು ೨೦೦೮ರಲ್ಲಿ ಇಂಟರ್ ನೇಶನಲ್ ಹಂಗರ್ ಇಂಡೆಕ್ಸ್ ವೊಂದನ್ನು ಸಿದ್ಧಪಡಿಸಿದ್ದರು. ಆ ಇಂಡೆಕ್ಸ್ ಪ್ರಕಾರ ಅತೀ ಶ್ರೀಮಂತ ರಾಜ್ಯವೆಂದು ಖ್ಯಾತಿ ಪಡೆದ ಪಂಜಾಬ್‌ನ ಸ್ಥಾನ ಹೊಂಡರಸ್, ವಿಯೆಟ್ನಾಂ ದೇಶಗಳಿಗಿಂತ ಕೆಳಗಿನ ಸ್ಥಾನದಲ್ಲಿದೆ. ಮಧ್ಯಪ್ರದೇಶ ಪ್ರಪಂಚದಲ್ಲೇ ಅತಿ ಬಡದೇಶಗಳೆಂದು ಗುರುತಿಸಿರುವ ಇಥೋಪಿಯಾ, ಛಾಡ್ ದೇಶಗಳಿಗೆ ಸಮವಾಗಿದೆ. ಸುಮಾರು ೨೦೦ ಮಿಲಿಯಕ್ಕಿಂತಲೂ ಹೆಚ್ಚಿನ ಸಂಖ್ಯೆ ಜನರು ನಮ್ಮಲ್ಲಿ ಆಹಾರ ಕೊರತೆಯಿಂದ ಬಳಲುತ್ತಿದ್ದಾರೆ. ಸುಭಾಷ್ ಚೋಪ್ರಾ, 'ಹೋಲ್ಡಿಂಗ್ ದಿ ಸ್ಟೇಟ್ ಎಕೌಂಟೇಬಲ್ ಫಾರ್ ಹಂಗರ್', *ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ*, ವಾಲ್ಯೂಮ್ XLIV, ನಂ.೩೩, ಆಗೋಸ್ಟ್ ೨೧, ೨೦೦೯, ಪು.೮-೧೩

೧೦. ನಮ್ಮಲ್ಲಿನ ಬಡತನದ ಬಗ್ಗೆ ಹಲವಾರು ವರದಿಗಳು, ಸಂಶೋಧನೆಗಳು ಮಾಹಿತಿ ನೀಡುತ್ತಿವೆ. ಅರ್ಜುನ್ ಸೇನ್ ಗುಪ್ತಾ, (ಚೆಯರ್ ಮೆನ್, ನೇಶನಲ್ ಕಮಿಶನ್ ಫಾರ್ ಎಂಟರ್ ಪ್ರೈಸೆಸ್ ಇನ್ ದಿ ಅನ್‌ಆರ್ಗನೈಸ್‌ಡ್ ಸೆಕ್ಟರ್, ನ್ಯೂಡೆಲ್ಲಿ: ಗವರ್ನ್‌ಮೆಂಟ್ ಇಂಡಿಯಾ, ೨೦೦೮) ಪ್ರಕಾರ ಭಾರತದ ಸುಮಾರು ಶೇ.೮೦ರಷ್ಟು ಜನ ದಿನಕ್ಕೆ ರೂ.೨೦ಕ್ಕಿಂತ ಕಡಿಮೆ ಆದಾಯ ಹೊಂದಿದ್ದಾರೆ. ಇಷ್ಟು ಕನಿಷ್ಟ ಆದಾಯದಿಂದ ಯಾವ ಮಟ್ಟದ ಜೀವನ ಸಾಗಿಸಬಹುದು? ಇತ್ತೀಚಿನ ದಿನಗಳಲ್ಲಿ ಬಡವರನ್ನು ಗುರುತಿಸುವ ಸಮಸ್ಯೆ ಬಗ್ಗೆ ಚರ್ಚೆ ಹೆಚ್ಚು ನಡೆಯುತ್ತಿದೆ. ನ್ಯೂಕ್ಲಿಯರ್ ಪವರ್ ಹೊಂದಿರುವ, ಸೆಟಿಲೈಟ್ ಹಾರಿಸಿರುವ, ವಿಜ್ಞಾನ ತಂತ್ರಜ್ಞಾನಗಳಲ್ಲಿ ಮಂಚೂಣಿಯಲ್ಲಿರುವ ಒಂದು ದೇಶದಲ್ಲಿ ಬಡತನವನ್ನು ಮಾಪನ ಮಾಡುವ ಪರಿಪೂರ್ಣವಾದ ಸೂಚ್ಯಾಂಕಗಳನ್ನು ವೃದ್ಧಿಪಡಿಸಲು ಸಾಧ್ಯವಾಗಿಲ್ಲ ಎನ್ನುವುದು ನಮ್ಮ ಸಂಶೋಧನೆಗಳ ಆದ್ಯತೆಗಳನ್ನು ತೋರಿಸುತ್ತದೆ.

೧೧. ಕರ್ನಾಟಕದ ದಲಿತರ, ಬುಡಕಟ್ಟು ಜನರ ಸ್ಥಿತಿಗತಿಗಳ ಅಂಕಿ ಅಂಶಗಳಿಗೆ ಈ ಕೆಳಗಿನ ವರದಿಗಳನ್ನು ನೋಡಬಹುದು. ಕರ್ನಾಟಕ ಸರಕಾರ, ಮಾವನ ಅಭಿವೃದ್ಧಿ ವರದಿ - ೨೦೦೫, ಬೆಂಗಳೂರು, ಪ್ಲಾನಿಂಗ್ ಅಂಡ್ ಸ್ಟೆಟಿಸ್ಟಿಕ್ಸ್ ಇಲಾಖೆ, ೨೦೦೬, ಮನೋಹರ್ ಯಾದವ್, ಸೋಶಿಯೋ ಎಕಾನಮಿಕ್ ಸರ್ವೇ ಆಫ್ ಶೆಡ್ಯುಲ್ಡ್ ಕಾಸ್ಟ್ಸ್ ಅಂಡ್ ಶೆಡ್ಯುಲ್ಡ್ ಟ್ರೈಬ್ಸ್ ಇನ್ ಕರ್ನಾಟಕ, ಬೆಂಗಳೂರು : ಇನ್‌ಸ್ಟಿಟ್ಯೂಟ್ ಫಾರ್ ಸೋಶಿಯಲ್ ಅಂಡ್ ಎಕಾನಮಿಕ್ ಚೇಂಜ್, ೨೦೦೩.

೧೨. ಕರ್ನಾಟಕದ ಗ್ರಾಮೀಣ ಮತ್ತು ನಗರದ ಕುಟುಂಬಗಳ ಅನುಭೋಗ, ಆದಾಯ, ಶಿಕ್ಷಣ, ಆರೋಗ್ಯ ಇತ್ಯಾದಿಗಳಲ್ಲಿ ಸಾಕಷ್ಟು ಅಂತರವಿದೆ. ಈ ವ್ಯತ್ಯಾಸ ರಾಜ್ಯದ ಎಲ್ಲ ಪ್ರದೇಶಗಳಲ್ಲೂ ಒಂದೇ ಇದೆ ಎನ್ನಲಾಗುವುದಿಲ್ಲ. ಬೆಂಗಳೂರು, ಅರ್ಬನ್, ಕೋಸ್ಟಲ್ ಕರ್ನಾಟಕ ಮುಂತಾದ ಪ್ರದೇಶಗಳಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ಅಭಿವೃದ್ಧಿ ಅಂತರ ಸ್ವಲ್ಪ ಕಡಿಮೆ ಪ್ರಮಾಣದಲ್ಲಿದ್ದರೆ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಗ್ರಾಮೀಣ ಮತ್ತು ನಗರಗಳ ನಡುವಿನ ಅಭಿವೃದ್ಧಿ ಅಂತರ ದೊಡ್ಡ ಪ್ರಮಾಣದಲ್ಲಿದೆ. ರಾಜ್ಯದೊಳಗಿನ ಪ್ರದೇಶಗಳಲ್ಲಿನ ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವಿನ ಅಭಿವೃದ್ಧಿ ಅಂತರಕ್ಕೆ ಸಂಬಂಧಿಸಿದ ಅಂಕಿ ಅಂಶಗಳನ್ನು ಕರ್ನಾಟಕ ಸರಕಾರ ಪ್ರಕಟಿಸಿರುವ ಮಾನವ ಅಭಿವೃದ್ಧಿ ವರದಿ ೨೦೦೫ (ಬೆಂಗಳೂರು: ಯೋಜನಾ ಇಲಾಖೆ ೨೦೦೬)ರಲ್ಲಿ ನೋಡಬಹುದು. ದೇಶದ ಇತರ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕದಲ್ಲಿರುವ ಗ್ರಾಮೀಣ ಮತ್ತು ನಗರ ಪ್ರದೇಶಗಳ ಅಭಿವೃದ್ಧಿ ಅಂತರಕ್ಕೆ ಸಮಬಂಧಿಸಿದ ಅಂಕಿ ಅಂಶಗನ್ನು ಶ್ರೀಧರ್ ಕುಂದ್, ಪವರ್ಟಿ, ಇನ್‌ಈಕ್ವಾಲಿಟಿ ಅಂಡ್ ಸೋಶಿಯಲ್ ಡೆವಲಪ್‌ಮೆಂಟ್ ಇನ್ ರೂರಲ್ ಇಂಡಿಯಾ-ಎನ್ ಇಂಟರ್ ಸ್ಟೇಟ್ ಎನಾಲಿಸೀಸ್ ಆಫ್ ಟ್ರೆಂಡ್ಸ್ ಅಂಡ್ ಪೆಟರ್ನ್ಸ್ ಇನ್ ದಿ ಪಿರಿಯೆಡ್ ಆಫ್ ಗ್ಲೋಬಲೈಶನ್ (ಪೇಪರ್ ಪ್ರಸೆಂಟೆಡ್ ಇನ್.ಎನ್.ಐ ಆರ್.ಡಿ., ಫೌಂಡೇಶನ್ ಡೇ ಸೆಮಿನಾರ್, ನವೆಂಬರ್ ೨೦೦೫) ಪ್ರಬಂಧದಿಂದ ಪಡೆಯಲಾಗಿದೆ.

೧೩. ವಿವರಗಳಿಗೆ ಜೋಸೆಫ್ ಸ್ಟಿಲ್ಜ್, *ಗ್ಲೋಬಲೈಸೇಶನ್ ಅಂಡ್ ಇಟ್ಸ್ ಡಿಸ್‌ಕಂಟೆಂಟ್ಸ್,* ನ್ಯೂಡೆಲ್ಲಿ: ಪೆಂಗ್ವಿನ್ ಬುಕ್ಸ್, ೨೦೦೨ ಪುಸ್ತಕ ನೋಡಬಹುದು.

೧೪. ಹಲವು ಭಾಷೆಗಳು, ಹಲವು ಧರ್ಮಗಳು ಇರುವುದು ಮಾತ್ರವಲ್ಲ ಹಲವು ಆಸಕ್ತಿಗಳು ಇವೆ ಮತ್ತು ಇವುಗಳನ್ನು ಪ್ರಭುತ್ವ ಮಾತ್ರ ಈಡೇರಿಸಲು ಸಾಧ್ಯವಿಲ್ಲ ಎನ್ನುವ ನಿಲುವುಗಳು ಚಾಲ್ತಿಗೆ ಬಂದವು. ಇವುಗಳನ್ನು ಸಂಶೋಧಕರು ಚಾಲ್ತಿಗೆ ತರುವುದರ ಜತೆಗೆ ವರ್ಲ್ಡ್‌ಬ್ಯಾಂಗ್ ಹೆಚ್ಚು ಮುತುವರ್ಜಿಯಿಂದ ಮುಂಚೂಣಿಗೆ ತಂದಿದೆ (ಜೆ.ಟೋಯೆ, *ಡೈಲೆಮಾಸ್ ಆಫ್ ಡೆವಲಪ್‌ಮೆಂಟ್ ರಿಪ್ಲೆಕ್ಷನ್ಸ್ ಆನ್ ದಿ ಕೌಂಟರ್ ರೆವೋಲ್ಯೂಶನ್ ಇನ್ ಡೆವಲಪ್‌ಮೆಂಟ್ ಎಕಾನಮಿಕ್ಸ್,* ಆಕ್ಸ್‌ಫರ್ಡ್: ಬ್ಲೇಕ್‌ವೆಲ್, ೧೯೯೩: ವರ್ಲ್ಡ್‌ಬ್ಯಾಂಕ್, *ಸ್ಟ್ರೆಂಥನಿಂಗ್ ಲೋಕಲ್ ಗವರ್ನ್‌ಮೆಂಟ್ಸ್ ಇನ್ ಸಬ್ ಸಹರಾ ಆಫ್ರಿಕಾ,* ವಾಶಿಂಗ್‌ಟನ್ ಡಿ.ಸಿ: ವರ್ಲ್ಡ್‌ಬ್ಯಾಂಕ್, ೧೯೯೦)

೧೫. ವಿವರಗಳಿಗೆ ಜೋಸೆಫ್ ಸ್ಟಿಲ್ಜ್, *ಗ್ಲೋಬಲೈಸೇಶನ್ ಅಂಡ್ ಇಟ್ಸ್ ಡಿಸಕಂಟೆಂಟ್ಸ್,* ನ್ಯೂಡೆಲ್ಲಿ: ಪೆಂಗ್ವಿನ್ ಬುಕ್ಸ್, ೨೦೦೨ ಪುಸ್ತಕ ನೋಡಬಹುದು.

೧೬. ಜೋನ್ ಹೇರಿಸ್, 'ಎಂಟಿನೋಮಿಸ್ ಆಫ್ ಎಂಪವರ್ ಮೆಂಟ್-ಒಬ್ಸರ್‌ವೇಶನ್ಸ್ ಆನ್ ಸಿವಿಲ್ ಸೊಸೈಟಿ ಅಂಡ್ ಅರ್ಬನ್ ಗವರ್ನೆನ್ಸ್ ಇನ್ ಇಂಡಿಯಾ', *ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ,* ವಾಲ್ಯೂಮ್ ೫ ನಂ.೨೬, ಜೂನ್ ೨೦೦೭, ಪು.೨೭೧೬-೨೪

೧೭. ರಾಘವೇಂದ್ರ ರಾವ್ ಅವರ ಪುಸ್ತಕ *ಇಮೇಜಿನಿಂಗ್ ಅನ್‌ಇಮೇಜಿನೇಬಲ್ ಕಮ್ಯುನಿಟೀಸ್-ಪೊಲಿಟಿಕಲ್ ಅಂಡ್ ಸೋಶಿಯಲ್ ಡಿಸ್ಕೋರ್ಸ್ ಇನ್ ಮೊಡರ್ನ್ ಕರ್ನಾಟಕ,* (ವಿದ್ಯಾರಣ್ಯ: ಪ್ರಸಾರಾಂಗ, ಕ.ವಿ.ಹಂ.೨೦೦೦) ಪ್ರಕಟವಾಗುವ ತನಕ ಬಹುತೇಕ ಸಮಾಜ ಶಾಸ್ತ್ರಜ್ಞರಿಗೆ ಹರ್ಡೇಕರ್ ಮಂಜಪ್ಪ, ಆಲೂರು ವೆಂಕಟರಾವ್ ಮುಂತಾದವರು ಕರ್ನಾಟಕದ ಪೊಲಿಟಿಕಲ್ ಥಿಂಕರ್ಸ್ ಎನ್ನುವ ವಿಚಾರ ಗಮನಕ್ಕೆ ಬಂದಿರಲಿಕ್ಕಿಲ್ಲ. ಹಾಗೆಂದು ಸಮಾಜ ಶಾಸ್ತ್ರದ ಬಹುತೇಕ ಇಂಗ್ಲೀಷ್ ಓದುಗರ ಗಮನಕ್ಕೆ ರಾಘವೇಂದ್ರ ರಾವ್ ಅವರ ಪುಸ್ತಕ ಬಂದಿರಬಹುದೆನ್ನಲು ಸಾಧ್ಯವಿಲ್ಲ. ಯಾಕೆಂದರೆ ರಾವ್ ಅವರು ದೊಡ್ಡ ದೊಡ್ಡ ಥಿಯರಿ ಅಥವಾ ದೊಡ್ಡ ದೊಡ್ಡ ವಾಗ್ವಾದಗಳೊಂದಿಗೆ ತಮ್ಮ ಬರಹವನ್ನು ಗುರುತಿಸಲು ಪ್ರಯತ್ನಿಸಿಲ್ಲ.

೧೮. ಈ ಬಗೆಯ ವಾದಕ್ಕೆ ಆಂದ್ರೆ ಬಿಟೆಯವರ 'ಸೋಶಿಯಲಾಜಿ ಅಂಡ್ ಕಾಮನ್ಸ್', ಲೇಖನವನ್ನು ನೋಡಬಹುದು. ಈ ಲೇಖನ ೧೯೯೬ರಲ್ಲಿ *ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿಯಲ್ಲಿ* (ವಾಲ್ಯೂಮ್ ೩೧, ನಂ.೩೫, ೩೬ ಮತ್ತು ೩೭, ಪು.೨೩೬೧-೬೫) ಪ್ರಕಟವಾಗಿತ್ತು. ನಂತರ ಅದೇ ಲೇಖನ ಅಂದ್ರೆ ಬಿಟೆಯವರ, *ಸೋಶಿಯಲಾಜಿ - ಎಸ್ಸೇಸ್ ಆನ್ ಅಪ್ರೋಚಸ್ ಅಂಡ್ ಮೆಥಡ್ಸ್* (ನ್ಯೂಡೆಲ್ಲಿ : ಆಕ್ಸ್ ಫರ್ಡ್ ಯುನಿವರ್ಸಿಟಿ ಪ್ರೆಸ್, ೨೦೦೨, ಪು.೧೩-೨೭) ಪುಸ್ತಕದಲ್ಲಿ ಪ್ರಕಟವಾಗಿದೆ.

೧೯. ಇಂತಹ ತೀರ್ಮಾನಕ್ಕೆ ಬರಲು ನೆರವಾದ ವಾದಗಳನ್ನು ನಾನು ಎಡ್ವರ್ಡ್ ಸೈದ್ ಅವರ, ಓರಿಯಂಟಲಿಸಂ (ಪೆಂಗ್ವಿನ್ ಬುಕ್ಸ್, ೧೯೯೧), ಜೂಲಿಯನ್ ಬೆಂಡ್ ಅವರ, *ದಿ ಟ್ರೇಶನ್ ಆಫ್ ದಿ ಇಂಟೆಲೆಕ್ಚುವಲ್ಸ್*(ನ್ಯೂಯಾರ್ಕ್, ನಾರ್ಟನ್, ೧೯೬೯) ಮತ್ತು ಅಂಥೋನಿಯೋ ಗ್ರಾಮ್ಸಿಯವರ, ಸಿಲೆಕ್ಷನ್ಸ್ ಫ್ರಮ್ ದಿ ಪ್ರಿಸನ್ ನೋಟ್ ಬುಕ್ಸ್ ಬರಹಗಳಿಂದ ಪಡೆದಿದ್ದೇನೆ.

೨೦. ಎಂ.ಚಂದ್ರಪೂಜಾರಿ, 'ಸಮಾಜ ಸಂಶೋಧನೆ ಮತ್ತು ದಲಿತ ಲೋಕ', *ಅಭಿವೃದ್ಧಿ ಅಧ್ಯಯನ,* ಡಿಸೆಂಬರ್ ೨೦೦೯

೨೧. ಎಂ.ಚಂದ್ರಪೂಜಾರಿ, *ಸಂಶೋಧನ ಜವಾಬ್ದಾರಿ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ೨೦೦೮

೨೨. ಈ ನಿಲುವನ್ನು ನಾನು ಡಾ.ಕೆ.ವಿ.ನಾರಾಯಣ ಅವರ 'ಅಭಿವೃದ್ಧಿ ಮತ್ತು ಸಂಸ್ಕೃತಿ', ಶೀರ್ಷಿಕೆಯ ಅಪ್ರಕಟಿತ ಪ್ರಬಂಧದಿಂದ ಪಡೆದಿದ್ದೇನೆ. ಈ ಪ್ರಬಂಧವನ್ನು ಅವರು ೨೦೦೭ರಲ್ಲಿ ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ ಇವರು ಸಂಘಟಿಸಿದ 'ಭವಿಷ್ಯದ ಸುವರ್ಣ ಕರ್ನಾಟಕ', ವಿಚಾರ ಸಂಕಿರಣದಲ್ಲಿ ಮಂಡಿಸಿದ್ದಾರೆ. ಈ ಪ್ರಬಂಧದಲ್ಲಿ ಕೆ.ವಿ.ನಾರಾಯಣ ಅವರು ಸಂಸ್ಕೃತಿ ಮತ್ತು ಅಭಿವೃದ್ಧಿಯನ್ನು ಪರಸ್ಪರ ವಿರುದ್ಧ ನೆಲೆಯಲ್ಲಿ ಕಟ್ಟಿಕೊಳ್ಳುವ ಕನ್ನಡದ ಕೆಲವು ವಿದ್ವಾಂಸರುಗಳ ವಿಧಾನವನ್ನು ವಿವರಿಸಿದ್ದಾರೆ. ಸಂಸ್ಕೃತಿಯ ಸ್ವಾಯತ್ತತೆ ಮತ್ತು ಪರಿವರ್ತನೆಗಳ ವ್ಯಾಖ್ಯಾನ ಕೂಡ ಹೇಗೆ ಮೇಲಿನ ವಿರುದ್ಧ ಲೋಕಗಳಿಂದ ಪ್ರಭಾವಿತವಾಗುತ್ತವೆ ಎನ್ನುವ ವಿಚಾರವನ್ನು ನಾರಾಯಣ ಅವರು ಚರ್ಚಿಸಿದ್ದಾರೆ.

೨೩. ಈ ಬಗೆಯ ವಾದವನ್ನು ಡಾ.ಹಿ.ಚಿ.ಬೋರಲಿಂಗಯ್ಯನವರು ಬುಡಕಟ್ಟು ಸಂಸ್ಕೃತಿ ಮತ್ತು ಮುಖ್ಯವಾಹಿನಿಯ ಸಂಬಂಧ ಕುರಿತಂತೆ ಮಾಡುತ್ತಾರೆ. ಹಿಂದೆ ಮತ್ತು ವರ್ತಮಾನದಲ್ಲಿ ಬುಡಕಟ್ಟು ಜನರಿಗೆ ಮುಖ್ಯವಾಹಿನಿಯ ಸಂಸ್ಕೃತಿಯೊಂದಿಗೆ ಸಂಪರ್ಕಕ್ಕೆ ಬರುವುದು ಅನಿವಾರ್ಯ ವಾಗಿದೆ. ಹಾಗೆಂದು ಮುಖ್ಯವಾಹಿನಿಯ ಎಲ್ಲವನ್ನು ಬುಡಕಟ್ಟು ಸಂಸ್ಕೃತಿ ಸ್ವೀಕರಿಸುತ್ತದೆ ಎನ್ನ ಲಾಗುವುದಿಲ್ಲ. ತನಗೆ ಬೇಕಾದನ್ನು ಮಾತ್ರ ಸ್ವೀಕರಿಸಿ ಬೇಡವಾದುದನ್ನು ತಿರಸ್ಕರಿಸುವ ಪರಿಪಾಠ ವನ್ನು ಬುಡಕಟ್ಟು ಸಂಸ್ಕೃತಿ ರೂಢಿಸಿಕೊಂಡು ಬಂದಿದೆ ಎಂದು ಡಾ. ಬೋರಲಿಂಗಯ್ಯನವರು ವಾದಿಸುತ್ತಾರೆ. ಈ ಕುರಿತು ಹೆಚ್ಚಿನ ವಿವರಗಳಿಗೆ ಡಾ.ಹಿ.ಚಿ.ಬೋರಲಿಂಗಯ್ಯ, ವಿಸ್ಮೃತಿ ಮತ್ತು

ಸಂಸ್ಕೃತಿ - ಒಂದು ಬುಡಕಟ್ಟಿನ ಲೋಕದೃಷ್ಟಿಯ ಹಿನ್ನೆಲೆಯಲ್ಲಿ ಸಂಸ್ಕೃತಿ ಚರ್ಚೆ. (ಬೆಂಗಳೂರು: ಸಿ.ವಿ.ಜಿ.ಪಬ್ಲಿಕೇಶನ್ಸ್, ೨೦೦೧) ಪುಸ್ತಕ ನೋಡಬಹುದು.

೨೪. ಕಥ್ಲಿನ್ ಗಫ್, `ಆಂಥ್ರೋಪಾಲಜಿ ಆಂಡ್ ಇಂಪಿರಿಯಲಿಸಂ, 'ಇನ್ ಬಾಬ್ನಿ ಎಸ್ ಒರ್ಟ್ ಆಂಡ್ ತಿಲಕ್ ಡಿ. ಗುಪ್ತಾ (ಸಂ), *ಹಿಸ್ಟರಿ ಹೇಸ್ ಇಟ್ ಹೆಪನ್ಡ್ - ಸಿಲೆಕ್ಟೆಡ್ ಆರ್ಟಿಕಲ್ಸ್ ಫ್ರಮ್ ಮಂಥ್ಲಿ ರಿವೀವ್, ೧೯೪೯-೧೯೯೮,* ಕಲ್ಕತ್ತಾ : ಕಾರ್ನರ್ ಸ್ಟೋನ್ ಪಬ್ಲಿಕೇಶನ್ಸ್, ೧೯೯೮, ಪು.೮೮-೯೮

೨೫. ವಿವರಗಳಿಗೆ ಮಾರ್ಟಿನ್ ಹೊಲಿಸ್, *ದಿ ಫಿಲಾಸಫಿ ಆಫ್ ಸೋಶೀಯಲ್ ಸಯನ್ಸ್-ಎನ್ ಇಂಟ್ರೋಡಕ್ಷನ್,* ಕೇಂಬ್ರಿಡ್ಜ್: ಕೇಂಬ್ರಿಡ್ಜ್ ಯುನಿರ್ವಸಿಟಿ ಪ್ರೆಸ್, ೨೦೦೦, ಇಮೆನ್ವಲ್ ವೆಲ್ ಸ್ಟೇಯಿನ್ ಮತ್ತು ಇತರರು, *ಓಪನ್ ದಿ ಸೋಶಿಯಲ್ ಸಯನ್ಸ್ - ರಿಪೋರ್ಟ್ ಆಫ್ ದಿ ಗುಲ್ ಬೆಕಿಯನ್ ಕಮಿಶನ್ ಆನ್ ದಿ ರಿಸ್ಟ್ರಕ್ಚರಿಂಗ್ ಆಫ್ ದಿ ಸೋಶಿಯಲ್ ಸಯನ್ಸ್ ಸಸ್,* ನ್ಯೂಡೆಲ್ಲಿ: ವಿಸ್ತಾರ್ ಪಬ್ಲಿಕೇಶನ್ಸ್, ೧೯೯೮ ಪುಸ್ತಕಗಳನ್ನು ನೋಡಬಹುದು.

೨೬. ವಿವರಗಳಿಗೆ ಟಾಲ್ಕ್ಯಾಟ್ ಪಾರ್ಸನ್ ಅವರ, *ಟುವರ್ಡ್ಸ್ ಎ ಜನರಲ್ ಥಿಯರಿ ಆಫ್ ಆಕ್ಷನ್,* (ನ್ಯೂಯಾರ್ಕ್: ಹಾಡರ್ವರ್ ಆಂಡ್ ರೋ, ೧೯೫೧) ಟಾಲ್ಕಟ್ ಪಾರ್ಸನ್, *ಸ್ಟ್ರಕ್ಚರ್ ಆಂಡ್ ಪ್ರೊಸಸ್ ಇನ್ ಇಂಡಸ್ಟ್ರಿಯಲ್ ಸೊಸೈಟಿ,* ಗ್ಲೆನ್‌ಕೋ : ದಿ ಫ್ರಿ ಪ್ರೆಸ್, ೧೯೬೦, ಮತ್ತು ಬರ್ಟ್ ಎಫ್ ಹೊಸ್‌ಲಿಡ್ಜ್ ಅವರ, *ಸೋಶಿಯಲಾಜಿಕಲ್ ಎಸ್ಪೆಕ್ಟ್ಸ್ ಆಫ್ ಎಕನಾಮಿಕ್ ಗ್ರೋಥ್,* (ನ್ಯೂಯಾರ್ಕ್ : ದಿ ಫ್ರಿ ಪ್ರೆಸ್, ೧೯೬೬) ಪುಸ್ತಕಗಳನ್ನು ನೋಡಬಹುದು.

೨೭. ಆರ್ ಎಲ್ ಕರಿ ಆಂಡ್ ಎಲ್ ಐ ವೇಡ್, *ಎ ಥಿಯರಿ ಆಫ್ ಪೊಲಿಟಿಕಲ್ ಎಕ್ಸ್‌ಚೇಂಜ್,* ಎಂಗೇಲ್ ವುಡ್ ಕ್ಲಿಪ್ಸ್ ಎನ್ ಜೆ : ಪ್ರೆಂಟೈನ್ ಹಾಲ್ ಇಂಕ್, ೧೯೬೮

೨೮. ಮೇಕ್ಸ್ ವೇಬರ್, *ಎಕಾನಮಿ ಆಂಡ್ ಸೊಸೈಟಿ,* ಬರ್ ಕ್ಲೀ: ಯುನಿವರ್ಸಿಟಿ ಆಫ್ ಕ್ಯಾಲಿಪೋರ್ನಿಯ ಪ್ರೆಸ್, ೧೯೭೮

೨೯. ಟಾಲ್ಕ್ಯಾಟ್ ಪಾರ್ಸನ್, ‘‘ಒನ್ ದ ಕನ್‌ಸ್ಟ್ರಕ್ಟ್ ಆಫ್ ಇನ್‌ಫ್ಲ್ಯೂಲೆನ್ಸ್’’, ಅಮೇರಿಕನ್ ಫಿಲೋಸಪಿಕಲ್ ಸೊಸೈಟಿ ಪ್ರೊಸಿಡಿಂಗ್ಸ್, ವಾಲ್ಯೂಮ್ ೧೦೭, ೧೯೬೩, ಪು.೨೩೨-೨೬೨. ಟಾಲ್ಕ್ಯಾಟ್ ಪಾರ್ಸನ್‌ಲ್‌ನ ಈ ವಿಚಾರಗಳನ್ನು ಸಾರಾ ಜೋಸೆಫ್ ಅವರ *ಪೊಲಿಟಿಕಲ್ ಥಿಯರಿ ಆಂಡ್ ಪವರ್,* ನ್ಯೂಡೆಲ್ಲಿ : ಫೌಂಡೇಶನ್ ಬುಕ್ಸ್, ೧೯೮೮ ರಿಂದ ಪಡೆಯಲಾಗಿದೆ.

೪

ಹೇಗೆ ಸಂಶೋಧನೆ?

ಹೇಗೆ ಸಂಶೋಧನೆ ಎನ್ನುವ ಚರ್ಚೆ ವಿಷಯ ಆಯ್ಕೆಯಿಂದ ಆರಂಭವಾಗಿ ಮಾಹಿತಿ ಸಂಗ್ರಹ ಮತ್ತು ವಿಶ್ಲೇಷಣೆಗಳಲ್ಲಿ ಮುಂದುವರಿದು ಪ್ರಬಂಧ ರಚನೆಯಲ್ಲಿ ಕೊನೆಗೊಳ್ಳಬಹುದು. ವಿಷಯ ಆಯ್ಕೆಯಿಂದ ಪ್ರಬಂಧ ರಚನೆಯ ತನಕ ಅನುಸರಿಸಬೇಕಾದ ವಿಧಾನಗಳನ್ನು ಒಂದೇ ಅಧ್ಯಾಯದಲ್ಲಿ ಹೇಳಿ ಮುಗಿಸುವಷ್ಟು ಅಲ್ಪ ಪ್ರಮಾಣದ್ದೂ ಅಲ್ಲ; ಸರಳವೂ ಅಲ್ಲ. ಈ ಎಲ್ಲ ಸಮಸ್ಯೆಗಳನ್ನು ಪ್ರತ್ಯೇಕವಾಗಿ ಮುಂದಿನ ಅಧ್ಯಾಯ ಗಳಲ್ಲಿ ಚರ್ಚಿಸಲಾಗಿದೆ. ಸಂಶೋಧನೆಯನ್ನು ಯಾವ ದೃಷ್ಟಿಯಿಂದ ನೋಡಬೇಕೆನ್ನುವುದರ ಮೇಲೆ ಈಗಾಗಲೇ ಇರುವ ಕೆಲವೊಂದು ಚರ್ಚೆಗಳನ್ನು ಆರಂಭಿಕ ಸಂಶೋಧಕರಿಗೆ ಪರಿಚಯಿಸುವ ಸೀಮಿತ ಉದ್ದೇಶವನ್ನು ಈ ಅಧ್ಯಾಯ ಹೊಂದಿದೆ. ಈಗಾಗಲೇ ಪ್ರಚಲಿತದಲ್ಲಿರುವ ದೃಷ್ಟಿಕೋನಗಳನ್ನು ಪರಿಚಯಿಸುತ್ತಾ ಸಂಶೋಧಕರು ಇಚ್ಛೆಪಟ್ಟರೆ ರೂಢಿಸಿಕೊಳ್ಳಬಹುದಾದ ಕೆಲವೊಂದು ಹೊಸ ದೃಷ್ಟಿಕೋನಗಳನ್ನು ಕೂಡ ಅಧ್ಯಾಯದಲ್ಲಿ ನೀಡಿದ್ದೇನೆ. ಈಗ ಜ್ಞಾನ ಹೇಗೆ ಉತ್ಪಾದನೆಯಾಗುತ್ತಿದೆ (ಸಂಶೋಧನೆಯಾಗುತ್ತಿದೆ)? ಎನ್ನುವ ವಿಮರ್ಶೆಯ ನಂತರ ಮುಂದೆ ಹೇಗೆ ಮಾಡಬೇಕೆನ್ನುವುದರ ಬಗ್ಗೆ ಚರ್ಚೆ ಸಾಧ್ಯ. ಈಗ ನಡೆಯುತ್ತಿರುವ ಸಂಶೋಧನೆಯ ಲಘುವಾದ ಒಂದು ಉದಾಹರಣೆ ನೀಡುವುದಾದರೆ ಬಹುರಾಷ್ಟ್ರೀಯ ಕಂಪೆನಿಗಳ ಸರಕು ಮತ್ತು ಸೇವೆಗಳ ಉತ್ಪಾದನೆ ಮತ್ತು ಅನುಭೋಗ ವಿಧಾನಕ್ಕೂ ಸಮಾಜ ಸಂಶೋಧನೆಯ ಜ್ಞಾನ ಉತ್ಪಾದನೆ ಮತ್ತು ಅನುಭೋಗ ವಿಧಾನಕ್ಕೂ ವಿಶೇಷ ವ್ಯತ್ಯಾಸವಿಲ್ಲ ಎನ್ನಬಹುದು.[೧] ಹೆಚ್ಚು ಕಡಿಮೆ ಅದೇ ಮಾದರಿಯ ಶ್ರೇಣೀಕರಣ ಇಲ್ಲೂ ಇದೆ. ಇದು ಹೇಗೆಂದು ಸ್ವಲ್ಪ ವಿಸ್ತೃತವಾಗಿ ನೋಡುವ. ಸರಕು ಅಥವಾ ಸೇವೆ ಅಂದರೇನು? ಅವುಗಳು ಜನರ ಬೇಕು ಬೇಡಗಳನ್ನು ಹೇಗೆ ಪೂರೈಸುತ್ತವೆ? ಅವುಗಳನ್ನು ಹೇಗೆ ಉತ್ಪಾದಿಸಬೇಕು? ಎಲ್ಲಿ ಉತ್ಪಾದಿಸಬೇಕು? ಯಾರು ಉತ್ಪಾದಿಸಬೇಕು? ಅವುಗಳನ್ನು ಹೇಗೆ ಪೂರೈಸಬೇಕು? ಇತ್ಯಾದಿ ನಿರ್ಧಾರಗಳನ್ನು ಬಹುರಾಷ್ಟ್ರೀಯ ಕಂಪೆನಿಗಳು ತಮ್ಮ ಕೇಂದ್ರ ಘಟಕದಲ್ಲಿ ತೆಗೆದುಕೊಳ್ಳುತ್ತವೆ. ಉತ್ಪಾದಿಸಬೇಕಾದ ಸರಕಿನ

ಬಿಡಿಭಾಗಗಳನ್ನು ನಿರ್ಧರಿಸಲಾಗುವುದು. ಅವುಗಳನ್ನು ಪ್ರಪಂಚದ ಮೂಲೆ ಮೂಲೆಯಲ್ಲಿರುವ ಕಾರ್ಖಾನೆಗಳಲ್ಲಿ ಉತ್ಪಾದಿಸಲಾಗುವುದು. ಉತ್ಪಾದಿತ ಬಿಡಿಭಾಗಗಳನ್ನು ಕೇಂದ್ರ ಸ್ಥಾನದಲ್ಲಿ ಅಥವಾ ಕೇಂದ್ರ ನಿರ್ಧರಿಸಿದ ಇನ್ನ್ಯಾವುದೋ ಸ್ಥಳದಲ್ಲಿ ಜೋಡಿಸಲಾಗುವುದು. ಈ ರೀತಿಯಲ್ಲಿ ಉತ್ಪಾದಿತ ಸರಕನ್ನು ಪ್ರಪಂಚದ ಎಲ್ಲ ಕಡೆ ಇರುವ ಮಾರಾಟ ಮಳಿಗೆಗಳ ಮೂಲಕ ಮಾರಾಟ ಮಾಡಲಾಗುತ್ತದೆ. ಮಾರಾಟ ಮಳಿಗೆಗಳನ್ನು ಉತ್ಪಾದಕರೇ ಹೊಂದಿರಬಹುದು ಅಥವಾ ಸ್ಥಳೀಯ ಬಂಡವಾಳಿಗರು ಹೊಂದಿರಬಹುದು. ದೊಡ್ಡ ದೊಡ್ಡ ನಗರಗಳಲ್ಲಿ ಎಲ್ಲ ಬಹುರಾಷ್ಟ್ರೀಯ ಸರಕು ಮತ್ತು ಸೇವೆಯ ಪ್ರತ್ಯೇಕ ಮಾರಾಟ ಮಳಿಗೆಗಳಿದ್ದರೆ ಸಣ್ಣಪುಟ್ಟ ಪೇಟೆಗಳಲ್ಲಿ ಬಹುರಾಷ್ಟ್ರೀಯ ಪ್ರತ್ಯೇಕ ಮಳಿಗೆಗಳು ಇರುವುದಿಲ್ಲ. ಕೆಲವೊಂದು ಸ್ಥಳೀಯ ಮಾರಾಟ ಮಳಿಗೆಗಳಲ್ಲಿ ಸ್ಥಳೀಯ ಉತ್ಪಾದಕರ ಸರಕಿನೊಂದಿಗೆ ಬಹುರಾಷ್ಟ್ರೀಯ ಕಂಪೆನಿಗಳ ಸರಕುಗಳನ್ನು ಮಾರಾಟ ಮಾಡಲಾಗುವುದು. ಈ ಬಗೆಯಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ತಮ್ಮ ಉತ್ಪಾದನೆ ಮತ್ತು ಮಾರಾಟವನ್ನು ಮಾಡುತ್ತವೆ. ಇದಕ್ಕೂ ಸಮಾಜ ಸಂಶೋಧನೆಯ ಜ್ಞಾನ ಉತ್ಪಾದನೆಗೆ ಯಾವ ರೀತಿ ಹೋಲಿಕೆ ಇದೆ? ತುಂಬ ಹೋಲಿಕೆ ಇದೆ.

ಪರಿವರ್ತನೆ ಅಂದರೇನು? ಅಥವಾ ಅಭಿವೃದ್ಧಿ ಅಂದರೇನು? ಅಥವಾ ಪ್ರಗತಿ ಅಂದರೇನು? ಎಂದು ಶ್ರೀಮಂತ ದೇಶದ ಸಂಶೋಧಕರು ವ್ಯಾಖ್ಯಾನಿಸುತ್ತಾರೆ.[೩] ಇಂತಹ ಅಭಿವೃದ್ಧಿಯನ್ನು ಸಾಧಿಸಲು ಅಥವಾ ಹೊಸ ಸಮಾಜದ ನಿರ್ಮಾಣಕ್ಕೆ ತುಳಿಯಬೇಕಾದ ಹಾದಿಯನ್ನು ಅವರೇ ತೀರ್ಮಾನಿಸುತ್ತಾರೆ. ಹೊಸ ಸಮಾಜದ ನಿರ್ಮಾಣಕ್ಕೆ ಪೂರಕವಾಗುವ ವಿಜ್ಞಾನ ಹೇಗಿರಬೇಕು? ಸಮಾಜ ವಿಜ್ಞಾನ ಹೇಗಿರಬೇಕು? ಇವುಗಳ - ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳ ಜ್ಞಾನವನ್ನು ಹೇಗೆ ಉತ್ಪಾದಿಸಬೇಕು ಇತ್ಯಾದಿಗಳನ್ನು ಬಲಿಷ್ಠ ದೇಶಗಳ ವಿದ್ವಾಂಸರುಗಳು ತೀರ್ಮಾನಿಸುತ್ತಾರೆ.[೪] ಹೊಸ ಸಮಾಜದ ನಿರ್ಮಾಣಕ್ಕೆ ಪೂರಕವಾದ ಸಮಾಜ, ಅರ್ಥ, ರಾಜಕೀಯ, ಚರಿತ್ರೆ ಇತ್ಯಾದಿಗಳ ಸ್ವರೂಪ, ವಿಧಾನ ಮುಂತಾದವುಗಳನ್ನು ಕೂಡ ನಿರ್ಧರಿಸಲಾಗುವುದು. ಬಹುರಾಷ್ಟ್ರೀಯ ಕಂಪೆನಿಗಳು ತಮ್ಮ ಸರಕುಗಳ ಬಿಡಿ ಭಾಗಗಳನ್ನು ಪ್ರಪಂಚದ ವಿವಿಧ ಭಾಗಗಳಲ್ಲಿ ಉತ್ಪಾದಿಸಿ ಇನ್ನ್ಯಾವುದೋ ಕೇಂದ್ರದಲ್ಲಿ ಜೋಡಿಸಿದಂತೆ ಶ್ರೀಮಂತ ದೇಶಗಳು ನೇಯುವ ಥಿಯರಿಗಳಿಗೆ ಪ್ರಪಂಚದ ವಿವಿಧ ಭಾಗಗಳಲ್ಲಿ ಎಂಫಿರಿಕಲ್ ಪುರಾವೆಗಳನ್ನು ಹುಡುಕಲಾಗುವುದು ಮತ್ತು ಬಹುತೇಕರಿಗೆ ಅನ್ವಯವಾಗುವ ಸಮಾಜ ಥಿಯರಿಗಳನ್ನು ನೇಯಲಾಗುವುದು. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನಮ್ಮಂತಹ ಬಡದೇಶಗಳ ಬಹುತೇಕ ವಿದ್ವಾಂಸರ ಕೆಲಸ ಪಶ್ಚಿಮದ ಶ್ರೀಮಂತ ದೇಶಗಳ ವಿದ್ವಾಂಸರಿಂದ ಬಂದ ಥಿಯರಿಗಳನ್ನು ತಮ್ಮ ಸಾಮಾಜಿಕ ಪರಿಸರದಲ್ಲಿ ಅನ್ವಯಿಸಿ ತಮ್ಮ ಸಾಮಾಜಿಕ ಪರಿಸರ ಯಜಮಾನಿಕೆಯಲ್ಲಿರುವ ಥಿಯರಿಯಿಂದ ಎಷ್ಟು ದೂರ ಇದೆ ಅಥವಾ ಹತ್ತಿರ ಇದೆ ಎಂದು ತೋರಿಸುವುದಾಗಿದೆ.[೫] ಇದನ್ನೊಂದು ಲಘು ಉದಾಹರಣೆ ಯೆಂದು ಆರಂಭದಲ್ಲೇ

ಹೇಳಿದ್ದಾನೆ. ಜ್ಞಾನ ಉತ್ಪಾದನಾ ಸಂಪೂರ್ಣ ಪ್ರಕ್ರಿಯೆ ಇದೇ ರೀತಿಯಲ್ಲಿದೆಯೆಂದು ಹೇಳಲಾಗುವುದಿಲ್ಲ. ಈ ಉದಾಹರಣೆ ಜ್ಞಾನ ಉತ್ಪಾದನೆಯ ಕೆಲವೊಂದು ಆಯಾಮಗಳನ್ನು ಮಾತ್ರ ಪರಿಚಯಿಸಬಹುದು. ಮುಂದಿನ ಪುಟಗಳಲ್ಲಿ ಜ್ಞಾನ ಉತ್ಪಾದನೆಯ ಇತರ ಆಯಾಮಗಳನ್ನು ನೋಡುವ.

ಜ್ಞಾನ ಉತ್ಪಾದನೆಯ ಬಗೆಯನ್ನು ಸಮಾಜ ವಿಜ್ಞಾನದ ವ್ಯಾಪ್ತಿಯಲ್ಲಿ ಬರುವ ಎಲ್ಲ ವಿಷಯಗಳನ್ನು ಒಟ್ಟು ಸೇರಿಸಿ ಮಾತಾಡುವುದು ಕಷ್ಟ. ಯಾಕೆಂದರೆ ಅವೆಲ್ಲವನ್ನು ಬಿಡಿಬಿಡಿಯಾಗಿ ಅರ್ಥ, ರಾಜಕೀಯ, ಸಮಾಜ ಚರಿತ್ರೆ ಎಂದು ಅಧ್ಯಯನ ಮಾಡಲಾಗುತ್ತಿದೆ. ಸಮಾಜವನ್ನು ಬಿಡಿಬಿಡಿಯಾಗಿ ನೋಡುವ ಕ್ರಮ ವಿಜ್ಞಾನದಿಂದ ಬಂದಿದೆ. ವಿಜ್ಞಾನದ ವಿಧಾನದಲ್ಲಿ ಅಧ್ಯಯನಕ್ಕೆ ಒಳಗಾಗುವ ಸಂಗತಿಯನ್ನು ತುಂಡು ತುಂಡಾಗಿ ಕತ್ತರಿಸಿ ಆ ವಸ್ತುವಿನ ಧಾತು (ಮೂಲವಸ್ತು)ವನ್ನು ಪತ್ತೆ ಹಚ್ಚಲಾಗುವುದು. ನಂತರ ಆ ಮೂಲ ವಸ್ತುವಿನ ಅಥವಾ ಧಾತುವಿನ ಗುಣಲಕ್ಷಣಗಳೇನು ಮತ್ತು ಅದರ ಕೆಲಸ ಕಾರ್ಯಗಳೇನೆಂದು ಕಂಡುಹಿಡಿಯಲಾಗುವುದು. ಒಮ್ಮೆ ಮೂಲ ವಸ್ತುವಿನ/ಧಾತುವಿನ ಗುಣಲಕ್ಷಣಗಳು ಹಾಗೂ ಕೆಲಸ ಕಾರ್ಯಗಳು ಪರಿಚಯವಾದರೆ ಆ ವಸ್ತುವನ್ನು ಅರ್ಥಮಾಡಿಕೊಂಡಂತೆ. ಯಾಕೆಂದರೆ ಹಲವಾರು ಧಾತುವಿನ ಸಮ್ಮಿಲನವೇ ವಸ್ತು ಎನ್ನುವುದು ವಿಜ್ಞಾನದ ವಿಧಾನದ ವಸ್ತುವಿನ ವ್ಯಾಖ್ಯಾನ. ಹೆಚ್ಚು ಕಡಿಮೆ ಇದೇ ವಿಧಾನವನ್ನು ಮನುಷ್ಯ ದೇಹದ ಪ್ರಕೃತಿಯನ್ನು ಅರ್ಥಮಾಡಕೊಳ್ಳಲು ಅನುಸರಿಸಲಾಗಿದೆ. ಮನುಷ್ಯ ದೇಹವನ್ನು ಕತ್ತರಿಸಿ ಅದರ ಅತೀ ಸಣ್ಣ ಭಾಗವನ್ನು ಪತ್ತೆ ಹಚ್ಚಲಾಗುವುದು. ಅದನ್ನು ಜೀವಕೋಶ (ಸೆಲ್) ಎಂದು ಹೆಸರಿಸಲಾಗಿದೆ. ಜೀವಕೋಶಗಳು ಸೇರಿ ದೇಹದ ಅಂಗಾಂಗಗಳು ರಚಿತವಾಗಿವೆ. ಈ ಜೀವಕೋಶದ ಗುಣಲಕ್ಷಣಗಳನ್ನು ಮತ್ತು ಕೆಲಸಕಾರ್ಯಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ದೇಹದ ಅಂಗಾಂಗಗಳ ಮತ್ತು ಒಟ್ಟಾರೆ ದೇಹದ ಕೆಲಸಕಾರ್ಯಗಳನ್ನು ಅರ್ಥಮಾಡಿಕೊಳ್ಳಲಾಗುವುದು. ಮೂಲವಸ್ತುವನ್ನು ಅರ್ಥಮಾಡಿ ಕೊಳ್ಳುವ ಮೂಲಕ ಮೂಲವಸ್ತುವಿನಿಂದ ರೂಪಿತವಾದ ವಸ್ತುವನ್ನು ಅರ್ಥಮಾಡಿಕೊಳ್ಳುವ ವಿಧಾನ ಮೆಥಡಲಾಜಿಕಲ್ ಇಂಡಿವಿಜುವಲಿಸಂನ ಕಲ್ಪನೆಯ ಹುಟ್ಟು ಮತ್ತು ಬೆಳವಣಿಗೆಗೆ ಕಾರಣವಾಗಿದೆ.[೨] ಇಂಡಿವಿಸಿಬ್‌ಲ್ ಅಂದರೆ ಇನ್ನು ಹೆಚ್ಚು ಡಿವೈಡ್ ಅಥವಾ ತುಂಡರಿಸಲು ಸಾಧ್ಯವಿಲ್ಲದ್ದು ಎನ್ನುವ ಅರ್ಥ. ಭೌತಿಕ ಪದಾರ್ಥಗಳಿಗೆ ಅಣು ಹೇಗೆ ಇಂಡಿವಿಸಿಬ್‌ಲ್ ಆಗಿತ್ತೋ ಅದೇ ರೀತಿಯಲ್ಲಿ ದೇಹಕ್ಕೆ ಜೀವಕೋಶಗಳು ಇಂಡಿವಿಸಿಬ್‌ಲ್ ಮತ್ತು ಸಮಾಜಕ್ಕೆ ವ್ಯಕ್ತಿಗಳು ಇಂಡಿವಿಸಿಬ್‌ಲ್ ಆಗುತ್ತಾರೆ. ಅಣುವನ್ನು ಅಧ್ಯಯನ ಮಾಡುವ ಮೂಲಕ ಭೌತಿಕ ಪದಾರ್ಥಗಳನ್ನು ಹೇಗೆ ಅರ್ಥಮಾಡಿಕೊಳ್ಳಬಹುದೋ ಅದೇ ರೀತಿ ಯಲ್ಲಿ ಜೀವಕೋಶಗಳನ್ನು ಅಧ್ಯಯನ ಮಾಡುವ ಮೂಲಕ ದೇಹವನ್ನು ಮತ್ತು ವ್ಯಕ್ತಿಯನ್ನು ಅಧ್ಯಯನ ಮಾಡುವ ಮೂಲಕ ಸಮಾಜವನ್ನು ಅರ್ಥಮಾಡಿಕೊಳ್ಳಬಹುದು ಎನ್ನುವುದು ಮೆಥಡಲಾಜಿಕಲ್ ಇಂಡಿವಿಜುವಲಿಸಂನ ಮೂಲತತ್ತ್ವ.

ಮೆಥಡಲಾಜಿಕಲ್ ಇಂಡಿವಿಜುವಲಿಸಂ ಮಾತ್ರ ವಿಜ್ಞಾನದ ವಿಧಾನದ ಕೊಡುಗೆಯಲ್ಲ. ಯುನಿವರ್ಸಲ್ ನಿಯಮಗಳನ್ನು ಹುಡುಕುವುದು. ಸಬ್ಜೆಕ್ಟ್ ಆಬ್ಜೆಕ್ಟ್ ಡೈಕಾಟಮಿ, ಫ್ಯಾಕ್ಟ್ ವ್ಯಾಲ್ಯೂ ಡೈಕಾಟಮಿ, ವ್ಯಾಲ್ಯೂ ನ್ಯೂಟ್ರಾಲಿಟಿ ಇತ್ಯಾದಿಗಳು ಕೂಡ ವಿಜ್ಞಾನದ ವಿಧಾನದ ಕೊಡುಗೆಗಳೇ.[೬] ಯಾವುದೋ ಒಂದು ವಸ್ತುವನ್ನು ಅಥವಾ ದೇಹವನ್ನು ಅಧ್ಯಯನ ಮಾಡಿ ಬರುವ ತೀರ್ಮಾನ ಅಧ್ಯಯನಕ್ಕೆ ಒಳಗಾದ ವಸ್ತು ಅಥವಾ ದೇಹಕ್ಕೆ ಮಾತ್ರ ಅನ್ವಯ ವಾಗುವುದಲ್ಲ ಪ್ರಪಂಚದಲ್ಲಿರುವ ಎಲ್ಲ ವಸ್ತುಗಳಿಗೆ ಅಥವಾ ದೇಹಗಳಿಗೂ ಅನ್ವಯ ವಾಗುತ್ತದೆ ಎನ್ನುವುದು ಯುನಿವರ್ಸಲ್ ನಿಯಮದ ತಿರುಳು. ಅದೇ ರೀತಿಯಲ್ಲಿ ಯಾವುದೋ ಒಂದು ಸಂಸ್ಕೃತಿಯನ್ನು ಅಧ್ಯಯನ ಮಾಡಿ ತಳೆಯುವ ತೀರ್ಮಾನಗಳು ಅಧ್ಯಯನಕ್ಕೆ ಒಳಗಾದ ಸಂಸ್ಕೃತಿಗೆ ಮಾತ್ರ ಅನ್ವಯವಾಗುವುದಲ್ಲ; ಪ್ರಪಂಚದ ಎಲ್ಲ ಸಂಸ್ಕೃತಿಗಳಿಗೂ ಅನ್ವಯವಾಗುತ್ತದೆ ಎನ್ನುವ ಗ್ರಹಿತ ಕೂಡ ಯುನಿವರ್ಸಲ್ ನಿಯಮಗಳ ಹುಡುಕಾಟದ ಹಿಂದೆ ಇದೆ.[೭] ಅಧ್ಯಯನ ಮಾಡುವ ಸಂಶೋಧಕ ಮತ್ತು ಅಧ್ಯಯನಕ್ಕೆ ಒಳಗಾಗುವ ವಸ್ತುಗಳ ನಡುವೆ ಯಾವುದೇ ಸಂಬಂಧ ಇರಬಾರದೆನ್ನುವ ಗ್ರಹಿತವನ್ನು ಸಬ್ಜೆಕ್ಟ್ ಆಬ್ಜೆಕ್ಟ್ ಡೈಕಾಟಮಿ ಎನ್ನುತ್ತಾರೆ. ಅಧ್ಯಯನಕಾರ ಸಂಶೋಧನೆ ಹೊಡುವ ವಿಷಯ ಅಥವಾ ಸಂಗತಿಯೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದರೆ ಅಧ್ಯಯನದ ಫಲಿತ ಪಕ್ಷಪಾತವಾಗುವ ಸಾಧ್ಯತೆ ಇದೆ. ಆ ಕಾರಣಕ್ಕಾಗಿ ಅಧ್ಯಯನ ಮಾಡುವವರು ಅಧ್ಯಯನಕ್ಕೆ ಒಳಪಡಿಸುವ ಸಂಗತಿಯಿಂದ ಅಂತರವನ್ನು ಕಾಪಾಡಿಕೊಳ್ಳಬೇಕು. ಆ ಅಂತರ ಹೆಚ್ಚಿದಷ್ಟು ಸಂಶೋಧನೆಯ ಫಲಿತ ಹೆಚ್ಚು ವಸ್ತುನಿಷ್ಠವಾಗಿರುವ ಸಾಧ್ಯತೆ ಇದೆ ಎಂದು ನಂಬಲಾಗಿದೆ. ಅಧ್ಯಯನಕಾರನ ಕೆಲಸ ಅಧ್ಯಯನಕ್ಕೆ ಒಳಪಡುವ ಸಂಗತಿಯನ್ನು ನಿರ್ವಿಭಾವದಿಂದ ಅಧ್ಯಯನ ಮಾಡಿ ಆ ಸಂಗತಿಯ ಗುಣಲಕ್ಷಣಗಳನ್ನು ಮತ್ತು ಕೆಲಸ ಕಾರ್ಯಗಳನ್ನು ಸ್ಪಷ್ಟಪಡಿಸುವುದು ಮಾತ್ರ. ಅಧ್ಯಯನಕ್ಕೆ ಒಳಗಾಗುವ ಸಂಗತಿಯ ಬಗ್ಗೆ ಒಳ್ಳೆಯದು ಅಥವಾ ಕೆಟ್ಟದ್ದು ಎನ್ನುವ ಮೌಲ್ಯ ತೀರ್ಮಾನ ಕೊಡುವುದು ಸಂಶೋಧಕರ ಕೆಲಸವಲ್ಲ ಎನ್ನುವ ಗ್ರಹಿತವನ್ನು ಮೌಲ್ಯ ನಿರಾಪೇಕ್ಷತೆ ಅಥವಾ ವ್ಯಾಲ್ಯೂ ನ್ಯೂಟ್ರಾಲಿಟಿ ಎನ್ನುತ್ತಾರೆ.[೮] ವ್ಯಾಲ್ಯೂ ನ್ಯೂಟ್ರಾಲಿಟಿಯ ಸಾಧ್ಯತೆ ಹುಟ್ಟುವುದೇ ಮೌಲ್ಯ ಬೇರೆ ವಿಷಯ ಬೇರೆ ಎನ್ನುವ ಗ್ರಹಿತದಿಂದ. ಭಾರತದ ಜನಸಂಖ್ಯೆ ನೂರು ಕೋಟಿ ಎನ್ನುವುದು ಕೇವಲ ಒಂದು ಫ್ಯಾಕ್ಚುವಲ್ ಸ್ಟೇಟ್‌ಮೆಂಟ್ ಎಂದು ಗ್ರಹಿಸಲಾಗಿದೆ. ಆ ಸ್ಟೇಟ್‌ಮೆಂಟನ್ನು ಮಾಡುವ ಮೂಲಕ ಯಾವುದೇ ಮೌಲ್ಯ ತೀರ್ಮಾನ (ಜನಸಂಖ್ಯೆ ಜಾಸ್ತಿಯಾಗಿದೆ ಅಥವಾ ಕಡಿಮೆಯಾಗಿದೆ) ಮಾಡುತ್ತಿಲ್ಲ ಎನ್ನುವ ವಾದ ಇದು.

ವಿಜ್ಞಾನದ ವಿಧಾನ ಪ್ರತಿಪಾದಿಸುವ ಸಂಶೋಧನೆಯ ಲಕ್ಷಣಗಳಿಗೆ ಸಂಪೂರ್ಣ ವ್ಯತಿರಕ್ತವಾದ ಗುಣಗಳನ್ನು ಹರ್ಮನೆಟಿಕ್ಸ್‌ಗಳು ಅಥವಾ ಕನ್‌ಸ್ಟ್ರಕ್ಷನಿಸ್ಟ್‌ಗಳು ಅಥವಾ ನೇಚುರಲಿಸ್ಟ್‌ಗಳು ಪ್ರತಿಪಾದಿಸುತ್ತಾರೆ. ಸತ್ಯದ ಸ್ವರೂಪ ಕುರಿತು ಪೊಸಿಟಿವಿಸ್ಟ್‌ಗಳು ಏಕ ಸತ್ಯವನ್ನು ಪ್ರತಿಪಾದಿಸಿದರೆ ಹರ್ಮನೆಟಿಕ್ಸ್‌ಗಳು ಹಲವಾರು ಸತ್ಯಗಳನ್ನು ಪ್ರತಿಪಾದಿಸಿದ್ದಾರೆ.

ಪೊಸಿಟಿವಿಸ್ಟ್‌ಗಳಿಗೆ ಸಂಶೋಧಕರು ಮತ್ತು ಅಧ್ಯಯನಕ್ಕೆ ಒಳಗಾಗುವ ಸಂಗತಿಗಳ ಸ್ವತಂತ್ರ ಹಾಗೂ ಖಚಿತ ಅಸ್ತಿತ್ವದ ಬಗ್ಗೆ ಯಾವುದೇ ಸಂದೇಹಗಳಿರಲಿಲ್ಲ. ಒಬ್ಜೆಕ್ಟಿವ್ ವರ್ಲ್ಡ್(ಸಮಾಜ) ಒಂದು ಇದೆ. ಅದು ನಮ್ಮ ಆಲೋಚನೆ ಅಥವಾ ಮನಸ್ಸಿನ ಸೃಷ್ಟಿಯಲ್ಲ, ನಮ್ಮ ಆಲೋಚನೆಯನ್ನು ಹೊರತುಪಡಿಸಿ ಕೂಡ ಅದು ಇದೆ. ಅದನ್ನು ಎಂಪಿರಿಕಲ್ ಆಗಿ ಅಥವಾ ಇತರ ವಿಧಾನಗಳಿಂದ ನಾವು ಭಾಗಶಃ ಗ್ರಹಿಸಬಹುದು, ಇತ್ಯಾದಿ ಗ್ರಹಿಕೆಗಳನ್ನು ಹರ್ಮನೆಟಿಕ್ಸ್‌ಗಳು ಪ್ರಶ್ನಿಸಿದರು.[೯] ಈ ಗ್ರಹಿಕೆಗಳ ಸ್ಥಾನದಲ್ಲಿ ವಾಸ್ತವಿಕತೆ ಎನ್ನುವುದು ಅರ್ಥಪೂರ್ಣ ಸಾಮಾಜಿಕ ಕಟ್ಟುವಿಕೆ, ನಮ್ಮ ಆಲೋಚನೆಗಳಿಂದ ಪ್ರತ್ಯೇಕವಾದ ಪ್ರಪಂಚವೊಂದಿಲ್ಲ. ನಾವು ಇದೆ ಎಂದು ಗ್ರಹಿಸುತ್ತೇವೆ, ಆದುದರಿಂದ ಇದೆ ಇತ್ಯಾದಿ ಗ್ರಹಿಕೆಗಳನ್ನು ಹರ್ಮೆನೆಟಿಕ್ಸ್ ಬಲಗೊಳಿಸಿತು. ಸಂಶೋಧಕರು ಮೌಲ್ಯ ನಿರಾಪೇಕ್ಷತೆಯನ್ನು ರೂಢಿಸಿಕೊಳ್ಳಬೇಕೆಂದು ಪೊಸಿಟಿವಿಸ್ಟ್‌ಗಳು ವಾದಿಸಿದರೆ ಮೌಲ್ಯ ನಿರಾಪೇಕ್ಷ ಸಂಶೋಧನೆಯಲ್ಲಿ ಸಾಧ್ಯವೇ ಇಲ್ಲ ಎಂದು ಹರ್ಮನೆಟಿಕ್ಸ್‌ಗಳು ವಾದಿಸಿದರು.[೧೦] ಯಾವುದೋ ಒಂದು ಸಂಸ್ಕತಿಯನ್ನು ಅಧ್ಯಯನ ಮಾಡಿ ತಳೆಯುವ ತೀರ್ಮಾನಗಳು ವಿಶ್ವದ ಎಲ್ಲ ಸಂಸ್ಕ್ರುತಿಗಳಿಗೆ ಅನ್ವಯವಾಗುತ್ತದೆ ಎನ್ನುವ ಪೊಸಿಟಿವಿಸ್ಟ್ ನಿಲುವನ್ನು ಹರ್ಮನೆಟಿಕ್ಸ್‌ಗಳು ಅಲ್ಲಗೆಳೆದರು. ಸಂಶೋಧನೆಗೆ ಕಾಲ ಮತ್ತು ಪ್ರದೇಶ ಸೀಮಿತ ಅನ್ವಯಿಕೆ ಮಾತ್ರ ಸಾಧ್ಯ ಎನ್ನುವುದು ಹರ್ಮನೆಟಿಕ್ಸ್‌ಗಳ ವಾದ. ಈಗಾಗಲೇ ಸಂಗ್ರಹವಾದ ಜ್ಞಾನದಿಂದ ಊಹೆಗಳನ್ನು ರಚಿಸಿಕೊಂಡು ಅವುಗಳನ್ನು ಪರೀಕ್ಷಿಸುವ ಮೂಲಕ ಸ್ಥಾಪಿತ ಸತ್ಯವನ್ನು ಪ್ರಶ್ನಿಸುವ ಸಂಶೋಧನ ಪ್ರಕ್ರಿಯೆಗೆ ಪೊಸಿಟಿವಿಸ್ಟ್‌ಗಳು ಮಹತ್ವ ನೀಡಿದರೆ ನಿರ್ದಿಷ್ಟ ಬದುಕಿನ ಅಧ್ಯಯನಗಳಿಂದ ಲಭ್ಯವಾದ ಫಲಿತಗಳನ್ನು ಒಟ್ಟು ಸೇರಿಸಿ ಸಾಮಾನ್ಯಿಕರಣಕ್ಕೆ ಅಥವಾ ಥಿಯರಿ ಕಟ್ಟುವಿಕೆಗೆ ಪ್ರಯತ್ನಿಸಬೇಕೆನ್ನುವುದು ಹರ್ಮನೆಟಿಕ್ಸ್‌ಗಳ ವಾದ. ಹೀಗೆ ಈ ಎರಡು ತಾತ್ವಿಕ ಹಿನ್ನೆಲೆಗೆ ಸೇರಿದವರ ನಡುವೆ ಸಂಶೋಧನೆ ಮತ್ತು ಅದರ ಸ್ವರೂಪ, ಫಲಿತ, ಅನ್ವಯಿಕೆ ಇತ್ಯಾದಿಗಳ ಕುರಿತು ದೊಡ್ಡ ಮಟ್ಟಿನ ಗುದ್ದಾಟ ನಡೆದಿದೆ ಮತ್ತು ನಡೆಯುತ್ತಿದೆ.

ಸಮಾಜ ಸಂಶೋಧನೆ ಆರಂಭದ ದಿನಗಳಲ್ಲಿ ವಿಜ್ಞಾನ ವಿಧಾನವನ್ನು ಬಳಸಿಕೊಂಡು ಬೆಳೆದ ಶಾಸ್ತ್ರ. ಹಾಗಾಗಿ ಸಮಾಜ ಸಂಶೋಧನೆಯ ಆರಂಭದ ದಿನಗಳಲ್ಲಿ ಪೊಸಿಟಿವಿಸ್ಟ್ ದೃಷ್ಟಿಕೋನಗಳನ್ನು ಬಹುತೇಕ ಸಮಾಜ ವಿಜ್ಞಾನಗಳು ವಿಮರ್ಶೆ ರಹಿತವಾಗಿ ಒಪ್ಪಿಕೊಂಡು ಕೆಲಸ ಮಾಡಿವೆ. ಅರ್ಥ, ರಾಜಕೀಯ, ಸಮಾಜ ಹಾಗೂ ಚರಿತ್ರೆಗಳು ಮೇಲಿನ ಗ್ರಹಿತ ಗಳಿಂದ ಹೆಚ್ಚು ಪ್ರಭಾವಿತಗೊಂಡಿವೆ. ಸಮಾಜ ಶಾಸ್ತ್ರಗಳು ತಮ್ಮ ಮೇಲೆ ಹೇರಿಕೊಂಡ ಯುನಿವರ್ಸಲ್ ನಿಯಮಗಳನ್ನು ಸಂಶೋಧಿಸುವ ಜವಾಬ್ದಾರಿ ಅವುಗಳ (ಸಮಾಜ ಶಾಸ್ತ್ರಗಳ) ಅಧ್ಯಯನ ವಸ್ತುಗಳನ್ನು ಹಾಗೂ ವಿಧಾನಗಳನ್ನು ಕೂಡ ಪ್ರಭಾವಿಸಿದವು. ಅವುಗಳು ವಿಸ್ತಾರವಾದ ಕ್ಷೇತ್ರಗಳನ್ನು ತಮ್ಮ ಅಧ್ಯಯನ ಕ್ಷೇತ್ರಗಳನ್ನಾಗಿ ಮಾಡಿಕೊಂಡವು. ಉದಾಹರಣೆಗೆ ಜಾಗತಿಕ ಚರಿತ್ರೆ ಅಥವಾ ಜಾಗತಿಕ ಅರ್ಥ ವ್ಯವಸ್ಥೆ ಅಥವಾ ಜಾಗತಿಕ

ರಾಜಕೀಯ ವ್ಯವಸ್ಥೆ ಇತ್ಯಾದಿಗಳು ಅವುಗಳ ಅಧ್ಯಯನ ವಿಷಯಗಳಾದವು. ಇಡೀ ಪ್ರಪಂಚದ ಎಲ್ಲ ವ್ಯವಹಾರಗಳನ್ನು ವಿವರಿಸುವ ಕಾಯಕವನ್ನು ಸಮಾಜ ವಿಜ್ಞಾನಗಳು ಹಮ್ಮಿಕೊಂಡವು. ಈ ಕಾಯಕಕ್ಕೆ ವಿಜ್ಞಾನದ ವೈಧಾನಿಕ ಅಂಶಗಳನ್ನು - ಅಂಕಿ ಅಂಶಗಳು, ಹೈಪೋಥೀಸ್‌ಗಳೂ, ಪರೀಕ್ಷೆಗಳು ಇತ್ಯಾದಿಗಳನ್ನು-ಸಮಾಜ ವಿಜ್ಞಾನಗಳು ಅನುಸರಿಸ ಲಾರಂಭಿಸಿದವು. ಸುಮಾರು ಹತ್ತೊಂಬತ್ತನೇ ಮಧ್ಯಭಾಗದವರೆಗೆ ಪೊಸಿಟಿವಿಸ್ಟ್ ವಿಧಾನದ ಛಾಯೆ ಸಮಾಜ ಅಧ್ಯಯನಗಳಲ್ಲಿ ಆಳವಾಗಿ ಬೇರೂರಿತ್ತು. ನಂತರ ದಿನಗಳಲ್ಲಿ ವಿಜ್ಞಾನದ ವಿಧಾನಗಳಲ್ಲೂ ಸಾಕಷ್ಟು ಬದಲಾವಣೆಗಳಾದವು. ಕ್ವಾಂಟಮ್ ಮೆಕಾನಿಕ್ಸ್ ಮತ್ತು ಪ್ರೊಬೆಬಿಲಿಟಿ ಥಿಯರಿಗಳ ಪ್ರಭಾವದಿಂದ ವಿಜ್ಞಾನದಲ್ಲಿ ನಿಖರತೆ ಪ್ರಶ್ನೆ ಅಂಚಿಗೆ ಸರಿದಿವೆ. ಎಲೆಕ್ಟ್ರಾನ್ ನ್ಯೂಟ್ರಾನ್ ಪ್ರೋಟಾನ್‌ಗಳನ್ನು ತುಂಡರಿಸುತ್ತಾ ಹೋದಂತೆ ಹಿಂದಿನ ಇಂಡಿವಿಸಿಬ್‌ಲ್ ಎನ್ನುವ ಸ್ಥಿತಿ ಈಗ ಸಾಧ್ಯವಿಲ್ಲ ಎಂದಾಗಿದೆ. ಹೀಗೆ ಪೊಸಿಟಿವಿಸ್ಟ್ ವಿಧಾನವನ್ನು ಬಳಸುವವರೊಳಗೆ ಸತ್ಯದ ಸ್ವರೂಪದ ಬಗ್ಗೆ, ಸಂಶೋಧಕರು ಮತ್ತು ಸಂಶೋಧನ ವಿಷಯದ ನಡುವಿನ ಸಂಬಂಧದ ಬಗ್ಗೆ ಮತ್ತು ಮೌಲ್ಯ ತೀರ್ಮಾನದ ಬಗ್ಗೆ ಗುಮಾನಿಗಳು ಆರಂಭವಾದವು. ಸಂಶೋಧಕರ ಮೌಲ್ಯಗಳು ಸಂಶೋಧನೆಯನ್ನು ಪ್ರಭಾವಿಸುತ್ತವೆ ಎನ್ನುವುದನ್ನು ಒಪ್ಪಿಕೊಳ್ಳಲಾಯಿತು. ಸತ್ಯ ಎಂದು ಇಷ್ಟರವರೆಗೆ ಪ್ರತಿಪಾದಿಸುತ್ತಿರುವುದು ಒಂದು ಬಗೆಯ ಕಟ್ಟಿಕೊಂಡ ಸತ್ಯ ಎನ್ನುವುದನ್ನು ಕೂಡ ಒಪ್ಪಿಕೊಳ್ಳಲಾಯಿತು. ಪೊಸಿಟಿವಿಸ್ಟ್‌ಗಳಲ್ಲಾದ ಈ ಬದಲಾವಣೆಯನ್ನು ಪೋಸ್ಟ್ ಪೊಸಿಟಿವಿಸ್ಟ್ ಹಂತ ಎಂದು ಗುರುತಿಸಬಹುದು.[೧೧]

ಪೋಸ್ಟ್ ಪೊಸಿಟಿವಿಸ್ಟ್ ಗ್ರಹಿಕೆಗಳು ಹರ್ಮನೆಟಿಕ್ಸ್ ಗ್ರಹಿಕೆಗಳಿಗೆ ತುಂಬ ಹತ್ತಿರ ಇದೆ. ಮುಖ್ಯವಾಗಿ ಮಾನವ ಶಾಸ್ತ್ರ ಮತ್ತು ಒರಿಯಂಟಲ್ ಸ್ಟಡಿಗಳಲ್ಲಿ ಇಂತಹ ಪ್ರಯೋಗಗಳು ಹೆಚ್ಚು ನಡೆದವು. ಮಾನವಶಾಸ್ತ್ರವು ಒಂದು ಆಧುನಿಕ ಸಮಾಜ ವಿಜ್ಞಾನ ವಾಗಿ ಹಾಗೂ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಶಿಸ್ತಾಗಿ ೧೯ನೇ ಶತಮಾನದ ಕೊನೆಯಲ್ಲಿ ಬೆಳೆಯಿತು. ಮಾನವಶಾಸ್ತ್ರದ ಬಹುತೇಕ ಕ್ಷೇತ್ರಕಾರ್ಯಗಳು (ಸಾಮ್ರಾಜ್ಯಶಾಹಿ ದೇಶಗಳಿಗೆ ಸೇರಿದ ವಿದ್ವಾಂಸರುಗಳಿಂದ) ವಸಾಹತುಗಳಲ್ಲಿಯೇ ನಡೆದವು. ವಸಾಹತುಗಳು ಚಿಂತಾಜನಕ ಸ್ಥಿತಿಗತಿಗಳು ಆ ವಿದ್ವಾಂಸರನ್ನು ಕಾಡಿವೆ. ಅಷ್ಟು ಮಾತ್ರವಲ್ಲ ಬಹುತೇಕ ಮಾನವಶಾಸ್ತ್ರಜ್ಞರು ಅನಾಗರಿಕ ಸಮಾಜಗಳನ್ನು ನಾಗರಿಕಗೊಳಿಸುವ ಉದಾತ್ತ ಧ್ಯೇಯ ದೊಂದಿಗೆ ಕೆಲಸ ಮಾಡಿದರು. ಆದರೆ ಆ ವಿದ್ವಾಂಸರು ಸಾಮ್ರಾಜ್ಯಶಾಹಿ ದೇಶಗಳು ಕೊಡಮಾಡಿದ ಪೊಸಿಟಿವಿಸ್ಟ್ ಅಧ್ಯಯನ ಚೌಕಟ್ಟುಗಳನ್ನು ಪ್ರಶ್ನಿಸುವ ಗೋಜಿಗೆ ಹೋಗಲೇ ಇಲ್ಲ.[೧೨] ಎರಡನೇ ಮಹಾಯುದ್ಧ ನಂತರ ಒಂದು ಹೊಸ ಸ್ಥಿತಿ ನಿರ್ಮಾಣವಾಯಿತು. ವಸಾಹತು ಗಳೆಲ್ಲ ಒಂದೊಂದಾಗಿ ಸ್ವತಂತ್ರಗೊಂಡವು. ನಂತರದ ದಿನಗಳಲ್ಲಿ ಮಾನವಶಾಸ್ತ್ರಜ್ಞರು ತಮ್ಮ ಹಿಂದಿನ ಬಿಳಿಯ ಉದ್ಧಾರಕರ ಪಾತ್ರವನ್ನು ಕಳಚಬೇಕಾಯಿತು. ಆದರೆ ಅವರಿಗೆ ಹೊಸತೊಂದು ಪಾತ್ರವು ಸಿದ್ಧವಾಗಿತ್ತು. ಹೊಸತಾಗಿ ಸ್ವತಂತ್ರಗೊಂಡ ದೇಶಗಳು

ಅಭಿವೃದ್ಧಿಯ ಹೆಸರಿನಲ್ಲಿ ತಮ್ಮನ್ನಾಳಿದ ಶ್ರೀಮಂತ ರಾಷ್ಟ್ರಗಳ ಪಡಿಯಚ್ಚಾಗಲು ಪ್ರಯತ್ನಿಸುತ್ತಿದ್ದವು. ಪಶ್ಚಿಮದ ತಂತ್ರಜ್ಞಾನದ ಆಧುನಿಕತೆಯನ್ನು ತಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳುವ ಮೂಲಕ ಪರಿವರ್ತನೆಗೆ ಪ್ರಯತ್ನಿಸುತ್ತಿದ್ದವು. ಇವರ ಪ್ರಯತ್ನದ ಹಿಂದೆ ಸ್ಟ್ರಕ್ಚರಲ್ ಫಂಕ್ಷನಲಿಸಂನ ಪ್ರಭಾವ ಇತ್ತು. ಪಶ್ಚಿಮದ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ಸಾಮಾಜಿಕ ಪರಿವರ್ತನೆ ಸಾಧ್ಯ ಎನ್ನುವುದು ಸ್ಟ್ರಕ್ಚರಲ್ ಫಂಕ್ಷನಲಿಸಂನ ಒಂದು ಮುಖ್ಯ ಗ್ರಹಿಕೆಯೇ ಆಗಿತ್ತು. ಅಂದರೆ ಪಶ್ಚಿಮದ ವಿಜ್ಞಾನ ತಂತ್ರಜ್ಞಾನಗಳನ್ನು ತಮ್ಮ ಉತ್ಪಾದನಾ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡರೆ ಸಮಾಜ ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪರಿವರ್ತನೆ ಸಾಧ್ಯ ಎನ್ನುವ ನಿಲುವು ಈ ವಿಧಾನದ ಕೊಡುಗೆ. ಹೀಗೆ ಹಿಂದುಳಿದ ದೇಶಗಳು ತಮ್ಮ ಪರಿವರ್ತನೆಗಾಗಿ ಶ್ರೀಮಂತ ರಾಷ್ಟ್ರಗಳ ಮಾದರಿಗಳನ್ನು ಅನುಸರಿಸಲು ಆರಂಭಿಸಿದವು. ಪರಿಣಾಮವಾಗಿ ಈ ಪರಿವರ್ತನೆಯನ್ನು ಅಧ್ಯಯನ ಮಾಡುವ ಹೊಸತೊಂದು ಕಾಯಕ ಮಾನವ ಶಾಸ್ತ್ರಜ್ಞರಿಗೆ ದೊರಕಿತು. ಈ ಬದಲಾದ ಪರಿಸರದಲ್ಲಿ ಸಾಂಸ್ಕೃತಿಕ ಸಂಪರ್ಕ, ಸಾಮಾಜಿಕ ಪರಿವರ್ತನೆ, ಆಧುನೀಕರಣ, ನಗರೀಕರಣ, ಪಾಶ್ಚಿಮಾತ್ಯೀಕರಣ ಇತ್ಯಾದಿ ಪರಿಕಲ್ಪನೆಗಳು ಸಮಾಜ ಶಾಸ್ತ್ರದಲ್ಲಿ ರಾರಾಜಿಸತೊಡಗಿದವು.[೧೩]

ಇದೇ ಸಂದರ್ಭದಲ್ಲಿ ಚೈನಾ, ಭಾರತ, ಅರಬ್ ಇತ್ಯಾದಿಗಳ ನಾಗರಿಕತೆಗಳು ವಿದ್ವಾಂಸರಿಗೆ ದೊಡ್ಡ ಕಗ್ಗಂಟಾದವು. ಅವುಗಳಲ್ಲಿನ ಜನ ಜೀವನ ಅತ್ತ ಅನಾಗರಿಕತೆಯೂ ಅಲ್ಲ ಇತ್ತ ಪಶ್ಚಿಮದ ನಾಗರಿಕತೆಗಳ ಜತೆಗೆ ಹೋಲಿಕೆನೂ ಇರಲಿಲ್ಲ. ಇವುಗಳನ್ನು ಎಲ್ಲಿ ಲೊಕೇಟ್ ಮಾಡಬೇಕೆನ್ನುವ ಗೊಂದಲ ವಿದ್ವಾಂಸರನ್ನು ಕಾಡಿದೆ. ಇವುಗಳನ್ನು ಪುರಾತನ ನಾಗರಿಕತೆಗಳೆಂದು ವರ್ಗೀಕರಿಸಲಾಯಿತು. ಇವುಗಳ ಅಧ್ಯಯನಕ್ಕೆ ಒರಿಯಂಟಲ್ ಸ್ಟಡಿ ಎನ್ನುವ ಮತ್ತೊಂದು ಶಾಸ್ತ್ರ ಜನ್ಮತಾಳಿತು. ಈ ಶಾಸ್ತ್ರಗಳು ಪಶ್ಚಿಮದ ಸಮಾಜಕ್ಕಿಂತ ಭಿನ್ನವಾಗಿದ್ದ ಸಮಾಜಗಳನ್ನು ಅಧ್ಯಯನ ಮಾಡುವ ಜವಾಬ್ದಾರಿ ಹೊತ್ತುಕೊಂಡಿದ್ದರಿಂದ ಇವುಗಳಿಗೂ (ಮಾನವಶಾಸ್ತ್ರದಂತೆ) ಯುನಿವರ್ಸಲ್ ನಿಯಮಗಳನ್ನು ಹುಡುಕುವ ಅಥವಾ ಸಂಶೋಧಿಸುವ ಜವಾಬ್ದಾರಿ ಇರಲಿಲ್ಲ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಮಾನವಶಾಸ್ತ್ರ ಅಥವಾ ಒರಿಯಂಟಲ್ ಶಾಸ್ತ್ರಗಳ ಸಂಶೋಧನೆಗಳಿಂದ ಹೊರಹೊಮ್ಮುವ ಸತ್ಯಗಳು ಇಡೀ ಪ್ರಪಂಚಕ್ಕೆ ಅನ್ವಯವಾಗಬೇಕೆಂಬ ಅಗತ್ಯ ಇರಲಿಲ್ಲ. ''ಯಾಕೆಂದರೆ ಅವುಗಳು ವಸಾಹತುಗಳ ಏನೂ ಉಪಯೋಗವಿಲ್ಲದ ಅಥವಾ ತುಂಬಾ ಹಿಂದುಳಿದ ನಾಗರಿಕತೆಗಳನ್ನು ಅಧ್ಯಯನ ಮಾಡುತ್ತಿದ್ದವು. ಅವುಗಳ ಅನುಭವವನ್ನು ಕಟ್ಟಿಕೊಂಡು ಯಾರಿಗೆ ಏನಾಗಬೇಕಾಗಿದೆ? ಹೆಚ್ಚೆಂದರೆ ಅಲ್ಲಿನ ಜನರನ್ನು ಹತೋಟಿಯಲ್ಲಿಡಲು ಅಥವಾ ಉದ್ಧಾರ ಮಾಡಲು ಆ ಜ್ಞಾನ ಬಳಸಬಹುದಾಗಿತ್ತು. ಆ ಎರಡೂ ಸಮಾಜ ವಿಜ್ಞಾನಗಳ ಅಧ್ಯಯನಗಳು (ಚರಿತ್ರೆ, ಸಮಾಜ, ಅರ್ಥ, ರಾಜಕೀಯ ಶಾಸ್ತ್ರಗಳಂತೆ) ಅಬ್ಜೆಕ್ಟಿವ್ ಆಗಿರುವ ಅಗತ್ಯವಿತ್ತು. ಆದರೆ ಅವುಗಳ ವಿಧಾನ ಮಾತ್ರ

ವಿಭಿನ್ನವಾಗಿದ್ದವು. ಶಾಸ್ತ್ರೀಯ ಅಥವಾ ಯುನಿವರ್ಸಲ್ ನಿಯಮಗಳನ್ನು ಶೋಧಿಸಲು ಹೊರಟ ಸಮಾಜ ವಿಜ್ಞಾನಗಳು (ಚರಿತ್ರೆ, ಸಮಾಜ, ಅರ್ಥ ಮತ್ತು ರಾಜಕೀಯ ಶಾಸ್ತ್ರಗಳು) ವಿಜ್ಞಾನದ ವಿಧಾನಗಳನ್ನು ಹೆಚ್ಚು ಹೆಚ್ಚು ಅವಲಂಬಿಸಿದರೆ ಮಾನವಶಾಸ್ತ್ರ ಹರ್ಮನೆಟಿಕ್ಸ್‌ನ್ನು ಹೆಚ್ಚು ಹೆಚ್ಚು ಅವಲಂಬಿಸಿತು. ಅದಕ್ಕೆ ಬಹುಮುಖ್ಯ ಕಾರಣ ಮಾನವಶಾಸ್ತ್ರದ ಅಧ್ಯಯನ ವಿಷಯಗಳು. ಸಂಶೋಧಕರ ಸಂಸ್ಕೃತಿಯಿಂದ ಎಲ್ಲ ರೀತಿಯಿಂದಲೂ ಭಿನ್ನವಾಗಿರುವ ಸಂಸ್ಕೃತಿಯನ್ನು (ಭಾಷೆ, ಆಚಾರ, ವಿಚಾರ, ಇತ್ಯಾದಿಗಳಲ್ಲಿ) ಅಧ್ಯಯನ ಮಾಡುವುದು ಮಾನವಶಾಸ್ತ್ರದ ಒಂದು ನಿಯಮ. ಸಂಶೋಧಕರು ತಮ್ಮದಲ್ಲದ ಸಂಸ್ಕೃತಿಯ ಭಾಷೆ ಮತ್ತು ಜೀವನ ಕ್ರಮಗಳ ನಿಕಟ ಪರಿಚಯ ಮಾಡಿಕೊಳ್ಳುವುದು ಅನಿವಾರ್ಯವಾಗಿತ್ತು. ಆದುದರಿಂದಲೇ ಅವಲೋಕನ ವಿಧಾನ (ಸಹಭಾಗಿತ್ವ ಅವಲೋಕನ ವಿಧಾನ) ಮಾನವಶಾಸ್ತ್ರದ ಬಹುಮುಖ್ಯ ವಿಧಾನವಾಯಿತು. ಅಧ್ಯಯನ ಮಾಡುವ ಸಂಸ್ಕೃತಿಯೊಂದಿಗೆ ಸಂಶೋಧಕರು ಬೆರೆತುಕೊಳ್ಳುವ ಅನಿವಾರ್ಯತೆ ಇತ್ತು.[೧೫] ಈ ಎಲ್ಲ ಪ್ರಕ್ರಿಯೆಗಳಿಂದ ಹರ್ಮನೆಟಿಕ್ಸ್ ಬಲಗೊಂಡಿತು. ಹರ್ಮನೆಟಿಕ್ಸ್ ಬಲಗೊಂಡಿರುವುದು ಸಂಶೋಧನ ದೃಷ್ಟಿಕೋನಗಳ ನಡುವಿನ ಎರಡನೇ ಹಂತದ ಪೈಪೋಟಿಗೆ ಎಡೆಮಾಡಿಕೊಟ್ಟಿದೆ.

ಇತ್ತೀಚಿನ ದಿನಗಳಲ್ಲಿ ಈ ಎರಡು ದೃಷ್ಟಿಕೋನಗಳನ್ನು ಸಂಪೂರ್ಣ ವಿರುದ್ಧ ರೂಪದ್ದು ಎಂದು ಗ್ರಹಿಸುವ ಬದಲು ಪರಸ್ಪರ ಪೂರಕ ಎನ್ನುವ ಗ್ರಹಿಕೆಗಳು ಸಮಾಜ ಸಂಶೋಧನೆಯಲ್ಲಿ ಮಹತ್ವ ಪಡೆಯುತ್ತಿವೆ. ಗುಣಾತ್ಮಕ (ಹರ್ಮನೆಟಿಕ್ಸ್) ಹಾಗೂ ಪರಿಮಣಾತ್ಮಕ (ಪೊಸಿಟಿವಿಸ್ಟ್) ವಿಧಾನಗಳನ್ನು ಪರಸ್ಪರ ವಿರುದ್ಧ ಎನ್ನುವ ಬದಲು ಪರಸ್ಪರ ಪೂರಕ ಎಂದು ಗ್ರಹಿಸುವವರು ತಮ್ಮ ವಿಧಾನವನ್ನು ಮಿಕ್ಸಡ್ ಮೆಥಡ್ ಅಥವಾ ಪ್ರಾಗ್‌ಮೆಟಿಸಂ ಅಥವಾ ನೆಚುರಲಿಸಂ ಇತ್ಯಾದಿ ಹೆಸರುಗಳಿಂದ ಗುರುತಿಸುತ್ತಾರೆ. ಗುಣಾತ್ಮಕ ಹಾಗೂ ಪರಿಣಾಮತ್ಮಕ ವಿಧಾನಗಳನ್ನು ಪರಸ್ಪರ ಪೂರಕ ವಿಧಾನಗಳೆಂದು ಸಾಧಿಸಲು ಹಲವಾರು ಕಾರಣಗಳನ್ನು ಕೊಡುತ್ತಾರೆ. ಅವುಗಳಲ್ಲಿ ಪ್ರಮುಖ ಕಾರಣಗಳು ಇಂತಿವೆ. ಒಂದು, ಸಮಾಜ/ಅರ್ಥ/ ರಾಜಕೀಯ ಎಂಬ ಸಮಾಜ ಇಲ್ಲ-ಎಲ್ಲವು ಮಿಳಿತ ರೂಪದಲ್ಲಿದೆ. ಎರಡು, ಸಮಸ್ಯೆಯೊಂದನ್ನು ಯಾವುದೋ ಒಂದು ದೃಷ್ಟಿಕೋನದಿಂದ ನೋಡುವುದರಿಂದ ಸಮಸ್ಯೆಯ ಒಂದು ಆಯಾಮ ಮಾತ್ರ ಪರಿಚಯ ಸಾಧ್ಯ ಎಲ್ಲ ಆಯಾಮಗಳ ಪರಿಚಯ ಸಾಧ್ಯವಿಲ್ಲ. ಎಲ್ಲ ಆಯಾಮಗಳ ಪರಿಚಯವಾಗಬೇಕಾದರೆ ವಿವಿಧ ದೃಷ್ಟಿಕೋನಗಳಿಂದ ನೋಡಬೇಕು. ಮೂರು, ಅಧ್ಯಯನ ಡಿಡಕ್ಟಿವ್ ಅಥವಾ ಇಂಡಕ್ಟಿವ್ ವಿಧಾನಗಳಿಗೆ ಸೀಮಿತಗೊಂಡರೆ ಆ ವಿಧಾನಗಳ ಕೊರತೆಗಳು ಅಧ್ಯಯನವನ್ನು ಕಾಡುತ್ತವೆ. ಆದುದರಿಂದ ಅವುಗಳನ್ನು ಬೆರೆಸಿ ಅಥವಾ ಜತೆ ಸೇರಿಸಿ ನೋಡುವುದರಿಂದ ಸಮಾಜದ ಬಗ್ಗೆ ಹೆಚ್ಚಿನ ತಿಳಿವಳಿಕೆ ಸಾಧ್ಯ. ನಾಲ್ಕು, ಸಂಶೋಧನ ವಿಷಯದೊಂದಿಗೆ ಗುರುತಿಸಿಕೊಳ್ಳುವ ವಿಷಯಕ್ಕೆ ಸಂಬಂಧಿಸಿದಂತೆ ಎರಡು ದೃಷ್ಟಿಕೋನಗಳು ಹೆಚ್ಚು ಪ್ರಚಲಿದಲ್ಲಿವೆ. ಸಂಶೋಧನ ವಿಷಯದಿಂದ ಅಂತರವನ್ನು ಕಾಪಾಡಿಕೊಳ್ಳಬೇಕೆನ್ನುವ ಒಂದು ವಾದ ಮತ್ತು ಸಂಶೋಧನ ವಿಷಯದೊಂದಿಗೆ

ಗುರುತಿಸಿಕೊಳ್ಳಬೇಕೆನ್ನುವ ಮತ್ತೊಂದು ವಾದ ಇಂದು ಹೆಚ್ಚು ಪ್ರಚಾರದಲ್ಲಿವೆ. ಆದರೆ ಈ ಎರಡನ್ನು ವಿರೋಧಿ ನೆಲೆಯಲ್ಲಿ ನೋಡುವುದು ಸರಿಯಲ್ಲ; ಯಾಕೆಂದರೆ ನೋಡಲು ಸಾಧ್ಯವಿಲ್ಲವೆಂದು ವಾದಿಸಲಾಗಿದೆ. ಐದು, ಬಹುಸತ್ಯ/ಸುಖದ ಕಲ್ಪನೆ ಕೇಂದ್ರೀಕೃತ ಅಧಿಕಾರದ ಕಲ್ಪನೆಯನ್ನು ನಿರಾಕರಿಸುತ್ತದೆ. ಆದರೆ ಇದರ ಸ್ಥಾನದಲ್ಲಿ ಬದಲೀ ವ್ಯವಸ್ಥೆಯನ್ನು ರೂಪಿಸುವುದಿಲ್ಲ. ಇದರಿಂದಾಗಿ ಬಹುಸತ್ಯ/ಬಹುಸುಖದ ಕಲ್ಪನೆ ಹಲವು ಬಾರಿ ಕೇವಲ ಕಾಗದ ಹುಲಿಯಾಗಿಯೇ ಇರುತ್ತದೆಯೇ ಹೊರತು ಕಾರ್ಯರೂಪಕ್ಕೆ ತರಬಹುದಾದ ವಿಚಾರವಾಗಿಲ್ಲ. ಆದುದರಿಂದ ಏಕಸತ್ಯ ಹಾಗೂ ಬಹುಸತ್ಯಗಳನ್ನು ವಿರೋಧಿ ನೆಲೆಯಿಂದ ನೋಡುವ ಬದಲು ಪರಸ್ಪರ ಸಂಬಂಧಿತ ನೆಲೆಯಿಂದ ನೋಡುವ ಅಗತ್ಯವಿದೆ. ಈ ಎಲ್ಲ ಅಂಶಗಳನ್ನು ಒಂದೊಂದಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ. ಮೊದಲಿಗೆ ಎಲ್ಲವನ್ನು ಬಿಡಿಬಿಡಿಯಾಗಿ ನೋಡುವುದು ಸರಿಯಲ್ಲ ಇಡಿಯಾಗಿ ನೋಡಬೇಕೆನ್ನುವ ವಾದವನ್ನು ಪರಿಶೀಲಿಸುವ.

ಸಂಶೋಧನ ಪ್ರಕ್ರಿಯೆಯನ್ನು ಮತ್ತು ಸಂಶೋಧನ ಸಂಗತಿಯನ್ನು ಎರಡನ್ನು ಬಿಡಿಬಿಡಿಯಾಗಿ ನೋಡುವ ಕ್ರಮ ವರ್ತಮಾನದಲ್ಲಿ ಹೆಚ್ಚು ಪ್ರಭಾವ ಬೀರುತ್ತದೆ. ಆರಂಭಿಕ ಸಂಶೋಧಕರು ಸಂಶೋಧನ ಪ್ರಕ್ರಿಯೆಯನ್ನು ಹಲವಾರು ತುಂಡುಗಳ ರೂಪದಲ್ಲಿ ನೋಡುತ್ತಾರೆ. ವಿಷಯ ಆಯ್ಕೆ, ಪ್ರಸ್ತಾವ ರಚನೆ, ಕ್ಷೇತ್ರಕಾರ್ಯ, ಅಂಕಿ ಅಂಶಗಳ ಪರಿಷ್ಕರಣೆ, ಪ್ರಬಂಧ ರಚನೆ ಹೀಗೆ ಹಲವಾರು ತುಂಡುಗಳ ರೂಪದಲ್ಲಿ ಸಂಶೋಧನ ಪ್ರಕ್ರಿಯೆಯನ್ನು ನೋಡಲಾಗುತ್ತಿದೆ. ಇದರಿಂದಾಗಿ ಸಂಶೋಧನ ಪ್ರಕ್ರಿಯೆ ಯನ್ನು ಇಡಿಯಾಗಿ ಗ್ರಹಿಸಲು ಮತ್ತು ನಿರ್ವಚಿಸಲು ಸಂಶೋಧಕರಿಗೆ ಸಾಧ್ಯವಾಗುತ್ತಿಲ್ಲ. ಸಂಶೋಧನೆಯನ್ನು ಯಾವುದೋ ಒಂದು ವಿಷಯದ ಮೇಲಿನ ವಾದ ಮಂಡನೆಯ ರೂಪದಲ್ಲಿ ನೋಡುವ ಅಗತ್ಯವಿದೆಯೆಂದು ಒಂದನೇ ಅಧ್ಯಾಯದಲ್ಲಿ ವಾದಿಸಿದ್ದೇನೆ. ವಾದ ಪ್ರತಿಪಾದನೆಗೆ ಈಗಾಗಲೇ ಸ್ಥಾಪಿತವಾದ ವಾದಗಳೊಂದಿಗೆ ಸಂವಾದ ನಡೆಸುವುದು ಅನಿವಾರ್ಯ. ಜತಗೆ ತಮ್ಮ ವಾದದ ಸ್ಥಾಪನೆಗೆ ಸಾಕಷ್ಟು ಪುರಾವೆಗಳನ್ನು ಒದಗಿಸ ಬೇಕಾಗುತ್ತದೆ. ಈ ಎರಡು ಕೆಲಸಗಳು-ಈಗಾಗಲೇ ಸ್ಥಾಪಿತವಾದಗಳೊಂದಿಗೆ ಸಂವಾದ ನಡೆಸುವುದು ಮತ್ತು ತಮ್ಮ ವಾದ ಸ್ಥಾಪನೆಗೆ ಪುರಾವೆಗಳನ್ನು ಒದಗಿಸುವುದು- ಸಂಶೋಧನೆಯನ್ನು ಇಡಿಯಾಗಿ ನೋಡಲು ಸಂಶೋಧಕರಿಗೆ ನೆರವಾಗುತ್ತವೆ. ಇನ್ನು ಸಂಶೋಧನ ವಸ್ತುವನ್ನು ಬಿಡಿಬಿಡಿಯಾಗಿ ನೋಡುವುದು ಅವಾಸ್ತವ ಎನ್ನುವುದು ನಮ್ಮ ದಿನನಿತ್ಯದ ಬದುಕಿನಿಂದ ಅರಿವಾಗುತ್ತದೆ. ದಿನನಿತ್ಯದ ಬದುಕಿನಲ್ಲಿ ಇದಿಷ್ಟು ಸಮಾಜ ಇದಿಷ್ಟು ಅರ್ಥ ಇದಿಷ್ಟು ರಾಜಕೀಯ ಎಂದು ವಿಂಗಡಿಸಿಲ್ಲ. ಎಲ್ಲವು ನಿರ್ದಿಷ್ಟವಾಗಿ ಗುರುತಿಸಲಾರದಷ್ಟು ಪ್ರಮಾಣದಲ್ಲಿ ಸಮ್ಮಿಳಿತವಾಗಿವೆ. ಸಮಾಜವನ್ನು ಒಟ್ಟಾರೆಯಾಗಿ ಗ್ರಹಿಸುವ ಕಷ್ಟದಿಂದ ತಪ್ಪಿಸಿಕೊಳ್ಳಲು ಬಿಡಿಬಿಡಿಯಾಗಿ ಅಧ್ಯಯನ ಮಾಡುವ ಕ್ರಮ ಬಂತು. ಆದರೆ ಇದು ಹಲವಾರು ಗಂಡಾಂತರಗಳಿಗೆ ಕಾರಣವಾಗಿವೆ. ಯಾವುದೋ ಒಂದು ಪ್ರದೇಶ

ಜನರು ಊಟಕ್ಕಿಲ್ಲದಿದ್ದರು ಶ್ರೀಮಂತ ಸಂಸ್ಕೃತಿಯನ್ನು ಹೊಂದಿದ್ದಾರೆ ಎನ್ನುವ ತೀರ್ಮಾನಕ್ಕೆ ಬರುವುದು, ಯಾವುದೋ ಒಂದು ಕ್ಷೇತ್ರದಲ್ಲಿ ಆಗುವ ಸಕರಾತ್ಮಕ ಬದಲಾವಣೆಯಿಂದ ಮತ್ತೊಂದು ಕ್ಷೇತ್ರದಲ್ಲೂ ಸಕರಾತ್ಮಕ ಬದಲಾವಣೆ ಆಗುತ್ತದೆ ಎಂದು ನಂಬುವುದು ಇತ್ಯಾದಿಗಳು ಬಿಡಿಬಿಡಿಯಾಗಿ ನೋಡುವುದರಿಂದ ಆಗುವ ಅಪಾಯ ಗಳು.[೧೨] ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಆಧುನಿಕ ತಂತ್ರಜ್ಞಾನ ಹಾಗೂ ಸಂಸ್ಥೆಗಳನ್ನು ಅಳವಡಿಸುವುದರಿಂದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಕರಾತ್ಮಕ ಬದಲಾವಣೆ ಆಗುತ್ತದೆ ಎಂದು ನಂಬುವುದು ಇದಕ್ಕೆ ಉತ್ತಮ ಉದಾಹರಣೆ.

ಎಲ್ಲವನ್ನು ಬಿಡಿಬಿಡಿಯಾಗಿ ನೋಡುವ ಕ್ರಮವನ್ನು ಸಮಾಜ ಸಂಶೋಧನೆ ವಿಜ್ಞಾನದ ವಿಧಾನದಿಂದ ಎರವಲು ಪಡೆದುಕೊಂಡಿದೆ. ಸಮಾಜ ಶಾಸ್ತ್ರಜ್ಞರಿಗೆ ಸಮಾಜ ದಲ್ಲಿರುವ ವಿವಿಧ ಕುಟುಂಬಗಳು, ಸಮುದಾಯಗಳು, ಸಂಸ್ಥೆಗಳು, ಸಂಬಂಧಗಳು, ಮೌಲ್ಯಗಳು ಇತ್ಯಾದಿಗಳು ಅಧ್ಯಯನ ಸಂಗತಿಗಳು. ಅವುಗಳ ಪ್ರತ್ಯೇಕತೆ, ಗುರುತು ಇತ್ಯಾದಿಗಳ ರೂಪುಗೊಳ್ಳುವಿಕೆ ಮತ್ತು ಸಾಮಾಜಿಕ ಸಂಬಂಧಗಳಲ್ಲಿ ಈ ಗುರುತುಗಳು ಮತ್ತು ಪ್ರತ್ಯೇಕತೆ ಕೆಲಸ ಮಾಡುವ ವಿಧಾನಗಳನ್ನು ಅರ್ಥಮಾಡಿಕೊಳ್ಳುವುದು ಸಮಾಜ ಶಾಸ್ತ್ರಜ್ಞರ ಆದ್ಯತೆ. ಪ್ರತ್ಯೇಕತೆಯ ನಡುವೆಯೂ ಸಾಧಿಸುವ ಏಕತೆ ಅಥವಾ ಪ್ರತ್ಯೇಕತೆಗಳನ್ನು ಒಗ್ಗೂಡಿಸಿ ರಾಜಕೀಯ ಶಕ್ತಿಯಾಗಿ ಮಾರ್ಪಡಿಸುವ ಪ್ರಕ್ರಿಯೆಯನ್ನು ಅರ್ಥಮಾಡಿ ಕೊಳ್ಳುವುದು ರಾಜಕೀಯ ಶಾಸ್ತ್ರಜ್ಞರ ಆದ್ಯತೆ. ಈಗಾಗಲೇ ಯಜಮಾನಿಕೆಯಲ್ಲಿರುವ ಅರ್ಥಶಾಸ್ತ್ರದ ಥಿಯರಿ ಪ್ರಕಾರ ಅಧ್ಯಯನಕ್ಕೊಳಪಟ್ಟ ಅರ್ಥವ್ಯವಸ್ಥೆ ಇದೆಯೇ ಎಂದು ಪರೀಕ್ಷಿಸುವುದು ವಿಜ್ಞಾನದ ವಿಧಾನವನ್ನು ಯಥಾರೂಪದಲ್ಲಿ ಅನುಸರಿಸುತ್ತಿರುವ ಅರ್ಥಶಾಸ್ತ್ರಜ್ಞರ ಆದ್ಯತೆ. ಹೀಗೆ ಎಲ್ಲರೂ ಬಿಡಿಬಿಡಿಯಾಗಿ ಸಮಾಜ/ಅರ್ಥ/ರಾಜಕೀಯ ಸಂಬಂಧಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ.[೧೩] ಆದರೆ ವಾಸ್ತವದಲ್ಲಿ ವ್ಯಕ್ತಿ ಅಥವಾ ಕುಟುಂಬವೊಂದರ ಬದುಕು-ಇದಿಷ್ಟು ಸಾಮಾಜಿಕ, ಇದಿಷ್ಟು ಆರ್ಥಿಕ, ಇದಿಷ್ಟು ರಾಜಕೀಯ ಎನ್ನುವ ರೀತಿಯಲ್ಲಿ ಇದೆಯೇ? ಪರಸ್ಪರ ಸಂಬಂಧಿಸಿಲ್ಲವೇ? ಉದಾಹರಣೆಗೆ ವ್ಯಕ್ತಿಯೊಬ್ಬರ ಜಾತಿ ಅವರನ್ನು ಕೆಲವೊಂದು ಕೆಲಸಗಳಿಂದ ದೂರ ಇರಿಸಿದರೆ ಅವರ ಆರ್ಥಿಕ ಸ್ಥಿತಿ ಸುಧಾರಿಸುವುದಿಲ್ಲ. ಆರ್ಥಿಕ ಸ್ಥಿತಿ ಸುಧಾರಣೆಯಾಗದಿದ್ದರೆ ಅವರು ತಮ್ಮ ಕುಟುಂಬದ ಶಿಕ್ಷಣ, ಆರೋಗ್ಯ, ಊಟ, ವಸತಿ ಇತ್ಯಾದಿಗಳನ್ನು ಸುಧಾರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಎಲ್ಲವು ಸುಧಾರಿಸದಿದ್ದರೆ ಅವರು ತಮ್ಮ ಸಾಮಾಜಿಕ ಪರಿಸರದಲ್ಲಿ ಕೆಳಸ್ತರದಲ್ಲಿರಬೇಕು. ಕೆಳಸ್ತರದ ಬದುಕು ಅವರ ಆತ್ಮ ವಿಶ್ವಾಸವನ್ನು ಪ್ರಭಾವಿಸಬಹುದು. ಆತ್ಮ ವಿಶ್ವಾಸದ ಕೊರತೆ ಅವರ ಪರಿಸರದಲ್ಲಿ ಅವರ ಬದುಕನ್ನು ಪ್ರಭಾವಿಸುವ ಹಲವಾರು ನಿರ್ಣಯಗಳನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅಡ್ಡಿಯಾಗಬಹುದು. ಹೀಗೆ ಸಾಮಾಜಿಕ ಅಸ್ವಾತಂತ್ರ್ಯ, ಆರ್ಥಿಕ ಹಾಗೂ ರಾಜಕೀಯ ಅಸ್ವಾತಂತ್ರ್ಯದ ಆಚರಣೆಗೆ ಕಾರಣವಾಗಬಹುದು.[೧೪] ವಸ್ತುಸ್ಥಿತಿ ಹೀಗಿದ್ದರೂ (ಪರಸ್ಪರ ಸಂಬಂಧಿಸಿರುವ ಸಾಮಾಜಿಕ,

ಆರ್ಥಿಕ, ರಾಜಕೀಯ ಬದುಕು ಮತ್ತು ಅವುಗಳಿಂದ ಪ್ರಭಾವಿತ ಸ್ವಾತಂತ್ರ್ಯ) ಅಧ್ಯಯನಗಳಲ್ಲಿ ಅವುಗಳನ್ನು ಬಿಡಿಬಿಡಿಯಾಗಿ ನೋಡಲಾಗುತ್ತಿದೆ. ಇದರಿಂದ ವ್ಯಕ್ತಿ/ಕುಟುಂಬ/ಸಮುದಾಯದ ಸಾಮಾಜಿಕ ವ್ಯವಹಾರಗಳ ಇಡಿಯಾದ ಚಿತ್ರಣ ಸಿಗುವುದಿಲ್ಲ. ಇಡಿಯಾದ ಚಿತ್ರಣ ಸಿಗದಿರುವುದರಿಂದ ಯಾವುದೋ ಒಂದು ಸಮಾಜಶಾಸ್ತ್ರದ ದೃಷ್ಟಿಯಿಂದ ಅಧ್ಯಯನ ಮಾಡಿ ಸೂಚಿಸುವ ಪರಿಹಾರಗಳು ವ್ಯಕ್ತಿ/ಕುಟುಂಬ/ಸಮುದಾಯದ ಸಮಸ್ಯೆಗಳನ್ನು ಮೂಲಭೂತವಾಗಿ ಪರಿಹರಿಸಲು ಸಹಕಾರಿಯಾಗುವುದಿಲ್ಲ.

ಸಮಸ್ಯೆಯೊಂದನ್ನು ಯಾವುದೋ ಒಂದು ದೃಷ್ಟಿಕೋನದಿಂದ ನೋಡುವ ಬದಲು ವಿವಿಧ ದೃಷ್ಟಿಕೋನಗಳಿಂದ ನೋಡುವುದರಿಂದ ಸಮಸ್ಯೆಯ ವಿವಿಧ ಆಯಾಮಗಳ ಪರಿಚಯವಾಗುತ್ತದೆ ಮತ್ತು ಸಮಸ್ಯೆ ಪರಿಹಾರ ಪರಿಣಾಮಕಾರಿಯಾಗಬಹುದೆನ್ನುವುದು ಎರಡನೇ ಅಂಶ. ಸಂಸ್ಥೆಯೊಂದರ ನೀತಿ ನಿಯಮಗಳನುಸಾರ ಕೆಲಸಕಾರ್ಯಗಳು ನಡೆಯದಿರುವ ಸಮಸ್ಯೆಯ ಅಧ್ಯಯನದ ಉದಾಹರಣೆಯನ್ನು ನೋಡುವ. ಈ ಅಧ್ಯಯನವನ್ನು ಹಲವು ವಿಧಾನಗಳಲ್ಲಿ ಮಾಡಬಹುದು. ಒಂದು, ನೀತಿ ನಿಯಮಗಳ ಅನುಸರಣೆಯ ಕುರಿತು ನೇರವಾಗಿ ಉದ್ಯೋಗಿಗಳನ್ನು ಕೇಳಬಹುದು. ಎರಡು, ಒಬ್ಬ ಉದ್ಯೋಗಿಯ ಕುರಿತು ಪರೋಕ್ಷವಾಗಿ ಮತ್ತೊಬ್ಬರಲ್ಲಿ ಕೇಳಬಹುದು. ಮೂರು, ಕೆಲಸದ ಸಮಯದಲ್ಲಿ ಉದ್ಯೋಗಿಗಳ ಗಮನಕ್ಕೆ ಬಾರದಂತೆ ಗಮನಿಸಬಹುದು. ನಾಲ್ಕು, ಕೆಲವೊಂದು ಪ್ರಯೋಗಗಳ ಮೂಲಕ ಕಂಡುಕೊಳ್ಳಬಹುದು. ಐದು, ಉದ್ಯೋಗಿಯ ನೀತಿನಿಯಮಗಳ ಅನುಸರಣೆ ಕುರಿತು ಮತ್ತೊಬ್ಬ ಉದ್ಯೋಗಿ ಅಥವಾ ಮೇಲಾಧಿಕಾರಿಗಳಿಂದ ಮಾಹಿತಿ ಸಂಗ್ರಹ ಮಾಡಿ ಅಧ್ಯಯನ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಬಹುದು. ಇದು ಪೊಸಿಟಿವಿಸ್ಟ್ ಅಥವಾ ಕ್ವಾಂಟಿಟೇವ್ ವಿಧಾನ. ಈ ವಿಧಾನ ಸಮಸ್ಯೆಯ ಒಂದು ಮುಖವನ್ನು ಮಾತ್ರ ಪರಿಚಯಿಸುತ್ತದೆ. ಉದ್ಯೋಗಿಗಳ ಕೆಲಸ ಕಾರ್ಯಗಳನ್ನು ಅವಲೋಕ ಮಾಡುವ ಮೂಲಕ ನೀತಿನಿಯಮಗಳ ಅನಸರಣೆಯನ್ನು ಅರ್ಥಮಾಡಿಕೊಳ್ಳಬಹುದು. ಉದ್ಯೋಗಿಗಳ ಗಮನಕ್ಕೆ ಬಾರದಂತೆ ದೂರ ನಿಂತು (ನಾನ್ ಪಾರ್ಟಿಸಿಪೆಂಟ್) ಅವಲೋಕಿಸಬಹುದು ಅಥವಾ ಸಹೋದ್ಯೋಗಿಯಂತೆ ಸೇರಿಕೊಂಡು (ಪಾರ್ಟಿಸಿಪೆಂಟ್) ಅವಲೋಕಗಳನ್ನು ಮಾಡಬಹುದು. ಇದು ಹರ್ಮನೆಟಿಕ್ಸ್ ಅಥವಾ ಕ್ವಾಲಿಟೇಟಿವ್ ವಿಧಾನ. ಇವುಗಳ ಜತೆಗೆ ಕೆಲವೊಂದು ಅರೆ ಪ್ರಯೋಗಗಳ (ಸೆಮಿ ಎಕ್ಸಪರಿಮೆಂಟ್) ಮೂಲಕ ಕೂಡ ಮಾಹಿತಿ ಸಂಗ್ರಹಿಸಬಹುದು. ಹೀಗೆ ಹಲವು ವಿಧಾನಗಳಿಂದ ನೀತಿನಿಯಮಗಳ ಅನುಸರಣೆ ಸಮಸ್ಯೆಯನ್ನು ಅಧ್ಯಯನ ಮಾಡಬಹುದು. ಒಂದು ವಿಧಾನದಿಂದ ಕಂಡುಕೊಂಡ ಫಲಿತಕ್ಕೂ ಮತ್ತೊಂದು ವಿಧಾನದಿಂದ ಬಂದ ಫಲಿತಕ್ಕೂ ಸ್ವಾಮ್ಯತೆ ಇರಬಹುದು ಅಥವಾ ವ್ಯತ್ಯಾಸ ಇರಬಹುದು. ಸ್ವಾಮ್ಯತೆ ಇದ್ದರೆ ಸಮಸ್ಯೆಯ ಹೆಚ್ಚು ನಿಖರವಾಗಿ ಅರ್ಥವಾಗಿದೆ ಎನ್ನಬಹುದು. ಭಿನ್ನತೆ ಇದ್ದರೆ ಇನ್ನಿತರ ವಿಧಾನಗಳ ಮೂಲಕ ಭಿನ್ನತೆಯ ಕಾರಣಗಳನ್ನು ಬಿಡಿಸಲು ಪ್ರಯತ್ನಿಸಬೇಕಾಗುತ್ತದೆ.[20] ಹೀಗೆ ಹಲವು

ದೃಷ್ಟಿಯಿಂದ ಒಂದೇ ಸಮಸ್ಯೆಯನ್ನು ಅಧ್ಯಯನ ಮಾಡುವ ಮೂಲಕ ಸಮಸ್ಯೆಯನ್ನು ಹೆಚ್ಚು ನಿಖರವಾಗಿ ಅರ್ಥಮಾಡಿಕೊಳ್ಳಲು ಸಾಧ್ಯ.

ಈಗಾಗಲೇ ಸಂಗ್ರಹವಾದ(ಎಕ್ಯುಮ್ಯುಲೇಟೆಡ್ ಬಾಡಿ ಆಫ್ ನೋಲೆಡ್ಜ್) ಜ್ಞಾನದಿಂದ ಊಹೆಗಳನ್ನು ರೂಪಿಸಿ ಆ ಊಹೆಗಳನ್ನು ಸಾಮಾಜಿಕ ಪರಿಸರದಲ್ಲಿಟ್ಟು ಪರೀಕ್ಷಿಸಿ ಥಿಯರಿಯ ಸತ್ಯಾಸತ್ಯತೆಯನ್ನು ಪರೀಕ್ಷಿಸುವ ವಿಧಾನವನ್ನು ಡಿಡಕ್ಟಿವ್ ವಿಧಾನ ಎನ್ನುತ್ತೇವೆ. ಊಹೆಗಳನ್ನು ಸಮರ್ಥಿಸುವ ಸಾಮಾಜಿಕ ಸಂಗತಿಗಳು ಅಧ್ಯಯನದಿಂದ ದೊರಕಿದರೆ ಥಿಯರಿ ಸರಿ ಇದೆ ಮತ್ತು ಊಹೆಗಳನ್ನು ಸಮರ್ಥಿಸುವ ಸಂಗತಿಗಳು ಸತತವಾಗಿ ದೊರಕದ್ದರೆ ಥಿಯರಿ ಸರಿ ಇಲ್ಲ ಎನ್ನುವ ತೀರ್ಮಾನಕ್ಕೆ ಬರಲಾಗುತ್ತದೆ. ಈ ವಿಧಾನದ ಗ್ರಹಿಕೆ ಪ್ರಕಾರ ಥಿಯರಿಯನ್ನು ಸಮರ್ಥಿಸುವ ಸಂಗತಿಗಳು ಸಾಮಾಜಿಕ ಪರಿಸರದಲ್ಲಿ ದೊರಕದಿದ್ದರೆ ಥಿಯರಿ ಬದಲಾಗಬೇಕು. ಆದರೆ ವಾಸ್ತವದಲ್ಲಿ ಈ ರೀತಿ ಆಗುವುದಿಲ್ಲ. ಯಾಕೆಂದರೆ ಪೊಸಿಟಿವಿಸ್ಟ್ ಸಮಾಜ ಸಂಶೋಧನೆಯಲ್ಲಿ ಥಿಯರಿ ರೂಪಿಸುವಾಗ ಅನುಸರಿಸುವ ಯುನಿವರ್ಸಾಲಿಟಿ ನಿಯಮವನ್ನು ಥಿಯರಿ ಪರೀಕ್ಷೆಯಲ್ಲಿ ಅನುಸರಿಸುವುದಿಲ್ಲ. ಅಂದರೆ ಯಾವುದೋ ಒಂದು ಸಮಾಜವನ್ನು ಅಧ್ಯಯನ ಮಾಡಿ ಕಂಡುಕೊಂಡ ಸತ್ಯವನ್ನು ಪ್ರಪಂಚದ ಎಲ್ಲ ಸಮಾಜಗಳಿಗೂ ಅನ್ವಯಿಸಿದಷ್ಟು ಸುಲಭದಲ್ಲಿ ಕೆಲವೊಂದು ಸಮಾಜಗಳ ಅಧ್ಯಯನದಿಂದ ಈಗಾಗಲೇ ಸ್ಥಾಪಿತವಾದ ಸತ್ಯ ಸರಿಯಲ್ಲವೆಂದು ಸಾಬೀತಾದರು ಥಿಯರಿ ತಿರಸ್ಕರಿಸಲ್ಪಡುವುದಿಲ್ಲ. ಥಿಯರಿಗೆ ವಿರುದ್ಧವಾದ ಅಥವಾ ಊಹೆಗಳನ್ನು ತಿರಸ್ಕರಿಸುವ ಹಲವಾರು ಉದಾಹರಣೆಗಳು ಕಂಡುಬಂದಾಗ ಮಾತ್ರ ಥಿಯರಿ ಸರಿ ಇಲ್ಲ ಎಂದಾಗುತ್ತದೆ. ಸತ್ಯವೆಂದು ಸ್ವೀಕರಿಸಲು ಒಂದೆರೆಡು ಅಧ್ಯಯನಗಳು ಸಾಕಾದರೆ ಒಮ್ಮೆ ಸತ್ಯ ಎಂದು ಸ್ಥಾಪಿತವಾಗದ ಥಿಯರಿಯನ್ನು ಅಲ್ಲ ಗೆಳೆಯಲು ನೂರಾರು ಅಧ್ಯಯನಗಳು ಬೇಕಾಗುತ್ತವೆ. ಅದಕ್ಕಿಂತಲೂ ಮುಖ್ಯವಾಗಿ ವಿಶ್ಲೇಷಣೆಗೆ ಪರಿಗಣಿಸಬೇಕಾದ ಅಂಶವೆಂದರೆ ಯುನಿವರ್ಸಲ್ ಸತ್ಯಗಳು ರೂಪುಗೊಳ್ಳುವ ವಿಧಾನ. ಹಲವಾರು ಬಗೆಯಲ್ಲಿ ಯುನಿವರ್ಸಲ್ ಲಾಗಳು ರೂಪುಗೊಳ್ಳಬಹುದು. ಎಲ್ಲ ನಿರ್ದಿಷ್ಟಗಳನ್ನು ಅಧ್ಯಯನ ಮಾಡಿ ಅವುಗಳಲ್ಲಿರುವ ಸಾಮಾನ್ಯ ಅಂಶಗಳನ್ನು ಗುರುತಿಸಿ ಅವುಗಳ ಆಧಾರದಲ್ಲಿ ಯುನಿವರ್ಸಲ್ ಲಾಗಳು ರೂಪುಗೊಳ್ಳುವುದು. ಇದು ಆದರ್ಶ ವಿಧಾನ. ಆದರೆ ಈ ವಿಧಾನಕ್ಕೆ ವಿರುದ್ಧವಾದ ಪ್ರಕ್ರಿಯೆ ಹೆಚ್ಚು ಪ್ರಚಾರ ಮತ್ತು ಬಳಕೆಯಲ್ಲಿದೆ. ಈ ವಿಧಾನ ಪ್ರಕಾರ ಕೆಲವೊಂದು ಸಮಾಜಗಳ ಅಧ್ಯಯನದಿಂದ ಹೊರಹೊಮ್ಮಿರುವುದನ್ನೇ ವಿಶ್ವವ್ಯಾಪಿ ಗುಣಗಳೆಂದು ಪ್ರಚಾರ ಪಡಿಸಲಾಗುತ್ತಿದೆ. ಈ ದೃಷ್ಟಿಯಿಂದ ಥಿಯರಿ ಕಟ್ಟುವ ಕೆಲಸ ಯಜಮಾನಿಕೆಯನ್ನು ಸ್ಥಾಪಿಸುವ ಕೆಲಸ. ಯಾಕೆಂದರೆ ಕೆಲವೊಂದು ಸಮಾಜಗಳ ಬೆಳವಣಿಗೆಗಳನ್ನು ಆಧಾರವಾಗಿಟ್ಟುಕೊಂಡು ಉಳಿದವುಗಳಲ್ಲಿ ಸಾಮಾನ್ಯ ಅಂಶವನ್ನು ಹುಡುಕುವುದು ಸಾಮಾನ್ಯವಲ್ಲದನ್ನು ಮೂಲೆ ಗುಂಪಾಗಿಸುತ್ತದೆ. ಸಾಮಾನ್ಯವಲ್ಲದವುಗಳು ನಗಣ್ಯವಾಗುತ್ತವೆ. ಆಧುನೀಕರಣದೊಂದಿಗೆ ಈ ಸಮಸ್ಯೆ ಬೇರೆಯದೆ ರೂಪ ಪಡೆದಿದೆ. ಥಿಯರಿ ಪ್ರಕಾರ

ಸಮಾಜ ಇರದಿದ್ದರೆ ಥಿಯರಿ ಬದಲಾಗಬೇಕಾಗಿಲ್ಲ ಸಮಾಜ ಬದಲಾಗಬೇಕೆನ್ನುವ ಗ್ರಹಿಕೆ ಆಧುನೀಕರಣದಲ್ಲಿ ಕೆಲಸ ಮಾಡುತ್ತಿದೆ. ಹೀಗೆ ಡಿಡಕ್ಟಿವ್ ವಿಧಾನದ ಸಂಶೋಧನೆ ಈಗಾಗಲೇ ಸ್ಥಾಪಿತವಾದ ಸತ್ಯಗಳ ಯಜಮಾನಿಕೆಗೆ ಉತ್ತಮ ಪರಿಸರವನ್ನು ಒದಗಿಸುತ್ತದೆ ಎನ್ನುವ ಆರೋಪವಿದೆ.

ಇಂಡಕ್ಟಿವ್ ವಿಧಾನದಲ್ಲಿ ನಿರ್ದಿಷ್ಟಗಳಲ್ಲಿನ ಸಾಮಾನ್ಯ ಅಂಶಗಳು ಸೇರಿ ಥಿಯರಿ ರೂಪುಗೊಳ್ಳುತ್ತದೆ. ಆದರೆ ಮುಖ್ಯವಾಹಿಯ ಸಂಶೋಧನ ಕ್ರಮ ಪ್ರಕಾರ ಇಂಡಕ್ಟೀವ್ ವಿಧಾನದಿಂದ ಎಂಫಿರಿಕಲ್ ಎವಿಡೆನ್ಸ್ ಸಂಗ್ರಹಿಸಿ ಜನರಲೈಸ್ ಮಾಡಲು ಪ್ರಯತ್ನಿಸಿದರೆ ಅದನ್ನು ಈಗಾಗಲೇ ಯಜಮಾನಿಕೆಯಲ್ಲಿರುವ ಥಿಯರಿಗಳೊಂದಿಗೆ ಇಟ್ಟು ಪರೀಕ್ಷಿಸ ಬೇಕಾಗುತ್ತದೆ. ಅಂದರೆ ಇಂಡಕ್ಟೀವ್ ವಿಧಾನದಿಂದ ಕಂಡುಕೊಂಡ ವಾಸ್ತವತೆ ಈಗಾಗಲೇ ಯಜಮಾನಿಕೆಯಲ್ಲಿರುವ ಥಿಯರಿ ಹೇಳುವ ವಾಸ್ತವತೆಗಳಿಗೆ ಹತ್ತಿರ ಇದೆಯೇ ಅಥವಾ ದೂರ ಇದೆಯೋ ಎಂದು ತೋರಿಸಬೇಕಾಗುತ್ತದೆ. ಎರಡೂ ವಿಧಾನ ಕೂಡ ಯಜಮಾನಿಕೆಯಲ್ಲಿರುವ ಥಿಯರಿ ಕಡೆಗೆ ಹೋಗುವ ಪ್ರಯತ್ನ.[೨೧] ಈ ಸಮಸ್ಯೆ ಪರಿಹಾರಕ್ಕೆ ಮಿಕ್ಸಡ್ ಮೆಥಡ್ ಬಗ್ಗೆ ಮಾತಾಡುವವರು ಈ ಎರಡನ್ನು - ಡಿಡಕ್ಟಿವ್ ಮತ್ತಿ ಇಂಡಕ್ಟಿವ್- ಬೆರೆಸಿ ನೋಡಲು ಸಲಹೆ ನೀಡುತ್ತಾರೆ. ಇಂಡಕ್ಟಿವ್ ವಿಧಾನದಿಂದ ಜನರಲೈಸೇಶನ್ ಅಥವಾ ಥಿಯರಿ ಕಟ್ಟುವುದು ಮತ್ತು ಈ ಬಗೆಯಲ್ಲಿ ಕಟ್ಟಿದ ಥಿಯರಿ ಗಳಿಂದ ಹೈಪೋಥಿಸಿಸ್‌ಗಳನ್ನು ರೂಪಿಸಿಕೊಂಡು ಥಿಯರಿ ಪರೀಕ್ಷೆ ನಡೆಸುವುದು ಮತ್ತು ಊಹೆಗಳು ಸಾಧಿತವಾಗದಿದ್ದರೆ ಥಿಯರಿಯ ಅನ್ವಯಿಕೆಯನ್ನು ತಿರಸ್ಕರಿಸುವುದು ಮಿಕ್ಸಡ್ ಮೆಥಡ್ ಪ್ರತಿಪಾದಿಸುವ ಪರಿಹಾರ.[೨೨] ಈಗಾಗಲೇ ಸ್ಥಾಪಿತವಾದ ಸತ್ಯಗಳಿಂದ ಊಹೆಗಳನ್ನು ರೂಪಿಸಿಕೊಂಡು ಅವುಗಳ ಸತ್ಯಾಸತ್ಯತೆಯನ್ನು ಸಾಮಾಜಿಕ ಪರಿಸರದಲ್ಲಿ ಪರೀಕ್ಷಿಸುವ ವಿಧಾನಕ್ಕಿಂತ ಈ ವಿಧಾನ ಹಲವಾರು ವಿಚಾರಗಳಲ್ಲಿ ಉತ್ತಮವಾಗಿದೆ. ದಿನನಿತ್ಯದ ಬದುಕಿನ ಸಮಸ್ಯೆಯನ್ನೇ ಸಂಶೋಧನ ಸಮಸ್ಯೆಯನ್ನಾಗಿಸಿ ಇಂಡಕ್ಷಿವ್ ವಿಧಾನದಿಂದ ಸಂಶೋಧನೆ ನಡೆಸಬಹುದು. ಇಂತಹ ಸಂಶೋಧನೆಯನ್ನು ಹಲವಾರು ಪ್ರದೇಶಗಳಲ್ಲಿ ಮತ್ತು ಕಾಲಗಳಲ್ಲಿ ಮಾಡುವುದರಿಂದ ಹಲವು ಪ್ರದೇಶ ಮತ್ತು ಕಾಲಗಳ ವ್ಯವಹಾರಗಳು ಒಳಗೊಳ್ಳಬಹುದು. ವಿವಿಧತೆಗಳಲ್ಲಿನ ನಿರ್ದಿಷ್ಟಗಳನ್ನು ಸೇರಿಸಿಕೊಂಡು ಜನರಲೈಸೇಶನ್ ಅಥವಾ ಥಿಯರಿ ಕಟ್ಟುವುದರಿಂದ ಈಗಿನ ಥಿಯರಿ ಕಟ್ಟುವ ಪ್ರಕ್ರಿಯೆ ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ಪರಿಹರಿಸಬಹುದು. ಕೆಲವೊಂದು ಸಂಸ್ಕೃತಿಗಳ ಅನುಭವಗಳ ಹಿನ್ನೆಲೆಯಲ್ಲಿ ಯುನಿವರ್ಸಲ್ ಥಿಯರಿಗಳನ್ನು ಕಟ್ಟುವ ಈಗಿನ ಪ್ರಕ್ರಿಯೆ ವ್ಯಕ್ತಿ/ಪರಿಸರ, ಪಠ್ಯ/ಪರಿಸರ, ಲೋಕಲ್/ಗ್ಲೋಬಲ್, ಸಬ್ಜೆಕ್ಟ್/ ಅಬ್ಜೆಕ್ಟ್, ಮೈಕ್ರೋ/ಮೇಕ್ರೋ ಇತ್ಯಾದಿ ದ್ವಂದ್ವಗಳನ್ನು ಸೃಷ್ಟಿಸಿದೆ. ಬದಲೀ ವಿಧಾನ ಮೇಲಿನ ದ್ವಂದ್ವಗಳಲ್ಲಿ ಮೊದಲಿನ ಭಾಗವನ್ನು-ವ್ಯಕ್ತಿ, ಪಠ್ಯ, ಲೋಕಲ್, ಸಬ್ಜೆಕ್ಟ್, ಮೈಕ್ರೋ ಇತ್ಯಾದಿಗಳನ್ನು ಗಂಭೀರವಾಗಿ ಪರಿಗಣಿಸುತ್ತದೆ ಮಾತ್ರವಲ್ಲ ಇವುಗಳಿಂದಲೇ ಥಿಯರಿ ಕಟ್ಟುವ ಪ್ರಕ್ರಿಯೆಯನ್ನು ಆರಂಭಿಸುತ್ತದೆ. ಈ ಬಗೆಯ ನಿರ್ದಿಷ್ಟತೆಯಿಂದ

ಆರಂಭಗೊಂಡು ಪರಿಸರ, ಗ್ಲೋಬಲ್, ಆಬ್ಜೆಕ್ಟ್, ಮೇಕ್ರೋಗಳತ್ತ ಸಾಗುವುದು ಬದಲೀ ವಿಧಾನದ ಮೂಲಗುಣ. ಥಿಯರಿ ಕಟ್ಟುವ ಇಂತಹ ಪ್ರಕ್ರಿಯೆಯಲ್ಲಿ ಮೊದಲಿಗೆ ಏಕತೆಯಿಂದ ಅನಂತತೆಯತ್ತ ಸಾಗುವುದು ಆದ್ಯತೆಯಾದರೆ ಅನಂತತೆಯಿಂದ ಏಕತೆಯನ್ನು ವಿಶ್ಲೇಷಿಸುವುದು ಕೂಡ ಅಷ್ಟೇ ಪ್ರಾಮುಖ್ಯ ಪ್ರಕ್ರಿಯೆಯಾಗಿದೆ.

ನಮ್ಮ ಅಥವಾ ಪ್ರಪಂಚದ ಸಮಾಜಗಳ ಒಂದು ಸಾಮಾನ್ಯ ಗುಣವೆಂದರೆ ಸಮುದಾಯ ಗಳ ಶ್ರೇಣೀಕೃತ ಇರುವಿಕೆ. ಹೆಚ್ಚು ಕಡಿಮೆ ಒಂದು ಪಿರಾಮಿಡ್ ಆಕಾರದಲ್ಲಿ ವಿವಿಧ ಸಮುದಾಯಗಳು ಜೋಡಿಸಲ್ಪಟ್ಟಿವೆ. ಪ್ರತಿ ಸಮುದಾಯಕ್ಕೂ ಅದರದ್ದೆ ಆದ ಭಾಷೆ, ಸಂಸ್ಕೃತಿ, ಜೀವನ ವಿಧಾನ, ಆಲೋಚನಾ ಕ್ರಮ, ಜೀವನ ಮೌಲ್ಯಗಳು ಇವೆ. ಪ್ರಪಂಚವನ್ನು ನೋಡುವ ದೃಷ್ಟಿಕೋನ, ಸುಖದ ಕಲ್ಪನೆ ಇತ್ಯಾದಿಗಳು ಸಮುದಾಯದಿಂದ ಸಮುದಾಯಕ್ಕೆ ಭಿನ್ನ. ಅವುಗಳನ್ನು ಅನುಭವಿಸಿದವರು ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯ. ಸಮುದಾಯದಿಂದ ಹೊರಗಿರುವರಿಗೆ ಅರ್ಥಮಾಡಿಕೊಳ್ಳಲು ಸಾಧ್ಯ ಇಲ್ಲ. ಯಾಕೆಂದರೆ ಅವರಿಗೆ ಆ ಬದುಕಿನ ಅನುಭವ ಇಲ್ಲ. ದಲಿತರ ಕಷ್ಟ ಸುಖ ಏನೆಂದು ಒಬ್ಬ ದಲಿತ ಹೇಳಬಲ್ಲನೇ ಹೊರತು ದಲಿತನಲ್ಲದವ ಹೇಳಲು ಸಾಧ್ಯವಿಲ್ಲ.[೨೬] ಹೀಗೆ ಪ್ರತಿ ಸಮುದಾಯಕ್ಕೂ ಸೇರಿದವರ ಕಷ್ಟ ಸುಖಗಳನ್ನು ಅರ್ಥಮಾಡಿಕೊಳ್ಳಲು ಆಯಾಯ ಸಮುದಾಯಕ್ಕೆ ಸೇರಿದವರಿಗೆ ಮಾತ್ರ ಸಾಧ್ಯ; ಹೊರಗಿನವರಿಗೆ ಸಾಧ್ಯವಿಲ್ಲ ಎನ್ನುವ ಈ ವಾದ ಬಹುಸತ್ಯ/ಸುಖದ ಕಲ್ಪನೆಯಿಂದ ಹುಟ್ಟಿಕೊಂಡಿದೆ. ಈ ವಾದದ ಅಂತಿಮ ಪರಿಣಾಮವನ್ನು ವಿಶ್ಲೇಸುವ ಮುನ್ನ ಈ ವಾದ ಯಾಕೆ ಹುಟ್ಟಿಕೊಂಡಿತ್ತು ಎನ್ನುವತ್ತ ಸ್ವಲ್ಪ ಗಮನಹರಿಸುವ. ಇದು ವಿಜ್ಞಾನದ ವಿಧಾನವನ್ನು ಪ್ರಶ್ನಿಸುತ್ತಾ ಬೆಳೆದ ವಾದ. ವಿಜ್ಞಾನದ ವಿಧಾನದಲ್ಲಿ ಸಂಶೋಧಕರು ಮತ್ತು ಸಂಶೋಧನೆಗೆ ಒಳಪಡುವ ಸಂಗತಿಗಳ ನಡುವೆ ಅಂತರವಿರಬೇಕೆನ್ನುವ ಅಂಶಕ್ಕೆ ಒತ್ತು ಕೊಡಲಾಗಿದೆ. ಸಬ್ಜೆಕ್ಟ್ ಮತ್ತು ಅಬ್ಜೆಕ್ಟ್ ನಡುವೆ ಅಂತರ ಹೆಚ್ಚಾದಷ್ಟು ಕಂಡುಕೊಳ್ಳುವ ಸತ್ಯ ಹೆಚ್ಚು ನಿಖರವಾಗುತ್ತದೆ ಎನ್ನುವ ಗ್ರಹಿತವಿದೆ. ವಿಜ್ಞಾನ ವಿಧಾನದ ಈ ನಿಲುವನ್ನು ಪ್ರಶ್ನಿಸುವ ನಿಟ್ಟಿನಲ್ಲಿ ಮೇಲಿನ ವಾದ ಹುಟ್ಟಿಕೊಂಡಿದೆ. ಅಂದರೆ ಸಾಮಾಜಿಕ ಸತ್ಯಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಸಂಶೋಧನೆ ಮಾಡುವವರು ಮತ್ತು ಸಂಶೋಧನೆಗೆ ಒಳಪಡುವವರ ನಡುವೆ ಅಂತರ ಹೆಚ್ಚಾಗಬೇಕಾದಲ್ಲ; ಕಡಿಮೆ ಆಗಬೇಕಾಗಿದೆ ಎನ್ನುವ ಅಂಶವನ್ನು ಈ ವಾದ ಮುಂದಿಡುತ್ತದೆ. ಈ ಸಮಸ್ಯೆಯನ್ನು ಕೂಡ ಅಂತರ ಇಟ್ಟುಕೊಳ್ಳುವ ಅಥವಾ ಇಟ್ಟುಕೊಳ್ಳದಿರುವ ಎರಡು ತೀವ್ರ ದೃಷ್ಟಿಗಳಿಂದ ನೋಡುವುದು ಫಲಕಾರಿಯಲ್ಲ.

ಮನುಷ್ಯರನ್ನು ಮಾತನಾಡಿಸಿ ಮಾಹಿತಿ ಸಂಗ್ರಹ ಮಾಡುವ ಅವಶ್ಯಕತೆಯಿಲ್ಲದ ಅಥವಾ ಈಗಾಗಲೇ ಸೃಷ್ಟಿಯಾದ ಜ್ಞಾನವನ್ನು ಬಳಸಿಕೊಂಡು ನಡೆಯುವ ಸಂಶೋಧನೆಗಳಿಗೆ ಇದೊಂದು ಸಮಸ್ಯೆಯೇ ಅಲ್ಲವೆಂದು ಮೇಲ್ನೋಟಕ್ಕೆ ಕಾಣಬಹುದು. ಆದರೆ ಇದು ಭೌತಿಕವಾಗಿ ವಿಷಯದೊಂದಿಗೆ ಗುರುತಿಸಿಕೊಳ್ಳುವ ಸಮಸ್ಯೆಯಲ್ಲ. ಸಂಶೋಧಕರ

ಆಲೋಚನೆಗಳು, ದೃಷ್ಟಿಕೋನಗಳಿಗೆ ಸಂಬಂಧಿಸಿದ ವಿಚಾರವಿದು. ಈ ದೃಷ್ಟಿಯಿಂದ ಯಾವುದೇ ಸಂಶೋಧನೆ ಕೂಡ ವಿಷಯದೊಂದಿಗೆ ಯಾವುದೋ ಒಂದು ಬಗೆಯ ಸಂಬಂಧವನ್ನು ಹೊಂದಿರುವ ಸಾಧ್ಯತೆಯನ್ನು ಅಲ್ಲಗೆಳೆಯಲು ಸಾಧ್ಯವಿಲ್ಲ. ಸಂಶೋಧನೆಯನ್ನು ನಿರ್ಲಿಪ್ತವಾಗಿ ಮಾಡಬೇಕೆನ್ನುವುದು ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲದ ಸಲಹೆ. ಯಾಕೆಂದರೆ ಸಂಶೋಧಕ ತನ್ನ ಬದುಕಿನಿಂದ ಮತ್ತು ಓದಿನಿಂದ ರೂಪಿಸಿಕೊಂಡ ಎಲ್ಲ ಆಲೋಚನೆಗಳನ್ನು ಮತ್ತು ದೃಷ್ಟಿಕೋನಗಳನ್ನು ಖಾಲಿ ಮಾಡಿಕೊಂಡು ಸಂಶೋಧನೆ ಆರಂಭಿಸುವುದಿಲ್ಲ ಮತ್ತು ಆರಂಭಿಸಲು ಸಾಧ್ಯವೂ ಇಲ್ಲ. ಬದುಕು ಮತ್ತು ಓದಿನಿಂದ ರೂಢಿಸಿಕೊಂಡ ದೃಷ್ಟಿಕೋನಗಳು ಅಧ್ಯಯನ ವಿಷಯದೊಂದಿಗಿನ ಸಂಶೋಧಕರ ಸಂಬಂಧವನ್ನು ರೂಪಿಸುತ್ತವೆ. ಹೀಗಾಗಿ ಸಂಶೋಧಕರು ತಾವು ಅಧ್ಯಯನ ಮಾಡುವ ವಿಷಯದೊಂದಿಗೆ ಯಾವುದೋ ಒಂದು ಬಗೆಯಲ್ಲಿ ಗುರುತಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ. ಈ ಸಂಬಂಧ ಸಂಶೋಧನ ಸಮಸ್ಯೆಯನ್ನು ಸಂಶೋಧಕರ ಸ್ವಂತ ಸಮಸ್ಯೆಯ ರೂಪದಲ್ಲಿ ನೋಡಿ ಅಧ್ಯಯನ ಮಾಡಲು ಪ್ರೇರೇಪಿಸಿದಂತೆ ಸಂಶೋಧನ ವಿಷಯವನ್ನು ತನಗೆ ಸಂಬಂಧಪಡದ ಯಾರದೋ ಸಮಸ್ಯೆಯೆಂದು ನಿರ್ಲಿಪ್ತವಾಗಿ ನೋಡಲು ಪ್ರೇರೇಪಿಸಬಹುದು. ಈ ನಿರ್ಲಿಪ್ತತೆ ಕೂಡ ಸಂಶೋಧಕರ ಓದು ಮತ್ತು ಬದುಕಿನಿಂದ ರೂಪಿತವಾದ ಒಂದು ತೀರ್ಮಾನ. ಈ ವಿಚಾರದಲ್ಲಿ - ಸಂಶೋಧನ ವಿಷಯದೊಂದಿಗೆ ಗುರುತಿಸಿಕೊಳ್ಳುವ ಅಥವಾ ಕೊಳ್ಳದಿರುವ ವಿಚಾರದಲ್ಲಿ ಸಂಶೋಧಕರಿಗೆ ಆಯ್ಕೆಗಳಿಲ್ಲ. ಆದುದರಿಂದ ದೂರ ನಿಲ್ಲುವ ಅಥವಾ ಹತ್ತಿರ ಹೋಗುವ ಈ ಚರ್ಚೆಗಳು ನಿರುಪಯುಕ್ತ. ಯಾಕೆಂದರೆ ಸಂಶೋಧನ ವಿಷಯದೊಂದಿಗೆ ಯಾವುದೋ ಒಂದು ಬಗೆಯ ಸಂಬಂಧವಿಲ್ಲದ ಸ್ಥಿತಿಯನ್ನು ಊಹಿಸಿಕೊಳ್ಳುವುದು ಅಸಾಧ್ಯ. ಸಂಶೋಧನ ವಿಷಯದೊಂದಿಗೆ ಅಂತರವನ್ನು ಇಟ್ಟುಕೊಳ್ಳುವುದಾದರೆ ಹೇಗೆ? ಯಾವ ಸಂದರ್ಭದಲ್ಲಿ? ಎಷ್ಟು ಪ್ರಮಾಣದಲ್ಲಿ? ಯಾವ ರೂಪದಲ್ಲಿ? ಇಟ್ಟುಕೊಳ್ಳಬೇಕನ್ನುವ ಚರ್ಚೆ ಈಗ ಉಪಯುಕ್ತ. ಪ್ರತಿಯೊಬ್ಬರು ಒಂದಲ್ಲ ಒಂದು ಸಾಮಾಜಿಕ ಪರಿಸರದಲ್ಲಿ ವ್ಯವಹರಿಸುತ್ತಿರುತ್ತಾರೆ. ಆ ಪರಿಸರದ ಆಚಾರ ವಿಚಾರಗಳು, ನೀತಿ ನಿಯಮಗಳು, ಮೇಲುಕೀಳುಗಳು, ಜನರ ದಿನನಿತ್ಯದ ವ್ಯವಹಾರಗಳು ಬಹುತೇಕರಿಗೆ ಸಹಜವಾಗಿರಬಹುದು. ಕೋಮುವಾದ ಬಲವಾಗಿ ಬೇರೂರಿರುವ ಪರಿಸರದಲ್ಲಿ ಬೇರೆ ಬೇರೆ ಧರ್ಮಗಳಿಗೆ ಸೇರಿದ ಜನರ ನಡುವೆ ದಿನನಿತ್ಯ ಕ್ಷುಲಕ ಕಾರಣಗಳಿಗೆ ಘರ್ಷಣೆಗಳಾಗುವುದು, ಸಾವುನೋವುಗಳಾಗುವುದು. ಆಸ್ತಿಪಾಸ್ತಿ ನಷ್ಟವಾಗುವುದು ಬಹುತೇಕರಿಗೆ ಸಹಜವಾಗಬಹುದು. ಜಾತಿ ಪದ್ಧತಿ ಬಲವಾಗಿರುವ ಪರಿಸರದಲ್ಲಿ ಕೆಳಜಾತಿ ಜನರನ್ನು ಹೀನಾಯವಾಗಿ ನಡೆಸಿಕೊಳ್ಳುವುದು ಬಹುತೇಕರಿಗೆ ಸಹಜವಾಗಬಹುದು. ಲಿಂಗಬೇಧವನ್ನು ಒಪ್ಪಿಕೊಂಡಿರುವವರಿಗೆ ಮಹಿಳೆಯರನ್ನು ಎರಡನೇ ದರ್ಜೆ ಪ್ರಜೆಗಳ ರೀತಿಯಲ್ಲಿ ನಡೆಸಿಕೊಳ್ಳುವುದು ವಿಶೇಷ ಅನ್ನಿಸದಿರಬಹುದು. ವರ್ಗಭೇದ ಸಹಜವಾಗಿರುವ ಪರಿಸರದಲ್ಲಿ ದೊಡ್ಡ ದೊಡ್ಡ ಬಂಗ್ಲೆಗಳಲ್ಲಿ ಕೆಲವೇ ಕೆಲವು ಜನ ವಾಸಿಸುವ ಸಂದರ್ಭದಲ್ಲೇ ಲಕ್ಷಾಂತರ ಜನ ವಸತಿ ಇಲ್ಲದೆ ಬೀದಿ ಬದಿಯಲ್ಲಿ ವಾಸಿಸುವುದು ಸಾಮಾನ್ಯ

ಸಂಗತಿಯಾಗಬಹುದು. ಊಟಕ್ಕಿಲ್ಲದ, ಸರಿಯಾದ ಶಿಕ್ಷಣವಿಲ್ಲದ ಮತ್ತು ಆರೋಗ್ಯವಿಲ್ಲದ ಲಕ್ಷಾಂತರ ಜನರಿರುವ ಪರಿಸರದಲ್ಲಿ ಕೊಬ್ಬು ಕರಗಿಸುವ ವ್ಯಾಪಾರ ಚೆನ್ನಾಗಿ ನಡೆಯುವುದು ಬಹುತೇಕರಿಗೆ ವಿಶೇಷ ಅನ್ನಿಸದಿರಬಹುದು.

ಮೇಲಿನ ಎಲ್ಲ ಉದಾಹರಣೆಗಳಲ್ಲೂ ಸಹಜತೆಯನ್ನು ಕಾಣುವವರು ತಮ್ಮ ಪರಿಸರದೊಂದಿಗಿನ ಬೆಳವಣಿಗೆಯೊಂದಿಗೆ ಗುರುತಿಸಿಕೊಂಡಿದ್ದಾರೆ ಎನ್ನಬಹುದು. ಅಲ್ಲಿ ನಡೆಯುವುದು ಎಲ್ಲವು ಅವರಿಗೆ ಸಾಮಾನ್ಯ ಅಥವಾ ವಿಶೇಷ ಏನೂ ಇಲ್ಲ ಅನ್ನಿಸಬಹುದು ಅಥವಾ ಸಹಜವಾಗಬಹುದು. ಸಹಜವಾಗಿರುವುದರಿಂದ ಅಲ್ಲಿನ ವ್ಯವಹಾರಗಳ ಕುರಿತು ಇದ್ಯಾಕೆ ಹೀಗೆ? ಅದ್ಯಾಕೆ ಹಾಗೆ? ಅವರ‍್ಯಾಕೆ ಅಷ್ಟು ಮೇಲಿದ್ದಾರೆ? ಇವರ‍್ಯಾಕೆ ಇಷ್ಟು ಕೆಳಗಿದ್ದಾರೆ? ಎನ್ನುವ ಪ್ರಶ್ನೆಗಳು ಮೂಡುವುದೇ ಇಲ್ಲ. ಇಂತಹ ಪ್ರಶ್ನೆಗಳು ಮೂಡಿದ್ದರೆ ಸಂಶೋಧನೆ ಸಾಧ್ಯವೇ ಇಲ್ಲ. ಇಂತಹ ಪ್ರಶ್ನೆಗಳು ಮೂಡಬೇಕಾಗಿದ್ದರೆ ತಾವು ಬದುಕುವ ಪರಿಸರದಲ್ಲಿನ ಸಹಜತೆಗಳಲ್ಲಿರುವ ಅಸಹಜತೆಗಳನ್ನು ಕಾಣುವ ಶಕ್ತಿ ಬೇಕು. ಸಹಜತೆಯಲ್ಲಿರುವ ಅಸಹಜತೆಯನ್ನು ಗುರುತಿಸಬೇಕಾದರೆ ಬದುಕುವ ಪರಿಸರವನ್ನು ದೂರ ನಿಂತು ನೋಡುವ ಅಭ್ಯಾಸ ರೂಢಿಯಾಗಬೇಕು. ಈ ಬಗೆಯ ದೂರ ಅಥವಾ ಅಂತರ ಇಟ್ಟು ನೋಡುವ ಕ್ರಮಕ್ಕೂ ಪೊಸಿಟಿವಿಸ್ಟ್ ವಿಧಾನ ಹೇಳುವ ವಿಷಯ ಮತ್ತು ಅಧ್ಯಯನಕಾರರ ನಡುವೆ ಇರಬೇಕೆನ್ನುವ ಅಂತರಕ್ಕೂ ವ್ಯತ್ಯಾಸವಿದೆ. ಪೊಸಿಟಿವಿಸ್ಟ್ ವಿಧಾನ ಬಯಸುವ ಅಂತರ ಅಧ್ಯಯನಕಾರರು ಅಧ್ಯಯನ ವಿಷಯವನ್ನು ಸಂಪೂರ್ಣ ನಿರ್ಲಿಪ್ತತೆಯಿಂದ ನೋಡಬೇಕೆಂದು ಒತ್ತಾಯ ಮಾಡುತ್ತದೆ. ಸಂಪೂರ್ಣ ನಿರ್ಲಿಪ್ತತೆಯಿಂದ ಜ್ಞಾನ ಉತ್ಪಾದನೆಯಾಗುತ್ತದೋ ಇಲ್ಲವೋ ಎನ್ನುವುದು ದೊಡ್ಡ ವಾಗ್ವಾದದ ಸಂಗತಿಯಾಗಿದೆ. ಈ ಚರ್ಚೆಯನ್ನು ಸಂಶೋಧನ ವಿಷಯ ಆಯ್ಕೆಯ ಮೇಲಿನ ಚರ್ಚೆಯಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಿದ್ದೇನೆ. ಇಲ್ಲಿ ಪೊಸಿಟಿವಿಸ್ಟ್‌ಗಳು ಪ್ರತಿಪಾದಿಸುವ ಅಂತರ ಮತ್ತು ಬದಲೀ ವಿಧಾನ ಪ್ರತಿಪಾದಿಸುವ ಅಂತರಗಳ ನಡುವಿನ ವ್ಯತ್ಯಾಸವನ್ನು ಆರಂಭಿಕ ಸಂಶೋಧಕರಿಗೆ ಪರಿಚಯಿಸಲು ಪ್ರಯತ್ನಿಸಿದ್ದೇನೆ. ಚಿತ್ರದಲ್ಲಿ ವಿಚಿತ್ರವನ್ನು ನೋಡುವ ಅಥವಾ ವಿಚಿತ್ರದಲ್ಲಿ ಚಿತ್ರವನ್ನು ನೋಡುವ ಸಂತೆಯಲ್ಲಿ ಏಕಾಂಗಿಯಾಗುವ ಅಥವಾ ಏಕಾಂಗಿಯಾಗಿರುವಾಗ ಸಂತೆಯಲ್ಲಿದ್ದ ಅನುಭವ ಆಗುವ ಉತ್ತರದಲ್ಲಿ ಪ್ರಶ್ನೆಯನ್ನು ಹುಡುಕುವ ಅಥವಾ ಪ್ರಶ್ನೆಯಲ್ಲಿ ಉತ್ತರವನ್ನು ಹುಡುಕುವ ಅಂತರವನ್ನು ಬದಲೀ ವಿಧಾನ ಬಯಸುತ್ತದೆ. ಅಂದರೆ ಇದೊಂದು ಬಗೆಯಲ್ಲಿ ಇದ್ದು ಇಲ್ಲದಿರುವ ಅಥವಾ ಜತೆಯಾಗಿದ್ದುಕೊಂಡೇ ಅಂತರವನ್ನು ಇಟ್ಟುಕೊಳ್ಳುವ ಅಭ್ಯಾಸ. ಈ ಅಭ್ಯಾಸ ಮೊದಲಿಗೆ ಆರಂಭವಾಗಬೇಕಾಗಿರುವುದು ತಮ್ಮನ್ನು ತಾವೇ ದೂರದಿಂದ ನೋಡಲು ಅಭ್ಯಾಸ ಮಾಡುವುದರಿಂದ. ಹೀಗೆ ಇಲ್ಲಿ ಅಧ್ಯಯನಕಾರರು ತಮ್ಮನ್ನು ತಾವೇ ವಿಶ್ಲೇಷಣೆಗೆ ಗುರಿಪಡಿಸಿಕೊಳ್ಳುವುದು ತಾವು ಬದುಕುವ ಪರಿಸರದಲ್ಲಿನ ವ್ಯವಹಾರಗಳನ್ನು ವಿಶ್ಲೇಷಣೆಗೆ ಗುರಿಪಡಿಸಲು ಪೀಠಿಕೆಯಾಗುತ್ತದೆ. ಈ ಎರಡರ ಗುರಿ - ಆತ್ಮ ವಿಶ್ಲೇಷಣೆ ಹಾಗೂ ಪರಿಸರ ವಿಶ್ಲೇಷಣೆ - ಆತ್ಮ ಮತ್ತು ಪರಿಸರದ ಒಟ್ಟಾರೆ ಏಳಿಗೆ. ಆತ್ಮ ಹಾಗೂ ಪರಿಸರ

ವಿಶ್ಲೇಷಣೆಯಿಂದ ದೊರಕುವ ಜ್ಞಾನವನ್ನು ಅವುಗಳ ಏಳಿಗೆಗೆ ಬಳಸುವ ಬಲವಾದ ಉದ್ದೇಶ ಇದ್ದು ಇಲ್ಲದಿರುವ ಸಂಬಂಧದಲ್ಲಿ ಇದೆ. ಆದರೆ ಪೊಸಿಟಿವಿಸ್ಟ್‌ನ ನಿರ್ಲಿಪ್ತತೆ ಅಧ್ಯಯನ ವಸ್ತುವನ್ನು ಅಧ್ಯಯನ ಸಂದರ್ಭದಲ್ಲಿ ಮಾತ್ರ ನಿರ್ವಿಕಾರ ಭಾವದಿಂದ ನೋಡಲು ತರಬೇತು ನೀಡುವುದಲ್ಲ; ಸತತವಾಗಿ ಅಧ್ಯಯನಕಾರರನ್ನು ತಮ್ಮ ಸುತ್ತಮುತ್ತಲಿನ ವ್ಯವಹಾರಗಳನ್ನು ನಿರ್ಲಿಪ್ತವಾಗಿ ನೋಡಲು ಪ್ರೇರೇಪಿಸುತ್ತದೆ. ಇದರಿಂದಾಗಿ ಅಧ್ಯಯನಕಾರರು ಸಾಮಾಜಿಕ ಸಮಸ್ಯೆಗಳ ಮಡುವಲ್ಲಿ ನಿಂತಿರುವಾಗಲು ಅಧ್ಯಯನ ಸಮಸ್ಯೆಗಳ ಕೊರತೆ ಕಾಡುತ್ತದೆ. ಅಷ್ಟು ಮಾತ್ರವಲ್ಲ; ಕಾಲ ಬುಡದಲ್ಲಿ ಆನೆ ಸತ್ತು ಬಿದ್ದಿರುವುದು ಸಮಸ್ಯೆಯಾಗದೆ ದೂರದಲ್ಲಿ ಸತ್ತು ಬಿದ್ದಿರುವ ಇರುವೆ ಸಮಸ್ಯೆಯಾಗಬಹುದು. ಈ ಎಲ್ಲದರ ಪರಿಣಾಮವಾಗಿ ಅಧ್ಯಯನಕ್ಕೆ ಒಳಗಾಗುವ ಸಂಬಂಧ, ಸಂಸ್ಥೆ, ಮೌಲ್ಯ ಮುಂತಾದವುಗಳು ಕೇವಲ ಅಂಕಿ ಅಂಶಗಳನ್ನು ನೀಡುವ ತಾಣಗಳಾಗಬಹುದು. ಇವುಗಳ ಅಧ್ಯಯನದಿಂದ ದೊರಕುವ ಜ್ಞಾನ ಪುನಃ ಅವುಗಳ ಉದ್ಧಾರಕ್ಕೆ ಬಳಕೆಯಾಗುತ್ತದೆ ಎನ್ನುವ ಗ್ಯಾರಂಟಿ ಇಲ್ಲ.

ಅಧ್ಯಯನ ವಿಷಯದೊಂದಿಗಿನ ಸಂಬಂಧದ ಚರ್ಚೆಯಂತೆ ಏಕ ಮತ್ತು ಬಹು ಸತ್ಯದ ಚರ್ಚೆ ಕೂಡ ಏಕಮುಖವಾಗಿ ಸಾಗಿದೆ. ಏಕ ಸತ್ಯದ ವಾದ ಏಕ ಅಧಿಕಾರದ ಕೇಂದ್ರವನ್ನು ಸೃಷ್ಟಿಸುತ್ತದೆ. ಇಂತಹ ಏಕ ಅಧಿಕಾರದ ಕೇಂದ್ರ ತಳಸ್ತರದ ಜನರ ಹಿತಾಸಕ್ತಿ ರಕ್ಷಣೆಯ ದೃಷ್ಟಿಯಿಂದ ಉಪಯೋಗವಿಲ್ಲ. ಬಹುಸತ್ಯದ ವಾದ ತಳಸ್ತರದ ಹಿತಾಸಕ್ತಿ ದೃಷ್ಟಿಯಿಂದ ಉತ್ತಮ ಎನ್ನುವ ತಾತ್ಪರ್ಯವನ್ನು ಈ ವಾದ ಮಂಡಿಸುತ್ತಿದೆ. ಒಂದು ಹಂತದವರೆಗೆ ಈ ವಾರದಲ್ಲಿ ಹುರುಳಿದೆ. ಆದರೆ ಈ ವಾದವನ್ನು ಅತಿಯಾಗಿ ಜಗ್ಗಿದರೆ ತಳಸ್ತರದ ಜನರಿಗೆ ಲಾಭವಾಗುವುದಕ್ಕಿಂತ ಹೆಚ್ಚು ನಷ್ಟವೇ ಆಗಬಹುದೆನ್ನುವುದನ್ನು ಕೆಳಗಿನ ಉದಾಹರಣೆಯಿಂದ ಅರ್ಥಮಾಡಿಕೊಳ್ಳಬಹುದು. ಸಮಾಜವೊಂದರಲ್ಲಿನ ಸಮುದಾಯಗಳು ಶ್ರೇಣೀಕೃತವಾಗಿ ಜೋಡಿಸಲ್ಪಟ್ಟಿವೆ. ಅಷ್ಟು ಮಾತ್ರವಲ್ಲ ಅವುಗಳ ಸುಖದುಃಖಗಳ ಕಲ್ಪನೆ, ನ್ಯಾಯ ಅನ್ಯಾಯಗಳ ಕಲ್ಪನೆ, ಮಾನ ಸಮ್ಮಾನಗಳ ಕಲ್ಪನೆ ಕೂಡ ಭಿನ್ನವಾಗಿವೆ. ಈ ದೃಷ್ಟಿಯಿಂದ ಸಮಾಜದ ವಿವಿಧ ಸಮುದಾಯಗಳ ಬೇಕು ಬೇಡಗಳನ್ನು ನೋಡಿ ಪರಿಹಾರಕ್ಕೆ ಪ್ರಯತ್ನಿಸಿದರೆ ಶ್ರೇಣೀಕೃತ ಪರಿಹಾರಗಳು ಕೂಡ ದೊರಕಬಹುದು. ಜೋಪಡಿ ಪಟ್ಟಿಯಲ್ಲಿ ಮೂರು ಹೊತ್ತಿನ ಊಟಕ್ಕೆ ಪರದಾಡುವ ವ್ಯಕ್ತಿಯೊಬ್ಬನಿಗೆ ಒಂದಿಷ್ಟು ಗಂಜಿ ಸಿಕ್ಕಿದರೂ ಆತ ಸುಖದಲ್ಲಿ ಇರಬಹುದು. ಆ ಗಂಜಿ ಕೂಡ ಸಿಗದಾಗ ಆತ ದುಃಖಿಯಾಗಬಹುದು ಅಥವಾ ಆತನ ಸುಖದ ಕಲ್ಪನೆಗೆ ಧಕ್ಕೆಯಾಗಬಹುದು. ಮಧ್ಯಮ ವರ್ಗಕ್ಕೆ ಸೇರಿದ ವ್ಯಕ್ತಿ ಅಥವಾ ಕುಟುಂಬವೊಂದು ಸುಖದಲ್ಲಿ ಇರಬೇಕಾದರೆ ಅವರಿಗೆ ಕನಿಷ್ಠ ಒಂದು ಪಕ್ಕಾ ಮನೆ ಬೇಕು, ಟಿವಿ ಬೇಕು, ಓಡಾಡಲು ಕನಿಷ್ಟ ಒಂದು ದ್ವಿಚಕ್ರ ವಾಹನವಾದರೂ ಬೇಕು. ಇವೆಲ್ಲ ಇದ್ದರೆ ಆತ ತೃಪ್ತ. ಇವುಗಳಲ್ಲಿ ಕೊರತೆ ಉಂಟಾದಾಗ ಆತ ಅತೃಪ್ತ. ಇನ್ನೂ ಮುಂದೆ ಹೋದರೆ ಒಬ್ಬ ಶ್ರೀಮಂತ ವ್ಯಕ್ತಿಗೆ ಅಥವಾ ಕುಟುಂಬಕ್ಕೆ ದೊಡ್ಡ ಬಂಗಲೆ, ಓಡಾಡಲು ಕಾರು, ಕೈಗೊಂದು ಕಾಲಿಗೊಂದು ಆಳುಗಳು ಹೀಗೆ ಹಲವಾರು ಸವಲತ್ತುಗಳು ಇದ್ದರೆ

ಮಾತ್ರ ಆತ ಸುಖದಿಂದ ಇರಲು ಸಾಧ್ಯ. ಈ ಸೌಲಭ್ಯಗಳಲ್ಲಿ ಕೊಂಚ ಏರುಪೇರಾದರೂ ಆತ ಸುಖದಿಂದ ಇರಲು ಸಾಧ್ಯವಿಲ್ಲ. ಹೀಗೆ ಬಹುಸುಖದ ಕಲ್ಪನೆ ನಮ್ಮ ಮುಂದೆ ವಿವಿಧ ಸಮುದಾಯಗಳ ಸುಖ ಮತ್ತು ಆ ಸುಖಕ್ಕೆ ಅವರಿಗೆ ಇರಬೇಕಾದ ಕನಿಷ್ಠ ಸೌಲಭ್ಯಗಳ ವಿವರವನ್ನು ನೀಡುತ್ತದೆ. ಆಯಾಯ ಸಮುದಾಯಗಳ ಸುಖಕ್ಕೆ ಅಗತ್ಯವಿರುವ ಸೌಲಭ್ಯಗಳು ಇಲ್ಲದಿದ್ದರೆ ಅಥವಾ ಸಮುದಾಯಗಳು ಅನುಭವಿಸುತ್ತಿರುವ ಸವಲತ್ತುಗಳಿಂದ ವಂಚಿತರಾದರೆ ಅವುಗಳು ಅತೃಪ್ತವಾಗುತ್ತವೆ ಅಥವಾ ಒಂದು ಬಗೆಯ ಬಡತನವನ್ನು ಅನುಭವಿಸುತ್ತವೆ. ಚೋಪಡಿ ಪಟ್ಟಿಯಲ್ಲಿರುವವನಿಗೆ ಗಂಜಿ ತಿಳಿ ಸಿಗದಿದ್ದರೆ ಎಷ್ಟು ನೋವಾಗುತ್ತದೋ ಅಷ್ಟೇ ನೋವು ಅಥವಾ ಅದಕ್ಕಿಂತಲೂ ಹೆಚ್ಚಿನ ನೋವು ಮೇಲ್‌ವರ್ಗಕ್ಕೆ ಸೇರಿದವನಿಗೆ ಕಾರು ಅಥವಾ ಒಂದು ದೊಡ್ಡ ಬಂಗಲೆ ಇಲ್ಲದ್ದಿದ್ದರೆ ಆಗಬಹುದು. ಇವರ ಬಡತನವನ್ನು ನಿವಾರಿಸಲು ಏನು ಮಾಡಬೇಕು? ಚೋಪಡಿ ಪಟ್ಟಿಯಲ್ಲಿರುವವನಿಗೆ ಗಂಜಿ ತಿಳಿ ಕೊಟ್ಟರೆ ಅತನ ಬಡತನ ನಿವಾರಣೆ ಆಗುತ್ತದೆ. ಮೇಲ್ವರ್ಗಕ್ಕೆ ಸೇರಿದವನಿಗೆ ಕಾರು ಅಥವಾ ಬಂಗಲೆ ಹೊಂದುವ ಅವಕಾಶ ಮಾಡಿಕೊಟ್ಟರೆ ಆತನ ನೋವು/ಅತೃಪ್ತಿ/ಬಡತನ ನಿವಾರಣೆಯಾಗುತ್ತದೆ.[೨೪]

ಉತ್ತಮ ಬದುಕಿನ ಯುನಿವರ್ಸಲ್ ಅಥವಾ ಎಲ್ಲರಿಗೂ ಅನ್ವಯವಾಗುವ ಮಾನದಂಡ ರೂಪಿತವಾಗದಿದ್ದರೆ ಆಗುವ ಅನಾಹುತವನ್ನು ಅರ್ಥಮಾಡಿಕೊಳ್ಳಲು ಮತ್ತೊಂದು ಉದಾಹರಣೆ ನೋಡುವ. ನಮ್ಮಲ್ಲಿ ದಿನವೊಂದಕ್ಕೆ ತಲಾ ಆದಾಯ ರೂ.೧೧ ಇರುವವರನ್ನು(ಡಾಲರ್ ಲೆಕ್ಕದಲ್ಲಿ ೦.೨೫ ಡಾಲರ್ ಆದಾಯಕ್ಕಿಂತ ಕಡಿಮೆ ಇರುವವರನ್ನು) ಬಡತನ ರೇಖೆಗಿಂತ ಕಡಿಮೆ ಆದಾಯ ಇರುವವರು ಅಥವಾ ಕಡುಬಡವರೆಂದು ಪರಿಗಣಿಸಲಾಗುವುದು. ಅಮೇರಿಕಾದಲ್ಲಿ ಒಂದು ದಿನಕ್ಕೆ ತಲಾ ೨೬ ಡಾಲರ್‌ಗಿಂತ ಕಡಿಮೆ ಆದಾಯ ಇರುವವರನ್ನು ಬಡತನದ ರೇಖೆಗಿಂತ ಕೆಳಗೆ ಆದಾಯ ಇರುವವರೆಂದು ಪರಿಗಣಿಸುತ್ತಾರೆ. ಡಾಲರ್ ಒಂದಕ್ಕೆ ರೂ.೪೪ ಎಂದು ಲೆಕ್ಕ ಹಾಕಿದವರು ದಿನವೊಂದಕ್ಕೆ ರೂ.೧೧೪೪ ಅಥವಾ ತಿಂಗಳಿಗೆ ರೂ.೩೪೩.೨೦ ಆದಾಯ ಇರುವವರು ಬಡತನದ ರೇಖೆಗಿಂತ ಕಡಿಮೆ ಆದಾಯ ಇರುವವರು. ಅಮೇರಿಕಾದ ತಲಾ ಅದಾಯದ ಮಾನದಂಡದಲ್ಲಿ ನಮ್ಮ ಬಡತನವನ್ನು ಅಳೆದರೆ ಶೇಕಡಾ ಎಂಬತ್ತರಷ್ಟು ಭಾರತೀಯರು ಬಡತನದ ರೇಖೆಗಿಂತ ಕಡಿಮೆ ಆದಾಯ ಹೊಂದಿದ್ದಾರೆ. ನಾವು ಜಾಗತೀಕರಣದ ಬಗ್ಗೆ ಮಹಡಿ ಮೇಲಿಂದ ಕಿರುಚಾಡುತ್ತಿದ್ದೇವೆ. ಸರಕು ಸೇವೆಗಳ ಹಾಗೂ ಬಂಡವಾಳ ಅಥವಾ ಹಣಕಾಸಿನ ಅಡ್ಡಿ ಆತಂಕವಿಲ್ಲದ ಜಾಗತಿಕ ತಿರುಗಾಟ ನಡೆಯಬೇಕೆಂದು ಎಲ್ಲ ಕಡೆಯಿಂದಲೂ ಒತ್ತಡ ಇದೆ. ಆದರೆ ಯಾವತ್ತೂ ಕೂಡ ಗುಣಮಟ್ಟದ ಬದುಕಿನ ಜಾಗತಿಕ ಕಲ್ಪನೆಗಳನ್ನು ಅಥವಾ ಮಾನದಂಡಗಳನ್ನು ಜಾಗತೀಕರಣಗೊಳಿಸಬೇಕೆನ್ನುವ ವಾದವನ್ನು ನಾವು ಯಾರು ಕೇಳಿಯೇ ಇಲ್ಲ. ಎಲ್ಲವು ಜಾಗತೀಕರಣಗೊಳ್ಳಬೇಕೆನ್ನುವ ಭರಾಟೆಯ ನಡುವೆ ಗುಣಮಟ್ಟದ ಬದುಕಿನ ಮಾನದಂಡಗಳು ಕೂಡ ಜಾಗತೀಕರಣಗೊಳ್ಳಬೇಕೆನ್ನುವ ಪ್ರಶ್ನೆ ನಮ್ಮನ್ನು ಕಾಡಲಿಲ್ಲ. ಇದಕ್ಕೆ ಬಹುಮುಖ್ಯ ಕಾರಣ ಬಹುಸುಖದ ಕಲ್ಪನೆಗಳು.

ಇದರಿಂದಾಗಿ ಬಡದೇಶಗಳಲ್ಲಿ ಒಂದು ಡಾಲರ್‌ಗಿಂತ ಹೆಚ್ಚು ಆದಾಯ ಇರುವವರು ಬಡತನ ರೇಖೆಗಿಂತ ಮೇಲಿನ ಆದಾಯ ಹೊಂದಿದವರಾಗುತ್ತಾರೆ. ಈ ಮಾನದಂಡದಿಂದ ಲೆಕ್ಕ ಹಾಕಿದರೂ ಪ್ರಪಂಚದ ಶೇಕಡಾ ೩೫ರಷ್ಟು ಜನ ಬಡತನ ರೇಖೆಗಿಂತ ಕಡಿಮೆ ಆದಾಯ ಹೊಂದಿದ್ದಾರೆ. ಇನ್ನು ಆದಾಯ ಮಿತಿಯನ್ನು ಎರಡು ಡಾಲರ್‌ಗೆ ಹೆಚ್ಚಿಸಿದರೆ ಶೇ.೫೦ರಷ್ಟು ಜನರು ಬಡತನ ರೇಖೆಗಿಂತ ಕೆಳಗೆ ಜೀವಿಸುತ್ತಿದ್ದಾರೆ. ಬಡತನ ರೇಖೆಗಿಂತ ಕೆಳಗಿರುವವರ ಜಾಗತಿಕ ಮಾಪನ ಬಿಡಿ ಓದಿ ಉದ್ಯೋಗ ಮಾಡಿ ಸ್ಥಳೀಯ ಮಾನದಂಡ ಪ್ರಕಾರ ಮಧ್ಯಮವರ್ಗದವರೆಂದು ಗುರುತಿಸಿಕೊಳ್ಳುವವರ ಬದುಕನ್ನು ಒಂದು ಗಳಿಗೆ ವಿಶ್ಲೇಷಣೆ ಮಾಡಿ ನೋಡಿ.

ಬಡವರಿಗೆ ಹೋಲಿಸಿದರೆ ಉತ್ತಮ ಎನ್ನುವ ಶಿಕ್ಷಣ, ಆರೋಗ್ಯ, ವಸತಿ, ಜೀವನ ಮಟ್ಟವನ್ನು ಮಧ್ಯಮವರ್ಗ ಪಡೆಯಲು ಮತ್ತು ಉಳಿಸಿಕೊಳ್ಳಲು ಪಡುವ ಪಾಡು ಒಂದೇ ಎರಡೇ. ಕೆಲಸಕ್ಕೆ ಸೇರಿದಂದಿನಿಂದ ಬ್ಯಾಂಕ್ ಲೋನ್ ಆರಂಭವಾಗುತ್ತದೆ. ಟಿವಿ, ಫ್ರಿಡ್ಜ್ ನಿಂದು ಹಿಡಿದು ಕಾರ್, ಬೈಕಿಗೆ ಬೆಳೆದು ಮನೆ ಕಟ್ಟಿಸಲು ಮತ್ತು ಮಕ್ಕಳನ್ನು ಡಾಕ್ಟರ್ ಎಂಜೀನಿಯರ್ ಓದಿಸಲು ಸಾಲ ಮಾಡುತ್ತಾರೆ. ಕೆಲಸಕ್ಕೆ ಸೇರಿದಲ್ಲಿಂದ ಸಾಲದ ಕಂತು ಕಟ್ಟಲು ಆರಂಭವಾದರೆ ಕೆಲಸದಿಂದ ನಿವೃತ್ತಿ ಆಗುವವರೆಗೆ ಸಾಲ ಸಂದಾಯ ಮಾಡುವುದು ನಡೆಯುತ್ತದೆ. ಇದನ್ನು ಆಧುನಿಕ ಜೀತ ಎನ್ನಬಹುದು ಮತ್ತು ಆಧುನಿಕ ಅರ್ಥ ವ್ಯವಸ್ಥೆ ನಿಂತಿರುವುದು ಇಂತಹ ಮಧ್ಯಮವರ್ಗದ ಆಧುನಿಕ ಜೀತಗಳ ಮೇಲೆ. ಜಾಗತೀಕರಣದ ಹೆಸರಲ್ಲಿ ಬಂಡವಾಳದ ಅನಿಯಂತ್ರಿತ ಚಲನೆಗೆ ಒತ್ತು ಕೊಡುವ ಸಂದರ್ಭದಲ್ಲೇ ಉತ್ತಮ ಬದುಕಿನ ವ್ಯಾಖ್ಯಾನ ಈ ಬಗೆಯಲ್ಲಿ ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿ ಕಟ್ಟಿಕೊಳ್ಳಲು ಈ ಬಗೆಯ ಬಹುಸುಖದ ಕಲ್ಪನೆಗಳು ದೊಡ್ಡ ಮಟ್ಟಿನ ಕೊಡುಗೆ ನೀಡುತ್ತಿವೆ. ಹೀಗೆ ಬಹುಸುಖದ ನೆಲೆಯಲ್ಲಿ ರೂಪಿತವಾದ ಸಾಮಾಜಿಕ ನ್ಯಾಯದ ಕಲ್ಪನೆಯಲ್ಲಿ ಒಂದು ಮಾನದಂಡದತ್ತ ಚಲಿಸುವ ಅವಕಾಶವೇ ಇಲ್ಲ.[೨೫] ಅವರವರ ಯೋಗ್ಯತೆಗನುಸಾರ ಸವಲತ್ತುಗಳನ್ನು ಒದಗಿಸುವುದು ಸಾಮಾಜಿಕ ನ್ಯಾಯ ಆಗುತ್ತದೆ. ಹೀಗೆ ಈಗಾಗಲೇ ಇರುವ ವರ್ಗ ಸ್ಥಾನಮಾನಗಳನ್ನು ಯಥಾ ಸ್ಥಿತಿಯಲ್ಲಿಡುವ ಎಲ್ಲ ಸಾಧ್ಯತೆಗಳು ಈ ಬಹುಸುಖದ ಕಲ್ಪನೆಯಲ್ಲಿ ಅಡಗಿದೆ. ಈ ಸಮಸ್ಯೆಯಿಂದ ಹೊರಬರ ಬೇಕಾದರೆ ಕುಟುಂಬವೊಂದು ತಕ್ಕಮಟ್ಟಿನ ಸುಖದ ಬಾಳ್ವೆ ಮಾಡಲು ಅಗತ್ಯವಿರುವ ಕನಿಷ್ಠ ಸವಲತ್ತುಗಳು ತೀರ್ಮಾನ ಆಗಬೇಕು. ಅಂದರೆ ಬಹುಸತ್ಯದ/ಸುಖದ ಕಲ್ಪನೆಯಿಂದ ಸಂಶೋಧನೆ ಆರಂಭಿಸಿ ಏಕಸತ್ಯ/ಸುಖದ ಕಲ್ಪನೆಯತ್ತ ಚಲಿಸುವ ಅಗತ್ಯವಿದೆ. ಪಾಲಿಸಿ ಸಂಶೋಧನೆಯ ದೃಷ್ಟಿಯಿಂದ ಒಂದು ಯುನಿವರ್ಸಲ್ ಅಥವಾ ಎಲ್ಲರಿಗೂ ಅನ್ವಯವಾಗುವ ಮಾನದಂಡಗಳನ್ನು ರೂಪಿಸಿಕೊಳ್ಳುವ ಅನಿವಾರ್ಯತೆ ಇದೆ. ಈ ಮಾನದಂಡಗಳು ಸೂಚಿಸುವ ಕನಿಷ್ಠ ಸವಲತ್ತುಗಳನ್ನು ಸಮಾಜದ ಎಲ್ಲರಿಗೂ ಸಿಗುವಂತಾಗುವುದು ಸಾಮಾಜಿಕ ಪರಿವರ್ತನೆಗೆ ಅನಿವಾರ್ಯ. ಈ ಬೆಳವಣಿಗೆ ಸಾಧ್ಯ ವಾಗಬೇಕಾದರೆ ಏಕ ಅಥವಾ ಬಹುಸತ್ಯದ ನೆಲೆಗಳನ್ನು ಸಂಪೂರ್ಣ ವಿಭಿನ್ನ ನೆಲೆಗಳೆಂದು ನೋಡುವ ಬದಲು

ಒಂದು ಮತ್ತೊಂದರ ಮುಂದುವರಿಕೆಯ ರೂಪದಲ್ಲಿ ನೋಡುವ ಅವಶ್ಯಕತೆಯಿದೆ. ಇದೊಂದು ಬಗೆಯಲ್ಲಿ ಕಾಮನಬಿಲ್ಲಿನ ಬಣ್ಣದಂತೆ. ಒಂದು ಬಣ್ಣ ಎಲ್ಲಿ ಕೊನೆಗೊಂಡಿದೆ ಮತ್ತೊಂದು ಬಣ್ಣ ಎಲ್ಲಿಂದ ಶುರುವಾಗಿದೆ ಎಂದು ನಿಖರವಾಗಿ ಹೇಳುವುದು ಕಷ್ಟ. ಇದೇ ರೀತಿಯಲ್ಲಿ ಬಹುಸುಖದ ಕಲ್ಪನೆಗಳು ಕೂಡ. ಬಹುಸುಖದ ಕಲ್ಪನೆಯ ಅಡಿಪಾಯ ವಿಭಿನ್ನ ಸಮುದಾಯಗಳೂ ಮತ್ತು ಅವುಗಳು ಚಾರಿತ್ರಿಕವಾಗಿ ರೂಪಿಸಿಕೊಂಡ ವಿಭಿನ್ನ ಸುಖ ದುಃಖಗಳ ಕಲ್ಪನೆಗಳೂ. ಆದರೆ ಇಂದು ಸಮುದಾಯಗಳ ನಡುವಿನ ಗಡಿಗಳನ್ನು ಕಾಮನ ಬಿಲ್ಲಿನ ಬಣ್ಣಗಳ ಗಡಿಗಳಿಗೆ ಹೋಲಿಸುವುದು ಹೆಚ್ಚು ಅರ್ಥಪೂರ್ಣ. ಯಾಕೆಂದರೆ ಒಂದು ಸಮುದಾಯದ ಪರಿಧಿ ಎಲ್ಲಿ ಕೊನೆಗೊಳ್ಳುತ್ತದೆ ಮತ್ತು ಮತ್ತೊಂದು ಸಮುದಾಯದ ಗಡಿ ಎಲ್ಲಿಂದ ಆರಂಭವಾಗುತ್ತದೆಯೆಂದು ಹೇಳುವುದು ತುಂಬಾ ಕಷ್ಟ. ಇಂತಹ ಸಂದರ್ಭದಲ್ಲಿ ಸಮುದಾಯಗಳ ನಿಖರ ಗಡಿಗಳನ್ನು ಊಹಿಸಿಕೊಂಡು ಅವುಗಳ ಸುಖದುಃಖಗಳ ಕಲ್ಪನೆ ಯನ್ನು ರೂಪಿಸಿಕೊಳ್ಳುವುದು ಮತ್ತು ಆ ಸುಖದುಃಖಗಳ ನೆಲೆಯಲ್ಲಿ ಸಂಪನ್ಮೂಲಗಳ ಹಂಚುವಿಕೆಯನ್ನು ತೀರ್ಮಾನಿಸುವುದು ಅವಾಸ್ತವ ಮಾತ್ರವಲ್ಲ ಅನ್ಯಾಯ ಕೂಡ. ಇಂತಹ ಅನಾಹುತಗಳನ್ನು ತಪ್ಪಿಸಲು ಏಕಸತ್ಯ/ಸುಖದ ಕಲ್ಪನೆ ಹಾಗೂ ಬಹುಸತ್ಯ/ಸುಖದ ಕಲ್ಪನೆ ಗಳನ್ನು ವಿರೋಧಿ ನೆಲೆಯಲ್ಲಿ ನೋಡುವ ಬದಲು ಪರಸ್ಪರ ಪೂರಕವಾಗಿ ಅಥವಾ ಒಂದು ಮತ್ತೊಂದರ ಮುಂದುವರಿಕೆಯ ರೂಪದಲ್ಲಿ ನೋಡಬಹುದು.

ಸಂಶೋಧನೆ ಹೇಗೆ ಎನ್ನುವ ಈ ಅಧ್ಯಾಯದಲ್ಲಿ ಸಂಶೋಧಕರು, ಸಂಶೋಧನ ವಿಷಯ, ಸಂಶೋಧನೆ ಉತ್ಪಾದಿಸುವ ಜ್ಞಾನ ಇತ್ಯಾದಿಗಳ ಮೇಲೆ ಚಾಲ್ತಿಯಲ್ಲಿರುವ ಕೆಲವೊಂದು ದೃಷ್ಟಿಕೋನಗಳನ್ನು ಆರಂಭಿಕ ಸಂಶೋಧಕರಿಗೆ ಪರಿಚಯಿಸಿದ್ದೇನೆ. ಪೊಸಿಟಿವಿಸ್ಟ್ ವೈಧಾನಿಕತೆಗೆ ಬದ್ಧರಾದವರು ಹಾಗೂ ಹರ್ಮನೆಟಿಕ್ಸ್ ದೃಷ್ಟಿಕೋನವನ್ನು ಪ್ರತಿಪಾದಿಸುವವರು ಸಂಶೋಧನೆಯಿಂದ ಸೃಷ್ಟಿಯಾಗುವ ಜ್ಞಾನ, ಸಂಶೋಧನೆಗೆ ಅನುಸರಿಸಬೇಕಾದ ವಿಧಾನ, ಸಂಶೋಧನ ವಿಷಯ, ಸಂಶೋಧಕರು, ಈ ಎರಡರ ನಡುವಿನ ಸಂಬಂಧ ಇತ್ಯಾದಿಗಳ ಬಗ್ಗೆ ಸಂಪೂರ್ಣ ವಿಭಿನ್ನ ನಿಲುವನ್ನು ಹೊಂದಿದ್ದಾರೆ. ಈ ಎರಡು ದೃಷ್ಟಿಕೋನಗಳ ನಡುವೆ ಪೈಪೋಟಿ ಹಿಂದೇನೂ ಇತ್ತು ಈಗಲೂ ನಡೆಯುತ್ತಿದೆ. ಆದರೆ ಈಗ ಈ ಎರಡು ದೃಷ್ಟಿಕೋನಗಳನ್ನು ಸಂಪೂರ್ಣ ವಿರುದ್ಧವೆಂದು ಪರಿಗಣಿಸುವ ಬದಲು ಇವುಗಳನ್ನು ಸೇರಿಸಿ ನೋಡುವ ಹೊಸತೊಂದು ನಿಲುವು ಸಂಶೋಧಕರ ಗಮನ ಸೆಳೆಯುತ್ತಿದೆ. ಇದನ್ನು ಮಿಕ್ಸಡ್ ಮೆಥಡ್ ಅಥವಾ ಪ್ರಾಗ್ ಮೆಟಿಸಂ ಅಥವಾ ನೆಚುರಲಿಸಂ ಎಂದು ಕರೆಯುತ್ತಾರೆ. ಈ ಮೂರನೇ ದೃಷ್ಟಿಕೋನ ಸಮಾಜವನ್ನು ಮತ್ತು ಸಂಶೋಧನೆಯನ್ನು ಸಮಗ್ರತೆಯಿಂದ ನೋಡಲು ಪ್ರೇರೇಪಿಸುತ್ತಿದೆ. ಸಮಾಜ, ಅರ್ಥ, ರಾಜಕೀಯ, ಸಂಸ್ಕೃತಿಯೆಂದು ಬಿಗಿಯಾದ ಗಡಿಗಳನ್ನು ಸೃಷ್ಟಿಸಿಕೊಂಡು ಅಧ್ಯಯನ ಮಾಡುವುದರಿಂದ ಸಂಬಂಧಗಳನ್ನು, ಸಂಸ್ಥೆಗಳನ್ನು, ಮೌಲ್ಯಗಳನ್ನು ಜನರ ವ್ಯವಹಾರಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಸಂಬಂಧ, ಸಂಸ್ಥೆ, ಮೌಲ್ಯ ಮುಂತಾದವುಗಳನ್ನು

ಅರ್ಥಮಾಡಿಕೊಳ್ಳಲು ಸಮಾಜ, ಅರ್ಥ, ರಾಜಕೀಯ ಮುಂತಾದವುಗಳನ್ನು ಪರಸ್ಪರ ಸಂಬಂಧಿಸಿದ ರೂಪದಲ್ಲಿ ಅಧ್ಯಯನ ಮಾಡಬೇಕೆನ್ನುವ ಅಭಿಪ್ರಾಯವನ್ನು ಅಧ್ಯಾಯ ನೀಡಿದೆ. ಇದೇ ರೀತಿಯಲ್ಲಿ ಡಿಡಕ್ಟಿವ್ ಮತ್ತು ಇಂಡಕ್ಟಿವ್ ವಿಧಾನಗಳಲ್ಲಿ ಪ್ರತ್ಯ ಪ್ರತ್ಯೇಕವಾಗಿ ನೋಡಿದರೆ ಸಿಗುವ ಒಳನೋಟಕ್ಕೂ ಈ ಎರಡು ದೃಷ್ಟಿಕೋನಗಳನ್ನು ಬೆರೆಸಿ ನೋಡಿದರೆ ಸಿಗುವ ಒಳನೋಟಕ್ಕೂ ಗುಣಾತ್ಮಕ ವ್ಯತ್ಯಾಸವಿದೆ. ಸಂಶೋಧನ ವಿಷಯದೊಂದಿಗೆ ಯಾವುದೋ ಒಂದು ಬಗೆಯ ಸಂಬಂಧ ಅನಿವಾರ್ಯವಾಗಿರುವುದರಿಂದ ಸಂಶೋಧನ ವಿಷಯದೊಂದಿಗೆ ಅಂತರವನ್ನು ಇಟ್ಟುಕೊಳ್ಳುವ ಚರ್ಚೆ ಅನಾವಶ್ಯಕ ಎನ್ನುವ ನಿಲುವನ್ನು ಮಿಕ್ಸಡ್ ಮೆಥಡ್ ಪ್ರತಿಪಾದಿಸುತ್ತದೆ. ಬಹುಸುಖಿ/ಸತ್ಯ ಕಲ್ಪನೆಗಳ ನೆಲೆಯಲ್ಲಿ ಬಹುತ್ವವನ್ನು ರೂಪಿಸಿಕೊಳ್ಳುವುದು ಹೊರನೋಟಕ್ಕೆ ತುಂಬಾ ಕ್ರಾಂತಿಕಾರಿಯಾಗಿ ಕಂಡರು ಅವುಗಳು ವಾದಿಸುವ ಬಹುತ್ವವನ್ನು ಕಾರ್ಯರೂಪಕ್ಕೆ ತರಲು ಅವುಗಳ ಆಧಾರ ಸ್ತಂಭಗಳೇ ಅಡ್ಡಿಯಾಗುತ್ತವೆ. ಬಹುತ್ವ ಜೀವಂತ ಇರಬೇಕಾದರೆ ಕನಿಷ್ಟ ಜೀವನಮಟ್ಟದ ಮಾನದಂಡಗಳು ಯುನಿವರ್ಸಲೈಸ್ ಆಗಬೇಕೆನ್ನುವ ದೃಷ್ಟಿಕೋನದ ಪರವಾದ ನಿಲುವನ್ನು ಅಧ್ಯಾಯ ಹೊಂದಿದೆ. ಈ ಎಲ್ಲ ದೃಷ್ಟಿಕೋನಗಳನ್ನು ರೂಢಿಸಿಕೊಂಡು ಸಂಶೋಧನೆ ನಡೆಸುವುದು ಇಂದಿನ ಸಂದರ್ಭದಲ್ಲಿ ಹೆಚ್ಚು ಉಪಯುಕ್ತ. ಇಂತಹ ಸಂಶೋಧನೆಗಳ ಸಂದರ್ಭದಲ್ಲಿ ವಿಷಯ ಆಯ್ಕೆಯಿಂದ ಪ್ರಬಂಧ ರಚನೆ ತನಕ ಆರಂಭಿಕ ಸಂಶೋಧಕರು ಎದುರಿಸುವ ಸಮಸ್ಯೆಗಳನ್ನು ಬಿಡಿಬಿಡಿಯಾಗಿ ಮುಂದಿನ ಅಧ್ಯಾಯಗಳಲ್ಲಿ ಪರಿಹರಿಸಲು ಪ್ರಯತ್ನಿಸಿದ್ದೇವೆ.

ಕೊನೆ ಟಿಪ್ಪಣಿಗಳು

೧. ಜ್ಞಾನ ಉತ್ಪಾದನೆಯನ್ನು ಸರಕು/ಸೇವೆಗಳ ಉತ್ಪಾದನೆಗೆ ಹೋಲಿಸುವುದು ಮೇಲ್ನೋಟಕ್ಕೆ ಅಸಂಗತ ಎಂದು ಕಂಡರು ಆಳದಲ್ಲಿ ಸರಕು/ಸೇವೆಗಳ ಉತ್ಪಾದನೆ ಮತ್ತು ಜ್ಞಾನ ಉತ್ಪಾದನೆ ನಡುವೆ ತುಂಬಾ ಹತ್ತಿರದ ಸಂಬಂಧ ಇರುವುದನ್ನು ಪ್ರಗತಿಪರ ವಿಚಾರ ಧಾರೆಗಳಿಂದ ಅರ್ಥಮಾಡಿಕೊಳ್ಳಬಹುದು. ಕ್ಯಾಪಿಟಲಿಸ್ಟ್ ವ್ಯವಸ್ಥೆಯಲ್ಲಿ ಉತ್ಪಾದನ ಮೂಲಗಳು (ಭೂಮಿ, ಬಂಡವಾಳ, ಮೆಶಿನರಿ, ಕಚ್ಚಾ ಸಾಮಗ್ರಿ ಇತ್ಯಾದಿಗಳು) ಸಣ್ಣ ಸಂಖ್ಯೆಯವರ ಸ್ವಾಧೀನ ಇದ್ದು ಸಮಾಜದ ಬಹುತೇಕರು ಉತ್ಪಾದನ ಮೂಲಗಳ ಮೇಲೆ ಒಡೆತನವಿಲ್ಲದೆ ಇದ್ದಾರೆ. ಉತ್ಪಾದನ ಮೂಲಗಳ ಒಡೆತನವಿಲ್ಲದವರು ತಮ್ಮ ಶ್ರಮ ಮಾರಿ ಬದುಕುವುದು ಬಿಟ್ಟರೆ ಬೇರೆ ದಾರಿ ಇಲ್ಲ. ಬಲಪ್ರಯೋಗದಿಂದ ಬಹುತೇಕರ ಮೇಲೆ ಸತತ ಹಿಡಿತ ಸಾಧಿಸಲು ಸಾಧ್ಯವಿಲ್ಲ. ಬಹುತೇಕರ ಲೋಕದೃಷ್ಟಿಯನ್ನು ಪ್ರಭಾವಿಸುವ ಮೂಲಕ ಹಿಡಿತ ಸಾಧಿಸುವುದು ಅನಿವಾರ್ಯವಾಗುತ್ತದೆ. ಉತ್ಪಾದನ ಮೂಲಗಳ ಒಡೆತನವುಳ್ಳವರು ತಮ್ಮ ಆಸಕ್ತಿಗಳಿಗೆ ಪೂರಕವಾಗಿ ಜ್ಞಾನವನ್ನು ಹೆಚ್ಚು ಹೆಚ್ಚು ಉತ್ಪಾದಿಸುವುದು ಮತ್ತು ಇಂತಹ ಜ್ಞಾನವನ್ನು ಜನಸಾಮಾನ್ಯರ ಪ್ರಜ್ಞೆಯ ಭಾಗ ಮಾಡುವುದು ನಡೆದಿದೆ. ಇವರುಗಳು ಜ್ಞಾನ ಉತ್ಪಾದನೆ ಮೇಲೆ ಹಿಡಿತ ಸಾಧಿಸುವುದರಿಂದ ಅನಿವಾರ್ಯವಾಗಿ ಜ್ಞಾನ ಉತ್ಪಾದನೆ ಮತ್ತು ಸರಕು/ಸೇವೆಗಳ ಉತ್ಪಾದನೆಯ ನಡುವೆ ವಿಶೇಷ ಭಿನ್ನತೆ ತೋರದಿರುವ ಸಾಧ್ಯತೆನೂ ಇದೆ. ಕ್ಯಾಪಿಟಲಿಸ್ಟ್ ವ್ಯವಸ್ಥೆ ಮತ್ತು ಅದು ಯಜಮಾನಿಕೆ ಮಾಡುವ ವಿಧಾನ ಕುರಿತು ಹೆಚ್ಚಿನ ಮಾಹಿತಿಗೆ ಈ ಕೆಳಗಿನ ಪುಸ್ತಕಗಳನ್ನು ನೋಡಬಹುದು. ಮೈಕೆಲ್ ಡಿ ಯೇಟ್ಸ್, *ನೇಮಿಂಗ್ ದಿ ಸಿಸ್ಟಮ್ - ಇನಿಕ್ವಾಲಿಟಿ ಆಂಡ್ ವರ್ಕ್ ಇನ್ ದಿ*

ಗ್ಲೋಬಲ್ ಎಕಾನಮಿ, ಕರಗ್‌ಪುರ್ : ಕಾರ್ನರ್ ಸ್ಟೋನ್ ಪಬ್ಲಿಕೇಶನ್, ೨೦೦೩, ಇಗ್ನೇಶಿಯೋ ರಮ್ನೆಟ್, 'ಒನ್ ಆಂಡ್ ದಿ ಓನ್ಲಿ ವೇ ಆಫ್ ಥಿಂಕಿಂಗ್', ಮಜಿದ್ ರೆಹನೇಮ ಆಂಡ್ ವಿಕ್ಟೋರಿಯ (ಸಂ), *ದಿ ಪೋಸ್ಟ್ ಡೆವಲಪ್‌ಮೆಂಟ್ ರೀಡರ್*, ಲಂಡನ್: ದಿ ಜೆಡ್ ಬುಕ್ಸ್, ೧೯೯೭, ಪು.೧೭೬-೮೧೮, ಜೇಮ್ಸ್ ಪೆಟ್ರಾಸ್, 'ದಿ ನ್ಯೂ ಕಲ್ಚರಲ್ ಡೊಮಿನೇಶನ್ ಬೈ ದಿ ಮೀಡಿಯಾ', *ಎಕಾನಿಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*, ೬ನೇ ಆಗೋಸ್ಟ್, ೧೯೯೪.

೨. ತಿಯೋಡೋರ್ ಶಾನಿನ್, ''ದಿ ಐಡಿಯ ಆಫ್ ಪ್ರೊಗ್ರೆಸ್'', ಮಜಿದ್ ನೆಹನೇಮ ಆಂಡ್ ವಿಕ್ಟೋರಿಯ (ಸಂ), *ದಿ ಪೋಸ್ಟ್ ಡೆವಲಪ್‌ಮೆಂಟ್ ರೀಡರ್*, ಲಂಡನ್: ದಿ ಜೆಡ್ ಬುಕ್ಸ್, ೧೯೯೭, ಪು.೬೫-೭೦, ಲೂವಿಸ್ ಡುಮೋ, *ಫ್ರೊಮ್ ಮಂಡೆವಿಲಿ ಟು ಮಾರ್ಕ್ಸ್, ದಿ ಜನೆಸಿಸ್ ಆಂಡ್ ದಿ ಟ್ರಿಂಪ್ ಆಫ್ ಎಕಾನಮಿಕ್ ಐಡಿಯಲಾಜಿ*, ಚಿಕಾಗೋ : ಯುನಿವರ್ಸಿಟಿ ಆಫ್ ಚಿಕಾಗೋ ಪ್ರೆಸ್, ೧೯೭೭.

೩. ಶ್ರೀಮಂತ ದೇಶಗಳು ಪ್ರಪಂಚದ ಇತರರ ದೇಶಗಳ ಜ್ಞಾನ ಉತ್ಪಾದನೆಯ ಮೇಲೆ ಮಾಡುವ ಪ್ರಭಾವವನ್ನು ಅರ್ಥಮಾಡಿಕೊಳ್ಳಬೇಕಾದರೆ ಇತರರು ಇಂತಹ ಯಜಮಾನಿಕೆಯ ವಿರುದ್ಧ ಮಾಡುವ ಟೀಕೆಗಳನ್ನು ಮತ್ತು ಇವುಗಳ ಹಿನ್ನೆಲೆಯಲ್ಲಿ ತಮ್ಮದೇ ಸಮಾಜ ವಿಜ್ಞಾನಗಳನ್ನು ಕಟ್ಟಿಕೊಳ್ಳಲು ಮಾಡಿದ ಪ್ರಯತ್ನವನ್ನು ಅರ್ಥ ಮಾಡಿಕೊಳ್ಳಬೇಕು. ಭಾರತದಲ್ಲಿ ಇಂತಹ ಪ್ರಯತ್ನಗಳು ಆರುವತ್ತರ ದಶಕದಿಂದಲೇ ನಡೆಯುತ್ತಿದೆ. ಇವುಗಳ ವಿವರಗಳಿಗೆ ಈ ಕೆಳಗಿನ ಪುಸ್ತಕಗಳನ್ನು ನೋಡಬಹುದು. ಯೋಗೇಶ್ ಅಟಲ್, *ಸೋಶಿಯಲ್ ಸಯನ್ಸ್‌ಸ್ ಇನ್ ಏಶಿಯಾ*, ನ್ಯೂಡೆಲ್ಲಿ: ಅಭಿನವ್ ಪಬ್ಲಿಕೇಶನ್ಸ್, ೧೯೭೪. ಎನ್ ಪಾರ್ಥ ಮುಖರ್ಜಿ, ಇಂಡಿಯನ್ *ಸೋಶಿಯಲಾಜಿ - ರಿಫ್ಲೆಕ್ಷನ್ಸ್ ಆಂಡ್ ಇನ್ ಟ್ರೋಸ್ಪೆಕ್ಷನ್ಸ್*, ಬಾಂಬೆ : ಪೊಪ್ಯುಲರ್ ಪ್ರಕಾಶನ್, ೧೯೮೬, ಪಾರ್ಥನಾಥ ಮುಖರ್ಜಿ ಆಂಡ್ ಚಂದ್ರ ಸೇನ್ ಗುಪ್ತ(ಸಂ), *ಇಂಡಿಜೀನಿಟಿ ಆಂಡ್ ಯುನಿರ್ವಸಾಲಿಟಿ ಇನ್ ಸೋಶಿಯಲ್ ಸಯನ್ಸ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೨೦೦೪ ಮತ್ತು ಅನಂತ್ ಕುಮಾರ ಗಿರಿ (ಸಂ), *ಕ್ರಿಯೇಟಿವ್ ಸೋಶಿಯಲ್ ರಿಸರ್ಚ್-ರಿಥಿಂಕಿಂಗ್ ಥಿಯರಿಸ್ ಆಂಡ್ ಮೆಥಡ್ಸ್* ನ್ಯೂಡೆಲ್ಲಿ: ವಿಸ್ತಾರ್ ಪಬ್ಲಿಕೇಶನ್ಸ್, ೨೦೦೪

೪. ಕಥ್ಲಿನ್ ಗಫ್, 'ಆಂಥ್ರೋಪಾಲಜಿ ಆಂಡ್ ಇಂಪಿರಿಯಲಿಸಂ', ಇನ್ ಬಾಬ್ಬಿ ಎಸ್ ಒರ್ಜ್ ಆಂಡ್ ತಿಲಕ್ ಡಿ. ಗುಪ್ತಾ (ಸಂ), *ಹಿಸ್ಟರಿ ಹೇಸ್ ಇಟ್ ಹೆಪನ್ಡ್ - ಸಿಲೆಕ್ಟೆಡ್ ಆರ್ಟಿಕಲ್ಸ್ ಫ್ರಮ್ ಮಂಥ್ಲಿ ರಿವೀವ್*, ೧೯೪೯-೧೯೯೮, ಕಲ್ಕತ್ತಾ: ಕಾರ್ನರ್ ಸ್ಟೋನ್ ಪಬ್ಲಿಕೇಶನ್ಸ್, ೧೯೯೮, ಪು.೮೮-೯೮

೫. ಈಗ ಅಣು (ಆಟಂ) ಇಂಡಿವಿಸಿಬಲ್ ಆಗಿ ಉಳಿದಿಲ್ಲ. ಅದನ್ನು ತುಂಡರಿಸಿ ಮುಂದೆ ಹೋಗಲಾಗಿದೆ. ಇಲ್ಲಿ ನಾನು ಉಲ್ಲೇಖಿಸಿರುವುದು ವಿಜ್ಞಾನದ ಆರಂಭದ ದಿನಗಳ ಗ್ರಹಿತಗಳು ಮತ್ತು ಅವುಗಳಿಂದ ಪ್ರಭಾವಿತವಾದ ಸಮಾಜ ವಿಜ್ಞಾನದ ಬಗ್ಗೆ.

೬ ಈ ವಿವರಗಳನ್ನು ಮಾರ್ಟಿನ್ ಹೊಲಿಸ್ ಅವರ, *ದಿ ಫಿಲಾಸಪಿ ಆಫ್ ಸೋಶಿಯಲ್ ಸಯನ್ಸ್*, ಕೇಂಬ್ರಿಡ್ಜ್: ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್, ೨೦೦೦, ಪುಸ್ತಕದಲ್ಲಿ ನೋಡಬಹುದು.

೭. ಈ ಕುರಿತು ಹೆಚ್ಚಿನ ವಿವರಗಳಿಗೆ ಲೆಸ್ಲಿ ಸ್ಟೀವನ್‌ಸನ್ ಆಂಡ್ ಡೇವಿಡ್ ಸಿ. ಹಾಬ್ ಮೇನ್ ಅವರ *ಟೆನ್ ಥಿಯರೀಸ್ ಆಫ್ ಹ್ಯೂಮನ್ ನೇಚರ್*, ನ್ಯೂಯಾರ್ಕ್: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೮, ಪುಸ್ತಕ ನೋಡಬಹುದು.

೮. ಮಾರ್ಟಿನ್ ಹೊಲಿಸ್ ಅವರ, *ದಿ ಫಿಲಾಸಫಿ ಆಫ್ ಸೋಶಿಯಲ್ ಸಯನ್ಸ್*, ಕೇಂಬ್ರಿಡ್ಜ್ : ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್, ೨೦೦೦

೯. ಹೆಚ್ಚಿನ ವಿವರಗಳಿಗೆ ಹೇನ್ಸ್ ಜಾರ್ಜ್ ಗಾಡಮರ್, *ಟ್ರುಥ್ ಆಂಡ್ ಮೆಥಡ್*, ಲಂಡನ್ : ಕಾಂಟಿನಮ್, ೨೦೦೫, ವಿಲಿಯಂ ಡಿಲ್ತಿ, *ಸಿಲೆಕ್ಟೆಡ್ ರೈಟಿಂಗ್ಸ್*, ಟ್ರಾಸ್‌ಲೇಟೆಡ್ ಆಂಡ್ ಎಡಿಟೆಡ್ ಬೈ ಹೆಚ್.ಪಿ.ರಿಕ್‌ಮೆನ್, ಕೇಂಬ್ರಿಡ್ಜ್ : ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್, ೧೯೭೬ ಪುಸ್ತಕಗಳನ್ನು ನೋಡಬಹುದು.

೧೦. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ಪುಸ್ತಕಗಳನ್ನು ನೋಡಬಹುದು. ಪಾರ್ಥನಾಥ್ ಮುಖರ್ಜಿಯವರ, *ಮೆಥಡಲಾಜಿ ಇನ್ ಸೋಶಿಯಲ್ ರಿಸರ್ಚ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೨೦೦೦, ಗುರುಪ್ರೀತ್ ಮಹಾಜನ್, *ಎಕ್ಸ್‌ಪ್ಲಾನೇಶನ್ ಆಂಡ್ ಅಂಡರ್‌ಸ್ಟೇಂಡಿಂಗ್ ಇನ್ ದಿ ಹ್ಯೂಮನ್ ಸಯನ್ಸ್‌ಸ್*, ನ್ಯೂಡೆಲ್ಲಿ : ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೭.

೧೧. ಸಿ ಎಸ್ ರಿಶರ್ಟ್ ಆಂಡ್ ಎಸ್ ಎಫ್ ರೆಲೀಸ್, 'ಕ್ವಾಲಿಟೇಟಿವ್ ಆಂಡ್ ಕ್ವಾಂಟಿಟೇಟಿವ್ ಇನ್ ಕ್ವಯರಿಸ್ ಆರ್ ನಾಟ್ ಇನ್‌ಕಾಂಪಿಟೇಬ್‌ಲ್ - ಕಾಲ್ ಫಾರ್ ಎ ನ್ಯೂ ಪರ್‌ಸ್ಪಕ್ಟೀವ್', ಇನ್ ಸಿ ಎಸ್ ರಿಶರ್ಟ್ ಆಂಡ್ ಎಸ್ ಎಫ್ ರೆಲೀಸ್ (ಸಂ). *ಕ್ವಾಲಿಟೇಟಿವ್ ಕ್ವಾಂಟಿಟೇಟಿವ್ ಡಿಬೇಟ್- ನ್ಯೂ ಪರ್‌ಸ್ಪಕ್ಟೀವ್ಸ್*, ಸಾನ್‌ಫ್ರಾನ್ಸಿಸ್ಕೊ: ಜಸ್ಸಿ ಬೇಸ್, ೧೯೯೪.

೧೨. ಕಥ್ಲಿನ್ ಗಫ್, 'ಆಂಥ್ರೋಪಾಲಜಿ ಆಂಡ ಇಂಪಿರಿಯಲಿಸಂ', ಪು.೮೮-೯೮

೧೩. ವಸಾಹತೋತ್ತರ ಸಂದರ್ಭದಲ್ಲಿ ಮಾನವಶಾಸ್ತ್ರ ಸಂಶೋಧನೆ ಮೇಲೆ ಬ್ರಿಟಿಷ್, ಡಚ್, ಫ್ರೆಂಚ್ ಚಿಂತನೆಗಳ ಪ್ರಭಾವ ಕಡಿಮೆ ಆಯಿತು. ಆದರೆ ಅಮೇರಿಕಾದ ಪ್ರಭಾವ ಹೆಚ್ಚಾಯಿತು. ಸೋಲ್ ಟೇಕ್ಸ್ ಮತ್ತು ಇತರರು ಸಂಪಾದಿಸಿದ ಫಿಫ್ತ್ ಇಂಟರ್‌ನೇಶನಲ್ ಡೈರೆಕ್ಟರಿ ಆಫ್ ಆಥ್ರೋಪಲಾಜಿಸ್ಟ್ (ಚಿಕಾಗೋ: ಚಿಕಾಗೋ ಯುನಿವರ್ಸಿಟಿ ಪ್ರೆಸ್, ೧೯೭೫) - ಈ ವಿವರಗಳನ್ನು ಎಲ್.ಪಿ. ವಿದ್ಯಾರ್ಥಿಯವರ, *ಟ್ರೆಂಡ್ಸ್ ಇನ್ ವರ್ಲ್ಡ್ ಆಂಥ್ರೋಪಲಾಜಿ*, ಡೆಲ್ಲಿ : ಕನ್‌ಸಪ್ಟ್ ಪಬ್ಲಿಕೇಶನ್ ಕಂಪೆನಿ, ೧೯೭೮ ಪುಸ್ತಕದಿಂದ ಪಡೆಯಲಾಗಿದೆ)ಯಲ್ಲಿ ನೋಂದಾಯಿಸಿದ ಒಟ್ಟು ೪೭೬೫ ಮಾನವಶಾಸ್ತ್ರಜ್ಞರಲ್ಲಿ ಸುಮಾರು ಅರ್ಧದಷ್ಟು ಮಾನವಶಾಸ್ತ್ರಜ್ಞರು ಅಮೇರಿಕಾ ಮತ್ತು ಕೆನಡಾದವರಾದರೆ ಕಾಲು ಭಾಗ ಯುರೋಪಿಯನ್‌ರಾಗಿದ್ದರು. ಬಹುತೇಕ ಮಾನವಶಾಸ್ತ್ರ ಸಂಶೋಧನೆಗಳಿಗೆ ಮಾಹಿತಿ ಒದಗಿಸುವ ಅಥವಾ ಕ್ಷೇತ್ರವಾಗಿ ಕೆಲಸ ಮಾಡಿದ ಏಶ್ಯಾ, ಆಫ್ರಿಕಾ ಮತ್ತು ಲ್ಯಾಟೀನ್ ಅಮೇರಿಕಾಗಳಿಂದ ಕೆಲವೇ ಕೆಲವು ಮಾನವಶಾಸ್ತ್ರಜ್ಞರಿದ್ದರು(ಶೇ.೨೫ರಷ್ಟು). ಅಮೇರಿಕ ಆಧುನೀಕರಣ ಥಿಯರಿ ಬಹುದೊಡ್ಡ ಪ್ರತಿಪಾದಿಯಾಗಿತ್ತು. ಆದುದರಿಂದ ಮಾನವಶಾಸ್ತ್ರ ಕೂಡ ಆಧುನೀಕರಣ ಥಿಯರಿ ಅಂಶಗಳನ್ನೇ ಹೆಚ್ಚು ಹೆಚ್ಚಾಗಿ ಬಿಂಬಿಸುತ್ತಿತ್ತು.

೧೪. ಇಮೆನ್ವಲ್ ವೆಲ್‌ಸ್ಟೇಯಿನ್, *ಸೋಶಿಯಲ್ ಸಯನ್ಸ್ ಆಂಡ್ ದಿ ಕ್ವೆಸ್ಟ್ ಫಾರ್ ಎ ಜಸ್ಟ್ ಸೊಸೈಟಿ*, ಪು.೬೭-೮೨

೧೫. ವಿವರಗಳಿಗೆ ಈ ಕೆಳಗಿನ ಪುಸ್ತಕಗಳನ್ನು ನೋಡಬಹುದು. ೧. ಇ.ಇ.ಇವಾನ್ಸ್ ಪಿಚರ್ಡ್, *ಸೋಶಿಯಲ್ ಆಂಥ್ರೋಪಲಾಜಿ*, ನ್ಯೂಡೆಲ್ಲಿ: ಯುನಿವರ್ಸಲ್ ಬುಕ್ ಸ್ಟಾಲ್, ೧೯೯೧, ೨. ಮಾರ್ಗರೇಟ್ ಮೀಡ್, *ಆಂಥ್ರೋಪಲಾಜಿ - ಎ ಹ್ಯೂಮನ್ ಸಯನ್ಸ್, ಸಿಲೆಕ್ಟಡ್ ಪೇಪರ್ಸ್ ೧೯೩೯-೧೯೬೦*, ಟೊರೆಂಟೋ: ವೇನ್ ನಸ್ಟ್ರೇಂಡ್ ಕಂಪೆನಿ, ೧೯೬೪.

೧೬. ಇ. ಆರ್ ಹೌಸ್, 'ಇಂಟಗ್ರೇಟಿಂಗ್ ದಿ ಕ್ವಾಲಿಟೇಟಿವ್ ಆಂಡ್ ಕ್ವಾಂಟಿಟೇಟಿವ್', ಇನ್ ಸಿ ಎಸ್ ರಿಶರ್ಟ್ ಆಂಡ್ ಎಸ್ ಎಫ್ ರೆಲೀಸ್(ಸಂ), *ಕ್ವಾಲಿಟೇಟಿವ್ ಕ್ವಾಂಟಿಟೇಟಿವ್ ಡಿಬೇಟ್ - ನ್ಯೂಪರ್ ಸ್ಪಕ್ಟೀವ್ಸ್*, ಸಾನ್‌ಫ್ರಾನ್ಸಿಸ್ಕೊ : ಜಸ್ಸಿ ಬೇಸ್, ೧೯೯೪, ಪು.೧೩-೨೨

೧೭. ಈ ತಿಳುವಳಿಕೆ ಸ್ಟ್ರಕ್ಚರಲ್ ಫಂಕ್ಚನಲಿಸ್ಟ್ ಹಿನ್ನೆಲೆಯಿಂದ ಬಂದಿದೆ. ಸ್ಟ್ರಕ್ಚರಲ್ ಫಂಕ್ಷನಲಿಸಂ ಮೂಲತಃ ಜೀವಶಾಸ್ತ್ರದ ನೆಲೆಯಿಂದ ಬಂದಿದೆ. ದೇಹದ ಅಂಗಾಂಗಗಳು ಬೇರೆ ಬೇರೆ ಮತ್ತು

ಅವು ಮಾಡುವ ಕೆಲಸಗಳು(ಫಂಕ್ಷನ್‌ಗಳು) ಬೇರೆ ಬೇರೆಯಾದವು. ಆದರೂ ಈ ಅಂಗಾಂಗಗಳ ನಡುವಿನ ಸಂಬಂಧ ಪರಸ್ಪರ ಪೂರಕವಾದುದು. ಇಡೀ ದೇಹದ ಕಾರ್ಯನಿರ್ವಹಣೆಗೆ ಇವು ಒಂದಾಗಿ ಸಹಕರಿಸುತ್ತವೆ. ಇದೇ ತರ್ಕ ಸ್ಟ್ರಕ್ಚರಲ್ ಫಂಕ್ಷನಲಿಸಂ ಥಿಯರಿಯಲ್ಲಿ ಕೆಲಸ ಮಾಡುತ್ತದೆ. ಸ್ಟ್ರಕ್ಚರಲ್ ಫಂಕ್ಷನಲಿಸಂ ಸಮಾಜವನ್ನು ಜೀವಸೆಲೆಯುಳ್ಳ ವ್ಯವಸ್ಥೆಗೆ ಹೋಲಿಸುತ್ತದೆ. ದೇಹದಲ್ಲಿ ಹಲವಾರು ಅಂಗಾಂಗಗಳಿರುವಂತೆ ಸಾಮಾಜಿಕ ವ್ಯವಸ್ಥೆಯೊಂದರಲ್ಲಿ ಪರಸ್ಪರ ಸಂಬಂಧಿಸಿದ ಹಲವಾರು ಉಪ-ವ್ಯವಸ್ಥೆಗಳಿರುತ್ತವೆ (ಸಾಮಾಜಿಕ, ರಾಜಕೀಯ, ಆರ್ಥಿಕ, ಸಂಸ್ಕೃತಿ ಇತ್ಯಾದಿ ಉಪ-ವ್ಯವಸ್ಥೆಗಳು ಅಥವಾ ಸಬ್ ಸಿಸ್ಟಮ್ಸ್‌ಗಳಿರುತ್ತವೆ). ಉಪ-ವ್ಯವಸ್ಥೆಗಳ ನಡುವಿನ ಈ ಸಂಬಂಧ ಸಂಘರ್ಷವಿಲ್ಲದ ಒಂದು ಬಗೆಯ ಸಾಮರಸ್ಯದ ಸಂಬಂಧ. ಒಂದು ಉಪವ್ಯವಸ್ಥೆಯಲ್ಲಾಗುವ ಪರಿವರ್ತನೆ ಅನಿವಾರ್ಯವಾಗಿ ಇತರ ಉಪ-ವ್ಯವಸ್ಥೆಗಳಲ್ಲೂ ಪರಿವರ್ತನೆಗೆ ಕಾರಣವಾಗುತ್ತದೆ. ವಿವರಗಳಿಗೆ ಇಮೆನ್ವಲ್ ವೆಲ್‌ಸ್ಟೇಯಿನ್ ಮತ್ತು ಇತರರು, *ಓಪನ್ ದಿ ಸೋಶಿಯಲ್ ಸಯನ್ಸ್- ರಿಪೋರ್ಟ್ ಆಫ್ ದಿ ಗುಲ್ ಬೆಕಿಯನ್ ಕಮಿಶನ್ ಆನ್ ದಿ ರಿಸ್ಟ್ರಕ್ಚರಿಂಗ್ ಆಫ್ ಸೋಶಿಯಲ್ ಸಯನ್ಸ್‌ಸಸ್*, ನ್ಯೂಡೆಲ್ಲಿ : ವಿಸ್ತಾರ್ ಪಬ್ಲಿಕೇಶನ್ಸ್, ೧೯೯೮ ಪುಸ್ತಕ ನೋಡಬಹುದು.

೧೮. ಬಿಡಿಬಿಡಿಯಾಗಿ ನೋಡುವುದನ್ನು ಡೈಕ್ರಾನಿಕ್ ಮತ್ತು ಇಡಿಯಾಗಿ ನೋಡುವುದನ್ನು ಸಿಂಕ್ರಾನಿಕ್ ಎಂದು ಸಂಶೋಧನ ಭಾಷೆಯಲ್ಲಿ ಹೇಳುತ್ತಾರೆ. ಬಿಡಿಬಿಡಿಯಾಗಿ ಮತ್ತು ಇಡಿಯಾಗಿ ನೋಡುವ ಕ್ರಮದ ಹಿನ್ನೆಲೆ ಕೂಡ ವಿಜ್ಞಾನದ ವಿಧಾನವೇ. ಸಂಶೋಧನೆಗೆ ಒಳಪಡುವ ವಸ್ತುಗಳನ್ನು ಅಥವಾ ಜೀವಿಗಳನ್ನು ಬಿಡಿಬಿಡಿಯಾಗಿ ಪರೀಕ್ಷಿಸಿ ವಸ್ತು ಅಥವಾ ಜೀವಿಯ ಇಡೀ ಜೀವ ವ್ಯವಸ್ಥೆ ಕಾರ್ಯನಿರ್ವಹಣೆಯಲ್ಲಿ ಈ ಬಿಡಿಗಳ ಪಾತ್ರವನ್ನು ಮತ್ತು ಇಡೀ ವ್ಯವಸ್ಥೆ ಕಾರ್ಯ ನಿರ್ವಹಿಸುವುದರ ಬಗ್ಗೆ ತೀರ್ಮಾನಕ್ಕೆ ಬರಲು ಇಡಿಯಾಗಿ ನೋಡಲಾಗುವುದು. ಹೀಗೆ ಯಾವುದೇ ಒಂದು ಶಾಸ್ತ್ರದ ಅಧ್ಯಯನದಲ್ಲಿ (ಸಮಾಜಶಾಸ್ತ್ರ ಇರಬಹುದು ಅಥವಾ ಅರ್ಥಶಾಸ್ತ್ರ ಇರಬಹುದು) ಬಿಡಿಬಿಡಿಯಾಗಿ ಮತ್ತು ಇಡಿಯಾಗಿ ನೋಡುವ ಕ್ರಮ ಅಡಕವಾಗಿದೆ. ನಾನು ಇಲ್ಲಿ ಒಂದು ಶಾಸ್ತ್ರದೊಳಗಿನ ಬಿಡಿ ಮತ್ತು ಇಡಿಗಳ ಕುರಿತು ಹೇಳುತ್ತಿಲ್ಲ. ಹಲವಾರು ಶಿಸ್ತುಗಳ ದೃಷ್ಟಿಯಿಂದ ನೋಡುವ ಅನಿವಾರ್ಯತೆ ಮತ್ತು ಆವಾಗ ಎದುರಿಸುವ ಸಮಸ್ಯೆ ಕುರಿತು ಚರ್ಚಿಸಿದ್ದೇನೆ.

೧೯. ಅಮಾತ್ಯಸೇನ್ ಅವರು ಅಭಿವೃದ್ಧಿ ಮೇಲಿನ ಇತ್ತೀಚಿನ ತಮ್ಮ ಪುಸ್ತಕದಲ್ಲಿ ಅಭಿವೃದ್ಧಿಯನ್ನು ಸ್ವಾತಂತ್ರ್ಯಕ್ಕೆ ಸಮೀಕರಿಸಿದ್ದಾರೆ. ವ್ಯಕ್ತಿ ಅಥವಾ ಕುಟುಂಬ ಅನುಭವಿಸುವ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸ್ವಾತಂತ್ರ್ಯದ ಆಧಾರದಲ್ಲಿ ಅಭಿವೃದ್ಧಿಯನ್ನು ಮಾಪನ ಮಾಡಬೇಕೆಂದು ಅವರು ಅಭಿಪ್ರಾಯ ಪಡುತ್ತಾರೆ(*ಡೆವಲಪ್‌ಮೆಂಟ್ ಯಾಸ್ ಫ್ರೀಡಂ*, ನ್ಯೂಡೆಲ್ಲಿ : ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೨೦೦೦).

೨೦. ಡೇವಿಡ್ ಎಲ್ ಮೊರ್ಗನ್, 'ಪೆರಾಡೈಮ್ಸ್ ಲೋಸ್ಟ್ ಅಂಡ್ ಪೆರಾಡೈಮ್ಸ್ ಗೈನ್ಡ್-ಮೆಥಡಲಾಜಿಕಲ್ ಇಂಪ್ಲಿಕೇಶನ್ಸ್ ಆಫ್ ಕಂಬೈನಿಂಗ್ ಕ್ವಾಲಿಟೇಟಿವ್ ಅಂಡ್ ಕ್ವಾಂಟಿಟೇಟಿವ್ ಮೆಥಡ್ಸ್, 'ಇನ್ ವಿಕಿ ಎಲ್ ಪ್ಲಾನೋ ಕ್ಲರ್ಕ್ ಅಂಡ್ ಜಾನ್ ಡಬ್ಲ್ಯು ಕ್ರಾಸ್‌ವೆಲ್, *ದಿ ಮಿಕ್ಸಡ್ ಮೆಥಡ್ ರೀಡರ್*, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೨೦೦೮, ಪು.೨೭-೬೫

೨೧. ಗ್ರೌಂಡೆಡ್ ಥಿಯರಿ, ಫೆಮಿನಿಸ್ಟ್ ಥಿಯರಿ ಇತ್ಯಾದಿಗಳು ಕ್ಷೇತ್ರದಲ್ಲಿನ ಸಂಗತಿಗಳನ್ನು ಸ್ಥಾಪಿತ ತಾತ್ವಿಕ ಚೌಕಟ್ಟಿನೊಂದಿಗೆ ಹೋಲಿಸಿ ನೋಡುವುದನ್ನು ವಿರೋಧಿಸುತ್ತವೆ. ಅಷ್ಟು ಮಾತ್ರವಲ್ಲ ಕ್ಷೇತ್ರದಲ್ಲಿನ ಸಂಗತಿಗಳ ಆಧಾರದಲ್ಲೇ ಥಿಯರಿಗಳನ್ನು ರೂಪಿಸಬೇಕೆನ್ನುವ ನಿಲುವನ್ನು ಪ್ರತಿಪಾದಿಸುತ್ತದೆ.

೨೨. ಕಾಥಿ ಶರ್ಮೇಜ್, *ಕನ್‌ಸ್ಟ್ರಕ್ಟಿಂಗ್ ಗ್ರೌಂಡೆಡ್ ಥಿಯರಿ,* ಪು.೧-೧೩

೨೩. ಇನ್ ಸೈಡರ್ ಅಂಡ್ ಔಟ್ ಸೈಡರ್ ಎನ್ನುವ ಪಾರಿಭಾಷೆಯನ್ನು ರಾಬರ್ಟ್ ಮರ್ಟನ್ ಬಳಕೆಗೆ ತಂದವ(''ಇನ್ ಸೈಡರ್ ಅಂಡ್ ಔಟ್ ಸೈಡರ್-ಎ ಚಾಪ್ಟರ್ ಇನ್ ದಿ ಸೋಶಿಯಲಾಜಿ ಆಫ್ ನೋಲೆಡ್ಜ್'', *ಅಮೇರಿಕನ್ ಜರ್ನಲ್ ಆಫ್ ಸೋಶಿಯಲಾಜಿ,* ವಾಲ್ಯೂಮ್ ೭೮, ಸಂ.೧, ಜುಲೈ ೧೯೭೨, ಪು.೯-೪೭), ಅಧ್ಯಯನಕ್ಕೆ ಒಳಗಾಗುವ ಸಂಗತಿಗಳನ್ನು ಹತ್ತಿರದಿಂದ ಬಲ್ಲವರು ಮಾತ್ರ ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯ ಎನ್ನುವ ನಿಲುವನ್ನು ಮನದಟ್ಟು ಮಾಡಲು ಮರ್ಟನ್ ಈ ಪರಿಭಾಷೆಯನ್ನು ಬಳಸಿದ್ದಾನೆ.

೨೪. ಎಂ.ಚಂದ್ರ ಪೂಜಾರಿ, *ಸಮಾಜ ಸಂಶೋಧನೆ,* ವಿದ್ಯಾರಣ್ಯ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೫

೨೫. ಈ ವಾದವನ್ನು ಮುಂದಿಡುವಾಗ ಸಮಾನತೆ ಮೇಲಿನ ಅಮಾರ್ತ್ಯಸೇನ್ ಅವರ ವಾದಗಳನ್ನು ಬಳಸಿಕೊಂಡಿದ್ದೇನೆ. ಈ ವಾದದ ವಿವರಗಳಿಗೆ ಅಮಾರ್ತ್ಯ ಸೇನ್ ಅವರ, *ಡೆವಲಪ್‌ಮೆಂಟ್ ಯಾಸ್ ಫ್ರೀಡಂ* (ನ್ಯೂಡೆಲ್ಲಿ : ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೨೦೦೦) ಮತ್ತು *ಐಡೆಂಟಿಟಿ ಅಂಡ್ ವಾಯಿಲೆನ್ಸ್ ದಿ ಇಲ್ಯೂಶನ್ ಆಫ್ ಡೆಸ್ಟಿನಿ,* ನ್ಯೂಡೆಲ್ಲಿ : ಪೆಂಗ್ವಿನ್ ಬುಕ್ಸ್, ೨೦೦೬, ಪುಸ್ತಕಗಳನ್ನು ನೋಡಬಹುದು.

೫

ವಿಷಯ ಆಯ್ಕೆ

ಸಂಶೋಧನಾ ವಿಷಯ ಆಯ್ಕೆ ಸಂದರ್ಭದಲ್ಲಿ ಸಂಶೋಧನಾ ಆಕಾಂಕ್ಷಿಗಳು ಎದುರಿಸುವ ಕೆಲವೊಂದು ಸಮಸ್ಯೆಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಿದ್ದೇನೆ. ಸಂಶೋಧನೆ ಆರಂಭಿಸುವವರ ದೊಡ್ಡ ಸಮಸ್ಯೆಯೆಂದರೆ ಯಾವ ವಿಷಯದ ಮೇಲೆ ಸಂಶೋಧನೆ ಮಾಡಬೇಕೆನ್ನುವ ನಿರ್ಧಾರ ತಳೆಯುವುದು. ಬಹುತೇಕ ಸಂಶೋಧಕರು ವಿಷಯ ಆಯ್ಕೆ ಮಾಡುವ ತಮ್ಮ ಜವಾಬ್ದಾರಿಯನ್ನು ಮಾರ್ಗದರ್ಶಕರಿಗೆ ಬಿಟ್ಟುಕೊಟ್ಟಿದ್ದಾರೆ. 'ಯಾವ ವಿಷಯದ ಮೇಲೆ ಪಿಹೆಚ್‌ಡಿ ಮಾಡ ಬಯಸುತ್ತೀರಿ?' ಎಂದು ಸಂಶೋಧನ ಆಕಾಂಕ್ಷಿಗಳನ್ನು ಮಾರ್ಗದರ್ಶಕರು ಕೇಳಿದರೆ, 'ತಾವು ಸೂಚಿಸುವ ವಿಷಯದ ಮೇಲೆ', ಎನ್ನುವ ಉತ್ತರ ತಟ್ಟನೆ ಬರುತ್ತದೆ. ಅಭ್ಯರ್ಥಿಗಳು ಆ ರೀತಿ ಹೇಳಲು ಕಾರಣವೇನು? ಒಂದು, ಅಭ್ಯರ್ಥಿ ಯಾವ ವಿಷಯದ ಮೇಲೆ ಪಿಹೆಚ್.ಡಿ ಮಾಡಬೇಕೆಂದು ಗಂಭೀರವಾಗಿ ಆಲೋಚನೆ ಮಾಡದಿರುವುದು. ಪಿಹೆಚ್.ಡಿ ಕೂಡ ಇತರ ಪದವಿಗಳಂತೆ ಅರ್ಜಿ ಹಾಕಿ ನೋಂದಾವಣಿ ಮಾಡಿಸಿಕೊಂಡು ಹಲವು ಹಂತಗಳು ದಾಟಿದ ನಂತರ (ಪ್ರವೇಶ ಪರೀಕ್ಷೆ, ತಾತ್ಕಾಲಿಕ ನೋಂದಾವಣಿ, ಶಾಶ್ವತ ನೋಂದಾವಣಿ, ಮಾರ್ಗದರ್ಶಕರೊಂದಿಗೆ ಉತ್ತಮ ಸಂಬಂಧ ಇತ್ಯಾದಿ) ಕೆಲವು ನೂರು ಪುಟ ಬರೆಯುವಷ್ಟು ಜ್ಞಾನ ದೊರಕಿದ ನಂತರ ಸಿಗುವ ಪದವಿ ಎನ್ನುವ ನಂಬಿಕೆ ಇದ್ದಂತಿದೆ. ಎರಡು, ತಮ್ಮ ಆಸಕ್ತಿಯನ್ನು ಅಥವಾ ತಾನು ಆಸಕ್ತಿ ಹೊಂದಿರುವ ವಿಷಯದ ಮೇಲೆ ಸಂಶೋಧನೆ ಮುಂದುವರಿಸುತ್ತೇನೆಂದು ವಾದಿಸಿದರೆ ಎಲ್ಲಿ ಮಾರ್ಗದರ್ಶಕರು ಅಸಮಾಧಾನ ಪಟ್ಟು ಸಂಶೋಧನೆಗೆ ಅವಕಾಶ ಮಾಡಿಕೊಡುವುದಿಲ್ಲವೋ ಎನ್ನುವ ಭಯ. ಇದು ಅಭ್ಯರ್ಥಿಯ ಸಮಸ್ಯೆಯೆಲ್ಲ. ಇದು ನಮ್ಮ ಒಟ್ಟು ಸಾಮಾಜಿಕ ಹಾಗೂ ಶೈಕ್ಷಣಿಕ ವಲಯದ ಸಮಸ್ಯೆ. ಪ್ರಶ್ನೆ ಮಾಡುವುದು, ಭಿನ್ನತೆ ಪ್ರದರ್ಶಿಸುವುದು, ಸ್ವಂತಿಕೆ ಪ್ರದರ್ಶಿಸುವುದು ಇತ್ಯಾದಿಗಳನ್ನು ನಮ್ಮ ಸಾಮಾಜಿಕ ಪರಿಸರ ಒಪ್ಪುವುದಿಲ್ಲ. ವ್ಯಕ್ತಿ ಗುಂಪಿನ ಇತರರ ಹಾಗೆ ಇರಬೇಕು. ಒಂದು ವೇಳೆ ಆಲೋಚನೆ, ದೃಷ್ಟಿಕೋನ, ಮಂಡನೆ, ನಡವಳಿಕೆ ಇತ್ಯಾದಿಗಳಲ್ಲಿ ಸ್ವಂತಿಕೆ ಪ್ರದರ್ಶಿಸಲು ಆರಂಭಿಸಿದರೆ ಗುಂಪಿನಿಂದ

ದೂರ ಇರಿಸಲಾಗುವುದು. ಎಲ್ಲ ಸಂದರ್ಭಗಳಲ್ಲೂ ಗುಂಪು ನೇರವಾಗಿ ಅದು ಸರಿಯಲ್ಲ ಇದು ಸರಿಯಲ್ಲ ಎನ್ನದಿರಬಹುದು. ಹೇಳದಿರುವ ಕಾರಣ ತುಂಬ ಸರಳವಾಗಿದೆ. ಸ್ವಂತಿಕೆಯನ್ನು ನಕರಾತ್ಮಕ ಸಂಗತಿಗಳಲ್ಲಿ ಪ್ರದರ್ಶಿಸಿದರೆ ನೇರವಾಗಿ ಸರಿಯಲ್ಲ ಎನ್ನಬಹುದು. ಆದರೆ ಸಕರಾತ್ಮಕ ಸಂಗತಿಗಳಲ್ಲಿ ಪ್ರದರ್ಶಿದರೆ ಅದು ಸರಿಯಲ್ಲವೆಂದು ನೇರವಾಗಿ ಹೇಳುವಂತಿಲ್ಲ; ಪರೋಕ್ಷವಾಗಿ ಸಂಬಂಧಪಟ್ಟವರ ಗಮನಕ್ಕೆ ತರಲಾಗುವುದು. ಸ್ವಂತಿಕೆ/ಭಿನ್ನತೆ ಪ್ರದರ್ಶಿಸುವವರ ಸಣ್ಣ ತಪ್ಪು ಕೂಡ ದೊಡ್ಡ ಶಿಕ್ಷೆಯನ್ನು ಆಹ್ವಾನಿಸಬಹುದು. ಒಂದೇ ವಿಧದ ತಪ್ಪಿಗೆ ಗುಂಪಿನೊಂದಿಗೆ ರಾಜಿ ಮಾಡಿಕೊಂಡು ಇರುವವರಿಗೆ ಸಿಗುವ ಶಿಕ್ಷೆಗೂ ಸ್ವಂತಿಕೆ/ಭಿನ್ನತೆ ಪ್ರದರ್ಶಿಸುವವರಿಗೂ ಸಿಗುವ ಶಿಕ್ಷೆಗೂ ತುಂಬಾ ವ್ಯತ್ಯಾಸ ಇರುತ್ತದೆ. ಜತೆಗೆ ಸ್ವಂತಿಕೆ ಪ್ರದರ್ಶಿಸುವವರ ಉತ್ತಮ ಕೆಲಸ ಕಾರ್ಯಗಳಿಗೆ ವಿಶೇಷ ಪುರಸ್ಕಾರನೂ ಸಿಗದ ಹಾಗೆ ನೋಡಿಕೊಳ್ಳಲಾಗುವುದು. ಈ ಬಗೆಯ ಪುರಸ್ಕಾರ ತಿರಸ್ಕಾರಗಳ ಮೂಲಕ ಗುಂಪಿನ ನಡವಳಿಕೆಯೊಂದಿಗೆ ಗುರುತಿಸಲು ಒತ್ತಡ ಹೇರಲಾಗುವುದು. ಒಂದು ವೇಳೆ ಈ ತಂತ್ರ ಸಫಲವಾಗದಿದ್ದರೆ ನೇರ ಟೀಕೆಗಳ ಮೂಲಕ ಹತೋಟಿಯಲ್ಲಿಡಲು ಪ್ರಯತ್ನಿಸಲಾಗುವುದು ಅಥವಾ ವ್ಯಕ್ತಿ ತನ್ನ ಭಿನ್ನ ನಡವಳಿಕೆಯ ಮೂಲಕ ಗುಂಪಿನ ನಡವಳಿಕೆಯನ್ನು ವಿಮರ್ಶಿ ಸುವ ಪ್ರಯತ್ನವನ್ನು ಮಾಡದಂತೆ ಕ್ರಮಕೈಗೊಳ್ಳಲಾಗುವುದು. ಹೀಗೆ ಭಿನ್ನತೆ, ಪ್ರತ್ಯೇಕತೆ, ಸ್ವಂತಿಕೆ ಇತ್ಯಾದಿಗಳನ್ನು ಪ್ರದರ್ಶಿಸುವುದನ್ನು ನಮ್ಮ ವ್ಯವಸ್ಥೆ ಇಷ್ಟ ಪಡುವುದಿಲ್ಲ.

ಸಾಮಾಜಿಕ ಪರಿಸರದಲ್ಲಿನ ಈ ಎಲ್ಲ ಕೊರತೆಗಳು (ಸ್ವಂತಿಕೆ, ಭಿನ್ನತೆ, ಪ್ರತಿಭಟನೆ ಇತ್ಯಾದಿಗಳ ಕೊರತೆ) ಶೈಕ್ಷಣಿಕ ಪರಿಸರದಲ್ಲೂ ಮುಂದುವರಿದಿದೆ. ಇದಕ್ಕೆ ಬಹುಮುಖ್ಯ ಕಾರಣ ನಮ್ಮ ಶಿಕ್ಷಣ ವ್ಯವಸ್ಥೆ. ನಮ್ಮ ಶಿಕ್ಷಣ ವ್ಯವಸ್ಥೆ ವಿದ್ಯಾರ್ಥಿಗಳಿಗೆ ಪ್ರಶ್ನಿಸಲು ಕಲಿಸುವುದಿಲ್ಲ.[3] ಇದು ಕೇವಲ ಉನ್ನತ ಶಿಕ್ಷಣದ ಸಮಸ್ಯೆಯಲ್ಲ. ಪ್ರಾಥಮಿಕ ಶಿಕ್ಷಣ ದಿಂದಲೇ ಈ ಸಮಸ್ಯೆ ಆರಂಭವಾಗುತ್ತದೆ. ಇಡೀ ಶಿಕ್ಷಣ ವ್ಯವಸ್ಥೆಯ ಮೂಲ ಲಕ್ಷಣ ಹೆಚ್ಚಿನ ಪ್ರಮಾಣದಲ್ಲಿ ಜ್ಞಾನ ಸಂಗ್ರಹ. ಗುರುಗಳು ಅಥವಾ ಪಠ್ಯ ಪುಸ್ತಕಗಳು ನೀಡುವ ಜ್ಞಾನವನ್ನು ಯಥಾವತ್ತಾಗಿ ಜ್ಞಾಪಕದಲ್ಲಿಟ್ಟುಕೊಂಡು ನಿರ್ದಿಷ್ಟ ವಿಧಾನದಲ್ಲಿ ಪುನರ್ ಮಂಡಿಸುವುದು ಈ ಜ್ಞಾನ ಸಂಗ್ರಹದ ವಿಧಾನ. ವಿದ್ಯಾರ್ಥಿಯ ಜ್ಞಾನ ಸಂಗ್ರಹದ ಶಕ್ತಿಯನ್ನು ಪರೀಕ್ಷೆಗಳ ಮೂಲಕ ಒರೆಹಚ್ಚಲಾಗುವುದು. ಅಧ್ಯಾಪಕರುಗಳಿಂದ ಹಾಗೂ ಪಠ್ಯ ಪುಸ್ತಕಗಳಿಂದ ಗಳಿಸಿದ ಜ್ಞಾನವನ್ನು ಯಥಾವತ್ತಾಗಿ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಪರೀಕ್ಷೆಗಳಲ್ಲಿ ಬರೆದ (ವಾಂತಿ ಮಾಡಿದ) ವಿದ್ಯಾರ್ಥಿಗೆ ಹೆಚ್ಚಿನ ಅಂಕಗಳು ದೊರೆಯುತ್ತದೆ. ಮೇಸ್ಟ್ರು ಹೇಳುವ ವಿಚಾರಗಳನ್ನು ಅಥವಾ ಪಠ್ಯ ಪುಸ್ತಕಗಳು ನೀಡುವ ವಿಚಾರಗಳನ್ನು ಪ್ರಶ್ನಿಸುವ, ವಿಶ್ಲೇಷಿಸುವ, ತಮ್ಮದೇ ವಿಚಾರಗಳನ್ನು ತಮ್ಮದೇ ವಿಧಾನದಲ್ಲಿ ಮಂಡಿಸುವ ಅಭ್ಯಾಸವನ್ನು ಪ್ರಾಥಮಿಕ ಹಂತದಿಂದಲೇ ಮಾಡಿಸುವುದಿಲ್ಲ. ಇದರಿಂದಾಗಿ ಪ್ರಶ್ನಿಸುವ, ವಿಶ್ಲೇಷಿಸುವ, ಭಿನ್ನ ಆಲೋಚನೆಗಳನ್ನು ಮಂಡಿಸುವ, ವಿಚಾರ ಮಂಡನೆಯಲ್ಲಿ ಸ್ವಂತಿಕೆ

ಪ್ರದರ್ಶಿಸುವ ಯಾವತ್ತು ತರಬೇತುಗಳು ಶಿಕ್ಷಣದಿಂದ ದೊರೆಯುವುದಿಲ್ಲ. ಶಾಲೆಯಲ್ಲಿ ಮೇಸ್ಟ್ರು ಹೇಳುವುದನ್ನು ಪ್ರಶ್ನಿಸದೆ ಸ್ವೀಕರಿಸುವ ಅಭ್ಯಾಸ ಮತ್ತು ಮನೆಗಳಲ್ಲಿ ತಂದೆ ತಾಯಿಗಳು, ಅಣ್ಣ ಅಕ್ಕಂದಿರು ಹೇಳುವುದನ್ನು ಪ್ರಶ್ನಿಸದೆ ಸ್ವೀಕರಿಸುವ ಅಭ್ಯಾಸ (ಹಿರಿಯರನ್ನು ಪ್ರಶ್ನಿಸುವುದು ದುರ್ನಡತೆ ಅಥವಾ ಅಗೌರವ ತೋರಿಸಿದಂತೆ ಆಗುತ್ತದೆ ಎನ್ನುವ ಸಾಮಾಜಿಕ ಮೌಲ್ಯ) ಈ ಎರಡು ಜತೆಜತೆಗೆ ಹೋಗುತ್ತವೆ. ಇದೇ ಅಭ್ಯಾಸ ಸ್ಥಳೀಯ ಪರಿಸರದಲ್ಲಿ ಹಿರಿಯರು ಹೇಳುವುದನ್ನು ಪ್ರಶ್ನಿಸದೆ ಸ್ವೀಕರಿಸುವ ಅಭ್ಯಾಸಕ್ಕೆ ಎಡೆ ಮಾಡಿಕೊಡುತ್ತದೆ. ಈ ಅಭ್ಯಾಸ, ಅಂತಿಮ ಹಂತದಲ್ಲಿ, ಅಧಿಕಾರದ ಸ್ಥಾನದಲ್ಲಿರುವವರು(ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಅಧಿಕಾರ ಸ್ಥಾನದಲ್ಲಿರುವವರು) ಏನು ಹೇಳಿದರೂ ಪ್ರಶ್ನಿಸದೆ ಸ್ವೀಕರಿಸುವ ಮಟ್ಟಕ್ಕೆ ಒಯ್ಯುತ್ತದೆ. ಇದೇ ಅಭ್ಯಾಸ ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣದಲ್ಲೂ ಮುಂದುವರಿಯುತ್ತದೆ. ಇಂತಹ ವಿದ್ಯಾರ್ಥಿಗಳು ಸಂಶೋಧನೆ ಮಾಡಲು ಆಸಕ್ತರಾದಾಗ ಅವರಿಗೆ ನಿಜವಾದ ಸಮಸ್ಯೆ ಎದುರಾಗುತ್ತದೆ. ಯಾಕೆಂದರೆ ಸಂಶೋಧನೆಯಲ್ಲಿ ಪ್ರಶ್ನಿಸುವುದೇ ಮುಖ್ಯ ಭೂಮಿಕೆ ನಿಭಾಯಿಸುತ್ತದೆ. ಗಟ್ಟಿಯಾದ ಮತ್ತು ತರ್ಕಬದ್ಧವಾದ ಪ್ರಶ್ನೆ ಕೇಳಲು ಗೊತ್ತಿರುವವರು ಮಾತ್ರ ಉತ್ತಮ ಸಂಶೋಧನ ಪ್ರಶ್ನೆ ಕೇಳಲು ಸಾಧ್ಯ. ಉತ್ತಮ ಸಂಶೋದನ ಪ್ರಶ್ನೆ ರೂಪಿತವಾದರೆ ಮಾತ್ರ ಉತ್ತಮ ಸಂಶೋಧನ ಪ್ರಬಂಧ ರಚನೆ ಸಾಧ್ಯ. ಉತ್ತಮ ಪ್ರಬಂಧ ರಚನೆಯ ದೃಷ್ಟಿಯಿಂದ ಮಾತ್ರ ಪ್ರಶ್ನಿಸುವ ಅಭ್ಯಾಸಕ್ಕೆ ಮಹತ್ವ ಇರುವುದಿಲ್ಲ; ಉತ್ತಮ ಸಮಾಜ ನಿರ್ಮಾಣದ ದೃಷ್ಟಿಯಿಂದಲೂ ಪ್ರಶ್ನಿಸುವ ಅಭ್ಯಾಸ ಇರುವ ಹೆಚ್ಚು ಹೆಚ್ಚು ವ್ಯಕ್ತಿಗಳಿರುವುದು ಅನಿವಾರ್ಯ.

ಆಚಾರ/ವಿಚಾರ/ಸತ್ಯಗಳು ಅಧಿಕಾರವನ್ನು ಮಿಥ್ಯಗೊಳಿಸುತ್ತವೆ. ಅಧಿಕಾರ ಆಚಾರ/ವಿಚಾರ/ಸತ್ಯಗಳ ಹೆಸರಲ್ಲಿ ಕಾರುಬಾರು ಮಾಡುತ್ತಿರುತ್ತದೆ. ಪ್ರಶ್ನೆ ಈಗಾಗಲೇ ಸ್ಥಾಪಿತ ಆಚಾರ/ವಿಚಾರ/ಸತ್ಯಗಳನ್ನು ವಿಮರ್ಶೆಗೆ ಒಡ್ಡುತ್ತದೆ. ವಿಮರ್ಶೆ ಈಗಾಗಲೇ ಸ್ಥಾಪಿತ ಆಚಾರ/ವಿಚಾರ/ಸತ್ಯಗಳ ಹಿನ್ನೆಲೆ ಮುನ್ನೆಲೆಗಳನ್ನು ಕೆದಕುತ್ತದೆ. ಅವುಗಳು ಮತ್ತು ಅಧಿಕಾರದ ನಡುವಿನ ಸಂಬಂಧವನ್ನು ಬಯಲು ಮಾಡಲು ಪ್ರಯತ್ನಿಸುತ್ತದೆ. ಆಚಾರ/ವಿಚಾರ/ಸತ್ಯಗಳು ಬಯಲಾದರೆ ಅವುಗಳ ಹೆಸರಿನಲ್ಲಿ ಕಾರುಬಾರು ಮಾಡುವ ಅಧಿಕಾರ ಕೂಡ ಬಯಲಾದಂತೆ. ಹೀಗೆ ಈಗಾಗಲೇ ಸ್ಥಾಪಿತವಾದ ಸತ್ಯಗಳು ಮತ್ತು ಅವುಗಳ ಬಲದಿಂದ ಚಲಾವಣೆಯಲ್ಲಿರುವ ಅಧಿಕಾರ ಎರಡೂ ಕೂಡ ಪ್ರಶ್ನಿಸುವ ಶಿಕ್ಷಣದಿಂದ ಆಪಾಯ ಎದುರಿಸಬೇಕಾಗಿದೆ. ಪ್ರಶ್ನಿಸಲು ಅವಕಾಶ ಮಾಡಿಕೊಡದ ಶಿಕ್ಷಣ ಈಗಾಗಲೇ ಇರುವ ಎಲ್ಲವನ್ನು (ಧರ್ಮ, ಲರ್ಥ, ನ್ಯಾಯ, ಸಮಾಜ, ರಾಜಕೀಯ ಇತ್ಯಾದಿ ಕ್ಷೇತ್ರಗಳಲ್ಲಿನ ಬಹುತೇಕ ಎಲ್ಲ ಆಚರಣೆಗಳನ್ನು) ಪ್ರಶ್ನಿಸದೇ ಒಪ್ಪಿಕೊಳ್ಳುವಂತೆ ಮಾಡಬಹುದು. ಸ್ವತಂತ್ರ ಸಮಾಜ ನಿರ್ಮಾಣದ ಸುಮಾರು ಆರು ದಶಕಗಳ ನಂತರ ಇದೇ ಸಮಸ್ಯೆ ಮುಂದುವರಿಯುತ್ತದೆ ಎಂದರೆ ಇದು ತಿಳಿಯದೇ ನಡೆಯುವ ಪ್ರಮಾದ ಎನ್ನಲು

ಸಾಧ್ಯವಿಲ್ಲ.[೩] ಇಷ್ಟೊಂದು ದೊಡ್ಡ ದೇಶದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವಿಜ್ಞಾನಿಗಳು, ಸಮಾಜ ವಿಜ್ಞಾನಿಗಳು, ಸಂಸ್ಕೃತಿ ಚಿಂತಕರು ಇರುವ ಸಮಾಜದಲ್ಲಿ ಪ್ರಶ್ನಿಸುವ ಶಿಕ್ಷಣ ವ್ಯವಸ್ಥೆಯ ಮಹತ್ವದ ಅರಿವಿಲ್ಲ ಎನ್ನಲು ಸಾಧ್ಯವಿಲ್ಲ. ಖಂಡಿತವಾಗಿಯೂ ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಈ ಕುರಿತು ಚರ್ಚೆಗಳು ನಡೆದಿವೆ ಮತ್ತು ನಡೆಯುತ್ತಲೂ ಇವೆ. ಜತೆಗೆ ಕೆಲವೊಂದು ಸಣ್ಣಪುಟ್ಟ ಪ್ರಯೋಗಗಳು ನಡೆದಿವೆ. ಆದರೆ ಪ್ರಭುತ್ವ ಎಲ್ಲಿ ಕೂಡ ನಮ್ಮ ಶಿಕ್ಷಣ ವ್ಯವಸ್ಥೆಯ ಈ ಕೊರತೆಯನ್ನು ಗಂಭೀರ ಸಮಸ್ಯೆಯೆಂದು ಪರಿಗಣಿಸಿ ಪರಿಹಾರಕ್ಕೆ ಪ್ರಯತ್ನಿಸಿಲ್ಲ. ಇದು ಹಲವಾರು ಸಂದೇಹಗಳಿಗೆ ಎಡೆಮಾಡಿಕೊಡುತ್ತದೆ. ಸಮಸ್ಯೆಯ ಅರಿವಿಲ್ಲದೆ ಪರಿಹಾರಕ್ಕೆ ಪ್ರಯತ್ನಿಸದಿದ್ದರೆ ಯಾರು ಚಿಂತಿಸಬೇಕಾಗಿಲ್ಲ. ಇಲ್ಲಿ ಸಮಸ್ಯೆಯ ಅರಿವು ಇದೆ. ಆದರೆ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ನಡೆಯುತ್ತಿಲ್ಲ. ಯಾಕೆ ನಡೆಯುತ್ತಿಲ್ಲ? ಎನ್ನುವ ಪ್ರಶ್ನೆಗಳಿಗೆ ಹಲವಾರು ಉತ್ತರಗಳು ಸಾಧ್ಯ. ಅವುಗಳಲ್ಲಿ ಒಂದು ಉತ್ತರ ಹೀಗಿರಬಹುದು. ಜನರಿಗೆ ಪ್ರಶ್ನಿಸುವ ಶಿಕ್ಷಣ ನೀಡಿದರೆ ಅವರು ಎಲ್ಲವನ್ನು ಪ್ರಶ್ನಿಸಲಾರಂಭಿಸುತ್ತಾರೆ. ಮೇಸ್ಟ್ರುಗಳನ್ನು ಪ್ರಶ್ನಿಸುತ್ತಾರೆ. ತಂದೆ ತಾಯಿಯನ್ನು ಪ್ರಶ್ನಿಸುತ್ತಾರೆ. ಧರ್ಮಗುರುಗಳನ್ನು ಪ್ರಶ್ನಿಸುತ್ತಾರೆ. ಪ್ರಶ್ನಿಸುವ ಈ ಚಾಲಿ ಮುಂದುವರಿದರೆ ಅಧಿಕಾರದಲ್ಲಿರುವ ಎಲ್ಲರನ್ನು ಪ್ರಶ್ನಿಸಲು ಆರಂಭಿಸುತ್ತಾರೆ. ಇದು ಜನರನ್ನು ಕುರಿಮಂದೆ ತರಹ ನಡೆಸಿಕೊಳ್ಳುವ ರಾಜಕೀಯ, ಅರ್ಥ, ಸಮಾಜ, ಧರ್ಮ ಇತ್ಯಾದಿಗಳ ದೃಷ್ಟಿಯಿಂದ ತುಂಬಾ ಅಪಾಯಕಾರಿ. ಜನರನ್ನು ಲಾರಿಗಳಲ್ಲಿ ತುಂಬಿಕೊಂಡು ಗಂಟೆಗಟ್ಟಲೆ ಬಿಸಿಲಲ್ಲಿ ಕಾಯಿಸಿ ನಾಯಕರ ಮನಸ್ಸಿಗೆ ಬಂದ ಹಾಗೆ ಮಾತನಾಡಿ ಕಳುಹಿಸುವ ವರ್ತಮಾನದ ರಾಜಕೀಯ ಪ್ರಕ್ರಿಯೆಗೆ ಪ್ರಶ್ನಿಸುವ ಶಿಕ್ಷಣದಿಂದ ಸಮಸ್ಯೆಯಾಗಬಹುದು. ಚುನಾವಣೆ ಸಂದರ್ಭದಲ್ಲಿ ಬಡವರ ಉದ್ಧಾರ ಮಾಡುತ್ತೇವೆಯೆಂದು ಮತ ಯಾಚನೆ ಮಾಡಿ ಗೆದ್ದ ನಂತರ ಬಡವರ ಆಸಕ್ತಿಗೆ ವಿರುದ್ಧ ಆರ್ಥಿಕ ನೀತಿ ಜಾರಿಗೆ ತರುವ ರಾಜಕೀಯಕ್ಕೆ ಸಮಸ್ಯೆ ಆಗಬಹುದು. ಹರಿಜನ ಉದ್ಧಾರ ಮಾಡುತ್ತೇವೆಯೆಂದು ಹರಿಜನ ಕೇರಿ ಸುತ್ತಾಡಿ ಹರಿಜನರನ್ನು ಮಠಮಂದಿರಗಳಿಂದ ಸತತವಾಗಿ ದೂರ ಇರಿಸುವ ಧಾರ್ಮಿಕ ಗುರುಗಳ ರಾಜಕೀಯಕ್ಕೂ ತೊಂದರೆಯಾಗಬಹುದು. ಹೇಳುವುದೊಂದು ಮಾಡುವುದೊಂದು ಎನ್ನುವ ಹಿರಿಯರ ನಡವಳಿಕೆಗೆ ಸಮಸ್ಯೆಯಾಗ ಬಹುದು. ಜಾತಿ ಭೇದ ಇಲ್ಲ ಧರ್ಮ ಭೇದ ಇಲ್ಲ ಎಂದು ಸಾರ್ವಜನಿಕವಾಗಿ ಸಾರಿ ಖಾಸಗಿಯಾಗಿ ಎಲ್ಲವನ್ನು ಕಟ್ಟುನಿಟ್ಟಾಗಿ ಆಚರಿಸುವ ಧಾರ್ಮಿಕ ಗುರುಗಳ ಇಬ್ಬಂದಿತನಕ್ಕೆ ಸಮಸ್ಯೆಯಾಗಬಹುದು. ಹೀಗೆ ಪ್ರಶ್ನಿಸುವ ಶಿಕ್ಷಣ ಈಗಾಗಲೇ ಅಧಿಕಾರದಲ್ಲಿರುವ ಎಲ್ಲರ ವಿರುದ್ಧ ಇದೆ. ಹಾಗಾಗಿ ಪ್ರಶ್ನಿಸುವ ಶಿಕ್ಷಣಕ್ಕೆ ಮಹತ್ವ ಇಲ್ಲದಿರಬಹುದು. ಆದಾಗ್ಯೂ ಪ್ರಶ್ನಿಸಲು ಕಲಿಸುವ ಪ್ರಾಥಮಿಕ ಶಿಕ್ಷಣ ಉತ್ತಮ ಸಂಶೋಧನೆಗೆ ಮಾತ್ರ ಅಡಿಪಾಯವಲ್ಲ ಸಾಮಾಜಿಕ ಸಂಬಂಧಗಳನ್ನು ಹೊಸಬಗೆಯಲ್ಲಿ ಕಟ್ಟಿಕೊಳ್ಳಲು ಅನಿವಾರ್ಯ ಕೂಡ.

ಹಾಗೆಂದು ಪ್ರಶ್ನಿಸಲು ವಿಶೇಷ ಬುದ್ಧಿವಂತಿಕೆ ಬೇಕೆಂದಿಲ್ಲ ಅಥವಾ ಬುದ್ಧಿವಂತರು ಹೆಚ್ಚಿದಷ್ಟು ಪ್ರಶ್ನಿಸುವವರ ಸಂಖ್ಯೆ ಹೆಚ್ಚುತ್ತದೆ ಎನ್ನಲಾಗುವುದಿಲ್ಲ. ಅತೃಪ್ತಿ, ಅಸಮಾಧಾನ

ಇತ್ಯಾದಿಗಳು ಪ್ರಶ್ನೆ ಹುಟ್ಟಲು ಮುಖ್ಯ ಕಾರಣಗಳು. ಈಗಾಗಲೇ ಇರುವ ಸ್ಥಿತಿಯಲ್ಲಿ ತೃಪ್ತಿ, ಸಮಧಾನ ಹೊಂದಿದರೆ ಬುದ್ಧಿವಂತರಲ್ಲೂ ಪ್ರಶ್ನೆಗಳು ಹುಟ್ಟದಿರಬಹುದು. ಇದಕ್ಕೆ ಉತ್ತಮ ಉದಾಹರಣೆ ೨೦೦೮ರ ಆರ್ಥಿಕ ಕುಸಿತ. ಆರ್ಥಿಕ ಕುಸಿತ ನಂತರ ಇಂಗ್ಲೆಂಡಿನ ರಾಣಿ ಎಲಿಜಬೆತ್ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ನಿರ್ದೇಶಕರಿಗೆ 'ಇಂತಹ ದೊಡ್ಡ ಆರ್ಥಿಕ ಕುಸಿತವನ್ನು ನಿಮಗ್ಯಾರಿಗೂ ಮುಂಚಿತವಾಗಿಯೇ ಯಾಕೆ ಊಹಿಸಲು ಸಾಧ್ಯವಾಗಿಲ್ಲ? ಎನ್ನುವ ಒಂದು ಸರಳ ಪ್ರಶ್ನೆ ಕೇಳಿದರು. ಈ ಸಣ್ಣ ಪ್ರಶ್ನೆಗೆ ಉತ್ತರಿಸಲು ನಿರ್ದೇಶಕರು ಸುಮಾರು ಎಂಟು ತಿಂಗಳು ತೆಗೆದುಕೊಂಡರು. ಎಂಟು ತಿಂಗಳ ನಂತರ ನಿರ್ದೇಶಕರು, 'ಅತೀ ಬುದ್ಧಿವಂತರೆಲ್ಲರೂ ಅನಿಯಂತ್ರಿತ ಮಾರುಕಟ್ಟೆ ವ್ಯವಸ್ಥೆಯಿಂದ ಒಳ್ಳೆಯದಾಗಬಹುದೆಂದು ನಂಬಿದರೆಂದು' ರಾಣಿಗೆ ಉತ್ತರಿಸಿದರು. ಆ ವ್ಯವಸ್ಥೆಯಿಂದ ಒಳ್ಳೆಯದಾಗುತ್ತದೆ ಎನ್ನುವ ನಂಬಿಕೆ ಎಷ್ಟಿತ್ತೆಂದರೆ ಅದರ ಲೋಪ ದೋಷಗಳನ್ನು ಯಾರು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಇದರಿಂದಾಗಿ ಮುಂಬರುವ ಹಾನಿಗಳನ್ನು ಊಹಿಸಲು ಸಾಧ್ಯವಾಗಿಲ್ಲ ಎಂದು ನಿರ್ದೇಶಕರು ಅಭಿಪ್ರಾಯಪಟ್ಟರು.[೪] ಹೆಚ್ಚು ಕಡಿಮೆ ಇದೇ ನೀತಿ ನಮ್ಮ ಎಲ್ಲ ನಂಬಿಕೆಗಳಿಗೂ ಅನ್ವಯವಾಗುತ್ತದೆ. ನಿರ್ದಿಷ್ಟ ಆಚಾರ/ವಿಚಾರ/ಸತ್ಯಗಳಿಂದ ಒಳ್ಳೆಯದಾಗುತ್ತದೆ ಎನ್ನುವ ನಂಬಿಕೆ ಅವುಗಳನ್ನು ಪ್ರಶ್ನಿಸದಂತೆ ಮಾಡುತ್ತದೆ. ಇದರಿಂದಾಗಿ ಇಂತಹ ಆಚಾರ/ವಿಚಾರ/ಸತ್ಯಗಳು ಮತ್ತು ಅವುಗಳ ಹೆಸರಲ್ಲಿ ಅಧಿಕಾರ ನಡೆಸುವುದು ಅವ್ಯಾಹತವಾಗಿ ಮುಂದುವರಿಯುತ್ತದೆ. ಇವುಗಳ ಬಗ್ಗೆ ಅತೃಪ್ತಿ, ಅಸಮಾಧಾನ ಪ್ರಶ್ನಿಸಲು ಅನಿವಾರ್ಯ. ಆದರೆ ಆರ್ಥಿಕ ಕುಸಿತದ ಉದಾಹರಣೆಯಲ್ಲಿ ಮಾರುಕಟ್ಟೆ ವ್ಯವಸ್ಥೆಯನ್ನು ಅಧ್ಯಯನ ಮಾಡುವವರು, ವಿಮರ್ಶೆ ಮಾಡುವವರು, ಈ ನಂಬಿಕೆಗಳ ನೆಲೆಯಲ್ಲಿ ಅಧಿಕಾರ ಚಲಾಯಿಸುವ ಬಹುತೇಕರಿಗೆ ಈ ವ್ಯವಸ್ಥೆ ಬಗ್ಗೆ ಅಸಮಾಧಾನ, ಅತೃಪ್ತಿ ಹುಟ್ಟಲಿಲ್ಲ. ಯಾಕೆಂದರೆ ಅವರೆಲ್ಲರಿಗೆ ಈ ವ್ಯವಸ್ಥೆಯಿಂದ ತೃಪ್ತಿಯಾಗಿದೆ. ತೃಪ್ತಿ, ಸಮಾಧಾನಗಳನ್ನು ಲೆಕ್ಕ ಹಾಕುವಾಗ ಬಹುತೇಕರು ತಮ್ಮ ಸ್ವಂತ ಅಥವಾ ತಮ್ಮ ಹತ್ತಿರದವರನ್ನು ಮಾತ್ರ ಪರಿಗಣಿಸಿದ್ದು ಕಾಣುತ್ತದೆ. ಸಮಾಜದ ಬಹುತೇಕರ ತೃಪ್ತಿ, ಸಮಾಧಾನಗಳು ಇಲ್ಲಿ ನಗಣ್ಯವಾಯಿತು.[೫] ಆದುದರಿಂದ ಅತೃಪ್ತಿ, ಅಸಮಾಧಾನಗಳು ಪ್ರಶ್ನೆಗೆ ಕಾರಣ ಎಂದರೆ ಸಾಲದು. ಬಹುತೇಕರ ಸುಖ, ನೆಮ್ಮದಿ, ಮಾನ ಸಮ್ಮಾನಗಳು ವ್ಯಕ್ತಿಯೊಬ್ಬರ ತೃಪ್ತಿ, ಸಮಾಧಾನಗಳ ಲೆಕ್ಕಚಾರದಲ್ಲಿ ಒಳಗೊಂಡರೆ ಮಾತ್ರ ವ್ಯವಸ್ಥೆಯನ್ನು ಸುಧಾರಿಸುವ ಪ್ರಶ್ನೆಗಳು ಹುಟ್ಟಲು ಸಾಧ್ಯ. ಇದೇ ಸಂದರ್ಭದಲ್ಲಿ ಪ್ರಶ್ನೆ ಮಾಡುವುದಕ್ಕೆ ನಮ್ಮ ತರಗತಿಗಳಲ್ಲಿ ಅವಕಾಶವೆ ಇಲ್ಲ ಎನ್ನಲಾಗುವುದಿಲ್ಲ. ಖಂಡಿತವಾಗಿಯೂ ಇದೆ. ಆದರೆ ಅದು ಶರತ್ತು ಬದ್ಧ ಒಪ್ಪಿಗೆ. ಅಂದರೆ ವಿದ್ಯಾರ್ಥಿ ಕೇಳುವ ಪ್ರಶ್ನೆ ಪಾಠ ಮಾಡುವ ಶಿಕ್ಷಕರ ಜ್ಞಾನದ ವ್ಯಾಪ್ತಿಯೊಳಗೆ ಇದ್ದರೆ ಅಂತಹ ಪ್ರಶ್ನೆಗಳಿಗೆ ಅವಕಾಶ ಇರುತ್ತದೆ. ಒಂದು ವೇಳೆ ವಿದ್ಯಾರ್ಥಿ ಕೇಳುವ ಪ್ರಶ್ನೆ ಶಿಕ್ಷಕರ ಜ್ಞಾನದ ವ್ಯಾಪ್ತಿಯೊಳಗಿರದಿದ್ದರೆ ಅಥವಾ ಶಿಕ್ಷಕರ ಅಜ್ಞಾನವನ್ನು ಬಯಲಿಗೆ ತರುವಂತಹದಾದರೆ ಅಂತಹ ಪ್ರಶ್ನೆಗಳಿಗೆ ಅವಕಾಶ ಇರುವುದಿಲ್ಲ.

ಈ ಪಾಠವನ್ನು ಬುದ್ಧಿವಂತ ವಿದ್ಯಾರ್ಥಿಗಳು ಬೇಗ ಅರ್ಥಮಾಡಿಕೊಳ್ಳುತ್ತಾರೆ ಮತ್ತು ಶಿಕ್ಷಕರ ಸ್ಥಾನಮಾನಕ್ಕೆ ಭಂಗವಾಗದ ರೀತಿಯಲ್ಲಿ(ತರಗತಿಯ ವ್ಯವಸ್ಥೆಯನ್ನು ಕೆಡಿಸದ ರೀತಿಯಲ್ಲಿ) ತಮ್ಮ ಬುದ್ಧಿವಂತಿಕೆಯನ್ನು ಪ್ರದರ್ಶಿಸಲು ಕಲಿಯುತ್ತಾರೆ. ಇದರಿಂದ ಇಬ್ಬರಿಗೂ (ಬುದ್ಧಿವಂತ ವಿದ್ಯಾರ್ಥಿಗೆ ಮತ್ತು ಶಿಕ್ಷಕರಿಗೆ) ಲಾಭ. ಜತೆಗೆ ತರಗತಿಯ ವ್ಯವಸ್ಥೆ ಕೂಡ ಯಥಾ ರೀತಿಯಲ್ಲಿ ಮುಂದುವರಿಯುತ್ತದೆ. ಆದರೆ ಕೆಲವು ವಿದ್ಯಾರ್ಥಿಗಳು ಬುದ್ಧಿವಂತರಾಗಿರುತ್ತಾರೆ. ಆದರೆ ಅವರಿಗೆ ಶಿಕ್ಷಕರ ಸ್ಥಾನಮಾನಕ್ಕೆ ಭಂಗವಾಗದ ರೀತಿಯಲ್ಲಿ ಪ್ರಶ್ನೆ ಮಾಡುವುದಕ್ಕೆ/ಭಿನ್ನತೆ ಪ್ರದರ್ಶಿಸಲು ಬರುವುದಿಲ್ಲ. ಅಂತವರು ಒಂದೋ ತಮ್ಮ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಬೇಕು ಅಥವಾ ಓದು ಬರಹ ಚೆನ್ನಾಗಿ ಮಾಡುತ್ತಾರೆ. ಆದರೆ ಮಹಾನ್ ಜಗಳಗಂಟ ಅಥವಾ ಶುದ್ಧ ತಲೆಹರಟೆ ಇತ್ಯಾದಿ ಬಿರುದುಗಳೊಂದಿಗೆ ಪ್ರತ್ಯೇಕವಾಗಿ ಜೀವಿಸಲು ಕಲಿಯಬೇಕು. ಹೀಗೆ ಪ್ರಾಥಮಿಕ ಶಿಕ್ಷಣದೊಂದಿಗೆ ಆರಂಭವಾಗುವ ಈ ಕಲೆ(ತರಗತಿಯ ವ್ಯವಸ್ಥೆಯನ್ನು ಕೆಡಿಸದೆ ಬುದ್ಧಿವಂತಿಕೆ ಪ್ರದರ್ಶಿಸುವ ಕಲೆ) ಸ್ನಾತಕೋತ್ತರ ಪದವಿ ತನಕವೂ ಮುಂದುವರಿಯುತ್ತದೆ.

ಈ ರೀತಿ ಇರುವ ಶೈಕ್ಷಣಿಕ ವ್ಯವಸ್ಥೆಯಿಂದ ಸಂಶೋಧನಾ ಪ್ರಶ್ನೆಯೊಂದಿಗೆ ಮಾರ್ಗದರ್ಶಕರನ್ನು ಹುಡುಕುವ ಅಭ್ಯರ್ಥಿಗಳು ಸಿಗುವುದಾದರೂ ಹೇಗೆ? ಪ್ರಾಥಮಿಕ ಶಿಕ್ಷಣದಲ್ಲಿ ತರಗತಿಯ ವ್ಯವಸ್ಥೆಯನ್ನು ಕದಡುವ ಪ್ರಶ್ನೆ ಕೇಳಲು ಬಿಡದಿರುವ ವ್ಯವಸ್ಥೆ ಪಿಹೆಚ್.ಡಿ ಪದವಿ ಸಂದರ್ಭದಲ್ಲಿ ಸಂಶೋಧನಾ ವ್ಯವಸ್ಥೆಯನ್ನು (ಸಂಶೋಧಕರು, ಸಾಂಸ್ಥಿಕ ಚೌಕಟ್ಟು, ಅಲ್ಲಿನ ಏಣಿಶ್ರೇಣಿ, ಮೌಲ್ಯ ಇತ್ಯಾದಿಗಳು) ಕದಡುವ ಪ್ರಶ್ನೆಯೊಂದಿಗೆ ಬರುವ ಅಭ್ಯರ್ಥಿಯನ್ನು ಸಹಿಸುತ್ತದೆ ಎನ್ನುವ ಗ್ಯಾರಂಟಿ ಏನು? ಈ ಸಂದೇಹ ಪಿಹೆಚ್.ಡಿ ಆಕಾಂಕ್ಷಿಗಳಲ್ಲೂ ಇರುತ್ತದೆ. ಆದುದರಿಂದ ಅವರು ತಾವು ಸೂಚಿಸಿದ ವಿಷಯದ ಮೇಲೆ ಸಂಶೋಧನೆ ಮಾಡುತ್ತೇವೆಂದು ಹೇಳುತ್ತಾರೆ. ಎಲ್ಲ ಅಭ್ಯರ್ಥಿಗಳು ಇದೇ ಕಾರಣಕ್ಕಾಗಿ ಆ ರೀತಿ ಹೇಳುತ್ತಾರೆಂದು ಹೇಳಲಾಗುವುದಿಲ್ಲ. ಏಕೆಂದರೆ ಇಂದು ಪಿಎಚ್.ಡಿ ಆಕಾಂಕ್ಷಿಗಳಲ್ಲಿ ಬಹುತೇಕರು ಸಂಶೋಧನಾ ಅಧ್ಯಯನ ನಡೆಸಬೇಕೆಂದು ನಿರ್ಧರಿಸುವುದು ಅಧ್ಯಯನವನ್ನು ಇಷ್ಟುಪಟ್ಟು ಎನ್ನಲಾಗುವುದಿಲ್ಲ. ಸ್ನಾತಕೋತ್ತರ ಪದವಿ ಪಡೆದೂ ಕೆಲಸ ಸಿಗದವರು ಪಿಹೆಚ್.ಡಿ ಪದವಿಯಿಂದಲಾದರೂ ಕೆಲಸ ಸಿಗಬಹುದೋ ಎನ್ನುವ ಕಾರಣಕ್ಕಾಗಿ ಸಂಶೋಧನಾ ಅಧ್ಯಯನಕ್ಕೆ ಅಣಿಯಾಗುತ್ತಾರೆ. ಪದವಿ ತರಗತಿಗಳಿಗೆ ಮತ್ತು ಸ್ನಾತಕೋತ್ತರ ತರಗತಿಗಳಿಗೆ ಪಾಠ ಮಾಡುವ ಶಿಕ್ಷಕರಿಗೆ ಪಿಹೆಚ್.ಡಿ ಡಿಗ್ರಿ ಕಡ್ಡಾಯವಾಗಿದೆ. ಅವರ ಹಲವಾರು ಸವಲತ್ತುಗಳು (ಮುಂಬಡ್ತಿ, ಸಂಬಳ ಶ್ರೇಣಿ ಇತ್ಯಾದಿಗಳು) ಮತ್ತು ಪಿಹೆಚ್.ಡಿ ಡಿಗ್ರಿ ನಡುವೆ ಸಂಬಂಧ ಕಲ್ಪಿಸಲಾಗಿದೆ. ಇದರಿಂದಾಗಿ ಪಾಠ ಮಾಡುವ ಮೇಸ್ಟ್ರುಗಳು ಸಂಶೋಧನೆ ಮಾಡುವುದು ಅನಿವಾರ್ಯವಾಗಿದೆ. ಈ ಬಗೆಯಲ್ಲಿ ಸಮಯ ಸಂದರ್ಭಗಳ ಅನಿವಾರ್ಯತೆಯಿಂದ ಸಂಶೋಧನೆಗೆ ಹೊರಟವರು ಕೂಡ 'ನೀವೇ ಏನಾದರೊಂದು ವಿಷಯ ಸೂಚಿಸಿ ಸಾರ್, ನಾನು ಅದರ ಮೇಲೆ ಸಂಶೋಧನೆ

ಮಾಡುತ್ತೇನೆಂದು'. ಹೇಳುವುದು ಸಾಮಾನ್ಯವಾಗಿದೆ. ಇದೊಂದು ರೀತಿ ಜಾಣ ಅಜ್ಞಾನ ಪ್ರದರ್ಶನ. ಇದರಿಂದ ಅಭ್ಯರ್ಥಿಗೆ ಎರಡು ಅನುಕೂಲಗಳು ಸಾಧ್ಯ. ಒಂದು, ಪಿಹೆಚ್.ಡಿ ಅಧ್ಯಯನ ವಿಷಯ ಆಯ್ಕೆ ಮಾಡುವ ಜವಾಬ್ದಾರಿಯಿಂದ ಬಿಡುಗಡೆ. ಎರಡು, ತಾವು ಸೂಚಿಸಿದ ವಿಷಯದ ಮೇಲೆ ಸಂಶೋಧನೆ ಮಾಡುತ್ತೇನೆಂದು ಹೇಳಿ ಮಾರ್ಗದರ್ಶಕರ ಆಹಂಗೆ ಗೌರವ ತೋರಿಸಿದಂತೆ ಮಾಡುವುದು. ಆ ಮೂಲಕ ಪಿಹೆಚ್.ಡಿಗೆ ಸಂಬಂಧಿಸಿದ ಮುಂದಿನ ಎಲ್ಲ ಜವಾಬ್ದಾರಿಗಳನ್ನು ನೀವೇ ಹೊರಬೇಕೆಂದು ಮಾರ್ಗದರ್ಶಕರಿಗೆ ಪರೋಕ್ಷವಾಗಿ ಸೂಚಿಸುವುದು.

ವಿಷಯ ಆಯ್ಕೆಗೆ ಸಂಬಂಧಿಸಿದಂತೆ ವರ್ತಮಾನದಲ್ಲಿ ಇರುವ ಕೆಲವೊಂದು ಆಚರಣೆಗಳನ್ನು ನೋಡಿದ್ದೇವೆ. ಮೇಲೆ ಸೂಚಿಸಿದ ಸಂಗತಿಗಳು ಕೆಟ್ಟ ಮಾದರಿಗಳಾದರೆ ಒಳ್ಳೆಯ ಮಾದರಿ ಏನು? ಯಾವ ವಿಷಯವನ್ನು ಹೇಗೆ ಆಯ್ಕೆ ಮಾಡಬೇಕೆಂದು ಸೂಚಿಸುವ ಒಂದು ಪರಿಪೂರ್ಣ ಮಾದರಿಯನ್ನು ನೀಡುವುದು ಕಷ್ಟ, ಮತ್ತು ಸರಿಯೂ ಅಲ್ಲ. ಯಾಕೆಂದರೆ ಸಂಶೋಧನಾ ಪ್ರಕ್ರಿಯೆ ಯಾವುದೇ ವಿಷಯದ ಹಲವು ಆಯಾಮಗಳನ್ನು ವಿವಿಧ ದೃಷ್ಟಿಕೋನಗಳಿಂದ ನೋಡುವ ಮತ್ತು ನಿರ್ವಚಿಸುವ ಪ್ರಕ್ರಿಯೆ. ಇಂತಹ ಪ್ರಕ್ರಿಯೆ ಆರಂಭವನ್ನು ಯಾವುದೋ ಒಂದು ಚೌಕಟ್ಟಿನೊಳಗೆ ಬಂಧಿಸುವುದು ಅಸಾಧ್ಯ. ಆದುದರಿಂದ ಯಾವ ಸಂಶೋಧನಾ ವಿಷಯವನ್ನು ಹೇಗೆ ಆಯ್ಕೆ ಮಾಡಬೇಕೆನ್ನುವುದಕ್ಕಿಂತ ವಿಷಯ ಆಯ್ಕೆ ಮಾಡುವಾಗ ಯಾವೆಲ್ಲ ಸಂಗತಿಗಳನ್ನು ಗಮನಿಸಬಹುದೆನ್ನುವ ವಿಚಾರಗಳ ಮೇಲೆ ಚರ್ಚೆಯನ್ನು ಕೇಂದ್ರೀಕರಿಸಲಾಗಿದೆ. ಒಂದು ವಿಷಯದ ಮೇಲಿನ ತರ್ಕಬದ್ಧವಾದ ವಾದವನ್ನು ಸಂಶೋಧನಾ ಪ್ರಬಂಧ ಎಂದು ವ್ಯಾಖ್ಯಾನಿಸಿಕೊಂಡರೆ ವಿಷಯದ ಆಯ್ಕೆಗಿಂತ ತರ್ಕಬದ್ಧವಾದ ವಾದ ಮಾಡುವ ವಿಧಾನದ ತಿಳುವಳಿಕೆ ಪಿಹೆಚ್.ಡಿ ಅಧ್ಯಯನಕ್ಕೆ ಮುಖ್ಯವಾಗುತ್ತದೆ. ಆದರೆ ನಮ್ಮ ಸಂಶೋಧನಾ ಅಧ್ಯಯನಗಳಲ್ಲಿ ತರ್ಕಬದ್ಧವಾದ ವಾದ ಮಂಡಿಸುವ ವಿಧಾನ ಅಥವಾ ವೈಧಾನಿಕತೆ ಹೆಚ್ಚು ಮಹತ್ವ ಪಡೆದೇ ಇಲ್ಲ. ವಿಷಯವೊಂದರ ಕುರಿತು ಪುಟಗಟ್ಟಲೆ ಬರೆಯುವುದನ್ನು ನಾವು ಸಂಶೋಧನೆ ಎಂದು ವ್ಯಾಖ್ಯಾನಿಸಿಕೊಂಡಂತಿದೆ. ಆದುದರಿಂದ ವೈಧಾನಿಕತೆಗಿಂತ ಅಥವಾ ತರ್ಕಬದ್ಧವಾದ ವಾದ ಮಂಡನೆಗಿಂತ ವಿಷಯದ ಆಯ್ಕೆ ಮುಖ್ಯವಾಗಿದೆ. ವೈಧಾನಿಕತೆ ವಿಶೇಷ ಪ್ರಾಧಾನ್ಯತೆ ಪಡೆಯದೇ ಇರುವುದರಿಂದ ಮಾರ್ಗದರ್ಶಕರು ಮುಖ್ಯರಾಗುತ್ತಾರೆ. ಯಾಕೆಂದರೆ ಅವರಿಗೆ ಒಪ್ಪಿಗೆಯಾದರೆ ಪಿಹೆಚ್.ಡಿ ಪಡೆಯುವುದು ವಿಶೇಷ ಕಷ್ಟವಾಗುವುದಿಲ್ಲ ಎನ್ನುವ ನಂಬಿಕೆಯಿದೆ. ಅವರು ಸೂಚಿಸಿದ ವಿಷಯದ ಮೇಲೆ ಅವರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಪ್ರಬಂಧ ಮಂಡನೆಯಾಗುವುದರಿಂದ ಯಾವುದೋ ಒಂದು ರೀತಿಯಲ್ಲಿ ನಮ್ಮ ಪ್ರಬಂಧಕ್ಕೆ ಪಿಹೆಚ್.ಡಿ ಡಿಗ್ರಿ ಕೊಡಿಸುವ ಜವಾಬ್ದಾರಿ ಕೂಡ ಮಾರ್ಗದರ್ಶಕರದ್ದೇ ಆಗಿರುತ್ತದೆ. ಹೀಗೆ ವಿಷಯದ ಆಯ್ಕೆ ಅನಗತ್ಯವಾಗಿ ನಮ್ಮಲ್ಲಿ ಪ್ರಾಮುಖ್ಯತೆ ಪಡೆದರೆ ತರ್ಕಬದ್ಧವಾದ ವಾದ ಮಂಡಿಸುವ ವಿಧಾನ ತೆರೆಮರೆಗೆ ಸರಿದಿದೆ.

ತರ್ಕಬದ್ಧವಾದ ವಾದ ಮಂಡನೆಯನ್ನು ಅತೀ ಬುದ್ಧಿವಂತರು ಮಾತ್ರ ಕರಗತ ಮಾಡಿಕೊಳ್ಳಬಲ್ಲ ಸಂಗತಿಯೆಂದು ತಿಳಿಯಬೇಕಾಗಿಲ್ಲ. ತರ್ಕಬದ್ಧವಾದ ವಾದ ಮಂಡನೆ ಕನಿಷ್ಠ ಸಾಮಾನ್ಯ ಜ್ಞಾನ (ಕಾಮನ್‌ಸೆನ್ಸ್) ಇವರು ಯಾರು ಕೂಡ ಕರಗತಮಾಡಿಕೊಳ್ಳಬಲ್ಲ ಸಂಗತಿ. ಇದರ ಮೂಲ ತತ್ತ್ವ ಇಂತಿದೆ. ಯಾವುದೋ ಒಂದು ವಿಷಯದ ಮೇಲೆ ಈಗಾಗಲೇ ಮಂಡನೆಯಗಿರುವ ವಾದವನ್ನು ವಿಶ್ಲೇಷಿಸುವುದು, ಅವುಗಳಲ್ಲಿರುವ ಕೊರತೆಗಳನ್ನು/ದೋಷಗಳನ್ನು ಪಟ್ಟಿ ಮಾಡುವುದು ಮತ್ತು ಬದಲೀ ವಾದವನ್ನು ಪುರಾವೆ ಸಮೇತ ಮಂಡಿಸುವುದು ತರ್ಕಬದ್ಧವಾದ ವಾದ ಮಂಡನೆಯ ಮೂಲ ತತ್ತ್ವಗಳು. ತರ್ಕಬದ್ಧವಾದ ವಾದ ಮಂಡನೆಯ ವಿಧಾನವನ್ನು ಜೀರ್ಣಿಸಿಕೊಂಡರೆ ಯಾವುದೇ ವಿಷಯವನ್ನು ತರ್ಕಬದ್ಧವಾಗಿ ಮಂಡಿಸುವುದು ಕಷ್ಟವಲ್ಲ. ಆದುದರಿಂದ ಸಂಶೋಧನೆ ಮಾಡಬಯಸುವವರು ವಿಷಯ ಆಯ್ಕೆಗೆ ಮುನ್ನ ಸಂಶೋಧನಾ ವಿಧಾನಗಳ ಕುರಿತು ಕನಿಷ್ಠ ತಿಳುವಳಿಕೆ ಹೊಂದಿರುವುದು ಅಗತ್ಯ. ಜತೆಗೆ ನಮ್ಮ ಸುತ್ತಮುತ್ತ ನಡೆಯುವ ಎಲ್ಲವನ್ನು ನಾವು ಕಣ್ಣಾರೆ ನೋಡಿ ಅಥವಾ ಅನುಭವಿಸಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಇಂದು ಪ್ರತಿ ಸಂಸ್ಕೃತಿ ಕೂಡ ವಿಸ್ತಾರವಾದ ಹೊರಜಗತ್ತಿನೊಂದಿಗೆ ಯಾವುದೋ ಒಂದು ವಿಧದಲ್ಲಿ ಬೆಸೆದುಕೊಂಡಿದೆ. ನಮ್ಮ ದಿನನಿತ್ಯದ ವ್ಯವಹಾರಗಳಿಂದ ಈ ಎಲ್ಲ ಸಂಬಂಧಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ಓದು ವಿಷಯದ ಆಯ್ಕೆಯಲ್ಲಿ ಮಹತ್ವದ ಪಾತ್ರವಹಿಸುತ್ತದೆ.[೧]

ವಿಷಯ ಆಯ್ಕೆ ಸಂದರ್ಭದಲ್ಲಿ ಪರಿಗಣಿಸಬೇಕಾದ ಮತ್ತೊಂದು ಸಂಗತಿಯೆಂದರೆ ಸಂಶೋಧಕರು ಮತ್ತು ವಿಷಯದ ನಡುವಿನ ಸಂಬಂಧ. ಸಂಶೋಧಕರು ಮತ್ತು ವಿಷಯದ ನಡುವಿನ ಸಂಬಂಧ ಹೇಗಿರಬೇಕು? ಈ ಕುರಿತು ಎರಡು ಪ್ರಮುಖ ವಾಗ್ವಾದಗಳಿವೆ. ಒಂದು ವಾದದ ಪ್ರಕಾರ ಸಂಶೋಧಕರು ಮತ್ತು ವಿಷಯದ ನಡುವೆ ತುಂಬಾ ಹತ್ತಿರದ ಸಂಬಂಧ ಇರಬೇಕು.[೨] ಮತ್ತೊಂದು ನಿಲುವಿನ ಪ್ರಕಾರ ಸಂಶೋಧಕರು ಮತ್ತು ಸಂಶೋಧನಾ ವಿಷಯದ ನಡುವೆ ಅಂತರ ಇರಬೇಕು.[೩] ಮೊದಲಿನ ವಾದವನ್ನು-ಸಂಶೋಧಕರು ಮತ್ತು ವಿಷಯದ ನಡುವೆ ತುಂಬಾ ಹತ್ತಿರದ ಸಂಬಂಧ ಇರಬೇಕು ಎನ್ನುವ ವಾದವನ್ನು ಪರಿಶೀಲಿಸುವ. ವಿಷಯ ಮತ್ತು ಸಂಶೋಧಕರ ನಡುವೆ ಹತ್ತಿರದ ಸಂಬಂಧ ಇರಬೇಕೆಂದರೆ ಸಂಶೋಧಕರನ್ನು ವೈಯಕ್ತಿಕವಾಗಿ ಕಾಡುವ ಸಮಸ್ಯೆಯನ್ನು ಸಂಶೋಧನಾ ವಿಷಯವನ್ನಾಗಿ ಆಯ್ಕೆ ಮಾಡಿಕೊಳ್ಳಬೇಕು ಅಥವಾ ಯಾವುದೋ ಬಗೆಯಲ್ಲಿ ಆಯ್ಕೆಯಾದ ವಿಷಯದೊಂದಿಗೆ ಗುರುತಿಸಿಕೊಳ್ಳಬೇಕೆನ್ನುವ ಸೂಚನೆಯಿದೆ. ಸಂಶೋಧಕರು ಕೂಡ ಒಂದು ಕುಟುಂಬದ, ಸಮುದಾಯದ, ಸಮಾಜದ ಸದಸ್ಯರಾಗಿರುವುದರಿಂದ ಅವರ ಬದುಕಲ್ಲಿ ಅವರನ್ನು ಕಾಡುವ ಸಮಸ್ಯೆಗಳು ಪರೋಕ್ಷವಾಗಿ ಸಾಮಾಜಿಕ ಸಮಸ್ಯೆಗಳೇ ಆಗಿರುತ್ತವೆ ಎನ್ನುವ ಗ್ರಹಿಕೆ ಇಲ್ಲಿ ಕೆಲಸ ಮಾಡಿದೆ. ದಿನನಿತ್ಯದ ಬದುಕಿನಲ್ಲಿ ಪ್ರತಿಯೊಬ್ಬರು ಮತ್ತೊಬ್ಬರೊಂದಿಗೆ ವ್ಯವಹರಿಸಬೇಕಾಗುತ್ತದೆ. ಈ ವ್ಯವಹಾರಗಳು ನಿರ್ವಾತದಲ್ಲಿ ನಡೆಯುವ ಪ್ರಕ್ರಿಯೆಯಲ್ಲ. ಯಾವುದೋ ಒಂದು ಚಾರಿತ್ರಿಕವಾಗಿ

ರೂಪುಗೊಂಡ ಸಾಮಾಜಿಕ ಪರಿಸರದಲ್ಲಿ ನಡೆಯುವ ಪ್ರಕ್ರಿಯೆ. ಇಂತಹ ಪರಿಸರದಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವಿನ ವ್ಯವಹಾರಗಳನ್ನು ನಿರ್ದೇಶಿಸುವ ಅಥವಾ ಗೈಡ್ ಮಾಡುವ ಹಲವಾರು ನೀತಿ ನಿಯಮಗಳು, ಮೌಲ್ಯಗಳು ಇರಬಹುದು. ಇವುಗಳ ಅನ್ವಯ ಕೆಲಸ ಕಾರ್ಯಗಳು/ವ್ಯವಹಾರಗಳು ನಡೆಯುತ್ತಿವೆಯೇ ಅಥವಾ ಪ್ರತಿಯೊಬ್ಬರು ನೀತಿ ನಿಯಮಗಳನ್ನು ತಮ್ಮ ಅನುಕೂಲಕ್ಕನುಸಾರ ತಿರುಚಿಕೊಂಡು ವ್ಯವಹಾರ ನಡೆಸುತ್ತಾರೋ ಎನ್ನುವ ಪ್ರಶ್ನೆ ಕೆಲವರನ್ನು ಕಾಡಬಹುದು. ಮೇಸ್ಟ್ರಿಗೆ ಅವರು ಮಾಡುವ ಪಾಠವನ್ನು ವಿದ್ಯಾರ್ಥಿಗಳು ಗ್ರಹಿಸುವ ಮತ್ತು ಮಂಡಿಸುವ ಬಗ್ಗೆ ಪ್ರಶ್ನೆ ಮೂಡಬಹುದು. ಕೆಲವು ಮಕ್ಕಳು ಮೇಸ್ಟ್ರು ಊಹಿಸಿದ ರೀತಿಯಲ್ಲಿ ಗ್ರಹಿಸಿ ಮಂಡಿಸಿದರೆ ಮತ್ತೆ ಕೆಲವರು ಭಿನ್ನ ರೀತಿಯಲ್ಲಿ ಗ್ರಹಿಸಿ ಮಂಡಿಸಬಹುದು. ವಿದ್ಯಾರ್ಥಿಗಳ ಗ್ರಹಿಸುವ ಮತ್ತು ಮಂಡಿಸುವ ವಿಧಾನದಲ್ಲಿರುವ ಭಿನ್ನತೆಗೂ ಅವರ ಸಾಮಾಜಿಕ ಆರ್ಥಿಕ ಹಿನ್ನೆಲೆಗೂ ಸಂಬಂಧವಿದೆಯೇ ಎನ್ನುವ ಪ್ರಶ್ನೆ ಮೇಸ್ಟ್ರನ್ನು ಕಾಡಬಹುದು.

ದಿನನಿತ್ಯದ ಬದುಕಿನಲ್ಲಿ ಎದುರಾಗುವ ಸಮಸ್ಯೆಗಳನ್ನು ಅಧ್ಯಯನದ ವಿಷಯವನ್ನಾಗಿಸುವುದರಿಂದ ಹಲವಾರು ಪ್ರಯೋಜನಗಳಿವೆ. ಒಂದು, ದಿನನಿತ್ಯದ ಬದುಕಿನಲ್ಲಿ ಅನುಭವಿಸುವ ಸಮಸ್ಯೆಗಳನ್ನೇ ಅಧ್ಯಯನ ಸಮಸ್ಯೆಗಳನ್ನಾಗಿಸುವುದರಿಂದ ಸಮಸ್ಯೆಗೆ ಸಂಬಂಧಿಸಿದ ಮಾಹಿತಿ (ವಿಷಯದ ಮೇಲೆ ಈಗಾಗಲೇ ಆಗಿರುವ ಅಧ್ಯಯನಗಳನ್ನು ಹೊರತುಪಡಿಸಿದ ಮಾಹಿತಿ ಸಂಗ್ರಹಕ್ಕಾಗಿ) ಸಂಗ್ರಹಕ್ಕಾಗಿ ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುವ ಅಗತ್ಯ ಇರುವುದಿಲ್ಲ. ಕಣ್ಣುಬಿಟ್ಟು ಸೂಕ್ಷ್ಮವಾಗಿ ಸುತ್ತಮುತ್ತ ನೋಡಿದರೆ ಅಧ್ಯಯನಕ್ಕೆ ಸಂಬಂಧಿಸಿದ ಹಲವಾರು ಮಾಹಿತಿಗಳು ವಿಶೇಷ ಪ್ರಯತ್ನವಿಲ್ಲದೆ ದಕ್ಕುತ್ತವೆ. ಅಧ್ಯಯನದ ದೃಷ್ಟಿಯಿಂದ ದಿನನಿತ್ಯ ಬದುಕನ್ನು ನೋಡುವುದರಿಂದ ಸಾಮಾನ್ಯವಾಗಿ ಕಾಣುವ ಸಂಗತಿಗಳಲ್ಲೂ ಅಸಾಮಾನ್ಯ ಸಂಬಂಧಗಳನ್ನು ಕಾಣುವ ಸಾಧ್ಯತೆ ಇದೆ. ವಿಶೇಷ ಪ್ರಯತ್ನವಿಲ್ಲದೆ ಹೊಸ ಪ್ರಶ್ನೆಗಳು, ಆಯಾಮಗಳು ದೃಷ್ಟಿಕೋನಗಳು ದಿನನಿತ್ಯದ ಬದುಕಿನಿಂದ ದೊರಕಬಹುದು ಮತ್ತು ಅವುಗಳು ಸಂಶೋಧನಾ ವಿಷಯವನ್ನು ಇನ್ನೂ ಆಳವಾಗಿ ಅಧ್ಯಯನ ಮಾಡಲು ಸಹಕಾರಿಯಾಗಬಹುದು. ಎರಡು, ಪ್ರಬಂಧ ಮಂಡನೆ ಹೆಚ್ಚು ಶಕ್ತಿಶಾಲಿಯಾಗಿರುವ ಸಾಧ್ಯತೆ ಇದೆ. ಇದೊಂದು ರೀತಿಯಲ್ಲಿ ತನ್ನದೇ ಕೇಸನ್ನು ವಾದಿಸುವ ವಕೀಲರಂತೆ. ವಾದ ಮಂಡನೆಗೆ ಮತ್ತು ಅದರ ಸಾಧನೆಗೆ ಬೇಕಾಗುವ ಎಲ್ಲ ಪುರಾವೆಗಳನ್ನು ಸಮಗ್ರವಾಗಿ ಸಂಗ್ರಹಿಸುವ ಮತ್ತು ಪರಿಣಾಮಕಾರಿಯಾಗಿ ಮಂಡಿಸುವ ಸಾಧ್ಯತೆ ಹೆಚ್ಚು ಇದೆ. ಮೂರು, ಸಂಶೋಧನಾ ಕೆಲಸವನ್ನು ಹೆಚ್ಚು ಒದ್ದಾಟವಿಲ್ಲದೆ ಪೂರ್ಣಗೊಳಿಸುವ ಸಾಧ್ಯತೆ ಇದೆ. ಸಂಶೋಧಕರು ಸಮಸ್ಯೆಯೊಂದಿಗೆ ಗುರುತಿಸಿಕೊಳ್ಳುವುದರಿಂದ ಅದನ್ನು ತೃಪ್ತಿಕರವಾಗಿ ಪೂರ್ಣಗೊಳಿಸುವುದು ಸಮಸ್ಯೆ ಪರಿಹಾರದ ನೆಮ್ಮದಿಯನ್ನು ಪಡೆಯುವ ದೃಷ್ಟಿಯಿಂದ ಅನಿವಾರ್ಯ. ಈ ಎಲ್ಲ ಕಾರಣಗಳಿಂದ ನಮ್ಮನ್ನು ಗಂಭೀರವಾಗಿ ಕಾಡುವ ಸಮಸ್ಯೆಯನ್ನೇ ಸಂಶೋಧನಾ ಸಮಸ್ಯೆಯನ್ನಾಗಿ ಆಯ್ಕೆ ಮಾಡಿಕೊಳ್ಳುವುದು

ಅಥವಾ ಯಾವುದೋ ಒಂದು ಕ್ರಮದಲ್ಲಿ ಆಯ್ಕೆ ಮಾಡಿಕೊಂಡ ವಿಷಯದೊಂದಿಗೆ ಗುರುತಿಸಿಕೊಳ್ಳುವುದು ಉತ್ತಮ ಸಂಶೋಧನಾ ಪ್ರಬಂಧದ ರಚನೆಗೆ ಸಹಕಾರಿಯೆಂದು ತಿಳಿಯಲಾಗಿದೆ.

ಸಂಶೋಧನಾ ವಿಷಯ ಕುರಿತ ಮತ್ತೊಂದು ನಿಲುವಿನ ಪ್ರಕಾರ ಸಂಶೋಧಕರು ಮತ್ತು ಸಂಶೋಧನಾ ವಿಷಯದ ನಡುವೆ ಅಂತರ ಇರಬೇಕು. ಆಧುನಿಕ ಸಮಾಜದಲ್ಲಿ ಜ್ಞಾನದ ಸಾಧನೆಗೆ ತಕ್ಕಮಟ್ಟಿನ ಏಕಾಂತದ ಕೋರಿಕೆ ಇದೆ. ಜ್ಞಾನ ಸಂಪಾದನೆಯ ಕಾರ್ಯದಲ್ಲಿ ತೊಡಗಿದವರು ವಿವಿಧ ಸಮುದಾಯ ಹಾಗೂ ವರ್ಗಗಳ ಹಿನ್ನೆಲೆಯಿಂದ ಬಂದಿರುತ್ತಾರೆ. ಅವರು ತಮ್ಮ ಸಮುದಾಯ ಅಥವಾ ವರ್ಗ ಆಸಕ್ತಿಯನ್ನು ಸಕ್ರಿಯವಾಗಿಟ್ಟುಕೊಂಡು ಸಂಪಾದಿಸುವ ಜ್ಞಾನ ಪಕ್ಷಪಾತಿಯಾಗಿರುವ ಸಾಧ್ಯತೆ ಇದೆ. ಪಕ್ಷಪಾತಿಯಾದ ಜ್ಞಾನ ಸಮಗ್ರತೆಯ ಒಳಿತಿನ ದೃಷ್ಟಿಯಿಂದ ಉಪಯೋಗವಿಲ್ಲ. ಆ ಕಾರಣಕ್ಕಾಗಿ ಜ್ಞಾನ ಸಂಪಾದನೆಗೆ ಒಂದು ವಿಧದ ಐಸೋಲೇಶನ್ ಅಗತ್ಯ ಇದೆ ಎನ್ನುವ ವಾದ ಮಹತ್ವ ಪಡೆದಿದೆ. ಇದನ್ನು ಸ್ಪಿನೋಜನ ಮಾತುಗಳು ತುಂಬಾ ಪರಿಣಾಮಕಾರಿಯಾಗಿ ಸೂಚಿಸಿವೆ. ಆತನ ಪ್ರಕಾರ ಯಾವುದೇ ವಸ್ತು ಅಥವಾ ವಿಷಯದ ಬಗ್ಗೆ ಜ್ಞಾನ ಬೇಕಾದರೆ ಅದರ ಬಗ್ಗೆ ವಿಶೇಷ ಮಮಕಾರ, ವ್ಯಾಮೋಹ ಅಥವಾ ತಿರಸ್ಕಾರ ಇರಬಾರದು.[೯] ಅಂದರೆ ಒಂದು ವಿಧದ ನಿರ್ಲಿಪ್ತ ಮನಸ್ಸಿನಿಂದ ಜ್ಞಾನ ಗಳಿಸುವ ಪ್ರಕ್ರಿಯೆಯಲ್ಲಿ ತೊಡಗಿಸಿ ಕೊಳ್ಳಬೇಕು. ಇದು ವೈಜ್ಞಾನಿಕ ವಿಧಾನದಿಂದ ಜ್ಞಾನಗಳಿಸುವ ಮಾನಸಿಕ ಸ್ಥಿತಿಯನ್ನೇ ಸೂಚಿಸುತ್ತದೆ. ಅಲ್ಲೂ ಮೌಲ್ಯ ನಿರಾಪೇಕ್ಷತೆ, ಅಧ್ಯಯನಕ್ಕೆ ಒಳಗಾಗುವ ವಿಷಯ ಮತ್ತು ಅಧ್ಯಯನ ಮಾಡುವವರ ನಡುವಿನ ಅಂತರ ಮತ್ತು ವಸ್ತು ಅಥವಾ ಪ್ರಪಂಚ ದಿಂದ ದೂರ ನಿಂತು ನೋಡುವ ಕ್ರಮ ಜ್ಞಾನ ಗಳಿಸುವ ಪ್ರಕ್ರಿಯೆಗೆ ಅಗತ್ಯ ಎಂದು ತಿಳಿಯಲಾಗಿದೆ. ಆದರೆ ಇತರ ಆಲೋಚನೆಗಳಲ್ಲಿ ಇವೆಲ್ಲಕ್ಕಿಂತ ಭಿನ್ನ ಆಲೋಚನೆ ಇದೆ. ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಪ್ರಕ್ರಿಯೆಯಲ್ಲಿ ಜ್ಞಾನ ಹುಟ್ಟಿಕೊಳ್ಳುತ್ತದೆ ಎಂದು ಎಡಪಂಥೀಯರು ವಾದಿಸುತ್ತಾರೆ. ಆದುದರಿಂದ ಜ್ಞಾನದ ಸಂಪಾದನೆಗಾಗಿ ಸಂಸಾರದಿಂದ ದೂರ ಇರುವ ಪ್ರಶ್ನೆಯೇ ಇಲ್ಲ ಎನ್ನುವುದು ಅವರ ನಿಲುವು. ಆದುದರಿಂದಲೇ ಎಡಪಂಥೀಯ ಚಿಂತಕರಿಗೆ ಪಕ್ಷ ರಾಜಕೀಯದಲ್ಲಿ ತೊಡಗಿಸಿಕೊಳ್ಳುವುದು ಒಂದು ಅವಶ್ಯ ಜವಾಬ್ದಾರಿ. ಮೈಕಲ್ ಫುಕೋನ ಪ್ರಕಾರ ಮನುಷ್ಯನಿಗೆ ಹಲವಾರು ಮೂಲಭೂತ ಅವಶ್ಯಕತೆಗಳಿವೆ. ಅವುಗಳಲ್ಲಿ ಮುಖ್ಯವಾದುದು ಹಸಿವು, ಬಾಯಾರಿಕೆ, ಕಾಮ, ರಕ್ಷಣೆ ಇತ್ಯಾದಿಗಳು. ಆದರೆ ಈ ಮೂಲಭೂತ ಅವಶ್ಯಕತೆಗಳ ಪಟ್ಟಿಯಲ್ಲಿ ಜ್ಞಾನದ ಹಸಿವು ಇಲ್ಲ. ಅಂದರೆ ಜ್ಞಾನ ನಮ್ಮ (ಮಾನವನ) ಮೂಲಭೂತ ಲಕ್ಷಣ ಅಲ್ಲ. ಹಾಗಾದರೆ ಜ್ಞಾನ ಎನ್ನುವುದು ಇಲ್ಲವೇ? ಇದೆ. ಆದರೆ ಅದು ರೂಪುಗೊಳ್ಳುವ ವಿಧಾನ ವೈಧಾನಿಕ ಚಿಂತನೆಗಿಂತ ಭಿನ್ನ. ಮನುಷ್ಯ ತನ್ನ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಪ್ರಕ್ರಿಯೆಯಲ್ಲಿ ಘರ್ಷಣೆಗೆ ಇಳಿಯುವುದು ಅನಿವಾರ್ಯ. ಈ ಘರ್ಷಣೆ ತನ್ನೊಳಗೆ ಇರುವ ವಿವಿಧ

ಅವಶ್ಯಕತೆಗಳ ನಡುವೆ ಮತ್ತು ಹೊರಗಿನ ಪರಿಸರದೊಂದಿಗೆ ನಡೆಯುತ್ತದೆ. ಈ ಘರ್ಷಣೆಯ ಸಂದರ್ಭದಲ್ಲಿ ಜ್ಞಾನ ರೂಪುಗೊಳ್ಳುತ್ತದೆ ಎಂದು ಫುಕೋ ವಾದಿಸುತ್ತಾನೆ.[೧೧] ಆರಂಭದಲ್ಲಿ ಈ ರೀತಿ ರೂಪುಗೊಂಡ ಜ್ಞಾನ ನಂತರದ ದಿನಗಳಲ್ಲಿ ಮನುಷ್ಯನ ಜ್ಞಾನದ ಉತ್ಪಾದನೆಯ ಪ್ರಕ್ರಿಯೆಯನ್ನು ಮತ್ತು ವ್ಯಾಖ್ಯಾನವನ್ನು ಸಾಕಷ್ಟು ಬದಲಾಯಿಸಿದೆ. ಆದರೆ ನಾವೆಲ್ಲ ತಿಳಿದುಕೊಳ್ಳುವಂತೆ ಜ್ಞಾನ ಮತ್ತು ಜ್ಞಾನದ ಗಳಿಕೆ ಒಂದು ಸ್ವತಂತ್ರ ಪ್ರಕ್ರಿಯೆ ಎಂದು ತಿಳಿಯುವುದು ಸರಿಯಲ್ಲ. ಆದುದರಿಂದಲೇ ಜ್ಞಾನ ಗಳಿಕೆಗೆ ಒಂದು ವಿಧದ ನಿರ್ಲಿಪ್ತತೆ ಬೇಕು ಎನ್ನುವ ಸ್ಪಿನೋಜನ ಮಾತನ್ನು ಫುಕೋ ತಿರಸ್ಕರಿಸುತ್ತಾನೆ. ಜ್ಞಾನ ಗಳಿಕೆ ಸಾಧ್ಯವಾಗುವುದೇ ಮಮಕಾರ, ವ್ಯಾಮೋಹ, ತಿರಸ್ಕಾರ ಇತ್ಯಾದಿಗಳಿಂದ ಎಂದು ವಾದಿಸುತ್ತಾನೆ.

ಸಂಶೋಧನಾ ವಿಷಯ ಮತ್ತು ಸಂಶೋಧಕರ ನಡುವಿನ ಸಂಬಂಧ ಕುರಿತ ಈ ವಾಗ್ವಾದಕ್ಕೊಂದು ಪರಿಹಾರವನ್ನು ಮ್ಯಾಕ್ಸ್ ವೇಬರ್‌ನ ಸೂತ್ರಗಳಲ್ಲಿ ಕಾಣಬಹುದು. ಸಂಶೋಧನೆಯ ಒಟ್ಟು ಪ್ರಕ್ರಿಯೆಯನ್ನು ವೇಬರ್ ಮೂರು ಹಂತಗಳಲ್ಲಿ ವಿಂಗಡಿಸಿ ಕೊಂಡಿದ್ದಾನೆ.[೧೨] ಅಧ್ಯಯನ ಸಮಸ್ಯೆ ಆಯ್ಕೆ ಮಾಡುವುದು, ಸಮಸ್ಯೀಕರಿಸುವುದು, ಮಾಹಿತಿ ಸಂಗ್ರಹ ವಿಧಾನ ನಿರ್ಧರಿಸುವುದು ಇತ್ಯಾದಿ ಪ್ರಕ್ರಿಯೆಗಳನ್ನೊಳಗೊಂಡ ಪ್ರಥಮ ಹಂತ. ಎರಡನೇ ಹಂತದಲ್ಲಿ ಮಾಹಿತಿ ಸಂಗ್ರಹ ಮತ್ತು ವಿಶ್ಲೇಷಣಾ ಕೆಲಸ ನಡೆಯುತ್ತದೆ. ಎರಡನೇ ಹಂತದಲ್ಲಿ ನಡೆದ ವಿಶ್ಲೇಷಣೆಯ ಆಧಾರದಲ್ಲಿ ಅಧ್ಯಯನಕ್ಕೊಳಗಾದ ವಿಷಯ ಕುರಿತು ತೀರ್ಮಾನ ತಳೆಯುವುದು ಮೂರನೇ ಹಂತದಲ್ಲಿ ನಡೆಯುವ ಕೆಲಸ. ಮೊದಲ ಮತ್ತು ಮೂರನೇ ಹಂತದಲ್ಲಿ ಅಧ್ಯಯನ ವಿಷಯದೊಂದಿಗೆ ಗುರುತಿಸಿಕೊಳ್ಳುವುದರಿಂದ ಅಥವಾ ನಮ್ಮನ್ನು ಕಾಡುವ ಸಮಸ್ಯೆಯನ್ನು ಅಧ್ಯಯನ ಸಮಸ್ಯೆಯನ್ನಾಗಿಸುವುದರಿಂದ ಏನೇನೂ ತೊಂದರೆ ಇಲ್ಲ. ಆದರೆ ಅಧ್ಯಯನದ ಎರಡನೇ ಹಂತದಲ್ಲಿ-ಮಾಹಿತಿ ಸಂಗ್ರಹ ಮತ್ತು ವಿಶ್ಲೇಷಣಾ ಸಂದರ್ಭದಲ್ಲಿ ಗಾಢವಾದ ನಿರ್ಲಿಪ್ತತೆ ಅಥವಾ ಅಧ್ಯಯನ ಸಮಸ್ಯೆಯಿಂದ ಅಂತರ ಕಾಪಾಡಿಕೊಳ್ಳುವುದು ತುಂಬಾ ಅವಶ್ಯ. ಒಂದು ವೇಳೆ ಎರಡನೇ ಹಂತದಲ್ಲೂ ಆಯ್ಕೆ ಮಾಡಿಕೊಂಡ ಅಧ್ಯಯನ ವಿಷಯದೊಂದಿಗೆ ಭಾವನಾತ್ಮಕವಾಗಿ ಗುರುತಿಸಿಕೊಂಡರೆ ಅಧ್ಯಯನ ಪಕ್ಷಪಾತಿಯಾಗುವ ಸಾಧ್ಯತೆ ಇದೆ ಎಂದು ಆತ ಅಭಿಪ್ರಾಯ ಪಡುತ್ತಾನೆ. ಯಾಕೆಂದರೆ ಅಧ್ಯಯನ ಸಮಸ್ಯೆಯೊಂದಿಗೆ ಗುರುತಿಸಿ ಕೊಳ್ಳುವುದರಿಂದ ಅಧ್ಯಯನದ ಸಮಸ್ಯೆ ನಮ್ಮ ಸಮಸ್ಯೆಯಾಗುವುದು ಮತ್ತು ನಮ್ಮ ಸಮಸ್ಯೆಗೆ ನಮಗೆ ತೃಪ್ತಿಯಾಗುವ ಪರಿಹಾರ ಕಂಡುಕೊಳ್ಳುವುದು ನಮ್ಮ ಗುರಿಯಾಗುತ್ತದೆ. ಈ ಎಲ್ಲ ಅಂಶಗಳು ಮಾಹಿತಿ ಸಂಗ್ರಹ ಸಂದರ್ಭದಲ್ಲಿ ಪ್ರಭಾವ ಬೀರಿ ಅಧ್ಯಯನ ವಿಷಯ ಕುರಿತ ನಮ್ಮ ಪೂರ್ವ ನಿರ್ಧಾರಗಳನ್ನು ಸಮರ್ಥಿಸಲು ಪೂರಕವಾಗುವ ಮಾಹಿತಿಗಳನ್ನು ಮಾತ್ರ ಸಂಗ್ರಹಿಸಿ ವಿಶ್ಲೇಷಣೆ ಮಾಡಬಹುದು. ಅಧ್ಯಯನ ವಿಷಯ ಕುರಿತ ನಮ್ಮ ಪೂರ್ವ ನಿರ್ಧಾರಗಳನ್ನು ಪ್ರಶ್ನಿಸುವ ಅಥವಾ ತಳ್ಳಿಹಾಕುವ ಮಾಹಿತಿಗಳನ್ನು ನಾವು ಪ್ರಜ್ಞಾಪೂರ್ವಕವಾಗಿ

ದೂರ ಇಡಬಹುದು. ಈ ಬಗೆಯ ಮಾಹಿತಿ ಸಂಗ್ರಹ ಅಧ್ಯಯನ ಆರಂಭಿಸುವಾಗ ಹೊಂದಿರುವ ತೀರ್ಮಾನಗಳನ್ನು ಅಥವಾ ನಾವು ಬಯಸಿದ ತೀರ್ಮಾನಗಳನ್ನು ಅಧ್ಯಯನದಿಂದ ತಳೆಯಲು ಮಾಡಿದ ಪ್ರಯತ್ನವಾಗುತ್ತದೆ. ಇದೊಂದು ರೀತಿಯಲ್ಲಿ ವ್ಯಕ್ತಿಯೊಬ್ಬರನ್ನು ಕಳ್ಳ ಎಂದು ತೀರ್ಮಾನಿಸಿ ಆ ತೀರ್ಮಾನವನ್ನು ಗಟ್ಟಿಗೊಳಿಸಲು ಅನುಕೂಲವಾಗುವ ಮಾಹಿತಿಗಳನ್ನು ಮಾತ್ರ ಸಂಗ್ರಹಿಸಿ ಅವರು ನಿರಾಪರಾಧಿ ಎಂದು ಸಾಬೀತುಪಡಿಸುವ ಪುರಾವೆಗಳನ್ನು ದೂರ ಇರಿಸಿದಂತೆ. ಆದರೆ ಒಂದು ಉತ್ತಮ ಅಧ್ಯಯನದ ಬಹುದೊಡ್ಡ ಲಕ್ಷಣವೆಂದರೆ ಯಾವುದೇ ಸ್ಥಾನದಲ್ಲಿ ನಿಂತು ನೋಡಿದರೂ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ತಳೆದ ತೀರ್ಮಾನಗಳು ಪಕ್ಷಪಾತಿಯಲ್ಲ ಎಂದು ಸಾಬೀತಾಗುವುದು. ಆ ರೀತಿ ಆಗಬೇಕಾದರೆ ಮಾಹಿತಿ ಸಂಗ್ರಹ ಮತ್ತು ವಿಶ್ಲೇಷಣೆ ನಿರ್ಲಿಪ್ತತೆಯಿಂದ ನಡೆಯಬೇಕಾಗಿದೆ.

ಅಧ್ಯಯನ ವಿಷಯ ಆಯ್ಕೆ ಸಂದರ್ಭದಲ್ಲಿ ಪರಿಗಣಿಸಬೇಕಾದ ಹಲವಾರು ವಿಷಯಗಳನ್ನು ಚರ್ಚಿಸಲಾಗಿದೆ. ಇವುಗಳ ಜತೆಗೆ ಪರಿಗಣಿಸಬೇಕಾದ ಇತರ ಕೆಲವು ಸಂಗತಿಗಳಿವೆ. ಒಂದು, ಕಾಲ ಮತ್ತು ಸಂಪನ್ಮೂಲದ ಲಭ್ಯತೆಯ ಪ್ರಶ್ನೆ. ಸಂಶೋಧನೆಯೊಂದನ್ನು ತೃಪ್ತಿಕರವಾಗಿ ಪೂರ್ಣಗೊಳಿಸಲು ಕನಿಷ್ಠ ಕೆಲವು ವರ್ಷಗಳ ಕಾಲಾವಕಾಶ ಮತ್ತು ಕ್ಷೇತ್ರಕಾರ್ಯ, ಮಾಹಿತಿ ಪರಿಷ್ಕರಣೆ ಇತ್ಯಾದಿ ಕೆಲಸಗಳಿಗೆ ಸಂಪನ್ಮೂಲದ ಅವಶ್ಯಕತೆ ಇದೆ. ಬಹುತೇಕ ಸಂಶೋಧನಾ ಆಕಾಂಕ್ಷಿಗಳು ಸಂಶೋಧನಾ ಡಿಗ್ರಿಯಿಂದಲಾದರೂ ಉದ್ಯೋಗ ಪಡೆಯಲು ಪ್ರಯತ್ನಿಸುವ ನಿರುದ್ಯೋಗಿಗಳು. ಉದ್ಯೋಗದಲ್ಲಿರುವವರು ತಮ್ಮ ಉದ್ಯೋಗ ಬೇಡುವ ಕೆಲವೊಂದು ಅರ್ಹತೆಗಳನ್ನು ಪೂರೈಸಲು ಸಂಶೋಧನಾ ಅಧ್ಯಯನಕ್ಕೆ ಪ್ರಯತ್ನಿಸುವವರು. ಈ ಎರಡೂ ಬಗೆಯ ಸಂಶೋಧಕರಿಗೂ ಕಾಲ ಮತ್ತು ಸಂಪನ್ಮೂಲದ ಪ್ರಶ್ನೆಗಳು ವಿಷಯದ ಆಯ್ಕೆ ಸಂದರ್ಭದಲ್ಲಿ ಕೆಲವೊಂದು ಮಿತಿಗಳನ್ನು ಹೇರುತ್ತವೆ. ಕೆಲವೊಂದು ವಿಷಯಗಳ ಅಧ್ಯಯನಕ್ಕೆ ಹಲವಾರು ವರ್ಷಗಳು ಮತ್ತು ಕೆಲವು ಸಾವಿರ ಅಥವಾ ಲಕ್ಷ ಹಣಕಾಸಿನ ಅಗತ್ಯವಿದೆ. ಉದಾಹರಣೆಗೆ ಕರ್ನಾಟಕ ರಾಜ್ಯದ ದಲಿತರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ಮಾಪನ ಮಾಡುವ ವಿಷಯವನ್ನು ಅಧ್ಯಯನ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡರೆ ಕರ್ನಾಟಕದ ಎಲ್ಲ ಅಲ್ಲದಿದ್ದರೂ ಪ್ರಾತಿನಿಧಿಕ ಪ್ರದೇಶಗಳಲ್ಲಿನ ದಲಿತರ ಸಾಮಾಜಿಕ, ಆರ್ಥಿಕ ರಾಜಕೀಯ ಬದುಕಿಗೆ ಸಂಬಂಧಿಸಿದ ಅಂಕಿ ಅಂಶ ಸಂಗ್ರಹಿಸಬೇಕು. ಈ ಎಲ್ಲ ಅಂಶಗಳಿಗೆ ಸಂಬಂಧಿಸಿದ ಅಂಕಿ ಅಂಶ ಸಂಗ್ರಹಿಸಬೇಕಾದರೆ ಕನಿಷ್ಠ ಹದಿನೈದು ಪುಟದಷ್ಟು ದೊಡ್ಡ ಪ್ರಶ್ನಾವಳಿ ಬೇಕು. ಸಂದರ್ಶನ ಮಾಡಿ ಒಂದು ಪ್ರಶ್ನಾವಳಿಯನ್ನು ತುಂಬಿಸಲು ಒಂದು ಗಂಟೆ ಅವಧಿ ಬೇಕು. ಎರಡು ಸಾವಿರ ಪ್ರಶ್ನಾವಳಿ ತುಂಬಿಸಲು ಎರಡು ಸಾವಿರ ಗಂಟೆಗಳು ಬೇಕು. ಈ ಎರಡು ಸಾವಿರ ಗಂಟೆಗಳಲ್ಲಿ ಕರ್ನಾಟಕ ವಿವಿಧ ಜಿಲ್ಲಾ ಕೇಂದ್ರಗಳಿಗೆ ಮತ್ತು ಅಲ್ಲಿಂದ ತಾಲ್ಲೂಕು ಕೇಂದ್ರಗಳಿಗೆ ಮತ್ತು ಅಲ್ಲಿಂದ ಗ್ರಾಮಗಳಿಗೆ ಪ್ರಯಾಣಿಸುವ

ಅವಧಿಯನ್ನು ಸೇರಿಸಿಲ್ಲ. ಕ್ಷೇತ್ರಕಾರ್ಯ ಮಾಡಬೇಕಾದ ಸ್ಥಳಕ್ಕೆ ಪ್ರಯಾಣಿಸಲು ಬೇಕಾಗುವ ಅವಧಿಯನ್ನು ಸೇರಿಸಿದರೆ ಒಂದು ಪ್ರಶ್ನಾವಳಿ ಪೂರ್ಣಗೊಳಿಸಲು ಕನಿಷ್ಠ ಎರಡು ಗಂಟೆಗಳು ಬೇಕು. ಅಂದರೆ ಎರಡು ಸಾವಿರ ಪ್ರಶ್ನಾವಳಿ ಭರ್ತಿಗೊಳಿಸಲು ನಾಲ್ಕು ಸಾವಿರ ಗಂಟೆಗಳು ಬೇಕು. ಒಂದು ದಿನದಲ್ಲಿ ಒಬ್ಬ ವ್ಯಕ್ತಿ ಎಂಟು ಗಂಟೆ ಕ್ಷೇತ್ರಕಾರ್ಯ ಮಾಡುತ್ತಾರೆಂದು ಊಹಿಸಿಕೊಂಡರೆ ಒಂದು ದಿನದಲ್ಲಿ ನಾಲ್ಕು ಪ್ರಶ್ನಾವಳಿಗಳನ್ನು ಮಾತ್ರ ಭರ್ತಿ ಮಾಡಬಹುದು. ಅಂದರೆ ಎರಡು ಸಾವಿರ ಪ್ರಶ್ನಾವಳಿಗಳನ್ನು ಭರ್ತಿ ಮಾಡಲು ಕನಿಷ್ಠ ಐನೂರು ದಿನಗಳು ಅಥವಾ ಹತ್ತಿರ ಹತ್ತಿರ ಎರಡು ವರ್ಷಗಳು ಬೇಕು. ಕ್ಷೇತ್ರಕಾರ್ಯಕ್ಕೆ ಇಷ್ಟು ಸಮಯ ವಿನಿಯೋಜನೆ ಮಾಡಿದರೆ ಇನ್ನು ಸಂಗ್ರಹಿಸಿದ ಮಾಹಿತಿ ಯನ್ನು ವಿಶ್ಲೇಷಿಸುವುದು ಯಾವಾಗ? ಪ್ರಬಂಧ ಬರೆಯುವುದು ಯಾವಾಗ? ಆದುದರಿಂದ ವಿಷಯ ಆಯ್ಕೆ ಮಾಡುವಾಗ ಕಾಲ ಮತ್ತು ಸಂಪನ್ಮೂಲದ ಪ್ರಶ್ನೆಗಳನ್ನು ಕೂಡ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಎರಡು, ಅಂಕಿ ಅಂಶಗಳ ಅಥವಾ ಮಾಹಿತಿ ಲಭ್ಯತೆ ಪ್ರಶ್ನೆ. ಸಂಶೋಧನಾ ಅಧ್ಯಯನಕ್ಕೆ ಮಾಹಿತಿ ಅಗತ್ಯ. ಸಂಶೋಧನೆ ಆರಂಭಿಸುವವರಿಗೆ ಹಲವಾರು ಸಂಗತಿಗಳ ಕುರಿತು ಸಂಶೋಧನೆ ನಡೆಸುವ ಉತ್ಸಾಹ ಇರುತ್ತದೆ. ಉದಾಹರಣೆಗೆ ಯಾವುದೋ ಒಂದು ಪ್ರದೇಶದಲ್ಲಿ ಗಣಿಗಾರಿಕೆ ನಡೆಯುತ್ತದೆ. ಇದರಿಂದ ಅಲ್ಲಿನ ಅಂತರ್ಜಲದ ಮೇಲೆ, ಕೆರೆ ನೀರಾವರಿ ಮೇಲೆ ಮತ್ತು ರೈತರ ಬದುಕಿನ ಮೇಳೆ ಸಾಕಷ್ಟು ದುಷ್ಪರಿಣಾಮಗಳಿವೆ. ಈ ವಿಷಯ ಕುರಿತು (ಗಣಿಗಾರಿಕೆಯಿಂದ ರೈತರ ಬದುಕಿನ ಮೇಲಾಗುವ ದುಷ್ಪರಿಣಾಮ ಕುರಿತು) ಅಧ್ಯಯನ ಮಾಡಬೇಕಾದರೆ ಗಣಿಗಾರಿಕೆಗೆ ಮುನ್ನ ಅಲ್ಲಿ ಬೀಳುತ್ತಿದ್ದ ಮಳೆ ಪ್ರಮಾಣ, ಅಲ್ಲಿಂದ ಕೆರೆಗೆ ಬರುತ್ತಿದ್ದ ನೀರಿನ ಪ್ರಮಾಣ, ಗಣಿಗಾರಿಕೆಯಿಂದ ಜಲಾನಯನದ ಮೇಲೆ ಆದ ಪರಿಣಾಮ, ಕೆರೆಗೆ ಬಂದ ಹೂಳಿನ ಪ್ರಮಾಣ, ಕೆರೆಯಲ್ಲಿ ತುಂಬಿದ ಹೂಳಿನ ಪ್ರಮಾಣ ಇತ್ಯಾದಿಗಳಿಗೆ ಸಂಬಂಧಿಸಿದ ಮಾಹಿತಿ ಬೇಕು. ಈ ಎಲ್ಲ ಅಂಶಗಳಿಗೆ ಸಂಬಂಧಿಸಿದ ಮಾಹಿತಿ ಇಲ್ಲದೆ ಗಣಿಗಾರಿಕೆಯಿಂದ ರೈತರ ಮೇಲಾಗುವ ಪರಿಣಾಮವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ಅಧ್ಯಯನ ವಿಷಯ ಆಯ್ಕೆ ಸಂದರ್ಭದಲ್ಲಿ ಮಾಹಿತಿ ಲಭ್ಯತೆಯನ್ನು ಕೂಡ ಪರಿಗಣಿಸ ಬೇಕಾಗುತ್ತದೆ.

ವಿಷಯ ಆಯ್ಕೆ ಎನ್ನುವ ಈ ಅಧ್ಯಾಯದಲ್ಲಿ ವಿಷಯ ಆಯ್ಕೆಯ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ ಬಹುತೇಕ ಸಂಶೋಧಕರು ವಿಷಯ ಆಯ್ಕೆ ಮಾಡುವ ತಮ್ಮ ಜವಾಬ್ದಾರಿಯನ್ನು ಮಾರ್ಗದರ್ಶಕರಿಗೆ ಬಿಟ್ಟುಕೊಟ್ಟಿದ್ದಾರೆ. ಮಾರ್ಗದರ್ಶ ಕರು ಸೂಚಿಸಿದ ವಿಷಯದ ಮೇಲೆ ಸಂಶೋಧನೆ ಸರ್ವೇ ಸಾಮಾನ್ಯವಾಗಿದೆ. ಈ ಬಗೆಯಲ್ಲಿ ರಚಿತವಾಗುವ ಸಂಶೋಧನಾ ಪ್ರಬಂಧ ಸಂಶೋಧಕರ ಪ್ರಬಂಧವಾಗುವುದಿಲ್ಲ; ಮಾರ್ಗದರ್ಶಕರ ಪ್ರಬಂಧವಾಗುತ್ತದೆ. ಅಷ್ಟು ಮಾತ್ರವಲ್ಲ ಸಂಶೋಧನೆಯ ಇಡೀ ಪ್ರಕ್ರಿಯೆಯಲ್ಲಿ ಸಂಶೋಧಕರು ನಿಷ್ಕ್ರಿಯವಾಗಿ ಮಾರ್ಗದರ್ಶಕರು ಸಕ್ರಿಯರಾಗಿರುತ್ತಾರೆ. ಹಾಗಾಗಿ ಎಷ್ಟೋ

ಬಾರಿ ಪಿಹೆಚ್.ಡಿ ಡಿಗ್ರಿ ಪಡೆದವರಲ್ಲಿ ಸಂಶೋಧನೆ ಆರಂಭಿಸುವ ಮುನ್ನ ಇದ್ದ ಅವರ ಜ್ಞಾನ ಮಟ್ಟಕ್ಕಿಂತ ಹೆಚ್ಚಿನ ಜ್ಞಾನವನ್ನು ಕಾಣಲು ಸಾಧ್ಯವಾಗುವುದಿಲ್ಲ. ಯಾವ ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕೆನ್ನುವುದಕ್ಕಿಂತ ಹೇಗೆ ಸಂಶೋಧನಾ ವಿಷಯ ಆಯ್ಕೆ ಮಾಡಿಕೊಳ್ಳಬೇಕು ಎನ್ನುವ ವಿಷಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಸಂಶೋಧಕರ ಸಮಸ್ಯೆಯೇ ಸಂಶೋಧನಾ ವಿಷಯವಾದರೆ ಅಥವಾ ವಿಷಯದೊಂದಿಗೆ ಸಂಶೋಧಕರು ಗುರುತಿಸಿಕೊಂಡರೆ ಸಂಶೋಧನೆ ಉತ್ತಮವಾಗ ಬಹುದೆಂದು ನಿಲುವಿದೆ. ಇದೇ ಸಂದರ್ಭದಲ್ಲಿ ಸಂಶೋಧನ ವಿಷಯ ಮತ್ತು ಸಂಶೋಧಕರ ನಡುವೆ ಅಂತರ ಇರಬೇಕು ಎನ್ನುವ ನಿಲುವು ಕೂಡ ಮಹತ್ವ ಪಡೆದಿದೆ. ಈ ನಿಲುವು (ಅಂತರವನ್ನು ಬಯಸುವ ನಿಲುವು) ವಿಜ್ಞಾನದ ವಿಧಾನದಿಂದ ಬಂದಿದೆ. ಹಾಗೆಂದು ಅದನ್ನು ಸಾರಾಸಗಟಾಗಿ ತಿರಸ್ಕರಿಸುವಂತಿಲ್ಲ. ಯಾಕೆಂದರೆ ಜ್ಞಾನ ಸಂಪಾದನೆಯ ಕಾರ್ಯದಲ್ಲಿ ತೊಡಗಿದವರು ವಿವಿಧ ಸಮುದಾಯ ಹಾಗೂ ವರ್ಗಗಳ ಹಿನ್ನೆಲೆಯಿಂದ ಬಂದಿರುತ್ತಾರೆ. ಅವರು ತಮ್ಮ ಸಮುದಾಯ ಅಥವಾ ವರ್ಗ ಆಸಕ್ತಿಯನ್ನು ಸಕ್ರಿಯವಾಗಿಟ್ಟುಕೊಂಡು ಸಂಪಾದಿಸುವ ಜ್ಞಾನ ಪಕ್ಷಪಾತಿಯಾಗಿರುವ ಸಾಧ್ಯತೆ ಇದೆ. ಪಕ್ಷಪಾತಿಯಾದ ಜ್ಞಾನ ಸಮಗ್ರತೆಯ ಒಳಿತಿನ ದೃಷ್ಟಿಯಿಂದ ಉಪಯೋಗವಿಲ್ಲ. ಆ ಕಾರಣಕ್ಕಾಗಿ ಜ್ಞಾನ ಸಂಪಾದನೆಗೆ ಒಂದು ವಿಧದ ಐಸೋಲೇಶನ್ ಅಗತ್ಯ ಇದೆ ಎನ್ನುವ ವಾದಕ್ಕೂ ಮಹತ್ವ ಇದೆ. ಸಂಶೋಧಕರು ಮತ್ತು ವಿಷಯದ ಸಂಬಂಧ ಕುರಿತು ವಾಗ್ವಾದಕ್ಕೆ ಪರಿಹಾರವನ್ನು ವೇಬರದ ಸೂತ್ರದಲ್ಲಿ ಕಂಡುಕೊಳ್ಳಲಾಗಿದೆ. ಆತನ ಸೂತ್ರ ಪ್ರಕಾರ ಸಂಶೋಧನೆಯ ಮೊದಲ ಮತ್ತು ಕೊನೆಯ ಹಂತದಲ್ಲಿ ಸಂಶೋಧಕರು ವಿಷಯದೊಂದಿಗೆ ಗುರುತಿಸಿಕೊಂಡರೆ ತೊಂದರೆಯಲ್ಲ. ಆದರೆ ಮಾಹಿತಿ ಸಂಗ್ರಹ ಮತ್ತು ವಿಶ್ಲೇಷಣಾ ಸಂದರ್ಭದಲ್ಲಿ ಅಥವಾ ಎರಡನೇ ಹಂತದಲ್ಲಿ ವಸ್ತುನಿಷ್ಠವಾಗಿರುವುದು ಅಗತ್ಯ. ಸಂಶೋಧನಾ ವಿಷಯ ಆಯ್ಕೆ ಸಂದರ್ಭದಲ್ಲಿ ಸಮಯ, ಹಣಕಾಸಿನ ಲಭ್ಯತೆ ಜತೆಗೆ ಅಂಕಿ ಅಂಶಗಳ ಅಥವಾ ಮಾಹಿತಿ ಲಭ್ಯತೆಯನ್ನು ಕೂಡ ಪರಿಗಣಿಸಬೇಕೆಂದು ತಿಳಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಅಮಾತ್ಯಸೇನ್ ಅವರ ಪುಸ್ತಕ ಆರ್ಗ್ಯುಮೆಂಟೇಟಿವ್ ಇಂಡಿಯನ್ ಪುಸ್ತಕ ಇದಕ್ಕೆ ಭಿನ್ನವಾದ ಚಿತ್ರಣವನ್ನು ನೀಡುತ್ತದೆ. ಅವರ ಪ್ರಕಾರ ವಾಗ್ವಾದಗಳು ನಮ್ಮ ಸಮಾಜದ ಬಹುಮುಖ್ಯ ಗುಣ. ಅಮಾತ್ಯ ಸೇನ್ ಅವರ ನಿಲುವನ್ನು ವಿಮರ್ಶಿಸುವ ಹಲವಾರು ಲೇಖನಗಳು ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿಯಲ್ಲಿ ಪ್ರಕಟವಾಗಿವೆ. ಅಮಾತ್ಯಸೇನ್‌ರ ವಾದ ಮತ್ತು ಅವರ ವಾದವನ್ನು ವಿಮರ್ಶಿಸುವ ಪ್ರಕ್ರಿಯೆ ಮೇಲ್ ಸ್ತರದಲ್ಲಿ ನಡೆಯುವ ಪ್ರಕ್ರಿಯೆ. ಜನಸಾಮಾನ್ಯರ ದಿನನಿತ್ಯದ ಬದುಕಿನಲ್ಲಿ ಮತ್ತು ಅಕಾಡೆಮಿಕ್ ಬದುಕಿನಲ್ಲಿ ಕೂಡ ಸಣ್ಣ ಸಣ್ಣ ಸಮುದಾಯಗಳು/ ಪಂಗಡಗಳು ಮತ್ತು ಪಂಗಡದೊಳಗಿನ ನೀತಿ ನಿಯಮಗಳನ್ನು ಅನುಸರಿಸಿ ಬದುಕುವವರು ಮತ್ತು ಅನುಸರಿಸದವರು ಇರುತ್ತಾರೆ. ಅನುಸರಿಸದವರ ಸಂಖ್ಯೆ ಹೆಚ್ಚಿದ್ದರೆ ಅವರ ಟೀಕೆಗೆ/ ವಿಮರ್ಶೆಗೆ/ಮಾತಿಗೆ ಬೆಲೆ ಇರುತ್ತದೆ. ಒಂದು ವೇಳೆ ಕಡಿಮೆ ಇದ್ದರೆ ಯಜಮಾನಿಕೆಯಲ್ಲಿರುವವರು

ಪರಿಗಣಿಸುವುದೇ ಇಲ್ಲ. ಅಕಾಡೆಮಿಕ್ ವಲಯದಲ್ಲೂ ಮಠಮಂದಿರಗಳಂತೆ ಅಕಾಡೆಮಿಕ್ ಗುರುಗಳು ತಪ್ಪದೇ ಬೆಂಗಲಿಗರನ್ನು ಕಟ್ಟಿಕೊಂಡು ವಾಗ್ವಾದ ನಡೆಸುವುದು ಸಾಮಾನ್ಯ. ಇದೊಂದು ಬಗೆಯಲ್ಲಿ ರಾಜಕೀಯ ಪಕ್ಷಗಳ ಚರ್ಚೆಗಳಂತೆ. ಸ್ವಂತ ಪಕ್ಷದ ಐಡಿಯಾಲಾಜಿಯನ್ನು, ಆಲೋಚನೆಗಳನ್ನು, ಕೆಲಸಗಳನ್ನು ಎಷ್ಟೇ ಕೆಟ್ಟದಾದರೂ ವಿಮರ್ಶಿಸುವವ ಬೆಂಬಲಿಗನಾಗಲು ಸಾಧ್ಯವಿಲ್ಲ. ಅದೇ ರೀತಿಯಲ್ಲಿ ಪ್ರತಿಪಕ್ಷದ ಐಡಿಯಲಾಜಿ, ಕೆಲಸಗಳು ಎಷ್ಟೇ ಒಳ್ಳೆಯದಿದ್ದರು ಅದನ್ನು ಒಳ್ಳೆಯದೆಂದು ಸಾರ್ವಜನಿಕವಾಗಿ ಹೇಳುವವ ಕೂಡ ಬೆಂಬಲಿಗನಾಗಲು ಸಾಧ್ಯವಿಲ್ಲ. ಹೆಚ್ಚು ಕಡಿಮೆ ಇಂತಹುದೇ ವಾತಾವರಣ ಈಗ ಅಕಾಡೆಮಿಕ್ ವಲಯದಲ್ಲೂ ಇದೆ.

೨. ನಮ್ಮಲ್ಲಿ ಹಲವಾರು ವಿಧದ ಶಿಕ್ಷಣಗಳಿವೆ. ಮಾಧ್ಯಮ ದೃಷ್ಟಿಯಿಂದ ಭಿನ್ನವಾಗಿರುವ, ವಿನಿಯೋಜನೆ ದೃಷ್ಟಿಯಿಂದ ಭಿನ್ನವಾಗಿರುವ ಮತ್ತು ವಿಧಾನದ ದೃಷ್ಟಿಯಿಂದ ಭಿನ್ನವಾಗಿರುವ ಶಿಕ್ಷಣಗಳಿವೆ. ಮೊದಲಿನ ಎರಡು ಭಿನ್ನತೆಗಳು ವಿದ್ಯಾರ್ಥಿಯ ಕಲಿಕೆಯನ್ನು ವಿಶೇಷ ಪ್ರಭಾವಿಸದಿರಬಹುದು. ಆದರೆ ವಿಧಾನದ ದೃಷ್ಟಿಯಿಂದ ಭಿನ್ನತೆ ಇರುವ ಶಿಕ್ಷಣ ವಿದ್ಯಾರ್ಥಿಗಳ ಕಲಿಕ ವಿಧಾನವನ್ನು ಪ್ರಭಾವಿಸಬಹುದು. ಕೇಂದ್ರೀಯ ಶಿಕ್ಷಣ ವ್ಯವಸ್ಥೆಯ ವ್ಯಾಪ್ತಿಯಲ್ಲಿ ಬರುವ ಶಿಕ್ಷಣ ವಿಧಾನಕ್ಕೂ ರಾಜ್ಯ ಸಿಲೆಬಸ್ ವ್ಯಾಪ್ತಿಯಲ್ಲಿ ಬರುವ ಶಿಕ್ಷಣ ವಿಧಾನಕ್ಕೂ ತುಂಬಾ ವ್ಯತ್ಯಾಸವಿದೆ. ಕೇಂದ್ರೀಯ ಶಿಕ್ಷಣ ವಿಧಾನ ವಿದ್ಯಾರ್ಥಿಯ ಸ್ವಂತಿಕೆ ಪ್ರದರ್ಶನಕ್ಕೆ ತಕ್ಕಮಟ್ಟಿನ ಅವಕಾಶ ನೀಡಿದರೆ ರಾಜ್ಯ ಶಿಕ್ಷಣ ವಿಧಾನ ಏನೇನೂ ಅವಕಾಶ ನೀಡುತ್ತಿಲ್ಲ.

೩. ನಮ್ಮ ಭೂತಕಾಲದ ಬಗೆಗಿನ ಕೆಲವೊಂದು ಜನಪ್ರಿಯ ಸಂಗತಿಗಳನ್ನೇ ಚರಿತ್ರೆಯೆಂದು ಒಪ್ಪಿಕೊಂಡಿರುವುದಕ್ಕೆ ಬಹುಮುಖ್ಯ ಕಾರಣ ಪ್ರಶ್ನಿಸಲು ಹೇಳಿ ಕೊಡದ ಚರಿತ್ರೆ ಶಿಕ್ಷಣ ಎಂದು ರೋಮಿಲಾ ಥಾಪರ್ ಹಿಂದು ಪತ್ರಿಕೆಗೆ ನೀಡಿದ ಸಂದರ್ಶನವೊಂದರಲ್ಲಿ ಅಭಿಪ್ರಾಯಪಡುತ್ತಾರೆ. ಇದು ಕೇವಲ ಚರಿತ್ರೆಯ ಸಮಸ್ಯೆಯಲ್ಲ ಸಮಾಜ ವಿಜ್ಞಾನದ ಅಥವಾ ಎಲ್ಲ ಶಿಸ್ತುಗಳ ಸಮಸ್ಯೆ ಎಂದು ಅವರು ಹೇಳುತ್ತಾರೆ. ಈ ಕುರಿತು ಅಧಿಕಾರದಲ್ಲಿದವರೊಂದಿಗೆ ಹಲವಾರು ಬಾರಿ ಪ್ರಸ್ತಾಪಿಸಿದರೂ ಏನೇನೂ ಬದಲಾವಣೆಯಾಗಿಲ್ಲವೆಂದು ಅವರು ಹೇಳುತ್ತಾರೆ. ಆದುದರಿಂದ ಪ್ರಶ್ನಿಸದ ಶಿಕ್ಷಣವನ್ನು ಮುಂದುವರಿಸುವಲ್ಲಿ ಅಧಿಕಾರದಲ್ಲಿದವರ ದೊಡ್ಡ ಪಾತ್ರವಿದೆಯೆಂದು ಅವರು ಮನಗಾಣುತ್ತಾರೆ. ಕಲ್ಪನಾ ಶರ್ಮ, `ಕನ್ ವರ್ಸೇಶನ್ಸ್ ಹಿಸ್ಟರಿ`. ದಿ ಹಿಂದೂ, ಜನವರಿ ೨೫, ೨೦೦೯.

೪. ಹಸನ್ ಸರೂರ್, `ಫೈಲ್ಯೂರ್ ಆಫ್ ಕಲೆಕ್ಟೀವ್ ಇಮೇಜಿನೇಶನ್, ಕ್ವೀನ್ ಟೋಲ್ಡ್`. ದಿ ಹಿಂದೂ ಜುಲೈ ೨೭, ೨೦೦೯

೫. ಜೋಸೆಫ್ ಸ್ಟಿಗ್ಲಿಟ್ಜ್, *ಗ್ಲೋಬಲೈಸೇಶನ್ ಅಂಡ್ ಇಟ್ಸ್ ಡಿಸ್‌ಕಂಟೆಂಟ್ಸ್*, ನ್ಯೂಡೆಲ್ಲಿ : ಪೆಂಗ್ವಿನ್ ಬುಕ್ಸ್, ೨೦೦೨.

೬. ಕನ್ನಡದಲ್ಲಿ ಇದನ್ನು ಸಾಹಿತ್ಯ ಸಮೀಕ್ಷೆಯೆಂದು ಮತ್ತು ಇಂಗ್ಲೀಷ್‌ನಲ್ಲಿ ಇದನ್ನು ಲಿಟರೇಚರ್ ಸರ್ವೇ ಎಂದು ಗುರುತಿಸುತ್ತಾರೆ. ಈಗಾಗಲೇ ಆದ ಅಧ್ಯಯನವನ್ನು ಸಾಹಿತ್ಯ ಸಮೀಕ್ಷೆ ಅಥವಾ ಲಿಟರೇಚರ್ ಸರ್ವೇ ದೃಷ್ಟಿಗಳಿಂದ ನೋಡುವುದರಿಂದ ಈಗಾಗಲೇ ಸ್ಥಾಪಿತವಾದ ಸತ್ಯಗಳಿಂದ ದೃಷ್ಟಿಯಿಂದ ನೋಡುವುದು ಸಂಶೋಧನೆಯ ದೃಷ್ಟಿಯಿಂದ ಹೆಚ್ಚು ಉಪಯುಕ್ತ. ಯಾಕೆಂದರೆ ಸಂಶೋಧಕರ ಮುಖ್ಯ ಕೆಲಸ ಈಗಾಗಲೇ ಸ್ಥಾಪಿತವಾದ ಸತ್ಯಗಳನ್ನು ವಾದಗಳನ್ನು ಪ್ರಶ್ನಿಸುವುದು. ಕೇವಲ ಸಮೀಕ್ಷೆಯ ದೃಷ್ಟಿಯಿಂದ ನೋಡಿದರೆ ಅವರು ಹೀಗೆ ಹೇಳಿದ್ದಾರೆ ಇವರು ಹಾಗೆ ಹೇಳಿದ್ದಾರೆಂದು ನಿರ್ಲಿಪ್ತವಾಗಿ ದಾಖಲಿಸುವ ಸಾಧ್ಯತೆ ಇದೆ. ಈಗಾಗಲೇ ಹೇಳಿರುವವರು ಏನು ಹೇಳಿದ್ದಾರೆ? ಹೇಗೆ ಹೇಳಿದ್ದಾರೆ? ಏನನ್ನು ಹೇಳಲು ಬಿಟ್ಟಿದ್ದಾರೆ? ಹೇಗೆ ಹೇಳಬೇಕಿತ್ತು? ಇತ್ಯಾದಿ

ಈಗಾಗಲೇ ಆಗಿರುವ ಅಧ್ಯಯನಗಳ ಮೇಲೆ ಕೇಳುವುದು ಸಂಶೋಧನೆಯನ್ನು ಮುಂದುವರಿಸಲು ಅವಶ್ಯ.

೭. ಈ ವಾದ ಮಂಡಿಸುವವರನ್ನು ಹಲವಾರು ಹೆಸರುಗಳಿಂದ ಕರೆಯುತ್ತಾರೆ. ಹರ್ಮನೆಟಿಕ್ಸ್, ಕ್ವಾಲಿಟೇಟಿವ್ ರಿಸರ್ಚರ್ಸ್, ಪ್ರಾಗ್‌ಮೆಟಿಸ್ಟ್ಸ್, ನೆಚುರಲಿಸ್ಟ್ಸ್ ಇತ್ಯಾದಿ ಹೆಸರುಗಳಿಂದ ಇವರನ್ನು ಗುರುತಿಸಬಹುದು. ಸಂಶೋಧನೆ, ಸಂಶೋಧಕರು ಮತ್ತು ಅಧ್ಯಯನ ವಿಷಯ ನಡುವಿನ ಸಂಬಂಧ, ಸಂಶೋಧನೆ ಮತ್ತು ಮೌಲ್ಯದ ಸಂಬಂಧ, ಜನರಲೈಸೇಶನ್, ಕಾರ್ಯಕಾರಣ ಸಂಬಂಧ ಇತ್ಯಾದಿಗಳ ಬಗ್ಗೆ ಈ ವಾದ ಮಂಡಿಸುವವರು ಈ ಕೆಳಗಿನ ನಿಲುವನ್ನು ವ್ಯಕ್ತಪಡಿಸುತ್ತಾರೆ. ವಾಸ್ತವಿಕತೆಯ ಕುರಿತು ಇವರು ಹಲವು ರಚಿತ ಸತ್ಯಗಳಿವೆಯೆಂದು ವಾದಿಸುತ್ತಾರೆ. ಅಧ್ಯಯನಕಾರರ ಮತ್ತು ಅಧ್ಯಯನ ವಿಷಯಗಳ ಪರಸ್ಪರ ಸಂಬಂಧಿಸಿವೆ. ಮೌಲ್ಯರಹಿತವಾದ ಅಧ್ಯಯನವನ್ನು ಊಹಿಸಲು ಸಾಧ್ಯವಿಲ್ಲ. ಕಾಲ ಮತ್ತು ಸನ್ನಿವೇಶಗಳನ್ನು ಮೀರಿದ ಜನರಲೈಸೇಶನ್ ಸಾಧ್ಯವಿಲ್ಲ ಮತ್ತು ಕಾರ್ಯಕಾರಣ ಸಂಬಂಧಗಳನ್ನು ಪ್ರತ್ಯೇಕ ಪಡಿಸುವುದು ಕಷ್ಟಸಾಧ್ಯ ಇತ್ಯಾದಿ ವಾದಗಳನ್ನು ಇವರು ಮಾಡುತ್ತಾರೆ. ಈ ಕುರಿತ ಹೆಚ್ಚಿನ ವಿವರಗಳಿಗೆ ಸಿ ಎಸ್ ರೆಶರ್ಟ್ ಅಂಡ್ ಎಸ್ ಎಫ್ ರೇಲಿಸ್(ಸಂ). *ದಿ ಕ್ವಾಲಿಟೇಟಿವ್ ಕ್ವಾಂಟಿಟೇಟಿವ್ ಡಿಬೇಟ್-ನ್ಯೂ ಪರ್ಸ್‌ಫೆಕ್ಟಿವ್ಸ್*, ಸಾನ್‌ಫ್ರಾನ್ಸ್ ಸಿಸ್ಕೋ : ಜಾಸಿ ಬೇಸ್, ೧೯೯೪ ಪುಸ್ತಕ ನೋಡಬಹುದು.

೮. ಈ ವಾದ ಮಂಡಿಸುವವರನ್ನು ಪೊಸಿಟಿವಿಸ್ಟ್, ಕ್ವಾಂಟಿಟೇವ್ ರಿಸರ್ಚರ್ಸ್ ಇತ್ಯಾದಿ ಹೆಸರುಗಳಿಂದ ಗುರುತಿಸುತ್ತಾರೆ. ಇವರು ಒಂದು ರಿಯಾಲಿಟಿ ಇದೆಯೆನ್ನುತ್ತಾರೆ. ಅಧ್ಯಯನಕಾರ ಮತ್ತು ಅಧ್ಯಯನ ವಿಷಯಗಳು ಪರಸ್ಪರ ಸಂಬಂಧಿಸಿಲ್ಲ. ಮೌಲ್ಯ ನಿರಾಪೇಕ್ಷ ಸಂಶೋಧನೆ, ಕಾಲ ಮತ್ತು ಸನ್ನಿವೇಶಗಳನ್ನು ಮೀರಿದ ಜನರಲೈಸೇಶನ್ ಸಾಧ್ಯ ಇತ್ಯಾದಿ ನಂಬಿಕೆಗಳನ್ನು ಹೊಂದಿದ್ದಾರೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ಪುಸ್ತಕಗಳನ್ನು ನೋಡಬಹುದು. ವಿಕೀ ಎಲ್ ಪ್ಲಾನೋ ಅಂಡ್ ಜಾನ್ ಡಬ್ಲ್ಯು ಕ್ರಾಸ್ ವೆಲ್, *ದಿ ಮಿಕ್ಸಡ್ ಮೆಥಡ್ ರೀಡರ್*, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೨೦೦೮, ಪಾರ್ಥನಾಥ ಮುಖರ್ಜಿ ಅಂಡ್ ಚಂದ್ರಸೇನ್ ಗುಪ್ತ(ಸಂ). *ಇಂಡಿಜೇನಿಟಿ ಅಂಡ್ ಯುನಿವರ್ಸಾಲಿಟಿ ಇನ್ ಸೋಶಿಯಲ್ ಸಯನ್ಸ್*, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೨೦೦೪

೯. ಜೇಮ್ಸ್ ಡಿ ಫೇಬಿಯನ್(ಸಂ). *ಮೈಕಲ್ ಫುಕೋ - ಎಸೆಯಿನ್ಸಿಯಲ್ ವರ್ಕ್ಸ್ ಆಫ್ ಫುಕೋ ೧೯೫೪-*, ವಾಲ್ಯೂಂ - ೩, ಲಂಡನ್ : ಪೆಂಗ್ವಿನ್ ಬುಕ್ಸ್, ೧೯೯೪

೧೦. ಜೇಮ್ಸ್ ಡಿ ಫೇಬಿಯನ್ (ಸಂ). *ಮೈಕಲ್ ಫುಕೋ - ಎಸೆಯಿನ್ಸಿಯಲ್ ವರ್ಕ್ಸ್ ಆಫ್ ಫುಕೋ ೧೯೫೪ - ೧೯೮೪*, ವಾಲ್ಯೂಂ-೩, ಲಂಡನ್ : ಪೆಂಗ್ವಿನ್ ಬುಕ್ಸ್, ೧೯೯೪

೧೧. ಮಾರ್ಟಿನ್ ಹೊಲಿಸ್, *ದಿ ಫಿಲಾಸಫಿ ಆಫ್ ಸೋಶಿಯಲ್ ಸಯನ್ಸ್*, ಕೇಂಬ್ರಿಡ್ಜ್ : ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್, ೨೦೦೦

೬

ಸಮಸ್ಯೀಕರಿಸುವುದು

ಸಮಸ್ಯೆ ಅಥವಾ ಸಮಸ್ಯೀಕರಿಸುವುದು ಎನ್ನುವ ಈ ಅಧ್ಯಾಯದಲ್ಲಿ ಸಂಶೋಧನಾ ಸಮಸ್ಯೆ ಬಗ್ಗೆ ಚರ್ಚಿಸಲಾಗಿದೆ. ಸಮಸ್ಯೆ ಅಥವಾ ಸಮಸ್ಯೀಕರಿಸುವ ಪ್ರಕ್ರಿಯೆ ಸಂಶೋಧನಾ ಪ್ರಸ್ತಾವಕ್ಕೆ ಬುನಾದಿಯಾಗಿ ಕೆಲಸ ಮಾಡುತ್ತದೆ ಎನ್ನುವ ನಂಬಿಕೆ ಇದೆ. ಸಂಶೋಧನಾ ಸಮಸ್ಯೆ ಸಂಶೋಧನೆಯ ಉದ್ದೇಶವನ್ನು ನಿರ್ಧರಿಸಿದರೆ ಸಂಶೋಧನೆಯ ಉದ್ದೇಶಗಳು ಸಂಶೋಧನೆಯ ವಿಧಾನವನ್ನು ಪ್ರಭಾವಿಸುತ್ತವೆ ಎಂದು ಗ್ರಹಿಸಲಾಗಿದೆ. ಈ ಮೂರು ಸಂಗತಿಗಳು ಪರಸ್ಪರ ಸಂಬಂಧಿಸಿವೆ ಮತ್ತು ಒಂದು ಸರಪಣಿಯ ಕೊಂಡಿಯಂತೆ ಕೆಲಸ ಮಾಡುತ್ತವೆಂದು ತಿಳಿಯಲಾಗಿದೆ. ಇವು ಯಾವುದೇ ಸಂಶೋಧನಾ ಪ್ರಸ್ತಾವದ ಮೂಲಭೂತ ಸಂಗತಿಗಳು. ಇವು ಸರಿಯಾಗಿದ್ದರೆ ಸಂಶೋಧನೆ ಸರಿ ದಾರಿಯಲ್ಲಿ ಸಾಗುವ ಸಾಧ್ಯತೆಗಳು ಹೆಚ್ಚು ಇವೆ. ಹೀಗೆ ಸಮಸ್ಯೆ ಅಥವಾ ಸಮಸ್ಯೀಕರಿಸುವುದರ ಕುರಿತು ಹಲವಾರು ಗ್ರಹಿಕೆಗಳಿವೆ. ಇವೆಲ್ಲವನ್ನು ವಿಶ್ಲೇಷಿಸುವ ದೃಷ್ಟಿಯಿಂದ ಸಮಸ್ಯೆ ಅಥವಾ ಸಮಸ್ಯೀಕರಣ ಕುರಿತು ಈ ಕೆಳಗಿನ ಪ್ರಶ್ನೆಗಳನ್ನು ರೂಪಿಸಿಕೊಳ್ಳಲಾಗಿದೆ ಮತ್ತು ಅವುಗಳಿಗೆ ಉತ್ತರ ಕಂಡುಕೊಳ್ಳುವ ಒಂದು ಕಿರು ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಸಮಸ್ಯೆ ಅಥವಾ ಸಮಸ್ಯೀಕರಣವೆಂದರೇನು? ಯಾಕೆ ಸಮಸ್ಯೀಕರಿಸಬೇಕು? ಹೇಗೆ ಸಮಸ್ಯೀಕರಿಸಬೇಕು? ಸಮಸ್ಯೆ ಹಾಗೂ ಅಧ್ಯಯನ ಉದ್ದೇಶಗಳ ನಡುವಿನ ಸಂಬಂಧವೇನು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸಲು ಈ ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ. ಇಲ್ಲಿ ಸಮಸ್ಯೀಕರಿಸುವುದನ್ನು ಒಂದು ತಾಂತ್ರಿಕ ಅವಶ್ಯಕತೆಯ ದೃಷ್ಟಿಯಿಂದ ನೋಡಲಾಗಿದೆ. ಅಂದರೆ ಸಂಶೋಧನಾ ಪ್ರಸ್ತಾವ ಸಿದ್ಧಪಡಿಸುವಲ್ಲಿ ಸಮಸ್ಯೀಕರಿಸುವುದರ ಪಾತ್ರವನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಸಮಸ್ಯೆಯನ್ನು ನೋಡಲಾಗಿದೆ. ಅದುದರಿಂದ ಈ ಅಧ್ಯಾಯದಲ್ಲಿ ಸಮಸ್ಯೆ ಅಥವಾ ಸಮಸ್ಯೀಕರಿಸುವುದರ ಕುರಿತ ಯಾವುದೇ ತಾತ್ವಿಕ ಚರ್ಚೆಗಳು ಇರುವುದಿಲ್ಲ.

ಸಮಸ್ಯೆಯನ್ನು ಅಥವಾ ಸಮಸ್ಯೀಕರಿಸುವುದನ್ನು ಸರಳವಾಗಿ ಪ್ರಶ್ನೆ ಅಥವಾ ಪ್ರಶ್ನೆ ಗಳನ್ನು ಕೇಳುವುದೆಂದು ವ್ಯಾಖ್ಯಾನಿಸಿಕೊಳ್ಳಲಾಗಿದೆ. ಒಂದು ಅಥವಾ ಕೆಲವು ಮೂಲ

ಪ್ರಶ್ನೆಗಳು ಮತ್ತು ಆ ಮೂಲ ಪ್ರಶ್ನೆಗಳಿಗೆ ಪೂರಕವಾಗಿರುವ ಇತರ ಪ್ರಶ್ನೆಗಳು ಸಮಸ್ಯೆಯ ಭಾಗವಾಗಿರುತ್ತವೆ. ಮನುಷ್ಯ ಆಲೋಚನೆ ಮಾಡುವಲ್ಲಿಂದ ಪ್ರಶ್ನೆ ಕೇಳುವ ಅಥವಾ ಪ್ರಶ್ನಿಸುವ ಕ್ರಿಯೆ ನಡೆದಿದೆ. ಹಾಗೆಂದು ಪ್ರಶ್ನಿಸುವುದು ಹಸಿವು, ನೀರಡಿಕೆ, ಭಯ ಇತ್ಯಾದಿಗಳಂತೆ ಮಾನವನ ಒಂದು ಮೂಲಭೂತ ಗುಣ ಅಲ್ಲ. ತನ್ನ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳುವ ಸಂದರ್ಭದಲ್ಲಿ ಎದುರಾಗುವ ಅಡ್ಡಿ ಆಂತಕಗಳನ್ನು ನಿವಾರಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಶ್ನಿಸುವ ಪ್ರವೃತ್ತಿ ಆರಂಭವಾಗಿದೆ. ಇದನ್ನೇ ಇನ್ನೊಂದು ವಿಧದಲ್ಲಿ ಹೇಳುವುದಾದರೆ ಮಾನವ ತನ್ನ ಅಸ್ತಿತ್ವದ ಉಳಿವು ಮತ್ತು ಪುನರ್‌ತ್ಪತ್ತಿಗಾಗಿ ತಾನು ಬದುಕುವ ಪರಿಸರದೊಂದಿಗೆ (ಮಾನವ/ಪ್ರಾಣಿ ಮತ್ತು ಇತರ ಪರಿಸರದೊಂದಿಗೆ) ಸಂವಾದ ನಡೆಸುವುದು ಅನಿವಾರ್ಯ. ಆ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಶ್ನಿಸುವ ಪ್ರವೃತ್ತಿ ರೂಪುಗೊಂಡಿದೆ.[೧] ಮೇಲಿನ ವಿವರಣೆ ಪ್ರಕಾರ ಮಾನವ ತಾನು ಬದುಕುವ ಪರಿಸರದೊಂದಿಗೆ ವ್ಯವಹರಿಸುವ ಸಂದರ್ಭದಲ್ಲಿ ಮಾತ್ರ ಪ್ರಶ್ನೆಗಳು ಉದ್ಭವಿಸುತ್ತವೆ ಎನ್ನುವ ಚಿತ್ರಣ ಇದೆ. ಆದರೆ ಇದು ಸರಿಯಲ್ಲ. ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಸಂದರ್ಭದಲ್ಲಿ ಮಾನವನೊಳಗೆ ಘರ್ಷಣೆ ಅಥವಾ ತಿಕ್ಕಾಟಗಳು ನಡೆಯಬಹುದು. ತನ್ನ ಹಲವಾರು, ಅಗತ್ಯಗಳು, ಅವುಗಳ ಆದ್ಯತೆ, ಅವುಗಳನ್ನು ಪೂರೈಸಿಕೊಳ್ಳುವ ಮಾರ್ಗ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಮಾನವನೊಳಗೆ ತಿಕ್ಕಾಟ ನಡೆಯಬಹುದು. ಈ ಆಂತರಿಕ ಅಥವಾ ವ್ಯಕ್ತಿ ಆತನ್ನೊಳಗೇ ನಡೆಸುವ ತಿಕ್ಕಾಟಗಳು ಕೂಡ ಹಲವಾರು ಪ್ರಶ್ನೆಗಳಿಗೆ ಎಡೆಮಾಡಿಕೊಡಬಹುದು.[೨]

ಸಮಸ್ಯೀಕರಿಸುವುದನ್ನು ಮತ್ತೊಂದು ವಿಧದಲ್ಲಿ ಕೂಡ ವ್ಯಾಖ್ಯಾನಿಸಿಕೊಳ್ಳಬಹುದು. ನಮ್ಮಲ್ಲಿ ಹಲವಾರು ಸಾಮಾಜಿಕ ಸಂಗತಿಗಳು ಒಂದು ವಿಧದ ಪ್ರಾಕೃತಿಕ ಸತ್ಯದಂತೆ ನಡೆದುಕೊಂಡು ಬಂದಿವೆ. ಉದಾಹರಣೆಗೆ ನಮ್ಮ ಸಮಾಜದಲ್ಲಿರುವ ಜಾತಿ ಪದ್ಧತಿ ಅಥವಾ ಮಹಿಳೆಯರ ಎರಡನೇ ದರ್ಜೆ ಸ್ಥಾನಮಾನ ಅಥವಾ ದಲಿತರನ್ನು ಅಂಚಿನಲ್ಲಿಡುವ ಕ್ರಮ ಇತ್ಯಾದಿಗಳು. ಇವೆಲ್ಲವು ಶತಮಾನಗಳಿಂದ ನಮ್ಮಲ್ಲಿ ಆಚರಣೆಯಲ್ಲಿವೆ. ಈ ಕಾರಣಕ್ಕಾಗಿ ಇವೆಲ್ಲವು ನಮಗೆ ಸಹಜ ಆಗಿವೆ. ಸೂರ್ಯ ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳುಗುವುದು ಹೇಗೋ ಅಥವಾ ನೀರು ಮೇಲಿಂದ ಕೆಳಕ್ಕೆ ಹರಿಯುವುದು ಹೇಗೋ ಅದೇ ರೀತಿಯಲ್ಲಿ ಅಸ್ಪೃಶ್ಯರನ್ನು ಸಮಾಜದ ಅಂಚಿನಲ್ಲಿಡುವುದು ಅಥವಾ ಮಹಿಳೆಯರಿಗೆ ಎರಡನೇ ದರ್ಜೆ ಸ್ಥಾನಮಾನ ನೀಡುವುದು ಒಂದು ಸಾಮಾನ್ಯ ಸಂಗತಿ. ಅವುಗಳ ಸಹಜವಾಗಿರುವುದರಿಂದ ಅವುಗಳ ಬಗ್ಗೆ ವಿಶೇಷ ತಲೆಕೆಡಿಸಿಕೊಳ್ಳುವ ಅಗತ್ಯ ವಾದರೂ ಏನಿದೆ? ಒಂದು ವೇಳೆ ತಲೆಕಡಿಸಿಕೊಂಡರು ಏನಾಗಬಹುದು? ಅವುಗಳ ಸ್ಥಾನಮಾನದಲ್ಲಿ ವಿಶೇಷ ಬದಲಾವಣೆ ಸಾಧ್ಯವಿಲ್ಲ. ಯಾವುದೇ ಸಂಶೋಧನೆ ಮಾಡಿ ಸೂರ್ಯ ಹುಟ್ಟುವ ಅಥವಾ ಸೂರ್ಯಾಸ್ತದ ದಿಕ್ಕುಗಳನ್ನು ಬದಲಾಯಿಸಲು ಸಾಧ್ಯವೇ? ಅದೇ ರೀತಿ ಮನುಷ್ಯನ ಮಧ್ಯಪ್ರವೇಶಿಕೆ ಇಲ್ಲದೆ ಕೆಳಕ್ಕೆ ಇಳಿಯುವ ನೀರನ್ನು ಮೇಲಕ್ಕೆ ಹತ್ತುವಂತೆ ಮಾಡಲು ಸಾಧ್ಯವೇ? ಇವೆಲ್ಲವನ್ನು

ಮಾನವ ಸಹಜ ಸಂಗತಿಗಳೆಂದು ಒಪ್ಪಿಕೊಂಡಿದ್ದಾನೆ. ಅದೇ ರೀತಿಯಲ್ಲಿ ಶತಮಾನಗಳಿಂದ ಆಚರಣೆಯಲ್ಲಿದೆ ಎನ್ನುವ ಕಾರಣಕ್ಕೆ ಹಲವಾರು ಸಾಮಾಜಿಕ ಕಟ್ಟುಪಾಡುಗಳು ಸಹಜವಾಗಿವೆ. ಹೀಗೆ ಒಮ್ಮೆ ಸಹಜ ಎಂದು ಒಪ್ಪಿಕೊಂಡ ವಿಚಾರಗಳ ಬಗ್ಗೆ ಮನುಷ್ಯ ವಿಶೇಷ ಚಿಂತೆ ಮಾಡಲು ಹೋಗುವುದಿಲ್ಲ. ಯಾವುದರ ಬಗ್ಗೆ ನಾವು ಚಿಂತಿಸಲು ಆರಂಭಿಸುತ್ತೇವೆ? ನಾವು ಬದುಕುವ ಪರಿಸರದಲ್ಲಿನ ಅಸಹಜತೆಗಳು ಅಥವಾ ನಮ್ಮೊಳಗಿನ ಅಸಹಜತೆಗಳು ನಮ್ಮನ್ನು ಚಿಂತೆಗೆ ಅಥವಾ ಆಲೋಚನೆಗೆ ಹಚ್ಚುತ್ತವೆ. ನಮ್ಮ ಒಳಗಿನ ಮತ್ತು ಹೊರಗಿನ ಪರಿಸರಗಳು ಪರಸ್ಪರ ಸಂಬಂಧಿಸಿವೆ. ಯಾವುದೋ ಒಂದು ಪರಿಸರದಲ್ಲಿನ ಅಸಹಜತೆ (ಒಳಗಿನ ಅಥವಾ ಹೊರಗಿನ) ನಮ್ಮನ್ನು ಆಲೋಚನೆಗೆ ಹಚ್ಚಬಹುದು. ಎಲ್ಲ ರೀತಿಯಲ್ಲೂ ನಮ್ಮ ಹಾಗೆ ಇರುವ ದಲಿತರನ್ನು ಯಾಕೆ ಅಂಚಿನಲ್ಲಿಡಲಾಗುತ್ತಿದೆ? ಎಲ್ಲ ವಿಚಾರಗಳಲ್ಲೂ ಪುರುಷನಿಗೆ ಸರಿಸಮಾನಾಗಿ ಇರುವ ಮಹಿಳೆಗೆ ಯಾಕೆ ಎರಡನೇ ದರ್ಜೆ ಸ್ಥಾನಮಾನ? ಇತ್ಯಾದಿ ಪ್ರಶ್ನೆಗಳು ಮೂಡಬಹುದು. ಸಹಜ ಅಸಹಜ ಆದಾಗ ಮಾತ್ರ ಈ ಎಲ್ಲ ಪ್ರಶ್ನೆಗಳು ಮೂಡುವುದು. ಹೀಗೆ ಸಹಜತೆಯಲ್ಲಿರುವ ಅಸಹಜತೆಯನ್ನು ಗುರುತಿಸುವ ಕೆಲಸವನ್ನು ಕೂಡ ಸಮಸ್ಯೀಕರಿಸುವ ಪ್ರಕ್ರಿಯೆಯೆಂದು ವ್ಯಾಖ್ಯಾನಿಸಿಕೊಳ್ಳಬಹುದು.

ಸಮಸ್ಯೀಕರಿಸುವುದು ಯಾಕೆ?

ಯಾವುದೋ ಒಂದು ಸಂಶೋಧನಾ ಕಮ್ಮಟದಲ್ಲಿ ಖ್ಯಾತ ಸಂಶೋಧಕರೊಬ್ಬರು ಸಂಶೋಧನಾ ಸಮಸ್ಯೆ ಬಗ್ಗೆ ನೀಡಿದ ಉದಾಹರಣೆಯೊಂದಿಗೆ ಸಮಸ್ಯೀಕರಿಸುವುದು ಯಾಕೆ ಎನ್ನುವ ಚರ್ಚೆಯನ್ನು ಆರಂಭಿಸುವ.[೬] ಸಮಾಜ ವಿಜ್ಞಾನಿಯೊಬ್ಬರು ದಾರಿಯಲ್ಲಿ ಹೋಗುತ್ತಿದ್ದಾಗ ಒಬ್ಬ ಕುರಿ ಕಾಯುವವ ತನ್ನ ಕುರಿ ಮಂದೆಯೊಂದಿಗೆ ಎದುರಾದ. ಸಮಾಜ ವಿಜ್ಞಾನಿಯ ಜತೆಗೆ ಇದ್ದವ ಸಂಶೋಧಕರಲ್ಲಿ ಮಂದೆಯಲ್ಲಿ ಎಷ್ಟು ಕುರಿಗಳಿರಬಹುದೆಂದು ಕೇಳಿದರಂತೆ. ತಕ್ಷಣವೇ ಸಂಶೋಧಕ ತನ್ನಲ್ಲಿದ್ದ ಲ್ಯಾಪ್‌ಟಾಪ್ ತೆಗೆದು ರಿಮೋಟ್ ಗ್ರಾಫಿಂಗ್ ಮೂಲಕ ಮಂದೆಯಲ್ಲಿ ಎಷ್ಟು ಕುರಿಗಳಿವೆ ಎಂದು ಹೇಳಿದ. ನಂತರ ಆ ಅಂಕೆಯನ್ನು ಪರೀಕ್ಷಿಸುವ ದೃಷ್ಟಿಯಿಂದ ಕುರಿ ಕಾಯುವವನಲ್ಲಿ ನೇರವಾಗಿ ಎಷ್ಟು ಕುರಿಗಳಿವೆ ಎಂದು ಕೇಳಿದರು. ಆತ ತಕ್ಷಣವೇ ಮಂದೆಯಲ್ಲಿದ್ದ ಒಟ್ಟು ಕುರಿಗಳ ಸಂಖ್ಯೆಯನ್ನು ಹೇಳಿಬಿಟ್ಟ. ಅವನು ಹೇಳಿದ ಸಂಖ್ಯೆ ಮತ್ತು ಸಂಶೋಧಕ ಅಷ್ಟೊಂದು ಕಸರತ್ತು ಮಾಡಿ ಪಡೆದ ಸಂಖ್ಯೆ ಸ್ವಲ್ಪ ಹೆಚ್ಚು ಕಡಿಮೆ ಆಗಿತ್ತು ಅಥವಾ ಸಂಶೋಧಕರು ಹೇಳಿದ ಸಂಖ್ಯೆಗಿಂತ ಒಂದು ಕುರಿ ಹೆಚ್ಚಿತ್ತು. ಅದು ಹೇಗೆಂದು ವಿಚಾರಿಸಿದರೆ ತನ್ನ ಕಂಕುಳಲ್ಲಿದ್ದ ಕುರಿಮರಿಯನ್ನು ನೀವು ಲೆಕ್ಕ ಮಾಡಿಲ್ಲ ಆದುದರಿಂದ ನಿಮ್ಮ ಮತ್ತು ನನ್ನ ಲೆಕ್ಕಾಚಾರದ ನಡುವೆ ವ್ಯತ್ಯಾಸ ಆಯಿತೆಂದು ಕುರಿ ಕಾಯುವವ ಹೇಳಿದ. ಇವಿಷ್ಟು ಸಮಸ್ಯೆ ಬಗ್ಗೆ ಇರುವ ವಿಡಂಬನೆ. ಈ ಉದಾಹರಣೆಯ ಮೂಲಕ ಸಂಶೋಧನೆಯಲ್ಲಿ ಸಮಸ್ಯೀಕರಿಸುವುದು ಎಷ್ಟೊಂದು ಅವಾಸ್ತವ ಮತ್ತು ಅನಗತ್ಯ ಎನ್ನುವುದನ್ನು ಹೇಳಲು ಪ್ರಯತ್ನಿಸಿದ್ದಾರೆ. ನನಗೂ ಆವಾಗ ಅದು ಸರಿ ಎಂದು ತೋರಿತು. ಇತ್ತೀಚಿನ ದಿನಗಳಲ್ಲಿ

ಶಾಲಾ ಉಸ್ತುವಾರಿ ಸಮಿತಿ ಸದಸ್ಯರಿಗೆ ನಾವು ವಿಶ್ವವಿದ್ಯಾಲಯದಲ್ಲಿ ಎರಡು ದಿನಗಳ ಕಮ್ಮಟ ಏರ್ಪಡಿಸಿದ್ದೆವು.[೬] ಆ ಸಂದರ್ಭದಲ್ಲಿ ಶಾಲಾ ಉಸ್ತುವಾರಿ ಸಮಿತಿ ಸದಸ್ಯರಿಗೆ ತಾವು ಕಾರ್ಯನಿರ್ವಹಿಸುವ ಸಾಮಾಜಿಕ ಪರಿಸರದ ಬಗ್ಗೆ ಚರ್ಚಿಸುವ ಸಂದರ್ಭ ಬಂತು. ಸಾಮಾಜಿಕ ಪರಿಸರದ ಚರ್ಚೆ ಅನಿವಾರ್ಯವಾಗಿ ಜಾತಿಗಳ ಇರುವಿಕೆ ಮತ್ತು ಅವುಗಳು ಹೇಗೆ ಸದಸ್ಯರ ನಿರ್ವಹಣೆಯನ್ನು ಪ್ರಭಾವಿಸುತ್ತದೆ ಎನ್ನುವುದರತ್ತ ಸಾಗಿತು. ಚರ್ಚೆಯನ್ನು ಆರಂಭಿಸುವಾಗ ಸದಸ್ಯರೊಂದಿಗಿದ್ದ ಶಾಲಾ ಮುಖ್ಯೋಪಧ್ಯಾಯರು ಹಳ್ಳಿಯಲ್ಲಿ ಜಾತಿ ಸಮಸ್ಯೆ ಏನೇನು ಇಲ್ಲ. ಹಾಗೆ ನೋಡಿದರೆ ಇಂದು ಸರಕಾರವೇ ಜಾತಿ ವ್ಯವಸ್ಥೆಯನ್ನು ಜೀವಂತ ಇಡಲು ಕಾರಣ ಎಂದು ಶಾಲೆಯಲ್ಲಿ ನೀಡುವ ಕೆಲವೊಂದು ಸವಲತ್ತುಗಳ ಉದಾಹರಣೆ ನೀಡಿದರು. ಅವರ ಪ್ರಕಾರ ಸರಕಾರ ಇಂದು ಕೆಲವೊಂದು ಸವಲತ್ತುಗಳನ್ನು ಬಡ ವಿದ್ಯಾರ್ಥಿಗಳನ್ನು ಶಾಲೆಯತ್ತ ಆಕರ್ಷಿಸಲು ನೀಡುತ್ತಿದೆ. ಅವುಗಳಲ್ಲಿ ಕೆಲವನ್ನು ಜಾತಿ ಆಧಾರದಲ್ಲಿ ನೀಡಲಾಗುತ್ತಿದೆ. ಅಂದರೆ ಕೇವಲ ಹರಿಜನ ಗಿರಿಜನ ಮಕ್ಕಳಿಗೆ ಮಾತ್ರ ನೀಡಲಾಗುತ್ತಿದೆ. ಇದು ಸಹಜವಾಗಿಯೇ ಉಳಿದ ಮಕ್ಕಳಲ್ಲಿ ಕುತೂಹಲ ಮತ್ತು ಒಂದು ಬಗೆಯ ಅಸಹನೆಗೂ ಕಾರಣವಾಗುತ್ತದೆ ಎನ್ನುವುದು ಟೀಚರ್‌ಗಳ ವಾದ. ಜತೆಗೆ ಮಕ್ಕಳಲ್ಲಿ ಜಾತಿ ಪ್ರಜ್ಞೆಯನ್ನು ಬೆಳೆಸಲು ಕಾರಣವಾಗುತ್ತದೆ ಎನ್ನುವ ತೀರ್ಮಾನವನ್ನು ನೀಡಿದರು. ಒಬ್ಬರು ಈ ರೀತಿ ವಾದ ಮುಂಡಿಸಿದ ಕೂಡಲೇ ಉಳಿದ ಸದಸ್ಯರು ಕೂಡ ಇದೇ ವಾದವನ್ನು ಮುಂದಿಡಲು ಆರಂಭಿಸಿದರು. ಜಾತಿ ನಮ್ಮ ಸಮಾಜದ ಸೃಷ್ಟಿ ಅಲ್ಲ ಅಥವಾ ಊರು ಸೃಷ್ಟಿಸಿದ ಸಮಸ್ಯೆ ಅಲ್ಲ; ಸರಕಾರ ಸೃಷ್ಟಿಸಿದ ಸಮಸ್ಯೆ ಎನ್ನುವ ಒಂದು ಸರ್ವ ಸಮ್ಮತ ಅಭಿಪ್ರಾಯ ಸಭೆಯಲ್ಲಿ ಹೊಮ್ಮಿತು. ಜಾತಿ ಇದೆ ಮತ್ತು ಅದರಿಂದ ಸಮಸ್ಯೆಯೂ ಇದೆ. ಆದರೆ ಅಲ್ಲಿ ಸೇರಿದವರು ಅದನ್ನು ಒಪ್ಪಲು ರೆಡಿ ಇಲ್ಲ. ಅಂದರೆ ಜಾತಿಯ ಇರುವಿಕೆಯನ್ನು ಅಲ್ಲಗಳೆಯುವುದರಿಂದ ಅದರಿಂದ ಉಂಟಾಗುವ ಸಮಸ್ಯೆಗಳು ಸಮಸ್ಯೆಗಳಾಗುವುದಿಲ್ಲ. ಒಂದು ವಿಷಯ ಸಮಸ್ಯೆ ಆಗದಿದ್ದರೆ ಅದರ ಪರಿಹಾರದ ಬಗ್ಗೆ ಆಲೋಚನೆ ಮಾಡುವ ಅವಶ್ಯಕತೆನು ಇರುವುದಿಲ್ಲ.

ಇಂತಹದೇ ಮತ್ತೊಂದು ಉದಾಹರಣೆ ನೀಡುತ್ತೇನೆ. ಯರೆಹಂಚಿನಾಳ ಪಂಚಾಯತ್ ಯೋಜನೆ ತಯಾರಿಸುವ ಸಂದರ್ಭದಲ್ಲಿ ಅಲ್ಲಿನ ಹೋಟೆಲುಗಳಲ್ಲಿ ಹರಿಜನರಿಗೆ ಪ್ರತ್ಯೇಕ ಸ್ಥಳ ಹಾಗೂ ಗ್ಲಾಸ್ ಇಟ್ಟಿರುವುದನ್ನು ಅಲ್ಲಿನ ಪಂಚಾಯತ್ ಸದಸ್ಯರಲ್ಲಿ ವಿಚಾರಿಸಲಾಯಿತು. ಸರಕಾರಿ ನಿಯಮ ಪ್ರಕಾರ ಈ ಕ್ರಮದ ಅಸ್ಪೃಶ್ಯತೆ ಕಾನೂನುಬಾಹಿರ, ಪಂಚಾಯತ್ ಸದಸ್ಯರಾಗಿ ನೀವು ಯಾಕೆ ಈ ಆಚರಣೆ ವಿರುದ್ಧ ಕ್ರಮ ಕೈಗೊಂಡಿಲ್ಲ ಎಂದು ಕೇಳಲಾಯಿತು. ಅದಕ್ಕೆ ಅವರು ನೀಡಿದ ಉತ್ತರ - 'ಊರಲ್ಲಿ ಯಾರು ಕೂಡ ಈ ಕುರಿತು ನಮಗೆ ದೂರು ನೀಡಿಲ್ಲ. ದೂರು ನೀಡದಿದ್ದರೆ ನಾವು ಹೇಗೆ ಅದನ್ನೊಂದು ಸಮಸ್ಯೆ ಎಂದು ಪರಿಗಣಿಸುವುದು?' ಎಂದು ನಮ್ಮನ್ನೇ ಕೇಳಿದರು. ಅಷ್ಟು ಮಾತ್ರವಲ್ಲ ಹೋಟೇಲುಗಳಲ್ಲಿ ಪ್ರತ್ಯೇಕ ಸ್ಥಾನ ಮತ್ತು ಗ್ಲಾಸ್ ತೊಳೆದಿಡುವುದು ಹರಿಜನರ ಹಿರಿಯ ತಲೆಮಾರಿನವರಿಗೆ

ಸಮಸ್ಯೆ ಆಗಿಲ್ಲ. ಅವರ ಪ್ರಕಾರ ಇದೇನು ಹೊಸ ಆಚರಣೆ ಅಲ್ಲ. ಶತಮಾನಗಳಿಂದ ಅಥವಾ ಅವರಿಗೆ ತಿಳುವಳಿಕೆ ಬರುವಲ್ಲಿಂದ ಈ ಕ್ರಮ ಇದೆ. ಈ ಕ್ರಮ (ಪ್ರತ್ಯೇಕತೆ) ಕೇವಲ ಅವರ ಹಳ್ಳಿಯ ವಿಶೇಷ ಅಲ್ಲ. ಎಲ್ಲ ಹಳ್ಳಿಗಳಲ್ಲೂ ಇದೇ ಕ್ರಮ ಇರುವುದು. ಆದುದರಿಂದ ಅದನ್ನು ಒಂದು ಸಮಸ್ಯೆ ಎಂದು ತಿಳಿಯುವ ಅಗತ್ಯ ಇಲ್ಲ ಎನ್ನುವ ತಾತ್ಪರ್ಯ ಅವರ ಮಾತಲ್ಲಿತ್ತು. ಆದರೆ ಅದೇ ಹಳ್ಳಿಯ ಕಿರಿಯರಿಗೆ (ಪೇಟೆಗೆ ಹೋಗಿ ಓದು ಬರಹ ಕಲಿತವರಿಗೆ) ಇದೊಂದು ದೊಡ್ಡ ಸಮಸ್ಯೆ ಆಗಿದೆ. ಹಲವಾರು ಬಾರಿ ಈ ಸಮಸ್ಯೆ ವಿರುದ್ಧ ಪ್ರತಿಭಟಿಸಲು ತಮ್ಮ ಹಿರಿಯರ ಮನವೊಲಿಸಲು ಪ್ರಯತ್ನಿಸಿದ್ದಾರೆ. ಆದರೆ ತಮ್ಮ ಪ್ರಯತ್ನದಲ್ಲಿ ಯಶಸ್ಸು ಕಂಡಿಲ್ಲ. ಹಾಗೆಂದು ಅವರು ಸುಮ್ಮನೆ ಕುಳಿತಿಲ್ಲ. ಮದುವೆ, ಮುಂಜಿ ಇತ್ಯಾದಿ ಆಚರಣೆಗಳ ಸಂದರ್ಭದಲ್ಲಿ ಹಳ್ಳಿಯ ಹೊರಗಿನಿಂದ ಬರುವ ತಮ್ಮ ಸಂಬಂಧಿಕರು ಮತ್ತು ಸ್ನೇಹಿತರ ಬೆಂಬಲದಿಂದ ಈ ಕ್ರಮದ ವಿರುದ್ಧ ಪ್ರತಿಭಟಿಸುವ ಪ್ರಯತ್ನವನ್ನೂ ಮಾಡಿದ್ದಾರೆ. ಆದರೆ ಇವರ ಪ್ರತಿಭಟನೆಯ ವಿಚಾರ ಹೇಗೋ (ಕೆಲವರ ಪ್ರಕಾರ ಅವರ ಹಿರಿಯರೆ ಊರ ಪ್ರಮುಖರಿಗೆ ತಿಳಿಸುತ್ತಾರೆ) ಊರವರಿಗೆ ತಿಳಿಯುತ್ತದೆ ಮತ್ತು ಅಂದು ಊರ ಹೋಟೇಲುಗಳೆಲ್ಲ ಬಂದ್ ಆಗುತ್ತವೆ. ಹೀಗೆ ಅವರ ಪ್ರತಿಭಟನೆ ಯಶಸ್ಸು ಕಂಡಿಲ್ಲ.[೨] ಹರಿಜನ ಯುವಕರಿಗೆ ಹಳ್ಳಿಯಿಂದ ಹೊರಗಿನ ಸಂಪರ್ಕ ಮತ್ತು ಓದು ಹೊಸ ಲೋಕವೊಂದನ್ನು ಪರಿಚಯಿಸಿದೆ. ಆ ಲೋಕದೊಂದಿಗೆ ತಮ್ಮ ಹಳ್ಳಿಯನ್ನು ಹೋಲಿಸಿ ನೋಡಿದಾಗ ಹಲವಾರು ಸಮಸ್ಯೆಗಳು ಅವರ ಗಮನಕ್ಕೆ ಬಂದಿದೆ. ಆದುದರಿಂದ ಅವುಗಳನ್ನು ಪರಿಹರಿಸುವ ಪ್ರಯತ್ನ ಮಾಡಿದ್ದಾರೆ. ಹೀಗೆ ಸಮಸ್ಯೀಕರಿಸುವುದು ಎಷ್ಟು ಮುಖ್ಯ ಎಂದು ನಮಗೆ ಅರ್ಥವಾದೀತು. ಮೇಲಿನ ಎಲ್ಲ ಸಂದರ್ಭಗಳಲ್ಲೂ ಮನುಷ್ಯ ಮನುಷ್ಯರ ನಡುವೆ ಇರುವ ಕಂದರಗಳು ಸಮಸ್ಯೆ ಆಗಲಿಲ್ಲ. ಹಲವಾರು ಶತಮಾನಗಳಿಂದ ಅವುಗಳನ್ನು ಮಾಡುತ್ತ ಬಂದಿರುವುದರಿಂದ ಕೆಲವೊಂದು ವಿಚಾರಗಳು ನಮಗೆ ಪ್ರಕೃತಿ ನಿಯಮದಷ್ಟೇ ಸಹಜ ಆಗಿದೆ. ಸಹಜ ಆಗಿರುವುದರಿಂದ ಅದರ ಬಗ್ಗೆ ವಿಶೇಷ ತಲೆಕಡಿಸಿಕೊಳ್ಳುವ ಅವಶ್ಯಕತೆಯಾದರೂ ಏನಿದೆ?

ಇದು ಕೇವಲ ಉತ್ತರ ಕರ್ನಾಟಕದ ಗ್ರಾಮೀಣ ಜನರಿಗೆ ಮಾತ್ರ ಅನ್ವಯವಾಗುತ್ತದೆ ಎಂದು ತಿಳಿಯಬಾರದು. ಕರ್ನಾಟಕದಲ್ಲೇ ತುಂಬಾ ಬುದ್ಧಿವಂತರ ನಾಡೆಂದು ಖ್ಯಾತಿ ಪಡೆದಿರುವ ದಕ್ಷಿಣ ಕನ್ನಡದಲ್ಲಿ ಹೇಗೆ ಹಲವಾರು ವಿಚಾರಗಳನ್ನು ಪ್ರಶ್ನಿಸಿದೆ ಮುಂದು ವರಿಸುತ್ತಿರುವ ಮತ್ತೊಂದು ಉದಾಹರಣೆ ಕೊಡುತ್ತೇನೆ. ದಕ್ಷಿಣ ಕನ್ನಡದಲ್ಲಿ ಜನಪ್ರಿಯ ಮಾಧ್ಯಮಗಳಲ್ಲಿ ಬರೆಯುವ ಮತ್ತು ಭಾಷಣ ಮಾಡುವ ವಿದ್ವಾಂಸರು ಬಹುತೇಕ ಸಂದರ್ಭಗಳಲ್ಲಿ ಒಂದು ವಾಕ್ಯವನ್ನು ಉಚ್ಚರಿಸಿಯೇ ತಮ್ಮ ಭಾಷಣ ಅಥವಾ ಬರಹವನ್ನು ಆರಂಭಿಸುತ್ತಾರೆ. 'ಪರಶುರಾಮ ಸೃಷ್ಟಿಯಾದ ಈ ನಾಡಲ್ಲಿ' ಎಂದು ಬಹುತೇಕ ವಿದ್ವಾಂಸರು ಹೇಳಿಯೇ ಮುಂದುವರಿಯುತ್ತಾರೆ. ಆ ರೀತಿ ಹೇಳುವವರು ಯರು ಕೂಡ ಈ ವಾಕ್ಯದಲ್ಲಿ ಅಡಗಿರುವ ಸತ್ಯ ಮತ್ತು ಸಮಸ್ಯೆ ಬಗ್ಗೆ ವಿಶೇಷ ಆಲೋಚನೆ ಮಾಡಿದಂತಿಲ್ಲ. ಪರಶುರಾಮ

ಸೃಷ್ಟಿಯ ಈ ಕಥನ ಯಾವಾಗ? ಯಾಕೆ ಹುಟ್ಟಿಕೊಂಡಿತು? ಶತಮಾನಗಳಿಂದ ಸತತವಾಗಿ ಹೇಳುತ್ತಾ ಬಂದಿರುವುದರಿಂದ ಅದು ಇಂದು ಸಾರ್ವತ್ರಿಕ ಸತ್ಯದ ರೂಪದಲ್ಲಿ ಜನ ಸಾಮಾನ್ಯರ ಪ್ರಜ್ಞೆಯ ಭಾಗವಾಗಿದೆ. ಜನ ಸಾಮಾನ್ಯರ ಪ್ರಜ್ಞೆಯ ಭಾಗವಾಗಿರುವ ಇಂತಹ ಪ್ರಶ್ನೆಗಳನ್ನು ಕೆದಕದೇ ಒಪ್ಪಿಕೊಂಡಿರುವುದು ಆ ಹೇಳಿಕೆಯ ಮುಂದುವರಿಕೆಗೆ ಕಾರಣ ಆಗಿರಬಹುದು. ಪರಶುರಾಮ ಸೃಷ್ಟಿ ಎನ್ನುವುದು ಒಂದು ಪುರಾಣ ಅಥವಾ ಐತಿಹ್ಯ ಅಥವಾ ಕಟ್ಟುಕತೆಯಾಗಿರಬಹುದು. ದಕ್ಷಿಣ ಕನ್ನಡದ ಚರಿತ್ರೆಯ ಪ್ರಕಾರ ಬ್ರಾಹ್ಮಣರು ದಕ್ಷಿಣ ಕನ್ನಡದ ಮೂಲ ನಿವಾಸಿಗಳಲ್ಲ. ಸುಮಾರು ಐದನೇ ಶತಮಾನದಲ್ಲಿ ಮಯೂರವರ್ಮನ ಕಾಲದಲ್ಲಿ ಉತ್ತರ ರಾಜ್ಯಗಳಿಂದ ವಲಸೆ ಬಂದವರು ಅಥವಾ ರಾಜನೇ ತಂದು ಕೆಲವೊಂದು ಗ್ರಾಮಗಳನ್ನು ದತ್ತಿ ನೀಡಿ ಇರಿಸಿದವರು. ಅಂದರೆ ಇದೊಂದು ರೀತಿ ಭಾರತದಲ್ಲಿ ಆರ್ಯರು ಮತ್ತು ದ್ರಾವಿಡರ ಪ್ರಶ್ನೆ ಇದ್ದಂತೆ. ಆರ್ಯರು ಹೊರಗಿನಿಂದ ಬಂದವರು ಮತ್ತು ದ್ರಾವಿಡರು ಇಲ್ಲಿನ ಮೂಲ ನಿವಾಸಿಗಳು ಎನ್ನುವ ವಾದ ಇದ್ದಂತೆ. ಈ ವಾದವನ್ನು ಸಮಸ್ಯೀಕರಿಸುವ ನಿಟ್ಟಿನಲ್ಲಿ ಆರ್ಯರು ಹೊರಗಿನಿಂದ ಬಂದವರಲ್ಲ ಇಲ್ಲಿನ ಮೂಲ ನಿವಾಸಿಗಳೇ ಎನ್ನುವ ವಾದಗಳು ಇವೆ. ಈ ಚರ್ಚೆ ಇಲ್ಲಿ ಪ್ರಸ್ತುತವಲ್ಲ. ದಕ್ಷಿಣ ಕನ್ನಡ ಮಾತೃ ಪ್ರಧಾನ ವ್ಯವಸ್ಥೆ ಇರುವ ಒಂದು ಪ್ರದೇಶ. ಅಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿದರೆ ಉಳಿದೆಲ್ಲ ಜನರು ಮಾತೃ ಪ್ರಧಾನ ಮೂಲದವರು. ಹೆಚ್ಚು ಕಡಿಮೆ ಶೇಕಡಾ ತೊಂಬತ್ತರಷ್ಟು ಜನ ಅಲ್ಲಿ ಮಾತೃ ಪ್ರಧಾನ ವ್ಯವಸ್ಥೆಯಲ್ಲಿ ಇರುವವರು. ಇಂತಹ ಪ್ರದೇಶದಲ್ಲಿ ಸಹಜವಾಗಿಯೇ ಬ್ರಾಹ್ಮಣರು ದಕ್ಷಿಣ ಕನ್ನಡದವರಲ್ಲ ಎನ್ನುವ ತಿಳುವಳಿಕೆ ಜನ ಸಾಮಾನ್ಯರ ಪ್ರಜ್ಞೆ ಆಗುವುದು ಕಷ್ಟವಾಗಲಿಲ್ಲ. ಇಂತಹ ಒಂದು ಪ್ರಜ್ಞೆಯನ್ನು ಅಳಿಸಿ ಅಲ್ಲಿ ಮತ್ತೊಂದು ಸತ್ಯವನ್ನು ಸ್ಥಾಪಿಸುವ ಉದ್ದೇಶದಿಂದ ಪರಶುರಾಮ ಸೃಷ್ಟಿ ಸೃಷ್ಟಿಯಾಗಿದೆ. ಈ ಕಥನ ಪ್ರಕಾರ ದಕ್ಷಿಣ ಕನ್ನಡ ಎನ್ನುವ ಭೂ ಪ್ರದೇಶವೇ ಇರಲಿಲ್ಲ. ಪರಶುರಾಮ ತನ್ನ ಕೊಡಲಿಯನ್ನು ಬೀಸಿ ಸಮುದ್ರಕ್ಕೆ ಎಸೆಯುತ್ತಾನೆ. ಆ ಕೊಡಲಿ ಬಿದ್ದ ಜಾಗದಿಂದ ಇತ್ತ ಕಡೆಗೆ ಸಮುದ್ರದ ನೀರು ಖಾಲಿಯಾಗಿ ಭೂಮಿ ಸೃಷ್ಟಿಯಾಗುತ್ತದೆ. ಆ ಭೂಮಿಯನ್ನು ಆತ ಬ್ರಾಹ್ಮಣರಿಗೆ ದಾನವಾಗಿ ಕೊಡುತ್ತಾನೆ. ಹೀಗೆ ಒಂದು ಕಥನ ಬ್ರಾಹ್ಮಣರ ವಲಸೆ ಸ್ಥಿತಿಯನ್ನು ಬದಲಾಯಿಸಿ ಅವರನ್ನು ದಕ್ಷಿಣ ಕನ್ನಡದ ಮೂಲ ನಿವಾಸಿಗಳನ್ನಾಗಿಸುತ್ತದೆ. ಅಷ್ಟು ಮಾತ್ರವಲ್ಲ, ಇಷ್ಟರವರೆಗೆ ತಾವೇ ಮೂಲ ನಿವಾಸಿಗಳೆಂದು ವಿಶ್ವಾಸದಿಂದ ಇದ್ದವರು ಪರಶುರಾಮನ ನಾಡಿನಲ್ಲಿ ಅಥವಾ ಬ್ರಾಹ್ಮಣರಿಗಾಗಿ ಸೃಷ್ಟಿಸಿದ ನಾಡಲ್ಲಿ ವಲಸಿಗರಾಗಬೇಕಾಗಿದೆ. ಈ ಕಥನವನ್ನು ಸಮಸ್ಯೀಕರಿಸದೇ ಒಪ್ಪಿಕೊಂಡರೆ ಆಗುವ ಅನಾಹುತ ಏನೆಂದು ತಿಳಿಯಬಹುದು.

ಕೊಡಗಿನ ಮತ್ತೊಂದು ಉದಾಹರಣೆ ನೋಡುವ. ಕಳೆದ ಕೆಲವು ವರ್ಷಗಳಲ್ಲಿ ಪ್ರತ್ಯೇಕ ಕೊಡಗಿನ ಬೇಡಿಕೆ ಬಲಗೊಳ್ಳುತ್ತಿದೆ. ಚಳವಳಿಯ ಆರಂಭದ ದಿನಗಳಲ್ಲಿ ಕುಂಠಿತ ಅಭಿವೃದ್ಧಿಯ ಕಾರಣಕ್ಕಾಗಿ ಪ್ರತ್ಯೇಕ ರಾಜ್ಯದ ಬೇಡಿಕೆ ಮುಂದಿಡಲಾಗಿತ್ತು. ಆದರೆ

ಬರಬರುತ್ತಾ ಪ್ರತ್ಯೇಕತೆಯನ್ನು ಕೇಳುವ ಕಾರಣಗಳು ಬದಲಾಗುತ್ತಾ ಬಂದವು. ಅಲ್ಲೂ ಮೂಲನಿವಾಸಿಗರು ಮತ್ತು ವಲಸಿಗರ ಪ್ರತ್ಯೇಕತೆಯ ಪ್ರಶ್ನೆಗಳು ಮುಂದಕ್ಕೆ ಬಂದವು. ಆ ಚರ್ಚೆಯ ಪ್ರಕಾರ ಕೊಡಗಿನಲ್ಲಿ ಕೊಡವರು ಅಲ್ಲಿನ ಮೂಲನಿವಾಸಿಗರು. ಉಳಿದ ವರು ಬೇರೆ ಕಡೆಯಿಂದ ಬಂದು ಅಲ್ಲಿ ವಾಸಿಸುವವರು ಅಥವಾ ವಲಸಿಗರು. ಕೊಡಗು ಕೊಡವರದ್ದು ಮತ್ತು ಕೊಡವರು ಒಂದು ಪ್ರತ್ಯೇಕ ಸಮುದಾಯವಾಗಿದೆ. ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪ್ರತ್ಯೇಕ ರಾಜ್ಯದ ಅವಶ್ಯಕತೆ ಇದೆ ಎನ್ನುವ ವಾದಗಳು ಹುಟ್ಟಿಕೊಂಡವು. ಅಲ್ಲಿನ ಬಹುತೇಕ ಕೊಡವರಲ್ಲದವರ ಪ್ರಕಾರ ಕೊಡವರ ಈ ವಾದ ವಿಶೇಷ ಅಲ್ಲ. ಕೊಡಗಿನಲ್ಲಿ ಕೊಡವರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ ಆದುದರಿಂದ ಅವರೇ ಕೊಡಗಿನ ನಿಜವಾದ ಹಕ್ಕುದಾರರು ಎಂದು ಹೇಳುವ ಅಗತ್ಯವೇ ಇಲ್ಲ. ಅದು ಸೂರ್ಯ ಚಂದ್ರರಷ್ಟೇ ಸತ್ಯ. ಅದನ್ನು ಪ್ರಶ್ನಿಸುವ ಅಥವಾ ಸಮಸ್ಯೀಕರಿಸುವ ಅಗತ್ಯ ಏನಿದೆ? ಅವರು ಅಲ್ಲಿನ ಮೂಲ ನಿವಾಸಿಗಳು. ಆದುದರಿಂದ ಅವರಿಗೆ ಆ ನೆಲದ ಮೇಲೆ ಇತರರಿಗಿಂತ ಹೆಚ್ಚಿನ ಹಕ್ಕು ಇದೆ ಎನ್ನುವುದು ಅಲ್ಲಿನ ಜನ ಸಾಮಾನ್ಯರ ಕಲ್ಪನೆ. ಅದನ್ನು ಪ್ರಶ್ನಿಸುವ ಕೆಲಸವನ್ನು ಕೆಲವು ವಿದ್ವಾಂಸರು ಮಾಡಿದ್ದಾರೆ.[೬] ಕೊಡಗರು ಮಾತ್ರ ಕೊಡಗಿನ ಮೂಲನಿವಾಸಿಗಳೇ? ಇತರ ಜಾತಿ ಜನರು ಅಲ್ಲಿನ ಮೂಲ ನಿವಾಸಿಗಳಲ್ಲವೇ? ತಾವು ಮಾತ್ರ ಅಲ್ಲಿನ ಮೂಲ ನಿವಾಸಿಗಳೆಂದು ಕೊಡವರು ಘೋಷಣೆ ಮಾಡಿ ಕೊಡಗಿನ ಪ್ರತ್ಯೇಕತೆಯನ್ನು ಬಯಸಿದರೆ ಉಳಿದ ಸಮುದಾಯಗಳ ಸ್ಥಿತಿ ಏನಾಗುತ್ತದೆ? ಇತ್ಯಾದಿ ಪ್ರಶ್ನೆಗಳು ಹುಟ್ಟಿಕೊಳ್ಳುವುದೇ ಕೊಡಗರ ಮೂಲ ನಿವಾಸಿ ವಾದವನ್ನು ಸಮಸ್ಯೀಕರಿಸುವುದರಿಂದ. ಹೀಗೆ ಸಮಸ್ಯೀಕರಿಸುವುದು ಹಲವಾರು ಸ್ಥಾಪಿತ ಸತ್ಯಗಳನ್ನು (ರಚಿತ ಅಥವಾ ಕಟ್ಟಿಕೊಂಡ ಸತ್ಯಗಳನ್ನು) ಪ್ರಶ್ನಿಸಲು ಅಗತ್ಯ. ಈ ಸ್ಥಾಪಿತ ಅಥವಾ ರಚಿತ ಸತ್ಯಗಳು ಸಮುದಾಯಗಳನ್ನು ಒಂದು ವಿಧದ ಏಣಿ ಶ್ರೇಣಿಯೊಳಗಿಡಲು ಮಾನದಂಡವಾಗಿ ಕೆಲಸ ಮಾಡುತ್ತವೆ. ಕೆಲವನ್ನು ಮೇಲೆ ಮತ್ತೆ ಕೆಲವನ್ನು ಮಧ್ಯ ಭಾಗದಲ್ಲಿ ಮತ್ತು ಕೆಲವನ್ನು ಪಿರಾಮಿಡ್‌ನ ಕೆಲಭಾಗದಲ್ಲಿ ಫಿಕ್ಸ್ ಮಾಡುವ ಕೆಲಸವನ್ನು ಈ ರಚಿತ ಸತ್ಯಗಳು ಮಾಡುತ್ತವೆ. ಈ ರಚಿತ ಸತ್ಯಗಳು ಮನುಷ್ಯ ಮನುಷ್ಯರ ಮಧ್ಯ ಕಂದಕಗಳನ್ನು ಸೃಷ್ಟಿಸಿವೆ. ಹಲವಾರು ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳ ಮೂಲಕ ಈ ಕಂದರಗಳು ಮನುಷ್ಯನ ದಿನ ನಿತ್ಯದ ಬದುಕಿನಲ್ಲಿ ಕೆಲಸ ಮಾಡುತ್ತವೆ.

ಈ ಬಗೆಯ ಕಲ್ಪಿತ ಅಥವಾ ರಚಿತ ಸತ್ಯಗಳು ಕೇವಲ ಸಾಮಾಜಿಕ ಅಥವಾ ಸಾಂಸ್ಕೃತಿಕ ಲೋಕಕ್ಕೆ ಸೀಮಿತಗೊಳ್ಳುತ್ತಿದ್ದರೆ ಸಮಸ್ಯೆ ಇಲ್ಲ. ಆದರೆ ಅವುಗಳು ತಮ್ಮ ಪ್ರಭಾವವನ್ನು ರಾಜಕೀಯ ಹಾಗೂ ಆರ್ಥಿಕ ಲೋಕಕ್ಕೂ ವಿಸ್ತರಿಸುತ್ತವೆ. ಇದು ಹೇಗೆಂದು ಮುಂದೆ ವಿವರಿಸಲಾಗಿದೆ. ನಮ್ಮ ಸುತ್ತಮುತ್ತ ದಿನ ನಿತ್ಯ ಆಚರಣೆಯಲ್ಲಿರುವ ಕೆಲವೊಂದು ಸಂಗತಿಗಳನ್ನು ಗಮನಿಸುವ. ಕರ್ನಾಟಕ ಸರಕಾರ ಇತ್ತೀಚಿನ ದಿನಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮವನ್ನು ಆರಂಭಿಸಿದೆ. ಈ ಕಾರ್ಯಕ್ರಮದ

ಮುಖ್ಯ ಉದ್ದೇಶ ಬಡತನದ ಕಾರಣಕ್ಕೆ ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡುವುದು. ಈ ಬಿಸಿಯೂಟ ಕಾರ್ಯಕ್ರಮ ಪ್ರಕಾರ ಶಾಲೆಯಲ್ಲಿ ಮಧ್ಯಾಹ್ನದ ಊಟವನ್ನು ಸಿದ್ದಪಡಿಸಿ ಮಕ್ಕಳಿಗೆ ನೀಡಬೇಕು. ಊಟ ಸಿದ್ಧಪಡಿಸಲು ಸ್ಥಳೀಯ ಹೆಂಗಸರನ್ನು ನೇಮಕ ಮಾಡಿಕೊಳ್ಳಲಾಯಿತು. ಹಾಗೆ ನೇಮಕಮಾಡುವಾಗ ಕೆಲವು ಹಳ್ಳಿಗಳಲ್ಲಿ ಹರಿಜನ ಮಹಿಳೆಯರನ್ನು ಅಡುಗೆ ಕೆಲಸಕ್ಕೆ ನೇಮಕ ಮಾಡಿಕೊಂಡರು. ಹರಿಜನ ಹೆಂಗಸರು ಅಡುಗೆ ಕೆಲಸಕ್ಕೆ ಸೇರಿಕೊಂಡ ಕೆಲವು ಶಾಲೆಗಳಲ್ಲಿ ಮೇಲ್‌ಜಾತಿಗೆ ಸೇರಿದ ಮಕ್ಕಳು ಊಟ ಮಾಡಲು ನಿರಾಕರಿಸಿದರು. ಆ ಕಾರಣಕ್ಕಾಗಿ ಹರಿಜನ ಜಾತಿ ಹೆಂಗಸರನ್ನು ಅಡುಗೆ ಕೆಲಸದಿಂದ ಬಿಡಿಸಿ ಬೇರೆ ಜಾತಿ ಹೆಂಗಸರನ್ನು ನೇಮಕ ಮಾಡಿಕೊಳ್ಳಲಾಯಿತು. ನಂತರ ಹುಡುಗರು ಊಟ ಮಾಡಿದರೋ ಬಿಟ್ಟರೋ ಎನ್ನುವ ಪ್ರಶ್ನೆಗಿಂತ ಕೇವಲ ಸಾಮಾಜಿಕ (ಜಾತಿ) ಕಾರಣಕ್ಕಾಗಿ ಕೆಲಸ ಕಳಕೊಂಡ ಹರಿಜನ ಮಹಿಳೆಯ ಸ್ಥಿತಿ ಏನಾಯಿತೆಂದು ನೋಡುವ. ಬಿಸಿಯೂಟ ಸಿದ್ಧಪಡಿಸುವ ಕೆಲಸಕ್ಕೆ ವಿಶೇಷ ಸಂಬಳ ಇರಲಿಕ್ಕಿಲ್ಲ. ಒಂದು ವೇಳೆ ತಿಂಗಳಿಗೆ ರೂ.೩೦೦ ಇದೆ ಎಂದು ತಿಳಿಯುವ. ಈ ಮುನ್ನೂರು ರೂಪಾಯಿಗಳು ಸಾವಿರಾರು ರೂಪಾಯಿ ಸಂಬಳ ಪಡೆಯುವವರಿಗೆ ಏನೂ ಅಲ್ಲ. ಆದರೆ ಉತ್ತರ ಕರ್ನಾಟಕದ ಕೆಲವು ಹಳ್ಳಿಗಳಲ್ಲಿ ತಿಂಗಳಿಗೆ ಮುನ್ನೂರು ರೂಪಾಯಿ ಬಹುದೊಡ್ಡ ಆದಾಯ. ಯಾಕೆಂದರೆ ಈ ಹಳ್ಳಿಗಳಲ್ಲಿ ಇಂದು ಕೂಡ ಕೃಷಿ ಅಥವಾ ಕೃಷಿಗೆ ಸಂಬಂಧಿಸಿದ ಇತರ ಕೆಲಸಗಳಲ್ಲಿ ದುಡಿಯುವವರಿಗೆ ದಿನಕ್ಕೆ ಹತ್ತರಿಂದ ಹದಿನೈದು ರೂಪಾಯಿ ಸಂಬಳ ಸಿಗುವುದು ಕಷ್ಟ. ಇಂತಹ ಸಂದರ್ಭದಲ್ಲಿ ದಿನನಿತ್ಯ ಹತ್ತು ರೂಪಾಯಿ ಸಂಬಳ ಸಿಗುವ ಬಿಸಿಯೂಟದ ಅಡುಗೆ ಕೆಲಸ ಬಹುದೊಡ್ಡ ಆದಾಯದ ಮೂಲ. ಈ ಆದಾಯ ಪಡೆದ ಮಹಿಳೆ ತನ್ನ ಹಲವಾರು ಅವಶ್ಯಕತೆಗಳನ್ನು ಪೂರೈಸಿಕೊಳ್ಳಬಹುದು. ತನ್ನ ಮಕ್ಕಳ ಶಿಕ್ಷಣ, ತನ್ನ ಅಥವಾ ತನ್ನ ಕುಟುಂಬದವರ ಆರೋಗ್ಯ ರಕ್ಷಣೆ ಇತ್ಯಾದಿಗಳಿಗೆ ಅವಳ ಸಂಬಳ ಉಪಯೋಗಕ್ಕೆ ಬರುತ್ತಿತ್ತು. ಆದರೆ ಅವಳ ಜಾತಿ ಅವಳನ್ನು ಆ ಆದಾಯದಿಂದ ತಪ್ಪಿಸಿದೆ. ಅಷ್ಟು ಮಾತ್ರವಲ್ಲ ತಪ್ಪಿದ ಆದಾಯ ಅವಳ ಇತರ ಹಲವಾರು ಬೆಳವಣಿಗೆಗಳನ್ನು (ಆರೋಗ್ಯ, ಶಿಕ್ಷಣ ಇತ್ಯಾದಿ) ಕುಂಠಿತಗೊಳಿಸಿದೆ. ಕುಂಠಿತ ಆರೋಗ್ಯ ಮತ್ತು ಶಿಕ್ಷಣ ಅವಳು ಮತ್ತು ಅವಳ ಮಕ್ಕಳು ತಮ್ಮ ಬದುಕನ್ನು ಪ್ರಭಾವಿಸುವ ನಿರ್ಧಾರಗಳಲ್ಲಿ ಪಾಲುಗೊಳ್ಳುವ ಸಾಧ್ಯತೆಗಳಿಂದ ದೂರ ಇಡುತ್ತದೆ. ಅಷ್ಟುಮಾತ್ರವಲ್ಲ ಅವಳ ಮತ್ತು ಮಕ್ಕಳ ಮುಂದಿನ ಬೆಳವಣಿಗೆಗಳನ್ನು ಕಾಡುತ್ತವೆ. ಹೀಗೆ ಇದೊಂದು ಬಗೆಯ ವಿಷವರ್ತುಲ ಇದ್ದಂತೆ. ಈ ವಿಷವರ್ತುಲದಿಂದ ಬಿಡುಗಡೆ ಪಡೆಯಬೇಕಾದರೆ ಅವಳ ಬದುಕುವ ಅವಕಾಶಗಳನ್ನು ವಂಚಿಸಿದ ಕಲ್ಪಿತ ಅಥವಾ ರಚಿತ ಸಾಮಾಜಿಕ ಮೌಲ್ಯಗಳು ಬದಲಾಗಬೇಕು.

ಮೇಲಿನ ಉದಾಹರಣೆ ಜಾತಿ ಎನ್ನುವ ಸಾಮಾಜಿಕ ಮೌಲ್ಯ ಕೆಳಜಾತಿಗೆ ಸೇರಿದ ಮಹಿಳೆಯ ಬದುಕನ್ನು ಹೇಗೆ ಕಾಡುತ್ತದೆ ಎಂದು ವಿವರಿಸುತ್ತದೆ. ಇಂತಹ ಮೌಲ್ಯಗಳು ಒಂದು ದೇಶದ ರಾಜಕಾರಣವನ್ನೇ ಪ್ರಭಾವಿಸಿದರೆ ಏನಾದೀತು? ಉದಾಹರಣೆಗೆ ಭಾರತದಲ್ಲಿ

ಇತ್ತೀಚಿನ ದಿನಗಳಲ್ಲಿ ಬಲಗೊಳ್ಳುತ್ತಿರುವ ಹಿಂದುತ್ವ. ಹಿಂದುತ್ವ ನಮ್ಮ ರಾಷ್ಟ್ರೀಯತೆಯನ್ನು ಹಿಂದೂ ಧರ್ಮದ ದೃಷ್ಟಿಯಿಂದ ವ್ಯಾಖ್ಯಾನಿಸಲು ಪ್ರಯತ್ನಿಸುತ್ತದೆ. ಇದು ಮೂಲತಃ ಹಿಂದೂಗಳಿಗೆ ಸೇರಿದ ದೇಶ. ಆದುದರಿಂದ ಇಲ್ಲಿನ ಪ್ರಜೆಗಳು ಹಿಂದೂಗಳಾಗಿರಬೇಕು. ಒಂದು ವೇಳೆ ಹಿಂದೂಗಳಲ್ಲದಿದ್ದರೆ ಹಿಂದೂಗಳ ಧಾರ್ಮಿಕ ಮೌಲ್ಯಗಳನ್ನು ಒಪ್ಪಿಕೊಂಡು ಎರಡನೇ ದರ್ಜೆ ಪ್ರಜೆಗಳ ಸ್ಥಾನಮಾನದಲ್ಲಿ ಬದುಕಲು ಪ್ರಯತ್ನಿಸಬೇಕು. ಇಂತಹ ಒಂದು ತಾತ್ವಿಕ ಹಿನ್ನೆಲೆ ಇರುವ ಪಕ್ಷ ಅಧಿಕಾರಕ್ಕೆ ಬಂದರೆ ಏನಾಗುತ್ತದೆ? ಸಹಜವಾಗಿಯೇ ಪಕ್ಷ ವ್ಯಾಖ್ಯಾನಿಸಿಕೊಂಡ ಹಿಂದುತ್ವದ ಬೆಳವಣಿಗೆಗೆ ಅದು ಪ್ರಯತ್ನಿಸುತ್ತದೆ. ಆ ರೀತಿ ಮಾಡುವುದರಿಂದ ಎರಡು ರೀತಿಯ ಹಾನಿ ಆಗಬಹುದು. ಒಂದು ಹಿಂದೂ ಅಲ್ಲದವರಿಗೆ ಹಾನಿ ಎರಡು ಹಿಂದುಗಳೊಳಗೆ ಬರುವ ಹಲವಾರು ಸಮುದಾಯಗಳಿಗೆ ಆಗುವ ಹಾನಿ. ಹಿಂದು ಅಲ್ಲದವರು ಎಲ್ಲ ಕ್ಷೇತ್ರಗಳಲ್ಲೂ ಎರಡನೇ ದರ್ಜೆಯ ಬದುಕನ್ನು ಬಾಳಬೇಕು. ಸಾರ್ವಜನಿಕ ಸ್ಥಳಗಳಲ್ಲಿ ವ್ಯವಹರಿಸುವಾಗ ಅವರುಗಳು ಇತರರಿಗಿಂತ ಎರಡು ಪಟ್ಟು ಜಾಗೃತರಾಗಿರಬೇಕು. ಉದಾಹರಣೆಗೆ ಬಸ್ಸುಗಳಲ್ಲಿ ಪ್ರಯಾಣಿಸುವಾಗ ಹಿಂದೂ ಹೆಂಗಸರ ಪಕ್ಕ ಕುಳಿತುಕೊಳ್ಳುವುದು ಅಥವಾ ಹಿಂದೂ ಹೆಂಗಸಿಗೆ ತಾಗಿಕೊಂಡು ನಿಂತುಕೊಳ್ಳುವುದು ಇತ್ಯಾದಿಗಳು ಕೂಡ ಬಹು ದೊಡ್ಡ ಕೋಮು ಗಲಭೆಗೆ ಕಾರಣವಾಗಬಹುದು. ಯಾವುದೋ ಕಾರಣಕ್ಕಾಗಿ (ಭೂಮಿ ಅಥವಾ ವ್ಯಾಪಾರಕ್ಕೆ ಸಂಬಂಧಿಸಿದ) ಒಬ್ಬ ಹಿಂದು ಮತ್ತು ಮತ್ತೊಬ್ಬ ಮತೀಯನಿಗೆ ಆಗುವ ಜಗಳ ಬಹುದೊಡ್ಡ ಕೋಮು ಗಲಭೆಯಾಗಿ ಮಾರ್ಪಟ್ಟು, ಇಡೀ ಪ್ರಕರಣಕ್ಕೆ ಯಾವುದೇ ರೀತಿಯಲ್ಲೂ ಸಂಬಂಧಿಸಿದ ಇತರ ಹಲವಾರು ಮಂದಿ (ಆ ಸಮುದಾಯಕ್ಕೆ ಸೇರಿದ್ದಾರೆ ಎನ್ನುವ ಕಾರಣಕ್ಕೆ) ಸಾವು ನೋವು ಅನುಭವಿಸಬೇಕಾಗಬಹುದು.[೨೦] ಈ ಬಗೆಯ ಕೋಮು ಗಲಭೆಗಳು ಮತ್ತು ಅದರಿಂದ ಕಾಡುವ ಅರಕ್ಷಿತ ಪ್ರಜ್ಞೆ ಎಲ್ಲ ಸಂದರ್ಭಗಳಲ್ಲಿ ನಡೆಯುವಂತಹ ಸಂಗತಿಗಳಲ್ಲ ಎಂದು ತಿಳಿಯುವ. ಅದಕ್ಕಿಂತಲೂ ಹೆಚ್ಚು ಈ ಪಕ್ಷ ತಳೆಯುವ ನಿರ್ಧಾರಗಳು ಮೈನಾರಿಟಿ ಸಮುದಾಯಗಳ ಆರ್ಥಿಕ ಮತ್ತು ರಾಜಕೀಯ ಬದುಕನ್ನು ಹೇಗೆ ಪ್ರಭಾವಿಸಬಹುದು ಎನ್ನುವುದರತ್ತ ಗಮನಸರಿಸಬೇಕಾಗಿದೆ. ಶಿಕ್ಷಣ ಮತ್ತು ಇತರ ಕ್ಷೇತ್ರಗಳಲ್ಲಿ ಈ ಸಮುದಾಯಗಳು ಹಿಂದುಳಿದಿದ್ದಲ್ಲಿ ಪ್ರತ್ಯೇಕ ನೀತಿ ಮೂಲಕ ಅವುಗಳ ಅಭಿವೃದ್ಧಿಗೆ ಪ್ರಯತ್ನಿಸಬೇಕು. ಆದರೆ ಹಿಂದುತ್ವ ಎಲ್ಲರಿಗೂ ಸಮಾನ ನೀತಿಗೆ ಒತ್ತು ಕೊಡುವ ಮೂಲಕ ಇನ್ನೂ ಹೆಚ್ಚಿನ ಅಸಮಾನತೆಗೆ ಕಾರಣವಾಗಬಹುದು. ಇದು ಯಾಕೆಂದರೆ ಅಸಮಾನ ವ್ಯವಸ್ಥೆಯಲ್ಲಿ ಮೆಕಾನಿಲ್ ದೃಷ್ಟಿಯಿಂದ ಸಮಾನತೆಯನ್ನು ಊಹಿಸಿಕೊಳ್ಳುವುದು ಇನ್ನೂ ಹೆಚ್ಚಿನ ಅಸಮಾನತೆಗೆ ಕಾರಣವಾಗುತ್ತದೆ.[೨೧] ಉದಾಹರಣೆಗೆ ಎಲ್ಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವ ಮೂಲಕ ಸಮಾನತೆ ಸಾಧ್ಯವಿಲ್ಲ. ಯಾಕೆಂದರೆ ಎಲ್ಲ ವಿದ್ಯಾರ್ಥಿಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ ಒಂದೇ ಆಗಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಎಲ್ಲರಿಗೂ ಒಂದೇ ಪ್ರಮಾಣದ ಸವಲತ್ತನ್ನು

ನೀಡಿದರೆ ಈಗಾಗಲೇ ಅನುಕೂಲ ಸ್ಥಿತಿಯಲ್ಲಿದವರ ಸ್ಥಿತಿ ಇನ್ನೂ ಉತ್ತಮವಾಗುತ್ತದೆ ಮತ್ತು ಕೆಳಸ್ತರದಲ್ಲಿರುವ ಸ್ಥಿತಿ ವಿಶೇಷ ಸುಧಾರಿಸುವುದಿಲ್ಲ. ಇಂತಹ ಸಂದರ್ಭದಲ್ಲಿ ಅಸಮಾನತೆಯ ಹೋಗಲಾಡಿಸಬೇಕಾದರೆ ಅಸಮಾನ ನೀತಿ ಅನುಸರಿಸಬೇಕು. ಹೀಗೆ ಧಾರ್ಮಿಕ ಮೌಲ್ಯ ಆಧಾರಿತ ರಾಜಕೀಯ ಎಲ್ಲ ಧಾರ್ಮಿಕರನ್ನು ಸಾಮಾಜಿಕ ಅಥವಾ ಸಾಂಸ್ಕೃತಿಕವಾಗಿ ಸಮಾನಾಗಿ ಕಾಣುವುದಿಲ್ಲ. ಆದರೆ ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಮಾನತೆಯನ್ನು ಪ್ರದರ್ಶಿಸುತ್ತದೆ. ಇದು ಸಹಜವಾಗಿಯೇ ಇತರ ಧರ್ಮಿಯರನ್ನು (ಮೈನಾರಿಟಿಗಳನ್ನು) ಇನ್ನೂ ಹೆಚ್ಚಿನ ಕಷ್ಟಕ್ಕೆ ತಳ್ಳುತ್ತದೆ.

ಈ ಬಗೆಯ ರಾಜಕೀಯದಿಂದ ಹಿಂದೂಗಳ ಒಳಗೆ ಬರುವ ಹಲವಾರು ಸಮುದಾಯಗಳು ಅಥವಾ ಜಾತಿಗಳ ಸ್ಥಿತಿ ಏನಾಗುತ್ತದೆ? ಹಿಂದೂ ಎನ್ನುವ ಪರಿಕಲ್ಪನೆ ಒಂದು ಫೆಡರಲ್ ಸೆಟ್‌ಪ್ ಇದ್ದಂತೆ. ಹಲವಾರು ಜಾತಿಗಳು ಸೇರಿ ಹಿಂದುತ್ವದ ಪರಿಕಲ್ಪನೆ ರೂಪು ಪಡೆದಿದೆ. ಈ ಜಾತಿಗಳು ಒಂದು ಸಮಾನಾಂತರ ರೇಖೆಯಲ್ಲಿ ಇಲ್ಲ. ಅವುಗಳು ಪಿರಾಮಿಡ್ ಆಕೃತಿಯಲ್ಲಿ ಜೋಡಿಸಲ್ಪಟ್ಟಿವೆ. ಪಿರಾಮಿಡ್‌ನ ತುದಿಯಲ್ಲಿ ಕೆಲವೇ ಜಾತಿಗಳಿದ್ದು, ಕೆಳ ಬಂದಂತೆ ಜಾತಿಗಳ ಮತ್ತು ಅವುಗಳಲ್ಲಿ ಬರುವ ಜನರ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ. ಪಿರಾಮಿಡ್‌ನ ತುದಿಯಲ್ಲಿರುವವರು ಎಲ್ಲ ಬಗೆಯ ಅಧಿಕಾರವನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುವಾಗ ಕೆಳ ಬಂದಂತೆ ಎಲ್ಲ ಬಗೆಯ ಅಧಿಕಾರದ ಪ್ರಮಾಣ ಕಡಿಮೆ ಆಗುತ್ತಾ ಹೋಗುತ್ತದೆ. ಜಾತಿಗಳ ಈ ಬಗೆಯ ಸ್ಥಾನಮಾನವನ್ನು ಹಿಂದುತ್ವ ಪ್ರಶ್ನಿಸುವುದಿಲ್ಲ. ಹಿಂದುಗಳಲ್ಲೇ ಒಂದೇ ಎನ್ನುವ ಸ್ಲೋಗನ್‌ನಡಿಯಲ್ಲಿ ವಿವಿಧ ಜಾತಿಗಳ ನಡುವೆ ಇರುವ ಎಲ್ಲ ಬಗೆಯ ಅಸಮಾನ ಸ್ಥಿತಿಯನ್ನು ಅದು ಅಲ್ಲಗೆಳೆಯುತ್ತದೆ. ತನ್ನ ಕಾರ್ಯಕ್ರಮಗಳಲ್ಲಿ ಕೂಡ ಅದು ಹಿಂದೂಗಳ ಒಳಗಿನ ವೈರುಧ್ಯಗಳನ್ನು ಪರಿಗಣಿಸುವುದಿಲ್ಲ. ಇದರಿಂದ ಈಗಾಗಲೇ ಮೇಲ್‌ಸ್ತರದಲ್ಲಿರುವ ಸಮುದಾಯಗಳು ಹಿಂದು ಹೆಸರಲ್ಲಿ ಅತೀ ಹೆಚ್ಚಿನ ಲಾಭ ಪಡೆಯುವ ಸ್ಥಿತಿ ಮುಂದುವರಿಯುತ್ತದೆ. ಕೆಳಸ್ತರದ ಜನರು ಯಾವುದೇ ಪ್ರತ್ಯೇಕ ಸ್ಥಾನಮಾನ ಇಲ್ಲದೆ ಶತಮಾನಗಳ ತಮ್ಮ ಹೀನಸ್ಥಿತಿಯೊಂದಿಗೆ ಬದುಕುವ ಒಂದು ದುರ್ಬಲ ಸ್ಥಿತಿ ಮುಂದುವರಿಯುತ್ತದೆ. ಇದೆಲ್ಲ ಸಾಧ್ಯವಾಗುವುದು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಕಲ್ಪಿತ ಅಥವಾ ರಚಿತ ಸತ್ಯಗಳ ಕಾರಣದಿಂದ. ಆದುದರಿಂದ ಅವುಗಳನ್ನು ಪ್ರಶ್ನಿಸುವ ಅಥವಾ ಸಮಸ್ಯೀಕರಿಸುವ ಅಗತ್ಯ ಇದೆ.

ಸಮಸ್ಯೀಕರಿಸುವುದು ಹೇಗೆ?

ಇನ್ನು ಸಮಸ್ಯೀಕರಿಸುವುದು ಹೇಗೆ ಎನ್ನುವ ಪ್ರಶ್ನೆ? ಹಾಗೆ ನೋಡಿದರೆ ಸಮಸ್ಯೀಕರಿಸುವುದು ಹೇಗೆ ಎನ್ನುವ ಪ್ರಶ್ನೆಗೆ ಪ್ರತ್ಯೇಕ ಉತ್ತರ ಇಲ್ಲ. ಯಾಕೆಂದರೆ ಸಮಸ್ಯೀಕರಿಸುವುದು ಯಾಕೆ ಎನ್ನುವ ಪ್ರಶ್ನೆಗೆ ನೀಡಿದ ಉತ್ತರ ಹೇಗೆ ಎನ್ನುವ ಉತ್ತರವನ್ನು ಕೂಡ ಒಳಗೊಂಡಿದೆ. ಹಲವಾರು ಸಮಸ್ಯೆಗಳನ್ನು ಹಿಂದಿನ ಪುಟಗಳಲ್ಲಿ ನೀಡಲಾಗಿದೆ. ಅವುಗಳನ್ನು ಬಳಸಿಕೊಂಡು ಸಂಶೋಧನಾ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ.

ಸಮಸ್ಯೆ ಅಥವಾ ಸಮಸ್ಯೀಕರಿಸುವುದೆಂದರೆ ಪ್ರಶ್ನೆಗಳನ್ನು ರೂಪಿಸುವುದು ಅಥವಾ ಕೇಳುವುದೆಂದು ವ್ಯಾಖ್ಯಾನಿಸಿಕೊಂಡಿದ್ದೇವೆ. ಒಂದು ಅಥವಾ ಕೆಲವು ಮೂಲ ಪ್ರಶ್ನೆಗಳು ಮತ್ತು ಆ ಮೂಲ ಪ್ರಶ್ನೆಗಳಿಗೆ ಪೂರಕವಾಗಿರುವ ಇತರ ಪ್ರಶ್ನೆಗಳು ಸಮಸ್ಯೆಯ ಭಾಗವಾಗಿರುತ್ತವೆ. ದಕ್ಷಿಣ ಕನ್ನಡದ ಪರಶುರಾಮ ಸೃಷ್ಟಿಯ ಉದಾಹರಣೆಯೊಂದಿಗೆ ಸಮಸ್ಯೀಕರಿಸುವ ಕೆಲಸವನ್ನು ಆರಂಭಿಸುವ. ಈ ಕೆಳಗಿನ ಸಂಗತಿಗಳನ್ನು ಈ ಉದಾಹರಣೆಯಲ್ಲಿ ತುಂಬಾ ಸ್ಪಷ್ಟವಾಗಿ ಕಾಣಬಹುದು. ಒಂದು, ವಲಸಿಗರು ಮತ್ತು ಮೂಲ ನಿವಾಸಿಗರ ಪ್ರಶ್ನೆ. ಎರಡು, ವಲಸಿಗರು ಮತ್ತು ಮೂಲ ನಿವಾಸಿಗರು ರೂಪುಗೊಳ್ಳುವ ಬಗೆ. ಮೂರು, ಈ ಸ್ಥಾನಮಾನ (ವಲಸಿಗ ಮತ್ತು ಮೂಲ ನಿವಾಸಿಗ ಸ್ಥಿತಿ) ಮತ್ತು ಸಮಾಜೋ ಆರ್ಥಿಕ ಸಂಗತಿಗಳ ನಡುವೆ ಇರುವ ಸಂಬಂಧ. ಈ ಮೂರು ವಿಚಾರಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಮೂರು ಮುಖ್ಯ ಪ್ರಶ್ನೆಗಳನ್ನು ಕೇಳಬಹುದು. ಒಂದು, ವಲಸಿಗರು ಅಥವಾ ಮೂಲ ನಿವಾಸಿಗರನ್ನು ಗುರುತಿಸುವ ಮಾನದಂಡವೇನು? ಎರಡು, ವಲಸಿಗರು ಮತ್ತು ಮೂಲನಿವಾಸಿಗರು ರೂಪುಗೊಳ್ಳುವ ಬಗೆ ಏನು? ಅಥವಾ ವಲಸಿಗರು ಮತ್ತು ಮೂಲ ನಿವಾಸಿಗಳು ಚಾರಿತ್ರಿಕ ರೂಪುಗೊಳ್ಳುವಿಕೆಯೇ ಅಥವಾ ಒಂದು ಸಂಕಥನವೇ? ಮೂರು, ವಲಸಿಗರು ಮತ್ತು ಮೂಲನಿವಾಸಿಗಳ ಸ್ಥಿತಿ ಮತ್ತು ಅವರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ನಡುವೆ ಸಂಬಂಧ ಇದೆಯೇ? ಈ ಮೂರು ಮುಖ್ಯ ಪ್ರಶ್ನೆಗಳಿಗೆ ಪೂರಕವಾಗಿರುವ ಇತರ ಹಲವು ಪ್ರಶ್ನೆಗಳಿವೆ. ಒಂದನೇ ಪ್ರಶ್ನೆಗೆ ಸಂಬಂಧಿಸಿದಂತೆ ಹುಟ್ಟಿಕೊಳ್ಳುವ ಪೂರಕ ಪ್ರಶ್ನೆಗಳು ಇಂತಿವೆ. ವಲಸಿಗರು ಮತ್ತು ಮೂಲ ನಿವಾಸಿಗಳನ್ನು ಗುರುತಿಸುವ ಮಾನದಂಡ ಬೇರೆ ಬೇರೆ ಪ್ರದೇಶ ಮತ್ತು ಕಾಲದಲ್ಲಿ ಏನಾಗಿರುತ್ತದೆ. ಉದಾಹರಣೆಗೆ ದಕ್ಷಿಣ ಕನ್ನಡದ ನೆರೆಯ ಜಿಲ್ಲೆಯಾದ ಕೊಡಗಿನಲ್ಲಿ ವಲಸಿಗರು ಮತ್ತು ಮೂಲನಿವಾಸಿಗಳ ಪ್ರಶ್ನೆ ಬೇರೆಯದೇ ರೂಪದಲ್ಲಿ ಕೇಳಲ್ಪಟ್ಟಿದೆ. ಅಲ್ಲಿ ಕೊಡವರು ಅಲ್ಲಿನ ಮೂಲ ನಿವಾಸಿಗಳಾಗಿದ್ದು, ವಲಸಿಗರಿಂದ ಅವರ ಅಸ್ತಿತ್ವಕ್ಕೆ ಹಾನಿಯಾಗುತ್ತದೆ. ಆದುದರಿಂದ ಕೊಡವರನ್ನು ಕೊಡಗಿನ ಮೂಲನಿವಾಸಿಗಳೆಂದು ಘೋಷಿಸುವ ಪ್ರತ್ಯೇಕ ವ್ಯವಸ್ಥೆಯನ್ನು ಕೇಳುತ್ತಿದ್ದಾರೆ. ಅದೇ ರೀತಿಯಲ್ಲಿ ಆರ್ಯರು ಮತ್ತು ದ್ರಾವಿಡರು ಪ್ರಶ್ನೆ ಕೂಡ ಉತ್ತರ ಮತ್ತು ದಕ್ಷಿಣ ಭಾರತದ ನಡುವೆ ಅಧಿಕಾರ ಹಂಚಿಕೆಯ ಪ್ರಶ್ನೆಯನ್ನು ಎತ್ತುತ್ತಿದೆ. ಹೀಗೆ ಬೇರೆ ಬೇರೆ ಪ್ರದೇಶ ಮತ್ತು ಸಂದರ್ಭಗಳಲ್ಲಿ ವಲಸಿಗರು ಮತ್ತು ಮೂಲನಿವಾಸಿಗಳನ್ನು ಗುರುತಿಸುವ ಮಾನದಂಡಗಳು ಬೇರೆ ಬೇರೆ ಆಗಿದೆ. ಈ ಹಿನ್ನೆಲೆಯಲ್ಲಿ ಮೊದಲಿನ ಪ್ರಶ್ನೆಯೊಂದಿಗೆ ಬೇರೆ ಬೇರೆ ಕಾಲ ಮತ್ತು ಪ್ರದೇಶಗಳಲ್ಲಿ ವಲಸಿಗರು ಮತ್ತು ಮೂಲನಿವಾಸಿಗರನ್ನು ಗುರುತಿಸಲು ಇರುವ ಮಾನದಂಡಗಳೇನು ಎನ್ನುವ ಪೂರಕ ಪ್ರಶ್ನೆ ಕೇಳಬಹುದು. ಅದೇ ರೀತಿಯಲ್ಲಿ ವಲಸಿಗರು ಮತ್ತು ಮೂಲನಿವಾಸಿಗಳ ರೂಪುಗೊಳ್ಳುವಿಕೆಯಲ್ಲಿ ಚಾರಿತ್ರಿಕ ರೂಪುಗೊಳ್ಳುವಿಕೆ ಮತ್ತು ಸಂಕಥನದ ಪಾತ್ರ ಕುರಿತು ಕೆಲವೊಂದು ಪೂರಕ ಪ್ರಶ್ನೆಗಳನ್ನು ಕೇಳಬಹುದು. ವಲಸಿಗರು

ಮತ್ತು ಮೂಲನಿವಾಸಿಗರ ರೂಪುಗೊಳ್ಳುವಿಕೆಯಲ್ಲಿ ಈ ಎರಡರ ಪಾತ್ರವನ್ನು (ಚಾರಿತ್ರಿಕ ರೂಪುಗೊಳ್ಳುವಿಕೆ ಹಾಗೂ ಸಂಕಥನದ) ಹೊರತುಪಡಿಸಿದ ಸಂಗತಿಗಳಾವುವು? ಅವುಗಳನ್ನು ಗುರುತಿಸುವ ಬಗೆ ಏನು? ಇತ್ಯಾದಿ ಪ್ರಶ್ನೆಗಳು ಪೂರಕ ಪ್ರಶ್ನೆಗಳಾಗಿ ಬರಬಹುದು.

ಸಮಸ್ಯೀಕರಿಸುವ ಅಥವಾ ಪ್ರಶ್ನಿಸುವ ಕೆಲಸ ಪರಿಣಾಮಕಾರಿಯಾಗಿ ನಡೆಯಬೇಕಾದರೆ ಸಂಶೋಧನಾ ವಿಷಯದ ಕುರಿತು ನಮಗೆ ಸಾಕಷ್ಟು ಪರಿಚಯ ಇರಬೇಕು. ಪ್ರಶ್ನೆಗಳು ಹುಟ್ಟುವಲ್ಲಿ ಹಲವಾರು ಅಂಶಗಳು ಕೆಲಸ ಮಾಡುತ್ತವೆ. ಯರೆಹಂಚಿನಾಳದ ಚಾದ ಹೊಟೇಲಿನ ಉದಾಹರಣೆಯಲ್ಲಿ ಅಲ್ಲಿನ ಹಿರಿಯ ತಲೆಮಾರಿನ ಹರಿಜನರಿಗೆ ಚಾದ ಹೊಟೇಲಲ್ಲಿ ಪ್ರತ್ಯೇಕ ಕುಳಿತುಕೊಳ್ಳುವುದು ಅಥವಾ ಪ್ರತ್ಯೇಕ ಗ್ಲಾಸ್ ಇಡುವ ವಿಚಾರಗಳು ಒಂದು ಸಮಸ್ಯೆ ಆಗಿಯೇ ಇಲ್ಲ. ಆದರೆ ಅದೇ ಹಿರಿಯರ ಮಕ್ಕಳಲ್ಲಿ ಕೆಲವರಿಗೆ ಅದು ಸಮಸ್ಯೆ ಆಗಿದೆ. ಹಳ್ಳಿಯಿಂದ ಹೊರಗಿನ ಲೋಕದ ಪರಿಚಯ ಮತ್ತು ಓದು ಅವರಿಗೆ ಆ ಪದ್ಧತಿ ಸಮಸ್ಯೆ ಆಗುವಲ್ಲಿ ಬಹುದೊಡ್ಡ ಪಾತ್ರವಹಿಸಿವೆ. ಅಂದರೆ ಒಂದು ವಿಚಾರವನ್ನು ಸಮಸ್ಯೀಕರಿಸುವಲ್ಲಿ ಆ ವಿಚಾರದ ಬಗೆಗಿನ ಹೆಚ್ಚಿನ ತಿಳುವಳಿಕೆ ಮಹತ್ವದ ಪಾತ್ರವಹಿಸುತ್ತದೆ. ಅಂದರೆ ಇತರ ಪ್ರದೇಶಗಳಲ್ಲಿ ಇರುವ ಹೋಟೇಲುಗಳಲ್ಲಿ ಹರಿಜನರ ಸ್ಥಾನಮಾನದ ತಿಳುವಳಿಕೆ ಹರಿಜನರ ಕಿರಿಯರನ್ನು ತಮ್ಮ ಊರಿನ ಆಚಾರವನ್ನು ಪ್ರಶ್ನಿಸುವಂತೆ ಮಾಡಿದೆ. ಇದೇ ರೀತಿಯಲ್ಲಿ ವಲಸೆ ಮತ್ತು ಮೂಲನಿವಾಸಿಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ರೂಪಿಸಿಕೊಳ್ಳಲು ಹಲವಾರು ವಿಚಾರಗಳ ಬಗ್ಗೆ ಹೆಚ್ಚಿನ ಓದು ಅಥವಾ ತಿಳುವಳಿಕೆ ಅಗತ್ಯ. ಬೇರೆ ಬೇರೆ ಕಾಲ ಮತ್ತು ಪ್ರದೇಶಗಳಲ್ಲಿ ಮೂಲನಿವಾಸಿಗಳು ಮತ್ತು ವಲಸಿಗರ ವ್ಯಾಖ್ಯಾನ, ವಲಸಿಗರು ಮತ್ತು ಮೂಲನಿವಾಸಿಗಳು ರೂಪುಗೊಳ್ಳುವ ಸಂಕಥನ ಮತ್ತು ಚಾರಿತ್ರಿಕ ರೂಪುಗೊಳ್ಳುವಿಕೆಯ ಪಾತ್ರ, ಬೇರೆ ಬೇರೆ ಪ್ರದೇಶ ಮತ್ತು ಕಾಲಗಳಲ್ಲಿ ಈ ಸ್ಥಾನಮಾನ (ವಲಸಿಗ ಮತ್ತು ಮೂಲನಿವಾಸಿಗ) ಮತ್ತು ಆರ್ಥಿಕ ಹಾಗೂ ರಾಜಕೀಯ ಬದುಕಿನ ನಡುವೆ ಇರುವ ಸಂಬಂಧ ಇತ್ಯಾದಿಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ಬೇಕು. ಅಂದರೆ ಉತ್ತಮ ಪ್ರಶ್ನೆಗಳನ್ನು ರೂಪಿಸಲು ಬೇಕಾಗಿರುವ ಬಹುದೊಡ್ಡ ತಯಾರಿಯೆಂದರೆ ಈಗಾಗಲೇ ಆಗಿರುವ ಅಧ್ಯಯನಗಳ ಕನಿಷ್ಟ ಪರಿಚಯ. ಇಂದು ಸಂಶೋಧನೆ ಆಗದಿರುವ ಯಾವುದೇ ಒಂದು ವಿಷಯ ಇದೆ ಎಂದು ತಿಳಿಯುವುದು ಸರಿಯಲ್ಲ. ನಮ್ಮ ಸುತ್ತಮುತ್ತ ಅಲ್ಲದಿದ್ದರೂ ಬೇರೆ ಕಡೆಗಳಲ್ಲಿ ಅಧ್ಯಯನಗಳಾಗಿರಬಹುದು. ಯಾವುದೇ ವಿಷಯದ ಬಗ್ಗೆ ಸಾಕಷ್ಟು ಸಂಶೋಧನಾ ಪ್ರಬಂಧಗಳು ಮಂಡಿತವಾಗಿರಬಹುದು ಅಥವಾ ಲೇಖನಗಳು ಪ್ರಕಟವಾಗಿರಬಹುದು ಅಥವಾ ಪುಸ್ತಕಗಳು ಬಂದಿರಬಹುದು ಅಥವಾ ಇನ್ಯಾವುದೋ ರೂಪದಲ್ಲಿ ಕೆಲಸಗಳು ಆಗಿರಬಹುದು. ಅವುಗಳ ಬಗ್ಗೆ ಕನಿಷ್ಟ ಮಾಹಿತಿ ಇಲ್ಲದಿದ್ದರೆ ನಾವು ಸಂಶೋಧನೆ ಮಾಡಲು ಹೊರಟಿರುವ ವಿಚಾರದ ಬಗ್ಗೆ ಉತ್ತಮ ಪ್ರಶ್ನೆಗಳನ್ನು ರೂಪಿಸಿಕೊಳ್ಳಲು ಸಾಧ್ಯವಿಲ್ಲ. ಈ ಅಧ್ಯಾಯದ ಪ್ರಸ್ತಾವನೆಯಲ್ಲಿ ಹೇಳಿದಂತೆ ಸಮಸ್ಯೆ ಅಥವಾ ಪ್ರಶ್ನೆಗಳು ಪ್ರಸ್ತಾವದ

ಉದ್ದೇಶಗಳನ್ನು ಪ್ರಭಾವಿಸುತ್ತವೆ ಮತ್ತು ಉದ್ದೇಶಗಳನ್ನು ಅಧ್ಯಯನದ ವಿಧಾನವನ್ನು ಪ್ರಭಾವಿಸುತ್ತವೆ. ಉತ್ತಮ ಪ್ರಶ್ನೆಗಳನ್ನು ರೂಪಿಸಲು ಸಾಕಷ್ಟು ಪ್ರಮಾಣದ ಲಿಟರೇಚರ್ ಸರ್ವೇ ಅಥವಾ ಈಗಾಗಲೇ ಆಗಿರುವ ಅಧ್ಯಯನಗಳ ಸಮೀಕ್ಷೆ ಮಾಡಬೇಕಾಗುತ್ತದೆ.

ನಾವು ಮಾಡುವ ಸಂಶೋಧನಾ ವಿಷಯದ ಕುರಿತು ಈಗಾಗಲೇ ಏನೆಲ್ಲ ಪ್ರಶ್ನೆಗಳನ್ನು ಕೇಳಲಾಗಿದೆ ಎನ್ನುವುದರ ಬಗ್ಗೆ ಈಗಾಗಲೇ ಆಗಿರುವ ಅಧ್ಯಯನಗಳ ಸಮೀಕ್ಷೆ ನಮಗೆ ಮಾಹಿತಿ ನೀಡುತ್ತದೆ. ಈ ಮಾಹಿತಿ ಆಧಾರದಲ್ಲಿ ನಾವು ಏನು ಪ್ರಶ್ನೆಗಳನ್ನು ಕೇಳಬಹುದು ಎನ್ನುವ ತೀರ್ಮಾನ ಕೈಗೊಳ್ಳಬಹುದು. ನಾವು ಕೇಳುವ ಪ್ರಶ್ನೆಗಳು ಒಂದೋ ಎಂಫಿರಿಕಲ್ ಸಂಶೋಧನೆಗೆ ಪೂರಕವಾಗಬಹುದು ಅಥವಾ ತಾತ್ವಿಕ ಅಥವಾ ಥಿಯರೆಟಿಕಲ್ ಸಂಶೋಧನೆಗೆ ಪೂರಕವಾಗಬಹುದು. ಹಾಗೆ ನೋಡಿದರೆ ಸಂಶೋಧನೆಯ ಈ ಬಗೆಯ ವರ್ಗೀಕರಣ-ಎಂಫಿರಿಕಲ್ ಮತ್ತು ಥಿಯರೆಟಿಕಲ್-ಸರಿಯಲ್ಲ. ಎಂಫಿರಿಕಲ್ ಸಂಶೋಧನೆ ಅಂದರೆ ಅಲ್ಲಿ ತಾತ್ವಿಕ ವಿಚಾರಗಳೇ ಇಲ್ಲ ಅಥವಾ ತಾತ್ವಿಕ ಅಂದರೆ ಅಲ್ಲಿ ಎಂಫಿರಿಕಲ್ ಅಂಶವೇ ಇಲ್ಲ ಎಂದು ಪರಿಭಾವಿಸುವುದು ಸರಿಯಲ್ಲ. ಸಮಾಜ ವಿಜ್ಞಾನ ಸಂಶೋಧನೆಯಲ್ಲಿ ಈ ಎರಡೂ-ತಾತ್ವಿಕ ಮತ್ತು ಎಂಫಿರಿಕಲ್-ಅಂಶಗಳು ಜತೆ ಜತೆಗೆ ಹೋಗುವುದು ಅಗತ್ಯ. ಥಿಯರಿಯನ್ನು ಅಥವಾ ತಾತ್ವಿಕತೆಯನ್ನು ನಾವು ಬದುಕುವ ಸಮಾಜವನ್ನು ವಿವರಿಸುವ ಒಂದು ಪ್ರಯತ್ನ ವೆಂದು ಸಮಾಜ ವಿಜ್ಞಾನದಲ್ಲಿ ಸರಳವಾಗಿ ವ್ಯಾಖ್ಯಾನಿಸಿಕೊಳ್ಳಲಾಗಿದೆ. ಈ ಥಿಯರಿ ಪ್ರಕಾರ ವಾಸ್ತವಿಕತೆ ಇದೆಯೇ ಇಲ್ಲವೇ ಎನ್ನುವ ಅಂಶವನ್ನು ಎಂಫಿರಿಕಲ್ ಮಾಹಿತಿಗಳು ತೋರಿಸುತ್ತವೆ. ಒಂದು ವೇಳೆ ಸಾಮಾಜಿಕ ವಾಸ್ತವಿಕತೆ ಥಿಯರಿ ವಿವರಿಸಿದಂತೆ ಇಲ್ಲದಿದ್ದರೆ ಥಿಯರಿ ಮಾರ್ಪಾಟುಗೊಳ್ಳಬೇಕಾಗುತ್ತದೆ. ಅದುದರಿಂದ ಈಗಾಗಲೇ ಆಗಿರುವ ಅಧ್ಯಯನ ಗಳನ್ನು ಸಮೀಕ್ಷೆ ಮಾಡುವಾಗ ನಾವು ಮಾಡುವ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ಥಿಯರೆಟಿಕಲ್ ಚರ್ಚೆಯ ತಕ್ಕಮಟ್ಟಿನ ಅರಿವನ್ನು ಕೂಡ ರೂಢಿಸಿಕೊಳ್ಳಬೇಕಾಗುತ್ತದೆ. ಥಿಯರೆಟಿಕಲ್ ಚರ್ಚೆ ಕುರಿತ ತಿಳುವಳಿಕೆ ಇಲ್ಲದಿದ್ದರೆ ನಾವು ರೂಪಿಸುವ ಪ್ರಶ್ನೆಗಳು ತುಂಬಾ ಸರಳ ಪ್ರಶ್ನೆಗಳಾಗಬಹುದು. ಆ ಪ್ರಶ್ನೆಗಳಿಗೆ ಕಂಡುಕೊಳ್ಳುವ ಉತ್ತರ ನಮ್ಮ ಸಾಮಾಜಿಕ ಪರಿಸರದ ಬಗ್ಗೆ ಹೆಚ್ಚಿನ ತಿಳುವಳಿಕೆಗೆ ಮೂಡಿಸಲು ವಿಫಲವಾಗಬಹುದು. ಮೂಲನಿವಾಸಿಗಳು ಮತ್ತು ವಲಸಿಗರ ಉದಾಹರಣೆಯಲ್ಲಿ ಅವರುಗಳು ರೂಪುಗೊಳ್ಳುವ ಬಗೆಗಿನ ಪ್ರಶ್ನೆಗಳನ್ನು ರೂಪಿಸಿಕೊಳ್ಳಲು ನಮಗೆ ಎರಡು ಥಿಯರೆಟಿಕಲ್ ಚರ್ಚೆಯ (ಚಾರಿತ್ರಿಕ ರೂಪುಗೊಳ್ಳುವಿಕೆ ಮತ್ತು ಸಂಕಥನದ ಸೃಷ್ಟಿ) ಪರಿಚಯ ಅಗತ್ಯ ಎನ್ನುವುದನ್ನು ನಾವು ಕಂಡುಕೊಂಡಿದ್ದೇವೆ. ಅದೇ ರೀತಿಯಲ್ಲಿ ಯಾಕೆ ಸಮಸ್ಯೀಕರಿಸಬೇಕು ಎನ್ನುವ ಪ್ರಶ್ನೆಗೆ ಉತ್ತರಿಸಲು ನಾನು ಇಲ್ಲಿ ಬಳಸಿಕೊಂಡ ಎಲ್ಲ ಉದಾಹರಣೆಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೆ ಸಂಬಂಧಿಸಿವೆ. ಸಾಮಾಜಿಕ ಅಥವಾ ಸಾಂಸ್ಕೃತಿಕ ಕ್ಷೇತ್ರದ ಕಲ್ಪಿತ ಸತ್ಯಗಳು ಹೇಗೆ ಆರ್ಥಿಕ ಅಥವಾ ರಾಜಕೀಯ ಬದುಕನ್ನು ಪ್ರಭಾವಿಸುತ್ತವೆ ಎಂದು ವಿಶ್ಲೇಷಿಸಿದ್ದೇನೆ. ಎಪ್ಪತ್ತು ಅಥವಾ ಎಂಬತ್ತರ ದಶಕದ ಅಭಿವೃದ್ಧಿ ಚರ್ಚೆ ಬಗ್ಗೆ ಮಾಹಿತಿ

ಇರುವವರಿಗೆ ಈ ಬಗೆಯ ಚರ್ಚೆ (ಸಾಮಾಜಿಕ/ಸಾಂಸ್ಕೃತಿಕ ಅಂಶಗಳಿಂದ ಆರ್ಥಿಕ/ರಾಜಕೀಯದ ಕಡೆಗೆ ಬರುವುದು) ಸ್ವಲ್ಪ ಅಸಂಗತ ಅನ್ನಿಸಬಹುದು. ಆದರೆ ಅಭಿವೃದ್ಧಿ ಕ್ಷೇತ್ರದಲ್ಲಿ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಥಿಯರೆಟಿಕಲ್ ಚರ್ಚೆ ಬಗ್ಗೆ ಪರಿಚಯ ಇದ್ದರೆ ಸಾಮಾಜಿಕ/ಸಾಂಸ್ಕೃತಿಕದಿಂದ ಆರ್ಥಿಕ/ರಾಜಕೀಯದ ಕಡೆಗೆ ಬರುವುದು ಅಸಹಜವಾಗುವುದಿಲ್ಲ. ಹಿಂದೆ ಆರ್ಥಿಕ ಪ್ರಗತಿ ಸಾಮಾಜಿಕ ಪರಿವರ್ತನೆಗೆ ಕಾರಣವಾಗುತ್ತವೆ ಎನ್ನುವ ಥಿಯರೆಟಿಕಲ್ ಪೊಸಿಸನ್ ಯಜಮಾನಿಕೆ ಮಾಡುತ್ತಿತ್ತು. ಆದರೆ ಹಲವಾರು ಬಡದೇಶಗಳ ಅನುಭವ ಪ್ರಕಾರ ಆರ್ಥಿಕ ಪ್ರಗತಿಯಿಂದ ಸಾಮಾಜಿಕ ಪರಿವರ್ತನೆ ಸಾಧ್ಯವಾಗುವುದಿಲ್ಲ ಎನ್ನುವುದು ಸ್ಪಷ್ಟವಾಯಿತು. ಆ ಹಿನ್ನಲೆಯಲ್ಲಿ ಸಾಮಾಜಿಕ/ಸಾಂಸ್ಕೃತಿಕ ಅಂಶಗಳು ಹೇಗೆ ಆರ್ಥಿಕ/ರಾಜಕೀಯ ಸ್ಥಾನಾಮಾನಗಳನ್ನು ಪ್ರಭಾವಿಸುತ್ತವೆ ಎನ್ನುವ ಥಿಯರಿಗಳು ಮುಂಚೂಣಿಗೆ ಬಂದಿವೆ.[೧೨] ಈ ಎಲ್ಲ ತಾತ್ವಿಕ ಚರ್ಚೆಗಳ ಕನಿಷ್ಠ ಪರಿಚಯ ಇದ್ದರೆ ಮಾತ್ರ ಇಂದಿನ ಸಂದರ್ಭಕ್ಕೆ ಪ್ರಸ್ತುತವಾದ ಪ್ರಶ್ನೆಗಳನ್ನು ಕೇಳಲು ಸಾಧ್ಯ. ಹೀಗೆ ಯಾವ ಬಗೆಯ ಪ್ರಶ್ನೆಗಳನ್ನು ಕೇಳಬೇಕು ಎನ್ನುವುದನ್ನು ಸಂಶೋಧಕರ ಥಿಯರೆಟಿಕಲ್ ತಿಳುವಳಿಕೆ ಕೂಡ ಪ್ರಭಾವಿಸುತ್ತದೆ.

ಅಧ್ಯಯನದ ಉದ್ದೇಶ ಮತ್ತು ವಿಧಾನ

ಸಂಶೋಧನೆಯ ಉದ್ದೇಶಗಳು ಒಂದು ನಿರ್ದಿಷ್ಟ ಸಂಶೋಧನಾ ಯೋಜನೆಯಡಿಯಲ್ಲಿ ಬರುವ ಒಟ್ಟು ಕೆಲಸಗಳ ಒಂದು ಸ್ಥೂಲ ಚಿತ್ರಣವನ್ನು ಕೊಡುತ್ತವೆ. ಸಮಸ್ಯೆ ರೂಪದಲ್ಲಿ ಎತ್ತಿದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕೆಲಸವನ್ನು ಉದ್ದೇಶ ಸೂಚಿಸುತ್ತದೆ. ಇದನ್ನೇ ಇನ್ನೊಂದು ವಿಧದಲ್ಲಿ ಹೇಳುವುದಾದರೆ ಯೋಜನೆ ಏನನ್ನು ಶೋಧಿಸಲು ಅಥವಾ ಪರೀಕ್ಷಿಸಲು ಅಥವಾ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ ಎನ್ನುವುದು ಉದ್ದೇಶ ಹೇಳುತ್ತದೆ. ಅಧ್ಯಯನದ ಉದ್ದೇಶಗಳು ಸಂಶೋಧನಾ ಕೆಲಸಕ್ಕೆ ಒಂದು ಮಾರ್ಗ ಸೂಚಿಯಂತೆ ಕೆಲಸ ಮಾಡುತ್ತವೆ. ಅಧ್ಯಯನದ ದಿಕ್ಕುದಿಶೆಗಳನ್ನು ಅಚ್ಚುಕಟ್ಟಾಗಿ ರೂಪಿಸಲು ಕೇವಲ ಅಧ್ಯಯನ ಉದ್ದೇಶಗಳು ಇದ್ದರೆ ಸಾಲದು ಅಧ್ಯಯನದ ಪ್ರಮೇಯಗಳು ಅಥವಾ ಪೂರ್ವತೀರ್ಮಾನಗಳು ಬೇಕು ಎನ್ನುವ ವಾದಗಳು ಇವೆ. ಅಧ್ಯಯನದ ಪ್ರಮೇಯಗಳನ್ನು ರೂಪಿಸುವುದು ಕಷ್ಟದ ಕೆಲಸವೇನಲ್ಲ. ಅಚ್ಚುಕಟ್ಟಾದ ಅಧ್ಯಯನದ ಉದ್ದೇಶಗಳು ರೂಪಿತವಾದರೆ ಅಷ್ಟೇ ಅಚ್ಚುಕಟ್ಟಾದ ಪ್ರಮೇಯಗಳನ್ನು ರೂಪಿಸಿದಂತೆ. ಯಾಕೆಂದರೆ ಅಧ್ಯಯನ ಉದ್ದೇಶಗಳು ಅಧ್ಯಯನದ ಪ್ರಮೇಯಗಳನ್ನು ಅಥವಾ ಪೂರ್ವತೀರ್ಮಾನಗಳನ್ನು ನಿರ್ಧರಿಸುತ್ತವೆ. ಈ ರೀತಿಯಲ್ಲಿ ರೂಪುಗೊಂಡ ಪ್ರಮೇಯಗಳು ಅಥವಾ ಪೂರ್ವತೀರ್ಮಾನಗಳು ಅಧ್ಯಯನದ ದಿಕ್ಕುದಿಸೆಗಳನ್ನು ತೀರ್ಮಾನಿಸಲು ಸಹಕಾರಿಯಾಗುತ್ತವೆ. ಅದು ಹೇಗೆಂದರೆ ಅಧ್ಯಯನ ಉದ್ದೇಶಗಳು ಸಂಶೋಧನೆಯಡಿಯಲ್ಲಿ ಕೈಗೊಳ್ಳಲಿರುವ ಒಟ್ಟು ಕೆಲಸಗಳ ಒಂದು ಸ್ಥೂಲ ಚಿತ್ರಣವನ್ನು ನೀಡಿದರೆ ಪೂರ್ವತೀರ್ಮಾನಗಳು ಅಧ್ಯಯನ ಸಾಗಬೇಕಾದ ದಾರಿಯ ಒಂದು ಸ್ಪಷ್ಟ

ಚಿತ್ರಣವನ್ನು ನೀಡುತ್ತವೆ. ಹಾಗೆಂದು ಪೂರ್ವತೀರ್ಮಾನಗಳು ಅಧ್ಯಯನ ಉದ್ದೇಶಗಳಂತೆ ಯಾವುದೇ ಸಂಶೋಧನಾ ಪ್ರಸ್ತಾವದ ಭಾಗವಾಗಲೇಬೇಕೆಂದಿಲ್ಲ. ಇದನ್ನೇ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಅಧ್ಯಯನ ಉದ್ದೇಶಗಳನ್ನು ತಿಳಿಸದ ಪ್ರಸ್ತಾವ ಇರಲು ಸಾಧ್ಯವಿಲ್ಲ. ಆದರೆ ಪೂರ್ವತೀರ್ಮಾನಗಳನ್ನು ನೀಡದ ಅಧ್ಯಯನ ಪ್ರಸ್ತಾವ ಸಾಧ್ಯ. ಹೀಗೆ ಪ್ರಮೇಯಗಳು ಅಥವಾ ಪೂರ್ವತೀರ್ಮಾನಗಳು ಅಧ್ಯಯನದ ಉದ್ದೇಶಗಳನ್ನ ಇನ್ನೂ ಸ್ಪಷ್ಟಪಡಿಸುವ ಕೆಲಸವನ್ನು ಮಾಡುತ್ತವೆಯಾದರೂ ಅವುಗಳು ಅಧ್ಯಯನ ಪ್ರಸ್ತಾವಕ್ಕೆ ಅನಿವಾರ್ಯವಲ್ಲ.

ಸಮಸ್ಯೆ ಸಂಶೋಧನೆಯ ಉದ್ದೇಶವನ್ನು ನಿರ್ಧರಿಸುತ್ತದೆ ಅಥವಾ ಪ್ರಭಾವಿಸುತ್ತದೆ ಎಂದು ಪ್ರಸ್ತಾವನೆಯಲ್ಲಿ ಹೇಳಿದ್ದೇನೆ. ಅದು ಹೇಗೆ ಅಧ್ಯಯನದ ಉದ್ದೇಶವನ್ನು ಪ್ರಭಾವಿಸುತ್ತದೆ ಎಂದು ನೋಡುವ. ಸಮಸ್ಯೀಕರಿಸುವುದು ಯಾಕೆಂದು ವಿವರಿಸಲು ಹಲವಾರು ಉದಾಹರಣೆಗಳನ್ನು ನಾವು ಹಿಂದಿನ ಪುಟಗಳಲ್ಲಿ ನೋಡಿದ್ದೇವೆ. ಅವುಗಳಲ್ಲಿ ಒಂದನ್ನು ಬಳಸಿಕೊಂಡು ಸಮಸ್ಯೆ ಮತ್ತು ಉದ್ದೇಶಗಳ ನಡುವೆ ಇರುವ ಸಂಬಂಧವನ್ನು ಪರೀಕ್ಷಿಸುವ. ದಕ್ಷಿಣ ಕನ್ನಡ ಜಿಲ್ಲೆಯ ಪರಶುರಾಮ ಸೃಷ್ಟಿಯ ಐತಿಹ್ಯದ ಉದಾಹರಣೆಯಲ್ಲಿ ಎತ್ತಿದ ಸಮಸ್ಯೆಗಳ ಅಥವಾ ಪ್ರಶ್ನೆಗಳ ಹಿನ್ನೆಲೆಯಲ್ಲಿ ಯಾವೆಲ್ಲ ಉದ್ದೇಶಗಳನ್ನು ರೂಪಿಸಬಹುದೆಂದು ನೋಡುವ. ಅಲ್ಲಿ ಈ ಕೆಳಗಿನ ಮೂರು ಮುಖ್ಯ ಪ್ರಶ್ನೆಗಳನ್ನು ಎತ್ತಲಾಗಿದೆ. ಒಂದು, ವಲಸಿಗರು ಅಥವಾ ಮೂಲ ನಿವಾಸಿಗರನ್ನು ಗುರುತಿಸುವ ಮಾನ ದಂಡವೇನು? ಎರಡು, ವಲಸಿಗರು ಮತ್ತು ಮೂಲನಿವಾಸಿಗಳು ರೂಪುಗೊಳ್ಳುವ ಬಗೆ ಏನು? ಅಥವಾ ವಲಸಿಗರು ಮತ್ತು ಮೂಲ ನಿವಾಸಿಗಳು ಚಾರಿತ್ರಿಕ ರೂಪುಗೊಳ್ಳು ವಿಕೆಯೇ ಅಥವಾ ಒಂದು ಸಂಕಥನವೇ? ಮೂರು, ವಲಸಿಗರು ಮತ್ತು ಮೂಲನಿವಾಸಿಗಳ ಸ್ಥಿತಿ ಮತ್ತು ಅವರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ನಡುವೆ ಸಂಬಂಧ ಇದೆಯೇ? ಪರಶುರಾಮ ಸೃಷ್ಟಿಯ ಐತಿಹ್ಯವನ್ನು ಸಮಸ್ಯೀಕರಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶ. ಈ ಮುಖ್ಯ ಉದ್ದೇಶಕ್ಕೆ ಪೂರಕವಾಗಿ, ಮೇಲೆ ಎತ್ತಿದ ಪ್ರಶ್ನೆಗಳ ಹಿನ್ನೆಲೆಯಲ್ಲಿ ಈ ಕೆಳಗಿನ ನಿರ್ದಿಷ್ಟ ಉದ್ದೇಶಗಳನ್ನು ರೂಪಿಸಿಕೊಳ್ಳಬಹುದು. ಒಂದು, ವಲಸಿಗರು ಮತ್ತು ಮೂಲನಿವಾಸಿಗರನ್ನು ಗುರುತಿಸುವ ಮಾನದಂಡಗಳನ್ನು ಪರೀಕ್ಷಿಸುವುದು. ಎರಡು, ವಲಸಿಗರು ಮತ್ತು ಮೂಲನಿವಾಸಿಗರು ರೂಪುಗೊಳ್ಳುವಿಕೆಯ ಬಗೆಯನ್ನು ಅರ್ಥಮಾಡಿಕೊಳ್ಳುವುದು. ಮೂರು, ವಲಸಿಗರು ಮತ್ತು ಮೂಲನಿವಾಸಿಗರ ರೂಪು ಗೊಳ್ಳುವಿಕೆಯಲ್ಲಿ ಚಾರಿತ್ರಿಕ ರೂಪುಗೊಳ್ಳುವಿಕೆ ಮತ್ತು ಸಂಕಥನದ ಪಾತ್ರವನ್ನು ವಿಶ್ಲೇಷಿಸುವುದು. ನಾಲ್ಕು, ವಲಸಿಗ ಮತ್ತು ಮೂಲನಿವಾಸಿಗ ಸ್ಥಿತಿ ಮತ್ತು ಸಾಮಾಜಿಕ ಆರ್ಥಿಕ ಸ್ಥಿತಿಗತಿ ನಡುವೆ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು. ಈ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಕನಿಷ್ಠ ಎರಡು ಪೂರ್ವತೀರ್ಮಾನಗಳನ್ನು ಅಥವಾ ಪ್ರಮೇಯಗಳನ್ನು ರೂಪಿಸಬಹುದು. ವಲಸಿಗರು ಮತ್ತು ಮೂಲ ನಿವಾಸಿಗರ

ರೂಪುಗೊಳ್ಳುವಿಕೆಯಲ್ಲಿ ಚಾರಿತ್ರಿಕ ರೂಪುಗೊಳ್ಳುವಿಕೆಯಿಂದ ಸಂಕಥನದ ಸೃಷ್ಟಿಯ ಪಾತ್ರ ಹೆಚ್ಚಿದೆ ಎನ್ನುವುದು ಮೊದಲ ಪ್ರಮೇಯ. ಈ ಸ್ಥಾನಮಾನ (ವಲಸಿಗ ಅಥವಾ ಮೂಲ ನಿವಾಸಿಗ ಸ್ಥಾನಮಾನ) ಮತ್ತು ಆರ್ಥಿಕ ಹಾಗೂ ರಾಜಕೀಯ ಸ್ಥಾನಮಾನದ ನಡುವೆ ನೇರ ಸಂಬಂಧ ಇದೆ ಎನ್ನುವುದು ಎರಡನೇಯ ಪ್ರಮೇಯ.

ಅಧ್ಯಯನದ ಸಮಸ್ಯೆ ಉದ್ದೇಶವನ್ನು ನಿರ್ಧರಿಸಿದರೆ ಉದ್ದೇಶಗಳು ಅಧ್ಯಯನದ ವಿಧಾನವನ್ನು ನಿರ್ಧರಿಸುತ್ತವೆ ಅಥವಾ ಪ್ರಭಾವಿಸುತ್ತವೆ. ಸಂಶೋಧನಾ ಉದ್ದೇಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಯಾವ ಮೂಲದಿಂದ ಮತ್ತು ಹೇಗೆ ಸಂಗ್ರಹಿಸಲಾಗುವುದು ಎನ್ನುವ ವಿವರಗಳನ್ನು ಸಂಶೋಧನಾ ವಿಧಾನದಲ್ಲಿ ನೀಡಲಾಗುವುದು. ವಿವಿಧ ವಿಧಾನಗಳ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಹೇಗೆ ವಿಶ್ಲೇಷಿಸಲಾಗಿದೆ ಎನ್ನುವ ಅಂಶ ಕೂಡ ವಿಧಾನದ ವಿವರಣೆ ಜತೆ ಸೇರಿರುತ್ತದೆ. ಹಲವಾರು ಸಂಶೋಧನಾ ವಿಧಾನಗಳಿವೆ. ಮಾಹಿತಿ ಸಂಗ್ರಹಿಸುವ ಮತ್ತು ವಿಶ್ಲೇಷಿಸುವ ಕ್ರಮಗಳು ನಾವು ಆಯ್ಕೆ ಮಾಡಿಕೊಳ್ಳುವ ವಿಧಾನದ ಮೇಲೆ ನಿಂತಿದೆ. ಒಂದು ಕಾಲದಲ್ಲಿ ಯಾವುದಾದರೂ ಒಂದು ವಿಧಾನದಲ್ಲಿ ಮಾಹಿತಿ ಸಂಗ್ರಹಿಸುವುದು ಮತ್ತು ವಿಶ್ಲೇಷಿಸುವುದು ಸಾಮಾನ್ಯವಾಗಿತ್ತು. ಆದರೆ ಇಂದು ಸಮಾಜ ವಿಜ್ಞಾನ ಸಂಶೋಧನೆ ಯಾವುದಾದರೂ ಒಂದು ವಿಧಾನಕ್ಕೆ ಅಂಟಿಕೊಳ್ಳುವುದು ಸಾಧ್ಯವಿಲ್ಲ. ಒಂದು ಅಥವಾ ಹಲವು ವಿಧಾನಗಳ ಮೂಲಕ ಸಂಶೋಧನಾ ಉದ್ದೇಶಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಬೇಕಾಗುತ್ತದೆ ಮತ್ತು ವಿಶ್ಲೇಷಿಸಬೇಕಾಗುತ್ತದೆ. ಪ್ರತಿ ವಿಧಾನಕ್ಕೂ ಅದರದ್ದೇ ಆದ ತಾತ್ವಿಕ ಹಿನ್ನೆಲೆ ಇದೆ. ತಾನು ಬಳಸುವ ವಿಧಾನದ ತಾತ್ವಿಕ ಹಿನ್ನೆಲೆಯ ಅರಿವು ಇದ್ದು ಒಂದು ವಿಧಾನವನ್ನು ಬಳಸಿದರೆ ಸಂಶೋಧಕ ತನ್ನ ತಾತ್ವಿಕ ನಿಲುವಿಗೆ ಅನುಸಾರ ಆ ವಿಧಾನವನ್ನು ಬಳಸಿಕೊಳ್ಳಬಹುದು. ಒಂದು ವೇಳೆ ಸಂಶೋಧಕರು ತಾವು ಬಳಸುವ ವಿಧಾನದ ತಾತ್ವಿಕ ಹಿನ್ನೆಲೆಯ ಅರಿವಿಲ್ಲದೆ ಬಳಸಿದರೆ ಸಂಶೋಧಕರು ತಮಗೆ ಅರಿವಿಲ್ಲದೆಯೇ ಆ ವಿಧಾನದಲ್ಲಿ ಅಂತರ್‌ಗತಗೊಂಡಿರುವ ತಾತ್ವಿಕ ಹಿನ್ನೆಲೆಯಿಂದ ಪ್ರಭಾವಿತರಾಗಬೇಕಾಗುತ್ತದೆ. ಅವಲೋಕನ, ಸಹಭಾಗಿತ್ವ ಅವಲೋಕನ, ಪ್ರಶ್ನಾವಳಿ, ಸಂದರ್ಶನ, ಗುಂಪು ಚರ್ಚೆ, ಸಹಭಾಗಿತ್ವ ಮಾಹಿತಿ ಸಂಗ್ರಹ ಇತ್ಯಾದಿ ವಿಧಾನಗಳಿಂದ ಮಾಹಿತಿ ಸಂಗ್ರಹಿಸಬಹುದು. ಯಾವ ವಿಧಾನದಿಂದ ಮಾಹಿತಿ ಸಂಗ್ರಹಿಸಬೇಕೆನ್ನುವುದನ್ನು ಹಲವಾರು ವಿಚಾರಗಳು ನಿರ್ಧರಿಸುತ್ತವೆ. ಅಧ್ಯಯನದ ಉದ್ದೇಶಗಳು, ಸಂಶೋಧನೆಯನ್ನು ಮುಗಿಸಲು ಇರುವ ಅವಧಿ, ಸಂಶೋಧಕರ ಸಂಪನ್ಮೂಲದ ಸ್ಥಿತಿಗತಿ ಇತ್ಯಾದಿಗಳು ಮಾಹಿತಿ ಸಂಗ್ರಹಿಸಲು ಬಳಸುವ ವಿಧಾನವನ್ನು ಪ್ರಭಾವಿಸುತ್ತವೆ.

ಸಂಶೋಧನಾ ಸಮಸ್ಯೆ ಮತ್ತು ವಿಧಾನದ ನಡುವೆ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳುವ ಕೆಲಸ ಆಗಬೇಕಾಗಿದೆ. ಯಾವ ಮೂಲದಿಂದ ಮತ್ತು ಯಾವ ವಿಧಾನದಲ್ಲಿ ಅಧ್ಯಯನ ಉದ್ದೇಶಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತದೆ ಎನ್ನುವ ವಿವರಗಳನ್ನು ವಿಧಾನ ತಿಳಿಸುತ್ತದೆ. ಸಂಶೋಧನೆಗೆ ಎತ್ತಿಕೊಂಡ ವಿಷಯಕ್ಕೆ ಸಂಬಂಧಿಸಿದ

ಮುಖ್ಯ ಮಾಹಿತಿಗಳೇನು ಎನ್ನುವುದು ಮೊದಲಿಗೆ ನಿರ್ಣಯವಾಗಬೇಕು. ಸಂಶೋಧನಾ ಸಮಸ್ಯೆ ಅಥವಾ ಪ್ರಶ್ನೆಗಳಿಗೆ ಉತ್ತರಿಸಲು ಅಗತ್ಯವಿರುವ ಮಾಹಿತಿಗಳನ್ನು ಸಂಶೋಧನೆಯ ಉದ್ದೇಶಗಳು ನಿರ್ಣಯಿಸುತ್ತವೆ. ನಾವು ಮೇಲೆ ಚರ್ಚೆ ಮಾಡಿದ ಪರಶುರಾಮ ಸೃಷ್ಟಿಯ ಉದಾಹರಣೆಯೊಂದಿಗೆ ಸಂಶೋಧನೆಗೆ ಅಗತ್ಯವಿರುವ ಮಾಹಿತಿಗಳ ಪಟ್ಟಿಯನ್ನು ಮಾಡುವ. ಈ ಉದಾಹರಣೆಯಲ್ಲಿ ಹಲವು ಉದ್ದೇಶಗಳಿವೆ. ಒಂದು, ಬೇರೆ ಬೇರೆ ಕಾಲ ಮತ್ತು ಪ್ರದೇಶಗಳಲ್ಲಿ ಯಾರನ್ನು ವಲಸಿಗರು ಮತ್ತು ಯಾರನ್ನು ಮೂಲನಿವಾಸಿಗಳೆಂದು ತೀರ್ಮಾನಿಸಲಾಗಿದೆ? ಯಾವ ಕಾರಣಕ್ಕಾಗಿ ಅಥವಾ ಯಾವ ಮಾನದಂಡ ಬಳಸಿ ಆ ತೀರ್ಮಾನಕ್ಕೆ ಬರಲಾಗಿದೆ? ಎರಡು, ವಲಸಿಗರು ಮತ್ತು ಮೂಲ ನಿವಾಸಿಗಳ ರೂಪುಗೊಳ್ಳು ವಿಕೆಯಲ್ಲಿ ಚಾರಿತ್ರಿಕ ರೂಪುಗೊಳ್ಳುವಿಕೆ ಮತ್ತು ಸಂಕಥನದ ಪಾತ್ರವನ್ನು ವಿಶ್ಲೇಷಿಸಬೇಕಾಗಿದೆ. ಚಾರಿತ್ರಿಕ ಮಾಹಿತಿ ಮತ್ತು ಅಂಕಿ ಅಂಶಗಳನ್ನು ಮೇಲಿನ ಎರಡು ವಿಚಾರಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಬೇಕಾಗುತ್ತದೆ. ಎರಡು ರೀತಿಯ ಚಾರಿತ್ರಿಕ ಮಾಹಿತಿಗಳಿವೆ. ಒಂದು ಪ್ರಾಥಮಿಕ ಮತ್ತು ಎರಡು ಅನುಷಂಗಿಕ. ಪ್ರಾಥಮಿಕ ಮಾಹಿತಿ ಮೂಲಗಳು - ಸಂದರ್ಶನ, ಅವಲೋಕನ, ಚಾರಿತ್ರಿಕ ದಾಖಲೆಗಳ ಅವಲೋಕನ, ಡೈರಿಗಳು, ಕ್ರೋನಿಕಲ್ಸ್, ಕಚೇರಿ ಕಡತಗಳು, ಶಾಸನಗಳು, ದಾಖಲೆಗಳು, ಪತ್ರಗಳು ಇತ್ಯಾದಿಗಳು ಮುಖ್ಯವಾಗಿರುವ ಚಾರಿತ್ರಿಕ ದಾಖಲೆಗಳು. ಅನುಷಂಗಿಕ ಮಾಹಿತಿ ಮೂಲಗಳು ಪ್ರಕಟಿತ ಮತ್ತು ಅಪ್ರಕಟಿತ ಲೇಖನಗಳು, ಪ್ರಬಂಧಗಳು ಮತ್ತು ಮಹಾಪ್ರಬಂಧಗಳು, ಪುಸ್ತಕಗಳು, ಇಲ್ಲೂ ಪರಿಮಾಣಾತ್ಮಕ (ಕ್ವಾಂಟಿಟೇವ್) ಹಾಗೂ ಗುಣಾತ್ಮಕ (ಕ್ವಾಲಿಟೇಟಿವ್) ಅಂಶಗಳಿವೆ. ಉದಾಹರಣೆಗೆ ಯಾವುದೋ ಒಂದು ನಿರ್ದಿಷ್ಟ, ಚಾರಿತ್ರಿಕ ಸಂದರ್ಭದಲ್ಲಿ ಆದ ಜನಸಂಖ್ಯಾ ಬದಲಾವಣೆ ಯನ್ನು ಗುರುತಿಸಲು ಅಂಕಿ ಅಂಶಗಳು ಬೇಕಾಗುತ್ತವೆ. ಅವುಗಳನ್ನು ಆ ಚಾರಿತ್ರಿಕ ಸಂದರ್ಭದ ಜನಗಣತಿಯಿಂದ (ಜನಗಣತಿ ಇದ್ದರೆ) ಅಥವಾ ಸಂಬಂಧಪಟ್ಟ ಇತರ ಮೂಲಗಳಿಂದ ಸಂಗ್ರಹಿಸಬೇಕಾಗುತ್ತದೆ. ಇನ್ನು ವಲಸಿಗ ಮತ್ತು ಮೂಲನಿವಾಸಿಗ ಸ್ಥಿತಿ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿ ನಡುವೆ ಇರುವ ಸಂಬಂಧವನ್ನು ಅಳೆಯಲು ಕೆಲವೊಂದು ಸೂಚ್ಯಾಂಕಗಳನ್ನು ರೂಪಿಸಿ ಕೊಳ್ಳಬೇಕಾಗುತ್ತದೆ. ಆ ಸೂಚ್ಯಾಂಕಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಾಥಮಿಕ ಮತ್ತು ಅನುಷಂಗಿಕ ಮೂಲಗಳಿಂದ ಪಡೆಯ ಬಹುದು. ಆ ಮೂಲಗಳು ಯಾವುವು ಮತ್ತು ಅವುಗಳನ್ನು ಯಾವ ವಿಧಾನದಿಂದ ಸಂಗ್ರಹಿಸ ಲಾಗುವುದು ಎನ್ನುವ ವಿವರಗಳನ್ನು ನೀಡಬೇಕಾಗುತ್ತದೆ. ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸುವ ವಿಧಾನವನ್ನು ಕೂಡ ವಿಧಾನದಲ್ಲಿ ತಿಳಿಸಬೇಕಾಗುತ್ತದೆ.

ಈ ಅಧ್ಯಾಯದಲ್ಲಿ ಸಮಸ್ಯೆ ಮತ್ತು ಸಮಸ್ಯೀಕರಿಸುವುದು ಅಂದರೇನು? ಯಾಕೆ ಸಮಸ್ಯೀಕರಿಸಬೇಕು? ಮತ್ತು ಹೇಗೆ ಸಮಸ್ಯೀಕರಿಸಬೇಕು? ಇತ್ಯಾದಿ ವಿಚಾರಗಳನ್ನು ಚರ್ಚಿಸ ಲಾಗಿದೆ. ಸಮಸ್ಯೆಯನ್ನು ಪ್ರಶ್ನೆ ಕೇಳುವುದೆಂದು ವ್ಯಾಖ್ಯಾನಿಸಿಕೊಳ್ಳಲಾಗಿದೆ. ಸಂಶೋಧನೆಯಲ್ಲಿ ಒಂದು ಅಥವಾ ಹಲವು ಮುಖ್ಯ ಪ್ರಶ್ನೆಗಳು ಮತ್ತು ಹಲವು ಪೂರಕ ಪ್ರಶ್ನೆಗಳು ಪ್ರಸ್ತಾವದ

ಭಾಗವಾಗಿರುತ್ತವೆ. ಯಾಕೆ ಸಮಸ್ಯೀಕರಿಸಬೇಕು ಎನ್ನುವ ವಿಚಾರ ವನ್ನು ವಿವರಿಸಲು ಅಧ್ಯಾಯ ಹೆಚ್ಚಿನ ಮುತುವರ್ಜಿ ವಹಿಸಿದೆ. ಹಲವಾರು ಕಲ್ಪಿತ ಅಥವಾ ರಚಿತ ಸಿದ್ಧಾಂತಗಳು ಮತ್ತು ನಂಬಿಕೆಗಳು ಮಾನವರ ನಡುವೆ ಕಂದರಗಳನ್ನು ಸೃಷ್ಟಿಸಿವೆ. ಹಲವಾರು ಶತಮಾನ ಗಳಿಂದ ಅವುಗಳನ್ನು ನಂಬಿಕೊಂಡು ಬಂದಿರುವುದರಿಂದ ಅಥವಾ ಪ್ರಶ್ನಿಸದೆ ಆಚರಿಸಿಕೊಂಡು ಬಂದಿರುವುದರಿಂದ ಅವುಗಳು ಒಂದು ಬಗೆಯ ಪ್ರಾಕೃತಿಕ ಸತ್ಯದ ಸ್ಥಾನವನ್ನು ಪಡೆದಿವೆ. ಪ್ರಾಕೃತಿಕ ಸತ್ಯಗಳನ್ನು ಒಪ್ಪಿಕೊಳ್ಳುವುದು ಬಿಟ್ಟರೆ ಬೇರೆ ದಾರಿನೇ ಇಲ್ಲ. ಸೂರ್ಯ ಪೂರ್ವದಲ್ಲಿ ಉದಯಿಸುವುದು ಅಥವಾ ಭೂಮಿ ಸೂರ್ಯನ ಸುತ್ತು ಸುತ್ತುವುದು ಇತ್ಯಾದಿ ಗಳನ್ನು ಒಪ್ಪಿಕೊಳ್ಳದೆ ಬೇರೆ ದಾರೀನೇ ಇಲ್ಲ. ಹಲವಾರು ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳು ಮತ್ತು ನಂಬಿಕೆಗಳು ಹೆಚ್ಚು ಕಡಿಮೆ ಇದೇ ಸ್ಥಾನವನ್ನು ಪಡೆದಿವೆ. ಮಹಿಳೆ ಪುರುಷನಿಗಿಂತ ಕೆಳಗಿನ ಸ್ಥಾನದಲ್ಲಿರುತ್ತಾಳೆ, ದಲಿತ ಸಮಾಜದ ಅಂಚಿನಲ್ಲಿರಬೇಕಾದವ, ಸಮಾಜದ ಏಣಿಶ್ರೇಣಿ ಇರುವುದು ಸಹಜ ಇತ್ಯಾದಿ ವಿಚಾರಗಳು ಒಂದು ಬಗೆಯ ಸರ್ವ ಸತ್ಯದ ರೂಪು ಪಡೆದಿವೆ. ಆದುದರಿಂದ ಆ ನಂಬಿಕೆಗಳಿಗೆ ಅನುಸಾರ ಸಾಮಾಜಿಕ ವ್ಯವಹಾರ ನಡೆಯುವುದು ಸಹಜವಾಗುತ್ತದೆ. ಇದೊಂದು ಪ್ರಶ್ನಿಸಬೇಕಾದ ಅಥವಾ ಸಮಸ್ಯೀಕರಿಸಬೇಕಾದ ವಿಚಾರಗಳೆಂದು ಅನ್ನಿಸುವುದೇ ಇಲ್ಲ. ಇವುಗಳು ಸಹಜ ಅಲ್ಲ. ಇವುಗಳು ಪ್ರಾಕೃತಿಕ ಸತ್ಯ ಗಳಲ್ಲ ಎಂದಾಗಬೇಕಾದರೆ ಈ ಎಲ್ಲವನ್ನು ಪ್ರಶ್ನಿಸಬೇಕಾಗುತ್ತದೆ. ಈ ಕೆಲಸವನ್ನು ಸಮಸ್ಯೆ ಅಥವಾ ಸಮಸ್ಯೀಕರಿಸುವ ಯಾಕೆ ಎನ್ನುವ ಭಾಗದಲ್ಲಿ ಹೇಳಲಾಗಿದೆ. ಸಮಸ್ಯೀಕರಿಸುವುದು ಹೇಗೆ ಎನ್ನುವುದನ್ನು ದಕ್ಷಿಣ ಕನ್ನಡ ಜಿಲ್ಲೆಯ ಪರಶುರಾಮ ಸೃಷ್ಟಿಯ ಉದಾಹರಣೆಯೊಂದಿಗೆ ವಿವರಿಸಲಾಗಿದೆ. ಮುಖ್ಯ ಪ್ರಶ್ನೆಗಳು ಮತ್ತು ಪೂರಕ ಪ್ರಶ್ನೆಗಳನ್ನು ರೂಪಿಸುವ ಕ್ರಮವನ್ನು ಈ ಭಾಗದಲ್ಲಿ ನೋಡಿದ್ದೇವೆ. ಸಮಸ್ಯೆ ಮತ್ತು ಅಧ್ಯಯನದ ಉದ್ದೇಶ ನಡುವೆ ಇರುವ ಸಂಬಂಧ ಮತ್ತು ಉದ್ದೇಶ ಮತ್ತು ಅಧ್ಯಯನದ ವಿಧಾನ ಇರುವ ಸಂಬಂಧವನ್ನು ನಂತರದ ಭಾಗದಲ್ಲಿ ವಿವರಿಸಿದ್ದೇನೆ. ಮುಂದಿನ ಅಧ್ಯಾಯದಲ್ಲಿ ಸಂಶೋಧನ ಪ್ರಸ್ತಾವ ರಚನೆಯ ವಿಧಾನವನ್ನು ವಿವರಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಪ್ರಶ್ನಿಸುವುದು ಮಾನವನ ಮೂಲಭೂತ ಗುಣವಲ್ಲ ಎನ್ನುವ ವಾದವನ್ನು ನಾನು ಮೈಕಲ್ ಫುಕೋನ ಅಧಿಕಾರ ಮತ್ತು ಜ್ಞಾನದ ಸಂಬಂಧ ಕುರಿತ ವಿವರಣೆಯನ್ನು ಆಧರಿಸಿ ಮಾಡಿದ್ದೇನೆ. ಆತ ಜ್ಞಾನ ಮಾನವನ ಮೂಲಭೂತ ಗುಣ ಅಲ್ಲ. ಮಾನವನ ತನ್ನ ಮೂಲಭೂತ ಅಗತ್ಯಗಳನ್ನು (ಹಸಿವು, ನೀರಡಿಕೆ, ಭಯ, ಕಾಮ ಇತ್ಯಾದಿಗಳನ್ನು) ಪೂರೈಸಿಕೊಳ್ಳುವ ಸಂದರ್ಭದಲ್ಲಿ ಜ್ಞಾನ ಉತ್ಪತ್ತಿಯಾಗುತ್ತದೆ ಎಂದು ವಾದಿಸುತ್ತಾನೆ. ಆತನ ಈ ವಾದವನ್ನು ಈ ಕೆಳಗಿನ ಪುಸ್ತಕದಿಂದ ಪಡೆಯಲಾಗಿದೆ. ಜೇಮ್ಸ್ ಡಿ. ಫೇಬಿಯನ್(ಸಂ). *ಮೈಕಲ್ ಫುಕೋ - ಎಸೆಂಷಿಯಲ್ ವರ್ಕ್ಸ್ ಆಫ್ ಫುಕೋ ೧೯೫೪-೧೯೮೪*, ಲಂಡನ್ : ಪೆಂಗ್ವಿನ್ ಬುಕ್ಸ್, ೧೯೯೪

೨. ಸಂಶೋಧನೆ ಮತ್ತು ಅದರ ಫಲಾಫಲ ಕುರಿತ ಈ ವಾದವನ್ನು ಎಡಪಂಥೀಯ ವಿಚಾರ ಧಾರೆಗಳ ಆಧಾರದಲ್ಲಿ ಮಾಡಲಾಗಿದೆ. ಎಲ್ಲವೂ ಪ್ರಜ್ಞೆ ನಿರ್ಧಾರಿತ ಎನ್ನುವ ಲಿಬರಲ್ ವಾದವನ್ನು

ಅಲ್ಲಗೆಳೆಯುವ ದೃಷ್ಟಿಯಿಂದ ಮಾರ್ಕ್ಸ್ ಹಿಸ್ಟೋರಿಕಲ್ ಮೆಟರಿಯಲಿಸಂನ್ನು ಮುಂದಿಡುತ್ತಾನೆ. ಅಲ್ಲಿ ಪ್ರಜ್ಞೆಗಿಂತ ಹೆಚ್ಚಿನ ಆದ್ಯತೆಯನ್ನು ಪರಿಸರಕ್ಕೆ ಮತ್ತು ಅದರೊಂದಿಗಿನ ಮಾನವನ ಸಂಘರ್ಷದಿಂದ ಪ್ರಜ್ಞೆ ರೂಪುಗೊಳ್ಳುತ್ತದೆ ಎನ್ನುವ ವಾದಕ್ಕೆ ಹೆಚ್ಚಿನ ಮನ್ನಣೆ ಸಿಗುವಂತೆ ಮಾರ್ಕ್ಸ್ ವಾದ ಮಾಡುತ್ತದೆ. ಹೀಗೆ ಜ್ಞಾನದ ಉತ್ಪಾದನೆಯಲ್ಲಿ ಸಂಘರ್ಷ ಬಹುದೊಡ್ಡ ಪಾತ್ರವಹಿಸುತ್ತದೆ. ಈ ಸಂಘರ್ಷವನ್ನು ಮಾನವ ತನ್ನೊಳಗೆ, ತಾನು ಬದುಕುವ ಪ್ರಾಕೃತಿಕ ಪರಿಸರದೊಂದಿಗೆ ಮತ್ತು ಸಮಾಜದ ವಿವಿಧ ಸ್ತರದಲ್ಲಿರುವವರೊಂದಿಗೆ ನಡೆಸುತ್ತಾನೆ. ಈ ಸಂಘರ್ಷವನ್ನು ಕಟ್ಟಿಕೊಳ್ಳಲು ಮತ್ತು ನಡೆಸಲು ಆತನಿಗೆ ಸಂಶೋಧನೆಯ ಅಗತ್ಯವಿದೆ. ಹೀಗೆ ಇಲ್ಲಿ ಸಂಶೋಧನೆ ಅನಿವಾರ್ಯವಾಗಿ ವರ್ಗಾಸಕ್ತಿಯನ್ನು ಸಾಧಿಸುವ ಮತ್ತು ಕಾಪಾಡುವ ಒಂದು ಸಾಧನವಾಗುತ್ತದೆ.

೬. ಎರಡು ಮೂರು ವರ್ಷಗಳ ಹಿಂದೆ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿಧಾನಗಳ ಬಗ್ಗೆ ಚರ್ಚಿಸಲು ಒಂದು ಕಮ್ಮಟ ಏರ್ಪಡಿಸಲಾಗಿತ್ತು. ಸಮಾಜ ವಿಜ್ಞಾನ ಸಂಶೋಧನಾ ಪ್ರಸ್ತಾವಗಳಲ್ಲಿ ಸಮಸ್ಯೆ ಮತ್ತು ಸಮಸ್ಯೀಕರಿಸುವುದು ಎಷ್ಟೊಂದು ಕೃತಕ ಆಗುತ್ತಿದೆ ಎನ್ನುವುದನ್ನು ವಿವರಿಸಲು ಅಬ್ದುಲ್ ಅಜೀಜ್ ಅವರು (ನಿವೃತ್ತ ಪ್ರಾಧ್ಯಾಪಕರು, ಐಸಾಕ್, ಬೆಂಗಳೂರು) 'ಸಂಶೋಧನಾ ಪ್ರಸ್ತಾವದ' ಮೇಲಿನ ಉಪನ್ಯಾಸದಲ್ಲಿ ಈ ಘಟನೆಯನ್ನು ವಿವರಿಸಿದರು.

೭. ೨೦೦೪ರಲ್ಲಿ ನಮ್ಮ ವಿಭಾಗ ಶಾಲಾ ಉಸ್ತುವಾರಿ ಸಮಿತಿ ಸದಸ್ಯರಿಗೆ ವಿಶ್ವವಿದ್ಯಾಲಯದ ಲ್ಲೊಂದು ಕಮ್ಮಟ ಏರ್ಪಡಿಸಿತ್ತು. ಆ ಕಮ್ಮಟದಲ್ಲಿ ಶಾಲಾ ಉಸ್ತುವಾರಿ ಸಮಿತಿ ಸದಸ್ಯರ ಜತೆ ಪ್ರಾಥಮಿಕ ಶಾಲಾ ಮುಖ್ಯಗುರುಗಳು ಕೂಡ ಭಾಗವಹಿಸಿದ್ದರು. ಗುಂಪು ಚರ್ಚೆಯ ಸಂದರ್ಭದಲ್ಲಿ ಮೇಲಿನ ಅಭಿಪ್ರಾಯಗಳನ್ನು ಶಾಲಾ ಮುಖ್ಯಗುರುಗಳು ವ್ಯಕ್ತಪಡಿಸಿದ್ದಾರೆ.

೮. ವಿವರಗಳಿಗೆ ಚಂದ್ರಪೂಜಾರಿ, *ಜನಾಯೋಜನೆ-ಹೈದರಾಬಾದ್ ಕರ್ನಾಟಕದ ಅನುಭವಗಳು* (ವಿದ್ಯಾರಣ್ಯ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೪) ಪುಸ್ತಕ ನೋಡಬಹುದು.

೯. ಡಾ.ಟಿ.ಪಿ.ವಿಜಯ್ ಅವರು ಕೊಡಗಿನ ಪ್ರತ್ಯೇಕತಾ ವಾದವನ್ನು ಸಮಸ್ಯೀಕರಿಸಿದ್ದಾರೆ. ಅವರು ಕೊಡವರ ಪ್ರತ್ಯೇಕತಾ ವಾದವನ್ನು ವಿಶ್ಲೇಷಿಸುವ ಹಲವಾರು ಲೇಖನಗಳನ್ನು ಮತ್ತು ಪುಸ್ತಕ ಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿದ್ದೇನೆ. ಟಿ.ಪಿ.ವಿಜಯ್, 'ಕೊಡಗಿನ ಚರಿತ್ರೆಯ ಮೇಲೆ ಕೆಲವು ಟಿಪ್ಪಣಿಗಳು' *ಅರಿವು ಬರಹ,* ಸಂಚಿಕೆ ೧, ೧೯೯೨. ಟಿ. ವಿಜಯ್, *ಆಧುನಿಕ ಕೊಡಗು,* ವಿದ್ಯಾರಣ್ಯ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೦, ಟಿ.ಪಿ.ವಿಜಯ್, *ಕಾನ್ ಫ್ಲಿಕ್ಟಿಂಗ್ ಐಡೆಂಟೀಟಿಸ್ ಇನ್ ಕರ್ನಾಟಕ-ಸಪರೇಟ್ ಸ್ಟೇಟ್ ಅಂಡ್ ಎಂಟಿ ಸಪರೇಟ್ ಸ್ಟೇಟ್ ಮೂವ್ ಮೆಂಟ್ಸ್ ಇನ್ ಕೂರ್ಗ್,* ವಿದ್ಯಾರಣ್ಯ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೪

೧೦. ಕೋಮು ಗಲಭೆಗಳು ಮತ್ತು ಅವುಗಳಿಂದ ಆಗುವ ಪರಿಣಾಮಗಳ ಬಗ್ಗೆ ಸಾಕಷ್ಟು ಅಧ್ಯಯನ ಗಳಿವೆ. ಅವುಗಳನ್ನೆಲ್ಲ ಪರಾಮರ್ಶಿಸಿ ಮೇಲಿನ ವಿವರಗಳನ್ನು ನೀಡಿಲ್ಲ. ಮೇಲಿನ ವಿವರಣೆ ಕೊಡುವಾಗ ನನ್ನ ಕಣ್ಣ ಮುಂದೆ ಇದ್ದುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಕೋಮು ಗಲಭೆಗಳು ಮತ್ತು ಅಲ್ಲಿ ಎರಡು ಕೋಮಿನ ನಡುವೆ ಸೃಷ್ಟಿಯಾದ ಕಂದಕ. ಈ ಕುರಿತು ನಾನು ಒಂದು ಲೇಖನವನ್ನು ಬರೆದಿದ್ದೇನೆ. ಆ ಲೇಖನವನ್ನು ಆಧರಿಸಿ ನಾನು ಮೇಲಿನ ವಿವರಗಳನ್ನು ಕೊಟ್ಟಿದ್ದೇನೆ. ಆ ಲೇಖನದ ವಿವರ ಇಂತಿದೆ. ಎಂ. ಚಂದ್ರಪೂಜಾರಿ, ''ಫೋರ್ಮ್‌ಡ್ / ಕನ್‌ಸ್ಟ್ರಕ್ಟಡ್ ಕಮ್ಯುನಿಟಿಸ್ ಅಂಡ್ ಕಮ್ಯುನಲಿಸಂ - ಕೇಸ್ ಸ್ಟಡಿ ಆಫ್ ಗ್ರೋತ್ ಆಫ್ ಕಮ್ಯುನಲಿಸಂ ಇನ್ ಕೋಸ್ಟಲ್ ಕರ್ನಾಟಕ'', *ಇಂಡಿಯನ್ ಜರ್ನಲ್ ಆಫ್ ಸೆಕ್ಯುಲರಿಸಂ,* ವಾ.೧, ನಂ.೧, ೨೦೦೦, ಪು.೧-೨೮

೧೧. ಅಸಮಾನ ಸಮಾಜದಲ್ಲಿ ಮೆಕಾನಿಕಲ್ ದೃಷ್ಟಿಯಿಂದ ಸಮಾನತೆಯನ್ನು ಊಹಿಸಿಕೊಂಡರೆ ಅಸಮಾನತೆ ಹೆಚ್ಚಾಗುತ್ತದೆ ಎನ್ನುವ ವಾದವನ್ನು ಮೇಲಿನ ರಾವ್‌ಲಿಶಿಯನ್ ಥಿಯರಿಯನ್ನು ಆಧರಿಸಿ ಮಾಡಿದ್ದೇನೆ. ಈ ಕುರಿತು ಚರ್ಚೆಯನ್ನು (ಭಾರತಕ್ಕೆ ಸಂಬಂಧಿಸಿದಂತೆ) ನೀರಾ ಚಂದೋಕೆಯವರ, *ಬಿಯಾಂಡ್ ಸೆಕ್ಯುಲರಿಸಂ- ದಿ ರೈಟ್ಸ್ ಆಫ್ ರಿಲಿಜಿಯಸ್ ಮೈನಾರಿಟೀಸ್,* ನ್ಯೂಡೆಲ್ಲಿ : ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೧, ಪುಸ್ತಕದಲ್ಲಿ ನೋಡಬಹುದು.

೧೨. ಐವತ್ತರ ದಶಕದಲ್ಲಿ ಆರ್ಥಿಕ ಅಸಮಾನತೆ, ನಿರುದ್ಯೋಗ, ಸಂಪತ್ತಿನ ಮರು ವಿತರಣೆ ಇತ್ಯಾದಿಗಳು ಸಂಶೋಧನೆಯ ಬಹುಮುಖ್ಯ ವಿಚಾರಗಳಾಗಿದ್ದವು. ಅವುಗಳನ್ನು ಸಮಸ್ಯೀಕರಿಸುವ ಅಗತ್ಯವೇ ಇರಲಿಲ್ಲ. ಆದರೆ ಆರ್ಥಿಕ ಅಸಮಾನತೆಗೂ ಸಾಮಾಜಿಕ ಅಥವಾ ಸಾಂಸ್ಕೃತಿಕ ಅಸಮಾನತೆಗೆ ಇರುವ ಸಂಬಂಧದ ಬಗ್ಗೆ ಸಂಶೋಧನೆ ನಡೆಸುವುದಾದರೆ ದೊಡ್ಡ ವಾದವನ್ನೇ ಮಂಡಿಸಬೇಕಿತ್ತು. ಯಾಕೆಂದರೆ ಆ ಚಾರಿತ್ರಿಕ ಸಂದರ್ಭದಲ್ಲಿ ಆರ್ಥಿಕ ಅಂಶಗಳು ಅಥವಾ ಪರಿಸರ ಮನುಷ್ಯರ ಇತರ ಎಲ್ಲ ಸಂಗತಿಗಳನ್ನು (ಸಾಮಾಜಿಕ/ಸಾಂಸ್ಕೃತಿಕ ಇತ್ಯಾದಿಗಳನ್ನು) ನಿರ್ಧರಿಸುತ್ತವೆ ಎಂದು ನಂಬಲಾಗಿತ್ತು. ಅಂತಹ ಸಂದರ್ಭದಲ್ಲಿ ಸಾಮಾಜಿಕ/ಸಾಂಸ್ಕೃತಿಕ ಸಂಗತಿಗಳು ಮತ್ತು ಆರ್ಥಿಕ ಸ್ಥಾನಮಾನದ ಸಂಬಂಧವನ್ನು ಕಲ್ಪಿಸುವ ಎಲ್ಲ ಪುರಾವೆಗಳನ್ನು ಒದಗಿಸಬೇಕಾಗುತ್ತದೆ. ಈ ಕುರಿತಂತೆ ಈಗಾಗಲೇ ತಾತ್ವಿಕ ಚರ್ಚೆಗಳು ಮತ್ತು ಬೇರೆ ಕಾಲ ಮತ್ತು ಪ್ರದೇಶದಲ್ಲಿ ನಡೆದ ಅಧ್ಯಯನಗಳ ಫಲಿತಗಳನ್ನು ಬಳಸಿಕೊಂಡು ಇದೊಂದು ಸಂಶೋಧನೆ ನಡೆಸಲೇ ಬೇಕಾದ ಸಮಸ್ಯೆ ಎಂದು ವಾದಿಸಬೇಕಾಗುತ್ತದೆ.

೭

ಸಂಶೋಧನ ಪ್ರಸ್ತಾವ

ಈ ಅಧ್ಯಾಯದಲ್ಲಿ ಸಂಶೋಧನ ಪ್ರಸ್ತಾವ ರಚನೆಯ ವಿಧಾನವನ್ನು ವಿವರಿಸಲಾಗಿದೆ. ಸಂಶೋಧನ ಪ್ರಸ್ತಾವ ಎಲ್ಲ ಸಂಶೋಧನೆಗಳಲ್ಲೂ ತುಂಬಾ ಮಹತ್ವದ ಪಾತ್ರವಹಿಸುತ್ತದೆ. ಇದೊಂದು ರೀತಿಯಲ್ಲಿ ಸಂಶೋಧನೆಯ ಅಡಿಪಾಯವಿದ್ದಂತೆ. ಅಡಿಪಾಯ ಗಟ್ಟಿ ಇದ್ದರೆ ಗಟ್ಟಿಯಾದ ಕಟ್ಟಡ ರಚನೆ ಸಾಧ್ಯ. ಅದೇ ರೀತಿಯಲ್ಲಿ ತರ್ಕಬದ್ಧ ಪ್ರಸ್ತಾವ ರಚನೆಯಾದರೆ ಉತ್ತಮ ಮಹಾಪ್ರಬಂಧ ರಚನೆಯ ಕೆಲಸ ಅರ್ಧ ಆದಂತೆ. ಹಾಗೆಂದು ಪ್ರಸ್ತಾವ ರಚನೆ ಸರಳ ಕೆಲಸವಲ್ಲ. ಸ್ವಲ್ಪ ಮಟ್ಟಿಗೆ ಕ್ಲಿಷ್ಟ ಕೆಲಸವೇ ಆಗಿದೆ. ಆದುದರಿಂದಲೇ ಸಂಶೋಧನೆ ಆರಂಭಿಸುವ ಪ್ರತಿಯೊಬ್ಬರಿಗೂ ಪ್ರಸ್ತಾವ ರಚನೆ ಒಂದು ಕಬ್ಬಿಣದ ಕಡಲೆಯಾಗಿದೆ. ಪ್ರಸ್ತಾವ ರಚನೆಯ ಕ್ಲಿಷ್ಟತೆಯೇ ಅದಕ್ಕೆ ಇಷ್ಟೊಂದು ಮಹತ್ವ ಬರಲು ಕಾರಣವಾಗಿರಲೂಬಹುದು. ಹಾಗೆಂದು ಪ್ರಸ್ತಾವ ರಚನೆ ಕುರಿತು ಮಾಹಿತಿಯೇ ಇಲ್ಲವೆಂದಲ್ಲ. ಸಂಶೋಧನ ವಿಧಾನಗಳನ್ನು ವಿವರಿಸುವ ಪ್ರತಿ ಪುಸ್ತಕದಲ್ಲೂ ಕನಿಷ್ಠ ಒಂದು ಅಧ್ಯಾಯದಲ್ಲಿ ಪ್ರಸ್ತಾವ ರಚನೆಯ ವಿವರಗಳಿರುತ್ತವೆ. ಆದರೆ ಅವೆಲ್ಲ ಹೊಸತಾಗಿ ಸಂಶೋಧನೆ ಆರಂಭಿಸುವವರ ಪ್ರಸ್ತಾವ ರಚನೆಯ ಸಮಸ್ಯೆಯನ್ನು ನಿವಾರಿಸಿಲ್ಲ. ಇದಕ್ಕೆ ಬಹುಮುಖ್ಯ ಕಾರಣ ಪ್ರಸ್ತಾವ ರಚನೆ ಕುರಿತು ಸಂಶೋಧನ ವಿಧಾನದ ಪುಸ್ತಕಗಳಲ್ಲಿ ಇರುವ ಮಾಹಿತಿಗಳು ಸಂಶೋಧಕರ ಅರಿವಿಗೆ ನಿಲುಕುವಂತಿಲ್ಲ. ಇದರಿಂದಾಗಿ ಬಹುತೇಕ ಸಂಶೋಧನ ವಿದ್ಯಾರ್ಥಿಗಳು ಉತ್ತಮ ಅಧ್ಯಯನ ಸಮಸ್ಯೆಗಳಿದ್ದರೂ ಅವುಗಳನ್ನು ತರ್ಕಬದ್ಧ ಪ್ರಸ್ತಾವದ ರೂಪದಲ್ಲಿ ಮಂಡಿಸಲು ಒದ್ದಾಡುವ ಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಈಗಾಗಲೇ ನೋಂದಾವಣಿ ಮಾಡಿದ ವಿಷಯದ ಪ್ರಸ್ತಾವಗಳನ್ನು ನೋಡಿಕೊಂಡು ತಮ್ಮ ಸಂಶೋಧನಾ ವಿಷಯದ ಮೇಲಿನ ಪ್ರಸ್ತಾವವನ್ನು ರಚಿಸುವುದು ಬಹುತೇಕ ವಿದ್ಯಾರ್ಥಿಗಳು ಅನುಸರಿಸಿಕೊಂಡು ಬಂದ ಕ್ರಮ. ವಿದ್ಯಾರ್ಥಿಗಳು ಈ ಸಮಸ್ಯೆಯನ್ನು ಹೋಗಲಾಡಿಸಿ ಪ್ರಸ್ತಾವ ರಚನೆಯ ಕೆಲಸವನ್ನು ಸುಲಭಿಕರಿಸುವುದೇ ಈ ಅಧ್ಯಾಯದ ಉದ್ದೇಶ.

ಪ್ರಸ್ತಾವ ರಚನೆಯ ಪ್ರಕ್ರಿಯೆಯನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಲು ಮಾಡಬೇಕಾದ ಮುಖ್ಯ ತಯಾರಿಗಳಲ್ಲಿ ಒಂದು ಈಗಾಗಲೇ ಆಗಿರುವ ಅಧ್ಯಯನಗಳ ಪರಾಮರ್ಶೆ. ಈಗಾಗಲೇ ಆಗಿರುವ ಅಧ್ಯಯನಗಳ ಪರಾಮರ್ಶೆ ತೃಪ್ತಿಕರವಾಗಿ ನಡೆದರೆ ಪ್ರಸ್ತಾವ ರಚನೆಯ ವಿಧಾನವನ್ನು ಅರ್ಥಮಾಡಿಕೊಂಡು ಅದಕ್ಕನುಸಾರ ಪ್ರಸ್ತಾವ ರಚಿಸುವುದು ಸುಲಭದ ಕೆಲಸ. ಪ್ರಸ್ತಾವ ಅಂದರೇನು? ಅದರಲ್ಲಿ ಇರಬೇಕಾದ ಮುಖ್ಯ ಅಂಶಗಳು ಯಾವುವು? ಪ್ರಸ್ತಾವದ ಪ್ರತಿ ಅಂಶವನ್ನು ಬರೆಯುವುದು ಹೇಗೆ? ಇತ್ಯಾದಿ ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಪ್ರಸ್ತಾವದ ಸರಳ ವ್ಯಾಖ್ಯಾನ ಇಂತಿದೆ. ಆಯ್ಕೆ ಮಾಡಿಕೊಂಡ ವಿಷಯ ಅಥವಾ ಸಮಸ್ಯೆಯ ಪ್ರಾಮುಖ್ಯತೆಯನ್ನು ಹೇಳುವುದರೊಂದಿಗೆ ಆ ಸಮಸ್ಯೆಯನ್ನು ಯಾವ ಉದ್ದೇಶಗಳೊಂದಿಗೆ ಮತ್ತು ವಿಧಾನಗಳಿಂದ ಅಧ್ಯಯನ ಮಾಡಿ ಪ್ರಬಂಧ ರೂಪದಲ್ಲಿ ಮಂಡಿಸಲಾಗುವುದು ಎಂದು ಸಂಕ್ಷಿಪ್ತವಾಗಿ ತಿಳಿಸುವ ಬರಹವನ್ನು ಪ್ರಸ್ತಾವವೆಂದು ವ್ಯಾಖ್ಯಾನಿಸಬಹುದು. ಈ ವ್ಯಾಖ್ಯಾನದಲ್ಲಿ ಹಲವಾರು ಅಂಶಗಳು ಒಳಗೊಂಡಿವೆ. ಅವುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು. ೧. ಪೀಠಿಕೆ ೨. ಸಮಸ್ಯೆ ಅಥವಾ ಸಮಸ್ಯೀಕರಣ, ೩. ಅಧ್ಯಯನದ ಉದ್ದೇಶಗಳು, ೪. ಅಧ್ಯಯನದ ಊಹೆಗಳು, ೫. ಅಧ್ಯಯನದ ವಿಧಾನಗಳು, ೬. ಅಧ್ಯಾಯಗಳು ಮತ್ತು ೭. ಪರಾಮರ್ಶನ ಪುಸ್ತಕಗಳು. ಮುಂದಿನ ಪುಟಗಳಲ್ಲಿ ಈ ಏಳು ಅಂಶಗಳನ್ನು ಬಿಡಿಬಿಡಿಯಾಗಿ ವಿವರಿಸಲಾಗುವುದು. ಸಮಾಜ ಸಂಶೋಧನಾ ವಿಷಯದ ಉದಾಹರಣೆಯೊಂದಿಗೆ ಪ್ರಸ್ತಾವ ರಚನೆಯ ವಿವಿಧ ಹಂತಗಳನ್ನು ಪರಿಚಯಿಸಲು ಪ್ರಯತ್ನಿಸಲಾಗಿದೆ. ಪ್ರಸ್ತಾವ ರಚನೆಯ ಈ ಹಂತಗಳು ಎಲ್ಲಾ ಸಂಶೋಧನೆಗಳಿಗೂ - ಸಾಹಿತ್ಯ/ಸಂಸ್ಕೃತಿ, ಚರಿತ್ರೆ ಇತ್ಯಾದಿಗಳಿಗೂ ಅನ್ವಯವಾಗುತ್ತವೆ. ವಿವಿಧ ಶಿಸ್ತಿನ ವಿದ್ಯಾರ್ಥಿಗಳು ಆಯಾಯ ಶಿಸ್ತಿನ ಮಾಹಿತಿಯನ್ನು ಪ್ರಸ್ತಾವದ ವಿವಿಧ ಹಂತಗಳಲ್ಲಿ ಬಳಸಬೇಕಾಗುತ್ತದೆ.

ಪೀಠಿಕೆ

ಕೆಲವು ಮದುವೆ ಊಟಗಳಲ್ಲಿ ಮುಂದೆ ಬಡಿಸಲಿರುವ ಎಲ್ಲ ಭಕ್ಷ್ಯ ಭೋಜಗಳ ಪುಟ್ಟ ಸ್ಯಾಂಪಲ್‌ನ್ನು ಎಲೆ ಅಥವಾ ತಟ್ಟೆಯಲ್ಲಿ ಬಡಿಸುವ ಕ್ರಮ ಇದೆ. ಇದರಿಂದ ಊಟ ಮಾಡುವವರಿಗೆ ಏನೆಲ್ಲ ಐಟಂಗಳು ಮುಂದೆ ಬರಲಿವೆ ಎನ್ನುವ ಮಾಹಿತಿ ಸಿಗುತ್ತದೆ. ಪೀಠಿಕೆ ಹೆಚ್ಚು ಕಡಿಮೆ ಮದುವೆ ಊಟದ ತಟ್ಟೆಯಲ್ಲಿರುವ ಸ್ಯಾಂಪಲ್ ತರಹ ಕೆಲಸ ಮಾಡುತ್ತದೆ. ಅಂದರೆ ಪ್ರಸ್ತಾವ ಏನನ್ನು ಹೇಳಲು ಪ್ರಯತ್ನಿಸುತ್ತಿದೆ ಎನ್ನುವುದರ ಸಂಕ್ಷಿಪ್ತ ಚಿತ್ರಣವನ್ನು ಪೀಠಿಕೆ ಕೊಡುತ್ತದೆ. ಒಂದು ಸಣ್ಣ ಉದಾಹರಣೆಯೊಂದಿಗೆ ಪೀಠಿಕೆ ಬರೆಯುವುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ. ಸಹಭಾಗಿತ್ವ ಅಭಿವೃದ್ಧಿ-ಜಂಟೀ ಅರಣ್ಯ ಯೋಜನೆಯ ಒಂದು ವಿಮರ್ಶಾತ್ಮಕ ಅಧ್ಯಯನ ಎನ್ನುವ ಸಂಶೋಧನಾ ವಿಷಯದ ಪ್ರಸ್ತಾವದ ಪೀಠಿಕೆಯನ್ನು ಗಮನಿಸುವ. ಅಭಿವೃದ್ಧಿಯ ಸಾಂಪ್ರದಾಯಿಕ ಚಿಂತನೆ ಹಾಗೂ ಮಾದರಿಗಳಲ್ಲಿ

ಅಭಿವೃದ್ಧಿ ಆಗುವವರು ಮತ್ತು ಅಭಿವೃದ್ಧಿ ಮಾಡುವವರು ಎಂಬ ಎರಡು ವರ್ಗವಿದೆ. ಅಭಿವೃದ್ಧಿ ಅಂದರೇನು? ಅದನ್ನು ಹೇಗೆ ಸಾಧಿಸಬಹುದು? ಯಾವ ಯೋಜನೆಗಳು ಯಾರಿಗೆ ಸೂಕ್ತ? ಆ ಯೋಜನೆಗಳಲ್ಲಿ ವಿನಿಯೋಜಿಸಬೇಕಾದ ಸಂಪನ್ಮೂಲವೆಷ್ಟು? ಇತ್ಯಾದಿ ಕುರಿತ ನಿರ್ಧಾರವನ್ನು ಅಭಿವೃದ್ಧಿ ಮಾಡುವವರು ಅಭಿವೃದ್ಧಿ ಆಗಬೇಕಾದವರ ಪರವಾಗಿ ತೆಗೆದುಕೊಳ್ಳುತ್ತಾರೆ. ಇಲ್ಲಿ ಅಭಿವೃದ್ಧಿ ಆಗುವವರು ಒಂದು ಟಾರ್ಗೆಟ್ ಗುಂಪಾಗಿ ಪರಿಗಣಿಸಲ್ಪಡುತ್ತಾರೆ. ಅವರ (ಅಭಿವೃದ್ಧಿ ಆಗುವವರ) ಕೆಲಸ ಯಾರೋ ಮಾಡುವ ಅಭಿವೃದ್ಧಿ ಪ್ರಕ್ರಿಯೆಗೆ ತಮ್ಮನ್ನು ಯಾವುದೇ ತಂಟೆ ತಕರಾರು ಇಲ್ಲದೆ ಒಡ್ಡಿಕೊಳ್ಳುವುದು ಮಾತ್ರ. ಅವರ ಅವಶ್ಯಕತೆಗಳೇನು ಅಥವಾ ಅವರ ಆದ್ಯತೆಗಳೇನು? ಎಂದು ಕೇಳುವ ಗೋಜಿಗೆ ಯಾರೂ ಹೋಗುವುದಿಲ್ಲ ಅಥವಾ ಹೋಗುವ ಅಗತ್ಯನೂ ಇಲ್ಲ. ಯಾಕೆಂದರೆ ಅವುಗಳನ್ನೆಲ್ಲ ಅರ್ಥಮಾಡಿಕೊಳ್ಳುವ ಶಕ್ತಿ ಅಭಿವೃದ್ಧಿ ಮಾಡುವವರಿಗೆ ಇದೆ ಮತ್ತು ಆ ರೀತಿ ಅರ್ಥಮಾಡಿಕೊಂಡೇ ಅವರು (ಅಭಿವೃದ್ಧಿ ಮಾಡುವವರು) ಯೋಜನೆಗಳನ್ನು ಜಾರಿಗೆ ತರುತ್ತಾರೆ ಎನ್ನುವ ತಿಳುವಳಿಕೆ ಇತ್ತು. ಬಡವರ ಕಲ್ಯಾಣಕ್ಕಾಗಿರುವ ಬಹುತೇಕ ಕಾರ್ಯಕ್ರಮಗಳು ಇದೇ ಕ್ರಮದಲ್ಲಿ ರೂಪುಗೊಳ್ಳುತ್ತಿದ್ದವು ಮತ್ತು ಜಾರಿಗೊಳ್ಳುತ್ತಿದ್ದವು. ಆದರೆ ಅಭಿವೃದ್ಧಿಯ ಈ ಮಾದರಿಯ ಹಲವಾರು ದಶಕಗಳ ಪ್ರಯೋಗದಿಂದ ಕೆಳಸ್ತರದ ಜನರು ಉದ್ಧಾರವಾಗುವ ಲಕ್ಷಣ ಕಾಣಲಿಲ್ಲ. ಆವಾಗ ಅಭಿವೃದ್ಧಿ ಮಾದರಿ ಮತ್ತು ಚಿಂತನೆಗಳ ಬಗ್ಗೆ ಕೆಲವೊಂದು ಮೂಲಭೂತ ಪ್ರಶ್ನೆಗಳು ಎದ್ದವು. ಜನರ ಬೇಕು ಬೇಡಗಳನ್ನು ನಿರ್ಧರಿಸಲು ಜನರಿಂದ ದೂರ ಇರುವವರಿಗೆ ಹೇಗೆ ಸಾಧ್ಯ? ಅಭಿವೃದ್ಧಿ ಮಾಡುವವರ ಬದುಕು, ಸಂಸ್ಕೃತಿ ಇತ್ಯಾದಿಗಳು ಅಭಿವೃದ್ಧಿ ಆಗಬೇಕಾದವರ ಬದುಕು ಹಾಗೂ ಸಂಸ್ಕೃತಿಗಿಂತ ಭಿನ್ನ. ಸಂಪೂರ್ಣವಾಗಿ ವಿಭಿನ್ನ ಸಾಂಸ್ಕೃತಿಕ ಲೋಕಕ್ಕೆ ಸೇರಿದ ಜನರು ಕೆಳಸ್ತರದ ಜನರ ಆದ್ಯತೆಗಳನ್ನು ಅರ್ಥಮಾಡಿಕೊಳ್ಳಲು ಹೇಗೆ ಸಾಧ್ಯ? ಈ ಎಲ್ಲ ಪ್ರಶ್ನೆಗಳ ಹಿನ್ನೆಲೆಯಲ್ಲಿ ಅಭಿವೃದ್ಧಿ ಚಿಂತನೆ ಹಾಗೂ ಆಚರಣೆಗಳಲ್ಲಿ ಕೆಲವೊಂದು ಮೂಲಭೂತ ಪರಿವರ್ತನೆಗಳು ಆಗಬೇಕಾದ ಅನಿವಾರ್ಯತೆ ಇದೆ ಎಂದು ವಿವಿಧ ತಾತ್ವಿಕ ಮೂಲಗಳಿಗೆ ಬದ್ಧರಾದ ಸಂಶೋಧಕರು ವಾದಿಸತೊಡಗಿದರು. ಹಿಂದಿನ ಮೇಲಿನಿಂದ ಕೆಳಗೆ ಇಳಿಯುವ ಅಭಿವೃದ್ಧಿ ಮಾದರಿಗಿಂತ ಭಿನ್ನವಾದ ಕೆಳಗಿನಿಂದ ಮೇಲೆ ಏರುವ ಅಭಿವೃದ್ಧಿ ಮಾದರಿಗೆ ಒತ್ತು ನೀಡುವ ಅಗತ್ಯ ಇದೆ ಎಂದು ಮನಗಾಣಲಾಯಿತು.[೧]

ಹೊಸ ಮಾದರಿ ಪ್ರಕಾರ ಜನರು ಬೇಕು ಬೇಡಗಳ ಕುರಿತು ಅವರೇ ನಿರ್ಧಾರ ತೆಗೆದುಕೊಂಡು ಅವುಗಳ ಪೂರೈಕೆಗೆ ಅಗತ್ಯವಿರುವ ಯೋಜನೆಗಳನ್ನು ಅವರೇ ತಯಾರಿ ಮಾಡಿ ಅವುಗಳನ್ನು ಕಾರ್ಯರೂಪಕ್ಕೆ ತರಬೇಕು. ಅಭಿವೃದ್ಧಿಯ ಈ ಹೊಸ ಪರಿಕಲ್ಪನೆಯನ್ನು ಸಹಭಾಗಿತ್ವ ಅಥವಾ ಜನರ ಪಾಲುಗೊಳ್ಳುವಿಕೆಯಿಂದ ಸಾಧ್ಯವಾಗುವ ಅಭಿವೃದ್ಧಿ ಎಂದು ವ್ಯಾಖ್ಯಾನಿಸಲಾಗಿದೆ. ಸಹಭಾಗಿತ್ವದ ತಾತ್ವಿಕತೆಗೆ ಅನುಸಾರ ನಡೆಯುವ ಅಭಿವೃದ್ಧಿ

ಯಲ್ಲಿ ಜನರು ಒಂದು ಸಮುದಾಯವಾಗಿ ತಮ್ಮ ಆದ್ಯತೆಗಳನ್ನು ತಾವೇ ಗುರುತಿಸಿಕೊಳ್ಳುತ್ತಾರೆ. ಜತೆಗೆ ಅವುಗಳ ಈಡೇರಿಕೆಗೆ ಪೂರಕವಾದ ಯೋಜನೆಗಳನ್ನು ತಯಾರಿಸಿ ಕಾರ್ಯರೂಪಕ್ಕೆ ತರುವುದು ಕೂಡ ಸಮುದಾಯ ಸಹಭಾಗಿತ್ವದ ಅಂಗವಾಗಿರುತ್ತದೆ. ಹೀಗೆ ಇಂದು ಎಲ್ಲ ಕ್ಷೇತ್ರಗಳಲ್ಲೂ ಸಹಭಾಗಿತ್ವ ಅಭಿವೃದ್ಧಿಯ ಕೂಗು ಕೇಳಿ ಬರುತ್ತಿದೆ. ಜಂಟೀ ಅರಣ್ಯ ಯೋಜನೆಯೊಂದಿಗೆ ಅರಣ್ಯ ಸಂರಕ್ಷಣೆ ಹಾಗೂ ಅಭಿವೃದ್ಧಿ ಕ್ಷೇತ್ರದಲ್ಲೂ ಸಹಭಾಗಿತ್ವ ಮಾದರಿ ಕಾರ್ಯರೂಪಕ್ಕೆ ಬಂದಿದೆ. ಇದೇ ಸಂದರ್ಭದಲ್ಲಿ ಅರಣ್ಯ ಸಂರಕ್ಷಣೆ ಮತ್ತು ನಿರ್ವಹಣೆಯಲ್ಲಿ ಜನರ ಸಹಭಾಗಿತ್ವ ನಮ್ಮ ದೇಶಕ್ಕೆ ಹೊಸತೇನೂ ಅಲ್ಲ ಎನ್ನುವ ಅಭಿಪ್ರಾಯನೂ ಇದೆ. ಅನಾದಿಕಾಲದಿಂದಲೂ ಜನ ಸಾಮಾನ್ಯರು ಕಾಡನ್ನು ಸಾಮುದಾಯಿಕ ಸ್ವತ್ತಾಗಿ ಕಾಪಾಡಿಕೊಂಡು ಬಂದಿದ್ದಾರೆ.[೩] ಆದರೆ ವಸಾಹತು ಮತ್ತು ನಂತರದ ಆಧುನೀಕರಣ ಸಂದರ್ಭಗಳಲ್ಲಿ ಸ್ಥಳೀಯ ಸಮುದಾಯ ಮತ್ತು ಅರಣ್ಯಗಳ ನಡುವಿನ ಸಂಬಂಧ ಕದಡಿ ಹೋಯಿತು. ಇದರಿಂದಾಗಿ ಅರಣ್ಯ ನಾಶವಾಗುತ್ತಾ ಹೋಯಿತು. ಅವನತಿ ಹೊಂದುತ್ತಿರುವ ಅರಣ್ಯಗಳ ಪುನರುಜ್ಜೀವನಕ್ಕೆ ಸ್ಥಳೀಯ ಸಮುದಾಯಗಳನ್ನು ಅರಣ್ಯ ಸಂರಕ್ಷಣೆಯಲ್ಲಿ ತೊಡಗಿಸಿಕೊಳ್ಳಬೇಕೆಂಬ ಸತ್ಯ ತಡವಾದರೂ ಸಂಬಂಧಪಟ್ಟವರಿಗೆ ಅರಿವಾಯಿತು ಎನ್ನುವ ಮಾತನ್ನು ಅನಾದಿ ಕಾಲದಿಂದಲೂ ನಮ್ಮಲ್ಲಿ ಸಹಭಾಗಿತ್ವ ಇತ್ತು ಎಂದು ವಾದಿಸುವವರು ಹೇಳುತ್ತಾರೆ. ಹೀಗೆ ಇಂದು ಜಾರಿಗೆ ಬಂದ ಜಂಟೀ ಅರಣ್ಯ ಯೋಜನೆ ಒಂದು ವಿಧದಲ್ಲಿ ಹಿಂದಿನ ಸಹಭಾಗಿತ್ವ ಕಲ್ಪನೆಗೆ ಮರುರೂಪ ಕೊಟ್ಟ ಹಾಗೆ ಎನ್ನುವ ವಾದನೂ ಇದೆ.[೪] ಸ್ಥಳೀಯ ಸಮುದಾಯಗಳ ಸಹಭಾಗಿತ್ವದೊಂದಿಗೆ ಅರಣ್ಯವನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ಜಂಟೀ ಅರಣ್ಯ ಯೋಜನೆಯ ಉದ್ದೇಶ. ಹಳ್ಳಿಗಳಲ್ಲಿ ಅರಣ್ಯ ಸಮಿತಿಗಳನ್ನು ರಚಿಸಲಾಗುವುದು ಮತ್ತು ಆ ಸಮಿತಿಗಳು ಅರಣ್ಯ ಇಲಾಖೆಯ ಜತೆ ಸೇರಿ ಅರಣ್ಯ ಸಂರಕ್ಷಣೆ ಹಾಗೂ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿ ಕಾರ್ಯರೂಪಕ್ಕೆ ತರುತ್ತವೆ. ಹೀಗೆ ಇದೊಂದು ಜವಾಬ್ದಾರಿ, ಅಧಿಕಾರ ಹಾಗೂ ಉತ್ಪನ್ನದಲ್ಲಿ ಸಮಪಾಲು ಇರುವ ಸಹಭಾಗಿತ್ವ ಯೋಜನೆ. ಜಂಟೀ ಅರಣ್ಯ ಯೋಜನೆಯನ್ನು ಅಧ್ಯಯನ ಮಾಡುವ ಮೂಲಕ ಅದರಲ್ಲಿನ ಜನರ ಸಹಭಾಗಿತ್ವ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವ ಉದ್ದೇಶ ಈ ಅಧ್ಯಯನದ್ದು. ಹೀಗೆ ಪೀಠಿಕೆ ರೂಪದಲ್ಲಿರುವ ಮಾಹಿತಿ ಅಧ್ಯಯನ ವಿಷಯ, ಆ ವಿಷಯವನ್ನು ಆಯ್ಕೆ ಮಾಡಲು ಕಾರಣಗಳು, ವಿಷಯದ ಪ್ರಾಮುಖ್ಯತೆ, ಉದ್ದೇಶಿತ ಸಂಶೋಧನೆ ಮಾಡಬಹುದಾದ ಕೊಡುಗೆ ಮುಂತಾದವುಗಳನ್ನು ಸಂಕ್ಷಿಪ್ತವಾಗಿ ಹೇಳುತ್ತಾ ಅಧ್ಯಯನ ವಿಷಯವನ್ನು ಪರಿಚಯಿಸುತ್ತದೆ.

ಸಮಸ್ಯೀಕರಣ

ಸಮಸ್ಯೀಕರಣ ಪ್ರಸ್ತಾವದ ಬುನಾದಿ. ಸಮಸ್ಯೀಕರಣ ತರ್ಕಬದ್ಧವಾಗಿ ನಡೆದರೆ ಪ್ರಸ್ತಾವ ರಚನೆಯ ಅರ್ಧ ಕೆಲಸ ಮುಗಿದಂತೆ. ಯಾಕೆಂದರೆ ಸಮಸ್ಯೀಕರಣ ಮತ್ತು ಪ್ರಸ್ತಾವದಲ್ಲಿ

ಮುಂದೆ ಬರುವ ಹಂತಗಳಿಗೂ - ಅಧ್ಯಯನದ ಉದ್ದೇಶ, ವಿಧಾನ ಇತ್ಯಾದಿಗಳಿಗೆ ನೇರ ಸಂಬಂಧ ಇದೆ. ಸಮಸ್ಯೀಕರಣ ದೋಷಪೂರಿತವಾದರೆ ಅಧ್ಯಯನದ ಉದ್ದೇಶ, ವಿಧಾನ ಇತ್ಯಾದಿಗಳು ಕೂಡ ತಪ್ಪಾಗುವ ಸಾಧ್ಯತೆ ಇದೆ. ಪ್ರಶ್ನೆಗಳನ್ನು ಎತ್ತುವ ಅಥವಾ ಕೇಳುವ ಪ್ರಕ್ರಿಯೆಯನ್ನು ಸಮಸ್ಯೀಕರಣ ಎನ್ನಬಹುದು. ಇದು ತರ್ಕಬದ್ಧವಾದ ವಾದ ಮಂಡನೆಯ ಮೊದಲ ಹಂತ. ಅಂದರೆ ಈಗಾಗಲೇ ಮಂಡಿತವಾದ ವಾದಗಳನ್ನು ವಿಶ್ಲೇಷಿಸಿ ಅವುಗಳಲ್ಲಿನ ಕೊರತೆಗಳನ್ನು ಪ್ರಶ್ನೆ ರೂಪದಲ್ಲಿ ಮಂಡಿಸುವುದು. ಇಂದು ಎಲ್ಲ ವಿಷಯಗಳಲ್ಲೂ ಸಾಕಷ್ಟು ಸಂಶೋಧನಾ ಪ್ರಬಂಧಗಳೂ ಮಂಡಿತವಾಗಿವೆ. ವಿಷಯ ಆಯ್ಕೆ ಮಾಡಿಕೊಂಡವರು ತಾವು ಆಯ್ಕೆ ಮಾಡಿಕೊಂಡ ವಿಷಯದಲ್ಲಿ ಈಗಾಗಲೇ ಮಂಡಿತವಾದ ಪ್ರಬಂಧಗಳನ್ನು ಮತ್ತು ಇತರ ಸಂಶೋಧನಾ ಬರಹಗಳನ್ನು ಕೂಲಂಕಶವಾಗಿ ಪರಿಶೀಲಿಸಬೇಕು. ಈಗಾಗಲೇ ಮಂಡಿತವಾದ ಪ್ರಬಂಧಗಳಲ್ಲಿ ಎತ್ತಿದ ಮುಖ್ಯ ಪ್ರಶ್ನೆಗಳಾವು ಮತ್ತು ಅವುಗಳಿಗೆ ಕಂಡುಕೊಂಡು ಉತ್ತರಗಳೇನೆಂದು ಪಟ್ಟಿ ಮಾಡಬೇಕು. ಈಗಾಗಲೇ ಎತ್ತಿದ ಪ್ರಶ್ನೆಗಳು ಮತ್ತು ಅವುಗಳಿಗೆ ಪಡೆದ ಉತ್ತರಗಳಲ್ಲಿನ ದೋಷಗಳನ್ನು ಪಟ್ಟಿ ಮಾಡಬೇಕು. ಈ ಎರಡರ ಹಿನ್ನೆಲೆಯಲ್ಲಿ ಸಂಶೋಧಕರು ಎತ್ತಲು ಅಥವಾ ಕೇಳಲು ಅಪೇಕ್ಷಿಸುವ ಪ್ರಶ್ನೆಗಳನ್ನು ಗುರುತಿಸಬೇಕು. ಇವಿಷ್ಟು ಸಮಸ್ಯೀಕರಣ ಹಂತದಲ್ಲಿ ನಡೆಯುವ ಮುಖ್ಯ ಕೆಲಸಗಳು. ಜಂಟೀ ಅರಣ್ಯ ಯೋಜನೆ ಮೇಲಿನ ಅಧ್ಯಯನದ ಉದಾಹರಣೆಯನ್ನು ಇಲ್ಲೂ ಮುಂದುವರಿಸುವ. ಜಂಟೀ ಅರಣ್ಯ ಯೋಜನೆ ಮೇಲೆ ಈಗಾಗಲೇ ಆಗಿರುವ ಅಧ್ಯಯನಗಳ ವಿಶ್ಲೇಷಣೆ ಮತ್ತು ಎತ್ತಿದ ಪ್ರಶ್ನೆಗಳನ್ನು ಗಮನಿಸುವ.

ಸುಮಾರು ಹತ್ತು ವರ್ಷಗಳಿಂದ ಜಂಟೀ ಅರಣ್ಯ ಯೋಜನೆ ಭಾರತದ ವಿವಿಧ ರಾಜ್ಯಗಳಲ್ಲಿ ಹಾಗೂ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಜಾರಿಗೆ ಬಂದಿದೆ. ಈ ಅವಧಿಯಲ್ಲಿ ಜಂಟೀ ಅರಣ್ಯ ಯೋಜನೆಯ ಅನುಷ್ಠಾನ ಮತ್ತು ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವ ಹಲವಾರು ಅಧ್ಯಯನಗಳು ನಡೆದಿವೆ. ಬಹುತೇಕ ಅಧ್ಯಯನಗಳು ಜಂಟೀ ಅರಣ್ಯ ಯೋಜನೆಯ ಈ ಕೆಳಗಿನ ಅಂಶಗಳ ಮೇಲೆ ಗಮನ ಹರಿಸಿವೆ. ಒಂದು, ಅರಣ್ಯ ಸಂರಕ್ಷಣೆ ಹಾಗೂ ಅಭಿವೃದ್ಧಿ ಬಗ್ಗೆ - ಜಂಟೀ ಅರಣ್ಯ ಯೋಜನೆಯ ಸಾಂಸ್ಥಿಕ ಸಮಸ್ಯೆಗಳು, ಉತ್ಪಾದಕತೆ ಹಾಗೂ ಜೀವದ್ರವ್ಯಗಳ ಉತ್ಪಾದನೆ ಮತ್ತು ಉತ್ಪನ್ನಗಳ ಹಂಚಿಕೆ ಬಗ್ಗೆ.[೬] ಎರಡು, ಜಂಟೀ ಅರಣ್ಯ ಯೋಜನೆಯ ವ್ಯಾಪ್ತಿ ಬಗ್ಗೆ - ಯೋಜನೆಯನ್ನು ಕೇವಲ ಅವನತಿ ಹೊಂದಿರುವ ಅರಣ್ಯಗಳಿಗೆ ಸೀಮಿತಗೊಳಿಸುವ ಬದಲು ಉತ್ತಮ ಅರಣ್ಯ ಪ್ರದೇಶಗಳಿಗೂ ವಿಸ್ತರಿಸುವ ಕುರಿತು.[೭] ಮೂರು, ನಿರ್ವಹಣಾ ಸಮಿತಿಯ ಸಾಮಾಜಿಕ ಪ್ರತಿನಿಧೀಕರಣದ ಬಗ್ಗೆ. ನಿರ್ವಹಣಾ ಸಮಿತಿಯಲ್ಲಿ ಸ್ಥಳೀಯ ಪ್ರತಿಷ್ಠಿತರನ್ನು ಕಡಿಮೆ ಮಾಡಿ ಅರಣ್ಯದ ಮೇಲೆ ನೇರ ಅವಲಂಬಿತ ಕಡು ಬಡ ಮಹಿಳೆ ಹಾಗೂ ಪುರುಷರಿಗೆ ಆದ್ಯತೆ ನೀಡುವುದರ ಬಗ್ಗೆ.[೮] ನಾಲ್ಕು, ಜಂಟೀ ಅರಣ್ಯ ಯೋಜನೆಯ ಪ್ರಾಥಮಿಕ

ಪಾಲುದಾರರ ಜೀವನೋಪಾಯ ಹಾಗೂ ಯೋಗಕ್ಷೇಮದ ಮೇಲೆ ಯೋಜನೆಯ ಪರಿಣಾಮವನ್ನು ಅಧ್ಯಯನ ಮಾಡುವುದು.[2] ಈಗಾಗಲೇ ಆಗಿರುವ ಅಧ್ಯಯನಗಳ ಒಂದು ಸ್ಥೂಲ ಪರಿಚಯವನ್ನು ಮೇಲಿನ ನಾಲ್ಕು ಅಂಶಗಳು ಮಂಡಿಸುತ್ತವೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಆಗಿರುವ ಬಹುತೇಕ ಅಧ್ಯಯನಗಳ ಕೊರತೆಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು. ಒಂದು, ಬಹುತೇಕ ಅಧ್ಯಯನಗಳು ಅರಣ್ಯ ರಕ್ಷಣೆ ಹಾಗೂ ಸಂರಕ್ಷಣೆ ಬಗ್ಗೆ ತಮ್ಮ ವಿಶ್ಲೇಷಣೆಯನ್ನು ಕೇಂದ್ರೀಕರಿಸಿವೆ. ಇದರಿಂದಾಗಿ ಜಂಟೀ ಅರಣ್ಯ ಯೋಜನೆಯ ಮೂಲಭೂತ ಅಂಶವಾದ ಸಹಭಾಗಿತ್ವ ಕಡೆ ವಿಶೇಷ ಗಮನ ಹರಿದಿಲ್ಲ. ಜಂಟೀ ಅರಣ್ಯ ಯೋಜನೆಯ ಯಶಸ್ಸನ್ನು ಗಾಢವಾಗಿ ಪ್ರಭಾವಿಸುವ ಹಲವಾರು ಅಂಶಗಳನ್ನು ಅರಣ್ಯ ಅಭಿವೃದ್ಧಿ ಮತ್ತು ಸಂರಕ್ಷಣೆಯಲ್ಲಿ ಸ್ಥಳೀಯ ಜನರ ಸಹಭಾಗಿತ್ವ ಕೂಡ ಸೇರಿದೆ. ಎರಡು, ನಮ್ಮ ಅರಣ್ಯ ಇಲಾಖೆ ಒಂದು ಬೃಹತ್ ವ್ಯವಸ್ಥೆ. ದೇಶದ ಭೂಭಾಗದ ಐದನೇ ಒಂದಂಶಕ್ಕಿಂತಲೂ ಹೆಚ್ಚು ಅದರ ವಶದಲ್ಲಿ ಇದೆ. ಜತೆಗೆ ಅಗಾಧವಾದ ಅಧಿಕಾರಶಾಹಿ, ನಿಖರವಾದ ಏಣಿಶ್ರೇಣಿ ಹಾಗೂ ಅಧಿಕಾರದ ಕೇಂದ್ರೀಕರಣ ಅರಣ್ಯ ಇಲಾಖೆಯ ಪ್ರಮುಖ ಲಕ್ಷಣಗಳಾಗಿವೆ. ಹಲವಾರು ವರ್ಷಗಳಿಂದ ಜನರಿಂದ ದೂರ ಇದ್ದ ಇಂತಹ ಒಂದು ಇಲಾಖೆ ಒಮ್ಮಿಂದೊಮ್ಮೆಗೆ ಜನರೊಂದಿಗೆ ಬೆರತು ಪ್ರಜಾಪ್ರಭುತ್ವ ಮಾದರಿಯಲ್ಲಿ ಕೆಲಸ ಮಾಡಬೇಕಾಗಿದೆ. ಸ್ಥಳೀಯ ಸಮುದಾಯಗಳು ಮತ್ತು ತಳಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಬಂಧಗಳಲ್ಲಿ ಸಾಕಷ್ಟು ಬದಲಾವಣೆ ಆಗಬೇಕಾಗಿದೆ. ಆದರೆ ಈಗಾಗಲೇ ಆಗಿರುವ ಅಧ್ಯಯನಗಳು ಈ ಬಗ್ಗೆ ವಿಶೇಷ ಗಮನ ಹರಿಸಿಲ್ಲ. ಮೂರು, ವಸಾಹತು ಪೂರ್ವದಲ್ಲಿ ಸ್ಥಳೀಯ ಸಮುದಾಯಗಳು ಸಂಪನ್ಮೂಲಗಳ ಬಳಕೆ ಮತ್ತು ಸಂರಕ್ಷಣೆ ಮಾಡುತ್ತಿದ್ದವು. ಆದರೆ ಆ ಸಮುದಾಯಗಳ ಪಾತ್ರವನ್ನು ವಸಾಹತು ಮತ್ತು ಆಧುನೀಕರಣ ನಿರ್ಲಕ್ಷಿಸಿದವು. ಅದರ ಪರಿಣಾಮವಾಗಿ ಅರಣ್ಯ ಸಂರಕ್ಷಣೆಯಲ್ಲಿ ಈ ಎಲ್ಲ ಸಮಸ್ಯೆಗಳನ್ನು ನಾವು ಇಂದು ಎದುರಿಸುತ್ತಿದ್ದೇವೆ. ಈ ಸಮಸ್ಯೆ ಪರಿಹಾರಕ್ಕೆ ಸ್ಥಳೀಯ ಸಮುದಾಯಗಳನ್ನು ಸಂಪನ್ಮೂಲ ನಿರ್ವಹಣೆಯಲ್ಲಿ ತೊಡಗಿಸಿಕೊಳ್ಳಬೇಕೇ ಎನ್ನುವ ಗ್ರಹಿತದೊಂದಿಗೆ ಜಂಟೀ ಅರಣ್ಯ ಯೋಜನೆ ಆರಂಭವಾಗಿದೆ. ಆದರೆ ಸ್ಥಳೀಯ ಸಮುದಾಯಗಳ ಸ್ವರೂಪ, ಅವುಗಳ ಒಳಗಿನ ವೈರುಧ್ಯಗಳು, ಅವುಗಳ ಆರ್ಥಿಕ ಸ್ಥಿತಿಗತಿ ಮತ್ತು ಯೋಜನೆಗಳಲ್ಲಿ ಅವುಗಳು ಪಾಲುಗೊಳ್ಳುವ ಸಾಧ್ಯತೆ ಇತ್ಯಾದಿಗಳ ಬಗ್ಗೆ ಈಗಾಗಲೇ ಆಗಿರುವ ಅಧ್ಯಯನಗಳು ವಿಶೇಷ ಗಮನಹರಿಸಿಲ್ಲ.

ಈಗಾಗಲೇ ಆಗಿರುವ ಅಧ್ಯಯನಗಳು ಸ್ಥಳೀಯ ಸಮುದಾಯಗಳ ಸಹಭಾಗಿತ್ವದ ಸಮಸ್ಯೆಗಳಿಗೆ ಮಹತ್ವ ನೀಡಿಲ್ಲ ಎನ್ನುವುದನ್ನು ಮೇಲಿನ ವಿವರಗಳು ಸ್ಪಷ್ಟಪಡಿಸುತ್ತವೆ. ಸಹಭಾಗಿತ್ವವನ್ನು ಪ್ರಭಾವಿಸುವ ಅಂಶಗಳನ್ನು ಗುರುತಿಸುವ ಮತ್ತು ಅವುಗಳು ಸಹಭಾಗಿತ್ವ ವನ್ನು ಪ್ರಭಾವಿಸುವ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವ ಕೆಲಸ ಆಗಬೇಕಾಗಿದೆ.

ಜಂಟೀ ಅರಣ್ಯ ಯೋಜನೆಯಲ್ಲಿ ಸ್ಥಳೀಯ ಸಮುದಾಯಗಳ ಸಹಭಾಗಿತ್ವ ನಿರ್ಧರಿಸುವ ಪ್ರಮುಖ ಅಂಶಗಳಾವುವು? ಒಂದು, ಅರಣ್ಯ ಅಭಿವೃದ್ಧಿ ಮತ್ತು ಸಂರಕ್ಷಣೆಯಲ್ಲಿ ಸ್ಥಳೀಯ ಜನರ ಸಹಭಾಗಿತ್ವವನ್ನು ಅನುಕೂಲಗೊಳಿಸುವ ಸಾಂಸ್ಥಿಕ ಚೌಕಟ್ಟು. ಗ್ರಾಮ ಅರಣ್ಯ ಸಮಿತಿ ಮತ್ತು ಅರಣ್ಯ ನಿರ್ವಹಣಾ ಸಮಿತಿಗಳು ಜಂಟೀ ಅರಣ್ಯ ಯೋಜನೆಯ ಬಹುಮುಖ್ಯ ಅಂಗಗಳು. ಜಂಟೀ ಅರಣ್ಯ ಯೋಜನೆಯ ತತ್ತ್ವಗಳನ್ನು ಕಾರ್ಯರೂಪಕ್ಕೆ ತರುವ ಮತ್ತು ಯೋಜನೆಯ ಬಹುಮುಖ್ಯ ಅಂಗಗಳು. ಜಂಟೀ ಅರಣ್ಯ ಯೋಜನೆಯ ತತ್ತ್ವಗಳನ್ನು ಕಾರ್ಯರೂಪಕ್ಕೆ ತರುವ ಮತ್ತು ಯೋಜನೆಯನ್ನು ಯಶಸ್ವಿಗೊಳಿಸುವ ಜವಾಬ್ದಾರಿ ಈ ಸಮಿತಿಗಳದ್ದು. ಈ ಸಮಿತಿಗಳ ರೂಪುಗೊಳ್ಳುವಿಕೆ, ಸಮಿತಿಯ ಸದಸ್ಯರ ಹಿನ್ನೆಲೆ, ಸಮಿತಿಯ ಸ್ಥಾನ, ಸಮಿತಿಯ ಕಾರ್ಯ, ವ್ಯಾಪ್ತಿ ಇತ್ಯಾದಿಗಳ ಮಾಹಿತಿ ಸ್ಥಳೀಯ ಸಮುದಾಯಗಳ ಸಹಭಾಗಿತ್ವದ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಅಗತ್ಯ. ಎರಡು, ಈ ಸಹಭಾಗಿತ್ವಕ್ಕೆ ಪ್ರತಿಫಲವಾಗಿ ದೊರೆಯುವ ಅರಣ್ಯ ಉತ್ಪನ್ನಗಳ ಪ್ರಮಾಣ ಕೂಡ ಸಹಭಾಗಿತ್ವವನ್ನು ಪ್ರಭಾವಿಸಬಹುದು. ನೇರವಾಗಿ ಅರಣ್ಯ ಉತ್ಪನ್ನಗಳನ್ನು ಅವಲಂಭಿಸಿರುವ ಜನಾಂಗಗಳು ಮತ್ತು ಅರಣ್ಯ ಸುತ್ತಮುತ್ತಲಿರುವ ಸಮುದಾಯಗಳ ಅರಣ್ಯ ಉತ್ಪನ್ನಗಳ ಬೇಡಿಕೆಯನ್ನು ನಮ್ಮ ಅರಣ್ಯ ನೀತಿ ಪರಿಗಣಿಸಿರಲಿಲ್ಲ. ಆದುದರಿಂದ ಸುತ್ತಮುತ್ತಲಿನ ಸಮುದಾಯಗಳು ಅರಣ್ಯ ಸಂರಕ್ಷಣೆ ಮತ್ತು ಅಭಿವೃದ್ಧಿಯಲ್ಲಿ ಆಸಕ್ತಿ ತೋರಿಸಲಿಲ್ಲ. ಹೊಸ ಅರಣ್ಯ ನೀತಿಯಲ್ಲಿ ಸ್ಥಳೀಯ ಸಮುದಾಯಗಳ, ಅದರಲ್ಲೂ ಅರಣ್ಯ ಉತ್ಪನ್ನಗಳನ್ನು ನಂಬಿಕೊಂಡಿರುವ ಅತಿ ಬಡ ಕೃಷಿಕರ ಅಗತ್ಯಗಳನ್ನು ಪೂರೈಸುವ ಭರವಸೆಗಳು ಇವೆ. ಸಹಭಾಗಿತ್ವದ ಗತಿಯನ್ನು ಆ ಭರವಸೆಗಳ ಈಡೇರಿಕೆ ಪ್ರಭಾವಿಸಬಹುದು. ಮೂರು, ಜಂಟೀ ಅರಣ್ಯ ಯೋಜನೆಯನ್ನು ಕಾರ್ಯರೂಪಕ್ಕೆ ತರುವವರು ತಳಮಟ್ಟದ ಅರಣ್ಯ ಸಿಬ್ಬಂದಿಗಳು. ಇವರ ಮತ್ತು ಸ್ಥಳೀಯರ ಸಂಬಂಧ ಹಿಂದಿನ ರೀತಿಯಲ್ಲೇ ಇದ್ದರೆ ಸಹಭಾಗಿತ್ವ ಪರಿಣಾಮಕಾರಿಯಾಗಿ ಇರಲು ಸಾಧ್ಯವಿಲ್ಲ. ನಾಲ್ಕು, ನಮ್ಮಲ್ಲಿ ಸಮುದಾಯವನ್ನು ಜಾತಿಗೆ ಸಮೀಕರಿಸುವ ನೋಡುವ ಪದ್ಧತಿ ಬಹಳ ಹಿಂದಿನಿಂದಲೇ ಇದೆ. ಈ ಪದ್ಧತಿಯಲ್ಲಿ ಹಲವಾರು ದೋಷಗಳು ಇವೆ ನಿಜ. ಆದರೆ ಸಮುದಾಯಗಳು ರೂಪುಗೊಳ್ಳುವುದರ ಬಗ್ಗೆ ಮತ್ತು ಅವುಗಳ ಸ್ವರೂಪದ ಬಗ್ಗೆ ಒಂದು ಸ್ಥೂಲ ಚಿತ್ರಣ ನೀಡುವಲ್ಲಿ ಈ ಪದ್ಧತಿ ಸಹಕಾರಿ ಆಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಹಲವು ಜಾತಿಗಳಿರುವ ಗ್ರಾಮದಲ್ಲಿನ ಸಮುದಾಯದ ಸ್ವರೂಪ ಒಂದೇ ಜಾತಿಯ ಯಜಮಾನಿಕೆ ಇರುವ ಗ್ರಾಮದ ಸಮುದಾಯದ ಸ್ವರೂಪಕ್ಕಿಂತ ಭಿನ್ನ ಇರಬಹುದು. ಇದರ ಜತೆಗೆ ಸಮುದಾಯಗಳ ಅರಣ್ಯದ ಅವಲಂಬನೆ ಹಾಗೂ ಅವುಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿ ಕೂಡ ಸಹಭಾಗಿತ್ವವನ್ನು ಪ್ರಭಾವಿಸುವ ಪ್ರಮುಖ ಅಂಶಗಳು. ಈಗಾಗಲೇ ಆಗಿರುವ ಅಧ್ಯಯನಗಳ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಜಂಟೀ ಅರಣ್ಯ ಯೋಜನೆಯ ಅಧ್ಯಯನಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಪ್ರಶ್ನೆಗಳನ್ನು ಎತ್ತಬಹುದು. ಒಂದು, ಗ್ರಾಮ ಅರಣ್ಯ ಮತ್ತು ನಿರ್ವಹಣಾ ಸಮಿತಿಗಳಲ್ಲಿ ಸಮಾಜದ

ವಿವಿಧ ಸಮುದಾಯಗಳ ಪ್ರತಿನಿಧೀಕರಣ ಹೇಗಿದೆ? ಎರಡು, ಸ್ಥಳೀಯ ಸಮುದಾಯಗಳ ಅರಣ್ಯ ಉತ್ಪನ್ನಗಳ ಬೇಡಿಕೆ (ಮೇವು, ಸೊಪ್ಪು, ಉರುವಲು ಇತ್ಯಾದಿಗಳನ್ನು) ಜಂಟೀ ಅರಣ್ಯ ಯೋಜನೆ ಎಷ್ಟರ ಮಟ್ಟಿಗೆ ಪೂರೈಸಿದೆ? ಮೂರು, ಸ್ಥಳೀಯ ಜನರು ಮತ್ತು ತಳಮಟ್ಟದ ಅರಣ್ಯ ಇಲಾಖೆ ಸಿಬ್ಬಂದಿಗಳ ನಡುವಿನ ಸಂಬಂಧಗಳಲ್ಲಿ ಆದ ಮತ್ತು ಆಗುತ್ತಿರುವ ಬದಲಾವಣೆಗಳೇನು? ಮತ್ತು ನಾಲ್ಕು, ಸ್ಥಳೀಯ ಸಮುದಾಯಗಳ ಸ್ವರೂಪ, ಅರಣ್ಯ ಅವಲಂಬನೆ ಹಾಗೂ ಅವುಗಳ ಆರ್ಥಿಕ ಸ್ಥಿತಿಗತಿ ಮತ್ತು ಜಂಟೀ ಅರಣ್ಯ ಯೋಜನೆ ಯಶಸ್ಸಿನ ಸಂಬಂಧವೇನು?

ಅಧ್ಯಯನದ ಉದ್ದೇಶಗಳು

ಅಧ್ಯಯನದ ಪ್ರಶ್ನೆಗಳು ರೂಪುಗೊಂಡ ನಂತರ ಅಧ್ಯಯನದ ಉದ್ದೇಶಗಳನ್ನು ಗುರುತಿಸಬೇಕಾಗಿದೆ. ಸಂಶೋಧನೆಯ ಉದ್ದೇಶಗಳು ಒಂದು ನಿರ್ದಿಷ್ಟ ಸಂಶೋಧನಾ ಯೋಜನೆಯಡಿಯಲ್ಲಿ ಬರುವ ಒಟ್ಟು ಕೆಲಸಗಳ ಒಂದು ಸ್ಥೂಲ ಚಿತ್ರಣವನ್ನು ಕೊಡುತ್ತವೆ. ಸಮಸ್ಯೆ ರೂಪದಲ್ಲಿ ಎತ್ತಿದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕೆಲಸವನ್ನು ಉದ್ದೇಶ ಸೂಚಿಸುತ್ತದೆ. ಇದನ್ನೇ ಇನ್ನೊಂದು ವಿಧದಲ್ಲಿ ಹೇಳುವುದಾದರೆ ಅಧ್ಯಯನ ಏನನ್ನು ಶೋಧಿಸಲು ಅಥವಾ ಪರೀಕ್ಷಿಸಲು ಅಥವಾ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ ಎನ್ನುವುದನ್ನು ಉದ್ದೇಶ ಹೇಳುತ್ತದೆ. ಅಧ್ಯಯನದ ಉದ್ದೇಶಗಳು ಸಂಶೋಧನಾ ಕೆಲಸಕ್ಕೆ ಒಂದು ಮಾರ್ಗಸೂಚಿಯಂತೆ ಕೆಲಸ ಮಾಡುತ್ತವೆ. ಜಂಟೀ ಅರಣ್ಯ ಯೋಜನೆ ಮತ್ತು ಸಹಭಾಗಿತ್ವ ಅಧ್ಯಯನದ ಮೇಲಿನ ಉದಾಹರಣೆಯಲ್ಲಿ ಎತ್ತಿದ ಪ್ರಶ್ನೆಗಳನ್ನು ಹೇಗೆ ಉದ್ದೇಶಗಳಾಗಿ ಪರಿವರ್ತಿಸಿಕೊಳ್ಳಲಾಗಿದೆ ಎಂದು ನೋಡುವ. ಈಗಾಗಲೇ ಆಗಿರುವ ಅಧ್ಯಯನಗಳ ವಿಮರ್ಶೆಯ ಹಿನ್ನೆಲೆಯಲ್ಲಿ ಈ ಅಧ್ಯಯನ ನಿರ್ದಿಷ್ಟ ಉದ್ದೇಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

೧. ಗ್ರಾಮ ಅರಣ್ಯ ಮತ್ತು ನಿರ್ವಹಣಾ ಸಮಿತಿಗಳ ರೂಪುಗೊಳ್ಳುವಿಕೆ, ಸಮಿತಿಯ ಸದಸ್ಯರ ಹಿನ್ನೆಲೆ, ಸಮಿತಿಯ ಸ್ಥಾನ, ಸಮಿತಿಯ ಕಾರ್ಯ, ವ್ಯಾಪ್ತಿ ಇತ್ಯಾದಿಗಳನ್ನು ಅರ್ಥಮಾಡಿಕೊಳ್ಳುವುದು.
೨. ಸ್ಥಳೀಯ ಸಮುದಾಯಗಳ ಅರಣ್ಯ ಉತ್ಪನ್ನಗಳ ಬೇಡಿಕೆ (ಮೇವು, ಸೊಪ್ಪು, ಉರುವಲು ಇತ್ಯಾದಿಗಳನ್ನು) ಜಂಟೀ ಅರಣ್ಯ ಯೋಜನೆ ಎಷ್ಟರ ಮಟ್ಟಿಗೆ ಪೂರೈಸಿದೆ ಎಂದು ಪರೀಕ್ಷಿಸುವುದು.
೩. ಸ್ಥಳೀಯ ಜನರು ಮತ್ತು ತಳಮಟ್ಟದ ಅರಣ್ಯ ಇಲಾಖೆ ಸಿಬ್ಬಂದಿಗಳ ನಡುವಿನ ಸಂಬಂಧಗಳಲ್ಲಿ ಆದ ಮತ್ತು ಆಗುತ್ತಿರುವ ಬದಲಾವಣೆಗಳನ್ನು ಗುರುತಿಸುವುದು.
೪. ಸ್ಥಳೀಯ ಸಮುದಾಯಗಳ ಸ್ವರೂಪ. ಅರಣ್ಯ ಅವಲಂಬನೆ ಹಾಗೂ ಅವುಗಳ ಆರ್ಥಿಕ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳುವುದು ಹಾಗೂ ಜಂಟೀ ಅರಣ್ಯ ಯೋಜನೆ ಮೇಲೆ ಈ ಎಲ್ಲ ಅಂಶಗಳು ಯಾವ ಪರಿಣಾಮ ಬೀರಿವೆ ಎಂದು ವಿಶ್ಲೇಷಿಸುವುದು.

ಅಧ್ಯಯನದ ಊಹೆಗಳು

ಅಧ್ಯಯನದ ದಿಕ್ಕುದೆಶೆಗಳನ್ನು ಅಚ್ಚುಕಟ್ಟಾಗಿ ರೂಪಿಸಲು ಕೇವಲ ಅಧ್ಯಯನ ಉದ್ದೇಶಗಳು ಇದ್ದರೆ ಸಾಲದು ಅಧ್ಯಯನದ ಪ್ರಮೇಯಗಳು ಅಥವಾ ಪೂರ್ವ ತೀರ್ಮಾನಗಳು ಅಥವಾ ಊಹೆಗಳು ಬೇಕು ಎನ್ನುವ ವಾದಗಳು ಇವೆ. ಅಧ್ಯಯನದ ಪ್ರಮೇಯಗಳನ್ನು ರೂಪಿಸುವುದು ಕಷ್ಟದ ಕೆಲಸವೇನಲ್ಲ. ಅಚ್ಚುಕಟ್ಟಾದ ಅಧ್ಯಯನದ ಉದ್ದೇಶಗಳು ರೂಪಿತವಾದರೆ ಅಷ್ಟೇ ಅಚ್ಚುಕಟ್ಟಾದ ಪ್ರಮೇಯಗಳನ್ನು ರೂಪಿಸಿದಂತೆ. ಯಾಕೆಂದರೆ ಅಧ್ಯಯನ ಉದ್ದೇಶಗಳು ಅಧ್ಯಯನ ಪ್ರಮೇಯಗಳನ್ನು ಅಥವಾ ಪೂರ್ವ ತೀರ್ಮಾನಗಳನ್ನು ನಿರ್ಧರಿಸುತ್ತವೆ. ಮೇಲಿನ ಉದಾಹರಣೆಯಲ್ಲಿರುವ ಅಧ್ಯಯನದ ಉದ್ದೇಶಗಳನ್ನು ಅಧ್ಯಯನದ ಪ್ರಮೇಯಗಳಾಗಿ ಅಥವಾ ಊಹೆಗಳಾಗಿ ಹೇಗೆ ಬದಲಾಯಿಸಬಹುದೆಂದು ನೋಡುವ. ಜಂಟೀ ಅರಣ್ಯ ಯೋಜನೆ ಮೇಲಿನ ಅಧ್ಯಯನದ ಎರಡನೇ ಉದ್ದೇಶ ಸ್ಥಳೀಯ ಸಮುದಾಯಗಳ ಅರಣ್ಯ ಉತ್ಪನ್ನಗಳ ಬೇಡಿಕೆಯನ್ನು ಜಂಟೀ ಅರಣ್ಯ ಯೋಜನೆ ಎಷ್ಟರಮಟ್ಟಿಗೆ ಪೂರೈಸುವುದೆಂದು ಪರೀಕ್ಷಿಸುವುದು. ಈ ಉದ್ದೇಶವನ್ನು ಈ ಕೆಳಗಿನಂತೆ ಅಧ್ಯಯನದ ಊಹೆಯಾಗಿ ಪರಿವರ್ತಿಸಿಕೊಳ್ಳಬಹುದು- ಸ್ಥಳೀಯ ಸಮುದಾಯಗಳ ಅರಣ್ಯ ಉತ್ಪನ್ನಗಳ ಬೇಡಿಕೆಯನ್ನು ಜಂಟೀ ಅರಣ್ಯ ಯೋಜನೆ ಪೂರ್ಣವಾಗಿ ಪೂರೈಸಿದೆ. ಅದೇ ಅಧ್ಯಯನದ ಮೂರನೇ ಉದ್ದೇಶ ಸ್ಥಳೀಯ ಜನರು ಮತ್ತು ತಳಮಟ್ಟದ ಅರಣ್ಯ ಇಲಾಖೆ ಸಿಬ್ಬಂದಿಗಳ ನಡುವಿನ ಸಂಬಂಧಗಳಲ್ಲಿ ಆದ ಮತ್ತು ಆಗುತ್ತಿರುವ ಬದಲಾವಣೆಗಳನ್ನು ಗುರುತಿಸುವುದು. ಅಧ್ಯಯನದ ಈ ಉದ್ದೇಶವನ್ನು ಈ ಕೆಳಗಿನಂತೆ ಅಧ್ಯಯನದ ಊಹೆಯಾಗಿ ಪರಿವರ್ತಿಸಿಕೊಳ್ಳಬಹುದು - ಸ್ಥಳೀಯ ಜನರು ಮತ್ತು ತಳಮಟ್ಟದ ಅರಣ್ಯ ಸಿಬ್ಬಂದಿಗಳ ನಡುವಿನ ಸಂಬಂಧಗಳಲ್ಲಿ ಗಣನೀಯ ಸುಧಾರಣೆ ಆಗಿದೆ. ಈ ರೀತಿಯಲ್ಲಿ ರೂಪುಗೊಂಡ ಪ್ರಮೇಯಗಳು ಅಥವಾ ಪೂರ್ವತೀರ್ಮಾನಗಳು ಅಧ್ಯಯನದ ದಿಕ್ಕು ದಿಶೆಗಳನ್ನು ತೀರ್ಮಾನಿಸಲು ಸಹಕಾರಿಯಾಗುತ್ತವೆ. ಅದು ಹೇಗೆಂದರೆ ಅಧ್ಯಯನದ ಉದ್ದೇಶಗಳು ಸಂಶೋಧನೆಯಡಿಯಲ್ಲಿ ಕೈಗೊಳ್ಳಲ್ಲಿರುವ ಒಟ್ಟು ಕೆಲಸಗಳ ಒಂದು ಸ್ಥೂಲ ಚಿತ್ರಣವನ್ನು ನೀಡಿದರೆ ಪೂರ್ವತೀರ್ಮಾನಗಳು ಅಧ್ಯಯನ ಸಾಗಬೇಕಾದ ದಾರಿಯ ಒಂದು ಸ್ಪಷ್ಟ ಚಿತ್ರಣವನ್ನು ನೀಡುತ್ತವೆ. ಹಾಗೆಂದು ಪೂರ್ವತೀರ್ಮಾನಗಳು ಅಧ್ಯಯನ ಉದ್ದೇಶಗಳಂತೆ ಯಾವುದೇ ಸಂಶೋಧನಾ ಪ್ರಸ್ತಾವದ ಭಾಗವಾಗಲೇಬೇಕೆಂದಿಲ್ಲ. ಇದನ್ನೇ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಅಧ್ಯಯನ ಉದ್ದೇಶಗಳನ್ನು ತಿಳಿಸದ ಪ್ರಸ್ತಾವ ಇರಲು ಸಾಧ್ಯವಿಲ್ಲ. ಆದರೆ ಪೂರ್ವತೀರ್ಮಾನಗಳನ್ನು ನೀಡದ ಅಧ್ಯಯನ ಪ್ರಸ್ತಾವ ಸಾಧ್ಯ. ಹೀಗೆ ಪ್ರಮೇಯಗಳು ಅಥವಾ ಪೂರ್ವತೀರ್ಮಾನಗಳು ಅಧ್ಯಯನದ ಉದ್ದೇಶಗಳನ್ನು ಇನ್ನೂ ಸ್ಪಷ್ಟಪಡಿಸುವ ಕೆಲಸವನ್ನು ಮಾಡುತ್ತವೆಯಾದರೂ ಅವುಗಳು ಅಧ್ಯಯನ ಪ್ರಸ್ತಾವಕ್ಕೆ ಅನಿವಾರ್ಯವಲ್ಲ.

ಅಧ್ಯಯನದ ವಿಧಾನ

ಅಧ್ಯಯನದ ಸಮಸ್ಯೆ ಉದ್ದೇಶವನ್ನು ನಿರ್ಧರಿಸದರೆ ಉದ್ದೇಶಗಳು ಅಧ್ಯಯನದ ವಿಧಾನವನ್ನು ನಿರ್ಧರಿಸುತ್ತದೆ ಅಥವಾ ಪ್ರಭಾವಿಸುತ್ತವೆ. ಸಂಶೋಧನಾ ಉದ್ದೇಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಯಾವ ಮೂಲದಿಂದ ಮತ್ತು ಯಾವ ವಿಧಾನಗಳಿಂದ ಸಂಗ್ರಹಿಸಲಾಗುವುದು ಎನ್ನುವ ವಿವರಗಳನ್ನು ಸಂಶೋಧನಾ ವಿಧಾನದಲ್ಲಿ ನೀಡಲಾಗುವುದು. ವಿವಿಧ ವಿಧಾನಗಳ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಹೇಗೆ ವಿಶ್ಲೇಷಿಸಲಾಗಿದೆ ಎನ್ನುವ ಅಂಶ ಕೂಡ ವಿಧಾನದ ವಿವರಣೆ ಜತೆ ಸೇರಿರುತ್ತದೆ. ಸಂಶೋದನೆಗೆ ಎತ್ತಿಕೊಂಡ ವಿಷಯಕ್ಕೆ ಸಂಬಂಧಿಸಿದ ಮುಖ್ಯ ಮಾಹಿತಿಗಳೇನು ಎನ್ನುವುದು ಮೊದಲಿಗೆ ನಿರ್ಣಯವಾಗಬೇಕು. ಅಧ್ಯಯನ ಉದ್ದೇಶಗಳು ಮತ್ತು ಮಾಹಿತಿ ಸಂಗ್ರಹ ವಿಧಾನಗಳ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಜಂಟೀ ಅರಣ್ಯ ಯೋಜನೆ ಮೇಲಿನ ಅಧ್ಯಯನದ ಉದಾಹರಣೆಯನ್ನು ಇಲ್ಲೂ ಮುಂದುವರಿಸಲಾಗಿದೆ. ಜಂಟೀ ಅರಣ್ಯ ಯೋಜನೆಯ ಮುಖ್ಯ ಉದ್ದೇಶಗಳು ಇಂತಿವೆ. ಒಂದು, ಅರಣ್ಯ ಸಂರಕ್ಷಣೆ ಮತ್ತು ಅಭಿವೃದ್ಧಿ, ಎರಡು, ಹಳ್ಳಿಯ ಜನರು ಮತ್ತು ಬುಡಕಟ್ಟು ಜನಾಂಗಗಳ ಮೇವು, ಸೊಪ್ಪು, ಉರುವಲು ಇತ್ಯಾದಿ ದಿನ ನಿತ್ಯದ ಅರಣ್ಯ ಉತ್ಪನ್ನಗಳ ಬೇಡಿಕೆಯನ್ನು ಪೂರೈಸುವುದು ಮತ್ತು ಮೂರು, ಸ್ಥಳೀಯ ಸಮುದಾಯಗಳಿಗೆ ಅರಣ್ಯ ಉಪಯೋಗಿಸುವಲ್ಲಿ ಸಾಕಷ್ಟು ರಿಯಾಯಿತಿ ತೋರಿಸುವುದರ ಮೂಲಕ ಅವರ ಮತ್ತು ಅರಣ್ಯದ ಸಂಬಂಧ ಉತ್ತಮಗೊಳ್ಳುವಂತೆ ನೋಡಿಕೊಳ್ಳುವುದು. ಜಂಟೀ ಅರಣ್ಯ ಯೋಜನೆಯ ಈ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ಗ್ರಾಮ ಅರಣ್ಯ ಸಮಿತಿ ಹಾಗೂ ನಿರ್ವಹಣಾ ಸಮಿತಿಗಳನ್ನು ರೂಪಿಸಲಾಗಿದೆ. ಈ ಎರಡು ಸಮಿತಿಗಳ ಕಾರ್ಯಕ್ಷಮತೆ ಜಂಟೀ ಅರಣ್ಯ ಯೋಜನೆಯ ಯಶಸ್ಸನ್ನು ನಿರ್ಧರಿಸುತ್ತದೆ. ಈ ಎರಡು ಸಮಿತಿಗಳ ಕಾರ್ಯನಿರ್ವಹಣೆಯನ್ನು ಐದು ಪ್ರಮುಖ ಸಂಗತಿಗಳು ಪ್ರಭಾವಿಸುತ್ತವೆ ಎಂದು ಗ್ರಹಿಸಲಾಗಿದೆ. ಅರಣ್ಯ ಅಭಿವೃದ್ಧಿ ಮತ್ತು ಸಂರಕ್ಷಣೆಯಲ್ಲಿ ಸ್ಥಳೀಯ ಜನರ ಸಹಭಾಗಿತ್ವ; ಇದಕ್ಕೆ ಪ್ರತಿಫಲವಾಗಿ ದೊರೆಯುವ ಅರಣ್ಯ ಉತ್ಪನ್ನಗಳ ಪ್ರಮಾಣ, ಸ್ಥಳೀಯ ಅರಣ್ಯ ಇಲಾಖೆಯ ಅಧಿಕಾರಿಗಳ ಸಹಕಾರ ಮತ್ತು ಸ್ಥಳೀಯ ಸಮುದಾಯಗಳ ಸ್ವರೂಪ ಹಾಗೂ ಅದರ ಅರಣ್ಯ ಅವಲಂಬನೆಯ ಪ್ರಮಾಣ. ಅರಣ್ಯ ಅಭಿವೃದ್ಧಿ ಹಾಗೂ ಸಂರಕ್ಷಣೆಯಲ್ಲಿ ಸ್ಥಳೀಯ ಜನರ ಸಹಭಾಗಿತ್ವವನ್ನು ಕೆಲವೊಂದು ಸೂಚ್ಯಂಕಗಳ ಮೂಲಕ ಅಳೆಯಬಹುದು. ಸಹಭಾಗಿತ್ವ ವಿಧಾನದಲ್ಲಿ ಅರಣ್ಯ ಅಭಿವೃದ್ಧಿ ಯೋಜನೆ ತಯಾರಿಸುವುದು, ಸಂರಕ್ಷಣೆಯ ನಿಯಮವನ್ನು ರೂಪಿಸುವುದು, ನಿಯಮವನ್ನು ಉಲ್ಲಂಘಿಸುವುದು ತಪ್ಪೆಂದು ತಿಳಿಯುವುದು, ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸುವುದು ಇತ್ಯಾದಿಗಳ ಮೂಲಕ ಅರಣ್ಯ ಅಭಿವೃದ್ಧಿ ಮತ್ತು ಸಂರಕ್ಷಣೆಯಲ್ಲಿ ಜನರ ಸಹಭಾಗಿತ್ವವನ್ನು ಅಳೆಯಬಹುದು. ಅರಣ್ಯ ಅಭಿವೃದ್ಧಿ ಕಾರ್ಯಕ್ರಮಗಳಿಂದ ದೊರೆಯುವ

ಕೂಲಿ, ತರಬೇತಿ, ಮೇವು, ಸೊಪ್ಪು, ಉರುವಲು ಹಾಗೂ ಇನ್ನಿತರ ಅರಣ್ಯ ಉತ್ಪನ್ನಗಳ ಲಭ್ಯತೆ ಸಹಭಾಗಿತ್ವಕ್ಕೆ ಜನರು ಅಪೇಕ್ಷಿಸುವ ಪ್ರತಿಫಲ. ತಳಮಟ್ಟದಲ್ಲಿ ಕಾರ್ಯನಿರ್ವಹಿಸುವ ಅರಣ್ಯ ಇಲಾಖೆ ಅಧಿಕಾರಿಗಳು ಜಂಟೀ ಅರಣ್ಯ ಯೋಜನೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಇಲಾಖೆ ಮತ್ತು ಸ್ಥಳೀಯ ಸಮುದಾಯಗಳ ನಡುವಿನ ಘರ್ಷಣೆ ಕಡಿಮೆ ಆಗಬೇಕು. ಘರ್ಷಣೆಗಳ ಪ್ರಮಾಣದ ನೆಲೆಯಲ್ಲಿ ಸ್ಥಳೀಯ ಅಧಿಕಾರಿಗಳ ಸಹಭಾಗಿತ್ವವನ್ನು ಅಳೆಯಬಹುದು. ಗ್ರಾಮಸ್ಥರ ಅರಣ್ಯ ಅವಲಂಬನೆಯನ್ನು ಅಳೆಯಲು ಆರು ಸೂಚ್ಯಂಕಗಳನ್ನು ಬಳಸಲಾಗಿದೆ. ಒಂದು ಕಚ್ಚಾ ಮನೆಗಳ ಸಂಖ್ಯೆ, ಎರಡು, ಜಾನುವಾರುಗಳ ಸಂಖ್ಯೆ, ಮೂರು, ಕೃಷಿಕರ ಸಂಖ್ಯೆ, ನಾಲ್ಕು, ಕೃಷಿಯೇತರ ಚಟುವಟಿಕೆಗಳ ಸ್ವರೂಪ ಐದು, ಅಡುಗೆಗೆ ಬಳಸುವ ಇಂಧನ ಮತ್ತು ಆರು, ಮೇವಿನ ಮೂಲ. ಕಚ್ಚಾ ಮನೆಗಳ ಸಂಖ್ಯೆ, ಕೃಷಿಕರ ಸಂಖ್ಯೆ ಮತ್ತು ಜಾನುವಾರುಗಳ ಸಂಖ್ಯೆ ಜಾಸ್ತಿ ಇದ್ದರೆ ಅರಣ್ಯ ಸಂಪನ್ಮೂಲವನ್ನು ಬಳಸುವ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳು ಹೆಚ್ಚಾದಂತೆ ಅರಣ್ಯದ ಮೇಲಿನ ಅವಲಂಬನೆ ಹೆಚ್ಚಾಗುತ್ತದೆ. ವಿದ್ಯುತ್ ಅಥವಾ ಗ್ಯಾಸ್ ಬಳಕೆ ಮಾಡಿದಂತೆ ಉರುವಲು ಬಳಕೆ ಕಡಿಮೆ ಆಗುತ್ತದೆ ಮತ್ತು ಅರಣ್ಯದ ಮೇಲಿನ ಅವಲಂಬನೆ ಕಡಿಮೆ ಆಗುತ್ತದೆ.

ಮೇಲಿನ ಸೂಚ್ಯಂಕಗಳಿಗೆ ಸಂಬಂಧಿಸಿದ ಮಾಹಿತಿಯನ್ನು ವಿವಿಧ ಮೂಲಗಳಿಂದ ಮತ್ತು ವಿವಿಧ ವಿಧಾನಗಳಿಂದ ಪಡೆಯಲಾಗುವುದು. ಜಂಟೀ ಅರಣ್ಯ ಯೋಜನೆ ಇತಿಹಾಸ, ದೇಶ ಹಾಗೂ ರಾಜ್ಯದ ವಿವಿಧ ಭಾಗಗಳಲ್ಲಿ ಇರುವ ಜಂಟೀ ಅರಣ್ಯ ಯೋಜನೆಗಳು ಮತ್ತು ಅವುಗಳ ಸ್ಥಿತಿಗತಿ, ಗ್ರಾಮ ಅರಣ್ಯ ಸಮಿತಿ ಹಾಗೂ ನಿರ್ವಹಣಾ ಸಮಿತಿ ಸಭೆಗಳು, ಸದಸ್ಯರ ಸಂಖ್ಯೆ, ಯೋಜನೆಯಡಿಯಲ್ಲಿ ನೆಟ್ಟ ಮರಗಳು ಇತ್ಯಾದಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಆನುಷಂಗಿಕ ಮೂಲಗಳಿಂದ ಪಡೆಯಲಾಗುವುದು. ಜನರೊಂದಿಗೆ ಸಂಪರ್ಕ ಇರುವ ಅರಣ್ಯ ಅಧಿಕಾರಿಗಳನ್ನು ಸಂದರ್ಶನ ಮಾಡಿ ಈ ಯೋಜನೆ ಬಗ್ಗೆ ಅವರ ಅಭಿಪ್ರಾಯ, ಇದನ್ನು ಜಾರಿ ತರುವಾಗ ಅವರು ಅನುಭವಿಸುವ ಸಮಸ್ಯೆಗಳು, ಜನರ ಸಹಭಾಗಿತ್ವ ಸಾಧ್ಯತೆಗಳು ಇತ್ಯಾದಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುವುದು. ಗ್ರಾಮ ಅರಣ್ಯ ಹಾಗೂ ನಿರ್ವಹಣಾ ಸಮಿತಿ ಸದಸ್ಯರ ಹಿನ್ನೆಲೆ, ಅವರಿಗೆ ಯೋಜನೆಯಿಂದ ಆದ ಲಾಭ ನಷ್ಟ, ಯೋಜನೆ ಬಗ್ಗೆ ಅವರ ನಿಲುವುಗಳು ಇತ್ಯಾದಿ ಮಾಹಿತಿಯನ್ನು ಪ್ರಶ್ನಾವಳಿ ಮೂಲಕ ಸಂದರ್ಶನ ಮಾಡಿ ಪಡೆಯಲಾಗುವುದು. ಸಂದರ್ಶನ ಮಾಡಬೇಕಾದ ಕುಟುಂಬಗಳ ಸಂಖ್ಯೆಯನ್ನು ಹಳ್ಳಿಯಲ್ಲಿರುವ ಒಟ್ಟು ಕುಟುಂಬಗಳ ಆಧಾರದಲ್ಲಿ ನಿರ್ಧರಿಸಲಾಗುವುದು. ಗ್ರಾಮಸ್ಥರ ಅರಣ್ಯ ಅವಲಂಬನೆಗೆ ಸಂಬಂಧಿಸಿದ ಮಾಹಿತಿಯನ್ನು ಎರಡು ಮೂಲಗಳಿಂದ ಪಡೆಯಲಾಗುವುದು. ಒಂದು, ಪಂಚಾಯತ್ ಕಾರ್ಯದರ್ಶಿ ಬರೆಯುವ ಸಾಮಾನ್ಯ ಮಾಹಿತಿ ಪುಸ್ತಕದಿಂದ ಕೆಲವೊಂದು ಸೂಚ್ಯಂಕಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪಡೆಯಲಾಗುವುದು. ಎರಡು, ಗುಂಪು ಚರ್ಚೆಯ ಸಂದರ್ಭದಲ್ಲಿ ಗ್ರಾಮದಲ್ಲಿ ಇರುವ ಸಾಕು ಪ್ರಾಣಿಗಳು, ಕಚ್ಚಾ ಮನೆಗಳು,

ಇತ್ಯಾದಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಲಾಗುವುದು, ಇದಕ್ಕೆ ಗುಂಪು ಚರ್ಚೆಯ ಜತೆ ಕೇಸ್ ಸ್ಟಡಿ ವಿಧಾನವನ್ನೂ ಬಳಸಲಾಗುವುದು.

ಗ್ರಾಮ ಅರಣ್ಯ ಸಮಿತಿಗಳ ಕಾರ್ಯಕ್ಷಮತೆಯನ್ನು ಅರ್ಥ ಮಾಡಿಕೊಳ್ಳಲು ಐದು ಸೂಚ್ಯಂಕಗಳನ್ನು ಉಪಯೋಗಿಸಲಾಗುವುದು. ಒಂದು, ಅರಣ್ಯ ಉತ್ಪನ್ನಗಳ ಲಭ್ಯತೆ, ಎರಡು, ಮೇವು/ಉರುವಲುಗಳ ಲಭ್ಯತೆ, ಮೂರು, ಒತ್ತುವರಿ ಭೂಮಿಯ ತೆರವು ಮಾಡುವ ಅನಿವಾರ್ಯತೆ, ನಾಲ್ಕು ಗಿಡ/ಮರಗಳನ್ನು ಕಡಿಯುವುದರ ಮೇಲಿನ ನಿರ್ಬಂಧ ಮತ್ತು ಐದು ಅರಣ್ಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲುಗೊಳ್ಳುವ ಅನಿವಾರ್ಯತೆ. ಮೇಲಿನ ಎಲ್ಲ ಸೂಚ್ಯಂಕಗಳಿಗೆ ಹೌದು ಎನ್ನುವ ಉತ್ತರ ಬಂದರೆ ಗ್ರಾಮ ಅರಣ್ಯ ಸಮಿತಿ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿದೆ ಎನ್ನುವ ತೀರ್ಮಾನಕ್ಕೆ ಬರಲಾಗುವುದು. ಬದಲು ಎಲ್ಲ ಸೂಚ್ಯಂಕಗಳಿಗೆ ಇಲ್ಲ ಎನ್ನುವ ಉತ್ತರ ಬಂದರೆ ಗ್ರಾಮ ಅರಣ್ಯ ಸಮಿತಿ ಅಸ್ತಿತ್ವದಲ್ಲಿ ಇಲ್ಲ ಅಥವಾ ಸಕ್ರಿಯವಾಗಿ ಇಲ್ಲ ಎನ್ನುವ ತೀರ್ಮಾನಕ್ಕೆ ಬರಲಾಗುವುದು. ಈ ಸೂಚ್ಯಂಕಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಶ್ನಾವಳಿ ಆಧಾರಿತ ಸಂದರ್ಶನ ಮೂಲಕ ಸಂಗ್ರಹಿಸಲಾಗುವುದು. ಸಹಭಾಗಿತ್ವದ ಗತಿ ಹಾಗೂ ಸಾಧ್ಯತೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ಕೇವಲ ಜಂಟೀ ಅರಣ್ಯ ಯೋಜನೆಗೆ ನಮ್ಮ ಗಮನವನ್ನು ಕೇಂದ್ರೀಕರಿಸಿದರೆ ಸಾಲದು. ಹಳ್ಳಿಯಲ್ಲಿ ನಡೆಯುವ ಎಲ್ಲ ಸಾಮೂಹಿಕ ಚಟುವಟಿಕೆಗಳ ಬಗ್ಗೆ ತಕ್ಕಮಟ್ಟಿನ ಮಾಹಿತಿ ಇರಬೇಕಾಗುತ್ತದೆ. ಹಳ್ಳಿಯಲ್ಲಿರುವ ವಿವಿಧ ಸಂಘಟನೆಗಳು. ಅವುಗಳ ಸದಸ್ಯತ್ವ. ಅವುಗಳು ನಡೆಸುವ ಕಾರ್ಯಕ್ರಮ ಮತ್ತು ಹಳ್ಳಿಯಲ್ಲಿ ನಡೆಯುವ ಇತರ ಸಾಮೂಹಿಕ ಕಾರ್ಯಕ್ರಮಗಳು ಮತ್ತು ಅದರಲ್ಲಿ ಪಾಲುಗೊಳ್ಳುವ ವಿಧಾನ ಇತ್ಯಾದಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಎರಡು ವಿಧಾನಗಳಿಂದ ಸಂಗ್ರಹಿಸಲಾಗುವುದು. ಒಂದು ಪ್ರಶ್ನಾವಳಿ ಮತ್ತು ಎರಡು, ಭಾಗವಹಿಸಿದ ಅವಲೋಕನ (ನಾನ್ ಪಾರ್ಟಿಸಿಪೆಂಟ್ ಅಬ್ಸರ್‌ವೇಶನ್). ಹಳ್ಳಿಯಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳನ್ನು ಅವಲೋಕಿಸುವ ಮೂಲಕ ಜನರ ಭಾಗವಹಿಸುವಿಕೆಯ ಗತಿಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಲಾಗುವುದು. ಸಂಗ್ರಹಿಸಿದ ಮಾಹಿತಿಯನ್ನು ತುಲನಾತ್ಮಕ, ಕಾರ್ಯಕಾರಣ ಹಾಗೂ ಏಕಾಂಶ ವಿಶ್ಲೇಷಣಾ ವಿಧಾನಗಳಿಂದ ವಿಶ್ಲೇಷಿಸಲಾಗುವುದು.

ಅಧ್ಯಾಯಗಳು

ಸಂಶೋಧನಾ ವಿಷಯವನ್ನು ಪ್ರಬಂಧ ರೂಪದಲ್ಲಿ ಹೇಗೆ ಮಂಡಿಸಲಾಗುವುದೆಂದು ಈ ಹಂತದಲ್ಲಿ ಹೇಳಲಾಗುವುದು. ಮಂಡಿಸಲಿರುವ ಪ್ರಬಂಧದಲ್ಲಿರುವ ಒಟ್ಟು ಅಧ್ಯಾಯಗಳು ಮತ್ತು ಪ್ರತೀ ಅಧ್ಯಾಯದಲ್ಲಿ ಹೇಳಲಿರುವ ಸಂಗತಿಗಳ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ನೀಡಲಾಗುವುದು. ಜಂಟೀ ಅರಣ್ಯ ಯೋಜನೆ ಅಧ್ಯಯನದ ಅಧ್ಯಾಯಗಳ ರಚನೆಯನ್ನು ಪರಿಶೀಲಿಸುವ ಮೂಲಕ ಅಧ್ಯಾಯ ರಚನೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ.

ಈ ಅಧ್ಯಯನದಲ್ಲಿ ಬರುವ ಅಧ್ಯಾಯಗಳು ಇಂತಿವೆ. ಪ್ರಸ್ತಾವನೆಯಲ್ಲಿ ಅಧ್ಯಯನ ಉದ್ದೇಶ, ವಿಧಾನ ಇತ್ಯಾದಿಗಳನ್ನು ಹೇಳಲಾಗುವುದು. ರಾಜ್ಯದಲ್ಲಿ ನಡೆಯುತ್ತಿರುವ ಜಂಟೀ ಅರಣ್ಯ ಯೋಜನೆಯ ಒಂದು ಸ್ಥೂಲ ಚಿತ್ರಣವನ್ನು ಒಂದನೇ ಅಧ್ಯಾಯದಲ್ಲಿ ನೀಡಲಾಗುವುದು. ಅಧ್ಯಯನಕ್ಕೆ ಆಯ್ಕೆ ಮಾಡಿದ ಎರಡು ಹಳ್ಳಿಗಳ ಚಿತ್ರಣ, ಗ್ರಾಮಸ್ಥರ ಅರಣ್ಯದ ಅವಲಂಬನೆ, ಅಲ್ಲಿನ ಗ್ರಾಮ ಅರಣ್ಯ ಸಮಿತಿಗಳ ವಿವರ, ಸದಸ್ಯರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆ ಹಾಗೂ ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದ ವಿಶ್ಲೇಷಣೆಯನ್ನು ಎರಡನೇ ಅಧ್ಯಾಯದಲ್ಲಿ ಕೊಡಲಾಗುವುದು. ಗ್ರಾಮ ಅರಣ್ಯ ನಿರ್ವಹಣಾ ಸಮಿತಿಯ ವಿಶ್ಲೇಷಣೆ ಮೂರನೇ ಅಧ್ಯಾಯದಲ್ಲಿ ಇರುತ್ತದೆ. ಇಲ್ಲಿ ಗ್ರಾಮ ಅರಣ್ಯ ನಿರ್ವಹಣಾ ಸಮಿತಿಯ ಕಾರ್ಯ, ವ್ಯಾಪ್ತಿ ಇತ್ಯಾದಿಗಳ ಜತೆ ಹಳ್ಳಿಯ ವಿವಿಧ ಪಾಲುದಾರರ ಯೋಗಕ್ಷೇಮ ರಕ್ಷಿಸುವಲ್ಲಿ ನಿರ್ವಹಣಾ ಸಮಿತಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಎನ್ನುವುದರ ವಿಶ್ಲೇಷಣೆಯೂ ಇರುತ್ತದೆ. ಎರಡು ಹಳ್ಳಿಗಳ ಅರಣ್ಯ ಸಮಿತಿಗಳ ಕಾರ್ಯಕ್ಷಮತೆಯನ್ನು ಹೋಲಿಸಿ ಒಂದು ತುಲನಾತ್ಮಕ ವಿಶ್ಲೇಷಣೆಯನ್ನು ನಾಲ್ಕನೇ ಅಧ್ಯಾಯದಲ್ಲಿ ಮಾಡಲಾಗುವುದು. ಸಮಿತಿಗಳ ಯಶಸ್ಸು ಅಥವಾ ವಿಫಲತೆಗೆ ವಿವರಣೆ ನೀಡುವ ಒಂದು ಪ್ರಯತ್ನ ಕೂಡ ಈ ಅಧ್ಯಾಯದಲ್ಲಿ ಇರುತ್ತದೆ. ಗ್ರಾಮ ಅರಣ್ಯ ಸಮಿತಿಗಳು, ಅವುಗಳ ಕಾರ್ಯಕ್ಷಮತೆ ಇತ್ಯಾದಿಗಳಿಗೆ ಸಂಬಂಧಿಸಿದ ಕೆಲವೊಂದು ತೀರ್ಮಾನಗಳನ್ನು ಕೊನೆಯ ಅಧ್ಯಾಯದಲ್ಲಿ ಕೊಡಲಾಗುವುದು.

ಪರಾಮರ್ಶನ ಪುಸ್ತಕಗಳು

ಪ್ರಸ್ತಾವ ರಚನೆಯಲ್ಲಿ ಬಹುಮುಖ್ಯ ಹಂತ ಸಮಸ್ಯೀಕರಣ. ಆಯ್ಕೆ ಮಾಡಕೊಂಡ ವಿಷಯದ ಮೇಲೆ ಈಗಾಗಲೇ ಕೇಳಿರುವ ಪ್ರಶ್ನೆಗಳೇನು? ಅವುಗಳಿಗೆ ಪಡೆದ ಉತ್ತರಗಳೇನು? ಆ ಉತ್ತರಗಳ ಇತಿಮಿತಿಗಳೇನು? ಈ ಎಲ್ಲದರ ಹಿನ್ನೆಲೆಯಲ್ಲಿ ಕೇಳಬೇಕಾದ ಹೊಸ ಪ್ರಶ್ನೆಗಳೇನು? ಇತ್ಯಾದಿಗಳ ತೀರ್ಮಾನ ಸಮಸ್ಯೀಕರಣ ಹಂತದಲ್ಲಿ ನಡೆಯುತ್ತದೆ. ಇದಕ್ಕಾಗಿ ಈಗಾಗಲೇ ಆಗಿರುವ ಅಧ್ಯಯನಗಳ ಪರಾಮರ್ಶೆ ನಡೆಸಬೇಕಾಗುತ್ತದೆ. ಪ್ರಸ್ತಾವ ರಚನೆಗಾಗಿ ಪರಾಮರ್ಶೆ ನಡೆಸಿದ ಪುಸ್ತಕಗಳ ಪಟ್ಟಿಯನ್ನು ಪ್ರಸ್ತಾವದ ಕೊನೆ ಭಾಗದಲ್ಲಿ ನೀಡಬೇಕು. ಇಲ್ಲಿನ ಉದಾಹರಣೆಯನ್ನು ಮುಂದುವರಿಸುವುದಾದರೆ ಮೇಲಿನ ಪ್ರಸ್ತಾವ ರಚನೆಗೆ ಬಳಸಿದ ಕೆಲವು ಆಯ್ದ ಪುಸ್ತಕಗಳ ವಿವರಗಳು ಇಂತಿವೆ.

೧. ಜೋದ ಎನ್.ಎಸ್., ''ಕಾಮನ್ ಪ್ರೊಪರ್ಟಿ ರಿಸೋರ್ಸಸ್'', ಇನ್ ರಾಮಚಂದ್ರ ಗುಹ(ಸಂ), *ಸೋಶಿಯಲ್ ಇಕಲಾಜಿ,* ಡೆಲ್ಲಿ : ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೪

೨. ಆಶಿಸ್ ಕೊಥಾರಿ ಮತ್ತು ಇತರರು, *ಕಮ್ಯುನಿಟೀಸ್ ಆಂಡ್ ಕನ್‌ಸರ್‌ವೇಶನ್: ನೇಚುರಲ್ ರಿಸೋರ್ಸ್ ಮೇನೇಜ್‌ಮೆಂಟ್ ಇನ್ ಸೌತ್ ಆಂಡ್ ಸೆಂಟ್ರಲ್ ಏಶ್ಯಾ,* ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೧೯೯೮

೩. ನೇಗಿ, ಎಸ್., *ಇಂಡಿಯನ್ ಫಾರೆಸ್ಟ್ರಿ ಥ್ರೂ ದಿ ಏಜಸ್*, ಡೆಲ್ಲಿ : ಇಂಡಸ್ ಪಬ್ಲಿಷಿಂಗ್ ಕಂಪೆನಿ, ೧೯೯೪

೪. ಜಿಷ್ಣುದಾಸ್, 'ಇನ್‌ಸ್ಟಿಟ್ಯೂಷನ್ಸ್ ಅಂಡ್ ಇನ್‌ಸೆಂಟಿವ್ಸ್ ಇನ್ ಎ ಗರ್‌ವಾಲ್ ವಿಲೇಜ್ - ೧', *ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ*, ಸಂ.೩೫, ಸಂಖ್ಯೆ ೫೯, ಡಿಸೆಂಬರ್ ೨೦೦೦, ಪು.೪೩೩೭-೪೪

೫. ಮಹಮ್ಮದ್ ಮೊಹಿದ್ದೀನ್ ಅಬ್ದುಲ್ಲ, *ರೂರಲ್ ಡೆವಲಪ್‌ಮೆಂಟ್ ಇನ್ ಬಾಂಗ್ಲಾದೇಶ್ : ಪ್ರೊಬ್ಲೆಮ್ಸ್ ಅಂಡ್ ಪ್ರೊಸ್‌ಪೆಕ್ಟ್ಸ್*, ಡಾಕ್ಕಾ : ನೂರ್‌ಜಹಾನ್ ಬೇಗಂ, ೧೯೭೯

೬. ರಾಬರ್ಟ್ ಪುನಮ್, *ಮೇಕಿಂಗ್ ಡೆಮಾಕ್ರಸಿ ವರ್ಕ್ : ಸಿವಿಕ್ ಟ್ರೆಡಿಶನ್ಸ್ ಇನ್ ಮೊಡರ್ನ್ ಇಟಲಿ*, ಪ್ರಿನ್ಸ್‌ಟನ್ : ಪ್ರಿನ್ಸ್‌ಟನ್ ಯುನಿವರ್ಸಿಟಿ ಪ್ರೆಸ್, ೧೯೯೩

೭. ಜೋನ್ ಹೇರಿಸ್, *ಡಿಪೊಲಿಟಿಸೈಜಿಂಗ್ ಡೆವಲಪ್‌ಮೆಂಟ್ : ದಿ ವರ್ಲ್ಡ್ ಬ್ಯಾಂಕ್ ಅಂಡ್ ಸೋಶಿಯಲ್ ಕ್ಯಾಪಿಟಲ್*, ನ್ಯೂಡೆಲ್ಲಿ : ಲೆಫ್ಟ್‌ವರ್ಡ್ ಬುಕ್ಸ್ , ೨೦೦೧

೮. ಸುಬ್ರತೋ ಪಾಲಿಟ್, 'ಇಂಡಿಯನ್ ಫಾರೆಸ್ಟ್ ಇನ್ ಟ್ರಾನ್‌ಸಿಷನ್', ಇನ್ ಪೊಪೆನ್‌ಬರ್ಗರ್ ಅಂಡ್ ಬೆಟ್ಸಿ ಮೆಕ್‌ಗೀನ್(ಸಂ), *ವಿಲೇಜ್ ವಾಯಿಸಸ್, ಫಾರೆಸ್ಟ್ ಜಾಯಿಸಸ್-ಜಾಯಿಂಟ್ ಫಾರೆಸ್ಟ್ ಮೆನೇಜ್‌ಮೆಂಟ್ ಇನ್ ಇಂಡಿಯಾ*, ಡೆಲ್ಲಿ: ಆಕ್ಸ್‌ಫರ್ಡ್ ಯುನಿರ್ವಸಿಟಿ ಪ್ರೆಸ್, ೧೯೯

೧೦. ಸುಧಾ ವಾಸನ್, 'ಎಥ್ನೋಗ್ರಫಿ ಆಫ್ ದಿ ಫಾರೆಸ್ಟ್ ಗಾರ್ಡ್ - ಕಾಂಟ್ರಾಸ್ಟಿಂಗ್ ಡಿಸ್‌ಕೋರ್ಸ್, ಕಾನ್‌ಫ್ಲಿಕ್ಟಿಂಗ್ ರೋಲ್ಸ್ ಅಂಡ್ ಪಾಲಿಸಿ ಇಂಪ್ಲಿಮೆಂಟೇಷನ್', *ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ*, ಸಂ.೩೭, ಸಂಖ್ಯೆ, ೪೦, ಆಕ್ಟೋಬರ್ ೨೦೦೨, ಪು.೪೧೨೫-೩೩

೧೧. ರಾಮಚಂದ್ರ ಗುಹಾ, *ದಿ ಅನ್‌ಕ್ವಯಿಟ್ ವುಡ್ಸ್*, ಡೆಲ್ಲಿ: ಆಕ್ಸ್‌ಫರ್ಡ್ ಯುನಿರ್ವಸಿಟಿ ಪ್ರೆಸ್, ೧೯೮೮

೧೨. ಮಾಧವ ಗಾಡ್ಗಿಲ್ ಹಾಗೂ ರಾಮಚಂದ್ರ ಗುಹಾ, *ದಿಸ್ ಫಿಸ್ಚ್ಯುರ್‌ಡ್ ಲೇಂಡ್- ಎನ್ ಎಕಲಾಜಿಕಲ್ ಹಿಸ್ಟರಿ ಆಫ್ ಇಂಡಿಯಾ*, ಡೆಲ್ಲಿ: ಆಕ್ಸ್‌ಫರ್ಡ್ ಯುನಿರ್ವಸಿಟಿ ಪ್ರೆಸ್, ೧೯೯೨

೧೩. ವಿ.ಎಸ್.ರಾವ್, *ಹಂಡ್ರೆಡ್ ಇಯರ್ಸ್ ಆಫ್ ಇಂಡಿಯನ್ ಫಾರೆಸ್ಟ್ರಿ-೧೮೬೧-೧೯೬೧*, ಡೆಹರಾಡೂನ್ : ಫಾರೆಸ್ಟ್ ರಿಸರ್ಚ್ ಇನ್‌ಸ್ಟಿಟ್ಯೂಟ್, ೧೯೬೧

೧೪. ಜೆ.ಬಿ.ಲಾಲ್, *ಇಂಡಿಯಾಸ್ ಫಾರೆಸ್ಟ್-ಮಿತ್ ಅಂಡ್ ರಿಯಾಲಿಟಿ*, ಡೆಹರಾ ಡೂನ್: ನಟರಾಜ್ ಪಬ್ಲಿಷರ್ಸ್, ೧೯೮೯

೧೫. ಮಾಧವ ಗಾಡ್ಗಿಲ್ ಮತ್ತು ರಾಮಚಂದ್ರ ಗುಹಾ, *ಇಕಲಾಜಿ ಅಂಡ್ ಇಕ್ವಿಟಿ - ದಿ ಯೂಸ್ ಅಂಡ್ ಎಬ್ಯೂಸ್ ಆಫ್ ನೇಚರ್ ಇನ್ ಇಂಡಿಯಾ*, ನ್ಯೂಡೆಲ್ಲಿ: ಪೆಂಗ್ವಿನ್ ಬುಕ್ಸ್, ೧೯೯೫

೧೬. ಮಾರ್ಕ್ ಪ್ರೋಪೆಸ್ ಬರ್ಗರ್ ಮತ್ತು ಜೆಟ್ಸಿ ಮ್ಯಾಕ್‌ಗೀನ್(ಸಂ), ವಿಲೇಜ್ ವಾಯ್ಸಸ್ ಫಾರಸ್ಟ್ ಚಾಯ್ಸಸ್ - ಜಾಯಿಂಟ್ ಫಾರೆಸ್ಟ್ ಮೆನೇಜ್‌ಮೆಂಟ್ ಇನ್ ಇಂಡಿಯಾ, ನ್ಯೂಡೆಲ್ಲಿ : ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೬
೧೭. ಟಾಟಾ ಎನರ್ಜಿ ರಿಸರ್ಚ್ ಇನ್‌ಸ್ಟಿಟ್ಯೂಟ್, ನ್ಯಾಷನಲ್ ಸ್ಟಡಿ ಆನ್ ಜಾಯಿಂಟ್ ಫಾರೆಸ್ಟ್ ಮೆನೇಜ್‌ಮೆಂಟ್, ನ್ಯೂಡೆಲ್ಲಿ : ಮಿನಿಸ್ಟ್ರಿ ಫಾರ್ ಎನ್‌ವೈರನ್‌ಮೆಂಟ್ ಆಂಡ್ ಫಾರೆಸ್ಟ್, ೧೯೯೭
೧೮. ಸಕ್ಸೇನಾ ಎನ್.ಸಿ. ಮತ್ತು ಮಧು ಸರೀನ್, 'ದಿ ವೆಸ್ಟರ್ನ್‌ಘಾಟ್ ಫಾರೆಸ್ಟ್ರಿ ಆಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ - ಎ ಪ್ರಿಲಿಮಿನರಿ ಅಸೆಸ್‌ಮೆಂಟ್, 'ಇನ್ ರೋಜರ್ ಜೆಫ್ರಿ ಮತ್ತು ನಂದಿನಿ ಸುಂದರ್ (ಸಂ), ಎ ನ್ಯೂ ಮಾರಲ್ ಎಕಾನಮಿ ಫಾರ್ ಇಂಡಿಯನ್ ಫಾರೆಸ್ಟ್ಸ್, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಷನ್, ೧೯೯೯
೧೯. ಔಟ್ ರೀಚ್, ಸೋಶಿಯಲ್ ಇಂಪ್ಯಾಕ್ಟ್ ಸ್ಟಡಿ ಫಾರ್ ಡಿಪಾರ್ಟ್‌ಮೆಂಟ್ ಆಫ್ ಇಂಟರ್‌ನೇಶನಲ್ ಡೆವಲಪ್‌ಮೆಂಟ್ ಆಂಡ್ ಕರ್ನಾಟಕ ಫಾರೆಸ್ಟ್ ಡಿಪಾರ್ಟ್ ಮೆಂಟ್ ಆನ್ ವೆಸ್ಟರ್ನ್‌ಘಾಟ್ ಜೆ ಎಫ್ ಪಿ ಎಮ್ ಪ್ರೋಗ್ರಾಮ್ ಇನ್ ಕರ್ನಾಟಕ, ಬೆಂಗಳೂರು: ಔಟ್ ರೀಚ್, ೧೯೯೬

ಪ್ರಸ್ತಾವ ರಚನೆಯಲ್ಲಿ ಒಟ್ಟು ಏಳು ಹಂತಗಳಿದ್ದು ಪ್ರತಿ ಹಂತಗಳನ್ನು ಉದಾಹರಣೆ ಸಮೇತ ವಿವರಿಸಲಾಗಿದೆ. ಪೀಠಿಕೆಯಲ್ಲಿ ಇಡೀ ಪ್ರಸ್ತಾವ ಹೇಳಲಿರುವ ಒಟ್ಟಾರೆ ವಿವರಗಳ ಒಂದು ಪಕ್ಷಿನೋಟವನ್ನು ನೀಡಬೇಕೆಂದು ತಿಳಿಸಲಾಗಿದೆ. ಸಮಸ್ಯೆ ಅಥವಾ ಸಮಸ್ಯೀಕರಣ ಪ್ರಸ್ತಾವ ರಚನೆಯ ಅಡಿಪಾಯ. ಪ್ರಸ್ತಾವದ ಈ ಭಾಗದಲ್ಲಿ ಸಂಶೋಧಕರು ಅಧ್ಯಯನ ಮಾಡಲಿರುವ ವಿಷಯದ ಮೇಲೆ ಈಗಾಗಲೇ ಆಗಿರುವ ಅಧ್ಯಯನಗಳ ವಿಶ್ಲೇಷಣೆ ಇರುತ್ತದೆ. ಈಗಾಗಲೇ ಆಗಿರುವ ಅಧ್ಯಯನಗಳಲ್ಲಿ ಸಂಶೋಧನ ವಿಷಯದ ಮೇಲೆ ಕೇಳಿದ ಮುಖ್ಯ ಪ್ರಶ್ನೆಗಳಿಗೆ ಪಡೆದ ಉತ್ತರಗಳೇನು? ಆ ಉತ್ತರಗಳ ಬಗ್ಗೆ ಸಂಶೋಧಕರ ನಿಲುವೇನು? ಒಂದು ವೇಳೆ ಸಂಶೋಧಕರು ಆ ಉತ್ತರಗಳನ್ನು ತಿರಸ್ಕರಿಸುವುದಾದರೆ ಕಾರಣಗಳೇನು? ಸಂಶೋಧಕರು ಇದೇ ಪ್ರಶ್ನೆಯನ್ನು ಬೇರೆ ಯಾವ ದೃಷ್ಟಿಯಿಂದ ನೋಡಲಿಚ್ಛಿಸುತ್ತಾರೆ? ಇತ್ಯಾದಿ ಪ್ರಶ್ನೆಗಳನ್ನು ಕೇಳುವ ಕೆಲಸವನ್ನು ಸಮಸ್ಯೀಕರಣದ ಹಂತದಲ್ಲಿ ಮಾಡಲಾಗುವುದು. ಸಮಸ್ಯೀಕರಣ ಹಂತದಲ್ಲಿ ಎತ್ತಿದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಅಥವಾ ಸಂಶೋಧನ ವಿಷಯದ ಯಾವೆಲ್ಲ ಮಗ್ಗುಲುಗಳನ್ನು ಪರೀಕ್ಷಿಸಲು ಪ್ರಸಕ್ತ ಸಂಶೋಧನೆ ಪ್ರಯತ್ನಿಸುತ್ತದೆ ಎನ್ನುವುದನ್ನು ಅಧ್ಯಯನ ಉದ್ದೇಶಗಳು ತಿಳಿಸುತ್ತವೆ. ಅಧ್ಯಯನ ಉದ್ದೇಶಗಳನ್ನು ಗುರುತಿಸುವಾಗ ಗಮನಿಸಬೇಕಾದ ಮುಖ್ಯ ಅಂಶಗಳೆಂದರೆ ಅವುಗಳು (ಉದ್ದೇಶಗಳು) ಸ್ಪಷ್ಟವಾಗಿರಬೇಕು, ಸಂಕ್ಷಿಪ್ತವಾಗಿರಬೇಕು ಮತ್ತು ಸೀಮಿತವಾಗಿರಬೇಕು. ಒಂದು ಅಧ್ಯಯನಕ್ಕೆ ದೊರಕುವ ಸಮಯ ಮತ್ತು

ಸಂಪನ್ಮೂಲದ ವ್ಯಾಪ್ತಿಯಲ್ಲಿ ಒಂದೆರಡು ಮುಖ್ಯ ಪ್ರಶ್ನೆಗಳು ಮತ್ತು ಅವುಗಳಿಗೆ ಸಂಬಂಧಿಸಿದ ಉಪ ಪ್ರಶ್ನೆಗಳಿಗೆ ಮಾತ್ರ ಸಮಾಧಾನಕರವಾಗಿ ಉತ್ತರಿಸಬಹುದು. ಹಲವಾರು ಉದ್ದೇಶಗಳನ್ನು ಒಂದು ಅಧ್ಯಯನದ ವ್ಯಾಪ್ತಿಯೊಳಗೆ ತುರುಕಿದರೆ ಎಲ್ಲ ವಿಚಾರಗಳ ಬಗ್ಗೆ ಅಲ್ಪಸ್ವಲ್ಪ ಮಾಹಿತಿ ನೀಡಿ ಯಾವುದೇ ಒಂದು ವಿಷಯದ ಬಗ್ಗೆ ಸಮಗ್ರವಾದ ಚಿತ್ರಣ ನೀಡಲು ಅಸಾಧ್ಯ. ಈ ಸ್ಥಿತಿ ಒಂದು ಉತ್ತಮ ಮಹಾಪ್ರಬಂಧದ ಲಕ್ಷಣವಲ್ಲ. ಅಧ್ಯಯನ ಉದ್ದೇಶಗಳು ಅಧ್ಯಯನದ ಊಹೆಗಳನ್ನು ನಿರ್ಧರಿಸುತ್ತವೆ ಎನ್ನಲಾಗಿದೆ. ಉದ್ದೇಶಗಳು ಸಂಶೋಧಕರು ಏನನ್ನು ಮಾಡಲು ಹೊರಟಿದ್ದಾರೆ ಎಂದು ತಿಳಿಸಿದರೆ ಊಹೆಗಳು ಅಧ್ಯಯನಕ್ಕೆ ಮುನ್ನವೇ ಅಧ್ಯಯನ ನಂತರ ಬರುವ ತೀರ್ಮಾನಗಳನ್ನು ಹೇಳುತ್ತವೆ. ಆದುದರಿಂದಲೇ ಊಹೆಗಳನ್ನು ಪೂರ್ವ ತೀರ್ಮಾನಗಳೆಂದು ಹೇಳುವುದು. ಅಧ್ಯಯನ ಉದ್ದೇಶಗಳು ಊಹೆಗಳನ್ನು ಮಾತ್ರ ನಿರ್ಧರಿಸುವುದಲ್ಲ; ಅಧ್ಯಯನ ವಿಧಾನಗಳನ್ನು ಕೂಡ ನಿರ್ಧರಿಸುತ್ತದೆ. ಉದ್ದೇಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಯಾವ ಮೂಲದಿಂದ ಮತ್ತು ಯಾವ ವಿಧಾನಗಳಿಂದ ಸಂಗ್ರಹಿಸಲಾಗುವುದು ಮತ್ತು ಸಂಗ್ರಹಿಸಲಾದ ಮಾಹಿತಿಯನ್ನು ಹೇಗೆ ವಿಶ್ಲೇಷಿಸಲಾಗುವುದು ಇತ್ಯಾದಿ ವಿವರಗಳನ್ನು ಅಧ್ಯಯನ ವಿಧಾನದಲ್ಲಿ ನೀಡಬೇಕಾಗಿದೆ. ಮಹಾಪ್ರಬಂಧದಲ್ಲಿರುವ ಒಟ್ಟು ಅಧ್ಯಾಯಗಳು ಮತ್ತು ಪ್ರತಿ ಅಧ್ಯಾಯ ನೀಡಲಿರುವ ಮಾಹಿತಿಯ ಸಂಕ್ಷಿಪ್ತ ವಿವರಗಳು, ಪ್ರಸ್ತಾವ ರಚನೆಗೆ ಬಳಸಿದ ಮುಖ್ಯ ಬರಹಗಳು ಇತ್ಯಾದಿ ವಿವರಗಳನ್ನು ಪ್ರಸ್ತಾಪದ ಕೊನೆಯ ಭಾಗದಲ್ಲಿ ನೀಡಲಾಗುವುದು.

ಕೊನೆ ಟಿಪ್ಪಣಿಗಳು

೧. ಮೇಲಿಂದ ಕೆಳಗೆ ಇಳಿಯುವ ಬದಲು ಕೆಳಗಿನಿಂತ ಮೇಲೇರುವ ಅಭಿವೃದ್ಧಿ ಚಿಂತನೆಗಳು ಸುಮಾರು ಅರವತ್ತು, ಎಪ್ಪತ್ತರ ದಶಕದಿಂದಲೇ ಸುದ್ದಿಯಲ್ಲಿದ್ದುವು. ಆದರೆ ಅವುಗಳ ಆಚರಣೆಗೆ ಬರುವುದು ತಡವಾಯಿತು ಮತ್ತು ಆಚರಣೆಗೆ ಬರುವಾಗಲು ಏಕಪ್ರಕಾರದಲ್ಲಿ ಮತ್ತು ಆಳವಾಗಿ ಆಚರಣೆಗೆ ಬರಲಿಲ್ಲ. ಕೆಲವೊಂದು ಕಡೆಗಳಲ್ಲಿ ನಾಮಕಾವಸ್ಥೆ ಆಚರಣೆಗೆ ಬಂದಿವೆ. ಪರಿಸರವಾದಿಗಳು, ಸಮುದಾಯವಾದಿಗಳು, ಆಧುನೀಕೋತ್ತರ ಚಿಂತಕರು ಕೆಳಗಿನಿಂದ ಮೇಲೇರುವ ಅಭಿವೃದ್ಧಿ ಮಾದರಿಗಳು ಆಚರಣೆಗೆ ಬರುವಲ್ಲಿ ದೊಡ್ಡ ಕೊಡುಗೆ ನೀಡಿದ್ದಾರೆ. ಈ ಕುರಿತ ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ಪುಸ್ತಕಗಳನ್ನು ನೋಡಬಹುದು. ಮಾಧವ ಗಾಡ್ಗಿಲ್ ಅಂಡ್ ರಾಮಚಂದ್ರ ಗುಹ, *ಇಕಲಾಜಿ ಆಂಡ್ ಇಕ್ವಿಟಿ : ದಿ ಯೂಸ್ ಆಂಡ್ ಎಬ್ಯೂಸ್ ಆಫ್ ನೇಚರ್ ಇನ್ ಕಾಂಟೆಂಪರರಿ ಇಂಡಿಯಾ*, ನ್ಯೂಡೆಲ್ಲಿ : ಪೆಂಗ್ವಿನ್ ಬುಕ್ಸ್, ೧೯೯೫. ರಜನಿ ಕೊಠಾರಿ, *ಸ್ಟೇಟ್ ಎಗೆಯನ್‌ಸ್ಟ್ ಡೆಮಾಕ್ರಸಿ ಇನ್ ಸರ್ಚ್ ಆಫ್ ಹ್ಯೂಮನ್ ಗವರ್ನೆನ್ಸ್*, ಡೆಲ್ಲಿ : ಅಜಂತಾ ಪಬ್ಲಿಷರ್ಸ್ , ೧೯೮೮, ಆಶಿಸ್ ನಂದಿ, ''ಕಲ್ಚರ್, ಸ್ಟೇಟ್ ಆಂಡ್ ರಿಡಿಸ್ಕವರಿ ಆಫ್ ಇಂಡಿಯನ್ ಪೊಲಿಟಿಕ್ಸ್'', *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*, ವಾ.೧೯. ೧೯೮೪. ಪು.೨೦೭೮-೮೩, ಜೋಡ ಎನ್.ಎಸ್., ''ಕಾಮನ್ ಪ್ರೊಪರ್ಟಿ ರಿಸೋರ್ಸ್‌ಸ್''. ಇನ್ ರಾಮಚಂದ್ರಗುಹ (ಎಡಿಟೆಡ್), *ಸೋಶಿಯಲ್ ಇಕಲಾಜಿ*, ಡೆಲ್ಲಿ: ಆಕ್ಸ್‌ಫರ್ಡ್ ಯುನಿವರ್ಸಿಟಿ

ಪ್ರೆಸ್, ೧೯೯೪. ೫. ಮಹಮ್ಮದ್ ಮೊಹಿದ್ದೀನ್ ಅಬ್ದುಲ್ಲ, *ರೂರಲ್ ಡೆವಲಪ್‌ಮೆಂಟ್ ಇನ್ ಬಾಂಗ್ಲದೇಶ್: ಪ್ರೊಬ್ಲೆಮ್ಸ್ ಅಂಡ್ ಪ್ರೊಸ್‌ಪೆಕ್ಟ್ಸ್*, ಡಾಕ್ಕಾ : ನೂರ್ ಜಹಾನ್ ಬೇಗಂ, ೧೯೭೯ ೬, ರಾಬರ್ಟ್ ಪುನಮ್, *ಮೇಕಿಂಗ್ ಡೆಮಾಕ್ರಸಿ ವರ್ಕ್: ಸಿವಿಕ್ ಟ್ರೆಡಿಶನ್ಸ್ ಇನ್ ಮೊಡರ್ನ್ ಇಟಲಿ*, ಪ್ರಿನ್ಸ್‌ಟನ್: ಪ್ರಿನ್ಸ್‌ಟನ್ ಯುನಿವರ್ಸಿಟಿ ಪ್ರೆಸ್, ೧೯೯೩, ಜೋನ್ ಹೇರಿಸ್, *ಡಿಪೊಲಿಟಿಸೈಜಿಂಗ್ ಡೆವಲಪ್‌ಮೆಂಟ್ : ದಿ ವರ್ಲ್ಡ್ ಬೇಂಕ್ ಅಂಡ್ ಸೋಶಿಯಲ್ ಕ್ಯಾಪಿಟಲ್*, ನ್ಯೂಡೆಲ್ಲಿ: ಲೆಫ್ಟ್ ವರ್ಡ್‌ಬುಕ್ಸ್, ೨೦೦೧.

೨. ರಾಮಚಂದ್ರ ಗುಹಾ, *ದಿ ಅನ್ ಕ್ವಯಿಟ್ ವುಡ್ಸ್*, ಡೆಲ್ಲಿ: ಆಕ್ಸ್‌ಫರ್ಡ್ ಯುನಿರ್ವಸಿಟಿ ಪ್ರೆಸ್, ೧೯೮೮, ೨. ಮಾಧವ ಗಾಡ್ಗಿಲ್ ಹಾಗು ರಾಮಚಂದ್ರ ಗುಹಾ, *ದಿಸ್ ಫಿಸ್ಯುರ್ಡ್ ಲೇಂಡ್ - ಎನ್ ಎಕಲಾಜಿಕಲ್ ಹಿಸ್ಟರಿ ಆಫ್ ಇಂಡಿಯಾ*, ಡೆಲ್ಲಿ: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೨, ಜೋದ ಎನ್.ಎಸ್., ''ಕಾಮನ್ ಪ್ರೊಪರ್ಟಿ ರಿಸೋರ್ಸ್ ಸ್'', ಇನ್ ರಾಮಚಂದ್ರ ಗುಹ (ಸಂ), *ಸೋಶಿಯಲ್ ಇಕಲಾಜಿ*, ಡೆಲ್ಲಿ: ಆಕ್ಸ್ ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೪, ಆಶಿಸ್ ಕೊಠಾರಿ ಮತ್ತು ಇತರರು, *ಕಮ್ಯುನಿಟೀಸ್ ಅಂಡ್ ಕನ್ ಸರ್ ವೇಶನ್ : ನೇಚುರಲ್ ರಿಸೋರ್ಸ್ ಮೇನೇಜ್ ಮೆಂಟ್ ಇನ್ ಸೌತ್ ಅಂಡ್ ಸೆಂಟ್ರಲ್ ಏಶ್ಯಾ*, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೧೯೯೮. ೩. ನೇಗಿ, ಎಸ್, *ಇಂಡಿಯನ್ ಫಾರೆಸ್ಟ್ರಿ ಥ್ರೂ ದಿ ಏಜಸ್*, ಡೆಲ್ಲಿ : ಇಂಡಸ್ ಪಬ್ಲಿಷಿಂಗ್ ಕಂಪೆನಿ, ೧೯೯೪. ಜಿಷ್ಣು ದಾಸ್, 'ಇನ್ ಸ್ಟಿಟ್ಯುಷನ್ಸ್ ಅಂಡ್ ಇನ್ ಸೆಂಟಿವ್ಸ್ ಇನ್ ಎ ಗರ್‌ವಾಲ್ ವಿಲೇಜ್ - ೧. *ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ*, ಸಂ.೩೫, ಸಂಖ್ಯೆ ೫೯, ಡಿಸೆಂಬರ್ ೨೦೦೦, ಪು.೪೩೩೭-೪೪.

೩. ಜಂಟೀ ಅರಣ್ಯ ಯೋಜನೆ ಬರಲು ಪರಿಸರ ವಾದಿಗಳು ಮತ್ತು ಸಮುದಾಯವಾದಿಗಳ ಸಂಶೋಧನೆಗಳ ಜತೆಗೆ ಯೋಜನೆಗಳಿಗೆ ಹಣಕಾಸು ನೆರವು ನೀಡುವ ವಿದೇಶಿ ಸಂಸ್ಥೆಗಳ ಒತ್ತಡನೂ ಕೆಲಸ ಮಾಡಿದೆ. ಕರ್ನಾಟಕದಲ್ಲಿ ೧೯೯೨ ರಿಂದ ೨೦೦೦ರ ವರೆಗಿನ ಅವಧಿಯಲ್ಲಿ ಪಶ್ಚಿಮಘಟ್ಟ ಪರಿಸರ ಮತ್ತು ಅರಣ್ಯ ಯೋಜನೆ (ಫಾರೆಸ್ಟ್ರಿ ಅಂಡ್ ಎನ್‌ವೆಯರನ್‌ಮೆಂಟ್ ಪ್ರಾಜೆಕ್ಟ್ ಫಾರ್ ವೆಸ್ಟರ್ನ್ ಘಾಟ್ಸ್) ಕಾರ್ಯಗತವಾಯಿತು. ಬ್ರಿಟನ್ನಿನ ಅಂತರ್ ರಾಷ್ಟ್ರೀಯ ಅಭಿವೃದ್ಧಿ ಇಲಾಖೆ (ಡಿಪಾರ್ಟ್‌ಮೆಂಟ್ ಫಾರ್ ಇಂಟರ್ ನೇಶನಲ್ ಡೆವಲಪ್‌ಮೆಂಟ್) ಈ ಯೋಜನೆಗೆ ಸಹಾಯಧನ ನೀಡಿದೆ. ಹಣಕಾಸು ನೆರವು ನೀಡುವ ಸಂಸ್ಥೆ ಯೋಜನೆಯನ್ನು ಜಂಟೀ ಅರಣ್ಯ ಯೋಜನೆ ಮತ್ತು ನಿರ್ವಹಣೆಯ ಪರಿಕಲ್ಪನೆಗೆ ಅನುಗುಣವಾಗಿ ಅನುಷ್ಠಾನ ಗೊಳಿಸಬೇಕೆಂದು ಶರತ್ತನ್ನು ವಿಧಿಸಿತು. ಕರ್ನಾಟಕ ಸರಕಾರ ಅಂತರ್‌ರಾಷ್ಟ್ರೀಯ ಸಂಸ್ಥೆಯ ಶರತ್ತಿಗೆ ಒಪ್ಪಿ ೧೯೯೩ರಲ್ಲಿ ಜಂಟೀ ಅರಣ್ಯ ಯೋಜನೆಗೆ ಸಂಬಂಧಿಸಿದ ಆದೇಶವನ್ನು ಹೊರಡಿಸಿತು.

೪. ಟಾಟಾ ಎನರ್ಜಿ ರಿಸರ್ಚ್ ಇನ್‌ಸ್ಟಿಟ್ಯೂಟ್, *ನ್ಯಾಷನಲ್ ಸ್ಟಡಿ ಆನ್ ಜಾಯಿಂಟ್ ಫಾರೆಸ್ಟ್ ಮೆನೇಜ್‌ಮೆಂಟ್*, ನ್ಯೂಡೆಲ್ಲಿ: ಮಿನಿಸ್ಟ್ರಿ ಫಾರ್ ಎನ್‌ವೈರನ್‌ಮೆಂಟ್ ಅಂಡ್ ಫಾರೆಸ್ಟ್, ೧೯೯೭

೫. ಸಕ್ಸೇನಾ ಎನ್.ಸಿ. ಮತ್ತು ಮಧು ಸರೀನ್, 'ದಿ ವೆಸ್ಟರ್ನ್ ಘಾಟ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್-ಎ ಪ್ರಿಲಿಮಿನರಿ ಅಸೆಸ್‌ಮೆಂಟ್, 'ಇನ್ ರೋಜನರ್ ಜೆಫ್ರಿ ಮತ್ತ ನಂದಿನಿ ಸುಂದರ್ (ಸಂ), *ಎ ನ್ಯೂ ಮೋರಲ್ ಎಕಾನಮಿ ಫಾರ್ ಇಂಡಿಯನ್ ಫಾರೆಸ್ಟ್ಸ್*, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಷನ್, ೧೯೯೯

೬. ಸಕ್ಸೇನಾ ಎನ್.ಸಿ. ಮತ್ತು ಮಧು ಸರೀನ್, 'ದಿ ವೆಸ್ಟರ್ನ್‌ಘಾಟ್ ಫಾರೆಸ್ಟ್ರಿ ಅಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್', ೧೯೯೯

೭. ಔಟ್ ರೀಚ್, ಸೋಶಿಯಲ್ ಇಂಪೇಕ್ಟ್ ಸ್ಟಡಿ ಫಾರ್ ಡಿಪಾರ್ಟ್‌ಮೆಂಟ್ ಆಫ್ ಇಂಟರ್‌ನೇಶನಲ್ ಡೆವಲಪ್‌ಮೆಂಟ್ ಅಂಡ್ ಕರ್ನಾಟಕ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಆನ್ ವೆಸ್ಟರ್ನ್‌ಘಾಟ್ ಜೆಎಫ್ ಪಿಎಮ್ ಪ್ರೋಗ್ರಾಮ್ ಇನ್ ಕರ್ನಾಟಕ, ಬೆಂಗಳೂರು : ಔಟ್ ರೀಚ್, ೧೯೯೮

೮

ಸಾಕ್ಷಿ, ಪುರಾವೆಗಳ ಸಂಗ್ರಹ

ಸಂಶೋಧನೆಯನ್ನು ಸತ್ಯ/ವಾದ ಪ್ರತಿಪಾದನ ಪ್ರಕ್ರಿಯೆಯೆಂದು ವ್ಯಾಖ್ಯಾನಿಸಲಾಗಿದೆ. ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳನ್ನು ಪ್ರಶ್ನಿಸುತ್ತ ಸಂಶೋಧಕರು ತಮ್ಮ ಸತ್ಯವನ್ನು ಅಥವಾ ವಾದವನ್ನು ಪ್ರತಿಸ್ಥಾಪಿಸುವುದು ಸಂಶೋಧನೆಯ ತಿರುಳು. ಸಂಶೋಧನೆಯ ಈ ಉದ್ದೇಶ ಪರಿಪೂರ್ಣವಾಗಿ ಈಡೇರಬೇಕಾದರೆ ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳ ಬಗ್ಗೆ ಸಮಗ್ರ ಮಾಹಿತಿ ಇರುವುದರ ಜತೆಗೆ ಸಂಶೋಧಕರು ಮಂಡಿಸಲಿಚ್ಛಿಸುವ ವಾದಗಳನ್ನು ಸಮರ್ಥಿಸುವ ಸಾಕ್ಷಿ ಪುರಾವೆಗಳು ಕೂಡ ಬೇಕು. ಈ ಎರಡು ಬಗೆಯ ಮಾಹಿತಿಗಳನ್ನು ಸಂಶೋಧನೆಯ ಸಾಂಪ್ರದಾಯಿಕ ಪರಿಭಾಷೆಯಲ್ಲಿ ಆನುಷಂಗಿಕ ಮಾಹಿತಿ ಮತ್ತು ಪ್ರಾಥಮಿಕ ಮಾಹಿತಿಯೆಂದು ಗುರುತಿಸುತ್ತಾರೆ. ಮಾಹಿತಿಯ ಹಿನ್ನೆಲೆ ಅಥವಾ ಮೂಲ ಮಾಹಿತಿಯ ಈ ವರ್ಗೀಕರಣಕ್ಕೆ ಮುಖ್ಯ ಆಧಾರ. ಸಂಶೋಧನೆಗೆ ಒಳಪಡುವ ಸಂಗತಿ/ಕುಟುಂಬ/ಸಮುದಾಯ ಇತ್ಯಾದಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನೇರವಾಗಿ ಆ ಮೂಲಗಳಿಂದಲೇ ಪಡೆದರೆ ಅವುಗಳನ್ನು ಪ್ರಾಥಮಿಕ ಮಾಹಿತಿಯೆಂದು ಪರಿಗಣಿಸಲಾಗುವುದು. ಸಂಶೋಧನೆಗೆ ಒಳಪಡುವ ಸಂಗತಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಅವುಗಳ ಎರಡನೇ ಮೂಲದಿಂದ ಪಡೆಯುವುದು ಎನ್ನುವ ಅರ್ಥದಲ್ಲಿ ಆನುಷಂಗಿಕ ಮಾಹಿತಿ ಎನ್ನುವ ಪದ ಬಳಕೆ ಆಗುತ್ತಿದೆ. ಅಂದರೆ ಈ ಮಾಹಿತಿ ಯಾವುದೋ ರೂಪದಲ್ಲಿ ಈಗಾಗಲೇ ಬಳಕೆ ಆಗಿದೆ. ಸಂಶೋಧಕರು ಅವುಗಳನ್ನು ಅವುಗಳ ಪ್ರಥಮ ಮೂಲದಿಂದ ಪಡೆಯುತ್ತಿಲ್ಲ; ಬದಲಿಗೆ ಎರಡನೇ ಅಥವಾ ಇನ್ನಾವುದೋ ಮೂಲದಿಂದ ಪಡೆಯುತ್ತಾರೆ ಎನ್ನುವ ಕಲ್ಪನೆ ಇದೆ. ಈ ಪುಸ್ತಕದಲ್ಲಿನ ಸಂಶೋಧನೆಯ ವ್ಯಾಖ್ಯಾನದ ದೃಷ್ಟಿಯಿಂದ ನೋಡಿದರೆ ಈಗಾಗಲೇ ಸ್ಥಾಪಿತವಾದ ಸತ್ಯಗಳನ್ನು ಅಥವಾ ವಾದಗಳನ್ನು ಸಂಗ್ರಹಿಸುವುದನ್ನು ಆನುಷಂಗಿಕ ಮಾಹಿತಿ ಸಂಗ್ರಹವೆಂದು ತಿಳಿದುಕೊಳ್ಳಬಹುದು. ಅದೇ ರೀತಿಯಲ್ಲಿ ಸಂಶೋಧಕರು ಮಂಡಿಸಲಿಚ್ಛಿಸುವ ವಾದವನ್ನು ಸಮರ್ಥಿಸಲು ಅಥವಾ ಬಲಪಡಿಸಲು ಬೇಕಾಗಿರುವ ಸಾಕ್ಷಿ ಪುರಾವೆಗಳನ್ನು ಪ್ರಾಥಮಿಕ ಮಾಹಿತಿ ಎನ್ನಬಹುದು. ಹೀಗೆ

ಸಂಶೋಧನೆ ಕೇವಲ ವಾದ ಪ್ರತಿಪಾದನೆಯ ಕೆಲಸ ಮಾತ್ರವಲ್ಲ. ವಾದ ಪ್ರತಿಪಾದನೆ ಸಮರ್ಥವಾಗಿ ನಡೆಯಬೇಕಾದರೆ ವಾದಗಳನ್ನು ಬಲಪಡಿಸಲು ಅಗತ್ಯವಿರುವ ಸಾಕ್ಷಿ, ಪುರಾವೆ, ದಾಖಲೆ ಇತ್ಯಾದಿಗಳು ಕೂಡ ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹವಾಗಬೇಕಾಗುತ್ತದೆ. ಈ ದೃಷ್ಟಿಯಿಂದ ಸಂಶೋಧನೆಯನ್ನು ನೋಡಿದರೆ ಸಂಶೋಧಕರಿಗೆ ಕೇವಲ ಉತ್ತಮ ವಕೀಲರ ಗುಣಲಕ್ಷಣಗಳಿದ್ದರೆ ಸಾಲದು ಉತ್ತಮ ಗೂಢಚಾರರ (ಡಿಟೆಕ್ಟಿವ್) ಗುಣಲಕ್ಷಣಗಳು ಕೂಡ ಇರಬೇಕಾಗುತ್ತದೆ. ಸಂಶೋಧನೆಗೆ ಅಗತ್ಯವಿರುವ ಸಾಕ್ಷಿ, ಪುರಾವೆ, ದಾಖಲೆ ಇತ್ಯಾದಿಗಳ ಮೂಲ, ಸಂಗ್ರಹ ವಿಧಾನ ಇತ್ಯಾದಿಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು. ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳು ಯಾವ ರೂಪದಲ್ಲಿರುತ್ತವೆ, ಅವುಗಳನ್ನು ಹೇಗೆ ಸಂಗ್ರಹಿಸುವುದು ಇತ್ಯಾದಿ ಸಂಗತಿಗಳನ್ನು ಅಧ್ಯಾಯದ ಮೊದಲ ಭಾಗದಲ್ಲಿ ಚರ್ಚಿಸಲಾಗಿದೆ. ಸಂಶೋಧಕರು ಮಂಡಿಸಲಿಚ್ಛಿಸುವ ವಾದಗಳನ್ನು ಸಮರ್ಥಿಸಲು ಬೇಕಾಗುವ ಮಾಹಿತಿಗಳ ನಿರ್ಣಯ, ಅವುಗಳ ಯಾವ ರೂಪದಲ್ಲಿರುತ್ತವೆ, ಅವುಗಳನ್ನು ಸಂಗ್ರಹಿಸುವ ವಿಧಾನಗಳನ್ನು ಅಧ್ಯಾಯದ ಎರಡನೇ ಭಾಗದಲ್ಲಿ ಚರ್ಚಿಸಲಾಗಿದೆ.

ಭಾಗ ೧

ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳನ್ನು ಸಂಶೋಧನೆಯ ಸಾಂಪ್ರದಾಯಿಕ ಪರಿಭಾಷೆ ಆನುಷಂಗಿಕ ಮಾಹಿತಿಯೆಂದು ಮತ್ತು ಸಂಶೋಧಕರು ಮಂಡಿಸಲು ಉದ್ದೇಶಿಸಿರುವ ವಾದವನ್ನು ಸಮರ್ಥಿಸಲು ಬೇಕಾಗಿರುವ ಮಾಹಿತಿಯನ್ನು ಪ್ರಾಥಮಿಕ ಮಾಹಿತಿಯೆಂದು ವಿಂಗಡಿಸಲಾಗಿದೆಯೆಂದು ನೋಡಿದ್ದೇವೆ. ಈ ವಿಂಗಡನೆಗೆ ಮುಖ್ಯ ಆಧಾರ ಮಾಹಿತಿ ಮೂಲ-ಮೊದಲ ಮೂಲದಿಂದ ಮಾಹಿತಿ ಸಂಗ್ರಹವಾದರೆ ಪ್ರಾಥಮಿಕ ಮಾಹಿತಿಯೆಂದು ಎರಡನೇ ಅಥವಾ ಮೊದಲ ಮೂಲದಿಂದ ಅಲ್ಲವಾದರೆ ಆನುಷಂಗಿಕ ಮಾಹಿತಿಯೆಂದು ವಿಂಗಡಿಸಲಾಗುವುದು. ಈ ಬಗೆಯ ವಿಂಗಡನೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತದೆ. ಜನಪದ ಮತ್ತು ಮಹಿಳಾ ಅಧ್ಯಯನ ಸಂಶೋಧನಾ ಸಂದರ್ಭಗಳಲ್ಲಿ ಮಾಹಿತಿಯ ಹಿನ್ನೆಲೆಯ ಆಧಾರದಲ್ಲಿ ಪ್ರಾಥಮಿಕ ಅಥವಾ ಆನುಷಂಗಿಕ ಎಂದು ವಿಂಗಡಿಸುವುದು ಸಮಸ್ಯಾತ್ಮಕವಾಗಿದೆ. ಜನಪದ ಅಧ್ಯಯನದಲ್ಲಿ ಬಳಸುವ ಪಾಡ್ದನಗಳನ್ನು ಮತ್ತು ಪಾಡ್ದನ ಹಾಡುವವರನ್ನು ಹೇಗೆಂದು ಪರಿಭಾವಿಸಬೇಕು? ಪ್ರಾಥಮಿಕ ಮಾಹಿತಿಯೆಂದೇ ಅಥವಾ ಆನುಷಂಗಿಕ ಮಾಹಿತಿಯೆಂದೇ? ಅದೇ ರೀತಿಯಲ್ಲಿ ಬುಡಕಟ್ಟು ಅಧ್ಯಯನದಲ್ಲೂ ಬುಡಕಟ್ಟು ರಾಮಾಯಣ ಹೇಳುವವರನ್ನು ಎಲ್ಲಿ ಸೇರಿಸಬೇಕು ಎನ್ನುವ ಪ್ರಶ್ನೆ. ಇದೇ ಬುಡಕಟ್ಟು ರಾಮಾಯಣವನ್ನು ಅಥವಾ ಜನಪದ ಪಾಡ್ದನವನ್ನು ಸಂಶೋಧಕರೊಬ್ಬರು ತಮ್ಮ ಸಂಶೋಧನೆಯಲ್ಲಿ ಬಳಸಿಕೊಂಡಿದ್ದಾರೆ ಎಂದಿಟ್ಟುಕೊಳ್ಳುವ ಅಂತಹ ಸಂಶೋಧನೆಗಳಿಂದ ಅಥವಾ ಬರಹಗಳಿಂದ ಮಾಹಿತಿ ಪಡೆಯುವಾಗ ಅವುಗಳ ಮೂಲ ಹೇಳುಗ ಯಾರೆಂದು ಗುರುತಿಸಬೇಕು? ಈ ಕುರಿತು ಜನಪದ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು ಜನಪದ ಪಾಡ್ದನ ಅಥವಾ ಬುಡಕಟ್ಟು ಕಾವ್ಯಗಳನ್ನು ಹಾಡುವವರು ಪ್ರಾಥಮಿಕ

ಮಾಹಿತಿದಾರರೆಂದು ಪರಿಗಣಿಸಬೇಕೆಂದು ಅಭಿಪ್ರಾಯಪಟ್ಟರೆ ಇನ್ನು ಕೆಲವರು ಅವರನ್ನು ಆನುಷಂಗಿಕ ಮೂಲಗಳೆಂದು ಪರಿಗಣಿಸಬೇಕೆಂದು ವಾದಿಸುತ್ತಾರೆ. ಆನುಷಂಗಿಕ ಮಾಹಿತಿ ಮೂಲವೆಂದು ಪರಿಗಣಿಸಬೇಕೆನ್ನುವವರ ಪ್ರಕಾರ ಜನಪದ ಪಾಡ್ದನ ಹಾಡುವವರು ಅಥವಾ ಬುಡಕಟ್ಟು ಕಾವ್ಯ ಹಾಡುವವರು ತಮ್ಮ ಸಮುದಾಯದಲ್ಲಿ ಶತಮಾನಗಳಿಂದ ಮೌಖಿಕವಾಗಿ ಹರಿದು ಬಂದ ಪಾಡ್ದನ ಅಥವಾ ಕಾವ್ಯಗಳನ್ನು ಹೇಳುತ್ತಾರೆ. ಆ ಹಾಡುಗಾರರು ತಾವೇ ಪಾಡ್ದನಗಳನ್ನು ಅಥವಾ ಕಾವ್ಯಗಳನ್ನು ರಚಿಸಿಲ್ಲ. ಆದುದರಿಂದ ಅವರನ್ನು ಅಥವಾ ಅವರು ಹೇಳುವ ಸಂಗತಿಗಳನ್ನು ಅನುಷಂಗಿಕ ಮೂಲದಿಂದ ಪಡೆಯಲಾಗಿದೆ ಎಂದು ತೀರ್ಮಾನಿಸಲಾಗುವುದು. ಪ್ರಾಥಮಿಕ ಮೂಲಗಳೆಂದು ಪರಿಗಣಿಸಬೇಕೆಂದು ವಾದಿಸುವವರ ಪ್ರಕಾರ ಪಾಡ್ದನ ಅಥವಾ ಬುಡಕಟ್ಟು ಕಾವ್ಯಗಳನ್ನು ಅವರ ಮೂಲ ರೂಪದಲ್ಲೇ ಇಂದಿನ ಹಾಡುಗಾರರು ಹಾಡುತ್ತಾರೆಂದು ತಿಳಿಯುವುದು ಸರಿಯಲ್ಲ. ಹಲವಾರು ಹಾಡುಗಾರರನ್ನು ಪರಿಶೀಲಿಸಿ ಪ್ರತಿ ಹಾಡುಗಾರರನ ಶೈಲಿ, ಕಂಟೆಂಟ್‌ಗಳಲ್ಲಿ ಸಾಕಷ್ಟು ಭಿನ್ನತೆ ಇದೆ ಎಂದು ಗುರುತಿಸಿದ್ದಾರೆ. ಆದುದರಿಂದ ಜನಪದ ಅಥವಾ ಬುಡಕಟ್ಟು ಕಾವ್ಯಗಳಲ್ಲಿ ಹಾಡುವವರ ಕೊಡುಗೆ ಏನಿಲ್ಲ ಅಥವಾ ಹಿಂದೆ ಹೇಳಿರುವುದನ್ನು ಯಥಾ ರೂಪದಲ್ಲಿ ದಾಟಿಸುತ್ತಾರೆ ಎಂದು ತಿಳಿಯಲಾಗುವುದಿಲ್ಲ ಎನ್ನುತ್ತಾರೆ.[೨]

ಜನಪದ ಅಧ್ಯಯನದಂತೆ ಮಹಿಳಾ ಅಧ್ಯಯನ ಕೂಡ ಸಾಂಪ್ರದಾಯಿಕ ಮಾಹಿತಿ ವಿಂಗಡನೆಯನ್ನು ಪ್ರಶ್ನಿಸುತ್ತಿದೆ. ಸಾಂಪ್ರದಾಯಿಕ ಸಮಾಜ ವಿಜ್ಞಾನಗಳಲ್ಲಿ ಸಂದರ್ಶನವನ್ನು ಪ್ರಾಥಮಿಕ ಮಾಹಿತಿ ಮೂಲಗಳೆಂದು ತಿಳಿಯಲಾಗುತ್ತದೆ. ಆದರೆ ಮಹಿಳಾ ಅಧ್ಯಯನದಲ್ಲಿ ಸಂದರ್ಶನವನ್ನು ಪ್ರಾಥಮಿಕ ಮಾಹಿತಿಯ ಮೂಲವೆಂದು ತಿಳಿಯಲಾಗುವುದಿಲ್ಲ. ಅದನ್ನು ಆನುಷಂಗಿಕ ಮೂಲವೆಂದು ತಿಳಿಯಲಾಗುತ್ತಿದೆ.[೩] ಸಂದರ್ಶನದ ಹೊಸ ರೂಪದಲ್ಲಿ ಅದನ್ನು ವಾಸ್ತವದ ಬಗ್ಗೆ ಮಾಹಿತಿ ಸಂಗ್ರಹಿಸುವ ವಿಧಾನವೆಂದು ತಿಳಿಯಲಾಗಿಲ್ಲ. ಸಂದರ್ಶನ ಕೂಡ ಒಂದು ವಿಷಯವಾಗಿ ಅಥವಾ ಅಧ್ಯಯನದ ವಸ್ತುವಾಗಿ ಮಾರ್ಪಾಟುಗೊಂಡಿದೆ. ಈ ವಿಷಯವನ್ನು ಅಥವಾ ವಸ್ತುವನ್ನು ವಿಶ್ಲೇಷಿಸುವ ಮೂಲಕ ಸಂಶೋಧನೆಯ ಉದ್ದೇಶಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಸಂದರ್ಶನವನ್ನು ಈ ದೃಷ್ಟಿಯಲ್ಲಿ ನೋಡಲು ಬಹುಮುಖ್ಯ ಕಾರಣ ಸಂದರ್ಶಿನಿಗಳು ವಾಸ್ತವವನ್ನು ಯಥಾ ರೀತಿಯಲ್ಲಿ ಮಂಡಿಸುವುದಿಲ್ಲ ಎನ್ನುವ ಗ್ರಹಿಕೆ. ಸಂದರ್ಶಕರು ವಾಸ್ತವಕ್ಕೆ ಹತ್ತಿರವಾದ ಮಾಹಿತಿಯನ್ನು ಕೊಡದಿರಲು ಹಲವು ಕಾರಣಗಳಿರಬಹುದು. ಅವುಗಳಲ್ಲಿ ಮುಖ್ಯವಾದ ಕೆಲವು ಇಂತಿವೆ. ಒಂದು, ವಾಸ್ತವವನ್ನು ಮರೆಮಾಚುವ ಅಥವಾ ತಿರುಚುವ ಮಾಹಿತಿಗಳನ್ನು ನೀಡುವುದು, ಎರಡು, ತಮ್ಮ ವೈಯಕ್ತಿಕ ಲೋಪ ಗಳನ್ನು ಮುಚ್ಚಿಕೊಳ್ಳಲು ಪೂರಕವಾಗುವ ಮಾಹಿತಿಗಳನ್ನು ನೀಡುವುದು, ಮೂರು, ಬಹು ಮಾಹಿತಿಗಳನ್ನು ನೀಡುವುದು ಅಥವಾ ಸಂದರ್ಶಕನಿಗೊಂದು ಮಾಹಿತಿ ಮತ್ತು ಇತರ

ಗ್ರಾಹಕರಿಗೆ ಮತ್ತೊಂದು ಮಾಹಿತಿ ನೀಡುವುದು. ವಾಸ್ತವವನ್ನು ಮರೆಮಾಚುವ ಮಾಹಿತಿ ನೀಡುವುದನ್ನು ನಾವು ದಿನನಿತ್ಯ ಮಾಧ್ಯಮಗಳಲ್ಲಿ (ಟೀವಿ, ದಿನಪತ್ರಿಕೆ, ವಾರಪತ್ರಿಕೆ ಇತ್ಯಾದಿಗಳಲ್ಲಿ) ಕಾಣುತ್ತೇವೆ. ಮಾಹಿತಿ ಮೂಲವನ್ನು ಸಮಸ್ಯೀಕರಿಸುವುದರಲ್ಲಿ ಸಂಶೋಧನೆಯನ್ನು ಕಲ್ಪಿತ ಅಥವಾ ರಚಿತ ಸತ್ಯಗಳು ರೂಪುಗೊಳ್ಳುವ ಬಗೆಯನ್ನು ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯೆಂದು ವ್ಯಾಖ್ಯಾನಿಸುವುದು ಕೂಡ ಸೇರಿದೆ. ಹೀಗೆ ಸಂಶೋಧನೆಯ ಸಾಂಪ್ರದಾಯಿಕ ವ್ಯಾಖ್ಯಾನದನ್ವಯ ಮಾಹಿತಿ ಸಂಗ್ರಹಿಸುವ ವಿಧಾನಗಳನ್ನು ವಿಂಗಡಿಸುವುದು ಸರಿಯಲ್ಲ. ಈಗಾಗಲೇ ಮಂಡಿತವಾದ ಅಥವಾ ಸ್ಥಾಪಿತವಾದ ವಾದಗಳ ರೂಪದಲ್ಲಿ ಆನುಷಂಗಿಕ ಮಾಹಿತಿಗಳನ್ನು ನೋಡಿದರೆ ಮೇಲಿನ ಸಮಸ್ಯೆ ಎದುರಾಗುವುದೇ ಇಲ್ಲ. ಯಾಕೆಂದರೆ ಸಂಶೋಧನೆಯ ಈ ವ್ಯಾಖ್ಯಾನ ಸಂಶೋಧನೆಗಳನ್ನು ಜನಪದ ಅಧ್ಯಯನ, ಮಹಿಳಾ ಅಧ್ಯಯನ, ಚರಿತ್ರೆ ಅಧ್ಯಯನವೆಂದು ವಿಂಗಡಿಸುವುದಿಲ್ಲ. ಎಲ್ಲ ಸಂಶೋಧನೆಗಳನ್ನು ಸತ್ಯ/ವಾದ ಪ್ರತಿಪಾದನೆಯೆಂದು ವ್ಯಾಖ್ಯಾನಿಸುತ್ತದೆ. ವಾದ ಪ್ರತಿಪಾದನೆಗೆ ಈಗಾಗಲೇ ಮಂಡಿತವಾದ ವಾದ/ಸತ್ಯಗಳು ಯಾವುವು ಮತ್ತು ಅವುಗಳು ಯಾವ ರೂಪದಲ್ಲಿ ಇವೆ ಎನ್ನುವುದು ಮುಖ್ಯ.

ವಾದಗಳ ಸಂಗ್ರಹ

ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳು ಈ ಕೆಳಗಿನ ರೂಪದಲ್ಲಿರಬಹುದು. ಈಗಾಗಲೇ ಮಂಡಿತವಾದ ಸಂಶೋಧನ ಪ್ರಬಂಧಗಳು, ಅಚ್ಚಾದ ಸಂಶೋಧನ ಪ್ರಬಂಧಗಳು, ವಿಚಾರ ಸಂಕಿರಣಗಳಲ್ಲಿ ಮಂಡಿತವಾದ ಸಂಶೋಧನ ಲೇಖನಗಳು, ಪತ್ರಿಕೆಗಳಲ್ಲಿ ಅಚ್ಚಾದ ಸಂಶೋಧನ ಲೇಖನಗಳು, ಈಗಾಗಲೇ ಯಾವುದೋ ಒಂದು ರೂಪದಲ್ಲಿ ದಾಖಲಾಗಿರುವ ಮೌಖಿಕ ಆಕರಗಳು, ಡೈರಿಗಳು, ಕ್ರೋನಿಕಲ್ಸ್, ಕಚೇರಿ ಕಡತಗಳು, ಶಾಸನಗಳು, ದಾಖಲೆಗಳು, ಪತ್ರಗಳು ಇತ್ಯಾದಿ ರೂಪದಲ್ಲಿ ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳು ಇಡಿಯಾಗಿ ಅಥವಾ ಬಿಡಿಬಿಡಿಯಾಗಿ ಇರಬಹುದು. ಈಗಾಗಲೇ ಮಂಡಿತ ವಾದಗಳನ್ನು ಹಲವು ಬಗೆಯಲ್ಲಿ ವಿಂಗಡಿಸಿಕೊಳ್ಳುವ ರೂಢಿಯಿದೆ. ಅವುಗಳಲ್ಲಿ ಸಂಶೋಧನ ಬರಹಗಳು ಮತ್ತು ಸಂಸ್ಥೆ, ವ್ಯಕ್ತಿಗಳು ಅವರುಗಳ ಬಗ್ಗೆ ಪ್ರಕಟಿಸುವ ಬರಹಗಳು ಮುಖ್ಯ. ಈ ಎರಡನ್ನು ಪರಾಮರ್ಶಿಸಿ ಮಾಹಿತಿ ಸಂಗ್ರಹಿಸುವಾಗ ಅನುಸರಿಸಬೇಕಾದ ದೃಷ್ಟಿಕೋನಗಳು ಭಿನ್ನವಾಗಿವೆ. ಈಗಾಗಲೇ ಸ್ಥಾಪಿತವಾದ ವಾದಗಳನ್ನು ಪ್ರಶ್ನಿಸುವ ಅಥವಾ ಹೊಸಬಗೆಯಲ್ಲಿ ನೋಡುವ ಕೆಲಸವನ್ನು ಸಂಶೋಧನ ಬರಹಗಳು ಮಾಡುತ್ತವೆ. ಇದಕ್ಕೆ ಹೋಲಿಸಿದರೆ ಸಂಸ್ಥೆ/ವ್ಯಕ್ತಿಗಳು ತಮ್ಮ ಬಗ್ಗೆ ತಾವೇ ಪ್ರಕಟಿಸುವ ಬರಹಗಳು ಪ್ರಶ್ನಿಸುವ ಅಥವಾ ವಾದ ಮಂಡಿಸುವ ಕೆಲಸ ಮಾಡುವುದಿಲ್ಲ. ಇವುಗಳ ಸಂಸ್ಥೆ/ವ್ಯಕ್ತಿಗಳ ಬಗ್ಗೆ ಮಾಹಿತಿ ನೀಡುತ್ತವೆ. ಬಹುತೇಕ ಸಂದರ್ಭದಲ್ಲಿ ಈ ಮಾಹಿತಿಗಳು ಅವಿಮರ್ಶಿತ ಮತ್ತು ತಮ್ಮ ಒಳ್ಳೆಯ ಗುಣಲಕ್ಷಣಗಳನ್ನು ಮಾತ್ರ ಸಾರ್ವಜನಿಕ ಬಳಕೆಗೆ ಬಿಡುಗಡೆಗೊಳಿಸುತ್ತವೆ. ಸರಕಾರಿ ದಾಖಲೆಗಳು, ಕಂಪೆನಿ ವರದಿಗಳು, ಶಿಕ್ಷಣ ಅಥವಾ

ಆರೋಗ್ಯ ಇತ್ಯಾದಿ ಸಂಸ್ಥೆಗಳ ವಾರ್ಷಿಕ ವರದಿಗಳು, ಡೈರಿಗಳು, ಕಚೇರಿ ಕಡತಗಳು, ವಿಶೇಷ ಸಮಿತಿ ವರದಿಗಳು ಮುಂತಾದವುಗಳನ್ನು ಈ ಸಾಲಿನಲ್ಲಿ ಸೇರಿಸಬಹುದು.[೩] ಇವುಗಳಿಂದ ಮಾಹಿತಿ ಸಂಗ್ರಹಿಸುವಾಗ ಕೆಲವೊಂದು ಪ್ರಶ್ನೆಗಳನ್ನು ಹಾಕಿಕೊಳ್ಳುವ ಅಗತ್ಯವಿದೆ. ಯಾವ ಸಂಗತಿಗಳಿಗೆ ಈ ವರದಿಗಳು ಹೆಚ್ಚಿನ ಆದ್ಯತೆ ನೀಡಿವೆ? ಮತ್ತು ಯಾವೆಲ್ಲ ಸಂಗತಿಗಳಿಗೆ ಮಹತ್ವ ನೀಡಿಲ್ಲ? ವರದಿ ಸಿದ್ಧತೆಗೆ ಬಳಸಿದ ಮಾಹಿತಿ ಮೂಲಗಳೇನು? ವರದಿಯಲ್ಲಿ ಪ್ರಕಟಿಸಿರುವ ವಿಚಾರಗಳ ಕುರಿತು ವಿವಿಧ ಪಾಲುದಾರರು ಯಾವ ನಿಲುವು ಹೊಂದಿದ್ದಾರೆ? ವರದಿಯಲ್ಲಿ ಪ್ರಕಟವಾದ ಅಂಕಿ ಅಂಶ, ಮಾಹಿತಿ ಇತ್ಯಾದಿಗಳು ಯಾರಿಗೆ ಲಭ್ಯವಾಗಿವೆ? ವರದಿಯ ನಿಜವಾದ ಫಲಾನುಭವಿಗಳು ಯಾರು? ಅವರಿಗೆ ವರದಿಯಲ್ಲಿ ಪ್ರಕಟವಾದ ವಿಚಾರಗಳು ತಲುಪುತ್ತದೋ? ತಲುಪಿದರೆ ಅವುಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೋ? ವರದಿಗಳಲ್ಲಿನ ವಿಚಾರಗಳನ್ನು ಒಂದು ನಿರ್ದಿಷ್ಟ ರೂಪದಲ್ಲಿ ಮಂಡಿಸುವುದರಿಂದ ಮತ್ತು ಅರ್ಥೈಸುವುದರಿಂದ ಯಾರಿಗೆ ಹೆಚ್ಚು ಲಾಭವಿದೆ? ಇತ್ಯಾದಿ ಪ್ರಶ್ನೆಗಳನ್ನು ಹಾಕಿಕೊಂಡು ಮಾಹಿತಿ ಸಂಗ್ರಹಿಸುವುದು ಸೂಕ್ತ. ಸಂಶೋಧನ ಬರಹಗಳಿಂದ (ಲೇಖನ, ಪುಸ್ತಕ, ಪ್ರಬಂಧ ಇತ್ಯಾದಿಗಳಿಂದ) ಮಾಹಿತಿ ಸಂಗ್ರಹಿಸುವಾಗಲೂ ಕೆಲವೊಂದು ಪ್ರಶ್ನೆಗಳನ್ನು ಹಾಕಿಕೊಂಡು ಮುಂದುವರಿದರೆ ಮಾಹಿತಿ ಸಂಗ್ರಹ ಅರ್ಥಪೂರ್ಣ. ಯಾರು? ಯಾವ ಸಂದರ್ಭದಲ್ಲಿ ನಿರ್ದಿಷ್ಟ ವಾದ ಮಂಡಿಸಿದ್ದಾರೆ? ಪಠ್ಯ ಸಾರುವ ಉದ್ದೇಶ ಮತ್ತು ಪಠ್ಯದಲ್ಲಿ ಅಂತರ್ಗತಗೊಂಡ ಉದ್ದೇಶಗಳೇನು? ಪಠ್ಯದಲ್ಲಿನ ವಾದಗಳನ್ನು ಹೇಗೆ ಮಂಡಿಸಲಾಗಿದೆ? ಪಠ್ಯ ಕೊಡುವ ಸಾಂದರ್ಭಿಕ ಅರ್ಥಗಳೇನು? ಪಠ್ಯ ಕಟ್ಟಿಕೊಡುವ ಲೋಕದೃಷ್ಟಿಯೇನು? ಯಾವ ದೃಷ್ಟಿಕೋನವನ್ನು ಪಠ್ಯ ಪ್ರತಿನಿಧೀಕರಿಸುತ್ತದೆ? ಮತ್ತು ಆ ದೃಷ್ಟಿಕೋನವನ್ನು ಹೇಗೆ ಪ್ರತಿನಿಧೀಕರಿಸುತ್ತದೆ? ಭಾಷೆಯ ಬಳಕೆ ಹೇಗಿದೆ? ಇತ್ಯಾದಿ ಪ್ರಶ್ನೆಗಳನ್ನು ಹಾಕಿಕೊಂಡು ಸಂಶೋಧನ ಬರಹಗಳಿಂದ ಮಾಹಿತಿ ಸಂಗ್ರಹಿಸಿದರೆ ಗುಣಾತ್ಮಕ ಮಾಹಿತಿ ಸಂಗ್ರಹ ಸಾಧ್ಯ.[೪]

ಈಗಾಗಲೇ ಮಂಡಿತವಾದ ವಾದಗಳನ್ನು ಸಂಗ್ರಹಿಸುವಾಗ ಅನುಸರಿಸಬೇಕಾದ ನಿಯಮಗಳು ಇಂತಿವೆ.[೫] ಒಂದು, ಮಾಹಿತಿ ಸಂಗ್ರಹ ಮತ್ತು ಮಂಡನೆಗೆ ಅನುಸರಿಸುವ ವಿಧಾನ ಕನ್‌ಸಿಸ್ಟೆಂಟ್ ಆಗಿರಬೇಕು. ಅಂದರೆ ಮಾಹಿತಿ ಸಂಗ್ರಹಿಸಲು ಮತ್ತು ಮಂಡಿಸಲು ಅನುಸರಿಸುವ ನಿರ್ದಿಷ್ಟ ಕ್ರಮವನ್ನು ವಾದ ಮಂಡನೆಯ ಆರಂಭದಿಂದ ಅಂತ್ಯದವರೆಗೆ ಅನುಸರಿಸಬೇಕು. ಎರಡು, ಸಾಕ್ಷಿ, ಪುರಾವೆಗಳಿಗೆ ಸಂಬಂಧಿಸಿದ ಅಥವಾ ಈಗಾಗಲೇ ಮಂಡಿತವಾದ ವಾದಗಳ ಮೂಲಗಳಿಗೆ ಸಂಬಂಧಿಸಿದ ವಿವರಗಳನ್ನು ಪುಟದ ಕೊನೆಗೆ ನೀಡಬಹುದು ಅಥವಾ ಅಧ್ಯಾಯದ ಕೊನೆಗೆ ನೀಡಬಹುದು. ಪುಟದ ಕೊನೆಗೆ ನೀಡುವ ಕ್ರಮವನ್ನು ಅಡಿಟಿಪ್ಪಣಿ ಎಂದು ಕರೆದರೆ ಅಧ್ಯಾಯದ ಕೊನೆಗೆ ನೀಡುವ ಕ್ರಮವನ್ನು ಕೊನೆ ಟಿಪ್ಪಣಿ ಎಂದು ಕರೆಯುತ್ತಾರೆ. ಮೂರು, ಈಗಾಗಲೇ ಮಂಡಿತವಾದ ವಾದವನ್ನು ಸಂಗ್ರಹಿಸುವಾಗ ಅನುಸರಿಸುವ ನಿಯಮಗಳನ್ನು ಸ್ಪಷ್ಟಪಡಿಸುವುದು. ನಿಯಮ ಒಂದು,

ಈಗಾಗಲೇ ವಾದ ಮಂಡಿಸಿರುವ ಸಂಶೋಧಕರ ಅಥವಾ ಬರಹಗಾರರ ವಿಚಾರಗಳನ್ನು ಅಥವಾ ಮಾತುಗಳನ್ನು ಬಳಸುವಾಗ ಕಡ್ಡಾಯವಾಗಿ ಅವರ ಹೆಸರನ್ನು ಉಲ್ಲೇಖಿಸಬೇಕು. ನಿಯಮ ಎರಡು, ವಿಷಯವನ್ನು ಅದರ ಮೂಲ ಗ್ರಂಥದಿಂದಲೇ ಸಂಗ್ರಹಿಸಬೇಕು. ಕೆಲವು ಸಂದರ್ಭಗಳಲ್ಲಿ ಈ ನಿಯಮಕ್ಕೆ ತಿದ್ದುಪಡಿ ಸಾಧ್ಯ. ಒಂದು ವೇಳೆ ಮೂಲಗ್ರಂಥ ತುಂಬಾ ಹಳೆಯದ್ದಾಗಿದ್ದು ಅದು ಇಂದು ಲಭ್ಯವಿಲ್ಲದ ಸಂದರ್ಭದಲ್ಲಿ ಮೂಲಗ್ರಂಥದ ವಿಚಾರಗಳನ್ನು ಅವುಗಳು ಉಲ್ಲೇಖಿಸಲ್ಪಟ್ಟ ಗ್ರಂಥಗಳಿಂದ ಪಡೆಯಬಹುದು. ನಿಯಮ ಮೂರು, ಮೂರು ವಾಕ್ಯಗಳಿಗಿಂತ ಕಡಿಮೆ ಪ್ರಮಾಣದಲ್ಲಿ ವಿಷಯ ಸಂಗ್ರಹಿಸುವ ಸಂದರ್ಭದಲ್ಲಿ ಅದನ್ನು ಸಂಶೋಧಕರ ಮಾತಲ್ಲಿ ಅಧ್ಯಾಯದ ಬರಹದ ನಮೂನೆಯಲ್ಲಿ ಹೇಳಬಹುದು. (ಮೂಲ ಗ್ರಂಥಕರ್ತನ ಹೆಸರನ್ನು ಸೂಚಿಸಿದರೆ ಸಾಕು, ಆತನ/ಅವಳ ಮಾತಲ್ಲೇ ಹೇಳುವ ಅಗತ್ಯವಿಲ್ಲ). ಉದಾಹರಣೆಗೆ ಎಂ.ಎನ್. ಶ್ರೀನಿವಾಸ್ ಅವರು ತಮ್ಮ ರಿಮೆಂಬರ್ಡ್ ವಿಲೇಜ್ ಪುಸ್ತಕದಲ್ಲಿ, 'ಸಮಾಜ ಸಂಶೋಧನ ಬರಹಗಳು ಕಾದಂಬರಿ ತರಹ ಇರಬೇಕು ಮತ್ತು ಕಾದಂಬರಿಗಳು ಸಂಶೋಧನ ಬರಹಗಳ ತರಹ ಇರಬೇಕೆಂದು' ಪಶ್ಚಿಮದ ಲೇಖಕರ ಬರಹವನ್ನು ಉಲ್ಲೇಖಿಸುತ್ತಾ ಹೇಳಿದ್ದಾರೆ ಎಂದು ಅಧ್ಯಾಯದ ಬರಹದ ರೂಪದಲ್ಲೇ ನೀಡಬಹುದು. ಆದರೆ ಮೂರು ವಾಕ್ಯಗಳಿಗಿಂತ ಹೆಚ್ಚು ಮಾಹಿತಿ ಯನ್ನು ಬಳಸುವಾಗ ಅವುಗಳನ್ನು ಮೂಲ ಗ್ರಂಥಕರ್ತನ ಹೆಸರನ್ನು ಸೂಚಿಸುವ ಜತೆಗೆ ಆತನ / ಅವಳ ಮಾತಲ್ಲೇ ಹೇಳಬೇಕು ಮತ್ತು ಪ್ರತ್ಯೇಕ ಪ್ಯಾರಾದಲ್ಲಿ ಹೇಳಬೇಕು. ಉದಾಹರಣೆಗೆ ಸಿ.ಎನ್. ಶೆಟ್ಟಿಯವರು ಧರ್ಮ ಮತ್ತು ದೇವರು ಕುರಿತು ಈ ಕೆಳಗಿನಂತೆ ಅಭಿಪ್ರಾಯ ಪಟ್ಟಿದ್ದಾರೆ.

''ಶತಮಾನಗಳ ಉದ್ದಕ್ಕೂ ನಮ್ಮನ್ನು ಅಜ್ಞಾನದಲ್ಲಿ, ಗುಲಾಮಗಿರಿಯಲ್ಲಿ ಸುಳ್ಳಿನ ಸರಮಾಲೆಗಳ ಮೂಲಕ ಇಟ್ಟಿರುವ ನಮ್ಮ ಪೂರ್ವಿಕರ ಸಂಸ್ಕೃತಿಯನ್ನು ಕಾಪಾಡಲು ಈಗಿನ ಎಲ್ಲ ಅನ್ಯಾಯ, ದಬ್ಬಾಳಿಕೆ, ನೋವುಗಳೆಲ್ಲವನ್ನೂ ಮರೆಯುವಂತೆ ಮಾಡುವ ಹುನ್ನಾರ ದಲ್ಲಿ ಪುರೋಹಿತಶಾಹಿಗಳು ನಿರತರಾಗಿದ್ದಾರೆ. ಜನಸಾಮಾನ್ಯರನ್ನು ಬೌದ್ಧಿಕ ಮತ್ತು ನೈತಿಕ ಗುಲಾಮಗಿರಿಗೆ ತಳ್ಳಿ ತಲೆತಲಾಂತರಗಳಿಂದಲೂ ಅವರನ್ನು ಹುಟ್ಟಿನಿಂದ ಶ್ರೇಷ್ಠರೆನಿಸಿಕೊಂಡ ಒಂದು ವರ್ಗ ಶೋಷಣೆ ಮಾಡಿ, ನಾವಿಬ್ಬರೂ ಸರ್ವನಾಶವಾಗಿದ್ದು ದೈವ ನಿಯಮಕವೆನ್ನುತ್ತಾರೆ. ಆಧುನಿಕ ನಾಗರಿಕತೆಯ ಉತ್ತಮ ವಿಚಾರಗಳಾದ ಸ್ವಾತಂತ್ರ್ಯ, ಸಮಾನತೆ, ಸಹೋದರತೆ, ಐಹಿಕ ಪ್ರಗತಿ, ವೈಜ್ಞಾನಿಕ ಬೆಳವಣಿಗೆ, ಆರ್ಥಿಕ ಸುಭದ್ರತೆ, ಸಂಪತ್ತಿನ ನ್ಯಾಯಯುತವಾದ ವಿತರಣೆ ಈ ಧ್ಯೇಯ ಧೋರಣೆಗಳು ತೃಪ್ತಿಕರವಾಗಿ ಅನುಷ್ಠಾನ ಆಗಿಲ್ಲದಿರುವುದು ಈ ದೇಶದ ಪ್ರಮುಖ ದೌರ್ಬಲ್ಯ ಮತ್ತ ದುರಂತ.''(ಸಿ.ಎನ್. ಶೆಟ್ಟಿ, ೨೦೦೫, ಪು.೧೧)

ನಾಲ್ಕು, ತಾತ್ವಿಕ ತೀರ್ಮಾನಗಳ ಬಗ್ಗೆ ಚರ್ಚಿಸುವಾಗ ಯಾವುದೋ ಒಂದು ತಾತ್ವಿಕ ನಿಲುವನ್ನು ತಳೆಯುವ ಹಲವಾರು ಅಧ್ಯಯನಗಳಿರಬಹುದು. ಪರ ವಿರೋಧ ಇರುವ ತಾತ್ವಿಕ ನಿಲುವುಗಳನ್ನು ಸ್ಪಷ್ಟಪಡಿಸುವುದರ ಜತೆಗೆ ಆಯಾಯ ನಿಲುವನ್ನು (ಪರ ಅಥವಾ

ವಿರೋಧ) ಗಟ್ಟಿಗೊಳಿಸುವ ಸಂಶೋಧನೆಗಳನ್ನು ಸ್ಪಷ್ಟಪಡಿಸಬೇಕು. ಆ ಸಂದರ್ಭದಲ್ಲಿ ಸಂಶೋಧಕರು ಮತ್ತು ಅವರ ಪ್ರತಿಪಾದಿಸುವ ತಾತ್ವಿಕ ನಿಲುವುಗಳ ವಿವರಗಳನ್ನು ಕೊಡುವ ಬರಹಗಳ ಪಟ್ಟಿಯನ್ನು ಕೊಡುವುದರ ಜತೆಗೆ ನಿರ್ದಿಷ್ಟ ತಾತ್ವಿಕ ನಿಲುವನ್ನು ವಿರೋಧಿಸುವ ಬರಹಗಳ ವಿವರಗಳನ್ನು ನೀಡಬೇಕು. ಉದಾಹರಣೆಗೆ ಸ್ಥಳೀಯ ಜ್ಞಾನ ಪರಂಪರೆಯನ್ನು ಭಾರತದ ಸಂದರ್ಭದಲ್ಲಿ ಮಂಡಿಸುವ ಪ್ರಮುಖರ ಸಾಲಿನಲ್ಲಿ ಪಾರ್ಥ ಚಟರ್ಜಿ, ಆಶೀಸ್ ನಂದಿ, ಗಾಯತ್ರಿ ಸ್ಪಿವಾಕ್, ದಿಪೇಶ್ ಚಕ್ರವರ್ತಿ ಮುಂತಾದವರನ್ನು ಕಾಣಬಹುದು. ಇವರುಗಳ ವಾದಗಳನ್ನು ಮತ್ತು ಆ ವಾದಗಳನ್ನು ಒಳಗೊಂಡಿರುವ ಇವರ ಬರಹಗಳ ವಿವರಗಳನ್ನು ನೀಡಬೇಕು. ಇದೇ ಸಂದರ್ಭದಲ್ಲಿ ಇವರ ವಾದಗಳನ್ನು ಪ್ರಶ್ನಿಸುವ ಹಲವಾರು ನಿಲುವುಗಳಿವೆ. ಅವುಗಳನ್ನು ಮಂಡಿಸುವವರಲ್ಲಿ ಪ್ರಮುಖರು ದೀಪಾಂಕರ್ ಗುಪ್ತಾ, ಮೀರಾ ನಂದ, ಸುಮಿತ್ ಸರ್ಕಾರ್, ಇರ್ಫಾನ್ ಹಬೀಬ್ ಮುಂತಾದವರು. ಇವರುಗಳ ವಾದಗಳನ್ನು ಒಳಗೊಂಡ ಬರಹಗಳ ವಿವರಗಳನ್ನು ನೀಡ ಬೇಕು. ಐದು, ಮಾಹಿತಿ ಮೂಲಗಳ ವಿವರಗಳನ್ನು ಸ್ಪಷ್ಟವಾಗಿ ನೀಡಬೇಕು. ಮಾಹಿತಿ ಮೂಲವನ್ನು ನೀಡುವ ಹಲವಾರು ಕ್ರಮಗಳಿವೆ. ಈ ಎಲ್ಲ ಕ್ರಮಗಳಲ್ಲೂ ಕಂಡುಬರುವ ಸಾಮಾನ್ಯ ಅಂಶವೆಂದರೆ ಮಾಹಿತಿ ಮೂಲವನ್ನು ತಿಳಿಸಲು ನೀಡಬೇಕಾಗಿರುವ ಒಟ್ಟು ಅಂಶಗಳು. ಸಂಶೋಧಕರು ಅಥವಾ ಈಗಾಗಲೇ ವಾದ ಮಂಡಿಸಿದವರ ಹೆಸರು, ಅವರು ವಾದ ಮಂಡಿಸಿರುವ ಪುಸ್ತಕ ಅಥವಾ ಲೇಖನದ ಹೆಸರು, ಪುಸ್ತಕ ಪ್ರಕಟನೆಯಾದ ಸ್ಥಳ, ಪ್ರಕಟಕರ ವಿಳಾಸ(ಲೇಖನ ಪ್ರಕಟಕರ ವಿವರ ನೀಡುವ ಅಗತ್ಯವಿಲ್ಲ), ಪ್ರಕಟನೆಯಾದ ವರ್ಷ (ಲೇಖನವಾದರೆ ಪ್ರಕಟನೆಯ ವರ್ಷದೊಂದಿಗೆ ಪ್ರಕಟನೆಯಾದ ತಿಂಗಳು. ಸಂಚಿಕೆ ಮತ್ತು ಸಂಪುಟದ ವಿವರಗಳನ್ನು ನೀಡಬೇಕು) ಮತ್ತು ಪುಟ ಸಂಖ್ಯೆ. ಇವಿಷ್ಟು ಮಾಹಿತಿಗಳನ್ನು ಈಗಾಗಲೇ ಸ್ಥಾಪಿತವಾದ ವಾದಗಳ ಮೂಲಗಳನ್ನು ತಿಳಿಸಲು ನೀಡಬೇಕು. ಈ ವಿವರಗಳನ್ನು ಬೇರೆ ಬೇರೆ ರೂಪದಲ್ಲಿ ನೀಡಬಹುದು. ಎಲ್ಲ ಮೂಲಗಳನ್ನು ಲೇಖಕರ ಹೆಸರಿನಿಂದಲೇ ಆರಂಭಿಸಲಾಗುವುದು. ಆದರೆ ನಂತರದ ವಿವರಗಳನ್ನು ಮೂಲಗಳನ್ನು ನೀಡುವ ಬೇರೆ ಬೇರೆ ಕ್ರಮಗಳು ಬೇರೆ ಬೇರೆ ರೂಪದಲ್ಲಿ ನೀಡುತ್ತವೆ. ಕೆಲವೊಂದು ಕ್ರಮಗಳಲ್ಲಿ ಪ್ರಕಟನೆಯ ವರ್ಷವನ್ನು ಕೊನೆಗೆ ನೀಡಿದರೆ ಇನ್ನು ಕೆಲವು ಕ್ರಮಗಳಲ್ಲಿ ಪ್ರಕಟನೆಯ ವರ್ಷವನ್ನು ಲೇಖಕರ ಹೆಸರಾದ ಕೂಡಲೇ ನೀಡಲಾಗುವುದು. ಇದೇ ರೀತಿಯಲ್ಲಿ ಕೆಲವೊಂದು ಕ್ರಮಗಳಲ್ಲಿ ಪ್ರಕಟನೆಯ ಸ್ಥಳವನ್ನು ಕೊಡುವ ಕ್ರಮವಿರುವುದಿಲ್ಲ. ಕೆಲವು ಕ್ರಮಗಳಲ್ಲಿ ಪ್ರತಿಯೊಂದು ಅಂಶವನ್ನು ನೀಡಿದ ನಂತರ ಕಾಮಾ ಹಾಕಿ ಮುಂದಿನ ವಿವರ ನೀಡಿದರೆ ಇನ್ನು ಕೆಲವರು ಫುಲ್‌ಸ್ಟಾಪ್ ಹಾಕಿ ಮುಂದಿನ ವಿವರಗಳನ್ನು ನೀಡುವ ಕ್ರಮ ಅನುಸರಿಸುತ್ತಾರೆ.

ಮೂಲಗಳ ದಾಖಲೆ

ಮಾಹಿತಿ ನೀಡುವಲ್ಲಿ ಅನುಸರಿಸುವ ವಿವಿಧ ಕ್ರಮಗಳನ್ನು ಪರಿಗಣಿಸಿ ಸಂಶೋಧಕರಿಗೆ

ಅನುಕೂಲವಾಗುವ ಯಾವುದಾದರೂ ಒಂದು ನೀತಿಯನ್ನು ಅನುಸರಿಸಬಹುದು. ಈ ಕುರಿತು ಮಾಹಿತಿ ನೀಡುವ ಪುಸ್ತಕಗಳು ಸಾಕಷ್ಟಿವೆ. ಮಾಹಿತಿಯ ಮೂಲವನ್ನು ದಾಖಲಿಸಿಕೊಳ್ಳುವುದು ಈಗಾಗಲೇ ಮಂಡಿತವಾದ ವಾದಗಳ ಮೇಲಿನ ಮಾಹಿತಿ ಸಂಗ್ರಹಿಸುವಾಗ ಅನುಸರಿಸಬೇಕಾದ ಪ್ರಥಮ ಹೆಜ್ಜೆ.[೭] ಮಾಹಿತಿಯ ಮೂಲವನ್ನು ದಾಖಲಿಸುವ ಕ್ರಮವನ್ನು ಮಾಹಿತಿಯ ಮೂಲ ನಿರ್ಧರಿಸುತ್ತದೆ. ಉದಾಹರಣೆಗೆ ಅಚ್ಚಾಗದ ಪ್ರಬಂಧದಿಂದ ಮಾಹಿತಿಯನ್ನು ಪಡೆಯುವಾಗ ಮೂಲವನ್ನು ಅಚ್ಚಾದ ಪ್ರಬಂಧದಿಂದ ದಾಖಲಿಸುವುದಕ್ಕಿಂತ ಭಿನ್ನ. ಅದೇ ರೀತಿಯಲ್ಲಿ ಪತ್ರಿಕೆಗಳಿಂದ ಮತ್ತು ಪುಸ್ತಕಗಳಿಂದ ಮಾಹಿತಿ ಪಡೆಯುವಾಗ ಮೂಲವನ್ನು ಬೇರೆ ಬೇರೆ ರೀತಿಯಲ್ಲಿ ದಾಖಲಿಸಲಾಗುವುದು.

೧. ಪ್ರಕಟಿತ ಪುಸ್ತಕಗಳಿಂದ ಮಾಹಿತಿ ಪಡೆದರೆ ಈ ಕೆಳಗಿನಂತೆ ಮೂಲವನ್ನು ದಾಖಲಿಸುವ ಕ್ರಮ ಇದೆ. ಗ್ರಂಥಕರ್ತನ ಹೆಸರು. ಪುಸ್ತಕದ ಶೀರ್ಷಿಕೆ(ಇಟಾಲಿಕ್‌ನಲ್ಲಿ), ಪ್ರಕಟನೆಯ ಸ್ಥಳ : ಪ್ರಕಟಕರ ವಿಳಾಸ, ಪ್ರಕಟನೆಯ ವರ್ಷ, ಪುಟ ಸಂಖ್ಯೆ. ಸಾರಾ ಜೋಸೆಫ್, *ಪೋಲಿಟಿಕಲ್ ಥಿಯರಿ ಆಂಡ್ ಪವರ್,* ನ್ಯೂಡೆಲ್ಲಿ : ಫೌಂಡೇಶನ್ ಬುಕ್ಸ್, ೨೦೦೪, ಪು. ೨೩-೨೬.

೨. ಸಂಪಾದಿತ ಪುಸ್ತಕದಿಂದ ಮಾಹಿತಿ ಪಡೆಯುವಾಗ ಈ ಕೆಳಗಿನಂತೆ ಮೂಲವನ್ನು ದಾಖಲಿಸಬಹುದು. ಲೇಖಕರ ಹೆಸರು, ''ಲೇಖನದ ಶೀರ್ಷಿಕೆ'', ಸಂಪಾದಕರ ಹೆಸರು, ಪುಸ್ತಕದ ಶೀರ್ಷಿಕೆ (ಇಟಾಲಿಕ್‌ನಲ್ಲಿ), ಪ್ರಟಕನೆಯ ಸ್ಥಳ : ಪ್ರಕಟಕರ ವಿಳಾಸ, ಪ್ರಕಟನೆಯ ವರ್ಷ, ಪುಟ ಸಂಖ್ಯೆ.
ರಾಜಾರಾಮ ಹೆಗಡೆ, ''ಕೆರೆ ನೀರಾವರಿ ವ್ಯವಸ್ಥೆ : ಒಂದು ಚಾರಿತ್ರಿಕ ವಿಶ್ಲೇಷಣೆ'', ಎಂ.ಚಂದ್ರಪೂಜಾರಿ (ಸಂಪಾದಿಸಿದ), *ಸಮುದಾಯ ಮತ್ತು ಸಹಭಾಗಿತ್ವ - ಕೆರೆ ನೀರಾವರಿ ನಿರ್ವಹಣೆಯಲ್ಲಿ ಸಹಭಾಗಿತ್ವ,* ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೨, ಪು. ೨೭-೪೯.

೩. ಯಾವುದೋ ಪುಸ್ತಕದಲ್ಲಿ ಉಲ್ಲೇಖಿಸಿದ ಮಾಹಿತಿಯನ್ನು ಬಳಸುವಾಗ ಮೂಲವನ್ನು ಈ ಕೆಳಗಿನಂತೆ ದಾಖಲಿಸಬಹುದು. ಉಲ್ಲೇಖಿತ ಅಥವಾ ಮೂಲ ಗ್ರಂಥಕರ್ತನ ಹೆಸರು, ಪುಸ್ತಕದ ಹೆಸರು, ಪ್ರಕಟನೆಯ ಸ್ಥಳ : ಪ್ರಕಟಕರ ವಿಳಾಸ, ಪ್ರಕಟನೆಯ ವರ್ಷ, ಪು.ಸಂಖ್ಯೆ ಮತ್ತು ಮಾಹಿತಿ ಪಡೆದ ಪುಸ್ತಕದ ಲೇಖಕನ ಹೆಸರು, ಪುಸ್ತಕದ ಶೀರ್ಷಿಕೆ, ಪ್ರಕಟನೆಯ ಸ್ಥಳ : ಪ್ರಕಟಕರ ವಿಳಾಸ, ಪ್ರಕಟನೆಯ ವರ್ಷ, ಪು.ಸಂಖ್ಯೆ. ಇ.ಪಿ.ಥೋಮ್ಸ್‌ನ್, ದಿ ಪವರ್ಟಿ ಆಫ್ ಥಿಯರಿ ಆಂಡ್ ಅದರ್ ಎಸ್ಸೇಸ್, ಲಂಡನ್ : ಮರ್ಲಿನ್ ಪ್ರೆಸ್, ೧೯೭೮, ಪು.೧೨ ಅಭಿಪ್ರಾಯಗಳನ್ನು ಸಾರಾ ಜೋಸೆಫ್ ಪೋಲಿಟಿಕಲ್ ಥಿಯರಿ ಆಂಡ್ ಪವರ್, ನ್ಯೂಡೆಲ್ಲಿ : ಪೌಂಡೇಶನ್ ಬುಕ್ಸ್, ೨೦೦೪, ಪು. ೨೩-೨೬ ಯಲ್ಲಿದಂತೆ ಬಳಸಲಾಗಿದೆ.

೪. ಒಬ್ಬ ಲೇಖಕನ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಪುಸ್ತಕ ಅಥವಾ ಬರಹಗಳಿಂದ ಮಾಹಿತಿ ಸಂಗ್ರಹಿಸುವಾಗ ಅಥವಾ ಉಲ್ಲೇಖಿಸುವಾಗ ಈ ಕೆಳಗಿನ ವಿಧಾನ ಅನುಸರಿಸಬಹುದು. ಒಮ್ಮೆ ಮಾತ್ರ ಲೇಖಕರ ಹೆಸರನ್ನು ನೀಡಿ ಉಳಿದ ಸಂದರ್ಭದಲ್ಲಿ ಲೇಖಕರ ಹೆಸರಿನ ಜಾಗದಲ್ಲಿ ಗೆರೆ ಎಳೆದು ಪುಸ್ತಕ ಅಥವಾ ಪತ್ರಿಕೆಯ ಇತರ ವಿವರಗಳನ್ನು ನೀಡಿದರೆ ಸಾಕು, ಉದಾಹರಣೆಗೆ

ಅಂಡ್ರೆ ಬಿಟೆ, ''ಇನ್ ಡಿವಿಜುವಲಿಸಂ ಆಂಡ್ ಇಕ್ವಾಲಿಟಿ'', *ಕರೆಂಟ್ ಎಂಥ್ರಾಪಲೋಜಿ*, ವಾಲ್ಯೂಂ ೨೭, ನಂ.೨, ಪು.೧೨೧-೩೪.

------ *ಎಂಟಿನೊಮಿಸ್ ಆಫ್ ಸೊಸೈಟಿ - ಎಸ್ಸೇಸ್ ಆನ್ ಐಡಿಯಲಾಜಿ ಆಂಡ್ ಇನ್ಸ್ಟಿಟ್ಯೂಶನ್ಸ್*, ನ್ಯೂಡೆಲ್ಲಿ : ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೨೦೦೨

೫. ಒಂದು ಪುಸ್ತಕ ಅಥವಾ ಲೇಖನದ ಲೇಖಕರಾಗಿ ಮೂರಕ್ಕಿಂತ ಹೆಚ್ಚಿನ ಲೇಖಕರು ಇದ್ದ ಸಂದರ್ಭದಲ್ಲಿ ಈ ಕೆಳಗಿನ ವಿಧಾನ ಅನುಸರಿಸಬಹುದು. ಎರಡು ಅಥವಾ ಮೂರು ಲೇಖಕರು ಇದ್ದ ಸಂದರ್ಭದಲ್ಲಿ ಎಲ್ಲ ಲೇಖಕರ ಹೆಸರುಗಳನ್ನು ನೀಡಿ ಪುಸ್ತಕ ಅಥವಾ ಲೇಖನದ ಇತರ ಮಾಹಿತಿಗಳನ್ನು ನೀಡಬೇಕು. ಮೂರಕ್ಕಿಂತ ಹೆಚ್ಚು ಲೇಖಕರಿದ್ದ ಸಂದರ್ಭದಲ್ಲಿ ಲೇಖಕರಲ್ಲಿ ಮೊದಲಿನವರ ಹೆಸರನ್ನು ಮಾತ್ರ ನೀಡಿ ಪುಸ್ತಕ ಅಥವಾ ಲೇಖನದ ಇತರ ಮಾಹಿತಿಗಳನ್ನು ನೀಡುವುದು.

ಕಪೂರ್, ರತ್ನ ಆಂಡ್ ಬ್ರಿಂದಾ, *ಸಬ್ ವರ್ಸೀವ್ ಸೈಟ್ಸ್ - ಫೆಮಿನಿಸ್ಟ್ ಎಂಗೇಜ್‌ಮೆಂಟ್ ವಿದ್ ಲಾ ಇನ್ ಇಂಡಿಯಾ*, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೧೯೯೬

ಲೀಲಾ ದುಬೆ ಮತ್ತು ಇತರರು, *ಮಹಿಳೆ ಮತ್ತು ದುಡಿಮೆ*, ಬಾಂಬೆ : ಇಂಡಿಯಾ ಪಬ್ಲಿಷಿಂಗ್ ಹೌಸ್, ೧೯೯೮

೬. ಹಲವಾರು ವಾಲ್ಯೂಮ್‌ಗಳಲ್ಲಿ ಪ್ರಕಟಿತವಾದ ಮೂಲಗಳಿಂದ ಮಾಹಿತಿ ಪಡೆಯುವ ಸಂದರ್ಭದಲ್ಲಿ ಮಾಹಿತಿ ಪಡೆದ ವಾಲ್ಯೂಂನ ಗುರುತಿಸುವ ಜತೆಗೆ ಪ್ರಕಟಿತವಾದ ಒಟ್ಟು ವಾಲ್ಯೂಂಗಳನ್ನು ತಿಳಿಸುವ ಅಗತ್ಯ ಇದೆ. ಅದನ್ನು ಈ ಕೆಳಗಿನಂತೆ ದಾಖಲಿಸಬಹುದು.

ಜೇಮ್ಸ್ ಡಿ. ಫೆಬೀಯನ್, *ಮೈಕೆಲ್ ಫುಕೋ-ಎಸ್ಸೆನ್ಸ್ ಯಲ್ ವರ್ಕ್ಸ್ ಆಫ್ ಮೈಕೆಲ್ ಫುಕೋ - ವಾಲ್ಯೂಂ ೩* (೩ ವಾಲ್ಯೂಮ್ಸ್), ನ್ಯೂಡೆಲ್ಲಿ : ಪೆಂಗ್ವಿನ್ ಬುಕ್ಸ್, ೧೯೯೪

೭. ಲೇಖಕರ ಸ್ಥಾನದಲ್ಲಿ ಸಂಸ್ಥೆ ಅಥವಾ ಸರಕಾರ ಅಥವಾ ಸಮಿತಿಗಳಿದ್ದಾಗ ಈ ಕೆಳಗಿನ ವಿಧಾನ ಅನುಸರಿಸಬೇಕಾಗುತ್ತದೆ. ಸಂಸ್ಥೆ ಅಥವಾ ಸರಕಾರ ಅಥವಾ ಸಮಿತಿಗಳಿಗೆ ಲೇಖಕರ ಸ್ಥಾನ ನೀಡಿ ಉಳಿದ ಮಾಹಿತಿಗಳನ್ನು ಮೇಲೆ ವಿವರಿಸಿದಂತೆ ದಾಖಲಿಸಬೇಕು. ಪುಸ್ತಕ ಅಥವಾ ರಿಪೋರ್ಟ್‌ನ ಹೆಸರನ್ನು ಇಟಾಲಿಕ್ ಮಾಡುವ ಅಗತ್ಯ ಇಲ್ಲ.

ಕರ್ನಾಟಕ ಸರಕಾರ, ರಿಪೋರ್ಟ್ ಆಫ್ ದಿ ವರ್ಕಿಗ್ ಗ್ರೂಪ್ ಆನ್ ಡಿಸೆಂಟ್ರಲೈಸೇಶನ್, ಬೆಂಗಳೂರು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ೨೦೦೦

೮. ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳಿಂದ ಮಾಹಿತಿ ಪಡೆಯುವಾಗ ಈ ಕೆಳಗಿನಂತೆ ಮೂಲವನ್ನು ದಾಖಲಿಸಬಹುದು. ಲೇಖಕರ ಹೆಸರು, ''ಲೇಖನದ ಶೀರ್ಷಿಕೆ'', ಪತ್ರಿಕೆಯ ಹೆಸರು (ಇಟಾಲಿಕ್‌ನಲ್ಲಿ), ಸಂಪುಟ ಸಂಖ್ಯೆ, ಸಂಚಿಕೆ ಸಂಖ್ಯೆ, ಪ್ರಕಟಿತ ತಿಂಗಳು ಮತ್ತು ವರ್ಷ, ಪುಟ ಸಂಖ್ಯೆ.

ಎಸ್. ಇರುದಯಾ ರಾಜನ್, ''ಡಿಸ್ಟ್ರಿಕ್ಟ್ ಲೆವಲ್ ಫರ್ಟಿಲಿಟಿ ಎಸ್ಟಿಮೇಟ್ಸ್ ಫಾರ್ ಹಿಂದೂಸ್ ಅಂಡ್ ಮುಸ್ಲಿಮ್‌ಸ್'', *ಎಕಾನಮಿಕ್ ಅಂಡ್ ಪೋಲಿಟಿಕಲ್ ವೀಕ್ಲಿ*, ಸಂಪುಟ ಸಂಖ್ಯೆ. ೧೬, ಸಂಚಿಕೆ ಸಂಖ್ಯೆ ೫, ಜನವರಿ - ಫೆಬ್ರವರಿ, ೨೦೦೫, ಪು.೪೩೭-೪೪೬

೯. ಪ್ರಕಟವಾಗದ ಪ್ರಬಂಧದಿಂದ ಮಾಹಿತಿ ಪಡೆಯುವಾಗ ಮೂಲವನ್ನು ಈ ಕೆಳಗಿನಂತೆ ದಾಖಲಿಸಿಕೊಳ್ಳಬಹುದು. ಸಂಶೋಧಕರ ಹೆಸರು, ''ಮಹಾ ಪ್ರಬಂಧದ ಶೀರ್ಷಿಕೆ'', ಪ್ರಬಂಧವನ್ನು ಸಲ್ಲಿಸಿದ ವಿಭಾಗ ಮತ್ತು ವಿಶ್ವವಿದ್ಯಾಲಯದ ಹೆಸರು, ಸಲ್ಲಿಸಿದ ವರ್ಷ. ಎಂ.ಚಂದ್ರಪೂಜಾರಿ, ''ಟ್ರೆಂಡ್ಸ್ ಇನ್ ಎಂಟರ್‌ಪ್ರನರ್‌ಶಿಪ್ ಅಂಡ್ ರೀಜನಲ್ ಡೆವಲಪ್ ಮೆಂಟ್ - ಎ ಸ್ಟಡಿ ಆಫ್ ಸ್ಮಾಲ್ ಎಂಟರ್‌ಪ್ರನರ್ಸ್ ಆಫ್ ಸೌತ್ ಕೆನರಾ'', ಅನ್ ಪಬ್ಲಿಷ್ಡ್ ಪಿಹೆಚ್ ಡಿ ಥೀಸಿಸ್ ಸಬ್‌ಮಿಟೆಡ್ ಟು ದ ಡಿಪಾರ್ಟ್‌ಮೆಂಟ್ ಆಫ್ ಬುಸಿನೆಸ್ ಎಡ್ಮಿನಿಸ್ಟ್ರೇಷನ್, ಮಂಗಳೂರು ಯುನಿವರ್ಸಿಟಿ, ೧೯೯೬.

೧೦. ಸರಕಾರಿ ದಾಖಲೆಗಳನ್ನು ಉಲ್ಲೇಖಿಸುವಾಗ ಈ ಕೆಳಗಿನ ನಿಯಮ ಅನುಸರಿಸಬಹುದು. ಕಮಿಟಿ ಅಥವಾ ಕಮಿಶನ್ ಹೆಸರು, ರಿಪೋರ್ಟ್ ಹೆಸರು, ಸ್ಥಳ : ಕಮಿಟಿ ನೇಮಕ ಮಾಡಿದ ಇಲಾಖೆ/ಸರಕರಾದ ಹೆಸರು, ವರ್ಷ.

ಕರ್ನಾಟಕ ಸರಕಾರ, ರಿಪೋರ್ಟ್ ಆಫ್ ದಿ ವರ್ಕಿಗ್ ಗ್ರೂಪ್ ಆನ್ ಡಿಸೆಂಟ್ರಲೈಸೇಶನ್, ಬೆಂಗಳೂರು: ರೂರಲ್ ಡೆವಲಪ್ ಮೆಂಟ್ ಅಂಡ್ ಪಂಚಾಯತ್ ರಾಜ್ ಡಿಪಾರ್ಟ್‌ಮೆಂಟ್, ೨೦೦೨

ಸಂಶೋಧನೆ ವಾದ ಪ್ರತಿಪಾದನೆಯ ಪ್ರಕ್ರಿಯೆಯಾಗಿರುವುದರಿಂದ ಈಗಾಗಲೇ ಮಂಡಿತವಾದ ವಾದಗಳನ್ನು ಪರಿಗಣಿಸುವುದು ಅನಿವಾರ್ಯ. ಈ ದೃಷ್ಟಿಯಿಂದ ಈಗಾಗಲೇ ಆಗಿರುವ ಅಧ್ಯಯನಗಳನ್ನು ನೋಡಿದರೆ ಮಾಹಿತಿಗಳ ಮೂಲಗಳನ್ನು ಸ್ಪಷ್ಟಪಡಿಸದಿರುವ ಕನ್ನಡದ ಸಂಶೋಧನ ಅಭ್ಯಾಸವನ್ನು ಹೊಸ ದೃಷ್ಟಿಯಿಂದ ನೋಡ ಬಹುದು. ಮಾಹಿತಿ ಮೂಲಗಳನ್ನು ಸ್ಪಷ್ಟಪಡಿಸುವ ಮೂಲಕ ಇತರರ ಅಭಿಪ್ರಾಯಗಳು ಪ್ರಬಂಧ ತುಂಬಾ ತುಂಬಿದರೆ ಸಂಶೋಧಕರ ಸ್ವಂತ ಅಭಿಪ್ರಾಯಗಳ ಗತಿಯೇನು ಎನ್ನುವ ಭಯ

ಸಂಶೋಧಕರನ್ನು ಕಾಡುವಂತಿದೆ. ಸಂಶೋಧನ ಪ್ರಕ್ರಿಯೆಯನ್ನು ಸಾಂಪ್ರದಾಯಿಕ ದೃಷ್ಟಿಯಿಂದ ನೋಡುವುದರಿಂದಾಗುವ ಪರಿಣಾಮ ಇದು. ಸತ್ಯದ ಅನ್ವೇಷಣೆ ಅಥವಾ ಹೊಸತನದ ಹುಡುಕಾಟ ಸಾಂಪ್ರದಾಯಿಕ ಸಂಶೋಧನೆಯ ಅಡಿಪಾಯ. ಈಗಾಗಲೇ ಹೇಳಿರುವುದನ್ನು ತನ್ನ ಸಂಶೋಧನೆಯೂ ಹೇಳಿದರೆ ಹೊಸತನ ಏನು ಉಳಿಯುತ್ತದೆ ಎನ್ನುವ ಭಯ ಇದು. ವಾಸ್ತವದಲ್ಲಿ ಸಂಶೋಧನೆಯಲ್ಲಿ ಹೊಸತೇನು ಇರುವುದಿಲ್ಲ. ಈಗಾಗಲೇ ಮಂಡಿಸಿರುವ ವಾದಗಳನ್ನು ವಿಮರ್ಶಿಸಿ ಪ್ರತಿವಾದಗಳನ್ನು ಸ್ಥಾಪಿಸುವುದು ಸಂಶೋಧನೆಯ ಕೆಲಸ. ಹಾಗೆ ನೋಡಿದರೆ ಸಂಶೋಧನೆಯ ಸಾಂಪ್ರದಾಯಿಕ ದೃಷ್ಟಿಯಿಂದಲೂ ಸಂಶೋಧಕ ಹೊಸತೇನನ್ನು ಹೇಳುವುದಿಲ್ಲ. ಸಂಶೋಧಕ ಅಥವಾ ಲೇಖಕನ ಬಳಸಿದ ಭಾಷೆ, ವಿಚಾರ, ಆಲೋಚನೆ ಇತ್ಯಾದಿಗಳು ಖಾಸಗಿ ಇಲ್ಲ. ಶತಮಾನಗಳಿಂದ ಸಮುದಾಯಗಳು ಬಳಸಿ ಬೆಳೆಸಿದ ಭಾಷೆ, ವಿಚಾರ ಇತ್ಯಾದಿಗಳನ್ನು ಬಳಸಿಕೊಂಡು ಒಂದು ಸಂಶೋಧನೆ ಅಥವಾ ಲೇಖನ ರೂಪುಗೊಳ್ಳುತ್ತದೆ. ಇದೊಂದು ಬಗೆಯಲ್ಲಿ ಜನಪದ ಅಥವಾ ಮೌಖಿಕ ಮೂಲದ ಮಾಹಿತಿಗಳಂತೆ. ಅಲ್ಲೂ ಜನಪದ ಪಾಡ್ದನ ಅಥವಾ ಬುಡಕಟ್ಟು ಕಾವ್ಯಗಳು ಅಂದಿನ ಅರ್ಥ, ಸಮಾಜ ಸಂಸ್ಕೃತಿ ಇತ್ಯಾದಿಗಳ ಸಂಕಥನವನ್ನು ಹಾಡುವವರು ಮೌಖಿಕವಾಗಿ ಮುಂದುವರಿಸುತ್ತಿದ್ದಾರೆ. ಇಲ್ಲೂ ಇಂದಿನ ಸಮಾಜ, ಅರ್ಥ, ಅಧಿಕಾರ, ಸಂಸ್ಕೃತಿ ಇತ್ಯಾದಿಗಳ ಸಂಕಥನವನ್ನು ಸಂಶೋಧಕರು ಬರಹ ಮೂಲಕ ಮುಂದುವರಿಸುತ್ತಿದ್ದಾರೆ. ಎಲ್ಲ ಬರಹಗಳಲ್ಲಿ ವಾದ ಪ್ರತಿವಾದಗಳಿದ್ದಂತೆ ಎಲ್ಲ ಮೌಖಿಕ ಕಥನಗಳಲ್ಲೂ ವಾದ ಪ್ರತಿವಾದಗಳಿವೆ. ಆದುದರಿಂದ ಈಗಾಗಲೇ ಆಗಿರುವ ಅಧ್ಯಯನಗಳನ್ನು ಪ್ರಾಥಮಿಕ ಅಥವಾ ಆನುಷಂಗಿಕ ಮಾಹಿತಿ ರೂಪದಲ್ಲಿ ನೋಡುವುದು ಸರಿಯಲ್ಲ. ಈ ದೃಷ್ಟಿಯಿಂದ ನೋಡುವುದೆಂದರೆ (ಪ್ರಾಥಮಿಕ/ಆನುಷಂಗಿಕ) ಮಾಹಿತಿಯನ್ನು ಉಲ್ಲೇಖಿಸುವ ಅಥವಾ ಉಲ್ಲೇಖಿಸದಿರುವ ದೃಷ್ಟಿಯಿಂದ ನೋಡುವುದೆಂದು ಅರ್ಥ. ಅಂದರೆ ಪ್ರಾಥಮಿಕ ಮಾಹಿತಿಯಾದರೆ ಉಲ್ಲೇಖಿಸುವ ಅಗತ್ಯವಿಲ್ಲ ಆನುಷಂಗಿಕ ಮಾಹಿತಿಯಾದರೆ ಉಲ್ಲೇಖಿಸಬೇಕೆನ್ನುವ ದೃಷ್ಟಿಕೋನ. ವಾದ ಪ್ರತಿಪಾದನೆಯ ದೃಷ್ಟಿಯಿಂದ ಸಂಶೋಧನೆಯನ್ನು ನೋಡಿದರೆ ಈಗಾಗಲೇ ಮಂಡಿತವಾದ ವಾದ ಮತ್ತು ಸಂಶೋಧನೆ ಪ್ರತಿಪಾದಿಸಲು ಹೊರಟಿರುವ ವಾದಗಳ ನಡುವಿನ ಸಂಬಂಧಗಳೇನು ಎನ್ನುವುದು ಇಲ್ಲಿ ಮುಖ್ಯ. ಒಂದು ವೇಳೆ ಈಗಾಗಲೇ ಮಂಡಿತವಾದ ವಾದ ಸಂಶೋಧನೆ ಮಂಡಿಸಲು ಉದ್ದೇಶಿಸಿರುವ ವಾದದೊಂದಿಗೆ ವಿರೋಧಿ ಅಥವಾ ಹೊಂದಾಣಿಕೆಯ ಸಂಬಂಧ ಹೊಂದಿದ್ದರೆ ಅಂತಹ ವಾದಗಳನ್ನು ಉಲ್ಲೇಖಿಸಲೇಬೇಕಾಗುತ್ತದೆ. ಸಂಶೋಧನೆ ಮಂಡಿಸಲು ಹೊರಟಿರುವ ವಾದದೊಂದಿಗೆ ಈಗಾಗಲೇ ಮಂಡಿತ ವಾದ ಯಾವುದೇ ರೀತಿಯಲ್ಲಿ ಸಂವಾದ ನಡೆಸಿದಿದ್ದರೆ ಅಂತಹ ವಾದಗಳನ್ನು ಉಲ್ಲೇಖಿಸುವ ಅಗತ್ಯವಿಲ್ಲದಿರಬಹುದು. ಆದರೆ ಈ ಸಾಧ್ಯತೆಗಳು ತುಂಬ ಕಡಿಮೆ. ಯಾಕೆಂದರೆ ಸಂಶೋಧನೆ ಈಗಾಗಲೇ ಮಂಡಿತವಾದ ವಾದ/ ಸತ್ಯಗಳ ವಿಮರ್ಶೆ ಮತ್ತು ಪ್ರತಿವಾದ/ ಸತ್ಯಗಳ ಪ್ರತಿಪಾದನೆಯಾಗಿದೆ.

ಭಾಗ ೨

ಸಂಶೋಧಕರು ಮಂಡಿಸುವ ವಾದವನ್ನು ಸಮರ್ಥಿಸಲು ಈಗಾಗಲೇ ಮಂಡಿತವಾದ ವಾದಗಳನ್ನು ಬಳಸಿಕೊಂಡಂತೆ ಹೊಸ ಸಾಕ್ಷಿ, ಪುರಾವೆ, ದಾಖಲೆಗಳನ್ನು ಕೂಡ ಬಳಸಿಕೊಳ್ಳಬೇಕಾಗುತ್ತದೆ. ಹೊಸ ಸಾಕ್ಷಿ, ಪುರಾವೆ, ದಾಖಲೆಗಳನ್ನು ಸಂಶೋಧನೆಗೆ ಒಳಪಡುವ ಸಂಗತಿ/ವ್ಯಕ್ತಿ/ಕುಟುಂಬ/ಸಂಸ್ಥೆ/ಸಮುದಾಯ ಮುಂತಾದವುಗಳಿಂದ ನೇರವಾಗಿ ಪಡೆಯುವುದರಿಂದ ಇವುಗಳನ್ನು ಪ್ರಾಥಮಿಕ ಮಾಹಿತಿಯೆಂದು ಪರಿಗಣಿಸುವ ರೂಢಿಯೂ ಇದೆ. ದಿನನಿತ್ಯ ಪ್ರಪಂಚವನ್ನು ಗ್ರಹಿಸುವ ನಮ್ಮ ವಿಧಾನಗಳು ಸಂಶೋಧನೆಗೆ ಬೇಕಾದ ಮಾಹಿತಿ ಸಂಗ್ರಹಿಸಲು ಸಾಕಾಗುವುದಿಲ್ಲ ಎನ್ನುವ ಗ್ರಹಿತ ಸಂಶೋಧನೆಯ ಸಾಂಪ್ರದಾಯಿಕ ವ್ಯಾಖ್ಯಾನದಲ್ಲಿ ಆಳವಾಗಿ ಬೇರೂರಿದೆ. ಆದುದರಿಂದಲೇ ಸಂಶೋಧನೆಗೆ ಬೇಕಾಗಿರುವ ಪ್ರಾಥಮಿಕ ಮಾಹಿತಿ ಸಂಗ್ರಹಕ್ಕೆ ಹಲವಾರು ವಿಧಾನಗಳು ರೂಪುಗೊಂಡಿವೆ. ಪ್ರತೀ ವಿಧಾನಕ್ಕೂ ಅದರದ್ದೇ ಆದ ಅನುಕೂಲ ಮತ್ತು ಅನಾನುಕೂಲತೆಗಳಿವೆ. ಜತೆಗೆ ಸಂಶೋಧನಾ ವಿಷಯಗಳು ಕೂಡ ಮಾಹಿತಿ ಸಂಗ್ರಹ ವಿಧಾನದ ಆಯ್ಕೆಯನ್ನು ಪ್ರಭಾವಿಸುತ್ತವೆ ಎನ್ನುವ ಗ್ರಹಿತವಿದೆ. ಉದಾಹರಣೆಗೆ ಇಡೀ ರಾಜ್ಯವ್ಯಾಪ್ತಿ ಅಥವಾ ಹಲವಾರು ರಾಜ್ಯಗಳ ರೈತರ ಸಮಸ್ಯೆಗಳನ್ನು ಅಧ್ಯಯನ ಮಾಡುವ ಉದ್ದೇಶ ಇಟ್ಟುಕೊಂಡಿರುವ ಸಂಶೋಧನೆಯಲ್ಲಿ ಬಳಸಬೇಕಾದ ಮಾಹಿತಿ ಸಂಗ್ರಹ ವಿಧಾನ ಯಾವುದೋ ಒಂದು ಹಳ್ಳಿಗೆ ಸೀಮಿತಗೊಂಡಿರುವ ಸಂಶೋಧನೆಯ ಮಾಹಿತಿ ಸಂಗ್ರಹ ವಿಧಾನಕ್ಕಿಂತ ಭಿನ್ನ ಇರಲೇಬೇಕೆನ್ನುವ ಗ್ರಹಿತವಿದೆ. ಇದೇ ರೀತಿಯಲ್ಲಿ ಗುಣಾತ್ಮಕ ಸಂಶೋಧನೆಯ ಮಾಹಿತಿ ಸಂಗ್ರಹ ವಿಧಾನಕ್ಕೂ ಪರಿಮಣಾತ್ಮಕ ಸಂಶೋಧನೆಯ ಮಾಹಿತಿ ಸಂಗ್ರಹ ವಿಧಾನಕ್ಕೂ ವ್ಯತ್ಯಾಸವಿದೆಯೆಂದು ನಂಬಲಾಗಿದೆ. ಸಂಶೋಧನೆಯ ಸಾಂಪ್ರದಾಯಿಕ ತಿಳುವಳಿಕೆ ಕೊಡಮಾಡುವ ಮಾಹಿತಿ ಸಂಗ್ರಹ ವಿಧಾನದ ಮೇಲಿನ ಚರ್ಚೆ ಮಾಹಿತಿ ಸಂಗ್ರಹ ವಿಧಾನಗಳಿಗೂ ಬೇರೆ ಬೇರೆ ವಿಧದ ಸಂಶೋಧನಗಳಿಗೂ ನೇರ ಸಂಬಂಧ ಇದೆಯೆನ್ನುವ ಚಿತ್ರಣವನ್ನು ನೀಡುತ್ತದೆ. ಆದರೆ ವಾಸ್ತವದಲ್ಲಿ ಮಾಹಿತಿ ಸಂಗ್ರಹ ವಿಧಾನಗಳಿಗೂ ವಿವಿಧ ಬಗೆಯ ಸಂಶೋಧನೆಗಳಿಗೂ ನೇರ ಸಂಬಂಧ ಇಲ್ಲ.[೮] ಯಾವುದೋ ಒಂದು ಮಾಹಿತಿ ಸಂಗ್ರಹ ವಿಧಾನ ಎಲ್ಲ ಬಗೆಯ ಸಂಶೋಧನೆಯಲ್ಲೂ ಉಪಯೋಗಕ್ಕೆ ಬರಬಹುದು. ಅದೇ ರೀತಿಯಲ್ಲಿ ದಿನನಿತ್ಯದ ಪ್ರಪಂಚವನ್ನು ಗ್ರಹಿಸುವ ನಮ್ಮ ವಿಧಾನಗಳು ಸಂಶೋಧನೆಗೆ ಬೇಕಾಗಿರುವ ಮಾಹಿತಿ ಸಂಗ್ರಹಕ್ಕೆ ಉಪಯೋಗಕ್ಕೆ ಬರುತ್ತವೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಅವಲೋಕನ ವಿಧಾನ. ಅವಲೋಕನ ವಿಧಾನವನ್ನು ಮಾಹಿತಿ ಸಂಗ್ರಹಿಸುವ ಇತರ ವಿಧಾನಗಳನ್ನು ವಿವರಿಸುವ ಸಂದರ್ಭದಲ್ಲಿ ವಿವರಿಸಲಾಗುವುದು. ನಿರ್ದಿಷ್ಟ ಸಂಶೋಧನೆಯಲ್ಲಿ ಮಾಹಿತಿ ಸಂಗ್ರಹಕ್ಕಾಗಿ ಬಳಸಬೇಕಾದ ವಿಧಾನವನ್ನು ತೀರ್ಮಾನಿಸುವ ವಿಧಾನವನ್ನು ಮೊದಲು ಅರ್ಥಮಾಡಿಕೊಳ್ಳಬೇಕಾಗಿದೆ.

ಮಾಹಿತಿ ನಿರ್ಣಯ

ಸಂಶೋಧನೆ ಪ್ರತಿಪಾದಿಸಲಿರುವ ವಾದವನ್ನು ಅಧ್ಯಯನ ಉದ್ದೇಶಗಳು ಬಿಡಿಬಿಡಿಯಾಗಿ ಪ್ರತಿನಿಧೀಕರಿಸುತ್ತವೆ ಅಥವಾ ಸಂಶೋಧಕರು ಮಂಡಿಸಲಿರುವ ವಾದದ ಬಿಡಿಬಿಡಿ ರೂಪವೇ ಅಧ್ಯಯನ ಉದ್ದೇಶಗಳು. ಈ ದೃಷ್ಟಿಯಿಂದ ಅಧ್ಯಯನದ ಉದ್ದೇಶಗಳನ್ನು ನೋಡಿದರೆ ಸಂಶೋಧನೆ ಬಯಸುವ ಮಾಹಿತಿಗಳನ್ನು ಅಧ್ಯಯನದ ಉದ್ದೇಶಗಳು ನಿರ್ದೇಶಿಸುತ್ತವೆ. ಅಧ್ಯಯನದ ಪ್ರತಿಯೊಂದು ಉದ್ದೇಶ ಕೂಡ ನಿರ್ದಿಷ್ಟ ಮಾಹಿತಿಯನ್ನು ಬೇಡುತ್ತದೆ. ಉದ್ದೇಶಗಳು ಬೇಡುವ ಮಾಹಿತಿಯನ್ನು ಅರ್ಥಮಾಡಿಕೊಳ್ಳುವ ವಿಧಾನವನ್ನು ಮೊದಲಿಗೆ ಪರಿಶೀಲಿಸುವ. ಮೊದಲ ಹಂತದಲ್ಲಿ ಅಧ್ಯಯನದ ಪ್ರತಿಯೊಂದು ಉದ್ದೇಶ ವನ್ನು ಕೆಲವು ಭಾಗಗಳಾಗಿ ತುಂಡರಿಸಬೇಕು. ಎರಡನೇ ಹಂತದಲ್ಲಿ ತುಂಡರಿಸಿದ ಉದ್ದೇಶದ ಭಾಗವನ್ನು ವ್ಯಾಖ್ಯಾನಿಸಬೇಕು. ಮೂರನೇ ಹಂತದಲ್ಲಿ ವ್ಯಾಖ್ಯಾನಗಳನ್ನು ಕಾರ್ಯರೂಪಕ್ಕೆ ತರಬಹುದಾದ ವ್ಯಾಖ್ಯಾನಗಳಾಗಿ ಪರಿವರ್ತಿಸಬೇಕು. ಅಂದರೆ ಕೆಲವೊಂದು ನಿರ್ದಿಷ್ಟ ಸೂಚ್ಯಂಕಗಳಾಗಿ ಪರಿವರ್ತಿಸಬೇಕು. ನಾಲ್ಕನೇ ಹಂತದಲ್ಲಿ ಈ ಸೂಚ್ಯಂಕಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಯಾವ ಮೂಲದಿಂದ ಪಡೆಯಬಹುದೆಂದು ತೀರ್ಮಾನಿಸಬೇಕು. ಕೊನೆಯೇ ಹಂತದಲ್ಲಿ ಸೂಚ್ಯಂಕಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಯಾವ ವಿಧಾನದಿಂದ ಸಂಗ್ರಹಿಸಬಹುದೆಂದು ತೀರ್ಮಾನಿಸಬೇಕು. ಮಾಹಿತಿ ಸಂಗ್ರಹದ ಈ ವಿಧಾನವನ್ನು ತೀರ್ಮಾನಿಸುವ ಎಲ್ಲ ಹಂತಗಳನ್ನು ಒಂದು ಸಂಶೋಧನ ಅಧ್ಯಯನದ ಉದಾಹರಣೆಯೊಂದಿಗೆ ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ. 'ಆಧುನಿಕ ಸಂಸ್ಥೆಗಳು ಹಾಗೂ ಆಧುನೀಕರಣ ಪ್ರಕ್ರಿಯೆ-ಉನ್ನತ ಶಿಕ್ಷಣ ಸಂಸ್ಥೆಯೊಂದರ ಅಧ್ಯಯನ' ಎನ್ನುವ ಅಧ್ಯಯನದ ಉದ್ಹಾಹರಣೆಯ ಮೂಲಕ ಮೇಲಿನ ವಿವಿಧ ಹಂತಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ. ಆಧುನೀಕರಣ ಪ್ರಕ್ರಿಯೆಯ ಭಾಗವಾಗಿ ಸರಕು ಹಾಗೂ ಸೇವೆಗಳ ಉತ್ಪಾದನೆ ಹಾಗೂ ವಿಲೇವಾರಿಯಲ್ಲಿ ಆಧುನಿಕ ತಂತ್ರಜ್ಞಾನಗಳನ್ನು ಬಳಸುವುದರೊಂದಿಗೆ ಸಾಮಾಜಿಕ ಹಾಗೂ ರಾಜಕೀಯ ವಲಯದಲ್ಲಿ ಆಧುನಿಕ ಸಂಸ್ಥೆಗಳನ್ನು ಹುಟ್ಟು ಹಾಕಲಾಗಿದೆ. ಆಧುನಿಕ ಶಿಕ್ಷಣ ಸಂಸ್ಥೆಗಳು, ಆಧುನಿಕ ಆರೋಗ್ಯ ಸಂಸ್ಥೆಗಳು, ಆಧುನಿಕ ನ್ಯಾಯ ಸಂಸ್ಥೆಗಳು (ಕೋರ್ಟ್, ಪೊಲೀಸ್ ಇತ್ಯಾದಿ), ಆಧುನಿಕ ಆಡಳಿತ ಸಂಸ್ಥೆಗಳನ್ನು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಆಧುನಿಕ ಮೌಲ್ಯಗಳಿಗನುಗುಣವಾಗಿ ಕಟ್ಟಿಕೊಳ್ಳಲು ಸೃಷ್ಟಿಸಲಾಗಿದೆ. ಸಾಂಪ್ರದಾಯಿಕ ಸಮಾಜದ ಹಲವಾರು ಗುಣಗಳು-ಮತ್ತೊಬ್ಬರ ಇರುವನ್ನು ಅಲ್ಲಗೆಳೆಯುವ, ಹುಟ್ಟು ಪ್ರಾಮುಖ್ಯವಾಗುವ, ಖಾಸಗಿ ಹಾಗೂ ಸಾರ್ವಜನಿಕ ವಿಂಗಡನೆ ಬಲವಾಗಿರುವ, ಮಾತು ಮತ್ತು ಕೃತಿ ನಡುವೆ ಸಂಬಂಧ ಇಲ್ಲದಿರುವ ಇತ್ಯಾದಿ-ಗುಣಗಳು ಆಧುನಿಕ ಸಮಾಜದ ಸಮಾನತೆ, ಸ್ವಾತಂತ್ರ್ಯ, ಸ್ವಾಯತ್ತತೆ, ಪಾರದರ್ಶಕತೆ, ಪ್ರಜಾಪ್ರಭುತ್ವ ಮೌಲ್ಯಗಳು ಇತ್ಯಾದಿ ಗುಣಗಳಿಗೆ ವಿರುದ್ಧ ವಾಗಿವೆ. ಆಧುನಿಕ ಸಮಾಜದ ಗುಣಗಳನ್ನು ಬಲಪಡಿಸುವ ದೊಡ್ಡ ಧ್ಯೇಯದೊಂದಿಗೆ ಆಧುನಿಕ ಸಂಸ್ಥೆಗಳನ್ನು ಹುಟ್ಟುಹಾಕಲಾಗಿದೆ.

ಆಧುನಿಕ ಸಂಸ್ಥೆಗಳು ತಮ್ಮ ಮೂಲಉದ್ದೇಶವನ್ನು ಆಧುನಿಕ ಮೌಲ್ಯಗಳ ಆಚರಣೆಯೊಂದಿಗೆ ಈಡೇರಿಸುವುದು ಕಡ್ಡಾಯವಾಗಿದೆ. ಅಂದರೆ ಆರೋಗ್ಯ ಸಂಸ್ಥೆಯೊಂದರ ಉದ್ದೇಶ ಕೇವಲ ಜನರ ಆರೋಗ್ಯ ಸುಧಾರಣೆ ಮಾತ್ರವಲ್ಲ; ಆರೋಗ್ಯ ಸುಧಾರಣೆಯ ಕೆಲಸವನ್ನು ಆಧುನಿಕ ಮೌಲ್ಯಗಳಿಗನುಗುಣವಾಗಿ ಈಡೇರಿಸುವುದು ಕೂಡ ಆಗಿದೆ. ಇದೇ ರೀತಿಯಲ್ಲಿ ಶಿಕ್ಷಣ ಸಂಸ್ಥೆಯೊಂದರ ಕೆಲಸ ಯುವ ಜನಾಂಗಕ್ಕೆ ಹೊಸ ಕಸುಬುಗಳ ತರಬೇತು ನೀಡುವುದು ಮಾತ್ರವಲ್ಲ ಹೊಸ ಸಮಾಜದ ಮೌಲ್ಯಗಳನ್ನು ಕೂಡ ಯುವ ಜನಾಂಗಕ್ಕೆ ದಾಟಿಸಬೇಕಾಗಿದೆ. ಸಂಸ್ಥೆಯೊಂದು ತನ್ನ ಎಲ್ಲ ಹಂತಗಳ ಚಟುವಟಿಕೆಗಳನ್ನು-ಉದ್ಯೋಗಿಗಳ ನೇಮಕಾತಿ, ತರಬೇತಿ, ಸಂಬಳ, ಕೆಲಸಕಾರ್ಯಗಳ ವಿಂಗಡನೆ, ಸಂಸ್ಥೆಯೊಳಗಿನ ಏಣಿಶ್ರೇಣಿ, ಸಂಸ್ಥೆಯ ಚಟುವಟಿಕೆಗಳನ್ನು ನಿರ್ಣಯಿಸುವ ಪ್ರಕ್ರಿಯೆ ಮುಂತಾದವುಗಳನ್ನು-ಆಧುನಿಕ ಮೌಲ್ಯಗಳಿಗನುಗುಣವಾಗಿ ನಡೆಸಬೇಕಾಗಿದೆ. ಸಂಸ್ಥೆಯೊಂದು ತನ್ನ ಉದ್ದೇಶವನ್ನು ಆಧುನಿಕ ಮೌಲ್ಯಗಳಿಗನುಗುಣವಾಗಿ ಈಡೇರಿಸಿದರೆ ಆಧುನಿಕ ಸಮಾಜ ನಿರ್ಮಾಣವಾಗುತ್ತದೆ ಎನ್ನುವ ಗೃಹಿತ ಇಲ್ಲಿದೆ. ಈ ಗೃಹಿತವನ್ನು ಯಥಾ ರೀತಿಯಲ್ಲಿ ಒಪ್ಪಿಕೊಳ್ಳುತ್ತ ಆಧುನಿಕ ಸಂಸ್ಥೆಯೊಂದು ತನ್ನ ಕೆಲಸಕಾರ್ಯಗಳನ್ನು ಸಂಘಟಿಸುವಲ್ಲಿ ಅನುಸರಿಸುವ ಮೌಲ್ಯಗಳನ್ನು ಈ ಅಧ್ಯಯನದಲ್ಲಿ ಪರೀಕ್ಷಿಸಲು ಪ್ರಯತ್ನಿಸಲಾಗಿದೆ. ಅಧ್ಯಯನದ ನಿರ್ದಿಷ್ಟ ಉದ್ದೇಶಗಳು ಇಂತಿವೆ. ೧. ಸಂಸ್ಥೆಯ ಮಾನವ ಸಂಪನ್ಮೂಲವನ್ನು ರೂಪಿಸಿಕೊಳ್ಳಲು ಅನುಸರಿಸುವ ವಿಧಾನಗಳನ್ನು ಅಧ್ಯಯನ ಮಾಡುವುದು. ೨. ಸಂಸ್ಥೆಯ ಆಂತರಿಕ ನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸುವವರ ಆಯ್ಕೆಗೆ ಅನುಸರಿಸುವ ವಿಧಾನವನ್ನು ಅಧ್ಯಯನ ಮಾಡುವುದು. ೩. ಸಂಸ್ಥೆಯೊಳಗೆ ಕಾರ್ಯನಿರ್ವಹಿಸುವ ವಿವಿಧ ವಿಭಾಗಗಳ ವ್ಯವಹಾರಗಳ ಕುರಿತು ನಿರ್ಧರಿಸಲು ಸಂಸ್ಥೆ ಬಳಸುವ ವಿಧಾನವನ್ನು ಅಧ್ಯಯನ ಮಾಡುವುದು.

ಈ ಅಧ್ಯಯನಕ್ಕೆ ಬೇಕಾಗಿರುವ ಮಾಹಿತಿಯನ್ನು ಅಧ್ಯಯನ ಉದ್ದೇಶಗಳು ತೀರ್ಮಾನಿಸುತ್ತವೆ. ಅಧ್ಯಯನದ ಉದ್ದೇಶಗಳು ಕೇಳುವ ಮಾಹಿತಿಯನ್ನು ಅರ್ಥಮಾಡಿ ಕೊಳ್ಳಬೇಕಾದರೆ ಮೊದಲಿಗೆ ಪ್ರತಿಯೊಂದು ಉದ್ದೇಶವನ್ನು ಹಲವು ಪರಿಭಾಷೆಗಳ ರೂಪದಲ್ಲಿ ತುಂಡರಿಸಿಕೊಳ್ಳಬೇಕು. ಅಧ್ಯಯನದ ಮೊದಲಿನ ಉದ್ದೇಶ 'ಮಾನವ ಸಂಪನ್ಮೂಲ' ಎನ್ನುವ ಒಂದು ಪರಿಭಾಷೆಯನ್ನು ಒಳಗೊಂಡಿದೆ. 'ಆಂತರಿಕ ನಿರ್ವಹಣೆ' ಮತ್ತು 'ಆಯ್ಕೆ ವಿಧಾನಗಳು' ಎರಡನೇ ಉದ್ದೇಶದಿಂದ ದೊರೆಯುವ ಪರಿಭಾಷೆಗಳು. ಎರಡನೇ ಹಂತದಲ್ಲಿ ಈ ಪರಿಭಾಷೆಗಳನ್ನು ವ್ಯಾಖ್ಯಾನಿಸಬೇಕು. ಮಾನವ ಸಂಪನ್ಮೂಲ ಅಂದರೇನು? ನಿರ್ದಿಷ್ಟ ಉದ್ದೇಶ ಸಾಧನೆಗಾಗಿ ಸಂಸ್ಥೆಯನ್ನು ಹುಟ್ಟು ಹಾಕಲಾಗಿದೆ. ಸಂಸ್ಥೆಯ ಈ ಉದ್ದೇಶಗಳನ್ನು ಹಲವಾರು ಕೆಲಸಕಾರ್ಯಗಳ ರೂಪದಲ್ಲಿ ಅಥವಾ ಜವಾಬ್ದಾರಿಗಳ ರೂಪದಲ್ಲಿ ವಿಂಗಡಿಸಲಾಗುವುದು. ಈ ಜವಾಬ್ದಾರಿಗಳನ್ನು ಶ್ರೇಣೀಕೃತ ಹುದ್ದೆಗಳಾಗಿ ಪರಿವರ್ತಿಸಿ ಸಂಸ್ಥೆಯ ಒಟ್ಟಾರೆ ಜವಾಬ್ದಾರಿ ಹಾಗೂ ಅಧಿಕಾರದ ನಕ್ಷೆಯನ್ನು ಸಿದ್ಧಪಡಿಸಲಾಗುವುದು. ಸಂಸ್ಥೆಯ

ಈ ಹುದ್ದೆಗಳನ್ನು ಅಥವಾ ಜವಾಬ್ದಾರಿ ಹಾಗೂ ಅಧಿಕಾರಗಳನ್ನು ನಿರ್ವಹಿಸಲು ನೇಮಿಸುವ ವ್ಯಕ್ತಿಗಳನ್ನು ಸಂಸ್ಥೆಯ ಮಾನವ ಸಂಪನ್ಮೂಲವೆಂದು ವ್ಯಾಖ್ಯಾನಿಸಬಹುದು. ಈ ವ್ಯಾಖ್ಯಾನವನ್ನು ಕಾರ್ಯರೂಪಕ್ಕೆ ತರಬಹುದಾದ ವ್ಯಾಖ್ಯಾನಗಳಾಗಿ ಅಥವಾ ಕಾರ್ಯ ರೂಪದಲ್ಲಿರುವ ಸಂಸ್ಥೆಯೊಂದರ ಮಾನವ ಸಂಪನ್ಮೂಲವನ್ನು ಗುರುತಿಸಲು ಅನುಕೂಲವಾಗುವ ರೀತಿಯಲ್ಲಿ ವ್ಯಾಖ್ಯಾನಿಸಬೇಕು. ಎಲ್ಲ ಸಂಸ್ಥೆಗಳಲ್ಲಿ ಎರಡು ಬಗೆಯ ಮಾನವ ಸಂಪನ್ಮೂಲ ಗಳನ್ನು ಬಳಸುವ ಕ್ರಮ ಇದೆ. ಸಂಸ್ಥೆಯ ಮುಖ್ಯ ಉದ್ದೇಶವನ್ನು ಈಡೇರಿಸುವ ನೇರ ಜವಾಬ್ದಾರಿ ಇರುವ ಮಾನವ ಸಂಪನ್ಮೂಲ ಮತ್ತು ನೇರ ಜವಾಬ್ದಾರಿ ಹೊತ್ತವರಿಗೆ ಸಹಕರಿಸುವ ಮಾನವ ಸಂಪನ್ಮೂಲ. ಮೊದಲಿವರನ್ನು ಮುಖ್ಯ (ಇಂಗ್ಲೀಷಲ್ಲಿ ಲೈನ್) ಮಾನವ ಸಂಪನ್ಮೂಲವೆಂದರೆ ಎರಡನೆಯವರನ್ನು ಸಹಕರಿಸುವ (ಸ್ಟಾಫ್) ಮಾನವ ಸಂಪನ್ಮೂಲವೆನ್ನುತ್ತಾರೆ. ಉನ್ನತ ಶಿಕ್ಷಣ ಸಂಸ್ಥೆಯಾದರೆ ಕುಲಪತಿಗಳು, ಪ್ರಾಧ್ಯಾಪಕರುಗಳು, ಪ್ರವಾಚಕರುಗಳು ಹಾಗೂ ಉಪನ್ಯಾಸಕರುಗಳು ಮುಖ್ಯ ಮಾನವ ಸಂಪನ್ಮೂಲ. ಕುಲಸಚಿವರು, ಉಪಕುಲಸಚಿವರು, ಗುಮಾಸ್ತರು, ಅಟೆಂಡರ್ ಮುಂತಾದವರು ಸಹಕರಿಸುವ ಮಾನವ ಸಂಪನ್ಮೂಲ.

ಈ ಎರಡು ಬಗೆಯ ಮಾನವ ಸಂಪನ್ಮೂಲಗಳ ನೇಮಕಾತಿ, ತರಬೇತಿ, ಸಂಬಳ, ಮುಂಬಡ್ತಿ ಇತ್ಯಾದಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಯಾವ ಮೂಲದಿಂದ ಸಂಗ್ರಹಿಸ ಬಹುದೆನ್ನುವ ತೀರ್ಮಾನ ನಾಲ್ಕನೇ ಹಂತದಲ್ಲಿ ಆಗಬೇಕಾಗಿದೆ. ಹಲವಾರು ಮೂಲಗಳಿಂದ ಮಾನವ ಸಂಪನ್ಮೂಲಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಬಹುದು. ಸಂಸ್ಥೆಯ ಆಡಳಿತ ವಿಭಾಗದ ದಾಖಲೆಗಳಿಂದ, ಸಂಸ್ಥೆಯ ಆಡಳಿತ ವಿಭಾಗದ ಅಧಿಕಾರಿಗಳಿಂದ, ಸಂಸ್ಥೆಯ ಆಡಳಿತೇತರ ಮೂಲಗಳಿಂದ ಹಾಗೂ ಸಂಸ್ಥೆಯ ಹೊರಗಿನವರಿಂದ. ಈ ಎಲ್ಲ ಮೂಲಗಳಿಂದ ಒಂದೇ ವಿಷಯದ ಬಗ್ಗೆ ಮಾಹಿತಿ ಸಂಗ್ರಹಿಸಿದರು ಅವುಗಳು ಗುಣಾತ್ಮಕ ವಾಗಿ ಒಂದೇ ರೀತಿ ಇರುತ್ತವೆ ಎನ್ನಲಾಗುವುದಿಲ್ಲ. ಸಂಸ್ಥೆಯನ್ನು ನೀತಿನಿಯಮನು ಸಾರ ನಡೆಸುವ ಜವಾಬ್ದಾರಿಯನ್ನು ಆಡಳಿತ ವಿಭಾಗ ಹೊತ್ತಿರುವುದರಿಂದ ಆ ಮೂಲದಿಂದ ದೊರಕುವ ಮಾಹಿತಿ ಅವಿಮರ್ಶಿತಾಗಿರಬಹುದು. ನೀತಿ ನಿಯಮನುಸಾರ ಮಾನವ ಸಂಪನ್ಮೂಲವನ್ನು ರೂಪಿಸುವ ಕೆಲಸ ನಡೆದಿದೆ ಎಂದು ತೋರಿಸಿಕೊಳ್ಳುವುದು ಆಡಳಿತ ವಿಭಾಗಕ್ಕೆ ಅನಿವಾರ್ಯ. ಆದುದರಿಂದ ನೇಮಕಾತಿ, ಮುಂಬಡ್ತಿ ಇತ್ಯಾದಿಗಳಲ್ಲಿ ನಡೆಯುವ ಅಕ್ರಮಗಳನ್ನು ಆಡಳಿತ ವಿಭಾಗ ಮುಕ್ತವಾಗಿ ಚರ್ಚಿಸಲು ಇಷ್ಟಪಡದಿರಬಹುದು. ಇಂತಹ ಸಂದರ್ಭದಲ್ಲಿ ಆಡಳಿತೇತರ ಅಥವಾ ಸಂಸ್ಥೆಯ ಹೊರಗಿನ ಮೂಲಗಳು ವಿಮರ್ಶಿತ ಮಾಹಿತಿಗೆ ಉತ್ತಮ ಮೂಲಗಳಾಗಬಹುದು. ಮಾಹಿತಿ ಮೂಲ ನಿರ್ಧಾರವಾದ ನಂತರ ಮಾಹಿತಿ ಸಂಗ್ರಹ ವಿಧಾನ ಕುರಿತು ತೀರ್ಮಾನಿಸಬೇಕಾಗಿದೆ. ಅಧ್ಯಯನ ಬಯಸುವ ಮಾಹಿತಿಯ ಗುಣಲಕ್ಷಣಗಳು ಮಾಹಿತಿ ಸಂಗ್ರಹ ವಿಧಾನವನ್ನು ಪ್ರಭಾವಿಸುತ್ತವೆ. ಇದೇ ಉದಾಹರಣೆಯಲ್ಲಿ ವಿಮರ್ಶಿತ ಹಾಗೂ ಅವಿಮರ್ಶಿತ ಎನ್ನುವ ಎರಡು ಬಗೆಯ ಮಾಹಿತಿ

ಗಳು ವಿಭಿನ್ನ ಮೂಲಗಳಿಂದ ದೊರಕುವ ಸಾಧ್ಯತೆಯನ್ನು ಚರ್ಚಿಸಿದ್ದೇವೆ. ವಿಭಿನ್ನ ಮೂಲಗಳಿಂದ ಒಂದೇ ವಿಧಾನದಿಂದ ಅಥವಾ ವಿಭಿನ್ನ ವಿಧಾನಗಳಿಂದ ಮಾಹಿತಿ ಸಂಗ್ರಹಿಸಬಹುದು. ದಾಖಲೆಗಳನ್ನು ಪರಿಶೀಲಿಸಿ ಮಾನವ ಸಂಪನ್ಮೂಲದ ಬಗ್ಗೆ ಮಾಹಿತಿ ಸಂಗ್ರಹಿಸಬಹುದು. ಆಡಳಿತ ಅಧಿಕಾರಿಗಳನ್ನು ಸಂದರ್ಶನ ಮಾಡಿ ಮಾಹಿತಿ ಸಂಗ್ರಹಿಸ ಬಹುದು. ಆಡಳಿತೇತರ ಉದ್ಯೋಗಿಗಳನ್ನು ಸಂದರ್ಶನ ಮಾಡಿ ಮಾಹಿತಿ ಸಂಗ್ರಹಿಸಬಹುದು. ಮಾನವ ಸಂಪನ್ಮೂಲದ ಬಗ್ಗೆ ಮಾಹಿತಿ ಸಂಗ್ರಹಿಸಲು ಸಂದರ್ಶನ ಹೆಚ್ಚು ಉಪಯುಕ್ತ ವಿಧಾನವಾಗಿ ಹೊರಹೊಮ್ಮಿದೆ.

ಎರಡನೇ ಉದ್ದೇಶದಲ್ಲಿ ಆಂತರಿಕ ನಿರ್ವಹಣೆಯನ್ನು ಒಂದು ಪರಿಭಾಷೆಯಾಗಿ ಗುರುತಿಸಲಾಗಿದೆ. ಸಂಸ್ಥೆಯೊಳಗಿನ ವಿವಿಧ ಹುದ್ದೆಗಳ ನಡುವಿನ ಜವಾಬ್ದಾರಿ ಮತ್ತು ಅಧಿಕಾರ ಸಂಬಂಧಗಳ ನಿರ್ವಹಣೆಯನ್ನು ಆಂತರಿಕ ನಿರ್ವಹಣೆಯೆಂದು ವ್ಯಾಖ್ಯಾನಿಸಬಹುದು. ಪ್ರತಿ ಸಂಸ್ಥೆಯ ಆಂತರಿಕ ಹಾಗೂ ಬಾಹ್ಯ ಸಂಬಂಧಗಳ ನಿರ್ವಹಣೆಗಳನ್ನು ನಿರ್ದೇಶಿಸುವ ಪ್ರತ್ಯೇಕ ನೀತಿನಿಯಮಗಳಿರುತ್ತವೆ. ಕಂಪೆನಿಗಳಲ್ಲಿ ಇವುಗಳನ್ನು ಮೆಮೋರಾಂಡಂ ಆಫ್ ಎಸೋಶಿಯನ್ ಮತ್ತು ಆರ್ಟಿಕಲ್ಸ್ ಆಫ್ ಎಸೋಶಿಯನ್ ಎಂದು ಕರೆಯುತ್ತಾರೆ. ಕನ್ನಡದಲ್ಲಿ ಇದನ್ನು ಅಧಿನಿಯಮ ಮತ್ತ ಪರಿನಿಯಮ ಎಂದು ಕರೆಯುತ್ತಾರೆ. ಈ ನಿಯಮನುಸಾರ ಸಂಸ್ಥೆ ತನ್ನ ಬಾಹ್ಯ ಮತ್ತು ಆಂತರಿಕ ವ್ಯವಹಾರಗಳನ್ನು ನಿರ್ವಹಿಸಬೇಕು. ಆಂತರಿಕ ನಿರ್ವಹಣೆಯ ವಿವಿಧ ಜವಾಬ್ದಾರಿಗಳನ್ನು ಹೊರಲು ಈಗಾಗಲೇ ನೇಮಕಗೊಂಡವರಲ್ಲಿ ಕೆಲವರನ್ನು ಆಯ್ಕೆ ಮಾಡಬಹುದು. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಡೀನ್‌ಗಳು, ವಿಭಾಗದ ಮುಖ್ಯಸ್ಥರು, ಪೀಠಗಳ ಸಂಚಾಲಕರು, ಕೇಂದ್ರಗಳ ನಿರ್ದೇಶಕರು ಮುಂತಾದವರನ್ನು ಆಂತರಿಕ ನಿರ್ವಹಣೆಗೆ ನೇಮಕಗೊಂಡವರ ಸಾಲಿನಲ್ಲಿ ಗುರುತಿಸಬಹುದು. ಇವರುಗಳು ನೇಮಕ ಮಾಡುವಾಗ ಅನುಸರಿಸಬೇಕಾದ ನಿಯಮಗಳನ್ನು ಪರಿನಿಯಮ ಸೂಚಿಸುತ್ತದೆ. ಆಂತರಿಕ ನಿರ್ವಹಣೆಗೆ ಜವಾಬ್ದಾರಾದವರು, ಅವರ ಆಯ್ಕೆ, ಅವರ ಅಧಿಕಾರ, ಅವರ ಕೆಲಸ ಕಾರ್ಯಗಳು ಇತ್ಯಾದಿಗಳನ್ನು ಆಂತರಿಕ ನಿರ್ವಹಣೆಯ ಕಾರ್ಯರೂಪದ ವ್ಯಾಖ್ಯಾನ ಹೇಳುತ್ತದೆ.

ಆಂತರಿಕ ನಿರ್ವಹಣೆಗೆ ಸಂಬಂಧಿಸಿದ ಮಾಹಿತಿಗಳನ್ನು ಹಲವು ಮೂಲಗಳಿಂದ ಪಡೆಯಬಹುದು. ಸಂಸ್ಥೆಯ ದಾಖಲೆಗಳಿಂದ, ಆಡಳಿತ ವಿಭಾಗದಿಂದ, ಆಂತರಿಕ ನಿರ್ವಹಣೆಗೆ ಆಯ್ಕೆಯಾದವರಿಂದ, ಆಂತರಿಕ ನಿರ್ವಹಣಾ ಹುದ್ದೆಗಳಿಗೆ ಅಪೇಕ್ಷಿಗಳು ಆದರೆ ಆಯ್ಕೆಯಾಗದವರಿಂದ ಮತ್ತು ಇತರ ಉದ್ಯೋಗಿಗಳಿಂದ. ಸಂಸ್ಥೆಯ ದಾಖಲೆಗಳು ಮತ್ತು ಆಡಳಿತ ವಿಭಾಗದಿಂದ ಹೆಚ್ಚು ಕಡಿಮೆ ಒಂದೇ ಗುಣಮಟ್ಟದ ಮಾಹಿತಿ ಸಿಗಬಹುದು. ಈ ಎರಡು ಮೂಲಗಳಿಂದ ಪರಿಶೀಲನೆ ಹಾಗೂ ಸಂದರ್ಶನ ವಿಧಾನಗಳಿಂದ ಮಾಹಿತಿ ಪಡೆಯಬಹುದು. ಈ ಮೂಲಗಳಿಂದ ದೊರಕುವ ಮಾಹಿತಿಗಳ ಪರಿಷ್ಕರಣೆ ಸಂದರ್ಭದಲ್ಲಿ ಇವುಗಳು ಏನು ಹೇಳುತ್ತವೆ ಎನ್ನುವುದಕ್ಕಿಂತ ಏನು ಹೇಳುವುದಿಲ್ಲ, ಯಾವುದಕ್ಕೆ ಹೆಚ್ಚು ಮಹತ್ವ ಕೊಡುತ್ತವೆ ಎನ್ನುವುದಕ್ಕಿಂತ ಯಾವುದಕ್ಕೆ ಹೆಚ್ಚು ಒತ್ತು ಕೊಡುವುದಿಲ್ಲ, ಏನು

ಮಾಹಿತಿ ಕೊಡಲಾಗಿದೆ ಎನ್ನುವುದಕ್ಕಿಂತ ಹೇಗೆ ಮಾಹಿತಿ ಕೊಡಲಾಗಿದೆ ಎನ್ನುವುದರ ಮೇಲೆ ಹೆಚ್ಚು ಒತ್ತು ಕೊಟ್ಟರೆ ದಾಖಲೆಗಳು ಹೇಳುವುದಕ್ಕಿಂತ ಭಿನ್ನ ಲೋಕ ದರ್ಶನವಾಗಬಹುದು. ಆಂತರಿಕ ನಿರ್ವಹಣಾ ಹುದ್ದೆಗಳ ಅಪೇಕ್ಷಿಗಳು, ಆದರೆ ಆಯ್ಕೆಯಾಗದವರ ಸಂದರ್ಶನ ಆಯ್ಕೆ, ಕೆಲಸಕಾರ್ಯ ಇತ್ಯಾದಿಗಳ ಮತ್ತೊಂದು ಮಗ್ಗುಲನ್ನು ಪರಿಚಯಿಸಬಹುದು. ಆಯ್ಕೆಯಾಗದ ಕಾರಣ ಇವರುಗಳು ಇಡೀ ಪ್ರಕ್ರಿಯೆಯ ಬಗ್ಗೆ ಹೆಚ್ಚು ವಿಮರ್ಶಿತ ಅಥವಾ ಟೀಕಾ ರೂಪದಲ್ಲಿ ಮಾಹಿತಿ ನೀಡಬಹುದು. ಯಾವುದೋ ಒಂದು ಮೂಲದಿಂದ ಯಾವುದೋ ಒಂದು ವಿಧಾನ ಮೂಲಕ ಮಾಹಿತಿ ಸಂಗ್ರಹಿಸುವುದರಿಂದ ಹಲವು ಮೂಲಗಳಿಂದ ಹಲವು ವಿಧಾನಗಳ ಮೂಲಕ ಮಾಹಿತಿ ಸಂಗ್ರಹಿಸುವುದು ಹೆಚ್ಚು ಉತ್ತಮ. ಆಂತರಿಕ ನಿರ್ವಹಣೆಯ ಇಡೀ ಪ್ರಕ್ರಿಯೆಯನ್ನು ಸಂಸ್ಥೆಯೊಳಗಿದ್ದುಕೊಂಡು ಅವಲೋಕ ವಿಧಾನದಿಂದಲೂ ಸಂಗ್ರಹಿಸಬಹುದು. ಹೀಗೆ ಅಧ್ಯಯನ ಬಯಸುವ ಮಾಹಿತಿಯನ್ನು ಅಧ್ಯಯನದ ಉದ್ದೇಶಗಳು ಸ್ಪಷ್ಟಪಡಿಸುತ್ತವೆ. ಅಧ್ಯಯನದ ಉದ್ದೇಶಗಳು ಬಯಸುವ ಮಾಹಿತಿಯ ಚಿತ್ರಣ ಸಿಗಬೇಕಾದರೆ ಮೇಲೆ ಸೂಚಿಸಿದ ಐದು ಹಂತಗಳನ್ನು ಸುಸೂತ್ರವಾಗಿ ಕಾರ್ಯರೂಪಕ್ಕೆ ತರಬೇಕು. ಅಧ್ಯಾಯದ ಮುಂದಿನ ಭಾಗದಲ್ಲಿ ಮಾಹಿತಿ ಸಂಗ್ರಹಕ್ಕೆ ಸಾಮಾನ್ಯವಾಗಿ ಬಳಸುವ ಕೆಲವೊಂದು ವಿಧಾನಗಳನ್ನು ಪರಿಚಯಿಸಲಾಗುವುದು. ಅವಲೋಕ ವಿಧಾನ, ಗುಂಪು ಚರ್ಚೆ, ಸಂದರ್ಶನ ಮತ್ತು ಪ್ರಶ್ನಾವಳಿ ಈ ನಾಲ್ಕು ವಿಧಾನಗಳು ಹೆಚ್ಚು ಬಳಕೆಯಲ್ಲಿವೆ. ಇವುಗಳನ್ನು ಮುಂದಿನ ಪುಟಗಳಲ್ಲಿ ವಿಸ್ತಾರವಾಗಿ ಚರ್ಚಿಸಲಾಗಿದೆ.

ಅವಲೋಕನ

ಅವಲೋಕನ ಮಾನವನ ಒಂದು ಸಹಜ ಕ್ರಿಯೆ. ಪ್ರತಿಯೊಬ್ಬರು ತಮ್ಮ ದಿನನಿತ್ಯ ಬದುಕಲ್ಲಿ ಹಲವಾರು ವಿಚಾರಗಳನ್ನು ಅವಲೋಕಿಸುತ್ತಿರುತ್ತಾರೆ. ತಮ್ಮ ಮಕ್ಕಳ ನಡವಳಿಕೆ ಇರಬಹುದು ಅಥವಾ ಸಂಬಂಧಿಕರ ವರ್ತನೆ ಇರಬಹುದು ಅಥವಾ ತೋಟದಲ್ಲಿ ಬೆಳೆಯುವ ಗಿಡಗಳ ಬೆಳವಣಿಗೆ ಇರಬಹುದು. ಹೀಗೆ ಒಂದಲ್ಲ ಒಂದು ವಿಚಾರವನ್ನು ಅವಲೋಕಿಸುವುದು ಮಾನವನ ಸಹಜ ಕ್ರಿಯೆ. ಮೇಲಿನ ಅವಲೋಕನೆಗಳಿಂದ ಅವಲೋಕನಕ್ಕೆ ಒಳಗಾದ ವಿಷಯಗಳ ಬಗ್ಗೆ (ಮಕ್ಕಳ ನಡವಳಿಕೆ, ಸಂಬಂಧಿಕರ ವರ್ತನೆ, ತೆಂಗಿನ ಮರದ ಬೆಳವಣಿಗೆ) ಜ್ಞಾನ ಸಂಪಾದನೆಯಾಗುತ್ತದೆ. ಆ ಜ್ಞಾನ ಅವಲೋಕನಕ್ಕೆ ಒಳಗಾದ ವಿಷಯಗಳ ಕುರಿತ ನಮ್ಮ ಸಂಬಂಧವನ್ನು ಪ್ರಭಾವಿಸಬಹುದು. ಶಾಲೆಯಿಂದ ದಿನಾ ತಡವಾಗಿ ಬರುವ ಮಗನ ನಡವಳಿಕೆಯನ್ನು ಅವಲೋಕಿಸಿ ಮಗನೊಂದಿಗೆ ಕಟ್ಟುನಿಟ್ಟಿನಿಂದ ವ್ಯವಹರಿಸಲು ಆರಂಭಿಸಬಹುದು. ಅವಲೋಕನದಿಂದ ತೆಂಗಿನ ಸಸಿ ದಿನದಿಂದ ದಿನ ಸೊರಗಲು ಕಾರಣವೇನೆಂದು ತಿಳಿಯಬಹುದು ಮತ್ತು ಅದರ ಪರಿಹಾರಕ್ಕೆ ಪ್ರಯತ್ನಿಸಬಹುದು. ಹೀಗೆ ಅವಲೋಕನ ಎಂದ ಕೂಡಲೇ ಅದು ಕೇವಲ ಸಂಶೋಧನೆಯಲ್ಲಿ ಬಳಕೆಯಾಗುವ ವಿಧಾನವೆಂದು ತೀರ್ಮಾನಿಸುವುದು ಸರಿಯಲ್ಲ. ಅವಲೋಕನಕ್ಕೆ ಸಂಬಂಧಿಸಿದಂತೆ ಮತ್ತೊಂದು ಕಲ್ಪನೆ ಕೂಡ ತುಂಬಾ ಪ್ರಚಾರದಲ್ಲಿದೆ. ಅದೇನೆಂದರೆ

ಅವಲೋಕನಾ ವಿಧಾನ ಮಾನವಶಾಸ್ತ್ರದ ಕೊಡುಗೆ ಆದುದರಿಂದ ಅದರ ಬಳಕೆ ಬುಡಕಟ್ಟು ಅಥವಾ ಮುಖ್ಯವಾಹಿನಿಯಿಂದ ದೂರ ಇರುವ ಸಣ್ಣ ಸಣ್ಣ ಸಮುದಾಯಗಳ ಅಧ್ಯಯನಕ್ಕೆ ಮಾತ್ರ ಸೀಮಿತವಾಗಿದೆ. ಅವಲೋಕನವನ್ನು ಹೆಚ್ಚು ಪ್ರಚುರಪಡಿಸಿದವರು ಮತ್ತು ಸತತವಾಗಿ ಮತ್ತು ವಿಸ್ತಾರವಾಗಿ ಬಳಸುವವರು ಮಾನವಶಾಸ್ತ್ರಜ್ಞರು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಇದು ಇಲ್ಲಿ ಮಾತ್ರ ಬಳಕೆ ಆಗುತ್ತಿದೆ ಅಥವಾ ಈ ವಿಧಾನವನ್ನು ಬೆಳೆಸಿದುದರಲ್ಲಿ ಮಾನವಶಾಸ್ತ್ರಜ್ಞರ ಪಾತ್ರ ಮಾತ್ರ ಇದೆ ಎಂದು ತಿಳಿಯುವುದು ಸರಿಯಲ್ಲ. ಮಾನವಶಾಸ್ತ್ರಜ್ಞರಷ್ಟೇ ಪ್ರಮಾಣದಲ್ಲಿ ಅಥವಾ ಅವರಿಗಿಂತ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಅವಲೋಕನಾ ವಿಧಾನವನ್ನು ಬೆಳೆಸಿದವರೆಂದರೆ ವಿವಿಧ ಕ್ಷೇತ್ರಗಳ(ಕೈಗಾರಿಕೆ, ಶಿಕ್ಷಣ, ಆರೋಗ್ಯ ಇತ್ಯಾದಿ ಕ್ಷೇತ್ರಗಳ) ಮನಶಾಸ್ತ್ರಜ್ಞರು.

ಕೈಗಾರಿಕೆಗಳ ಬೆಳವಣಿಗೆಯೊಂದಿಗೆ ಉತ್ಪಾದನಾ ವೆಚ್ಚದ ಮೇಲೆ ಹಿಡಿತ ಸಾಧಿಸಲು ಶ್ರಮಿಕರ ಶ್ರಮದ ಮೇಲೆ ಹಿಡಿತ ಸಾಧಿಸುವುದು ಅನಿವಾರ್ಯವಾಯಿತು. ಶ್ರಮಿಕರ ಶ್ರಮದ ಮೇಲೆ ಹಿಡಿತ ಸಾಧಿಸಲು ಮೊದಲಿಗೆ ಅವರ ದೇಹದ ಮೇಲೆ ಹಿಡಿತ ಸಾಧಿಸಬೇಕೆಂದಾಯಿತು. ನಂತರದ ದಿನಗಳಲ್ಲಿ ಶ್ರಮಿಕರ ಮನಸ್ಸಿನ ಮೇಲೆ ಹಿಡಿತ ಸಾಧಿಸುವುದು ಶ್ರಮಿಕರ ಉತ್ಪಾದನೆ ಹೆಚ್ಚಿಸಲು ಸುಲಭ ಅಥವಾ ಕಡಿಮೆ ವೆಚ್ಚದ ದಾರಿ ಎಂದಾಯಿತು. ಈ ಎಲ್ಲ ತಿಳುವಳಿಕೆ ರೂಪುಗೊಳ್ಳುವಲ್ಲಿ ಅವಲೋಕನಾ ವಿಧಾನದಲ್ಲಿ ನಡೆಸಿದ ಅಧ್ಯಯನಗಳ ಪಾಲಿದೆ. ಹಾಥೋರ್ನ್ ಪ್ರಯೋಗ ಅವಲೋಕನಾ ವಿಧಾನ ಕುರಿತ ಕೈಗಾರಿಕಾ ಮನಶಾಸ್ತ್ರದ ತುಂಬಾ ಪ್ರಚಾರದಲ್ಲಿರುವ ಒಂದು ಉದಾಹರಣೆ. 'ಬೆಳಕು ಮತ್ತು ಶ್ರಮಿಕರ ಕಾರ್ಯಕ್ಷಮತೆ ನಡುವೆ ಇರುವ ಸಂಬಂಧವನ್ನು ಪರೀಕ್ಷಿಸಲು ಈ ಪ್ರಯೋಗ ನಡೆದಿದೆ. ಕೆಲಸಗಾರರ ಒಂದು ಗುಂಪನ್ನು ಈ ಪ್ರಯೋಗಕ್ಕಾಗಿ ಆಯ್ಕೆ ಮಾಡಲಾಯಿತು. ಅವರಿಗೆ ಅವಲೋಕನಾ ವಿಧಾನದಲ್ಲಿ ಬೆಳಕು ಮತ್ತು ಕೆಲಸಗಾರರ ಕಾರ್ಯಕ್ಷಮತೆಯನ್ನು ಅಧ್ಯಯನ ಮಾಡುವ ಅಧ್ಯಯನಕಾರರ ಉದ್ದೇಶವನ್ನು ತಿಳಿಸಲಾಯಿತು. ಅದರಂತೆ ಆರಂಭದಲ್ಲಿ ಸಾಮಾನ್ಯ ಪ್ರಮಾಣದ ಬೆಳಕಿನಲ್ಲಿ ಅವರನ್ನು ಕೆಲಸ ಮಾಡಲು ಸೂಚಿಸಲಾಯಿತು. ಕಾಲಕ್ರಮೇಣ ಬೆಳಕಿನ ಪ್ರಮಾಣವನ್ನು ಹೆಚ್ಚಿಸಲಾಯಿತು. ಬೆಳಕಿನ ಪ್ರಮಾಣದಲ್ಲಿ ಆದ ಬದಲಾವಣೆಗೆ ಅನುಗುಣವಾಗಿ ಅವರ ಉತ್ಪಾದನಾ ಪ್ರಮಾಣದಲ್ಲಿ ಬದಲಾವಣೆ ಆಗಲಿಲ್ಲ. ನಂತರ ಬೆಳಕಿನ ಪ್ರಮಾಣವನ್ನು ಹಂತ ಹಂತವಾಗಿ ಕಡಿಮೆ ಮಾಡಲಾಯಿತು. ಕಡಿಮೆ ಮಾಡುತ್ತಾ ಬೆಳದಿಂಗಳ ಬೆಳಕಿನಷ್ಟಕ್ಕೆ ತಂದು ನಿಲ್ಲಿಸಲಾಯಿತು. ಆಶ್ಚರ್ಯವೆಂದರೆ ಬೆಳಕಿನ ಪ್ರಮಾಣ ಕಡಿಮೆ ಆಗುತ್ತಿದ್ದಂತೆ ಶ್ರಮಿಕರ ಉತ್ಪಾದನಾ ಪ್ರಮಾಣ ಕಡಿಮೆ ಆಗುವ ಬದಲು ಹೆಚ್ಚುತ್ತಾ ಹೋಯಿತು. ಅಂದರೆ ಬೆಳಕಿನ ಪ್ರಮಾಣಕ್ಕೂ ಕೆಲಸಗಾರರ ಕಾರ್ಯಕ್ಷಮತೆಗೂ ಸಂಬಂಧ ಇಲ್ಲ ಎಂದಾಯಿತು. ಇದು ಅಧ್ಯಯನಕಾರರ ಮೂಲ ಗೃಹಿತವನ್ನೇ ಅಡಿಮೇಲು ಮಾಡಿತು. ಆದರೆ ಬೆಳಕು ಕಡಿಮೆ ಆದಾಗಲೂ ಹೆಚ್ಚಿದ ಉತ್ಪಾದನೆಯನ್ನು ಹೇಗೆ ವಿವರಿಸುವುದು? ಅಧ್ಯಯನಕಾರರ ಪ್ರಕಾರ ಕೆಲಸಗಾರರನ್ನು ಅಧ್ಯಯನಕ್ಕೆ ಒಳಪಡಿಸಿರುವ ಅಂಶವೇ

ಆ ಗುಂಪಿನ ಉತ್ಪಾದನೆ ಹೆಚ್ಚಲು ಕಾರಣ. ತಮ್ಮನ್ನು ಅವಲೋಕಿಸುತ್ತಿದ್ದಾರೆ ಎನ್ನುವ ಅಂಶ ಕೆಲಸಗಾರರಲ್ಲಿ ತಾವು ಪ್ರಾಮುಖ್ಯರು ಅಥವಾ ತಾವು ಗುರುತಿಸಲ್ಪಟ್ಟವರು ಎನ್ನುವ ಭಾವನೆಯನ್ನು ಮೂಡಿಸಿತ್ತು. ಈ ಭಾವನೆ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸಿದೆ ಎನ್ನುವ ತೀರ್ಮಾನಕ್ಕೆ ಬರಲಾಯಿತು. ಅವಲೋಕನಾ ವಿಧಾನದಿಂದ ಪಡೆದ ಈ ತೀರ್ಮಾನ ನಂತರ ಕೆಲಸಗಾರರ ಕಾರ್ಯಕ್ಷಮತೆ ಮತ್ತು ಅವರಿಗೆ ನೀಡಬೇಕಾದ ಸವಲತ್ತುಗಳ ಥಿಯರಿಗಳನ್ನು ಸಾಕಷ್ಟು ಪ್ರಭಾವಿಸಿದೆ.

ಎರಡು ರೀತಿಯ ಅವಲೋಕನ ಇದೆ. ಒಂದು, ಸರಳ ಅವಲೋಕನ. ಈ ವಿಧಾನದಲ್ಲಿ ಅವಲೋಕಿಸುವವರು ಮತ್ತು ಅವಲೋಕನಕ್ಕೆ ಒಳಗಾಗುವವರ ಮೇಲೆ ಯಾವುದೇ ನಿರ್ಬಂಧ ಇಲ್ಲದ ಅವಲೋಕನ. ಎರಡು, ಶಿಸ್ತುಬದ್ಧ ಅವಲೋಕನ. ಈ ವಿಧಾನದಲ್ಲಿ ಅವಲೋಕಿಸುವವರು ಮತ್ತು ಅವಲೋಕನಕ್ಕೆ ಒಳಗಾಗುವವರು ಕೆಲವೊಂದು ನೀತಿ ನಿಯಮ ಅನುಸಾರ ವ್ಯವಹರಿಸಬೇಕಾಗುತ್ತದೆ.[೧೦] ಸರಳ ಅವಲೋಕನವನ್ನು ಎರಡು ವಿಧಗಳಾಗಿ ವಿಂಗಡಿಸಬಹುದು. ಒಂದು ಸಹಭಾಗಿತ್ವ ಅವಲೋಕನ ಮತ್ತು ಎರಡು ಸಹಭಾಗಿತ್ವರಹಿತ ಅವಲೋಕನ. ಸಹಭಾಗಿತ್ವ ಅವಲೋಕನದಲ್ಲಿ ಅಧ್ಯಯನಕಾರ ತಾನು ಅಧ್ಯಯನ ಮಾಡುವ ಸಮುದಾಯದಲ್ಲಿ ಒಬ್ಬ ಸದಸ್ಯರಾಗಿ ಸೇರಿಕೊಂಡು ಅವಲೋಕನೆ ಮಾಡುತ್ತಾರೆ. ಯಾವುದೋ ಒಂದು ಬುಡಕಟ್ಟು ಅಧ್ಯಯನ ಮಾಡುವವರು ಬುಡಕಟ್ಟು ಸಮುದಾಯದೊಂದಿಗೆ ಬೆರೆತು (ಅವರ ದಿನನಿತ್ಯದ ವ್ಯವಹಾರದಲ್ಲಿ ಯಾವುದೋ ಒಂದು ರೂಪದಲ್ಲಿ ಪಾಲುಗೊಂಡು) ಅಧ್ಯಯನ ಮಾಡುವುದು ಅಥವಾ ಫ್ಯಾಕ್ಟರಿಯಲ್ಲಿ ಶ್ರಮಿಕರಂತೆ ಇದ್ದುಕೊಂಡು ಅಧ್ಯಯನ ಮಾಡುವುದು ಸಹಭಾಗಿತ್ವ ಅವಲೋಕನದ ಮುಖ್ಯ ಲಕ್ಷಣ. ಅಧ್ಯಯನ ಮಾಡಬೇಕಾದ ಸಮುದಾಯದೊಂದಿಗೆ ಎರಡು ರೀತಿಯಲ್ಲಿ ಬೆರೆಯುವ ಕ್ರಮ ಇದೆ. ಒಂದು ಅಧ್ಯಯನಕ್ಕೆ ಒಳಗಾಗುವ ಸಮುದಾಯದ ಗಮನಕ್ಕೆ ತಂದು ಅವರ ಒಪ್ಪಿಗೆ ಪಡೆದು ಸಮುದಾಯದ ವ್ಯವಹಾರಗಳಲ್ಲಿ ಪಾಲುಗೊಳ್ಳುವುದು. ಎರಡು, ಅಧ್ಯಯನಕ್ಕೆ ಒಳಗಾಗುವ ಸಮುದಾಯದ ಗಮನಕ್ಕೆ ಬಾರದೆ ಅಥವಾ ಒಪ್ಪಿಗೆ ಪಡೆಯದೆ ಅವಲೋಕನ ಮಾಡುವುದು. ಉದಾಹರಣೆಗೆ ಅಸಂಘಟಿತ ಕಾರ್ಮಿಕರ ಸ್ಥಿತಿಗತಿ ಅರಿಯಲು ಅವಲೋಕನ ವಿಧಾನದಲ್ಲಿ ಅಧ್ಯಯನ ಮಾಡಲು ಅವಕಾಶ ಕೊಡಿ ಎಂದು ಕೇಳಿದರೆ ಫ್ಯಾಕ್ಟರಿ ಮಾಲಕರು ಒಪ್ಪಿಗೆ ಕೊಡುವ ಸಾಧ್ಯತೆಗಳು ಕಡಿಮೆ ಇದೆ. ಅಂತಹ ಸಂದರ್ಭದಲ್ಲಿ ಅಸಂಘಟಿತ ಕಾರ್ಮಿಕನಾಗಿ ಅಲ್ಲಿ ಕೆಲಸಕ್ಕೆ ಸೇರಿಕೊಂಡು ಕಾರ್ಮಿಕರ ಸ್ಥಿತಿಗತಿ ಅಧ್ಯಯನ ಮಾಡುವುದು ಸೂಕ್ತ ಕ್ರಮ ಆಗುತ್ತದೆ. ಹಾಗೆಂದು ಇದು ಎಲ್ಲ ಸಂದರ್ಭಗಳಲ್ಲಿ ಅನುಸರಿಸಬಹುದಾದ ಕ್ರಮವಲ್ಲ. ಉದಾಹರಣೆಗೆ ರೆಡ್‌ಲೈಟ್ ಪ್ರದೇಶದ ಮಹಿಳೆಯರ ಸ್ಥಿತಿಗತಿ ಅರಿಯಲು ಬೆಲೆವೆಣ್ಣಾಗಿ ಅಧ್ಯಯನಕಾರರು ಹೋಗಲು ಸಾಧ್ಯವಿಲ್ಲ.

ಸರಳ ಅವಲೋಕನದಲ್ಲಿ ಸಮುದಾಯಗಳ, ಶ್ರಮಿಕರ ಮುಂತಾದವರ ಸಾಮಾಜಿಕ/ ರಾಜಕೀಯ/ಆರ್ಥಿಕ ಸಾಂಸ್ಕೃತಿಕ ಬದುಕನ್ನು ಯಥಾ ರೂಪದಲ್ಲಿ ಗ್ರಹಿಸಲಾಗುವುದು.

ಅಂದರೆ ಸಮುದಾಯಗಳಿಗೆ ತಾವು ಅಧ್ಯಯನಕ್ಕೆ ಒಳಗಾಗಿದ್ದೇವೆ ಎನ್ನುವ ಅರಿವನ್ನು ಮೂಡಿಸದೆ ಅವರ ಬದುಕನ್ನು ಹಿಡಿದಿಡುವುದು ಅಧ್ಯಯನಕಾರರ ಕೆಲಸ. ಮೇಲ್ನೋಟಕ್ಕೆ ಇಲ್ಲಿ ಎರಡೂ ಪಕ್ಷ ಕೂಡ (ಅಧ್ಯಯನ ಮಾಡುವವರು ಮತ್ತು ಅಧ್ಯಯನಕ್ಕೆ ಒಳಗಾಗುವವರು) ಅಧ್ಯಯನದ ಯಾವುದೇ ಶಿಸ್ತುಗೆ ಒಳಪಟ್ಟಂತೆ ಕಾಣುವುದಿಲ್ಲ. ಇದು ನಿಜವಲ್ಲ. ಅಧ್ಯಯನಕ್ಕೆ ಒಳಗಾಗುವವರ ಮೇಲೆ ಯಾವುದೇ ನಿರ್ಬಂಧವಿಲ್ಲ. ನಿಜ. ಆದರೆ ಅಧ್ಯಯನಕಾರರು ಯಾವುದೇ ಇತಿಮಿತಿ ಇಲ್ಲದೆ ಕ್ಷೇತ್ರದಲ್ಲಿ ಇರುವುದನ್ನೆಲ್ಲ ದಾಖಲಿಸುವುದು ಅವಲೋಕನಾ ಆಗುವುದಿಲ್ಲ. ಅವಲೋಕನಾ ವಿಧಾನದಲ್ಲಿ ಮಾಹಿತಿ ಸಂಗ್ರಹಿಸುವ ಮೊದಲು ಅಧ್ಯಯನಕಾರರು ತಮಗೆ ಬೇಕಾಗಿರುವ ಮಾಹಿತಿಯ ಪಟ್ಟಿ ಮತ್ತು ಅದಕ್ಕೆ ಅವಲೋಕಿಸಬೇಕಾದ ಅಂಶಗಳ ಪಟ್ಟಿಯನ್ನು ಮಾಡಿಕೊಳ್ಳಬೇಕಾಗುತ್ತದೆ. ಜಾತ್ರೆಯ ಸಾಂಸ್ಕೃತಿಕ ಅಧ್ಯಯನವನ್ನು ಉದಾಹರಣೆಯಾಗಿ ತೆಗೆದುಕೊಳ್ಳುವ. ಜಾತ್ರೆಯ ಸಾಂಸ್ಕೃತಿಕ ಅಧ್ಯಯನದಲ್ಲಿ ಜಾತ್ರೆಗೆ ಸಂಬಂಧಿಸಿದ ಹಲವಾರು ಪ್ರಶ್ನೆಗಳು ಜೋಡಿಸಲ್ಪಟ್ಟಿವೆ. ಜಾತ್ರೆಯ ಸಾಂಸ್ಕೃತಿಕ ಆಚರಣೆಗಳೇನು? ಅವುಗಳಲ್ಲಿ ಪಾಲುಗೊಳ್ಳುವವರು ಯಾರು? ಜಾತ್ರೆಗೆ ಬರುವ ಭಕ್ತಾದಿಗಳ ಹಿನ್ನೆಲೆಯೇನು? ಜಾತ್ರೆಯಲ್ಲಿ ಭಕ್ತಾದಿಗಳು ನಂಬುಗೆಯ ಜತೆ ಪೂರೈಸಿಕೊಳ್ಳುವ ಇತರ ಕೆಲಸಗಳೇನು? ಇತ್ಯಾದಿ ಪ್ರಶ್ನೆಗಳನ್ನು ಜಾತ್ರೆಯ ಸಾಂಸ್ಕೃತಿಕ ಅಧ್ಯಯನದಲ್ಲಿ ಸೇರಿಸಬಹುದು. ಜಾತ್ರೆಯ ವಿವಿಧ ಆಯಾಮಗಳನ್ನು ಅಧ್ಯಯನ ಮಾಡುವವರು ಮಾಹಿತಿ ಸಂಗ್ರಹಕ್ಕಾಗಿ ಅವಲೋಕನ ವಿಧಾನವನ್ನು ಬಳಸುವ ಮುನ್ನ ಮೇಲಿನ ಪ್ರಶ್ನೆಗಳಿಗೆ ಉತ್ತರ ಪಡೆಯಲು ಅವಲೋಕನೆ ಮಾಡಬೇಕಾದ ಜಾತ್ರೆಯ ವಿವಿಧ ಮಜಲುಗಳನ್ನು ಗುರುತಿಸಬೇಕಾಗುತ್ತದೆ. ಉದಾಹರಣೆಗೆ ನಂಬುಗೆಯ ಜತೆ ಜಾತ್ರೆಯಿಂದ ಪೂರೈಸಿಕೊಳ್ಳುವ ಇತರ ಕೆಲಸಗಳ ಬಗ್ಗೆ ಮಾಹಿತಿ ಬೇಕಾದರೆ ಭಕ್ತಾದಿಗಳನ್ನು ಮುಖ್ಯ ಆಚರಣೆಯಿಂದ ಹೊರತುಪಡಿಸಿದ ಸ್ಥಳಗಳಲ್ಲಿ ಅವಲೋಕನೆ ಮಾಡಬೇಕು. ಜಾತ್ರಾ ಸ್ಥಳದಲ್ಲಿ ಹಾಕಿರುವ ಅಂಗಡಿಗಳಲ್ಲಿ, ಟೆಂಟ್ ಟಾಕೀಸುಗಳಲ್ಲಿ, ನಾಟಕದ ಕಂಪನಿಗಳ ಟೆಂಟ್‌ಗಳಲ್ಲಿ, ಚಕ್ಕಡಿ ಪಕ್ಕ ಕಲ್ಲು ಪೇರಿಸಿ ಅಡುಗೆ ಮಾಡುವಲ್ಲಿ ಹೀಗೆ ಹಲವಾರು ಸ್ಥಳಗಳಲ್ಲಿ ಅವಲೋಕನೆ ಮಾಡಬೇಕಾಗುತ್ತದೆ. ಈ ಅವಲೋಕನೆಗಳಿಂದ ಜಾತ್ರೆಯ ನಂಬುಗೇತರ ಮುಖಗಳ ಪರಿಚಯ ಸಾಧ್ಯ.

ಶಿಸ್ತುಬದ್ಧ ಅವಲೋಕನದಲ್ಲಿ ಸ್ಥೂಲ ಚಿತ್ರಣಕ್ಕಿಂತ ನಿಖರ ಚಿತ್ರಣಕ್ಕೆ ಮಹತ್ವ ನೀಡಲಾಗಿದೆ. ಸಂಖ್ಯೆ, ದೂರ, ಗಾತ್ರ, ಪ್ರಮಾಣ ಇತ್ಯಾದಿಗಳ ಬಗ್ಗೆ ಸರಳ ಅವಲೋಕನ ದಲ್ಲಿ ಒಂದು ಸ್ಥೂಲ ಚಿತ್ರಣಕ್ಕೆ ಪ್ರಯತ್ನಿಸಿದರೆ ಶಿಸ್ತುಬದ್ಧ ಅವಲೋಕನದಲ್ಲಿ ನಿಖರತೆಗೆ ಪ್ರಯತ್ನಿಸಲಾಗುವುದು. ಜಾತ್ರೆಯಲ್ಲಿ ಸೇರಿದ ಒಟ್ಟು ಜನಸಂಖ್ಯೆಯ ಬಗ್ಗೆ ನಿಖರ ಮಾಹಿತಿ, ವಿವಿಧ ಆಚರಣೆಗಳು ನಡೆಯುವ ಸ್ಥಳಗಳ ಚಿತ್ರಣವನ್ನು (ನಕ್ಷೆ, ಸ್ಕೇಲ್ ಇತ್ಯಾದಿಗಳನ್ನು ಬಳಸಿ) ನಿಖರವಾಗಿ ನೀಡುವುದು ಹೀಗೆ ಎಲ್ಲ ಮಾಹಿತಿಯಲ್ಲೂ ಹೆಚ್ಚು ಹೆಚ್ಚು

ನಿಖರತೆಯನ್ನು ಶಿಸ್ತುಬದ್ಧ ಅವಲೋಕನೆ ಬಯಸುತ್ತದೆ. ಜತೆಗೆ ಶಿಸ್ತುಬದ್ಧ ಅವಲೋಕನದಲ್ಲಿ ಸಂಶೋಧಕ ಮತ್ತು ಸಂಶೋಧನೆಗೆ ಒಳಗಾಗುವ ಸಂಗತಿಗಳು ವಿವಿಧ ಪ್ರಮಾಣದ ನಿರ್ಬಂಧಕ್ಕೆ ಒಳಗಾಗಬೇಕಾಗುತ್ತದೆ. ಇಲ್ಲಿ ಕೆಲವೊಂದು ಬಾರಿ ಅವಲೋಕನೆಗೆ ಒಳಗಾಗುವ ಸಂಗತಿಗಳು ಅವುಗಳ ಗಮನಕ್ಕೆ ಬಾರದೆ ಅವಲೋಕನೆಗೆ ಒಳಗಾಗಬಹುದು. ಉದಾಹರಣೆಗೆ ಶಾಲಾ ಮಕ್ಕಳ ನಡವಳಿಕೆ ಬಗ್ಗೆ ಅವರ ಗಮನಕ್ಕೆ ಬಾರದೆ ಅವಲೋಕನೆ ನಡೆಯಬಹುದು. ಅದೇ ರೀತಿ ಕೆಲಸಗಾರರ ಪ್ಯಾಕ್ಟರಿಯೊಳಗಿನ ನಡವಳಿಕೆಯನ್ನು ಅವರ ಗಮನಕ್ಕೆ ಬಾರದೆ ಅವಲೋಕನೆ ನಡೆಯಬಹುದು. ಶಿಸ್ತುಬದ್ಧ ಅವಲೋಕನದಲ್ಲಿ ಪ್ರಯೋಗಾಲಯದಲ್ಲಿ ನಡೆಸುವ ಪ್ರಯೋಗದ ಅಂಶಗಳು ತುಂಬಿವೆ. ಅವಲೋಕನೆಗೆ ಒಳಗಾಗುವವರಿಗೆ (ಪರೀಕ್ಷೆಗೆ ಒಳಗಾಗುವವರಿಗೆ) ನಮ್ಮನ್ನು ಅಧ್ಯಯನ ಮಾಡುವುದು ಗಮನಕ್ಕೆ ಬರುವುದೇ ಇಲ್ಲ. ಒಂದು ವ್ಯವಸ್ಥೆಯ ಅಧಿಕೃತ ಸಂಬಂಧದ ವ್ಯಾಪ್ತಿಯೊಳಗೆ ಇರುವುದರಿಂದ (ತರಗತಿ, ಕಚೇರಿ, ಫ್ಯಾಕ್ಟರಿ, ಬಂಧಿಖಾನೆ ಇತ್ಯಾದಿಗಳ) ಅಧ್ಯಯನಕ್ಕೆ ಒಳಗಾಗುವವರ ವ್ಯವಹಾರ ಆಯಾಯ ವ್ಯವಸ್ಥೆಗಳ ನೀತಿ ನಿಯಮಕ್ಕೆ ಅನುಸಾರ ಇರುತ್ತದೆ. ಒಂದು ವಿಧದಲ್ಲಿ ಅವರು ಕೆಲಸ ಮಾಡುವ ಅಥವಾ ವ್ಯವಹರಿಸುವ ಇಡೀ ಪರಿಸರ ಒಂದು ಪ್ರಯೋಗಾಲಯದಂತೆ ಬಳಕೆ ಆಗುತ್ತದೆ. ಮಾಹಿತಿ ಸಂಗ್ರಹಿಸುವ ವಿಜ್ಞಾನದ ವಿಧಾನಗಳಿಗಿಂತ ಸಂಪೂರ್ಣ ಭಿನ್ನ ಎನ್ನುವ ಅವಲೋಕನಾ ವಿಧಾನದ ಹೆಚ್ಚುಗಾರಿಕೆ ಎಷ್ಟು ಪೊಳ್ಳೆಂದು ಮೇಲಿನ ವಿವರಗಳಿಗಿಂತ ಮನವರಿಕೆ ಆಗಿರಬಹುದು.

ಗುಂಪುಚರ್ಚೆ

ಅವಲೋಕನ ವಿಧಾನದಂತೆ ದಿನನಿತ್ಯದ ಬದುಕಿನಲ್ಲಿ ಪ್ರಪಂಚವನ್ನು ಗ್ರಹಿಸಲು ಬಳಸುವ ಮತ್ತೊಂದು ವಿಧಾನ ಗುಂಪುಚರ್ಚೆ. ಅವಲೋಕನದಂತೆ ಸಾಂಪ್ರದಾಯಿಕ ವಿಧಾನಗಳ (ಪ್ರಶ್ನಾವಳಿ, ಸಂದರ್ಶನ ಇತ್ಯಾದಿಗಳ) ಲೋಪದೋಷಗಳನ್ನು ದೂರ ಮಾಡುವ ದೃಷ್ಟಿಯಿಂದ ಗುಂಪುಚರ್ಚೆ ಬೆಳಕಿಗೆ ಬಂದಿದೆ. ಒಂದು ಸಮುದಾಯಕ್ಕೆ ಅಥವಾ ಹಳ್ಳಿಗೆ ಸೇರಿದ ಜನರನ್ನು ಕೆಲವು ಗುಂಪುಗಳಾಗಿ ವಿಂಗಡಿಸಿ ಆ ಗುಂಪಿಗೊಂದಿಗೆ ಚರ್ಚಿಸಿ ಮಾಹಿತಿ ಸಂಗ್ರಹಿಸುವುದು ಈ ವಿಧಾನದ ಲಕ್ಷಣ. ಜನರ ಸಹಭಾಗಿತ್ವದೊಂದಿಗೆ ಪಂಚಾಯತ್ ಯೋಜನೆ ತಯಾರಿಸುವ ಸಂದರ್ಭದಲ್ಲಿ ಅನುಸರಿಸಿದ ಗುಂಪು ಚರ್ಚೆಯ ಉದಾಹರಣೆಯೊಂದಿಗೆ ಗುಂಪು ಚರ್ಚೆಯನ್ನು ಹೇಗೆ ಕಾರ್ಯರೂಪಕ್ಕೆ ತರಲಾಗುತ್ತದೆ ಎನ್ನುವುದನ್ನು ನೋಡುವ. ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಕೃಷ್ಣನಗರ ಪಂಚಾಯತ್ ಮತ್ತು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಯರೆಹಂಚಿನಾಳ ಪಂಚಾಯತ್‌ಗಳಿಗೆ ಜನರನ್ನು ತೊಡಗಿಸಿಕೊಂಡು ಯೋಜನೆ ತಯಾರಿಸಲಾಗಿದೆ. ಆ ಸಂದರ್ಭದಲ್ಲಿ ಗುಂಪು ಚರ್ಚೆಯ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ. ಗ್ರಾಮಸ್ಥರ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಈಗ ಇರುವ ವ್ಯವಸ್ಥೆ ಗ್ರಾಮ ಸಭೆ. ಹಳ್ಳಿಗೊಂದು ಗ್ರಾಮಸಭೆ ಮಾಡಿ ಅದರಲ್ಲಿ ಗ್ರಾಮಸ್ಥರ ಆದ್ಯತೆಗಳನ್ನು ತಿಳಿದುಕೊಳ್ಳುವುದು ಕಷ್ಟ.

ಅದಕ್ಕಾಗಿಯೇ ಪಂಚಾಯತ್ ಕಾಯಿದೆಗೆ ಇತ್ತೀಚೆಗೆ ಆದ ತಿದ್ದುಪಡಿಯಲ್ಲಿ ವಾರ್ಡ್‌ಗೊಂದು ಗ್ರಾಮಸಭೆ ಮಾಡುವ ಅವಕಾಶ ಕಲ್ಪಿಸಲಾಗಿದೆ. ವಾರ್ಡ್‌ಗೊಂದು ಗ್ರಾಮಸಭೆ ನಡೆಸಿದರೂ ಯೋಜನೆಯ ದೃಷ್ಟಿಯಿಂದ ಅನುಕೂಲವಾಗುವುದಿಲ್ಲ. ಯಾಕೆಂದರೆ ಒಂದು ವಾರ್ಡ್‌ನಲ್ಲಿ ಕಡಿಮೆ ಅಂದರೆ ನೂರರಿಂದ ಇನ್ನೂರು ಮನೆಗಳು ಇರುವ ಸಾಧ್ಯತೆ ಇದೆ. ಇಷ್ಟೊಂದು ಜನರನ್ನು ಒಂದು ಕಡೆ ಸೇರಿಸಿ ಚರ್ಚಿಸಿ ಆದ್ಯತೆಗಳ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದು ಕಷ್ಟ. ಆದುದರಿಂದ ವಾರ್ಡ್‌ಗೊಂದು ಸಭೆ ಬದಲು ೨೫ ಮನೆಗಳಿಗೊಂದು ಗ್ರಾಮಸಭೆ ನಡೆಸಲಾಯಿತು. ಯರೆಹಂಚಿನಾಳದಲ್ಲಿ ವಾರ್ಡ್ ಕಲ್ಪನೆಯನ್ನು ಇನ್ನೂ ಬದಲಾಯಿಸಿಕೊಳ್ಳಲಾಯಿತು. ವಾರ್ಡ್ ಒಂದರಲ್ಲಿ ಇರುವ ಕುಟುಂಬಗಳನ್ನು ವಿಂಗಡಿಸಿ ಸಣ್ಣ ಗುಂಪುಗಳನ್ನು ಮಾಡುವ ಬದಲು ಓಣಿಗೊಂದು ಸಭೆ ಸೇರಿಸಲಾಯಿತು. ಈ ವಸತಿ ಅಥವಾ ಮಿನಿ ಗ್ರಾಮಸಭೆಯಲ್ಲಿ ಗ್ರಾಮಸ್ಥರ ಬೇಕು ಬೇಡಗಳು, ಸಮಸ್ಯೆಗಳು, ಪರಿಹಾರಗಳು, ಸಂಪನ್ಮೂಲ ಹೊಂದಾಣಿಕೆ ಇತ್ಯಾದಿಗಳು ಚರ್ಚೆಯಾಗಬೇಕು ಹಾಗೂ ತೀರ್ಮಾನವಾಗಬೇಕು.[೧೨]

ಮೂರು ಹಂತಗಳಲ್ಲಿ ಜನರು ಯೋಜನೆ ತಯಾರಿ ಕೆಲಸದಲ್ಲಿ ಭಾಗವಹಿಸಲು ವ್ಯವಸ್ಥೆ ಮಾಡಲಾಯಿತು. ಪ್ರಥಮ ಹಂತದಲ್ಲಿ ತಮ್ಮ ವಾರ್ಡಿನ ಸಮಸ್ಯೆಗಳನ್ನು ಜನರು ಪಟ್ಟಿ ಮಾಡಬೇಕು. ಅಲ್ಲಿ ಕೇವಲ ಸಮಸ್ಯೆಗಳನ್ನು ಗುರುತಿಸುವ ಕೆಲಸ ಮಾತ್ರ. ಪಟ್ಟಿ ಮಾಡುವಾಗ ಸಂಖ್ಯೆಯ ಮಿತಿಗಳನ್ನು ಹೇರಿಲ್ಲ. ಅವರಿಗೆ ಮನಸ್ಸಿಗೆ ಬಂದ ಎಲ್ಲ ಸಮಸ್ಯೆಗಳನ್ನು ಪಟ್ಟಿ ಮಾಡಲು ಸೂಚಿಸಲಾಯಿತು. ಎರಡನೇ ಹಂತದಲ್ಲಿ ಪಟ್ಟಿ ಮಾಡಿದ ಸಮಸ್ಯೆಗಳನ್ನು ಪರಿಹರಿಸುವ ಆದ್ಯತಾ ಪಟ್ಟಿಯನ್ನು ತಯಾರಿಸಲು ಸೂಚಿಸಲಾಯಿತು. ಈ ಹಂತದಲ್ಲಿ ಸೇರಿದ ಜನರಲ್ಲಿ ಒಮ್ಮತ ಇರದಿದ್ದರೆ ಕೈ ಎತ್ತುವ ಮೂಲಕ ಆದ್ಯತೆಯನ್ನು ಸೂಚಿಸಲು ತಿಳಿಸಲಾಯಿತು. ಬೆಂಬಲದ ಆಧಾರದಲ್ಲಿ ಸಮಸ್ಯೆ ಪರಿಹಾರದ ಆಧ್ಯತೆಯನ್ನು ನಿರ್ಣಯಿಸಲಾಯಿತು. ಮೂರನೇ ಹಂತದಲ್ಲಿ ಪಟ್ಟಿ ಮಾಡಿದ ಸಮಸ್ಯೆಯ ವಿಶ್ಲೇಷಣೆ. ಇಲ್ಲಿ ಒಂದೊಂದು ಸಮಸ್ಯೆಯನ್ನು ಪ್ರತ್ಯೇಕವಾಗಿ ವಿಶ್ಲೇಷಿಸಲಾಯಿತು. ವಿಶ್ಲೇಷಣೆಯಲ್ಲಿ ಈ ಕೆಳಗಿನ ಅಂಶಗಳು ಒಳಗೊಳ್ಳುವಂತೆ ನೋಡಿಕೊಳ್ಳಲಾಯಿತು. ಒಂದು, ಸಮಸ್ಯೆ ಹಿಂದಿರುವ ಕಾರಣ, ಎರಡು, ಜನರ ಪ್ರಕಾರ ಸಮಸ್ಯೆಗೆ ಪರಿಹಾರ, ಮೂರು ಸಮಸ್ಯೆ ಪರಿಹಾರಕ್ಕೆ ಅಗತ್ಯವಿರುವ ಬಜೆಟ್ ಅಥವಾ ಸಂಪನ್ಮೂಲ ಮತ್ತು ಸಮಸ್ಯೆ ಪರಿಹಾರದಲ್ಲಿ ಜನರ ಪಾಲುಗೊಳ್ಳುವಿಕೆಯ ಸಾಧ್ಯತೆ. ಪಾಲುಗೊಳ್ಳುವಿಕೆಯನ್ನು ಎರಡು ರೂಪದಲ್ಲಿ ಸೂಚಿಸಲು ತಿಳಿಸಲಾಯಿತು. ಒಂದು ಹಣದ ರೂಪದಲ್ಲಿ ಎರಡು, ಶ್ರಮದಾನದ ರೂಪದಲ್ಲಿ. ವಿವಿಧ ಮಿನಿ ಗ್ರಾಮಸಭೆಗಳಲ್ಲಿ ಸಂಗ್ರಹಿಸಿದ ಮಾಹಿತಿ ಆಧಾರದಲ್ಲಿ ಮುಖ್ಯ ವಲಯಗಳ ಇಂದಿನ ಸ್ಥಿತಿ, ಅಗತ್ಯ ಮತ್ತು ಕೊರತೆಯ ಪಟ್ಟಿಯನ್ನು ತಯಾರಿಸಲಾಗಿದೆ. ಆ ಪಟ್ಟಿಯ ಆಧಾರದಲ್ಲಿ ಕೊರತೆಯನ್ನು ತುಂಬಿಸಲು ಅವಶ್ಯವಿರುವ ಯೋಜನೆಗಳನ್ನು ತಯಾರಿಸಬಹುದು.[೧೩]

ಗ್ರಾಮಸ್ಥರ ಬೇಕು ಬೇಡಗಳನ್ನು ತಿಳಿಯಲು ಇದೊಂದು ಉತ್ತಮ ವಿಧಾನ. ಗ್ರಾಮದ ಎಲ್ಲ ಸದಸ್ಯರು ಇದರಲ್ಲಿ ಪಾಲುಗೊಳ್ಳುವುದಿಲ್ಲ. ಹಾಗೆಂದು ಈ ವಿಧಾನದಿಂದ ಸಂಗ್ರಹಿಸಿದ ಮಾಹಿತಿ ಸಮಸ್ತ ಗ್ರಾಮಸ್ಥರ ಅಭಿಪ್ರಾಯವನ್ನು ಪ್ರತಿನಿಧೀಕರಿಸುವುದಿಲ್ಲ ಎನ್ನುವ ತೀರ್ಮಾನಕ್ಕೆ ಬರಬೇಕಾಗಿಲ್ಲ. ಒಂದು ಹಳ್ಳಿಯಲ್ಲಿ ಈ ವಿಧಾನದಲ್ಲಿ ಮಾಹಿತಿ ಸಂಗ್ರಹಿಸುವ ಜತೆಗೆ ಎಲ್ಲ ಗ್ರಾಮಸ್ಥರನ್ನು ಪ್ರಶ್ನಾವಳಿಯ ಮೂಲಕ ಸಂದರ್ಶನ ಮಾಡಿ ಮಾಹಿತಿ ಸಂಗ್ರಹಿಸಲಾಗಿದೆ. ಎರಡೂ ಮೂಲಗಳಿಂದ ಪಡೆದ ಮಾಹಿತಿ ಹೆಚ್ಚು ಕಡಿಮೆ ಒಂದೇ ಫಲಿತಾಂಶವನ್ನು ನೀಡಿವೆ. ಆದುದರಿಂದ ಗುಂಪು ಚರ್ಚೆ ಸಮಸ್ತ ಗ್ರಾಮಸ್ಥರ ಅಭಿಪ್ರಾಯವನ್ನು ಸಂಗ್ರಹಿಸಲು ಒಂದು ಸುಧಾರಿತ ವಿಧಾನ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಇಲ್ಲೂ ಸಾಕಷ್ಟು ಸಮಸ್ಯೆಗಳಿವೆ. ಬಹುಮುಖ್ಯ ಸಮಸ್ಯೆ ಜನರನ್ನು ಒಟ್ಟು ಸೇರಿಸುವುದು. ಬಹುತೇಕ ಸಂದರ್ಭದಲ್ಲಿ ಗ್ರಾಮಸ್ಥರ ಶೇಕಡಾ ೨೫ರಷ್ಟು ಗ್ರಾಮಸ್ಥರನ್ನು ಸೇರಿಸುವುದು ದೊಡ್ಡ ಸಾಹಸವಾಗುತ್ತದೆ. ಸೇರಿಸಿದ ಜನರೆಲ್ಲ ಚರ್ಚೆಯಲ್ಲಿ ಪಾಲುಗೊಳ್ಳು ವಂತೆ ಮಾಡುವುದು ಮತ್ತೊಂದು ಸಮಸ್ಯೆ. ನೀರು, ನಿರುದ್ಯೋಗ ಇತ್ಯಾದಿ ಸಮಸ್ಯೆಗಳನ್ನು ಜನರು ಆಸಕ್ತಿಯಿಂದ ಪಟ್ಟಿ ಮಾಡುತ್ತಾರೆ. ಆದರೆ ಚರ್ಚೆ ಹೆಚ್ಚು ಹೆಚ್ಚು ಸಂಕೀರ್ಣ ಗೊಂಡಂತೆ ಜನರು ಚರ್ಚೆಯಲ್ಲಿ ಪಾಲುಗೊಳ್ಳುವುದಿಲ್ಲ. ಜತೆಗೆ ಚರ್ಚೆಯ ಸಮಯ ಹೆಚ್ಚಾದಂತೆ ಜನರು ಗುಂಪನ್ನು ಬಿಟ್ಟು ಹೋಗುವುದು ಹೆಚ್ಚಾಗುತ್ತದೆ. ಜನರನ್ನು ಚರ್ಚೆ ಮುಗಿಯುವರೆಗೆ ಹಿಡಿದಿಡುವುದು ದೊಡ್ಡ ಸಾಹಸದ ಕೆಲಸ. ಚರ್ಚೆಯಲ್ಲಿ ಪಾಲುಗೊಳ್ಳುವಾಗ ಗುಂಪಲ್ಲಿ ಸೇರಿದ ಎಲ್ಲರೂ ಭಾಗವಹಿಸುತ್ತಾರೆ ಎನ್ನಲಾಗುವುದಿಲ್ಲ. ಪ್ರತಿ ಗುಂಪಲ್ಲೂ ಸಮಸ್ಯೆಗಳನ್ನು ಅಥವಾ ವಿಚಾರಗಳನ್ನು ಗುಂಪಿನ ಇತರರಿಗಿಂತ ಪರಿಣಾಮಕಾರಿಯ ಮಂಡಿಸುವ ಕೆಲವರಿರುತ್ತಾರೆ. ಅವರುಗಳನ್ನು ತಡೆಯದೆ ಬಿಟ್ಟರೆ ಇಡೀ ಗುಂಪಿನ ಎಲ್ಲ ತೀರ್ಮಾನಗಳನ್ನು ಅವರೇ ಕೊಡುವ ಸಾಧ್ಯತೆ ಇರುತ್ತದೆ. ಕೆಲವೊಂದು ಬಾರಿ ತಮಗೆ ವಿಚಾರಗಳನ್ನು ಚೆನ್ನಾಗಿ ಮಂಡಿಸಲು ಆಗುವುದಿಲ್ಲ ಎಂದು ತಿಳಿದುಕೊಂಡವರು ಚೆನ್ನಾಗಿ ಮಂಡಿಸುವವರನ್ನು ತಮ್ಮ ವಿಚಾರಗಳನ್ನು ಮಂಡಿಸಲು ಮುಂದೆ ಬಿಡುತ್ತಾರೆ. ಇನ್ನು ಕೆಲವು ಕಡೆ ಸ್ಥಳೀಯ ಸಮುದಾಯಗಳಲ್ಲಿ ನಾಯಕರೆಂದು ಗುರುತಿಸಿಕೊಂಡವರು ಹಳ್ಳಿಯಲ್ಲಿ ನಡೆಯುವ ಎಲ್ಲ ಗುಂಪು ಚರ್ಚೆಗಳಲ್ಲಿ ಭಾಗವಹಿಸುವ ಸಾಧ್ಯತೆಗಳಿರುತ್ತವೆ. ಅಷ್ಟು ಮಾತ್ರವಲ್ಲ ಅವರುಗಳ ತಮ್ಮ ಕೆಲವೊಂದು ಪೆಟ್ ಬೇಡಿಕೆ ಗಳನ್ನು ಅಥವಾ ಸಮಸ್ಯೆಗಳನ್ನು ಇಡೀ ಊರಿನ ಸಮಸ್ಯೆಯೆಂದು ಎಲ್ಲ ಗುಂಪುಗಳಲ್ಲೂ ಮಂಡಿಸುತ್ತಾರೆ. ಗುಂಪು ಚರ್ಚೆಯ ಅನುಭವ ಇಲ್ಲದ ಗ್ರಾಮಸ್ಥರು ಏನು ಹೇಳಬೇಕೆಂದು ಆಲೋಚಿಸುತ್ತಿರುವಾಗ ಸ್ಥಳೀಯ ನಾಯಕರ ಈ ಬಗೆಯ ಮುನ್ನುಗುವಿಕೆ ಇಡೀ ಗುಂಪಿನ ಚರ್ಚೆಯನ್ನೇ ಪ್ರಭಾವಿಸುವ ಸಾಧ್ಯತೆ ಇರುತ್ತದೆ. ಇಂತಹ ಸಂಗತಿಗಳನ್ನು ಗುಂಪು ಚರ್ಚೆ ನಡೆಸುವವರು ನಿಭಾಯಿಸಬೇಕಾ ಗುತ್ತದೆ. ಹೀಗೆ ಗುಂಪು ಚರ್ಚೆ ಯಾವುದೇ ದೋಷಗಳಿಲ್ಲದ ಒಂದು ವಿಧಾನವೆಂದು ತಿಳಿಯ ಲಾಗುವುದಿಲ್ಲ. ಆದುದರಿಂದ ಮಾಹಿತಿ ಸಂಗ್ರಹದ ಇತರ ವಿಧಾನಗಳ ಜತೆ ಇದನ್ನು ಬಳಸುವುದು ಹೆಚ್ಚು ಸೂಕ್ತ.

ಸಂದರ್ಶನ

ಗುಂಪು ಚರ್ಚೆ ಹಾಗೂ ಅವಲೋಕನಗಳಂತೆ ಸಂದರ್ಶನವನ್ನು ಕೂಡ ದಿನನಿತ್ಯದ ಬದುಕಿನಲ್ಲಿ ನಡೆಯುವ ಮಾತುಕತೆಗೆ ಹೋಲಿಸಬಹುದು. ದಿನನಿತ್ಯದ ಬದುಕಿನಲ್ಲಿ ನಡೆಯುವ ಮಾತುಕತೆಗಳಲ್ಲಿ ಹಲವಾರು ವಿಚಾರಗಳು ವಿನಿಮಯವಾಗುತ್ತವೆ.ಹೊಸ ಸಂಗತಿಗಳು ಬೆಳಕಿಗೆ ಬರುತ್ತವೆ. ಹಳೇ ಸಂಗತಿಗಳು ವಿಮರ್ಶೆಗೆ ಗುರಿಯಾಗುತ್ತವೆ. ಈ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಸಂದರ್ಶನವನ್ನು ದಿನನಿತ್ಯದ ಮಾತುಕತೆಗೆ ಹೋಲಿಸುವ ಸಾಧ್ಯತೆ ಇದೆ. ಆದಾಗ್ಯೂ ಇದನ್ನು ಸಂಶೋಧನ ಸಂದರ್ಶನಕ್ಕೆ ಸಮವೆಂದು ಭಾವಿಸಲು ಸಾಧ್ಯವಿಲ್ಲ. ಸಂಶೋಧನ ಸಂದರ್ಶನಕ್ಕೆ ಸಮವಲ್ಲವೆಂದು ತೀರ್ಮಾನಿಸಲು ಹಲವಾರು ಕಾರಣಗಳಿವೆ. ದಿನನಿತ್ಯದ ಮಾತುಕತೆ ಸಮಾನ ಮನಸ್ಕರ ನಡುವೆ ನಡೆಯುತ್ತದೆ. ಮಾನಸಿಕ ಹೊಂದಾಣಿಕೆ ಮಾತುಕತೆಗೆ ಬೇಕಾಗಿರುವ ಪರಿಸರವನ್ನು ಸೃಷ್ಟಿಸುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಒಳ್ಳೆಯ ಸಂಬಂಧಗಳು ವಿಚಾರಗಳ ವಿನಿಮಯಕ್ಕೆ ರಂಗಸಿದ್ಧತೆ ಮಾಡುತ್ತವೆ. ಆದುದರಿಂದ ವಿಚಾರಗಳ ವಿನಿಮಯ ಸಂಬಂಧವನ್ನು ಗಟ್ಟಿಗೊಳಿಸುವ ಪ್ರಶ್ನೆಯೇ ಇಲ್ಲ. ಒಬ್ಬರು ಹೇಳುವುದನ್ನು ಮತ್ತೊಬ್ಬರು ಪ್ರಶ್ನಿಸುವುದು ಅಥವಾ ಒಪ್ಪದಿರುವ ಸಾಧ್ಯತೆಗಳು ಕಡಿಮೆ. ಮಾತು ಅರ್ಥವಾಗದಾಗ ಪ್ರಶ್ನೆಗಳು ಉದ್ಭವಿಸುತ್ತವೆ. ಒಬ್ಬರು ಮಾತಾಡುವುದು ಮತ್ತೊಬ್ಬರಿಗೆ ಅರ್ಥವಾಗುವುದಿಲ್ಲ ಎಂದಾದರೆ ಒಬ್ಬರು ಮತ್ತೊಬ್ಬರನ್ನು ಅರ್ಥಮಾಡಿಕೊಂಡಿಲ್ಲವೆನ್ನುವ ನಿಲುವಿಗೆ ಎಡೆಮಾಡಿಕೊಡುತ್ತದೆ. ಆದುದರಿಂದ ಮಾತುಕತೆಗಳಲ್ಲಿ ಅರ್ಥವಾಗಿಲ್ಲ ಪುನಃ ವಿವರಿಸಿ ಎನ್ನುವ ಮಾತುಗಳು ಅಪರೂಪ. ಆದರೆ ಸಂದರ್ಶನದಲ್ಲಿ ಹೆಚ್ಚಿನ ಮಾಹಿತಿ ನೀಡಿ ಎನ್ನುವುದು ಆಗಾಗ ಬರುವ ಕೋರಿಕೆ. ಹೇಳಿರುವುದನ್ನು ಪ್ರಶ್ನಿಸುವ, ಯಾವುದೇ ವಿಚಾರದ ಬಗ್ಗೆ ಮಾಹಿತಿದಾರರ ಭಾವನೆಗಳ, ದೃಷ್ಟಿಕೋನಗಳ ಪರಿಶೀಲನೆ ಸಂದರ್ಶನದಲ್ಲಿ ಸತತ ನಡೆಯುತ್ತದೆ. ವಿಷಯದ ಮಧ್ಯದಲ್ಲಿ ಹಿಂದಕ್ಕೆ ಹೋಗಿ ಹೇಳಿರುವುದನ್ನು ಪರಿಶೀಲಿಸುವುದು, ಮಾಹಿತಿದಾರರ ಹೇಳಿರುವುದನ್ನು ಸಂಶೋಧಕರು ಉಚ್ಚರಿಸಿ ಈ ಅರ್ಥದಲ್ಲಿ ತಾವು ಹೇಳಿದ್ದೀರಾ ಎಂದು ಅವರ ಅಭಿಪ್ರಾಯ ಕೇಳುವ ಇತ್ಯಾದಿ ಪ್ರಕ್ರಿಯೆಗಳು ಸಂದರ್ಶನದಲ್ಲಿ ಸತತ ನಡೆಯುತ್ತವೆ. ಈ ಎಲ್ಲ ಸಂಗತಿಗಳು ಸಂಶೋಧನ ಸಂದರ್ಶನವನ್ನು ದಿನನಿತ್ಯದ ಮಾತುಕತೆಗೆ ಹೋಲಿಸುವುದು ಸರಿಯಲ್ಲ ಎಂದು ವಾದಿಸುತ್ತಿವೆ. ಈಗಾಗಲೇ ನಡೆದಿರುವ ಅಥವಾ ಈಗ ನಡೆಯುತ್ತಿರುವ ಅಥವಾ ಮುಂದೆ ನಡೆಯಲಿರುವ ಸಂಗತಿಗಳ ಬಗ್ಗೆ ಮಾಹಿತಿದಾರರು ಕಟ್ಟಿಕೊಡುವ ಕಥನವನ್ನು ಸಂದರ್ಶನವೆಂದು ವ್ಯಾಖ್ಯಾನಿಸಬಹುದು. ನಡೆದಿರುವ, ನಡೆಯುತ್ತಿರುವ ಮತ್ತು ನಡೆಯಬಹುದಾದ ಸಂಗತಿಗಳು ಸಂದರ್ಶನದಲ್ಲಿ ಪುನರ್ ಸೃಷ್ಟಿಯಾಗುತ್ತವೆ. ಸಂದರ್ಶನವೊಂದು ಪುನರ್ ಸೃಷ್ಟಿ ಪ್ರಕ್ರಿಯೆಯಾಗಿರುವುದರಿಂದ ನಡೆದಿರುವ ಅಥವಾ ನಡೆಯುತ್ತಿರುವ ಘಟನೆಗಳು ಮತ್ತು ಮಾಹಿತಿದಾರರು ಸಂದರ್ಶನದ ಸಂದರ್ಭದಲ್ಲಿ ಘಟನೆ ಬಗ್ಗೆ ಕಟ್ಟಿಕೊಡುವ ಕಥನಕ್ಕೂ ನೇರ

ಸಂಬಂಧ ಕಲ್ಪಿಸುವುದು ಕಷ್ಟ. ಅಂದರೆ ನಡೆದಿದೆ ಅಥವಾ ನಡೆಯುತ್ತಿದೆ ಎನ್ನುವ ಮಾಹಿತಿದಾರರ ಕಥನಕ್ಕನುಸಾರವಾಗಿಯೇ ಘಟನೆಗಳು ಅಥವಾ ಪ್ರಕ್ರಿಯೆಗಳು ನಡೆಯದಿರಬಹುದು. ಆದುದರಿಂದ ಸಂದರ್ಶನದಿಂದ ದೊರಕುವ ಮಾಹಿತಿಯನ್ನು ವಾಸ್ತವದ ವಿವರಣೆಯೆಂದು ಪರಿಗಣಿಸುವುದು ಕಷ್ಟ.

ಸಂದರ್ಶನವನ್ನು ಮತ್ತೊಂದು ದೃಷ್ಟಿಕೋನದಿಂದಲೂ ನೋಡಲಾಗುತ್ತಿದೆ. ಇದನ್ನು ಸಾಂಪ್ರದಾಯಿಕ ದೃಷ್ಟಿಕೋನ ಎನ್ನಬಹುದು. ಈ ದೃಷ್ಟಿಕೋನದನುಸಾರ ಸಂದರ್ಶನವನ್ನು ನೋಡಿದರೆ ಅದು ಹೆಚ್ಚು ಹೆಚ್ಚು ವಿಜ್ಞಾನದ ವಿಧಾನವನ್ನು ಅನುಸರಿಸುವುದು ಕಂಡುಬರುತ್ತದೆ. ಅವುಗಳ ಪ್ರಮುಖ ಲಕ್ಷಣಗಳು ಇಂತಿವೆ. ಒಂದು, ಸಂದರ್ಶನ ಮಾಡುವವ (ಸಂಶೋಧಕ ಅಥವಾ ಸಂದರ್ಶಕ) ಮತ್ತು ಸಂದರ್ಶನ ನೀಡುವವರ (ಅಧ್ಯಯನಕ್ಕೆ ಒಳಗಾಗುವವರ ಅಥವಾ ಸಂದರ್ಶಿನಿ) ನಡುವೆ ಅಂತರವಿರುತ್ತದೆ. ಎರಡು, ಸಂದರ್ಶಕ ಮತ್ತು ಸಂದರ್ಶಿನಿ ನಡುವೆ ಭಾವನಾತ್ಮಕ ಸಂಬಂಧಗಳಿಗೆ ಅವಕಾಶವಿಲ್ಲ. ಮೂರು, ಸಂದರ್ಶನ ಸಂದರ್ಭದಲ್ಲಿ ಸಂದರ್ಶಕ ಮತ್ತು ಸಂದರ್ಶಿನಿ ನಡುವೆ ಅಧ್ಯಯನದ ಉದ್ದೇಶಗಳಿಗೆ ಸಂಬಂಧಿಸಿದ ಮಾತುಕತೆ ಮಾತ್ರ ನಡೆಯಬೇಕು. ಬಹುತೇಕ ಸಂಶೋಧಕರು ಈ ಬಗೆಯ ಸಂದರ್ಶನವನ್ನು ಮಾಡುತ್ತಿರುತ್ತಾರೆ. ಹಲವು ವಿಧಗಳ ಸಂದರ್ಶನಗಳಿವೆ. ಚಾಲ್ತಿಯಲ್ಲಿರುವ ಕೆಲವು ಸಂದರ್ಶನಗಳು ಇಂತಿವೆ. ಒಂದು, ಚೌಕಟ್ಟುಳ್ಳ(ಸ್ಟ್ರಕ್ಚರ್ಡ್) ಸಂದರ್ಶನ, ಎರಡು, ಚೌಕಟ್ಟಿಲ್ಲದ (ಅನ್‌ಸ್ಟ್ರಕ್ಚರ್ಡ್) ಸಂದರ್ಶನ, ಮೂರು, ಮೇಲ್ ಸ್ತರದ ಸಂದರ್ಶನ, ನಾಲ್ಕು, ಆಳವಾದ ಸಂದರ್ಶನ. ಚೌಕಟ್ಟುಳ್ಳ ಅಥವಾ ಸ್ಟ್ರಕ್ಚರ್ಡ್ ಸಂದರ್ಶನದಲ್ಲಿ ಏನು ಪ್ರಶ್ನೆಗಳನ್ನು ಕೇಳಬೇಕೆಂದು ಗುರುತು ಮಾಡಿಕೊಂಡಿರುತ್ತಾನೆ. ಸಂಶೋಧಕನ ಸಂದರ್ಶನ ಆತ ಸಿದ್ಧಪಡಿಸಿಕೊಂಡ ಪ್ರಶ್ನೆಗಳಿಗೆ ಸೀಮಿತವಾಗಿರುತ್ತದೆ ಅಥವಾ ಆತ ಹಾಕಿಕೊಂಡ ಚೌಕಟ್ಟಿಗೆ ಸೀಮಿತವಾಗಿರುತ್ತದೆ. ಈ ಚೌಕಟ್ಟನ್ನು ಮೀರಿ ಸಂಶೋಧಕ ಪ್ರಶ್ನೆಗಳನ್ನು ಕೇಳುವುದಿಲ್ಲ. ಆದುದರಿಂದಲೇ ಇದಕ್ಕೆ ಸ್ಟ್ರಕ್ಚರ್ಡ್ ಅಥವಾ ಚೌಕಟ್ಟುಳ್ಳ ಸಂದರ್ಶನವೆಂದು ಕರೆಯಲಾಗಿದೆ. ಪ್ರಶ್ನಾವಳಿ ಮತ್ತು ಸಂದರ್ಶನವನ್ನು ಬೆರೆಸಿ ಪಡೆಯುವ ಮಾಹಿತಿ ಸಂಗ್ರಹದ ಒಂದು ಮಿಶ್ರತಳಿ ಈ ಚೌಕಟ್ಟುಳ್ಳ ಸಂದರ್ಶನ. ಅನಕ್ಷರಸ್ಥರ ಸಂಖ್ಯೆ ಹೆಚ್ಚಿರುವ ನಮ್ಮಂತಹ ಸಮಾಜದಲ್ಲಿ ಈ ಬಗೆಯ ಸಂದರ್ಶನ ಹೆಚ್ಚು ವ್ಯಾಪಕವಾಗಿ ನಡೆಯುತ್ತದೆ.

ಅನ್ ಸ್ಟ್ರಕ್ಚರ್ಡ್ ಅಥವಾ ಚೌಕಟ್ಟಿಲ್ಲದ ಸಂದರ್ಶನ ಸ್ಟ್ರಕ್ಚರ್ಡ್ ಅಥವಾ ಚೌಕಟ್ಟುಳ್ಳ ಸಂದರ್ಶನಕ್ಕೆ ವಿರುದ್ಧ ಎಂದು ತಿಳಿಯಲಾಗುತ್ತದೆ. ಅಂದರೆ ಸಂದರ್ಶನ ಸಂದರ್ಭದಲ್ಲಿ ಕೇಳಬೇಕಾದ ಪ್ರಶ್ನೆಗಳ ಬಗ್ಗೆ ಯಾವುದೇ ಬಗೆಯ ಪೂರ್ವತಯಾರಿ ಇಲ್ಲ ಎನ್ನುವ ಗ್ರಹಿತವಿದೆ. ಆದರೆ ಇಲ್ಲೂ ಸಾಕಷ್ಟು ಪೂರ್ವತಯಾರಿಗಳಿರುತ್ತವೆ. ಇಲ್ಲಿನ ಪೂರ್ವ ತಯಾರಿಗೂ ಚೌಕಟ್ಟುಳ್ಳ ಸಂದರ್ಶನದ ಪೂರ್ವತಯಾರಿಗೂ ವ್ಯತ್ಯಾಸವಿದೆ. ಚೌಕಟ್ಟುಳ್ಳ ಸಂದರ್ಶನದಲ್ಲಿ ಕೇಳಬೇಕಾದ ಎಲ್ಲ ಪ್ರಶ್ನೆಗಳನ್ನು ಕ್ರಮ ಪ್ರಕಾರ ಜೋಡಿಸಿಕೊಳ್ಳಲಾಗುತ್ತದೆ. ಸಂದರ್ಶಕ ಆ ಜೋಡಿಸಲ್ಪಟ್ಟ ಪ್ರಶ್ನಾವಳಿಗನುಸಾರ ಪ್ರಶ್ನೆಗಳನ್ನು ಕೇಳುತ್ತಾ ಹೋಗುತ್ತಾನೆ.

ಸಿದ್ಧಪಡಿಸಿದ ಪ್ರಶ್ನೆಗಳನ್ನು ಬಿಟ್ಟು ಬೇರೇನನ್ನು ಸಂದರ್ಶಕ ಕೇಳುವುದಿಲ್ಲ. ಆದರೆ ಚೌಕಟ್ಟಿಲ್ಲದ ಸಂದರ್ಶನದಲ್ಲಿ ಕ್ರಮಪ್ರಕಾರ ಜೋಡಿಸಲ್ಪಟ್ಟ ಪ್ರಶ್ನಾವಳಿ ಇರುವುದಿಲ್ಲ. ಹಾಗೆಂದು ಸಂದರ್ಶಕ ಬರಿಗೈಲಿ ಸಂದರ್ಶನ ಮಾಡುತ್ತಾನೆಂದಲ್ಲ. ಇಲ್ಲು ಅತ ಸಂಗ್ರಹಿಸ ಬೇಕಾದ ಮಾಹಿತಿಯ ಒಂದು ಸ್ಥೂಲ ಚಿತ್ರಣವನ್ನು ಹೊಂದಿರುತ್ತಾರೆ. ಯಾವೆಲ್ಲ ಕ್ಷೇತ್ರದ ಬಗ್ಗೆ ಮಾಹಿತಿ ಸಂಗ್ರಹಿಸಬೇಕು, ಯಾವ ಕ್ಷೇತ್ರದಿಂದ ಶುರು ಮಾಡಬೇಕು, ಪ್ರತೀ ಕ್ಷೇತ್ರದ ಮಾಹಿತಿ ಸಂಗ್ರಹಕ್ಕೆ ಎಷ್ಟು ಸಮಯ ವಿನಿಯೋಗಿಸಬೇಕು. ವಿವಿಧ ವಿಚಾರಗಳನ್ನು ಯಾವ ಕ್ರಮದಲ್ಲಿ ಕೇಳುತ್ತಾ ಬರಬೇಕು ಇತ್ಯಾದಿ ಪೂರ್ವ ತಯಾರಿಯನ್ನು ಸಂದರ್ಶಕ ಇಲ್ಲೂ ಮಾಡಿಕೊಂಡಿರುತ್ತಾರೆ. ಕನಿಷ್ಠ ಇಷ್ಟು ಪೂರ್ವ ತಯಾರಿ ಇಲ್ಲದಿದ್ದರೆ ಗಂಟೆಗಟ್ಟಲೆ ಮಾತಾಡಿಯೂ ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿ ಸಂಗ್ರಹವಾಗದಿರುವ ಸಾಧ್ಯತೆ ಇದೆ.

ಈ ಬಗೆಯ ಸಾಂಪ್ರದಾಯಿಕ ಸಂದರ್ಶನಗಳ ಬಗ್ಗೆ ಮಹಿಳಾವಾದಿಗಳು ಮತ್ತು ಗುಣಾತ್ಮಕ(ಕ್ವಾಲಿಟೇಟಿವ್) ಸಂಶೋಧನೆಗೆ ಮಹತ್ವ ನೀಡುವವರು ಹಲವಾರು ಆಕ್ಷೇಪಗಳನ್ನು ಎತ್ತಿದ್ದಾರೆ. ಅವುಗಳು ಇಂತಿವೆ. ಒಂದು, ಈ ಬಗೆಯ ಸಂದರ್ಶನದಲ್ಲಿ ಒಂದು ಬಗೆಯ ಯಜಮಾನಿಕೆಯ ಪ್ರದರ್ಶನವಿದೆ. ಸಂದರ್ಶಕ ಎಲ್ಲವನ್ನು ಬಲ್ಲ ಸರ್ವಜ್ಞನಂತೆ ಕಂಡರೆ ಸಂದರ್ಶಿನಿ ಏನನ್ನು ಅರಿಯದ ಅಜ್ಞಾನಿಯಂತೆ ಕಾಣುತ್ತಾನೆ/ಳೆ. ಎರಡು, ಅಧಿಕಾರಕ್ಕೆ ಸಂಬಂಧಿಸಿದ್ದು-ಸಂದರ್ಶಕ ಮತ್ತು ಸಂದರ್ಶಿನಿಯರ ನಡುವಿನ ಅಸಮಾನ ಅಧಿಕಾರ ಸ್ಥಾನಮಾನ. ಸಂದರ್ಶಕ ಅಧಿಕಾರವನ್ನೆಲ್ಲ ಮೈಗೂಡಿಸಿಕೊಂಡ ಸರ್ವಾಧಿಕಾರಿಯಂತೆ ಕಂಡರೆ ಸಂದರ್ಶಿನಿ ಅಧಿಕಾರವೇ ಇಲ್ಲದ ಬಲಿಪಶುವಿನಂತಿರ ಬೇಕಾಗುತ್ತದೆ. ಸಂದರ್ಶಕ ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುವ ಕೆಲಸ ಮಾತ್ರ ಸಂದರ್ಶಿನಿಯದ್ದಾಗಿರುತ್ತದೆ. ಇದೊಂದು ಬಗೆಯ ಖೈದಿಗಳ ವಿಚಾರಣೆಯಂತಾಗುತ್ತದೆ ಎನ್ನುವ ಅಭಿಪ್ರಾಯನೂ ಇದೆ. ಮೂರು, ಸಂದರ್ಶಕ ಮತ್ತು ಸಂದರ್ಶಿನಿ ನಡುವೆ ಭಾವನಾತ್ಮಕ ಸಂಬಂಧಗಳಿಗೆ ಅವಕಾಶ ಇಲ್ಲದಿರುವುದರಿಂದ ಅವರಿಬ್ಬರ ನಡುವೆ ಯಾವುದೇ ಬಗೆಯ ಸಂಬಂಧವೇ ಏರ್ಪಡುವುದಿಲ್ಲ. ಸಂಬಂಧವೇ ಏರ್ಪಡದಿದ್ದರೆ ಸಂವಾದ ಕಷ್ಟ. ಒಂದು ವೇಳೆ ಸಂವಾದ ನಡೆದರೂ ಅದು ವಾಸ್ತವಕ್ಕೆ ಹತ್ತಿರವಾದ ಮಾಹಿತಿ ನೀಡಬಹುದೆಂದು ನಂಬುವುದು ಇನ್ನು ಕಷ್ಟ. ನಾಲ್ಕು, ಸಂದರ್ಶನದ ಇಡೀ ಸಂದರ್ಭವನ್ನು ಅಧ್ಯಯನ ಉದ್ದೇಶಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಕ್ಕೆ ಮಾತ್ರ ಬಳಸಬೇಕೆನ್ನುವುದು ಸಂದರ್ಶಕ ಮತ್ತು ಸಂದರ್ಶಿನಿ ಇಬ್ಬರನ್ನು ಸಂದರ್ಶನ ಮಾಡುವ ಯಂತ್ರಗಳಂತೆ ಮತ್ತು ಸಂದರ್ಶನವನ್ನು ಒಂದು ಬಗೆಯ ಯಾಂತ್ರಿಕ ಪ್ರಕ್ರಿಯೆಯೆಂದು ತಿಳಿದಂತಾಗುತ್ತದೆ.[೨೨]

ಈ ಎಲ್ಲ ಆಕ್ಷೇಪಗಳ ಹಿನ್ನೆಲೆಯಲ್ಲಿ ಮಹಿಳಾವಾದಿಗಳು ಮತ್ತು ಗುಣಾತ್ಮಕ ಸಂಶೋಧನೆಗೆ ಮಹತ್ವ ನೀಡುವವರು ಸಾಂಪ್ರದಾಯಿಕ ಸಂದರ್ಶನ ವಿಧಾನದಲ್ಲೇ

ಹಲವಾರು ಮಾರ್ಪಾಟುಗಳನ್ನು ಸೂಚಿಸಿದ್ದಾರೆ. ಅವರುಗಳು ಸೂಚಿಸಿದ ಬದಲಾವಣೆಗಳು ಸಾಂಪ್ರದಾಯಿಕ ಸಂದರ್ಶನ ವಿಧಾನದಲ್ಲಿ ಗುರುತಿಸಿರುವ ಲೋಪದೋಷಗಳನ್ನು ದೂರ ಮಾಡುವಂತಿವೆ. ಒಂದು, ಸಂದರ್ಶಕ ಮತ್ತು ಸಂದರ್ಶಿನಿ ನಡುವೆ ಅಂತರ ಏರ್ಪಡಲು ಬಹುಮುಖ್ಯ ಕಾರಣ ಸಂದರ್ಶಿನಿಯನ್ನು ಮಾನವರಂತೆ ಕಾಣದೆ ಅಧ್ಯಯನಕ್ಕೆ ಒಳಪಡುವ ವಸ್ತುವಿನಂತೆ ನೋಡುವ ದೃಷ್ಟಿಕೋನ. ಎರಡು ಕಾರಣಗಳಿಂದ ಈ ದೃಷ್ಟಿಕೋನ ಪ್ರಾಪ್ತವಾಗುತ್ತದೆ. ಒಂದು, ವಿಜ್ಞಾನದ ವಿಧಾನವನ್ನು ಯಥಾ ಪ್ರಕಾರ ಅನುಸರಿಸುವುದರಿಂದ ಮತ್ತು ಎರಡು, ಜ್ಞಾನದ ಹರಿಕಾರನೆನ್ನುವ ಸಂಶೋಧಕನ ಯಜಮಾನಿಕೆ ಪ್ರವೃತ್ತಿಯಿಂದ ಈ ದೃಷ್ಟಿಕೋನ ಪ್ರಾಪ್ತವಾಗುತ್ತದೆ. ನಿಜವಾದ ಸಂದರ್ಶನ ನಡೆಯಬೇಕಾದರೆ ಈ ಎರಡೂ ದೃಷ್ಟಿಕೋನಗಳನ್ನು ಸಂದರ್ಶಕ ಬಿಡಬೇಕು. ಎರಡು, ಸಂದರ್ಶಕ ಮತ್ತು ಸಂದರ್ಶಿನಿ ನಡುವೆ ಅಂತರವಿರಬೇಕೆನ್ನುವ ಸಾಂಪ್ರದಾಯಿಕ ಸಂದರ್ಶನದ ಲಕ್ಷಣವನ್ನು ತಿರಸ್ಕರಿಸಿ ಅವರಿಬ್ಬರ ನಡುವೆ ಅಂತರವಿರಬೇಕಾಗಿಲ್ಲವೆಂದು ವಾದಿಸುತ್ತಾರೆ. ಅಂತರವಿಟ್ಟು ಕೊಂಡರೆ ಅವರಿಬ್ಬರ ನಡುವೆ ಯಾವುದೇ ಸಂಬಂಧ ಏರ್ಪಡಲು ಸಾಧ್ಯವಿಲ್ಲ. ಸಂಬಂಧವೇ ಏರ್ಪಡದಿದ್ದರೆ ಅರ್ಥಪೂರ್ಣ ಸಂಭಾಷಣೆಯೇ ಸಾಧ್ಯವಿಲ್ಲ. ಅರ್ಥಪೂರ್ಣ ಸಂಭಾಷಣೆಯೇ ನಡೆಯದಿದ್ದರೆ ಮಾಹಿತಿ ಸಂಗ್ರಹಿಸುವ ಕೆಲಸ ನಡೆಯಲು ಸಾಧ್ಯವಿಲ್ಲ. ಮೂರು, ಸಂದರ್ಶನ ಸಂದರ್ಭದಲ್ಲಿ ಕೇವಲ ಅಧ್ಯಯನ ಉದ್ದೇಶಗಳಿಗೆ ಸೀಮಿತಗೊಂಡಂತೆ ಮಾತುಕತೆ ನಡೆಯಬೇಕೆನ್ನುವುದು ಸರಿಯಲ್ಲ. ಸಂದರ್ಶಿನಿಯ ನಂಬಿಕೆ ಗಳಿಸುವುದು, ಆತ್ಮೀಯ ಸಂಬಂಧ ಬೆಳೆಸಿಕೊಳ್ಳುವುದು ಇತ್ಯಾದಿಗಳು ಮುಕ್ತ ಸಂಭಾಷಣೆಗೆ ಪೀಠಿಕೆ ರೂಪದಲ್ಲಿ ಕೆಲಸ ಮಾಡುತ್ತವೆ. ಮುಕ್ತ ಸಂಭಾಷಣೆ ನಡೆಯದಿದ್ದರೆ ವಾಸ್ತವಕ್ಕೆ ಹತ್ತಿರವಾದ ಮಾಹಿತಿ ಸಂಗ್ರಹಿಸಲು ಸಾಧ್ಯವಿಲ್ಲ.

ಮೇಲೆ ಸೂಚಿಸಿದ ಬದಲಾವಣೆಗಳನ್ನು ಅಳವಡಿಸಿಕೊಂಡ ಸಂದರ್ಶನದಿಂದ ವಾಸ್ತವಕ್ಕೆ ಹತ್ತಿರವಾದ ಮಾಹಿತಿ ಪಡೆಯಬಹುದೆನ್ನುವ ನಂಬಿಕೆ ಇದೆ. ಆದರೆ ಇಲ್ಲೂ ಕೆಲವು ಸಮಸ್ಯೆಗಳಿವೆ." ಒಂದು, ಕೇವಲ ಗುಣಾತ್ಮಕ ಸಂಶೋಧನೆ ಮಾತ್ರ ಮಹಿಳಾ ಅಥವಾ ಶೋಷಿತರ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಶಕ್ತ ಎನ್ನುವ ಗ್ರಹಿತವಿದೆ. ಮಹಿಳಾವಾದಿಗಳ ಮತ್ತು ಗುಣಾತ್ಮಕ ಸಂಶೋಧನಾವಾದಿಗಳ ಈ ನಿಲುವನ್ನು ಪರಿಮಾಣಾತ್ಮಕ (ಕ್ವಾಂಟಿಟೇವ್) ಸಂಶೋಧಕರು ಒಪ್ಪುವುದಿಲ್ಲ. ಪರಿಮಾಣಾತ್ಮಕ ಸಂಶೋಧಕರ ಪ್ರಕಾರ ಪರಿಮಾಣಾತ್ಮಕ ಸಂಶೋಧನೆಯ ಮೂಲಕ ಕೂಡ ಮಹಿಳಾ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಬಹುದು. ಉದಾಹರಣೆಗೆ ಮಹಿಳಾ ಜನಗಣತಿ, ಲಿಂಗ ಅನುಪಾತ, ಗಂಡು ಮಕ್ಕಳಿಗೆ ಹೋಲಿಸಿ ಹೆಣ್ಣು ಮಕ್ಕಳ ಜನನ ಮತ್ತು ಮರಣ ಸಂಖ್ಯೆ, ಗರ್ಭಿಣಿ ಸ್ತ್ರೀಯರ ಸ್ಥಿತಿ-ಗತಿ, ಪುರುಷರಿಗೆ ಹೋಲಿಸಿ ಮಹಿಳಾ ಕಾರ್ಮಿಕರ ಸ್ಥಿತಿಗತಿ ಇತ್ಯಾದಿ ಸಂಗತಿಗಳು ಪ್ರಾಪ್ತವಾಗುವುದು ಗುಣಾತ್ಮಕ ಸಂಶೋಧನೆಗಳಿಂದ. ಅಂಕಿ-ಅಂಶಗಳು ಮಹಿಳೆಯರ ಭೌತಿಕ ಬದುಕನ್ನು ಸುಧಾರಿಸಲು ಅಗತ್ಯವಿರುವ ಪಾಲಿಸಿಗಳನ್ನು ರೂಪುಗೊಳಿಸಲು ನೆರವಾಗುತ್ತವೆ. ಇಲ್ಲೆಲ್ಲ ಸಾಂಪ್ರದಾಯಿಕ

ಸಂದರ್ಶನದ ಬಳಿಕೆ ಸಾಧ್ಯ. ಆದುದರಿಂದ ಸಾಂಪ್ರದಾಯಿಕ ಸಂದರ್ಶನವನ್ನು ಸಾರಾಸಗಟಾಗಿ ತಿರಸ್ಕರಿಸುವ ಅಗತ್ಯವಿಲ್ಲ. ಜತೆಗೆ ಎಲ್ಲ ವಿಧದ ಸಂಶೋಧನೆಗೂ ಗುಣಾತ್ಮಕ ಸಂಶೋಧಕರು ಸೂಚಿಸಿದ ಸಂದರ್ಶನ ಉಪಯೋಗವಾಗುತ್ತದೆ ಎನ್ನುವ ತೀರ್ಮಾನವೂ ಸರಿಯಲ್ಲ. ಎರಡು, ಸಾಂಪ್ರದಾಯಿಕ ಸಂದರ್ಶನದಿಂದ ವಾಸ್ತವಕ್ಕೆ ಹತ್ತಿರವಾದ ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಿಲ್ಲವೆನ್ನುವುದು ಮಹಿಳಾವಾದಿಗಳು ಮತ್ತು ಗುಣಾತ್ಮಕ ಸಂಶೋಧಕರು ಸಾಂಪ್ರದಾಯಿಕ ಸಂದರ್ಶನದ ವಿರುದ್ಧ ಮಾಡಿದ ದೊಡ್ಡ ಆರೋಪ. ಸಾಂಪ್ರದಾಯಿಕ ಸಂದರ್ಶನದ ವಿರುದ್ಧದ ಅವರ ಈ ವಾದಕ್ಕೆ ವಿಶೇಷ ಬಲವಿಲ್ಲ. ಯಾಕೆಂದರೆ ಅವರ ಈ ಆರೋಪ ನಿಂತಿರುವುದು ಸಂಶೋಧನೆಯ ಸಾಂಪ್ರದಾಯಿಕ ವ್ಯಾಖ್ಯಾನದ ಮೇಲೆ. ಸಂಶೋಧನೆಯನ್ನು ವಾಸ್ತವದ ಒಂದು ಹುಡುಕಾಟವೆಂದು ಸಂಶೋಧನೆಯ ಸಾಂಪ್ರದಾಯಿಕ ವ್ಯಾಖ್ಯಾನ ಹೇಳುತ್ತದೆ. ಆದರೆ ಸಂಶೋಧನೆಯ ಈ ವ್ಯಾಖ್ಯಾನ ಎಂದೋ ತನ್ನ ಮೌಲ್ಯ ಕಳೆಕೊಂಡಿದೆ. ಇಂದು ಸಂಶೋಧನೆಯ ವ್ಯಾಖ್ಯಾನವನ್ನು ವಾಸ್ತವದ ಹುಡುಕಾಟಕ್ಕೆ ಸೀಮಿತಗೊಳಿಸುವುದು ಕಷ್ಟ. ಸಂಶೋಧನೆಯ ವ್ಯಾಖ್ಯೆ ವಿಸ್ತರಿಸಿದೆ. ವಾಸ್ತವದ ಹುಡುಕಾಟದ ಜತೆಗೆ ಇತರ ದೃಷ್ಟಿ ಕೋನಗಳು ಸೇರಿಕೊಂಡಿವೆ. ಅವುಗಳಲ್ಲಿ ಸಂಶೋಧನೆಯನ್ನು ಕಲ್ಪಿತ ಅಥವಾ ರಚಿತ ಸತ್ಯಗಳು ರೂಪುಗೊಳ್ಳುವ ಬಗೆಯನ್ನು ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯೆಂದು ವ್ಯಾಖ್ಯಾನಿಸುವುದು ಕೂಡ ಸೇರಿದೆ. ಹೀಗೆ ಸಂಶೋಧನೆಯ ಸಾಂಪ್ರದಾಯಿಕ ವ್ಯಾಖ್ಯಾನವನ್ನು ಇಟ್ಟುಕೊಂಡು ಮಾಹಿತಿ ಸಂಗ್ರಹಿಸುವ ವಿಧಾನದ ಬಗ್ಗೆ ಎಷ್ಟೇ ಕ್ರಾಂತಿಕಾರಕ ನಿಲುವನ್ನು ತಳೆದರೂ ಪ್ರಯೋಜನವಿಲ್ಲ ಎನ್ನುವ ನಿಲುವೂ ಇದೆ.

ಸಂಶೋಧನೆಯ ಹೊಸ ವ್ಯಾಖ್ಯಾನದ ಹಿನ್ನೆಲೆಯಲ್ಲಿ ಸಂದರ್ಶನ ಕೂಡ ಹೊಸ ಬಗೆಯಲ್ಲಿ ನಿರ್ವಚಿಸಲ್ಪಟ್ಟಿದೆ. ಸಂದರ್ಶನದ ಹೊಸ ರೂಪದಲ್ಲಿ ಅದನ್ನು ವಾಸ್ತವದ ಬಗ್ಗೆ ಮಾಹಿತಿ ಸಂಗ್ರಹಿಸುವ ವಿಧಾನವೆಂದು ತಿಳಿಯಲಾಗಿಲ್ಲ. ಸಂದರ್ಶನ ಕೂಡ ಒಂದು ವಿಷಯವಾಗಿ ಅಥವಾ ಅಧ್ಯಯನದ ವಸ್ತುವಾಗಿ ಮಾರ್ಪಾಟುಗೊಂಡಿದೆ. ಈ ವಿಷಯವನ್ನು ಅಥವಾ ವಸ್ತುವನ್ನು ವಿಶ್ಲೇಷಿಸುವ ಮೂಲಕ ಸಂಶೋಧನೆಯ ಉದ್ದೇಶಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಸಂದರ್ಶನವನ್ನು ಈ ದೃಷ್ಟಿಯಲ್ಲಿ ನೋಡಲು ಬಹುಮುಖ್ಯ ಕಾರಣ ಸಂದರ್ಶಿನಿಗಳು ವಾಸ್ತವವನ್ನು ಯಥಾ ರೀತಿಯಲ್ಲಿ ಮಂಡಿಸುವುದಿಲ್ಲ ಎನ್ನುವ ಗ್ರಹಿಕೆ. ಸಂದರ್ಶಿನಿಗಳು ವಾಸ್ತವಕ್ಕೆ ಹತ್ತಿರವಾದ ಮಾಹಿತಿಯನ್ನು ಕೊಡದಿರಲು ಹಲವು ಕಾರಣಗಳಿರಬಹುದು. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಚರ್ಚಿಸಲಾಗಿದೆ. ಒಂದು, ವಾಸ್ತವವನ್ನು ಮರೆಮಾಚುವ ಅಥವಾ ತಿರುಚುವ ಮಾಹಿತಿಗಳನ್ನು ನೀಡುವುದು. ಎರಡು, ತಮ್ಮ ವೈಯಕ್ತಿಕ ಲೋಪಗಳನ್ನು ಮುಚ್ಚಿಕೊಳ್ಳಲು ಪೂರಕವಾಗುವ ಮಾಹಿತಿಗಳನ್ನು ನೀಡುವುದು. ಮೂರು, ಬಹು ಮಾಹಿತಿಗಳನ್ನು ನೀಡುವುದು ಅಥವಾ ಸಂದರ್ಶಕನಿಗೊಂದು

ಮಾಹಿತಿ ಮತ್ತು ಇತರ ಗ್ರಾಹಕರಿಗೆ ಮತ್ತೊಂದು ಮಾಹಿತಿ ನೀಡುವುದು. ವಾಸ್ತವವನ್ನು ಮರೆಮಾಚುವ ಮಾಹಿತಿ ನೀಡುವುದನ್ನು ನಾವು ದಿನನಿತ್ಯ ಮಾಧ್ಯಮಗಳಲ್ಲಿ (ಟೀವಿ, ದಿನಪತ್ರಿಕೆ, ವಾರಪತ್ರಿಕೆ ಇತ್ಯಾದಿಗಳಲ್ಲಿ) ಕಾಣುತ್ತೇವೆ. ಎರಡು ರಾಷ್ಟ್ರಗಳ ನಡುವೆ ಯುದ್ಧದ ಸಂದರ್ಭದಲ್ಲಿ ಪ್ರತಿ ದೇಶ ಕೂಡ ತನ್ನ ಸೈನಿಕರ ನಷ್ಟವನ್ನು ಕಡಿಮೆ ಪ್ರಮಾಣದಲ್ಲಿ ಬಿಂಬಿಸಿ ವಿರೋಧಿ ರಾಷ್ಟ್ರದ ಸೈನಿಕರ ಸಾವಿನ ಸಂಖ್ಯೆಯನ್ನು ದ್ವಿಗುಣಗೊಳಿಸಿ ಹೇಳುವ ಕ್ರಮವನ್ನು ನಾವು ನೋಡುತ್ತಲೇ ಬಂದಿದ್ದೇವೆ. ಅದೇ ರೀತಿಯಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಮಾಡುವ ಆರೋಪ ಮತ್ತು ಪ್ರತ್ಯಾರೋಪಗಳು. ಸರಕಾರದ ಯಾವುದೇ ನೀತಿ ಬಗ್ಗೆ ಆಡಳಿತ ಪಕ್ಷದ ರಾಜಕಾರಣಿಯನ್ನು ಸಂದರ್ಶನ ಮಾಡಿದರೆ ಅದರಿಂದ ದೇಶಕ್ಕೆ ಮತ್ತು ಜನರಿಗೆ ಖಂಡಿತವಾಗಿಯೂ ಒಳಿತಾಗುತ್ತದೆ ಎನ್ನುವ ಮಾಹಿತಿ ದೊರಕಿದರೆ ವಿರೋಧ ಪಕ್ಷದ ರಾಜಕಾರಣಿ ಪ್ರಕಾರ ಸರಕಾರದ ಯಾವ ನೀತಿ ಕೂಡ ದೇಶ ಅಥವಾ ಜನರ ಉದ್ಧಾರಕ್ಕೆ ಪೂರಕವಾಗಿರುವುದಿಲ್ಲ.

ಈ ರೀತಿಯಲ್ಲಿ ವಾಸ್ತವವನ್ನು ಯಾವುದೇ ರೀತಿಯಲ್ಲಿ ಬಿಂಬಿಸದ ಮಾಹಿತಿಯನ್ನು ನೀಡುವುದು ಕೇವಲ ರಾಜಕಾರಣಿಗಳ ಗುಣವೆಂದು ತಿಳಿಯಬೇಕಾಗಿಲ್ಲ. ಸಾಮಾನ್ಯ ಜನರು ಕೂಡ ಈ ಕೆಲಸ ಮಾಡುತ್ತಾರೆ. ಪಂಚಾಯತ್ ಯೋಜನೆ ತಯಾರಿಸುವ ಸಂದರ್ಭದಲ್ಲಿ ಹಳ್ಳಿಯಲ್ಲಿದ್ದ ಅಂಗನವಾಡಿಗಳ ಕೆಲಸಕಾರ್ಯಗಳನ್ನು ತಿಳಿಯಲು ಕಾರ್ಯಕರ್ತೆಯರನ್ನು ಮಾತಾಡಿಸಲಾಯಿತು. ಅಂಗನವಾಡಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಹತ್ತರಿಂದ ಹದಿನೈದು ಮಕ್ಕಳಿದ್ದರು. ಎಷ್ಟು ಮಕ್ಕಳು ದಾಖಲಾಗಿದ್ದಾರೆ ಎಂದು ಕೇಳಲಾಯಿತು? ನಲ್ವತ್ತು ಮಕ್ಕಳು ಎಂದರು ಕಾರ್ಯಕರ್ತೆ. ದಿನನಿತ್ಯ ಎಷ್ಟು ಹಾಜರಾಗುತ್ತಾರೆ ಎಂದರೆ ಎಲ್ಲ ಮಕ್ಕಳು ಹಾಜರಾಗುತ್ತಾರೆ ಎಂದರು. ಇವತ್ಯಾಕೆ ಇಷ್ಟುಕಡಿಮೆ ಸಂಖ್ಯೆಯಲ್ಲಿದ್ದಾರೆ ಎಂದು ಕೇಳಿದರೆ ಊರ ಜಾತ್ರೆ ಇದೆ ಆದುದರಿಂದ ಮಕ್ಕಳು ಬಂದಿಲ್ಲ ಎಂದರು. ಊರವರಲ್ಲಿ ಕೇಳಿದರೆ ಇಪ್ಪತ್ತರಿಂದ ಹೆಚ್ಚು ಮಕ್ಕಳು ಅಂಗನವಾಡಿಯಲ್ಲಿ ಹಾಜರಿರುವುದಿಲ್ಲ ಎನ್ನುತ್ತಾರೆ. ಊರವರ ಮತ್ತು ಕಾರ್ಯಕರ್ತೆಯರ ಲೆಕ್ಕಚಾರದಲ್ಲಿ ಇಷ್ಟೊಂದು ವ್ಯತ್ಯಾಸ ಯಾಕಿದೆ ಎಂದು ತಿಳಿಯಲು ಮತ್ತೊಮ್ಮೆ ಅಂಗನವಾಡಿಗೆ ಭೇಟಿ ನೀಡಲಾಯಿತು. ಆವಾಗಲೂ ಹದಿನೈದರಿಂದ ಇಪ್ಪತ್ತು ಮಕ್ಕಳಿದ್ದರು. ಕಾರ್ಯಕರ್ತೆಯಲ್ಲಿ ಕೇಳಿದರೆ ಜಾಸ್ತಿ ಮಕ್ಕಳಿದ್ದಾರೆ ಆದರೆ ಆವತ್ತು ಮತ್ಯಾವುದೋ ಕಾರಣಕ್ಕಾಗಿ ಅಂಗನವಾಡಿಗೆ ಬಂದಿಲ್ಲ ಎಂದರು. ಬೇರೆ ಬೇರೆ ಮೂಲಗಳಲ್ಲಿ ವಿಚಾರಿಸದ ನಂತರ ತಿಳಿದು ಬಂದ ಸಂಗತಿ ಹೀಗಿತ್ತು. ಒಂದು ನಿರ್ದಿಷ್ಟ ಸಂಖ್ಯೆಯಲ್ಲಿ ಮಕ್ಕಳಿದ್ದರೆ ಮಾತ್ರ ಅಂಗನವಾಡಿ ತೆರೆಯಲು ಅವಕಾಶ ಇದೆ. ಮಕ್ಕಳ ಸಂಖ್ಯೆ ಇಲಾಖೆ ನಿಗಧಿಪಡಿಸಿದ ಸಂಖ್ಯೆಗಿಂತ ಕಡಿಮೆ ಆದರೆ ಅಂಗನವಾಡಿ ತೆರೆಯಲು ಅವಕಾಶ ಇರುವುದಿಲ್ಲ. ಅಂಗನವಾಡಿ ಮುಚ್ಚಿದರೆ ತಾನು ಉದ್ಯೋಗ ಕಳೆದುಕೊಳ್ಳಬೇಕೆಂಬ ಭಯದಿಂದ ಮತ್ತು ತನ್ನ ಉದ್ಯೋಗವನ್ನು ರಕ್ಷಿಸುವ ಉದ್ದೇಶದಿಂದ ಕಾರ್ಯಕರ್ತೆ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸಿದ್ದಾರೆ. ಇದು ಕೇವಲ

ಅಂಗನವಾಡಿ ಮತ್ತು ಅಲ್ಲಿನ ಕಾರ್ಯಕರ್ತೆಯರ ಸಮಸ್ಯೆ ಅಲ್ಲ. ಎಲ್ಲೆಲ್ಲಿ ಕೆಲವೊಂದು ಸಂಗತಿಗಳ ಇರುವಿಕೆ ಮತ್ತು ಉದ್ಯೋಗದ ಸ್ಥಿರತೆ ನಡುವೆ ಸಂಬಂಧ ಇದೆಯೋ ಅಲ್ಲೆಲ್ಲ ಹೆಚ್ಚು ಕಡಿಮೆ ಇದೇ ಸ್ಥಿತಿ ಇರಬಹುದು. ಇಂತಹ ಸಂದರ್ಭದಲ್ಲಿ ಸಂದರ್ಶನವನ್ನು ಮಾಹಿತಿಯ ಮೂಲವೆಂದು ತಿಳಿಯುವ ಬದಲು ಯಾಕೆ ಜನರು ತಮ್ಮದೇ ಮಾಹಿತಿಯನ್ನು ಸೃಷ್ಟಿಸುತ್ತಾರೆ ಎನ್ನುವುದರ ಮೇಲೆ ಕೇಂದ್ರೀಕರಿಸಿದರೆ ಹೊಸ ವಿಚಾರಗಳ ಬೆಳಕಿಗೆ ಬರಬಹುದು.

ಆತನೊಬ್ಬ ಮಧ್ಯಮ ವರ್ಗಕ್ಕೆ ಸೇರಿದ ಯುವಕ. ಸಾಧಾರಣ ಓದು ಮತ್ತು ಉದ್ಯೋಗ ಇತ್ತು. ಮದುವೆ ಆಯಿತು. ಒಂದೆರಡು ಮಕ್ಕಳಾದವು. ಸಂಸಾರದ ಖರ್ಚು ಮತ್ತು ಆತನ ಸಂಬಳದ ನಡುವೆ ಸಂಬಂಧ ಇಲ್ಲದಾಯಿತು. ಸಂಸಾರ ಭಾರವಾಗಲು ಆರಂಭವಾಯಿತು. ಭಾರ ಕಡಿಮೆ ಮಾಡಲು ಕುಡಿತ ಶುರುವಾಯಿತು. ಆರಂಭದಲ್ಲಿ ವಾರಕ್ಕೊಮ್ಮೆ ಸಣ್ಣ ಪ್ರಮಾಣದಲ್ಲಿ ಶುರುವಾಯಿತು. ಬರಬರುತ್ತಾ ಕುಡಿತದ ದಿನಗಳು ಹೆಚ್ಚಾದವು. ಪ್ರಮಾಣವು ಹೆಚ್ಚಾಯಿತು. ಕುಡಿತದ ಆರಂಭದ ದಿನಗಳಲ್ಲಿ ತಾನು ಮಾಡುವುದು ಸರಿಯಲ್ಲ ಎನ್ನುವ ಪ್ರಜ್ಞೆಯಿಂದ ಹೆಂಡತಿ ಮಕ್ಕಳ ಜತೆ ದೀನನಾಗಿ ವರ್ತಿಸಿದ. ಆದರೆ ಬರಬರುತ್ತಾ ತನ್ನ ದಾರಿ ವಿಶೇಷ ಅನೈತಿಕವಾದುದೇನಲ್ಲ ಎಂದಾಯಿತು. ಕುಡಿತ ಹಕ್ಕಾಯಿತು. ಅದಕ್ಕೆ ಹೊಂದಾಣಿಕೆ ಮಾಡಿಕೊಳ್ಳುವುದು ಹೆಂಡತಿ ಮಕ್ಕಳ ಕರ್ತವ್ಯವಾಯಿತು. ದಿನಾ ತಡವಾಗಿ ಬರುವುದು, ಹೆಂಡತಿಗೆ ದನಕ್ಕೆ ಬಡಿದಂತೆ ಬಡಿಯುವುದು, ಹೆಂಡತಿ ಕೂಡಿಟ್ಟ ಪುಡಿಕಾಸನ್ನು ಕುಡಿತಕ್ಕೆ ಬಳಸುವುದು ಇತ್ಯಾದಿಗಳು ದಿನಾ ಘಟಿಸಲು ಶುರುವಾಯಿತು. ಇವನ ಈ ಚಟವನ್ನು ಕೆಲವು ದಿನ ಸಹಿಸಿದ ಹೆಂಡತಿ ಒಂದು ದಿನ ಮನೆಬಿಟ್ಟು, ತನ್ನ ತವರು ಮನೆಗೆ ಹೋದಳು. ಹೆಂಡತಿ ಹೋದ ನಂತರ ಕೆಲವು ದಿನ ಖಾಲಿ ಇದ್ದು ನಂತರ ಬೇರೊಬ್ಬ ಹೆಂಗಸಿನೊಂದಿಗೆ ಬದುಕುತ್ತಿದ್ದಾನೆ. ಆತನೊಂದಿಗೆ ತನ್ನ ಹಿಂದಿನ ವೈವಾಹಿಕ ಬದುಕಿನ ಬಗ್ಗೆ ವಿಚಾರಿಸಿದರೆ, 'ನಾನು ನನ್ನ ಹೆಂಡತಿಯನ್ನು ತುಂಬಾ ಪ್ರೀತಿಸುತ್ತಿದ್ದೆ. ಅವಳು ನನ್ನನ್ನು ತುಂಬಾ ಪ್ರೀತಿಸುತ್ತಿದ್ದಳು. ಕೆಲಸ ಬಿಟ್ಟು ನಾನು ಮನೆಗೆ ಬರುವುದನ್ನೇ ಆಕೆ ಕಾದು ಕುಳಿತಿರುತ್ತಿದ್ದಳು. ದೇವರಿಗೆ ನಮ್ಮ ನೆಮ್ಮದಿಯ ಬದುಕು ಹಿಡಿಸಲಿಲ್ಲ ಎಂದು ಕಾಣುತ್ತದೆ. ದಿನಗಳು ಉರುಳಿದಂತೆ ನನ್ನ ಹೆಂಡತಿಯ ಪ್ರೀತಿ ಕಡಿಮೆ ಆಗುತ್ತಾ ಬಂತು. ಕಾರಣವೇನೆಂದು ನನಗೆ ಇಂದು ತಿಳಿದಿಲ್ಲ. ನನ್ನ ಬರುವಿಕೆಗಾಗಿ ಕಾದಿರುವಾಕೆ ನಾನು ಮನೆಯೊಳಗೆ ಬಂದರು ಗಮನಿಸದಂತಿರುತ್ತಿದ್ದಳು. ಮಕ್ಕಳಾದ ನಂತರ ಸಂಸಾರದ ಕಷ್ಟಗಳು ಜಾಸ್ತಿಯಾದವು. ಅವುಗಳನ್ನು ಅವಳು ಹಂಚಿಕೊಳ್ಳಬೇಕೆಂದು ನಾನೆಂದು ಒತ್ತಾಯಿಸಲಿಲ್ಲ. ನನಗೆ ತಿಳಿದಿತ್ತು ಅವಳು ಹೊರಗೆ ದುಡಿದು ತರುವುದು ನನಗೆ ಶೋಭೆ ಅಲ್ಲವೆಂದು. ನಾನೆಂದು ಅವಳನ್ನು ಸಂಸಾರದ ಖರ್ಚು ಭರಿಸಲು ದುಡಿಯೆಂದು ಒತ್ತಾಯಿಸಿಲ್ಲ. ಆದರೂ ಅವಳಿಗೆ ಏನೋ ದುಃಖ, ನೋವು. ಒಂದು ದಿನ ಮನೆ ಬಿಟ್ಟು, ಹೋಗಿಯೇ ಬಿಟ್ಟಳು. ನನ್ನ ನೋವನ್ನು ಕೇಳುವವರಿಲ್ಲ.'

ಹೀಗೆ ಸಾಗಿತ್ತು ಆತನ ವೈವಾಹಿಕ ಜೀವನದ ವಿವರಣೆ. ಅಲ್ಲಿ ತನ್ನ ಹಲವಾರು ವೈಫಲ್ಯಗಳನ್ನು (ಕುಡಿತ, ಹೆಂಡತಿ ಮಕ್ಕಳನ್ನು ಪ್ರೀತಿಯಿಂದ ಸಾಕದಿರುವುದು, ಸಂಸಾರದೂಗಿಸಲು ಬೇಕಾದ ಆದಾಯ ಗಳಿಸಲು ವಿಫಲನಾದುದು) ಮುಚ್ಚಿಕೊಳ್ಳುವ ಎಲ್ಲ ಮಾಹಿತಿಗಳಿದ್ದವು.

ಇನ್ನು ಕೆಲವು ಸಂದರ್ಭಗಳಲ್ಲಿ ಸಂದರ್ಶಿನಿಗಳು ಒಂದೇ ವಿಚಾರದ ಬಗ್ಗೆ ಬೇರೆ ಬೇರೆ ಮೂಲಗಳಿಗೆ ಬೇರೆ ಬೇರೆ ಮಾಹಿತಿ ನೀಡುತ್ತಾರೆ. ಉತ್ತರ ಕರ್ನಾಟಕದ ಒಂದು ಹಳ್ಳಿಯಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಮೇಲಿನ ಅಧ್ಯಯನಕ್ಕೆ ಸಂದರ್ಶನ ಸಂದರ್ಭದಲ್ಲಿ ಕುಟುಂಬದ ಭೂ ಹಿಡುವಳಿ ಬಗ್ಗೆ ಪ್ರಶ್ನೆ ಇತ್ತು. ಭೂಮಿ ಇಲ್ಲದವರು ಮತ್ತು ಕಡಿಮೆ ಭೂಮಿ ಇದ್ದವರು ತಮ್ಮ ಯಥಾ ಸ್ಥಿತಿಯನ್ನು ಹೇಳಿಕೊಂಡರು. ಆದರೆ ಸಾವಿರ ಎಕರೆಗಿಂತಲೂ ಹೆಚ್ಚು ಭೂಮಿ ಇದ್ದವರು ಸರಿಯಾದ ಮಾಹಿತಿ ನೀಡಲೇ ಇಲ್ಲ. ಅಂತಹ ಒಂದು ಉದಾಹರಣೆ ನೋಡುವ. ಹಳ್ಳಿಯಲ್ಲಿ ಸಾವಿರ ಎಕರೆಗಿಂತ ಹೆಚ್ಚು ಭೂಮಿ ಇರುವ ಐದು ಕುಟುಂಬಗಳಲ್ಲಿ ಆತನದ್ದು ಒಂದು. 'ಯಜಮಾನ್ರೆ ತಮಗೆ ಎಷ್ಟು ಎಕರೆ ಭೂಮಿ ಇದೆ?' ಎಂದು ಸಂದರ್ಶಕರು ಕೇಳಿದರು. 'ಸುಮಾರು ಐವತ್ತರಿಂದ ಅರುವತ್ತು ಎಕರೆ ಇರಬಹುದು' ಎಂದರು ಭೂಮಾಲೀಕರು. 'ತಮಗೆ ಸಾವಿರ ಎಕರೆಗಿಂತಲೂ ಹೆಚ್ಚು ಭೂಮಿ ಇದೆ ಎಂದು ಸುದ್ದಿ ಇದೆ', ಎಂದು ಸಂದರ್ಶಕರು ಹೇಳಿದರು. 'ಈ ಮಾಹಿತಿ ಯಾವ ಉದ್ದೇಶಕ್ಕೆ ಬೇಕು ನಿಮಗೆ?' ಎಂದು ಮರುಪ್ರಶ್ನೆ ಹಾಕಿದರು ಭೂಮಾಲೀಕರು. ಮಾಹಿತಿ ಸಂಗ್ರಹಿಸುವ ಉದ್ದೇಶವನ್ನು ಸಂದರ್ಶಕರು ಹೇಳಿದರು. 'ನೋಡಿ ಸ್ವಾಮಿ ನಿಮ್ಮ ಉದ್ದೇಶಕ್ಕೆ ಬೇಕಾದರೆ ನನಗೆ ನೂರಾರು ಎಕರೆ ಭೂಮಿ ಇದೆ ಎಂದು ಬರೆದುಕೊಳ್ಳಿ' ಎಂದರು. 'ಹಾಗೆ ಖುಷಿ ಬಂದಂತೆ ಬರೆದುಕೊಳ್ಳಲು ಆಗುವುದಿಲ್ಲ. ನೀವು ಸರಿಯಾದ ಮಾಹಿತಿ ನೀಡಬೇಕು' ಎಂದರು ಸಂದರ್ಶಕರು. 'ನಾನು ಹೇಳಿದ್ದು ಸರಿಯಾದ ಮಾಹಿತಿನೇ. ಭೂದಾಖಲೆ ಪತ್ರಗಳಲ್ಲಿ ನಮೂದಿಸಿರುವ ಎಕರೆಗಳನ್ನೇ ಹೇಳಿದ್ದು', ಎಂದರು. 'ನಿಮಗೆ ಸಾವಿರಾರು ಎಕರೆ ಭೂಮಿ ಇದೆ ಎಂದು ಸುದ್ದಿ ಇದೆಯಲ್ಲ. ಆದರೆ ಬಗ್ಗೆ ಏನು ಹೇಳುತ್ತೀರಿ? ಎಂದು ಸಂದರ್ಶಕರು ಪ್ರಶ್ನಿಸಿದರು. 'ನಿಮ್ಮ ದಾಖಲೆಗೆ ಏನು ಬೇಕೋ ಆ ಮಾಹಿತಿ ನಾನು ನೀಡಿದ್ದೇನೆ. ನಾನು ಇನ್ನು ಮುಂದೆ ಹೇಳಲಿರುವುದನ್ನು ನೀವು ದಾಖಲಿಸಬಾರದು. ನನಗೆ ಸಾವಿರ ಎಕರೆಗಿಂತಲೂ ಹೆಚ್ಚು ಭೂಮಿ ಇದೆ, ನಿಜ. ಎಪ್ಪತ್ತರ ಭೂಮಸೂದೆಯ ಹಾವಳಿಯನ್ನು ತಪ್ಪಿಸಿಕೊಳ್ಳಲು ದಾಖಲೆಯಲ್ಲಿ ಭೂಹಿಡುವಳಿಯನ್ನು ಕಡಿಮೆಗೊಳಿಸಲಾಗಿದೆ. ಭೂಮಿಯೆಲ್ಲ ನನ್ನ ಸ್ವಾಧೀನ ಇರುವುದಾದರೂ ದಾಖಲೆ ಪ್ರಕಾರ ಅವೆಲ್ಲ ನಮ್ಮ ಮಕ್ಕಳು ಮತ್ತು ಕುಟುಂಬದ ಸದಸ್ಯರ ಹೆಸರಲ್ಲಿದೆ' ಎಂದರು. ಹೀಗೆ ಭೂಮಾಲೀಕರು ತಮ್ಮ ಸಂದರ್ಶಕರ ಹಿನ್ನೆಲೆಯನ್ನು ವಿಚಾರಿಸಿ ಮಾಹಿತಿ ನೀಡುತ್ತಾರೆ. ಸಂಶೋಧನ ಉದ್ದೇಶಕ್ಕೆ ಎಷ್ಟು ಮಾಹಿತಿ ಬೇಕೋ ಅಷ್ಟನ್ನು ಮಾತ್ರ ನೀಡುವುದು. ಇನ್ನು ದಾಖಲಿಸದೇ ಕೇವಲ ಲೋಕಾಭಿರಾಮ ರೂಪದಲ್ಲಿ ಮಾತುಕತೆ ಆಡಿದರೆ ಸ್ವಲ್ಪ ಹೆಚ್ಚು ಮಾಹಿತಿ ನೀಡುವುದು. ಕಚೇರಿ ವ್ಯವಹಾರಕ್ಕಾದರೆ ಬೇರೆಯದೇ ಮಾಹಿತಿ

ನೀಡುವುದು. ಹೀಗೆ ಬೇರೆ ಬೇರೆ ಮೂಲಗಳಿಗೆ ಬೇರೆ ಬೇರೆ ಮಾಹಿತಿ ನೀಡುವುದು ಕ್ರಮ. ಇವುಗಳಲ್ಲಿ ಯಾವುದು ವಾಸ್ತವಕ್ಕೆ ಹತ್ತಿರವಾದುದು ಅಥವಾ ದೂರವಾದದ್ದು ಎಂದು ತೀರ್ಮಾನಕ್ಕೆ ಬರುವುದು ಕಷ್ಟ.[೧೬]

ಪ್ರಶ್ನಾವಳಿ

ಪ್ರಶ್ನಾವಳಿಯ ಮೂಲಕ ಮಾಹಿತಿ ಸಂಗ್ರಹಿಸುವುದನ್ನು ಸಂಶೋಧನೆಯ ಒಂದು ಶಾಸ್ತ್ರೀಯ ಮಾಹಿತಿ ಸಂಗ್ರಹ ವಿಧಾನ ಎನ್ನಬಹುದು. ಈ ವಿಧಾನವನ್ನು ಎಲ್ಲ ಬಗೆಯ ಸಂಶೋಧನೆಗಳಲ್ಲೂ ಬಳಸಬಹುದು. ಆದರೂ ಕೆಲವೊಂದು ಸಂದರ್ಭದಲ್ಲಿ ಈ ವಿಧಾನ ನಾವು ಬಯಸಿದ ರೂಪದಲ್ಲಿ ಮಾಹಿತಿಯನ್ನು ಒದಗಿಸಲು ವಿಫಲವಾಗಬಹುದು. ಅಂದರೆ ಈ ವಿಧಾನಕ್ಕೆ ಅದರದ್ದೇ ಆದ ಇತಿಮಿತಿಗಳಿವೆ. ಪ್ರಶ್ನಾವಳಿಗಳು ವಿವಿಧ ಮಾದರಿಗಳನ್ನು ವಿವರಿಸಿದ ನಂತರ ಈ ವಿಧಾನದ ಇತಿಮಿತಿಗಳನ್ನು ವಿವರಿಸಲಾಗುವುದು.[೧೭] ಪ್ರಶ್ನಾವಳಿಯಲ್ಲಿ ಯಾವ ಪ್ರಶ್ನೆಗಳನ್ನು ಕೇಳಬೇಕೆನ್ನುವುದನ್ನು ನಮ್ಮ ಅಧ್ಯಯನ ಉದ್ದೇಶ ನಿರ್ಧರಿಸುತ್ತದೆ. ನಮ್ಮ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಕೆಲಸವನ್ನು ಸಂಶೋಧನೆಯಲ್ಲಿ ಮಾಡುತ್ತಿರುತ್ತೇವೆ. ಆದರೆ ಈ ಉತ್ತರಗಳು ಸಂಪೂರ್ಣವಾಗಿ ತಾವು ಸಂಗ್ರಹಿಸುವ ಮಾಹಿತಿಯಲ್ಲಿ ನಿಂತಿದೆ ಎನ್ನುವುದು ಸರಿಯಲ್ಲ. ಯಾಕೆಂದರೆ ನಾವು ಯಾವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದೇವೋ ಆ ಪ್ರಶ್ನೆಗಳಿಗೆ ಈಗಾಗಲೇ ಬೇರೆ ಪ್ರದೇಶಗಳಲ್ಲಿ ಮತ್ತು ಕಾಲಮಾನಗಳಲ್ಲಿ ಉತ್ತರ ಕಂಡುಕೊಂಡಿರಬಹುದು. ಅಂದರೆ ನಾವು ಸಂಶೋಧನೆಗೆ ಎತ್ತಿಕೊಂಡ ವಿಚಾರದ ಬಗ್ಗೆ ಅಥವಾ ಪ್ರಶ್ನೆಗಳ ಬಗ್ಗೆ ಈಗಾಗಲೇ ಕೆಲವೊಂದು ತೀರ್ಮಾನಗಳು ರೂಪಿತಗೊಂಡಿವೆ. ನಮ್ಮ ಕೆಲಸ ಈಗಾಗಲೇ ರೂಪಿತಗೊಂಡ ತೀರ್ಮಾನಗಳನ್ನು ಮತ್ತೊಂದು ದೇಶ ಮತ್ತು ಕಾಲದಲ್ಲಿ ಪರೀಕ್ಷಿಸುವುದು ಅಥವಾ ಈಗಾಗಲೇ ರೂಪಿತಗೊಂಡ ಉತ್ತರಗಳಿಗಿಂತ ಹೆಚ್ಚಿನ ವಿವರಣೆಗೆ ಪ್ರಯತ್ನಿಸುವುದು. ಆದುದರಿಂದ ಯಾವುದೋ ಒಂದು ಸಂಶೋಧನಾ ಪ್ರಶ್ನೆಗೆ ಸಂಬಂಧಿಸಿದ ಕ್ಷೇತ್ರಕಾರ್ಯ ಆರಂಭಿಸುವ ಮುನ್ನ ಸಂಶೋಧಕ ಖಾಲಿ ಹಾಳೆಯಾಗಿರುವುದಿಲ್ಲ. ಸಂಶೋಧಕನಿಗೆ ತಾನು ಪರೀಕ್ಷಿಸಲು ಹೊರಟಿರುವ ವಿಚಾರಗಳ ಬಗ್ಗೆ ಸ್ವಲ್ಪ ಮಟ್ಟಿನ ತಿಳುವಳಿಕೆ ಅಥವಾ ಕೆಲವೊಂದು ಗ್ರಹಿಕೆಗಳಿರುತ್ತವೆ. ಈ ತಿಳುವಳಿಕೆ ಅಥವಾ ಗ್ರಹಿಕೆಗಳು ಆತ ತನ್ನ ಪ್ರಶ್ನಾವಳಿಯಲ್ಲಿ ಕೇಳಬೇಕಾದ ಪ್ರಶ್ನೆಗಳನ್ನು ರೂಪಿಸಲು ನೆರವಾಗುತ್ತದೆ.[೧೮] ಉದಾಹರಣೆಗೆ ರೈತರ ಆತ್ಮಹತ್ಯೆಯ ಕಾರಣಗಳನ್ನು ಅಧ್ಯಯನ ಮಾಡುವುದು ನಮ್ಮ ಸಂಶೋಧನೆಯ ಉದ್ದೇಶವೆಂದು ತಿಳಿಯುವ. ಈಗಾಗಲೇ ಆದ ಅಧ್ಯಯನಗಳು ಮತ್ತು ವರ್ತಮಾನದಲ್ಲಿ ವಿವಿಧ ಮಾಧ್ಯಮಗಳಲ್ಲಿ ನಡೆಯುವ ಚರ್ಚೆಯ ಆಧಾರದಲ್ಲಿ ರೈತರ ಆತ್ಮಹತ್ಯೆ ಕಾರಣಗಳನ್ನು ಪಟ್ಟಿ ಮಾಡಬಹುದು. ಈಗಾಗಲೇ ಆದ ಅಧ್ಯಯನ ಮತ್ತು ಮಾಧ್ಯಮಗಳ ಚರ್ಚೆಯ ಹಿನ್ನೆಲೆಯಲ್ಲಿ ರೈತರ ಆತ್ಮಹತ್ಯೆಗೆ ಈ ಕೆಳಗಿನ ಕಾರಣಗಳನ್ನು ಪಟ್ಟಿಮಾಡಲಾಗಿದೆ. ಒಂದು, ಜಾಗತೀಕರಣ ಅಥವಾ ಕೆಳವರ್ಗದ ಪರ ಮಾರುಕಟ್ಟೆಯಲ್ಲಿ ಪ್ರವೇಶಿಸುವ ತನ್ನ

ಹಿಂದಿನ ಪಾತ್ರವನ್ನು ಪ್ರಭುತ್ವ ನಿರ್ವಹಿಸಲು ವಿಫಲವಾಗಿರುವುದು. ಎರಡು, ರೈತನ ಲೋಕದೃಷ್ಟಿ ಮತ್ತು ಆತ ವ್ಯವಹರಿಸಬೇಕಾದ ವ್ಯಾಪಾರಿಯ ಲೋಕದೃಷ್ಟಿಯ ನಡುವಿನ ವ್ಯತ್ಯಾಸ. ಮೂರು, ಹಣಕಾಸು, ಸಾರಿಗೆ, ಸಂಪರ್ಕ ಇತ್ಯಾದಿಗಳ ಕೊರತೆ. ನಾಲ್ಕು, ರೈತ ಬದುಕುವ ಒಟ್ಟು ಪರಿಸರ. ಹೀಗೆ ಹಲವಾರು ಕಾರಣಗಳನ್ನು ರೈತನ ಆತ್ಮಹತ್ಯೆಗೆ ಸಂಬಂಧಿಸಿದಂತೆ ಪಟ್ಟಿಮಾಡಬಹುದು. ನಾವು ಪ್ರಶ್ನಾವಳಿಯಲ್ಲಿ ಕೇಳಬೇಕಾದ ಪ್ರಶ್ನೆಗಳನ್ನು ರೂಪಿಸುವಲ್ಲಿ ಈ ಅಂಶಗಳು ಸಹಕಾರಿಯಾಗುತ್ತವೆ.

ಸಾಮಾನ್ಯವಾಗಿ ಮೂರು ವಿಧದ ಪ್ರಶ್ನೆಗಳನ್ನು ಪ್ರಶ್ನೆ ಪತ್ರಿಕೆಯಲ್ಲಿ ಕಾಣಬಹುದು.[೯] 'ಒಂದು, ಮುಕ್ತ ಉತ್ತರಕ್ಕೆ ಅವಕಾಶ ನೀಡುವ ಪ್ರಶ್ನೆಗಳು. ಎರಡು, ಮುಕ್ತ ಉತ್ತರಕ್ಕೆ ಅವಕಾಶ ನೀಡದ ಪ್ರಶ್ನೆಗಳು. ಮೂರು, ಸಂಕೇತಗಳನ್ನು ಹೊಂದಿರುವ ಪ್ರಶ್ನೆಗಳು. ಮುಕ್ತ ಉತ್ತರಕ್ಕೆ ಅವಕಾಶ ನೀಡುವ ಪ್ರಶ್ನೆಗಳನ್ನು ಇಂಗ್ಲೀಷಿನಲ್ಲಿ ಒಪನ್ ಎಂಡೆಡ್ ಪ್ರಶ್ನೆಗಳೆಂದು ಕರೆಯುತ್ತಾರೆ. ಅಧ್ಯಯನಕ್ಕೆ ಒಳಗಾಗುವವರು ನೀಡುವ ಎಲ್ಲ ಬಗೆಯ ಉತ್ತರಗಳನ್ನು ಒಳಗೊಳ್ಳುವಂತಹ ಅವಕಾಶ ಇಲ್ಲಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಕ್ಷೇತ್ರದಿಂದ ಬರಬಹುದಾದ ಉತ್ತರಗಳ ಬಗ್ಗೆ ಯಾವುದೇ ಪೂರ್ವ ನಿರ್ಧಾರಗಳು ಇಲ್ಲಿಲ್ಲ. ಸಂಶೋಧನೆಗೆ ಒಳಪಡುವ ಪರಿಸರದ ಬಗ್ಗೆ ಹೆಚ್ಚಿನ ಮತ್ತು ಪರಿಸರ ನಿಷ್ಠ ಮಾಹಿತಿ ಪಡೆಯುವ ದೃಷ್ಟಿಯಿಂದ ಇದು ಉತ್ತಮ ವಿಧಾನ. ಈ ಅನುಕೂಲದ ಜತೆಗೆ ಒಂದು ಅನಾನುಕೂಲವು ಈ ವಿಧದ ಪ್ರಶ್ನೆಯ ಭಾಗವಾಗಿದೆ. ಹಲವು ಬಗೆಯ ಉತ್ತರಗಳು ಕ್ಷೇತ್ರಕಾರ್ಯದಿಂದ ಬರುವುದರಿಂದ ಅವುಗಳನ್ನು ಕ್ರೋಢೀಕರಿಸುವ ಕೆಲಸ ಸ್ವಲ್ಪ ತ್ರಾಸದಾಯಕವಾಗುತ್ತದೆ. ಉದಾಹರಣೆಗೆ ಒಂದು ಸಾವಿರ ವ್ಯಕ್ತಿಗಳನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಲು ಮುಕ್ತ ಉತ್ತರಕ್ಕೆ ಅವಕಾಶ ನೀಡುವ ಪ್ರಶ್ನೆಗಳನ್ನು ಬಳಸಲಾಗಿದೆ ಎಂದಿಟ್ಟುಕೊಳ್ಳೋಣ. ಯಾವುದೋ ಒಂದು ಪ್ರಶ್ನೆಗೆ ಸಾವಿರ ವ್ಯಕ್ತಿಗಳಿಂದ ಸಾವಿರ ಉತ್ತರ ಬರುತ್ತದೆ ಎಂದು ಊಹಿಸಿಕೊಳ್ಳುವ. ಈ ಉತ್ತರಗಳನ್ನು ಹೇಗೆ ಕ್ರೋಢೀಕರಿಸುವುದು? ಕ್ರೋಡೀಕರಿಸಿದಿದ್ದರೆ ಸಂಶೋಧನೆ ಮಾಡುವ ವಿಷಯದ ಬಗ್ಗೆ ಯಾವುದೇ ತೀರ್ಮಾನಕ್ಕೆ ಬರುವುದು ಕಷ್ಟವಾಗುತ್ತದೆ. ಈ ಸಮಸ್ಯೆಯನ್ನು ಪರಿಹರಿಸುವ ದೃಷ್ಟಿಯಿಂದ ಮುಕ್ತ ಉತ್ತರಕ್ಕೆ ಅವಕಾಶ ನೀಡದ ಪ್ರಶ್ನೆಗಳು ರೂಪಿಸಿಕೊಳ್ಳಬಹುದು. ಸಂಗ್ರಹಿಸಿದ ಮಾಹಿತಿಯನ್ನು ಪರಿಷ್ಕರಿಸುವ ದೃಷ್ಟಿಯಿಂದ ಮುಕ್ತ ಉತ್ತರಗಳಿಗೆ ಅವಕಾಶ ನೀಡದ ಪ್ರಶ್ನೆಗಳು ಹೆಚ್ಚು ಸೂಕ್ತ. ಈ ಮಾದರಿಯ ಪ್ರಶ್ನಾವಳಿಗಳನ್ನು ಪ್ರಶ್ನೆಗಳ ಜತೆ ಉತ್ತರನೂ ಇರುತ್ತದೆ. ಉದಾಹರಣೆಗೆ ಅಧ್ಯಯನಕ್ಕೆ ಒಳಗಾಗುವ ಕುಟುಂಬಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಪ್ರಶ್ನೆಗಳ ಜತೆ ಈ ಕೆಳಗಿನಂತೆ ಉತ್ತರಗಳನ್ನು ಕೊಡಬಹುದು. ಕುಟುಂಬದ ಮುಖ್ಯಸ್ಥರ ಲಿಂಗ ಎನ್ನುವ ಪ್ರಶ್ನೆಗೆ ಪುರುಷ/ ಮಹಿಳೆ ಎನ್ನುವ ಆಯ್ಕೆಗಳನ್ನು ಕೊಡಬಹುದು. ಅದೇ ರೀತಿ ಕುಟುಂಬದ ಸದಸ್ಯರ ಶಿಕ್ಷಣದ ಮಟ್ಟ ಗುರುತಿಸುವ ಪ್ರಶ್ನೆ ಮುಂದೆ ಅನಕ್ಷರಸ್ಥರು/ಪ್ರಾಥಮಿಕ/ಪ್ರೌಢಶಾಲೆ/

ಪದವಿ ಪೂರ್ವ/ಕಾಲೇಜು ಹೀಗೆ ಹಲವಾರು ಹಂತಗಳನ್ನು ಕೊಡಬಹುದು. ಉತ್ತರಿಸುವವರ ಕೆಲಸ ಪ್ರಶ್ನಾವಳಿಯಲ್ಲಿರುವ ಉತ್ತರಗಳಲ್ಲಿ ತಮಗೆ ಸಂಬಂಧಿಸಿದ್ದನ್ನು ಆಯ್ಕೆ ಮಾಡುವುದು ಮಾತ್ರ.

ಪ್ರಶ್ನೆಗಳ ಜತೆಗೆ ಉತ್ತರ ಮತ್ತು ಉತ್ತರದ ಜತೆಗೆ ಸಂಕೇತಗಳನ್ನು ನೀಡುವುದು ಮೂರನೇ ವಿಧದ ಪ್ರಶ್ನೆ ಪತ್ರಿಕೆಯ ಕ್ರಮ. ಹಾಗೆ ನೋಡಿದರೆ ಎರಡು ಮತ್ತು ಮೂರನೆ ವಿಧದ ಪ್ರಶ್ನೆಗಳ ನಡುವೆ ವಿಶೇಷ ವ್ಯತ್ಯಾಸವಿಲ್ಲ. ಇಲ್ಲು ಪ್ರಶ್ನೆಯೊಂದಿಗೆ ಉತ್ತರವಿರುತ್ತದೆ. ಆದರೆ ಇಲ್ಲೊಂದು ಸಣ್ಣ ವ್ಯತ್ಯಾಸವಿದೆ. ಅದೇನೆಂದರೆ ಉತ್ತರದ ಜತೆಗೆ ಸಂಕೇತ (ಕೋಡ್) ಕೂಡ ಇರುತ್ತದೆ. ಸಂಕೇತವನ್ನು ಸಂಖ್ಯಾರೂಪದಲ್ಲಿ ಅಥವಾ ಅಕ್ಷರಗಳ ರೂಪದಲ್ಲಿ ನೀಡುವ ಕ್ರಮ ಇದೆ. ಉದಾಹರಣೆಗೆ ವ್ಯಕ್ತಿಯೊಬ್ಬನ ವಾರ್ಷಿಕ ಆದಾಯ ವನ್ನು ಅಳೆಯುವ ಪ್ರಶ್ನೆಯನ್ನು ಸಂಕೇತ ಸಮೇತ ಈ ಕೆಳಗಿನಂತೆ ರೂಪಿಸಬಹುದು. ಪ್ರಶ್ನೆ - ಎಲ್ಲ ಮೂಲಗಳಿಂದ ಬರುವ ನಿಮ್ಮ ವಾರ್ಷಿಕ ಆದಾಯ ಎಷ್ಟು?' ಉತ್ತರ - ೧. '೧೦ ಸಾವಿರಗಳಿಂದ ಕಡಿಮೆ - ಅ', ೨. ೧೦ ರಿಂದ ೨೦ ಸಾವಿರ - ಆ,' ೩. ೨೦ ರಿಂದ ೩೦ ಸಾವಿರ - ಇ.' ಇಲ್ಲಿ ಅ, ಆ, ಇಗಳು ಸಂಕೇತಗಳಾಗಿ ಕೆಲಸ ಮಾಡುತ್ತವೆ. ಪ್ರಶ್ನಾವಳಿಯನ್ನು ತುಂಬುವವರು ತಮ್ಮ ವಾರ್ಷಿಕ ಆದಾಯಕ್ಕೆ ಸಮ ಅಥವಾ ಹತ್ತಿರ ಇರುವ ಉತ್ತರದ ಎದುರು ಇರುವ ಸಂಕೇತದ ಮೇಲೆ ಸರಿ ಚಿಹ್ನೆಯನ್ನು (ಟಿಕ್) ಗುರುತು ಮಾಡಿದರೆ ಸಾಕು. ಇದೇ ರೀತಿಯಲ್ಲಿ ಪ್ರಶ್ನಾವಳಿಯಲ್ಲಿ ಇರುವ ಎಲ್ಲ ಅಥವಾ ಬಹುತೇಕ ಪ್ರಶ್ನೆಗಳನ್ನು ಮತ್ತು ಅವುಗಳಿಗೆ ನೀಡಬೇಕಾದ ಉತ್ತರಗಳನ್ನು ಸಂಕೇತ ಸಮೇತ ನೀಡಲಾಗುತ್ತದೆ. ಪ್ರಶ್ನಾವಳಿಗಳನ್ನು ಕ್ರೋಢಿಕರಿಸುವ ಸಂದರ್ಭದಲ್ಲಿ ಉತ್ತರದ ಜತೆ ಸಂಕೇತಗಳನ್ನು ನೀಡುವ ಕ್ರಮ ಉಪಯೋಗಕ್ಕೆ ಬರುತ್ತದೆ. ತಾಂತ್ರಿಕ ಅನುಕೂಲತೆಯ ದೃಷ್ಟಿಯಿಂದ ಇದೊಂದು ಉತ್ತಮ ವಿಧಾನ. ಮಾಹಿತಿ ಸಂಗ್ರಹಿಸಲು ಬೇಕಾಗುವ ಸಮಯ ಮತ್ತು ಸಂಪನ್ಮೂಲಗಳ ದೃಷ್ಟಿಯಿಂದ ಮುಚ್ಚಿದ ಮತ್ತು ಸಂಕೇತಗಳನ್ನು ಹೊಂದಿರುವ ಪ್ರಶ್ನೆಗಳು ಅನುಕೂಲ. ಮಾಹಿತಿ ಸಂಗ್ರಹಿಸಲು ಹೆಚ್ಚು ಸಮಯ ವಿನಿಯೋಗಿಸಿದಷ್ಟು ಸಂಶೋಧನಾ ವೆಚ್ಚ ಹೆಚ್ಚಾಗುವುದು. ಆದುದರಿಂದ ಇಲ್ಲಿ ಸಂಪನ್ಮೂಲದ ಉಳಿತಾಯನೂ ಆಗುವುದೆಂದು ತಿಳಿಯಲಾಗಿದೆ. ಆದರೆ ಇವುಗಳು ಅಧ್ಯಯನ ಕ್ಷೇತ್ರದ ವಾಸ್ತವಿಕತೆಯನ್ನು ಹಿಡಿದಿಡುವಲ್ಲಿ ವಿಶೇಷ ಸಹಕಾರಿಯಲ್ಲ.

ಹಾಗೆ ನೋಡಿದರೆ ಯಾವುದೇ ಪ್ರಶ್ನಾವಳಿ (ಮುಚ್ಚಿದ ಅಥವಾ ತೆರೆದ ಅಥವಾ ಸಂಕೇತ ಇರುವ ಪ್ರಶ್ನೆಗಳನ್ನು ಹೊಂದಿರುವ) ಕ್ಷೇತ್ರದ ವಾಸ್ತವಿಕತೆಯನ್ನು ಸಂಗ್ರಹಿಸಲು ಉತ್ತಮ ಅಸ್ತ್ರವಲ್ಲ. ಪ್ರಶ್ನಾವಳಿಯ ಬಹುದೊಡ್ಡ ಕೊರತೆಯೆಂದರೆ ಅದು ಯಾವತ್ತೂ ಕ್ಷೇತ್ರದ ವಾಸ್ತವತೆಯಿಂದ ಕೆಲವು ಹೆಜ್ಜೆ ಹಿಂದಿರುತ್ತದೆ. ಮಾಹಿತಿ ಸಂಗ್ರಹಿಸಲು ಹೊರಟಿರುವ ಕ್ಷೇತ್ರದ ಬಗ್ಗೆ ಪ್ರಶ್ನಾವಳಿ ರೂಪಿಸುವವನಿಗೆ ಸಾಕಷ್ಟು ಜ್ಞಾನ ಇರಬೇಕಾಗುತ್ತದೆ. ಒಂದು ವೇಳೆ ಜ್ಞಾನ ಇರದಿದ್ದರೆ ಪ್ರಶ್ನಾವಳಿಯಲ್ಲಿ ಇರುವ ಪ್ರಶ್ನೆಗಳಿಗೂ ಕ್ಷೇತ್ರದಲ್ಲಿ ಸಿಗುವ

ಉತ್ತರಗಳಿಗೂ ಅಜಗಜಾಂತರ ವ್ಯತ್ಯಾಸವಾಗಬಹುದು. ಉದಾಹರಣೆಗೆ ಸ್ನೇಹಿತರೊಬ್ಬರು ಗ್ರಾಮೀಣ ಸಾಂಪ್ರದಾಯಿಕ ಕಸುಬುಗಳ ಮೇಲೆ ಪಿಹೆಚ್.ಡಿ ಅಧ್ಯಯನ ಮಾಡುತ್ತಿದ್ದರು. ಅವರು ಮಾಹಿತಿ ಸಂಗ್ರಹಕ್ಕಾಗಿ ಒಂದು ಪ್ರಶ್ನಾವಳಿ ರೂಪಿಸಿದ್ದರು. ಅದರಲ್ಲಿ ಗ್ರಾಮೀಣ ಕಸುಬನ್ನು ಯಾವುದೋ ಒಂದು ಆಧುನಿಕ ಕೈಗಾರಿಕಾ ಉತ್ಪಾದನೆಯಂತೆ ಪರಿಭಾವಿಸಿ ಪ್ರಶ್ನಾವಳಿಯನ್ನು ರೂಪಿಸಿದ್ದರು. ಅವರ ಪ್ರಶ್ನಾವಳಿಯಲ್ಲಿದ್ದ ಕೆಲವೊಂದು ಪ್ರಶ್ನೆಗಳ ಮಾದರಿ ಇಂತಿವೆ. ಸಾಂಪ್ರದಾಯಿಕ ಉದ್ಯೋಗಕ್ಕೆ (ಬುಟ್ಟಿ, ಹೆಣೆಯುವುದು, ಚಾಪೆ ನೇಯುವುದು, ಕುಂಬಾರಿಕೆ ಇತ್ಯಾದಿ ಕಸುಬುಗಳಿಗೆ) ವಿನಿಯೋಜನೆ ಆಗುವ ಸ್ಥಿರ ಮತ್ತು ಚರ ಬಂಡವಾಳ ಎಷ್ಟು? ಸ್ಥಿರ ಬಂಡವಾಳದ ಮೂಲ ಏನು? ಉತ್ಪಾದನೆಯ ಮಾರುಕಟ್ಟೆ, ಎಲ್ಲಿ? ಒಟ್ಟು ವ್ಯವಹಾರದಿಂದ ಗಳಿಸುವ ಲಾಭ ಎಷ್ಟು? ಈ ರೀತಿಯಲ್ಲಿ ಹಲವಾರು ಪ್ರಶ್ನೆಗಳಿದ್ದವು. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಅವರ ಪ್ರಶ್ನಾವಳಿಯಲ್ಲಿದ್ದ ಬಹುತೇಕ ಪ್ರಶ್ನೆಗಳಿಗೆ ಉತ್ತರ ಸಿಗಲಿಲ್ಲ. ಯಾಕೆಂದರೆ ಅವು ಯಾವುವು ಕೂಡ ಸಾಂಪ್ರದಾಯಿಕ ಕಸುಬುಗಾರಿಕೆಯ ವಾಸ್ತವಿಕತೆಯನ್ನು ಹಿಡಿದುಕೊಡಲು ಶಕ್ತವಾಗಿರಲಿಲ್ಲ. ಹಾಗೆಂದು ಅವರು ಪ್ರತ್ಯೇಕ ಪ್ರಶ್ನಾವಳಿ ಮಾಡಿ ಮಾಹಿತಿ ಸಂಗ್ರಹ ಮಾಡಿಲ್ಲ. ಸಾಂಪ್ರದಾಯಿಕ ಕಸುಬುದಾರರು ನೀಡಿದ ಉತ್ತರವನ್ನು ತಾವು ಈಗಾಗಲೇ ಸಿದ್ಧಪಡಿಸಿದ ಪ್ರಶ್ನೆಗಳಿಗೆ ಹೊಂದಾಣಿಕೆ ಮಾಡಲು ಪ್ರಯತ್ನಿಸಿದರು. ಉದಾಹರಣೆಗೆ ಬುಟ್ಟಿ ಹೆಣೆಯುವವರಲ್ಲಿ ನಿಮ್ಮ ಸ್ಥಿರ ಬಂಡವಾಳ ಏನೆಂದು ಕೇಳಿದರೆ ಬಂಡವಾಳ ಗಿಂಡವಾಳ ನಮಗೆ ಅರ್ಥವಾಗು ವುದಿಲ್ಲ ಸ್ವಾಮಿ. ನಮ್ಮ ಕೈಗೊಂದು ಕತ್ತಿ ತಲೆಗೊಂದು ಮುಟ್ಟಾಲೆ (ಭಾರ ಹೊರುವಾಗ ತಲೆಗೆ ನೋವಾಗದಿರಲೆಂದು ಅಡಿಕೆ ಸೋಗೆಯಿಂದ ತಯಾರಿಸಿದ ತಲೆ ಮೇಲೆ ಇರಿಸಿ ಕೊಳ್ಳುವ ಒಂದು ವಸ್ತು) ಇದ್ದರೆ ಸಾಕು. ನಾವು ಕಾಡಿಗೆ ಹೋಗಿ ಬಳ್ಳಿಗಳನ್ನು ತರುತ್ತೇವೆ. ಅವುಗಳನ್ನು ಒಣಗಿಸಿ ಬುಟ್ಟಿ ತಯಾರಿಸುತ್ತೇವೆ.' ಎಂದು ಉತ್ತರಿಸುತ್ತಿದ್ದರು. ಅವರ ಈ ಉತ್ತರದಲ್ಲಿ ಸಂಶೋಧಕರು ತಮ್ಮ ಸ್ಥಿರ ಮತ್ತು ಚರ ಬಂಡವಾಳದ ಕಲ್ಪನೆಗೆ ಬೇಕಾದ ಮಾಹಿತಿಯನ್ನು ಸೋಸಿ ತೆಗೆಯುತ್ತಿದ್ದರು. ಕತ್ತಿ ಮತ್ತು ಮುಟ್ಟಾಲೆಯ ಬೆಲೆ ಸ್ಥಿರ ಬಂಡವಾಳವಾದರೆ ಕಾಡಿಂದ ತರುವ ಬಳ್ಳಿಗಳ ಬೆಲೆ ಚರ ಬಂಡವಾಳವಾಗುತ್ತಿತ್ತು.

ಇದು ಸಂಶೋಧನೆಯ ಕ್ಷೇತ್ರದ ವಾಸ್ತವತೆಯನ್ನು ಸಂಶೋಧಕನ ಪ್ರಶ್ನಾವಳಿಗೆ ಇಳಿಸುವ ಕ್ರಮ. ಅಂದರೆ ಪ್ರಶ್ನಾವಳಿಯಲ್ಲಿದ್ದ ವಾಸ್ತವಕ್ಕೆ (ಕ್ಷೇತ್ರಕಾರ್ಯ ಮಾಡುವ ಮುನ್ನ ವಾಸ್ತವದ ಬಗ್ಗೆ ಸಂಶೋಧಕನಲ್ಲಿರುವ ಚಿತ್ರಣ) ಕ್ಷೇತ್ರದಲ್ಲಿರುವ ವಾಸ್ತವತೆಯನ್ನು ಹೊಂದಾಣಿಕೆ ಮಾಡುವುದು. ಕ್ಷೇತ್ರದಲ್ಲಿರುವ ವಾಸ್ತವ ಪ್ರಶ್ನಾವಳಿಯಲ್ಲಿದ್ದ ವಾಸ್ತವ ದೊಂದಿಗೆ ತಾಳೆ ಹೊಂದದಿದ್ದರೆ ಪ್ರಶ್ನಾವಳಿಯನ್ನು ಬದಲಾಯಿಸುವ ಪ್ರಶ್ನೆ ಇಲ್ಲ. ಕ್ಷೇತ್ರದಲ್ಲಿನ ವಾಸ್ತವತೆಯನ್ನು ಪ್ರಶ್ನಾವಳಿಯಲ್ಲಿನ ವಾಸ್ತವತೆಯೊಂದಿಗೆ ಹೇಗಾದರೂ ಮಾಡಿ ಹೊಂದಾಣಿಕೆ ಮಾಡುವುದು ಬಹುತೇಕ ಸಂಶೋಧನೆಗಳ ಕ್ರಮ. ಈ ಕ್ರಮದಲ್ಲಿ ಸಂಗ್ರಹಿಸಿದ ಮಾಹಿತಿಯಿಂದ ಚರಿತ್ರೆ ಅಥವಾ ಆರ್ಥಿಕ ಅಥವಾ ರಾಜಕೀಯ ಬದುಕಿನ

ಬಗ್ಗೆ ಯಾವ ಚಿತ್ರಣ ಸಾಧ್ಯ? ಇದರ ಜತೆಗೆ ನಮ್ಮಲ್ಲಿನ ಅನಕ್ಷರಸ್ಥತೆ ಪ್ರಶ್ನಾವಳಿಯ ಸೀಮಿತ ಅನ್ವಯಿಕೆಗೆ ಕಾರಣವಾಗಿದೆ. ಮಾಹಿತಿ ಸಂಗ್ರಹಕ್ಕಾಗಿ ನಿಜವಾದ ಅರ್ಥದಲ್ಲಿ ಪ್ರಶ್ನಾವಳಿ ಬಳಸುವುದೆಂದರೆ ಕೇವಲ ಪ್ರಶ್ನಾವಳಿ ಮಾತ್ರ ಕ್ಷೇತ್ರ ಕಾರ್ಯಮಾಡುವುದು. ಅಂದರೆ ಪ್ರಶ್ನಾವಳಿಯನ್ನು ನೇರವಾಗಿ ಅಥವಾ ಅಂಚೆ ಮೂಲಕ ಸಂದರ್ಶಿನಿಗೆ ಕಳುಹಿಸಿ ಮಾಹಿತಿ ಸಂಗ್ರಹ ಮಾಡುವುದು. ಅಂತಹ ಪ್ರಶ್ನಾವಳಿಯನ್ನು ತಯಾರಿಸಬೇಕಾದರೆ ಸಂಶೋಧಕನಿಗೆ ತಾನು ಸಂಶೋಧನೆ ಮಾಡುವ ಕ್ಷೇತ್ರದ ಆಳವಾದ ಅರಿವು ಬೇಕು. ಜತೆಗೆ ಪ್ರಶ್ನಾವಳಿಯಲ್ಲಿ ತುಂಬುವವರಿಗೆ ಯಾವುದೇ ರೀತಿಯ ಸಂದೇಹಕ್ಕೂ ಎಡೆಗೊಡದಂತೆ ಪ್ರಶ್ನೆಗಳನ್ನು ರೂಪಿಸಬೇಕಾಗುತ್ತದೆ. ಈ ಎಲ್ಲದರ ಜತೆಗೆ ಅಧ್ಯಯನ ಕ್ಷೇತ್ರದಲ್ಲಿ ಸಾಕಷ್ಟು ಓದಿದ ಕುಟುಂಬಗಳಿರುವುದು ಕೂಡ ಪ್ರಶ್ನಾವಳಿ ಮೂಲಕ ಮಾಹಿತಿ ಸಂಗ್ರಹಿಸಲು ಅನಿವಾರ್ಯ. ಆದರೆ ಭಾರತದಂತಹ ಬಡ ಮತ್ತು ಸಾಕಷ್ಟು ಪ್ರಮಾಣದಲ್ಲಿ ಅಕ್ಷರ ಜ್ಞಾನ ಇಲ್ಲದಿರುವ ಕಡೆ ಪ್ರಶ್ನಾವಳಿ ಮೂಲಕ ಮಾಹಿತಿ ಸಂಗ್ರಹಿಸುವುದು ಸಾಧ್ಯವಿಲ್ಲದ ಕೆಲಸ. ಆದರೂ ಇಲ್ಲಿ ಪ್ರಶ್ನಾವಳಿ ಮೂಲಕ ಮಾಹಿತಿ ಸಂಗ್ರಹಿಸುವ ಕ್ರಮ ಇದೆ. ಆದರ ಇದು ಮೇಲೆ ವಿವರಿಸಿದ ರೀತಿಯಲ್ಲಿ ಅಲ್ಲ. ಇಲ್ಲಿ ಪ್ರಶ್ನಾವಳಿಯಲ್ಲಿರುವ ಪ್ರಶ್ನೆಗಳನ್ನು ಜನರಿಗೆ ಕೇಳಿ ಅವರಿಂದ ಬಂದ ಉತ್ತರವನ್ನು ಪ್ರಶ್ನಾವಳಿಯಲ್ಲಿ ದಾಖಲಿಸುವುದನ್ನು ಪ್ರಶ್ನಾವಳಿ ಮೂಲಕ ಮಾಹಿತಿ ಸಂಗ್ರಹಿಸುವುದೆಂದು ತಿಳಿಯಲಾಗಿದೆ. ಇದನ್ನು ಸಂಶೋಧನಾ ಭಾಷೆಯಲ್ಲಿ ಅನುಸೂಚಿ ಬಳಕೆ ಎಂದು ವ್ಯಾಖ್ಯಾನಿಸಿಕೊಳ್ಳಲಾಗಿದೆ. ಅನುಸೂಚಿಯು 'ಪ್ರಶ್ನಾವಳಿಯಾಗಿದ್ದು ಸಂದರ್ಶಕನು ಸಂದರ್ಶಿನಿಯಿಂದ ಮುಖಾಮುಖಿ ಪ್ರಶ್ನೆಗಳನ್ನು ಕೇಳಿ ಉತ್ತರವನ್ನು ದಾಖಲಿಸಿಕೊಳ್ಳುವ ವಿಧಾನ.'[೨೦] ನಮ್ಮಲ್ಲಿನ ಪ್ರಶ್ನಾವಳಿಯ ಬಳಕೆಯನ್ನು ಚೌಕಟ್ಟುಳ್ಳ ಸಂದರ್ಶನವೆಂದರೂ ತಪ್ಪಾಗಲಾರದು.

ಈಗಾಗಲೇ ಮಂಡಿತವಾದ ವಾದಗಳ ಸಂಗ್ರಹದ ಜತೆಗೆ ಹೊಸ ಸಾಕ್ಷಿ ಪುರಾವೆಗಳ ಸಂಗ್ರಹ ವಾದ ಪ್ರತಿಪಾದನೆಗೆ ಅಗತ್ಯವೆಂದು ಈ ಅಧ್ಯಾಯದಲ್ಲಿ ವಾದಿಸಲಾಗಿದೆ. ಈಗಾಗಲೇ ಮಂಡಿತವಾದ ವಾದಗಳು ಹಲವು ರೂಪದಲ್ಲಿರುತ್ತವೆ. ಲೇಖನ, ಪುಸ್ತಕ, ಪ್ರಬಂಧ, ವರದಿ ಇತ್ಯಾದಿ ಬರಹ ರೂಪದಲ್ಲಿರಬಹುದು. ಮತ್ತೆ ಕೆಲವು ಮೌಖಿಕ ರೂಪದಲ್ಲಿರಬಹುದು. ಈ ಮೂಲಗಳಿಂದ ಮಾಹಿತಿ ಸಂಗ್ರಹಿಸುವಾಗ ಅನುಸರಿಸಬೇಕಾದ ಕೆಲವು ಎಚ್ಚರಿಕೆಗಳನ್ನು ಅಧ್ಯಾಯದಲ್ಲಿ ನೋಡಿದ್ದೇವೆ. ಈ ಎಲ್ಲ ಎಚ್ಚರಿಕೆಗಳ ಮುಖ್ಯ ಉದ್ದೇಶ ವಿವಿಧ ಮೂಲಗಳಲ್ಲಿ ಮಂಡಿತವಾದ ವಾದಗಳ ಸಾಚಾತನವನ್ನು ಪರೀಕ್ಷಿಸುವುದು. ವ್ಯಕ್ತಿಗಳು, ಸಂಸ್ಥೆಗಳು, ಪಕ್ಷಗಳು ಪ್ರಕಟಿಸುವ ವರದಿಗಳು ಬಹುತೇಕ ಸಂದರ್ಭದಲ್ಲಿ ಅವುಗಳ ಸಕರಾತ್ಮಕ ಅಂಶಗಳನ್ನು ಮಾತ್ರ ವರದಿ ಮಾಡಿ ನಕರಾತ್ಮಕ ಅಂಶಗಳನ್ನು ಬಚ್ಚಿಡುವ ಸಾಧ್ಯತೆಗಳಿವೆ. ಇದೇ ರೀತಿಯಲ್ಲಿ ಸಂಶೋಧನ ಪ್ರಬಂಧಗಳು, ಲೇಖನಗಳು ಕೂಡ ವಿವಿಧ ಆಸಕ್ತಿಗಳನ್ನು ಪ್ರತಿನಿಧೀಕರಿಸುತ್ತಿವೆ. ಇವುಗಳು ಪ್ರತಿನಿಧಿಸುವ ಆಸಕ್ತಿಗಳನ್ನು ಅರ್ಥಮಾಡಿಕೊಳ್ಳುವುದು ಇವುಗಳ ಅರ್ಥಪೂರ್ಣ ಬಳಕೆಗೆ ಅನಿವಾರ್ಯ. ವಾದ

ಪ್ರತಿಪಾದನೆಗೆ ಈಗಾಗಲೇ ಮಂಡಿತವಾದ ವಾದಗಳ ಜತೆಗೆ ಹೊಸ ಸಾಕ್ಷಿ, ಪುರಾವೆಗಳ ಅಗತ್ಯವಿದೆ. ಇವುಗಳನ್ನು ವ್ಯಕ್ತಿ, ಸಂಸ್ಥೆ ಇತ್ಯಾದಿ ಮೂಲಗಳಿಂದ ಪಡೆಯಬಹುದು. ದಿನನಿತ್ಯದ ಬದುಕಿನಲ್ಲಿ ಪ್ರಪಂಚವನ್ನು ನೋಡುವ ಮತ್ತು ಗ್ರಹಿಸುವ ವಿಧಾನಗಳಿಂದ ಈ ಮಾಹಿತಿಯನ್ನು ಸಂಗ್ರಹಿಸಬಹುದು. ಇವುಗಳ ಜತೆಗೆ ಈ ಮೂಲಗಳಿಂದ ಮಾಹಿತಿ ಸಂಗ್ರಹಿಸಲು ಪ್ರತ್ಯೇಕವಾದ ವಿಧಾನಗಳಿವೆ. ಗುಂಪು ಚರ್ಚೆ, ಅವಲೋಕನ, ಸಂದರ್ಶನ, ಪ್ರಶ್ನಾವಳಿ ಎನ್ನುವ ನಾಲ್ಕು ಪ್ರತ್ಯೇಕ ವಿಧಾನಗಳನ್ನು ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಈ ಎಲ್ಲವನ್ನು ಪ್ರತಿಯೊಬ್ಬರು ತಮ್ಮ ತಮ್ಮ ದಿನನಿತ್ಯದ ಬದುಕಿನಲ್ಲಿ ವಿವಿಧ ಪ್ರಮಾಣದಲ್ಲಿ ಮತ್ತು ಗುಣಮಟ್ಟದಲ್ಲಿ ಆಚರಿಸುತ್ತಾರೆ. ಸಂಶೋಧನೆಗೆ ದಿನನಿತ್ಯದ ಬದುಕಿನಲ್ಲಿ ಆಚರಣೆಯಲ್ಲಿರುವ ಅವಲೋಕನ, ಗುಂಪು ಚರ್ಚೆ, ಸಂದರ್ಶನ, ಪ್ರಶ್ನಾವಳಿ ಗಳು ಸಾಕಾಗುವುದಿಲ್ಲ. ಸಂಶೋಧನೆ ಬಯಸುವ ಮಾಹಿತಿಯನ್ನು ಸಂಶೋಧನೆಯ ಉದ್ದೇಶ ತೀರ್ಮಾನಿಸುತ್ತದೆ. ನಿರ್ದಿಷ್ಟ ಮಾಹಿತಿಯನ್ನು ಎಲ್ಲಿಂದ ಮತ್ತು ಹೇಗೆ ಸಂಗ್ರಹಿಸಬೇಕೆನ್ನುವುದನ್ನು ಸಂಶೋಧನೆ ಬೇಡುವ ಮಾಹಿತಿ ತೀರ್ಮಾನಿಸುತ್ತದೆ. ಈ ಎರಡು ತೀರ್ಮಾನಗಳನ್ನು ಜಾಗರೂಕತೆಯಿಂದ ತಳೆಯಬೇಕಾಗಿದೆ. ಮಾಹಿತಿಯ ಮೂಲ ಮತ್ತು ಸಂಗ್ರಹಿಸುವ ವಿಧಾನ ತೀರ್ಮಾನವಾದ ನಂತರ ನಿರ್ಧಾರವನ್ನು ಕಾರ್ಯರೂಪಕ್ಕೆ ತರಬೇಕಾಗುತ್ತದೆ. ಒಂದು ಮೂಲ ಅಥವಾ ಒಂದು ವಿಧಾನಕ್ಕೆ ಅಂಟಿಕೊಂಡರೆ ಸಂಶೋಧಕರ ವಾದ ಪ್ರತಿಪಾದನೆಗೆ ಬೇಕಾಗಿರುವ ಹೊಸ ಸಾಕ್ಷಿ ಪುರಾವೆಗಳ ಸಂಗ್ರಹ ಕಷ್ಟಸಾಧ್ಯ. ವಿವಿಧ ಮೂಲಗಳನ್ನು ಮತ್ತು ವಿವಿಧ ವಿಧಾನಗಳನ್ನು ಬಳಸಿಕೊಂಡು ಮಾಹಿತಿ ಸಂಗ್ರಹಿಸುವುದು ಇಂದಿನ ಅನಿವಾರ್ಯತೆ. ಈ ಬಗೆಯಲ್ಲಿ ಸಂಗ್ರಹಿಸಿದ ಸಾಕ್ಷಿ, ಪುರಾವೆಗಳನ್ನು ಬಳಸಿಕೊಂಡು ಹೇಗೆ ವಾದ ಮಂಡಿಸಬಹುದೆನ್ನುವ ಚರ್ಚೆಯನ್ನು ಮುಂದಿನ ಅಧ್ಯಾಯದಲ್ಲಿ ಮಾಡಿದ್ದೇನೆ.

ಕೊನೆ ಟಿಪ್ಪಣಿಗಳು

೧. ಕನ್ನಡ ವಿಶ್ವವಿದ್ಯಾಲಯದಲ್ಲಿ ಈ ಕುರಿತು ಸಾಕಷ್ಟು ಬಾರಿ ಚರ್ಚೆ ನಡೆದಿದೆ. ಜನಪದ ವಿದ್ವಾಂಸ ರಾದ ನಾವಡ ಅವರು ಈ ಬಗೆಯಲ್ಲಿ ಸಂಗ್ರಹ ಮಾಡುವ ಮಾಹಿತಿಯನ್ನು ಪ್ರಾಥಮಿಕ ಮಾಹಿತಿ ಯೆಂದು ಪರಿಗಣಿಸಬೇಕೆಂದು ವಾದಿಸುತ್ತಾರೆ.

೨. ಜನಪದ ವಿದ್ವಾಂಸರುಗಳು ಈ ಬಗೆಯಲ್ಲಿ ಸಂಗ್ರಹವಾಗುವ ಮಾಹಿತಿಯನ್ನು ಅನುಷಂಗಿಕ ಮಾಹಿತಿಯೆಂದು ಪರಿಗಣಿಸಬೇಕೆಂದು ಅಭಿಪ್ರಾಯಪಡುತ್ತಾರೆ.

೩. ಈ ಕುರಿತು ಹೆಚ್ಚಿನ ಮಾಹಿತಿಗೆ ಹೀಥರ್ ಬ್ರಸ್‌ಸೆಲ್ ಅವರ ಲೇಖನ, 'ಫೆಮಿನಿಸ್ಟ್ ಮೆಥಡಲಾಜಿ'. ಕ್ಲೈವ್ ಸೀಲ್ (ಸಂ), *ರಿಸರ್ಚಿಂಗ್ ಸೊಸೈಟಿ ಅಂಡ್ ಕಲ್ಚರ್*(ನ್ಯೂಡೆಲ್ಲಿ : ಸೇಜ್ ಪಬ್ಲಿಕೇಷನ್ಸ್, ೧೯೯೮, ಪು.೩೭-೪೭), ಅದೇ ಪುಸ್ತಕದಲ್ಲಿರುವ ಕ್ಲೈವ್ ಸೀಲ್, 'ಕ್ವಾಲಿಟೇಟಿವ್ ಇಂಟರ್‌ವ್ಯೂ', ಲೇಖನಗಳನ್ನು ನೋಡಬಹುದು. ಜತೆಗೆ ಚಂದ್ರಪೂಜಾರಿಯವರ, *ಸಂಶೋಧಕರು ಮತ್ತು ಕ್ಷೇತ್ರಕಾರ್ಯ*(ವಿದ್ಯಾರಣ್ಯ : ಪ್ರಾಸಾರಾಂಗ, ಕನ್ನಡ ವಿಶ್ವವಿದ್ಯಾಲಯ-ಹಂಪಿ, ೨೦೦೫) ಪುಸ್ತಕ ದಲ್ಲೂ ಸಂದರ್ಶನದ ಹಲವು ಮುಖಗಳ ಬಗ್ಗೆ ವಿವರಗಳಿವೆ.

೪. ಸಂಘ ಸಂಸ್ಥೆಗಳು ತಮ್ಮ ತಮ್ಮ ಸಾಧನೆಗಳನ್ನು, ತಮ್ಮ ಉದ್ದೇಶಗಳನ್ನು ಸಾಧಿಸಿರುವುದನ್ನು ಮತ್ತು ಈ ಎಲ್ಲವುಗಳನ್ನು ನೀತಿ ನಿಯಮಗಳನುಸಾರ ಸಾಧಿಸಿರುವುದನ್ನು ಹೇಳಿಕೊಳ್ಳುತ್ತವೆ. ಈ ವರದಿಯಗಳಲ್ಲಿ ತಮ್ಮ ಬಗೆಗಿನ ವಿಮರ್ಶಾತ್ಮಕ ವಿವರಣೆಗಳಿಗೆ ಅವಕಾಶವಿರುವುದಿಲ್ಲ. ಕಾಥಿ ಶರ್ಮೇಜ್, *ಕನ್‌ಸ್ಟ್ರಕ್ಟಿಂಗ್ ಗ್ರೌಂಡೆಡ್ ಥಿಯರಿ-ಎ ಪ್ರಾಕ್ಟೀಕಲ್ ಗೈಡ್ ಥ್ರೋ ಕ್ವಾಲಿಟೇಟಿವ್ ಎನಾಲಿಸೀಸ್*, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೨೦೦೬, ಪು.೧೩-೪೧.

೫. ಕಾಥಿ ಶರ್ಮೇಜ್, *ಕನ್‌ಸ್ಟ್ರಕ್ಟಿಂಗ್ ಗ್ರೌಂಡೆಂಡ್ ಥಿಯರಿ*, ಪು.೧೩-೪೧

೬. ಈಗಾಗಲೇ ಆಗಿರುವ ಅಧ್ಯಯನಗಳಿಂದ ತಮ್ಮ ಸಂಶೋಧನೆಗೆ ಬೇಕಾಗಿರುವ ಮಾಹಿತಿಯನ್ನು ಸಂಗ್ರಹಿಸುವಾಗ ಅನುಸರಿಸಬೇಕಾದ ಕ್ರಮವನ್ನು ವಿವರಿಸುವ ಹಲವಾರು ಪುಸ್ತಕಗಳಿವೆ. ಇವುಗಳಿಂದ ಸಂಶೋಧಕರಿಗೆ ಅನುಕೂಲವಾಗುವ ಯಾವುದಾದರೂ ಒಂದು ವಿಧಾನವನ್ನು ಅನುಸರಿಸಬಹುದು.

೭. ಇಲ್ಲಿ ನೀಡಿರುವ ಕ್ರಮವನ್ನು ನಾನು ಜೋಸೆಫ್ ಗಿಬಾಲ್ಡಿ ಮತ್ತು ವಾಲ್ಟರ್ ಎಸ್ ಏಶರ್ಟ್ ಅವರ, *ಎಂಎಲ್‌ಎ ಹೇಂಡ್ ಬುಕ್ ಫಾರ್ ರೈಟರ್ಸ್ ಆಫ್ ರಿಸರ್ಚ್ ಪೇಪರ್ಸ್*, ಬೆಂಗಳೂರು: ಎಫಿಲಿಯೆಟೆಡ್ ಇಸ್ಟ್ ವೆಸ್ಟ್ ಪ್ರೆಸ್ ಪ್ರವೈಟ್ ಲಿಮೆಟೆಡ್, ೧೯೮೮, ಪುಸ್ತಕದಿಂದ ಪಡೆದಿದ್ದೇನೆ.

೮. ಈ ಕುರಿತು ಹೆಚ್ಚಿನ ವಿವರಗಳಿಗೆ ಈ ಕೆಳಗಿನ ಪುಸ್ತಕಗಳನ್ನು ನೋಡಬಹುದು. ವಿಕೀ ಎಲ್ ಪ್ಲಾನೋ ಕ್ಲರ್ಕ್ ಅಂಡ್ ಜಾನ್ ಡಬ್ಲ್ಯು ಕ್ರಾಸ್ ವೆಲ್, *ದಿ ಮಿಕ್ಸಡ್ ಮೆಥಡ್ ರೀಡರ್*, ನ್ಯೂಡೆಲ್ಲಿ: ಸೆಜ್ ಪಬ್ಲಿಕೇಶನ್ಸ್, ೨೦೦೮, ಆಡ್ರಿಯನ ಹಾಲಿಡೇ, *ಡುಯಿಂಗ್ ಅಂಡ್ ರೈಟಿಂಗ್ ಕ್ವಾಲಿಟೇಟಿವ್ ರಿಸರ್ಚ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೨೦೦೭.

೯. ಅಮೇರಿಕಾದ ಬೆಲ್ ಟೆಲಿಪೋನ್ ಕಂಪೆನಿಗೆ ಟೆಲಿಪೋನ್‌ಗಳನ್ನು ತಯಾರಿಸುವ ಕೆಲಸವನ್ನು ವೆಸ್ಟರ್ನ್ ಇಲೆಕ್ಟ್ರಿಕಲ್ ಕಂಪೆನಿ ಮಾಡುತ್ತಿತ್ತು. ಇದು ಚಿಕಾಗೋದ ಹಥೋರ್ನ್ ಎನ್ನುವಲ್ಲಿತ್ತು. ಈ ಕಂಪೆನಿಯಲ್ಲಿ ಸುಮಾರು ೩೦೦೦೦ ಮಂದಿ ಕೆಲಸ ಮಾಡುತ್ತಿದ್ದರು. ಅಂದಿನ ಕಾಲದಲ್ಲಿ (ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ) ಉತ್ತಮ ಸವಲತ್ತುಗಳನ್ನು ನೀಡುತ್ತಿದ್ದ ಕಂಪೆನಿ ಇದಾಗಿತ್ತು. ಆದಾಗ್ಯೂ ಕಂಪೆನಿಯ ಕೆಲಸಗಾರರಲ್ಲಿ ಸಾಕಷ್ಟು ಅಸಮಾಧಾನ ಮತ್ತು ಅತೃಪ್ತಿ ಇತ್ತು ಮತ್ತು ಅವುಗಳು ಅವರ ಕಾರ್ಯಕ್ಷಮತೆಯನ್ನು ಪ್ರಭಾವಿಸುತ್ತಿದ್ದವು. ಈ ಹಿನ್ನೆಲೆಯಲ್ಲಿ ಈ ಪ್ರಯೋಗ ನಡೆದಿದೆ. ಹೆಚ್ಚು ಕಡಿಮೆ ಒಂದೇ ರೀತಿಯ ಕೆಲಸಗಾರರ ಎರಡು ಗುಂಪುಗಳನ್ನು ಮಾಡಿ ಒಂದನ್ನು ನಿಯಂತ್ರಿತ ಗುಂಪೆಂದು ಅಥವಾ ಕಂಟ್ರೋಲ್ಡ್ ಗುಂಪೆಂದು ಮತ್ತೊಂದನ್ನು ಪರೀಕ್ಷಾ ಗುಂಪೆಂದು ಪರಿಗಣಿಸಿ ಅವಲೋಕನ ನಡೆದಿದೆ. ನಿಯಂತ್ರಿತ ಗುಂಪಿನ ಮೇಲೆ ಬೆಳಕನ್ನು ಏರುಪೇರು ಮಾಡುವ ಪ್ರಯೋಗ ನಡೆಯುವುದಿಲ್ಲ, ಪರೀಕ್ಷಾ ಗುಂಪಿನ ಮೇಲೆ ಮಾತ್ರ ನಡೆಯುತ್ತದೆ. ಈ ಎಲ್ಲ ವಿವರಗಳನ್ನು ನಾನು ಜೆ.ಎ.ಸಿ.ಬ್ರೌನ್ ಅವರ *ದಿ ಸೋಶಿಯಲ್ ಸೈಕಲಾಜಿ ಆಫ್ ಇಂಡಸ್ಟ್ರೀಸ್*, ಗ್ರೇಟ್ ಬ್ರಿಟನ್ : ಪೆಂಗ್ವಿನ್ ಬುಕ್ಸ್, ೧೯೭೪, ಪು.೬೯-೯೬, ಎನ್ನುವ ಪುಸ್ತಕದಿಂದ ಪಡೆದಿದ್ದೇನೆ.

೧೦. ಅವಲೋಕನ ವಿಧಾನ ಕುರಿತು ವಿವರಗಳನ್ನು ಗುಣಾತ್ಮಕ ಸಂಶೋಧನೆಯನ್ನು ವಿವರಿಸುವ ಪುಸ್ತಕಗಳಲ್ಲಿ ನೋಡಬಹುದು. ಕೆಲವು ಪುಸ್ತಕಗಳಲ್ಲಿ ಇದನ್ನು ಸಂಕ್ಷಿಪ್ತವಾಗಿ ಪರಿಚಯವಷ್ಟು ವಿವರಣೆ ಇದೆ. ಇನ್ನು ಕೆಲವು ಪುಸ್ತಕಗಳಲ್ಲಿ ವಿಸ್ತಾರವಾದ ವಿವರಣೆಗಳಿವೆ. ಮೇಲಿನ ವಿವರಗಳನ್ನು ನಾನು ವಿಲಿಯಂ ಜೆ. ಗುಡೇ ಮತ್ತು ಪೌಲ್ ಕೆ ಹೆಚ್ ಅರ್ *ಮೆಥಡ್ಸ್ ಇನ್ ಸೋಶಿಯಲ್ ರಿಸರ್ಚ್*, ಸಿಂಗಾಪೂರ್: ಮೆಕ್ ಗ್ರೋ ಹಿಲ್ ಬುಕ್ ಕಂಪೆನಿ, ೧೯೫೨, ಪು.

೧೯೯-೧೩೧ ಪುಸ್ತಕ ದಿಂದ ಪಡೆದಿದ್ದೇನೆ. ಈ ವಿವರಗಳನ್ನು ನೀಡುವ ಇತರ ಕೆಲವು ಪುಸ್ತಕಗಳು ಇಂತಿವೆ. ವಾಲ್ಟರ್ ಫೆರ್ನಾಂಡೀಸ್ ಮತ್ತು ಪಿಲಿಪ್ ವೇಗಾಸ್, *ಪಾರ್ಟಿಸಿಪೇಟರಿ ಅಂಡ್ ಕನ್‌ವೆನ್‌ಶನಲ್ ರಿಸರ್ಚ್ ಮೆಥಡಾಲಜೀಸ್*, ನ್ಯೂಡೆಲ್ಲಿ : ಇಂಡಿಯನ್ ಶೋಶಿಯಲ್ ಇನ್ಸಿಟ್ಯೂಟ್, ೧೯೮೫, ಪಾರ್ಥನಾಥ ಮುಖರ್ಜಿ(ಸಂ), *ಮೆಥಡಾಲಜಿ ಇನ್ ಸೋಶಿಯಲ್ ರಿಸರ್ಚ್*, ನ್ಯೂಡೆಲ್ಲಿ : ಸೇಜ್, ೨೦೦೦

೧೧ ಸಹಭಾಗಿತ್ವ ಅಭಿವೃದ್ಧಿ ಇತ್ತೀಚೆಗೆ ಚಾಲ್ತಿಗೆ ಬಂದ ಅಭಿವೃದ್ಧಿ ಮಾದರಿ. ಇದು ಬೆಳಕಿಗೆ ಬರುವಲ್ಲಿ ಅಭಿವೃದ್ಧಿ ಚಿಂತನೆ ಮತ್ತು ಪ್ರಾಕ್ಟೀಸುಗಳಲ್ಲಿ ಆದ ಬದಲಾವಣೆಯ ಜತೆಗೆ ಸಮಾಜ ಸಂಶೋಧನೆಯಲ್ಲೂ ಆದ ಬದಲಾವಣೆಗಳ ಪಾತ್ರ ಇದೆ. ವಿರಾಟ್ ಥಿಯರಿಗಳನ್ನು ಅಲ್ಲಗೆಳೆಯುವ ಆಧುನಿಕೋತ್ತರ ಚಿಂತನೆ ಪ್ರಚಾರ ಪಡೆಯುವುದರೊಂದಿಗೆ ಆರ್ಥಿಕವಾಗಿ ಹಿಂದುಳಿದ ಸಂಸ್ಕೃತಿಗಳಲ್ಲೂ ಅಭಿವೃದ್ಧಿಯ ಕಲ್ಪನೆಗಳಿವೆ ಮತ್ತು ಅವುಗಳು ಪಶ್ಚಿಮದ ಶ್ರೀಮಂತ ಸಂಸ್ಕೃತಿಗಳು ಕೊಡುವ ಮಾದರಿಯಷ್ಟೇ ಉತ್ತಮವಾಗಿವೆ ಎನ್ನುವ ಆಲೋಚನೆಗಳು ಬಲಗೊಳ್ಳಲು ಆರಂಭವಾದವು. ಜತೆಗೆ ಗ್ರಾಮೀಣ ಜನರ ಬೇಕು ಬೇಡಗಳನ್ನು ಅರ್ಥಮಾಡಿಕೊಳ್ಳಲು ಪಾರ್ಟಿಸಿಪೇಟರಿ ರೂರಲ್ ಎಪ್ರೈಸಲ್ ಮಾಹಿತಿ ಸಂಗ್ರಹ ವಿಧಾನ ಕೂಡ ಮಹತ್ವ ಪಡೆಯಿತು. ಗ್ರಾಮೀಣ ಜನರ ಭಾಷೆ ಮತ್ತು ಆಕರಗಳ ಮೂಲಕ ಮಾಹಿತಿ ಸಂಗ್ರಹಿಸುವುದು ಈ ವಿಧಾನದ ವಿಶೇಷತೆ. ಈ ವಿಧಾನ ಚಾಲ್ತಿಗೆ ಬರಲು ಹಲವು ಕಾರಣಗಳಿವೆ. ಅವುಗಳಲ್ಲಿ ಪ್ರಮುಖವಾದ ಒಂದು ಕಾರಣವನ್ನು ಚರ್ಚಿಸಿದ ನಂತರ ಗುಂಪುಚರ್ಚೆಯ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸುವ. ಗುಂಪು ಚರ್ಚೆ ಮಾಹಿತಿ ಸಂಗ್ರಹದ ವಿಧಾನವಾಗಿ ಚಾಲ್ತಿಗೆ ಬರಲು ಬಹುಮುಖ್ಯ ಕಾರಣ ಅಭಿವೃದ್ಧಿ ಚಿಂತನೆ ಹಾಗೂ ಪ್ರಾಕ್ಟೀಸಲ್ಲಿ ಆದ ಬದಲಾವಣೆ. ಸಾಂಪ್ರದಾಯಿಕ ಅಭಿವೃದ್ಧಿ ಚಿಂತನೆಯಲ್ಲಿ ಅಭಿವೃದ್ಧಿ ಗೊಳ್ಳಬೇಕಾದವರು ಅಥವಾ ಸ್ಥಳೀಯ ಸಮುದಾಯಗಳು(ಲೋಕಲ್ ಸಿವಿಲ್ ಸೊಸೈಟಿ) ಪೇಸೀವ್ ಎಂಟಿಟಿಯಾಗಿ ಗುರುತಿಸಲ್ಪಡುತ್ತಿತ್ತು. ಅದರ ಕೆಲಸ ಅಭಿವೃದ್ಧಿ ಪ್ರಕ್ರಿಯೆಗೆ ತನ್ನನ್ನು ಒಡ್ಡಿಕೊಳ್ಳುವುದು ಮಾತ್ರ ಆಗಿತ್ತು. ಅಭಿವೃದ್ಧಿ ಅಂದರೇನು? ಅದನ್ನು ಹೇಗೆ ಸಾಧಿಸಬಹುದು? ಯಾವ ಯೋಜನೆಗಳು ಯಾರಿಗೆ ಸೂಕ್ತ? ಆ ಯೋಜನೆಗಳಲ್ಲಿ ವಿನಿಯೋಜಿಸಬೇಕಾದ ಸಂಪನ್ಮೂಲವೆಷ್ಟು? ಇತ್ಯಾದಿ ನಿರ್ಧಾರಗಳನ್ನು ಅಭಿವೃದ್ಧಿ ಮಾಡುವವರು ಅಭಿವೃದ್ಧಿ ಆಗಬೇಕಾದವರ ಪರವಾಗಿ ತೆಗೆದುಕೊಳ್ಳುತ್ತಾರೆ. ಇಲ್ಲಿ ಅಭಿವೃದ್ಧಿ ಆಗಬೇಕಾದ ಸ್ಥಳೀಯ ಸಮುದಾಯಗಳು ಒಂದು ಟಾರ್ಗೆಟ್‌ಸ್ಪೇಸ್ ಆಗಿ ಪರಿಗಣಿಸಲ್ಪಡುತ್ತವೆ. ಅಭಿವೃದ್ಧಿಯನ್ನು ವ್ಯಾಖ್ಯಾನಿಸುವಲ್ಲಿ ಅಥವಾ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಸ್ಥಳೀಯ ಸಮುದಾಯಗಳು ಸಕ್ರಿಯವಾಗಿ ಭಾಗವಹಿಸುವ ಕ್ರಮ ಇರಲಿಲ್ಲ. ಇವೆಲ್ಲ ಕಾರಣದಿಂದಲೇ ಬಡದೇಶಗಳು ಉದ್ಧಾರ ವಾಗಿಲ್ಲ; ಆದುದರಿಂದ ಸ್ಥಳೀಯ ಸಮುದಾಯಗಳಿಗೆ (ಸಿವಿಲ್ ಸೊಸೈಟಿಗೆ) ಪ್ರಾಮುಖ್ಯತೆ ಕೊಡಬೇಕೆಂಬ ಅಂಶ ಪ್ರಾಮುಖ್ಯತೆ ಪಡೆದಿದೆ. ಸ್ಥಳೀಯ ಸಮುದಾಯಗಳು ಅಭಿವೃದ್ಧಿ ಪ್ರಕ್ರಿಯೆ ಯಲ್ಲಿ ಪಾಲುಗೊಳ್ಳುವುದು ಈ ಸಮಸ್ಯೆ ಪರಿಹಾರಕ್ಕೆ ಸೂಕ್ತ ಮಾರ್ಗವೆಂದು ಇಂದು ಯಜಮಾನಿಕೆಯಲ್ಲಿರುವ ಅಭಿವೃದ್ಧಿ ಚಿಂತನೆ ಸೂಚಿಸುತ್ತದೆ. ಸ್ಥಳೀಯ ಸಮುದಾಯಗಳ ಬಹುತೇಕರ ಬೇಕು ಬೇಡಗಳನ್ನು ಅರ್ಥಮಾಡಿಕೊಳ್ಳಲು ಹಿಂದಿನ ಮಾಹಿತಿ ಸಂಗ್ರಹ ವಿಧಾನಗಳು (ಪ್ರಶ್ನಾವಳಿ ಅಥವಾ ಸಂದರ್ಶನ) ಸಾಕಾಗುವುದಿಲ್ಲ ಎನ್ನುವ ಕಾರಣಕ್ಕೆ ಗುಂಪು ಚರ್ಚೆ ಬೆಳಕಿಗೆ ಬಂದಿದೆ. ಸಾಂಪ್ರದಾಯಿಕ ವಿಧಾನಗಳಲ್ಲಿ ಒಂದು ಸಮುದಾಯದ ಕೆಲವರನ್ನು ಭೇಟಿಯಾಗಿ ಸಂದರ್ಶನ ಅಥವಾ ಪ್ರಶ್ನಾವಳಿ ಮೂಲಕ ಸಮುದಾಯದ ಸಮಸ್ಯೆಗಳಿಗೆ ಸಂಬಂಧಿಸಿದ

ಮಾಹಿತಿಗಳನ್ನು ಸಂಗ್ರಹಿಸಲಾಗುವುದು. ಈ ಕೆಲವರು ನೀಡುವ ಮಾಹಿತಿ ಆಧಾರದಲ್ಲಿ ಇಡೀ ಸಮುದಾಯದ ಸಮಸ್ಯೆಗಳ ಬಗ್ಗೆ ತೀರ್ಮಾನಕ್ಕೆ ಬರಲಾಗುವುದು. ಸಮುದಾಯದ ಸಮಸ್ಯೆಗಳ ನೈಜ ಚಿತ್ರಣವನ್ನು ಒದಗಿಸಲು ಈ ವಿಧಾನವ ವಿಫಲವಾಗಿದೆ ಎಂದಾಗಿದೆ. ಈ ಹಿನ್ನೆಲೆಯಲ್ಲಿ ಸಮುದಾಯದ ಬಹುತೇಕರ ಅಭಿಪ್ರಾಯವನ್ನು ಸಂಗ್ರಹಿಸುವ ಹೊಸ ವಿಧಾನದ ಅವಶ್ಯಕತೆಯನ್ನು ಮನಗಾಣಲಾಗಿದೆ. ಹೀಗೆ ಮಾಹಿತಿ ಸಂಗ್ರಹದ ಹೊಸ ವಿಧಾನವಾಗಿ ಗುಂಪು ಚರ್ಚೆ ಚಾಲ್ತಿಗೆ ಬಂದಿದೆ.

೧೨. ಚಂದ್ರಪೂಜಾರಿ, *ಜನಾಯೋಜನೆ*, ಪು.೧೫-೧೬

೧೩. ಚಂದ್ರಪೂಜಾರಿ, *ಜನಾಯೋಜನೆ*, ಪು.೧೫-೧೯

೧೪. ಈ ಬಗೆಯ ಚರ್ಚೆಯ ವಿವರಗಳನ್ನು ನೀಡುವ ಸಾಕಷ್ಟು ಪುಸ್ತಕಗಳಿವೆ. ನಾನು ಇಲ್ಲಿ ಮಾಡಿರುವ ವಾದಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಈ ಕೆಳಗಿನ ಪುಸ್ತಕಗಳಿಂದ ಪಡೆದಿದ್ದೇನೆ - ಪಿ.ಪಯರ್‌ಬೆಂಡ್, *ಎಗೆನೆಸ್ಟ್ ಮೆಥಡ್*, ಲಂಡನ್ : ನ್ಯೂಲೆಫ್ಟ್ ರಿವ್ಯೂ, ೧೯೭೫. ವಿಲ್ಮೆಸ್ ಎಂ. ಆಂಡ್ ಕಾಂಟರ್ ಆರ್.ಎ.(ಸಂ), *ಎನದರ್ ವಾಯಿಸ್-ಫೆಮಿನಿಸ್ಟ್ ಪರ್ಸ್‌ಪೆಕ್ಟೀವ್ಸ್ ಆನ್ ಸೋಶಿಯಲ್ ಲೈಫ್ ಆಂಡ್ ಸೋಶಿಯಲ್ ಸಯನ್ಸ್*, ನ್ಯೂಯಾರ್ಕ್ : ಆ್ಯಂಕರ್ ಪಬ್ಲಿಕೇಶನ್ಸ್, ೧೯೭೪, ಪಾರ್ಥನಾಥ ಮುಖರ್ಜಿ(ಸಂ), *ಮೆಥಡ್ ಇನ್ ಸೋಶಿಯಲ್ ರಿಸರ್ಚ್ - ಡಯಲೆಮಾಸ್ ಆಂಡ್ ಪರ್ಸಪೆಕ್ಟೀವ್ಸ್*, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೨೦೦೦ ಮತ್ತು ಇಮೆನ್ವಲ್ ವೆಲೆರಿಸ್ಟೇಯಿನ್ (ಸಂ), *ಒಪನ್ ದಿ ಸೋಶಿಯಲ್ ಸಯನ್ಸಸ್*, ನ್ಯೂಡೆಲ್ಲಿ : ವಿಸ್ತಾರ್ ಪಬ್ಲಿಕೇಶನ್ಸ್, ೧೯೯೮.

೧೫. ವಿವರಗಳನ್ನು ಮೇಲೆ ಉಲ್ಲೇಖಿಸಿದ ಕ್ಲೈವ್ ಸೀಲ್ ಅವರ ಲೇಖನ 'ಕ್ವಾಲಿಟೇಟಿವ್ ಇಂಟರ್ ವ್ಯೂ', ಎನ್ನುವ ಲೇಖನದಿಂದ ಪಡೆದಿದ್ದೇನೆ. ಈ ಲೇಖನ ಕ್ಲೈವ್ ಸೀಲ್ ಸಂಪಾದಿಸಿದ. ರಿಸರ್ಚಿಂಗ್ *ಸೊಸೈಟಿ ಆಂಡ್ ಕಲ್ಚರ್*, ಪುಸ್ತಕದ ಪು.೨೦೦೨-೨೧೬ಗಳಲ್ಲಿವೆ.

೧೬. ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಯರೆಹಂಚಿನಾಳ ಪಂಚಾಯತ್‌ಗೆ ಸೇರಿದ ಯರಹಂಚಿನಾಳ ಗ್ರಾಮದಲ್ಲಿ ಪಂಚಾಯತ್ ಯೋಜನೆ ಸಿದ್ಧಪಡಿಸಲು ಮಾಹಿತಿ ಸಂಗ್ರಹಿಸುವ ಸಂದರ್ಭದಲ್ಲಿ ಮೇಲಿನ ಅನುಭವ ಆಯಿತು. ಈ ಹಳ್ಳಿಯ ಸಾಮಾಜಿಕ ಹಾಗೂ ಆರ್ಥಿಕ ವಿವರಗಳನ್ನು ಚಂದ್ರಪೂಜಾರಿಯವರ *ಜನಾಯೋಜನೆ-ಹೈದಾರಬಾದ್ ಕರ್ನಾಟಕದ ಅನುಭವಗಳು* ಪುಸ್ತಕದಲ್ಲಿ(ಪು.೫೬-೧೦೦) ನೋಡಬಹುದು.

೧೭. ಪ್ರಶ್ನಾವಳಿಗೆ ಸಂಬಂಧಿಸಿದ ಚರ್ಚೆಯನ್ನು ಸಮಾಜ ಸಂಶೋಧನೆಯ ಮೇಲಿನ ಎಲ್ಲ ಪುಸ್ತಕಗಳಲ್ಲಿ ನೋಡಬಹುದು. ಕೆಲವೊಂದು ಪುಸ್ತಕಗಳಲ್ಲಿ ಪ್ರಶ್ನಾವಳಿ ಸಿದ್ಧಪಡಿಸುವಲ್ಲಿಂದ ಅವುಗಳ ಬಳಕೆ ತನಕದ ವಿವರಣೆಗಳಿವೆ. ಆದರೆ ನಾನು ಇಲ್ಲಿನ ವಿವರಣೆಗಳನ್ನು ನೀಡುವಾಗ ಪುಸ್ತಕಗಳಲ್ಲಿನ ವಿವರಗಳಿಗಿಂತ ಹೆಚ್ಚಾಗಿ ಸುಮಾರು ಹದಿನೈದು ವರ್ಷಗಳಲ್ಲಿ ಪ್ರಸ್ನಾವಳಿ ಬಳಕೆ ಮಾಡುವಾಗ ಆದ ಅನುಭವ ಆಧಾರದಲ್ಲಿ ನೀಡಿದ್ದೇನೆ. ಅದುದರಿಂದ ಇಲ್ಲಿನ ವಿವರಣೆಗಳಿಗೆ ವಿಸ್ತಾರವಾದ ಅನ್ವಯಿಕೆಯಿದೆಯೆಂದು ನಾನು ತಿಳಿಯುವುದಿಲ್ಲ.

೧೮. ತಿಳುವಳಿಕೆಗಳು ಪ್ರಶ್ನಾವಳಿಗಳನ್ನು ರೂಪಿಸಲು ಸಹಕಾರಿಯಾಗಿವೆ. ಆದರೆ ಅದೇ ಸಂದರ್ಭದಲ್ಲಿ ಈ ಬಗೆಯ ತಿಳುವಳಿಕೆ ಪ್ರಶ್ನಾವಳಿಗಳನ್ನು ತುಂಬುವ ಸಂದರ್ಭದಲ್ಲಿ ಅನಾನುಕೂಲನೂ ಆಗಬಹುದು. ಅದು ಹೇಗೆಂದರೆ ನಮ್ಮ ತಿಳುವಳಿಕೆ ಯಾವುದೋ ಒಂದು ಬಗೆಯ ಉತ್ತರವನ್ನು ಅಧ್ಯಯನಕ್ಕೆ ಒಳಗಾಗುವವರಿಂದ ಬಯಸುತ್ತದೆ. ಒಂದು ವೇಳೆ ನಾವು ಬಯಸಿದ ರೀತಿಯಲ್ಲಿ

ಉತ್ತರ ಬರದಿದ್ದರೆ ಯಾವುದೋ ಒಂದು ಬಗೆಯಲ್ಲಿ ನಮ್ಮ ನಿರೀಕ್ಷಿತ ಉತ್ತರಗಳಿಗೆ ಪ್ರಯತ್ನಿಸುವ ಸಾಧ್ಯತೆ ಇದೆ.

೧೯ ಮೂರಕ್ಕಿಂತಲೂ ಹೆಚ್ಚು ವಿಧಗಳ ಪ್ರಶ್ನೆಗಳಿವೆ - ಉದಾಹರಣೆಗೆ ಸ್ಕೇಲ್ ಬಳಸುವ ಪ್ರಶ್ನೆಗಳು. ನಮ್ಮ ಪರಿಸರದಲ್ಲಿ ಹೆಚ್ಚು ಬಳಕೆಯಲ್ಲಿರುವ ಪ್ರಶ್ನೆಗಳ ವಿಧಗಳನ್ನು ಮಾತ್ರ ನೀಡಿದ್ದೇನೆ. ನಮ್ಮಲ್ಲಿ ಪ್ರಶ್ನಾವಳಿಯನ್ನು ಅಧ್ಯಯನಕಾರರು ತುಂಬುವ ಕ್ರಮ ಇದೆ. ಶಾಸ್ತ್ರೀಯವಾಗಿ ಇದನ್ನು ಪ್ರಶ್ನಾವಳಿ ವಿಧಾನದಲ್ಲಿ ಮಾಹಿತಿ ಸಂಗ್ರಹ ಎನ್ನಲಾಗುವುದಿಲ್ಲ. ಇದನ್ನು ಅನುಸೂಚಿಯೆನ್ನುತ್ತಾರೆ. ಇದರ ವಿವರಗಳನ್ನು ಮುಂದೆ ನೀಡಲಾಗಿದೆ.

೨೦. ಗೂಡೆ ಮತ್ತು ಹ್ಯಾಟ್, *ಮೆಥಡ್ಸ್ ಇನ್ ಸೋಶಿಯಲ್ ರಿಸರ್ಚ್*, ನ್ಯೂಯಾರ್ಕ್ : ಮೆಕ್ ಗ್ರೋ ಹಿಲ್, ೧೯೫೨.

೯

ವಾದ ಮಂಡನೆ

ವಾದ ಮಂಡನೆ ಎನ್ನುವ ಈ ಅಧ್ಯಾಯದಲ್ಲಿ ಸಂಶೋಧನ ಪ್ರಬಂಧ ರಚನ ವಿಧಾನವನ್ನು ವಿವರಿಸಲಾಗಿದೆ. ಪ್ರಬಂಧ ರಚನೆಯನ್ನು ವಿವರಿಸುವ ಅಧ್ಯಾಯಕ್ಕೆ ವಾದ ಮಂಡನೆ ಎನ್ನುವ ಹೆಸರೇಕೆ? ಎಂದು ಓದುಗರನ್ನು ಕಾಡಬಹುದು. ಸಂಶೋಧನೆಯನ್ನು (ಈ ಪುಸ್ತಕದಲ್ಲಿ) ವಾದ ಪ್ರತಿಪಾದನೆಯೆಂದು ವ್ಯಾಖ್ಯಾನಿಸಲಾಗಿದೆ ಮತ್ತು ನಿಜವಾದ ವಾದ ಮಂಡನೆ ನಡೆಯುವುದು ಪ್ರಬಂಧ ರಚನೆಯಲ್ಲಿ ಎಂದು ಗ್ರಹಿಸಲಾಗಿದೆ. ಈಗಾಗಲೇ ಮಂಡಿತವಾದಗಳನ್ನು ವಿಮರ್ಶಿಸುವ, ಅವುಗಳ ಇತಿಮಿತಿಗಳನ್ನು ಪರಿಚಯಿಸುವ, ಅವುಗಳು ಪರಿಗಣಿಸಿದ ಆಯಾಮಗಳನ್ನು ಗುರುತಿಸುವ, ಅವುಗಳು ಪರಿಗಣಿಸದಿರುವ ಆಯಾಮಗಳನ್ನು ಎತ್ತಿ ತೋರಿಸುವ, ತಮ್ಮ ವಾದವನ್ನು ಮಂಡಿಸಲು ಹಿಂದಿನ ಸಂಶೋಧಕರು ಅನುಸರಿಸಿದ ವಿಧಾನಗಳನ್ನು ವಿಮರ್ಶಿಸುವ, ಸಂಶೋಧಕರು ತಮ್ಮ ವಾದ ಪ್ರತಿಪಾದನೆಗೆ ಬಳಸುವ ಸಾಕ್ಷಿ, ಪುರಾವೆ, ದಾಖಲೆ ಇತ್ಯಾದಿಗಳನ್ನು ಪರಿಚಯಿಸುವ, ಇವುಗಳನ್ನು ಸಂಗ್ರಹಿಸಿದ ವಿಧಾನ ಹಾಗೂ ಮೂಲಗಳನ್ನು ಹೇಳುವ, ಸಂಗ್ರಹಿಸಿದ ಸಾಕ್ಷಿ, ಪುರಾವೆ, ದಾಖಲೆ ಇತ್ಯಾದಿಗಳ ಸತ್ಯಾಸತ್ಯತೆಗಳನ್ನು ಪರೀಕ್ಷಿಸಲು ಉಪಯೋಗಿಸಿದ ಪರೀಕ್ಷೆಗಳನ್ನು ಹೇಳುವ, ಈ ಸಾಕ್ಷಿ, ಪುರಾವೆ, ದಾಖಲೆ ಇತ್ಯಾದಿಗಳ ಮೂಲಕ ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳನ್ನು ಅಲ್ಲಗಳೆಯುವ ಅಥವಾ ನಿರಾಕರಿಸುವ ಅಥವಾ ಇತಿಮಿತಿಗಳನ್ನು ಬಿಚ್ಚಿಡುವ ಮತ್ತು ಸಂಶೋಧಕರು ತಮ್ಮ ವಾದವನ್ನು ಸಮರ್ಥಿಸುವ ಇತ್ಯಾದಿ ಪ್ರಕ್ರಿಯೆಗಳು ಪ್ರಬಂಧ ರಚನೆಯಲ್ಲಿ ಅಡಕವಾಗಿವೆ. ಇದೊಂದು ಬಗೆಯಲ್ಲಿ ಕೋರ್ಟ್‌ಲ್ಲಿ ಯಾವುದೋ ಕೇಸ್ ಪರ ವಾದಿಸುವ ವಕೀಲರು ತಮ್ಮ ಪ್ರತಿವಾದಿಯ ವಾದಗಳನ್ನು ತಾವು ಸಂಗ್ರಹಿಸಿದ ಸಾಕ್ಷಿ ಪುರಾವೆಗಳನ್ನು ನೀಡಿ ಅಲ್ಲಗಳೆಯುವ ಅಥವಾ ಸತ್ಯ ಅಲ್ಲವೆಂದು ಸಾಬೀತು ಮಾಡಿ ತಮ್ಮ ವಾದವನ್ನು ಪ್ರತಿಸ್ಥಾಪಿಸುವ ಪ್ರಕ್ರಿಯೆಗೆ ಸಮಾನವಾಗಿದೆ. ಆದುದರಿಂದ ಈ ಅಧ್ಯಾಯವನ್ನು ವಾದ ಮಂಡನೆಯೆಂದು ಹೆಸರಿಸಲಾಗಿದೆ. ಎಲ್ಲ ಬಗೆಯ ಸಂಶೋಧನೆಗಳು (ವಿಜ್ಞಾನ ಸಂಶೋಧನೆ, ಸಮಾಜ ವಿಜ್ಞಾನ ಸಂಶೋಧನೆ, ಸಂಸ್ಕೃತಿ ಅಧ್ಯಯನ ಇತ್ಯಾದಿಗಳೆಲ್ಲ) ಕೂಡ

ವಾದ ಪ್ರತಿಪಾದನೆಯನ್ನು ಮಾಡುತ್ತವೆ. ಆದಾಗ್ಯೂ ಇವುಗಳ ವಾದ ಪ್ರತಿಪಾದನ ಶೈಲಿಯಲ್ಲಿ ತುಂಬಾ ಭಿನ್ನತೆ ಇದೆ. ವಿಜ್ಞಾನ ಮತ್ತು ಸಮಾಜ ವಿಜ್ಞಾನ ಸಂಶೋಧನೆಗಳು ವಾದ ಮಂಡನೆಗೆ ಅನುಸರಿಸುವ ವಿಧಾನಕ್ಕೂ ಸಂಸ್ಕೃತಿ ಅಧ್ಯಯನಗಳು ಅನುಸರಿಸುವ ವಿಧಾನಕ್ಕೂ ತುಬಾ ಅಂತರವಿದೆ. ಸಂಶೋಧನ ಪರಿಭಾಷೆಯಲ್ಲಿ ಈ ಅಂತರವನ್ನು ಶಿಸ್ತುಗಳ ನೆಲೆಯಲ್ಲಿ (ಸಮಾಜ ವಿಜ್ಞಾನ ಮತ್ತು ಸಂಸ್ಕೃತಿ ಅಧ್ಯಯನಗಳ ನೆಲೆಯಲ್ಲಿ) ನೋಡುವುದಿಲ್ಲ; ವಿಭಿನ್ನ ಸಂಶೋಧನ ನೆಲೆಗಳಲ್ಲಿ ನೋಡಲಾಗುತ್ತಿದೆ. ಗುಣಾತ್ಮಕ ಹಾಗೂ ಪರಿಮಣಾತ್ಮಕ ಸಂಶೋಧನೆಗಳೆನ್ನುವ ಎರಡು ಬಗೆಯ ಸಂಶೋಧನ ನೆಲೆಗಳ ದೃಷ್ಟಿಯಿಂದ ವಿಭಿನ್ನ ಶಿಸ್ತುಗಳ ವಾದ ಮಂಡನ ಶೈಲಿಯಲ್ಲಿರುವ ಭಿನ್ನತೆಯನ್ನು ನೋಡಲಾಗುವುದು. ಅಧ್ಯಾಯದ ಮೊದಲ ಭಾಗದಲ್ಲಿ ಪ್ರಬಂಧ ರಚನೆಯನ್ನು ವ್ಯಾಖ್ಯಾನಿಸುವುದರೊಂದಿಗೆ ಗುಣಾತ್ಮಕ ಹಾಗೂ ಪರಿಮಾಣಾತ್ಮಕ ಸಂಶೋಧನೆಗಳ ಪ್ರಬಂದ ರಚನಾ ವಿಧಾನವನ್ನು ಪರಿಚಯಿಸಲಾಗುವುದು. ಇದೇ ಭಾಗದಲ್ಲಿ ಪ್ರಬಂಧ ರಚನೆಯ ವಿಧಾನವನ್ನು ಕೂಡ ಪರಿಚಯಿಸಲಾಗುವುದು. ಪ್ರಬಂಧ ರಚನೆಯಲ್ಲಿ ಅಥವಾ ವಾದ ಮಂಡನೆಯಲ್ಲಿ ಸಂಶೋಧಕರು ತಮ್ಮ ವಾದವನ್ನು ಸಮರ್ಥಿಸಲು ಸಂಗ್ರಹಿಸಿದ ಸಾಕ್ಷಿ, ಪುರಾವೆ, ದಾಖಲೆ ಇತ್ಯಾದಿಗಳನ್ನು ಬಳಸುವ ಕೆಲವೊಂದು ವಿಧಾನಗಳನ್ನು ಅಧ್ಯಾಯದ ಎರಡನೇ ಭಾಗದಲ್ಲಿ ವಿವರಿಸಲಾಗಿದೆ.

ಭಾಗ ೧

ಸಂಶೋಧಕರು ತಮ್ಮ ಸಂಶೋಧನ ಪ್ರಬಂಧದಲ್ಲಿ ಯಾವುದೋ ಒಂದು ವಿಷಯದ ಮೇಲಿನ ನಮ್ಮ ವಾದವನ್ನು ಪ್ರತಿಪಾದಿಸಲು ಪ್ರಯತ್ನಿಸುತ್ತಾರೆ. ಪ್ರತಿಯೊಬ್ಬರಿಗೂ ಹಲವಾರು ವಿಚಾರಗಳ ಕುರಿತು ತಮ್ಮದೇ ವಾದಗಳಿರುತ್ತವೆ. ಆ ಎಲ್ಲ ವಾದಗಳು ಒಂದು ಥೀಸಿಸ್ (ಪ್ರಬಂಧ) ಆಗುವುದಿಲ್ಲ. ಸಂಶೋಧಕರ ವಾದಗಳು ಥೀಸಿಸ್ ಆಗಬೇಕಾದರೆ ಈಗಾಗಲೇ ಸ್ಥಾಪಿತವಾದ ಸತ್ಯ/ಪ್ರತಿವಾದಗಳೊಂದಿಗೆ (ಏಂಟಿಥೀಸಿಸ್‌ಗಳೊಂದಿಗೆ) ವಾಗ್ವಾದ ನಡೆಸಬೇಕಾಗಿದೆ. ವಾಗ್ವಾದ ನಡೆಸಿ ಪ್ರತಿವಾದಗಳ ದೋಷಗಳನ್ನು, ಇತಿಮಿತಿಗಳನ್ನು ಗುರುತಿಸುತ್ತಾ ಸಂಶೋಧಕರು ತಮ್ಮ ವಾದವನ್ನು ಸಾಕ್ಷಿ ಸಮೇತ ಸಮರ್ಥಿಸಿಕೊಳ್ಳುವ ಪ್ರಕ್ರಿಯೆಯೇ ಸಂಶೋಧನ ಪ್ರಬಂಧ.[೧] ಅಂದರೆ ಸಂಶೋಧಕರ ವಾದಗಳು ಈಗಾಗಲೇ ಚಾಲ್ತಿಯಲ್ಲಿರುವ (ಇತರರ) ವಾದಗಳೊಂದಿಗೆ ಸಂವಾದ ನಡೆಸಿ ತಮಗೊಂದು ಸ್ಥಾನ ಕಲ್ಪಿಸಿಕೊಂಡಾಗ ಮಾತ್ರ ಥೀಸಿಸ್ ಆಗುತ್ತವೆ. ತಮ್ಮ ವಾದ ಇತರರ ವಾದಗಳೊಂದಿಗೆ ಸಂವಾದ ನಡೆಸಲು ಸಿದ್ಧವಿಲ್ಲದಿದ್ದರೆ ಇತರರ ವಾದಗಳು ಕೂಡ ತಮ್ಮ ವಾದವನ್ನು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಚಾಲ್ತಿಯಲ್ಲಿರುವ ಇತರ ವಾದಗಳು ಸಂಶೋಧಕರು ಮಂಡಿಸಲಿಚ್ಛಿಸುವ ವಾದಗಳನ್ನು ಪರಿಗಣಿಸದಿದ್ದರೆ ಪ್ರಬಂಧ ರಚನೆ ಸಾಧ್ಯವಿಲ್ಲ. ಹೀಗೆ ಇಡೀ ಪ್ರಬಂಧ ರಚನೆಯಲ್ಲಿ ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳೊಂದಿಗೆ ಸಂಶೋಧಕರು ಸ್ಥಾಪಿಸಲು ಅಥವಾ ಪ್ರತಿಪಾದಿಸಲು ಹೊರಟಿರುವ ವಾದಗಳು ನಡೆಸುವ

ಸಂವಾದ ಪ್ರಕ್ರಿಯೆ ಮುಖ್ಯ ಪಾತ್ರ ವಹಿಸುತ್ತದೆ. ಸಂಶೋಧನೆಗಳ ಬಳಕೆಯನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ವಿವಿಧ ಬಗೆಯ ಸಂಶೋಧನೆಗಳೆಂದು ವಿಂಗಡಿಸುವ ಪರಿಪಾಠವಿದೆ. ಯಾವುದೋ ಒಂದು ಸಂಗತಿಯನ್ನು ಕೇವಲ ವಿವರಿಸುವ ಉದ್ದೇಶವನ್ನು ಹೊಂದಿರುವ ಸಂಶೋಧನೆಯನ್ನು ವಿವರಣಾತ್ಮಕ ಸಂಶೋಧನೆ ಎಂದು ಗುರುತಿಸಿದರೆ ಎರಡು ಅಥವಾ ಹೆಚ್ಚಿನ ಸಂಗತಿಗಳ ನಡುವಿನ ಸಂಬಂಧವನ್ನು ವಿವರಿಸುವ ಸಂಶೋಧನೆಯನ್ನು ವಿಶ್ಲೇಷಣಾತ್ಮಕ ಸಂಶೋಧನೆ ಎಂದು ಕರೆಯುತ್ತಾರೆ. ಒಂದು ವಿಷಯವನ್ನು ಮತ್ತೊಂದರೊಂದಿಗೆ ಹೋಲಿಸಿ ತೀರ್ಮಾನಕ್ಕೆ ಬರುವ ಸಂಶೋಧನೆಯನ್ನು ತುಲನಾತ್ಮಕ ಸಂಶೋಧನೆ ಎನ್ನುತ್ತಾರೆ. ಯಾವುದೋ ಒಂದು ವಿಷಯ ಮತ್ತೊಂದರ ಮೇಲೆ ಮಾಡುವ ಪರಿಣಾಮವನ್ನು ಸಂಶೋಧಿಸುವ ಅಧ್ಯಯನವನ್ನು ಮೌಲ್ಯಮಾಪನ ಸಂಶೋಧನೆ ಎಂದು ಕರೆಯುತ್ತಾರೆ. ಹೀಗೆ ಹಲವಾರು ವಿಧದ ಸಂಶೋಧನೆಗಳಿವೆ. ಈ ಪುಸ್ತಕದಲ್ಲಿ ಸಂಶೋಧನೆಗಳನ್ನು ಮೇಲಿನ ರೂಪದಲ್ಲಿ ವಿಂಗಡಿಸಿಕೊಂಡಿಲ್ಲ. ಎಲ್ಲ ಸಂಶೋಧನೆಗಳಲ್ಲಿ ವಾದ ಮಂಡನೆ ಇದೆ ಎನ್ನುವ ಅಂಶವನ್ನು ಒಂದನೇ ಅಧ್ಯಾಯದಲ್ಲಿ ಸ್ಪಷ್ಟಪಡಿಸಿದ್ದೇನೆ. ಆದುದರಿಂದ ಆ ಚರ್ಚೆಯನ್ನು ಇಲ್ಲಿ ಪುನರಾವರ್ತಿಸುವುದಿಲ್ಲ. ಆದಾಗ್ಯೂ ಸಂಶೋಧನ ಪ್ರಬಂಧ ರಚನೆಯ ದೃಷ್ಟಿಯಿಂದ ಪ್ರಮುಖವಾಗಿರುವ ಎರಡು ಸಂಶೋಧನ ಪ್ರಕಾರಗಳನ್ನು-ಗುಣಾತ್ಮಕ ಮತ್ತು ಪರಿಮಾಣಾತ್ಮಕ-ಅರ್ಥಮಾಡಿಕೊಳ್ಳುವುದು ಅಗತ್ಯ. ಈ ಎರಡು ಪ್ರಕಾರಗಳು ಸಂಶೋಧನ ರಚನೆಯನ್ನು ವಿಭಿನ್ನವಾಗಿ ನೋಡುತ್ತಿವೆ. ಮೊದಲಿಗೆ ಈ ಎರಡು ಪ್ರಕಾರಗಳನ್ನು ಅರ್ಥಮಾಡಿಕೊಂಡು ನಂತರ ಪ್ರಬಂಧ ರಚನೆಯ ವಿಧಾನವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ.

ಗುಣಾತ್ಮಕ/ಪರಿಮಾಣಾತ್ಮಕ ಪ್ರಬಂಧ

ಅಂಕಿ ಅಂಶಗಳನ್ನು ಬಳಸದೆ ಸಂಶೋಧನ ಪ್ರಬಂಧ ರಚಿಸುವ ಕ್ರಮವನ್ನು ಗುಣಾತ್ಮಕ ಸಂಶೋಧನೆಯೆಂದು ಮತ್ತು ಅಂಕಿ ಅಂಶಗಳನ್ನು ಬಳಸಿಕೊಂಡು ರಚಿಸುವ ಪ್ರಬಂಧವನ್ನು ಪರಿಮಾಣಾತ್ಮಕ ಸಂಶೋಧನೆಯೆಂದು ವ್ಯಾಖ್ಯಾನಿಸಿಕೊಳ್ಳುವ ಒಂದು ಸಾಮಾನ್ಯ ತಿಳುವಳಿಕೆ ಇದೆ. ಇದು ಸರಿಯಾದ ತಿಳುವಳಿಕೆಯಲ್ಲ. ಗುಣಾತ್ಮಕ ಸಂಶೋಧನೆಯಲ್ಲೂ ಅಂಕಿ ಅಂಶಗಳ ಬಳಕೆ ಸಾಧ್ಯ. ಅಂಕಿ ಅಂಶಗಳ ಬಳಕೆಯ ನೆಲೆಯಲ್ಲಿ ಈ ಎರಡರ ನಡುವೆ (ಗುಣಾತ್ಮಕ ಮತ್ತು ಪರಿಮಾಣತ್ಮಾಕ) ವ್ಯತ್ಯಾಸಗಳಿರುವುದಿಲ್ಲ. ಕೆಲವೊಂದು ತಾತ್ವಿಕ ನಿಲುವುಗಳ ಕಾರಣಕ್ಕಾಗಿ ಈ ಎರಡು ಸಂಶೋಧನೆಗಳ ನಡುವೆ ವ್ಯತ್ಯಾಸಗಳಿವೆ. ಪರಿಮಾಣಾತ್ಮಕ ಸಂಶೋಧನೆ ಮೂಲತಃ ಎಂಪಿರಿಕಲ್ ವಿಧಾನದ ಕೊಡುಗೆ. ಎಂಪಿರಿಕಲ್ ವಿಧಾನ ಒಬ್ಜೆಕ್ಟಿವಿಟಿಯನ್ನು ಪ್ರತಿಪಾದಿಸುತ್ತದೆ. ಒಬ್ಜೆಕ್ಟಿವ್ ವರ್ಲ್ಡ್ ಒಂದು ಇದೆ. ಅದು ತಮ್ಮ ಆಲೋಚನೆ ಅಥವಾ ಮನಸ್ಸಿನ ಸೃಷ್ಟಿಯಲ್ಲ. ನಮ್ಮ ಆಲೋಚನೆಯನ್ನು ಹೊರತುಪಡಿಸಿ ಕೂಡ ಅದು ಇದೆ. ಇದನ್ನು ಎಂಪಿರಿಕಲ್ ಆಗಿ ಅಥವಾ ಇತರ ವಿಧಾನಗಳಿಂದ ನಾವು ಭಾಗಶಃ ಗ್ರಹಿಸಬಹುದು ಎನ್ನುವುದು ಒಬ್ಜೆಕ್ಟಿವಿಟಿ. ಸಮಾಜ

ಸಂಶೋಧನೆಯಲ್ಲಿ ಇದೇ ತತ್ತ್ವ ಈ ಕೆಳಗಿನಂತೆ ಕೆಲಸ ಮಾಡುತ್ತಿದೆ. ವಿವಿಧ ಸಂಸ್ಕೃತಿಗೆ ಸೇರಿದ ಜನರರು ಮೇಲ್ನೋಟಕ್ಕೆ ಭಿನ್ನವಾಗಿ ಕಾಣಬಹುದು. ಆದರೆ ಆಳದಲ್ಲಿ ಅವರೆಲ್ಲರ ಗುಣಗಳು ಒಂದೇ ಆಗಿದೆ. ಇಂತಹ ಗುಣಗಳನ್ನು ಎಂಫಿಕರಿಲ್ ಅಥವಾ ಇತರರ ವಿಧಾನಗಳಿಂದ ಅಧ್ಯಯನ ಮಾಡಿ ಇವರೆಲ್ಲರ ವ್ಯವಹಾರಗಳನ್ನು ಪ್ರಭಾವಿಸುವ ನಿಯಮಗಳನ್ನು ಕಂಡುಕೊಳ್ಳಬಹುದು ಎನ್ನುವ ಗೃಹಿತ ಪರಿಮಾಣಾತ್ಮಕ ಸಂಶೋಧನೆ ಮತ್ತು ವಿಶ್ಲೇಷಣೆಯ ಹಿಂದೆ ಕೆಲಸ ಮಾಡುತ್ತಿದೆ. ಇಲ್ಲಿ ಜನರಲೈಸೇಶನ್ ಸಾಧ್ಯ ಇದೆ. ಅಂದರೆ ಯಾವುದೇ ಒಂದು ಸಾಮಾಜಿಕ ಸಂಗತಿಯ ಇರುವಿಕೆಯ ಬಗ್ಗೆ ತೀರ್ಮಾನಕ್ಕೆ ಬರಲು ಪ್ರಪಂಚದ ಎಲ್ಲ ಸಂಸ್ಕೃತಿಗಳನ್ನು ಅಧ್ಯಯನ ಮಾಡುವ ಅಗತ್ಯ ಇಲ್ಲ. ಯಾವುದೋ ಒಂದು ಅಥವಾ ಕೆಲವು ಸಂಸ್ಕೃತಿಗಳನ್ನು ಅಧ್ಯಯನ ಮಾಡುವ ಮೂಲಕ ಇತರ ಸಂಸ್ಕೃತಿಗಳ ಗುಣಗಳನ್ನು ಕೂಡ ವಿವರಿಸಬಹುದೆಂದು ಪರಿಮಾಣಾತ್ಮಕ ಸಂಶೋಧನೆ ಗ್ರಹಿಸುತ್ತದೆ.[೩] ಸಮಾಜವನ್ನು ಈ ಬಗೆಯಲ್ಲಿ ಕಲ್ಪಿಸಿಕೊಳ್ಳುವುದರ ಬಗ್ಗೆ ಬಹು ಹಿಂದಿನಿಂದಲೇ ಆಕ್ಷೇಪಗಳಿದ್ದವು. ಸಮಾಜ ವಿಜ್ಞಾನ ಸಂಶೋಧನೆಯಲ್ಲಿ ಸಬ್ಜೆಟಿವ್ ವರ್ಲ್ಡ್ ಹಾಗೂ ಸಬ್ಜೆಟ್‌ವಿಟಿಯ ಪ್ರಾಮುಖ್ಯತೆಯನ್ನು ಬಹುಹಿಂದಿನಿಂದಲೇ ಗುರುತಿಸಬಹುದು. ಇದನ್ನು ಸ್ಥೂಲವಾಗಿ ಹರ್‌ಮೆನೆಟಿಕ್ಸ್ ಸಂಪ್ರದಾಯವೆನ್ನಬಹುದು. ಇದರ ಪ್ರಕಾರ ವಾಸ್ತವಿಕತೆ ಎನ್ನುವುದು ಅರ್ಥಪೂರ್ಣ ಸಾಮಾಜಿಕ ಕಟ್ಟುವಿಕೆ. ನಮ್ಮ ಆಲೋಚನೆಗಳಿಂದ ಪ್ರತ್ಯೇಕವಾದ ಪ್ರಪಂಚವೊಂದಿಲ್ಲ. ನಾವು ಇದೆ ಎಂದು ಗ್ರಹಿಸುತ್ತೇವೆ. ಆದುದರಿಂದ ಇದೆ. ವಿವಿಧ ಸಂಸ್ಕೃತಿಗೆ ಸೇರಿದ ಜನರು ಕೇವಲ ಮೇಲ್ನೋಟಕ್ಕೆ ಭಿನ್ನ ಅಲ್ಲ: ಆಳದಲ್ಲೂ ಭಿನ್ನವಾಗಿದ್ದಾರೆ. ಆದುದರಿಂದ ಯಾವುದೋ ಒಂದು ಅಥವಾ ಕೆಲವು ಸಂಸ್ಕೃತಿಗಳನ್ನು ಅಧ್ಯಯನ ಮಾಡಿ ಪ್ರಪಂಚದಲ್ಲಿರುವ ಎಲ್ಲ ಸಂಸ್ಕೃತಿಗಳ ಬಗ್ಗೆ ತೀರ್ಮಾನಕ್ಕೆ ಬರಲಾಗುವುದಿಲ್ಲವೆಂದು ಗುಣಾತ್ಮಕ ಸಂಶೋಧನೆಗೆ ಬದ್ಧರಾದವರು ಗ್ರಹಿಸುತ್ತಾರೆ.[೪]

ಗುಣಾತ್ಮಕ ಹಾಗೂ ಪರಿಮಾಣಾತ್ಮಕ ಸಂಶೋಧನೆಗಳ ನಡುವೆ ಮೇಲಿನ ತಾತ್ವಿಕ ಅಂತರಗಳು ಮಾತ್ರ ಇರುವುದಲ್ಲ ಸಂಶೋಧನ ಪ್ರಬಂಧ ರಚನೆಯಲ್ಲಿ ಸಾಕಷ್ಟು ಅಂತರವಿದೆ. ಬಹುತೇಕ ಸಮಾಜ ಸಂಶೋಧಕರು ಪರಿಮಾಣಾತ್ಮಕ ಸಂಶೋಧನ ಪ್ರಬಂಧ ರಚನೆ ಮಾಡುವುದರಿಂದ ಆರಂಭಿಕ ಸಂಶೋಧಕರಿಗೆ ಇದೊಂದೇ ಏಕಮಾತ್ರ ಪ್ರಬಂಧ ರಚನೆಯ ವಿಧಾನ ಎನ್ನುವ ಚಿತ್ರಣ ಇದೆ. ಪರಿಮಾಣಾತ್ಮಕ ಪ್ರಬಂಧ ರಚನೆಯ ಗುಣಲಕ್ಷಣಗಳು ಇಂತಿವೆ.[೫] ಒಂದು, ಪ್ರಬಂಧ ರಚನೆಯನ್ನು ಹಲವು ಹಂತಗಳಾಗಿ ವಿಂಗಡಿಸಿಕೊಳ್ಳಲಾಗುವುದು ಮತ್ತು ಒಂದು ಹಂತದ ಕೆಲಸ ಮುಗಿದ ನಂತರವೇ ಮತ್ತೊಂದು ಹಂತದ ಕೆಲಸ ಆರಂಭವಾಗಬೇಕೆನ್ನುವ ಗೃಹಿತ ಇದೆ. ವಿಷಯ ಆಯ್ಕೆ, ಪ್ರಸ್ತಾವ ರಚನೆ, ಕ್ಷೇತ್ರಕಾರ್ಯ ಮಾಡಿ ಮಾಹಿತಿ ಸಂಗ್ರಹಿಸುವುದು, ಸಂಗ್ರಹಿಸಿದ ಮಾಹಿತಿಯನ್ನು ಪರಿಷ್ಕರಿಸುವುದು ಮತ್ತು ಕೊನೆಗೆ ಪ್ರಬಂಧ ರಚನೆ. ಎರಡು, ಪ್ರಬಂಧ

ರಚನೆಯಲ್ಲಿ ಕ್ಷೇತ್ರಕಾರ್ಯ ಮಾಡಿ ಸಂಗ್ರಹಿಸಿ ಪರಿಷ್ಕರಿಸಿದ ಮಾಹಿತಿಗಳೇ (ಡಾಟಾ) ಮುಖ್ಯ ಭೂಮಿಕೆ ನಿಭಾಯಿಸಬೇಕು. ಇದನ್ನೇ ಇನ್ನೊಂದು ವಿಧದಲ್ಲಿ ಹೇಳುವುದಾದರೆ ಸಂಶೋಧನ ಪ್ರಬಂಧ ರಚನೆ ಸಂದರ್ಭದಲ್ಲಿ ಡಾಟಾ ಮಾತಾಡಬೇಕೇ ಹೊರತು ಸಂಶೋಧಕರು ಮಾತಾಡಬಾರದು. ಮೂರು, ಡಾಟಾದ ಜತೆಗೆ ಇತರ ಸಂಶೋಧಕರ ಅಥವಾ ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳು ಪ್ರಬಂಧದಲ್ಲಿ ಕಾಣಬಹುದೇ ಹೊರತು ಸಂಶೋಧಕರು ಮೊದಲ ವ್ಯಕ್ತಿ ರೂಪದಲ್ಲಿ (ಫಸ್ಟ್ ಪರ್ಸನ್) ಎಲ್ಲೂ ಪ್ರಬಂಧದಲ್ಲಿ ಎದ್ದು ಕಾಣಬಾರದು. ನಾಲ್ಕು, ಸಂಶೋಧಕರು ಮಂಡಿಸಲಿಚ್ಛಿಸುವ ವಾದಗಳು ಬಲಗೊಳ್ಳಬೇಕಾದರೆ ಅಂಕಿ ಅಂಶಗಳು, ಕೋಷ್ಟಕಗಳು, ನಕ್ಷೆಗಳು, ಚಾರ್ಟ್ ಇತ್ಯಾದಿಗಳು ಅನಿವಾರ್ಯ. ಇವುಗಳು ಇಲ್ಲದೆ ಮಂಡಿಸುವ ವಾದಗಳು ಇವುಗಳನ್ನು ಬಳಸಿಕೊಂಡು ಮಂಡಿಸುವ ವಾದಕ್ಕೆ ಸಮವಲ್ಲ ಎನ್ನುವ ನಂಬಿಕೆ ಬಲವಾಗಿದೆ. ಐದು, ಉಲ್ಲೇಖಗಳು, ಅಡಿಟಿಪ್ಪಣಿಗಳು, ಕೊನೆ ಟಿಪ್ಪಣಿ ಇತ್ಯಾದಿಗಳ ಮೂಲಕ ಸಂಶೋಧಕರು ಇತರ ಸಂಶೋಧಕರ ವಾದಗಳನ್ನು ಪರಿಗಣಿಸಿರುವುದು ಕಣ್ಣಿಗೆ ರಾಚುವ ಹಾಗೆ ಕಾಣುತ್ತಿರಬೇಕು. ಗುಣಾತ್ಮಕ ಸಂಶೋಧನ ಪ್ರಬಂಧ ರಚನೆಯನ್ನು ಪರಿಮಾಣಾತ್ಮಕ ಪ್ರಬಂಧ ರಚನೆಗೆ ವಿರುದ್ಧವಾಗಿ ಅರ್ಥಮಾಡಿಕೊಳ್ಳುವ ಪರಿಪಾಠ ಕೂಡ ಇದೆ. ಅಂದರೆ ಗುಣಾತ್ಮಕ ಸಂಶೋಧನ ಪ್ರಬಂಧ ರಚನೆಯಲ್ಲಿ ಸಂಶೋಧಕರು ಮುಖ್ಯವಾಗಿ ಡಾಟಾ ನಗಣ್ಯವಾಗುವುದು, ಸಂಶೋಧಕರು ಮೊದಲ ವ್ಯಕ್ತಿ ರೂಪದಲ್ಲಿ ಕಥನವೊಂದನ್ನು ವಿವರಿಸಿದಂತೆ ಸಂಶೋಧನ ಪ್ರಬಂಧವನ್ನು ಕಟ್ಟಿಕೊಡುವುದು, ಉಲ್ಲೇಖಗಳು, ಅಡಿಟಿಪ್ಪಣಿ, ಕೊನೆಟಿಪ್ಪಣಿ, ನಕ್ಷೆ, ಕೋಷ್ಟಕ, ಅಂಕಿ ಅಂಶ ಇತ್ಯಾದಿಗಳಿಗೆ ಮಹತ್ವದ ಪಾತ್ರ ಇಲ್ಲದಿರುವುದು ಇತ್ಯಾದಿ ಗುಣಲಕ್ಷಣಗಳಿಂದ ಗುಣಾತ್ಮಕ ಸಂಶೋಧನ ಪ್ರಬಂಧವನ್ನು ನೋಡಲಾಗುತ್ತಿದೆ.[೫] ಈ ಎರಡೂ ದೃಷ್ಟಿಕೋನಗಳು ಕೂಡ ವಾಸ್ತವದಲ್ಲಿ ನಡೆಯುವ ಸಂಶೋಧನ ಪ್ರಬಂಧ ರಚನೆಯನ್ನು ಅರ್ಥಮಾಡಿಕೊಳ್ಳಲು ಪೂರಕವಾಗಿಲ್ಲ. ಹಾಗೆ ನೋಡಿದರೆ ವಾಸ್ತವದಲ್ಲಿ ಈ ಎರಡು ದೃಷ್ಟಿಕೋನಗಳು ಬೆರೆತು ಪ್ರಬಂಧ ರಚನೆಯಾಗುವುದು ಕಂಡುಬರುತ್ತದೆ.

ಪರಿಮಾಣಾತ್ಮಕ ಸಂಶೋಧನ ಪ್ರಬಂಧ ರಚನೆ ಹೇಳುವಂತೆ ಪ್ರಬಂಧ ರಚನೆ ಕೆಲಸ ಸಂಶೋಧನೆಯ ಎಲ್ಲ ಹಂತಗಳು (ವಿಷಯ ಆಯ್ಕೆ, ಕ್ಷೇತ್ರಕಾರ್ಯ, ಮಾಹಿತಿ ಸಂಗ್ರಹ ಮಾಹಿತಿ ಪರಿಷ್ಕರಣೆ ಇತ್ಯಾದಿಗಳು) ಮುಗಿದ ನಂತರ ಆರಂಭವಾಗುವ ಪ್ರಕ್ರಿಯೆಯಲ್ಲ. ವಾಸ್ತವದಲ್ಲಿ ವಿಷಯ ಆಯ್ಕೆಯಿಂದಲೇ ಅದಕ್ಕಿಂತಲೂ ಮುನ್ನವೇ ಪ್ರಬಂಧ ರಚನೆಯ ಕೆಲಸ ಆರಂಭವಾಗುತ್ತದೆ. ಸಂಶೋಧಕರು ಮಂಡಿಸಲಿರುವ ವಾದದ ರೂಪದಲ್ಲಿ ಅಥವಾ ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳನ್ನು ಪ್ರಶ್ನಿಸುವ ರೂಪದಲ್ಲಿ, ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಕ್ಕೆ ಬರುವ ಹೊಸ ಹೊಸ ಸಂಗತಿಗಳ ರೂಪದಲ್ಲಿ, ತಮ್ಮ ಸಂಶೋಧನೆಯೆಂದು ಇತರ ಸಂಶೋಧಕರೊಂದಿಗೆ ಹಂಚಿಕೊಳ್ಳುವ ಸಂದರ್ಭದಲ್ಲಿ ಹೀಗೆ ಹಲವಾರು ಸಂದರ್ಭಗಳಲ್ಲಿ ಪ್ರಬಂಧ ರಚನೆ ನಡೆಯುತ್ತಲೇ ಇರುತ್ತದೆ. ಇದೊಂದು

ರೀತಿಯಲ್ಲಿ ಮಣ್ಣಲ್ಲಿ ಹೂತ ಬೀಜ ಮೊಳಕೆಯೊಡೆದು ಗಿಡವಾಗಿ ಮರವಾಗಿ ಬೆಳೆದಂತೆ. ಸಂಶೋಧನೆಯ ಎಲ್ಲ ಹಂತಗಳು ಮುಗಿದ ನಂತರ ಒಂದೇ ಬಾರಿಗೆ ಬರೆದು ಮುಗಿಸುವ ಕೆಲಸವಲ್ಲ ಸಂಶೋಧನ ಪ್ರಬಂಧ ರಚನೆ. ಶಿಲ್ಪಿಯೊಬ್ಬ ತನ್ನ ಶಿಲ್ಪಾಕೃತಿಯನ್ನು ದಿನನಿತ್ಯ ಕೆತ್ತಿ ತಿದ್ದಿ ತೀಡಿ ರೂಪುಕೊಟ್ಟಂತೆ ಸಂಶೋಧಕರು ಕೂಡ ದಿನನಿತ್ಯ ಬರೆದು ತಿದ್ದಿ ಪುನಃ ಬರೆದು ಪ್ರಬಂಧಕ್ಕೆ ರೂಪಕೊಡಬೇಕಾಗುತ್ತದೆ. ಇಡೀ ಬರಹ ಪ್ರಕ್ರಿಯೆ ಸಂಶೋಧನ ವಿಷಯವನ್ನು ಹೊಸತಾಗಿ ಪರಿಚಯಿಸಿಕೊಳ್ಳುವ ಮತ್ತು ಪ್ರತಿಯೊಂದು ಪುನರ್ ಬರಹ ಕೂಡ ವಿಷಯದ ಪುನರ್ ನಿರ್ವಚನೆ ಹಾಗೂ ನಿರೂಪಣ ಪ್ರಕ್ರಿಯೆಯಾಗುತ್ತದೆ.[1] ಸಂಶೋಧನ ಪ್ರಬಂಧ ರಚನೆ ಒಂದು ಯಾಂತ್ರಿಕ ಪ್ರಕ್ರಿಯೆ ಮತ್ತು ಕತೆ ಕಾದಂಬರಿ ಬರೆಯುವುದು ಒಂದು ಭಾವನಾತ್ಮಕ ಪ್ರಕ್ರಿಯೆ ಎನ್ನುವ ಗ್ರಹಿತ ಕೂಡ ಚಾಲ್ತಿಯಲ್ಲಿದೆ. ಭಾವನೆಗಳು ಹಾಗೂ ವಿಚಾರಗಳು ಬೇರೆ ಬೇರೆ ಎಂದು ನಂಬುವವರು ಮಾಡುವ ವಾದ ಇದು. ವಾಸ್ತವದಲ್ಲಿ ಈ ಎರಡರಲ್ಲಿ ತೊಡಗಿಸಿಕೊಳ್ಳುವಾಗ ಇರಬೇಕಾದ ಮನೋಭಾವದಲ್ಲಿ ವಿಶೇಷ ವ್ಯತ್ಯಾಸ ಇರಲು ಸಾಧ್ಯವಿಲ್ಲ. ಕತೆ ಕಾದಂಬರಿ ರಚನಕಾರರಂತೆ ಪ್ರಬಂಧ ರಚನಕಾರರು ಕೂಡ ಭಾವನಾತ್ಮಕವಾಗಿ ತಮ್ಮ ಅಧ್ಯಯನ ವಿಷಯದೊಂದಿಗೆ ಗುರುತಿಸಿಕೊಳ್ಳದಿದ್ದರೆ ಪ್ರಬಂಧ ರಚನೆ ಸಾಧ್ಯವಿಲ್ಲ. ಅಧ್ಯಯನ ವಿಷಯದ ಗುಂಗಿನಲ್ಲಿ ಅಧ್ಯಯನದ ಅವಧಿಪೂರ್ತಿ ಸಂಶೋಧಕರಿದ್ದರೆ ಮಾತ್ರ ಅರ್ಥಪೂರ್ಣ ಪ್ರಬಂಧ ರಚನೆ ಸಾಧ್ಯ. ಇದೇ ರೀತಿಯಲ್ಲಿ ಶಿಸ್ತುಬದ್ಧ ವಾದ ಮಂಡನೆ ಇಲ್ಲದಿದ್ದರೆ ಕತೆ ಕಾದಂಬರಿಗಳು ಕೂಡ ಸಾಧ್ಯವಿಲ್ಲ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಶಿವರಾಮ ಕಾರಂತರ ಚೋಮನ ದುಡಿ ಕಾದಂಬರಿ, ಎಸ್.ಎಲ್. ಭೈರಪ್ಪನವರ ಪರ್ವ ಕಾದಂಬರಿ, ಎಂ.ಎನ್.ಶ್ರೀನಿವಾಸ್ ಅವರ ರಿಮೆಂಬರ್‌ಡ್ ವಿಲೇಜ್ ಸಂಶೋಧನ ಬರಹ ಮುಂತಾದವುಗಳು.[2]

ಸಂಶೋಧನ ಬರಹಗಳಲ್ಲಿ ಡಾಟಾ ಮಾತ್ರ ಮಾತಾಡಬೇಕು ಎನ್ನುವ ಗ್ರಹತ ಕೂಡ ಇಂದು ಅವಾಸ್ತವ. ಸಂಶೋಧಕರು ತಮ್ಮ ಅನುಭವವನ್ನು ಹೇಳುವುದು ಅಥವಾ ಸಂಶೋಧಕರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅಥವಾ ಇತರ ಸಂದರ್ಭಗಳಲ್ಲಿ ನೋಡಿದ ಘಟನೆಗಳನ್ನು ತಮ್ಮ ವಾದ ಸಮರ್ಥನೆಗೆ ಬಳಸಿಕೊಳ್ಳುವುದು ಅಥವಾ ಪ್ರತಿವಾದಿಗಳ ವಾದಗಳನ್ನು ಅಲ್ಲಗಳೆಯಲು ಬಳಸಿಕೊಳ್ಳುವುದು ಅಸಹಜವೇನಲ್ಲ. ಸಂಶೋಧಕರು ತಮ್ಮ ಅನುಭವಗಳನ್ನು ಬಳಸಿಕೊಳ್ಳುವಾಗ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಅವರ ಅನುಭವಗಳು ವಾದ ಸಮರ್ಥನೆಗೆ ಬಳಸಿಕೊಳ್ಳುವ ಒಟ್ಟು ಮಾಹಿತಿಗಳಲ್ಲಿ ಸಣ್ಣ ಪ್ರಮಾಣದಲ್ಲಿರಬೇಕು. ಅಂದರೆ ಪ್ರಬಂಧದ ಮುಖ್ಯ ವಾದದ ಸಮರ್ಥನೆಗೆ ಬೇಕಾದ ಎಲ್ಲ ಸಾಕ್ಷಿ, ಪುರಾವೆ, ದಾಖಲೆ ಇತ್ಯಾದಿಗಳೆಲ್ಲವು ಸಂಶೋಧಕರ ಸ್ವಂತ ಅನುಭವದ ನೆಲೆಯಲ್ಲಿಯೇ ರೂಪುಗೊಳ್ಳಬಾರದು. ಕೋಷ್ಟಕ, ಅಂಕಿ ಅಂಶಗಳು, ನಕ್ಷೆ, ಚಾರ್ಟ್ ಇತ್ಯಾದಿಗಳನ್ನು ಕೇವಲ ಪರಿಮಾಣಾತ್ಮಕ ಸಂಶೋಧನೆಗಳಲ್ಲಿ ಮಾತ್ರ ಬಳಸುವುದೆನ್ನುವ

ಗ್ರಹಿತ ಇದೆ. ಗುಣಾತ್ಮಕ ಸಂಶೋಧನೆಯಲ್ಲಿ ಇವುಗಳಿಗೆ ಯಾವುದೇ ಪಾತ್ರ ಇಲ್ಲ ಎನ್ನುವ ನಂಬಿಕೆಯೂ ಇದೆ. ಜತೆಗೆ ಆರಂಭಿಕ ಸಂಶೋಧಕರು ಎಷ್ಟೋ ಸಂದರ್ಭಗಳಲ್ಲಿ ಕೋಷ್ಟಕ, ಅಂಕಿ ಅಂಶ, ನಕ್ಷೆ, ಇತ್ಯಾದಿಗಳನ್ನು ವಿವರಿಸುವುದನ್ನೇ ವಿಶ್ಲೇಷಣೆ ಎಂದು ತಪ್ಪಾಗಿ ಅರ್ಥಮಾಡಿಕೊಳ್ಳುವುದನ್ನು ಕಾಣಬಹುದು. ಇದು ಕೂಡ ಸರಿಯಾದ ತಿಳುವಳಿಕೆಯಲ್ಲ. ಎಲ್ಲ ಸಂಶೋಧನೆಗಳಲ್ಲೂ ಇವುಗಳನ್ನು ಬಳಸಿಕೊಳ್ಳಬಹುದು. ಇವುಗಳನ್ನು ಬಳಸಿಕೊಳ್ಳುವಾಗ ಅನುಸರಿಸಬೇಕಾದ ಮುಖ್ಯ ನಿಯಮವೆಂದರೆ ವಾದ ಸಮರ್ಥನೆಗೆ ಸಾಕ್ಷಿಗಳಾಗಿ ಅಥವಾ ಪುರಾವೆಗಳಾಗಿ ಮಾತ್ರ ಇವುಗಳನ್ನು ಬಳಸಿಕೊಳ್ಳಬೇಕಾಗುತ್ತದೆ. ಕೋಷ್ಟಕ, ನಕ್ಷೆ, ಅಂಕಿ ಅಂಶ ಇತ್ಯಾದಿಗಳು ವಾದವನ್ನು ಸಮರ್ಥಿಸಬಹುದೇ ಹೊರತು ಅವುಗಳೇ ವಾದಗಳಾಗಲು ಸಾಧ್ಯವಿಲ್ಲ. ಇತರ ಸಂಶೋಧಕರ ವಾದಗಳನ್ನು ಉಲ್ಲೇಖಿಸುವುದು ಸಂಶೋಧನ ಪ್ರಬಂಧದ ವಿಧಾನದ ಚರ್ಚೆಯಲ್ಲಿ ಪರಿಗಣಿಸಬೇಕಾದ ಅಂಶ ಮಾತ್ರವಲ್ಲ ಇಡೀ ಸಂಶೋಧನ ಪ್ರಕ್ರಿಯೆಯೇ ನಿಂತಿರುವುದು ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳನ್ನು ಪ್ರಶ್ನಿಸುವುದರ ಮೇಲೆ. ಇಂದು ನಾವು ಸಂಶೋಧನೆ ಮಾಡಲು ಹೊರಟಿರುವ ವಿಚಾರದ ಬಗ್ಗೆ ಯಾವುದೇ ಸಂಶೋಧನೆ ಅಥವಾ ದಾಖಲೆಗಳು ಆಗಿಯೇ ಇಲ್ಲ ಎಂದು ಊಹಿಸಿಕೊಂಡು ಹೊರಡುವುದು ಸರಿಯಲ್ಲ. ಶಿಸ್ತು ಬದ್ಧ ಸಂಶೋಧನೆ ಅಲ್ಲದಿದ್ದರೂ ನಾವು ಸಂಶೋಧನೆ ಮಾಡಲಿಚ್ಛಿಸುವ ವಿಚಾರಕ್ಕೆ ನೇರವಾಗಿ ಅಥವಾ ಪರೋಕ್ಷವಾಗಿ ಸಂಬಂಧಿಸಿದ ಸಾಕಷ್ಟು ಬರಹಗಳು ಅಥವಾ ದಾಖಲೆಗಳಿವೆ. ಈ ಬರಹಗಳ ಅಥವಾ ದಾಖಲೆಗಳ ಅರಿವು ನಮ್ಮ ಸಂಶೋಧನಾ ಪ್ರಶ್ನೆಗಳನ್ನು ರೂಪಿಸಿಕೊಳ್ಳುವಲ್ಲಿ ಅವಶ್ಯ. ಉತ್ತಮ ಸಂಶೋಧನ ಪ್ರಶ್ನೆಗಳು ಅಧ್ಯಯನದ ವಿಧಾನವನ್ನು ಮತ್ತು ಅಧ್ಯಯನದ ವಿಧಾನಗಳನ್ನು ಪ್ರಭಾವಿಸುತ್ತವೆ. ನಾವು ಸಂಶೋಧನೆ ಮಾಡಲು ಹೊರಟಿರುವ ವಿಚಾರಕ್ಕೆ ಸಂಬಂಧಿಸಿದ ದಾಖಲೆಗಳ ಸಂಪೂರ್ಣ ಅಲ್ಲದಿದ್ದರೂ ಸಾಕಷ್ಟು ಪ್ರಮಾಣದಲ್ಲಿ ಪರಿಚಯ ಮಾಡಿಕೊಳ್ಳುವುದು ಸಂಶೋಧಕರ ಆದ್ಯ ಕರ್ತವ್ಯ. ಆದುದರಿಂದ ಅವುಗಳನ್ನು ಉಲ್ಲೇಖಿಸುವುದು ಅನಿವಾರ್ಯ. ಅವುಗಳನ್ನು ಹೇಗೆ ಉಲ್ಲೇಖಿಸಬೇಕೆಂದು ಸಾಕ್ಷಿ ಪುರಾವೆಗಳ ಸಂಗ್ರಹದ ಮೇಲಿನ ಅಧ್ಯಾಯದಲ್ಲಿ ವಿವರಿಸಲಾಗಿದೆ. ಕೊನೆಯದಾಗಿ ಅಡಿ ಟಿಪ್ಪಣಿ ಮತ್ತು ಕೊನೆ ಟಿಪ್ಪಣಿ ಕೊಡುವುದು ಕೂಡ ಸಂಶೋಧನ ಪ್ರಬಂಧದ ಅವಿಭಾಜ್ಯ ಅಂಶ. ಅಡಿಟಿಪ್ಪಣಿ ಮತ್ತು ಕೊನೆ ಟಿಪ್ಪಣಿ ಅಂದರೇನು? ಅವುಗಳನ್ನು ಯಾಕೆ ಕೊಡಬೇಕು? ಮತ್ತು ಹೇಗೆ ಕೊಡಬೇಕು? ಇತ್ಯಾದಿ ಪ್ರಶ್ನೆಗಳಿಗೆ ಅಧ್ಯಾಯದ ಮುಂದಿನ ಪುಟಗಳಲ್ಲಿ ಉತ್ತರಿಸಿದ್ದೇನೆ. ಮುಂದಿನ ಪ್ಯಾರಾಗಳಲ್ಲಿ ಸಂಶೋಧನ ಪ್ರಬಂಧ ರಚನೆಯ ವಿಧಾನವನ್ನು ವಿವರಿಸಲಾಗಿದೆ.

ಪ್ರಬಂಧ ರಚನೆ

ಸಂಶೋಧನ ಪ್ರಬಂಧ ರಚನೆಯ ಒಂದು ನಿರ್ದಿಷ್ಟ ವಿಧಾನವನ್ನು ನೀಡುವುದು ಕಷ್ಟ ಸಾಧ್ಯ. ಯಾಕೆಂದರೆ ಸಂಶೋಧನ ಪ್ರಬಂಧ ರಚನೆ ಒಂದು ತರ್ಕಬದ್ಧವಾದ ವಾದ ಮಂಡನೆಯ ಕೆಲಸ. ತರ್ಕಬದ್ಧವಾದ ಮಂಡನೆಯನ್ನು ಮಾಡುವ ವಿಧಾನಗಳು

ಹಲವಿರಬಹುದು. ಆ ಎಲ್ಲವನ್ನು ಪಟ್ಟಿ ಮಾಡಿ ಅವುಗಳಲ್ಲಿ ಯಾವುದು ಉತ್ತಮವೆಂದು ವಿಶ್ಲೇಷಣೆ ಮಾಡುವುದಕ್ಕಿಂತ ತರ್ಕಬದ್ಧವಾದ ವಾದ ಮಂಡನೆಯ ಮುಖ್ಯ ಲಕ್ಷಣವೇನೆಂದು ತಿಳಿದುಕೊಳ್ಳುವ ಕೆಲಸ ಮೊದಲಾಗಬೇಕಾಗಿದೆ. ತರ್ಕಬದ್ಧವಾದ ಮಂಡನೆಯ ಮುಖ್ಯ ಲಕ್ಷಣಗಳು ಅರ್ಥವಾದರೆ ಪ್ರತಿಸಂಶೋಧಕರು ಕೂಡ ತಮ್ಮದೇ ರೀತಿಯಲ್ಲಿ ವಾದ ಮಂಡನೆ ಮಾಡಬಹುದು. ವಿಷಯದ ಆಯ್ಕೆ ಅಧ್ಯಾಯದಲ್ಲಿ ತರ್ಕಬದ್ಧವಾದ ವಾದ ಮಂಡನೆಯ ಮೂಲಭೂತ ಲಕ್ಷಣವನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ. ಯಾವುದೋ ಒಂದು ವಿಷಯದ ಮೇಲೆ ಈಗಾಗಲೇ ಮಂಡನೆಯಾಗಿರುವ ವಾದಗಳನ್ನು ವಿಶ್ಲೇಷಿಸುವುದು, ಅವುಗಳು ಪರಿಗಣಿಸಿರುವ ಅಂಶಗಳನ್ನು ಗುರುತಿಸುವುದು, ಅವುಗಳು ಪರಿಗಣಿಸದಿರುವ ಆಯಾಮಗಳನ್ನು ಪಟ್ಟಿ ಮಾಡುವುದು, ಅವುಗಳು ತಮ್ಮ ವಾದ ಮಂಡನೆಗೆ ಬಳಸಿದ ಸಾಕ್ಷಿ, ಪುರಾವೆಗಳನ್ನು ಪರಶೀಲಿಸುವುದು, ಅವುಗಳಲ್ಲಿರುವ ಕೊರತೆಗಳನ್ನು/ದೋಷಗಳನ್ನು ಪಟ್ಟಿ ಮಾಡುವುದು ಮತ್ತು ಈ ಎಲ್ಲದರ ಹಿನ್ನೆಲೆಯಲ್ಲಿ ಬದಲೀ ವಾದವನ್ನು ಪುರಾವೆ ಸಮೇತ ಮಂಡಿಸುವುದು ತರ್ಕಬದ್ಧವಾದ ವಾದ ಮಂಡನೆಯ ಮೂಲ ತತ್ವಗಳು. ತರ್ಕಬದ್ಧವಾದ ಮಂಡನೆಯ ಈ ತತ್ತ್ವವನ್ನು ಬಳಸಿಕೊಂಡು ಪ್ರಬಂಧ ರಚನೆಯ ವಿಧಾನವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ.

ತಮ್ಮ ವಾದ ಮಂಡನೆಗೆ ತಮಗೆ ಪೂರಕವಾಗುವ ಸಂಗತಿಗಳೆಂದರೆ ತಮ್ಮ ಜೀವನಾನುಭವ ಮತ್ತು ಸಂಶೋಧನ ವಿಷಯದ ಮೇಲೆ ಯೋಜಿತ ನೆಲೆಯಲ್ಲಿ ಕ್ಷೇತ್ರ ಕಾರ್ಯ ನಡೆಸಿ ಸಂಗ್ರಹಿಸಿದ ಮಾಹಿತಿಗಳು. ಕ್ಷೇತ್ರಕಾರ್ಯ ಅಂದ ಕೂಡಲೇ ಬಹುತೇಕ ಸಂಶೋಧಕರ ಕಲ್ಪನೆಗೆ ಬರುವುದು ಪ್ರಶ್ನಾವಳಿ ಹಿಡಿದುಕೊಂಡು ಜನರನ್ನು ಮಾತಾಡಿಸಿ ಮಾಹಿತಿ ಸಂಗ್ರಹಿಸುವ ಚಿತ್ರಣ. ಚರಿತ್ರೆಯಂತಹ ವಿಷಯಗಳಲ್ಲಿ ಡೈರಿಗಳನ್ನು ಓದಿ ಮಾಹಿತಿ ಸಂಗ್ರಹಿಸುವುದು ಅಥವಾ ಪತ್ರಗಳನ್ನು ಓದಿ ಮಾಹಿತಿ ಸಂಗ್ರಹಿಸುವುದು ಕೂಡ ಕ್ಷೇತ್ರಕಾರ್ಯವಾಗುತ್ತದೆ. ಅದೇ ರೀತಿಯಲ್ಲಿ ಗ್ರಂಥಗಳನ್ನು ವಿಶ್ಲೇಷಿಸಿ ಮಾಹಿತಿ ಸಂಗ್ರಹಿಸುವುದು ಕೂಡ ಕ್ಷೇತ್ರಕಾರ್ಯವಾಗುತ್ತದೆ. ಈ ಎಲ್ಲ ಕ್ಷೇತ್ರಕಾರ್ಯಗಳಿಂದ ಬಂದ ಮಾಹಿತಿಗಳು ತಮ್ಮ ವಾದವನ್ನು ಬಲಪಡಿಸಬಹುದು ಅಥವಾ ತಿರಸ್ಕರಿಸಬಹುದು. ಎರಡೂ ನಡೆದಾಗಲೂ(ಬಲಗೊಂಡಾಗ ಮತ್ತು ತಿರಸ್ಕಾರಗೊಂಡಾಗ) ಥೀಸಿಸ್ ಸಿದ್ಧವಾಗುತ್ತದೆ. ಆದರೆ ನಮ್ಮಲ್ಲಿ ಬಹುತೇಕರಿಗೆ ತಮ್ಮ ವಾದಗಳು ಬಲಗೊಂಡಾಗ ಮಾತ್ರ ಥೀಸಿಸ್ ಸಿದ್ಧವಾಗುತ್ತದೆ ಎನ್ನುವ ಕಲ್ಪನೆ ಇದೆ. ಇದರಿಂದಾಗಿ ತಮ್ಮ ವಾದ ಗಳನ್ನು ಅಲ್ಲಗೆಳೆಯುವ ಅಥವಾ ತಿರಸ್ಕರಿಸುವ ವಾದಗಳೊಂದಿಗೆ ಅವರು ಸಂವಾದ ನಡೆಸಲು ಹೋಗುವುದೇ ಇಲ್ಲ. ಇದು ಸರಿಯಾದ ಕ್ರಮವಲ್ಲ. ತಮ್ಮ ವಾದಗಳನ್ನು ಅಲ್ಲ ಗೆಳೆಯುವ ಅಥವಾ ತಿರಸ್ಕರಿಸುವ ವಾದಗಳೊಂದಿಗೆ ಸಂವಾದ ನಡೆಸಿ ತಮ್ಮ ವಾದವನ್ನು ಸ್ಥಾಪಿಸುವುದು ಉತ್ತಮ ಥೀಸಿಸ್‌ನ ಲಕ್ಷಣ. ಒಂದು ಥೀಸಿಸ್ ಸಾಮಾನ್ಯವಾಗಿ ಒಳಗೊಂಡಿರುವ ಅಧ್ಯಾಯಗಳತ್ತ ಗಮನ ಹರಿಸುವ. ಇಲ್ಲೂ ಕಟ್ಟುನಿಟ್ಟಿನ ನಿಯಮವೇನಿಲ್ಲ. ಅಂದರೆ ಒಂದು ಮಹಾಪ್ರಬಂಧ ಇಷ್ಟೇ

ಅಧ್ಯಾಯಗಳನ್ನೊಡಿರಬೇಕು ಮತ್ತು ಪ್ರತಿ ಅಧ್ಯಾಯದಲ್ಲೂ ಇಂತಹದೇ ವಿಷಯಗಳಿರಬೇಕೆನ್ನುವ ನಿಯಮವೇನಿಲ್ಲ. ಸಂಶೋಧನೆಯೆಂದರೆ ತರ್ಕಬದ್ಧ ವಾದ ಮಂಡನೆ ಎನ್ನುವ ಮೇಲಿನ ವ್ಯಾಖ್ಯಾನವನ್ನು ಅಧ್ಯಾಯ ರಚನೆ ಹಾಗೂ ಜೋಡನೆಗಳ ಸಂದರ್ಭದಲ್ಲಿ ಸತತವಾಗಿ ಪರಿಗಣಿಸುತ್ತಿರಬೇಕು. ಪ್ರಬಂಧದ ಆರಂಭದಿಂದ ಅಂತ್ಯದವರೆಗೆ ತಮ್ಮ ವಾದ, ಅದು ಪ್ರತಿವಾದಗಳೊಂದಿಗೆ ನಡೆಸುವ ಸಂವಾದ ಮತ್ತು ಸಂವಾದ ನಡೆಸಿದ ನಂತರದ (ತಮ್ಮ ವಾದದ) ಸ್ಥಾನ ಇತ್ಯಾದಿಗಳು ಸ್ಪಷ್ಟವಾಗಿ ಮೂಡಿಬರಬೇಕು. ಅಂದರೆ ಆರಂಭದ ಅಧ್ಯಾಯದಿಂದ ಕೊನೆಯ ಅಧ್ಯಾಯದವರೆಗೂ ಒಂದು ವಾದ ಸರಣಿ ಸ್ಫೋಟವಾಗಿ ಗೋಚರವಾಗಬೇಕು. ಈ ಎಲ್ಲದರ ಹಿನ್ನೆಲೆಯಲ್ಲಿ ಸಂಶೋಧನ ಪ್ರಬಂಧ ಒಳಗೊಂಡಿರುವ ಅಧ್ಯಾಯನಗಳು ಮತ್ತು ಪ್ರತಿ ಅಧ್ಯಾಯ ಒಳಗೊಂಡಿರಬೇಕಾದ ಮಾಹಿತಿಗಳ ಸಂಕ್ಷಿಪ್ತ ಪರಿಚಯ ಮಾಡಿಕೊಳ್ಳೋಣ.

ಸಾಮಾನ್ಯವಾಗಿ ಒಂದು ಸಂಶೋಧನ ಪ್ರಬಂಧದಲ್ಲಿ ಈ ಕೆಳಗಿನ ವಿಷಯಗಳ ಮೇಲೆ ಅಧ್ಯಾಯಗಳಿರುತ್ತವೆ.[೬] ಒಂದು, ಅಧ್ಯಯನದ ಉದ್ದೇಶ, ವಿಧಿ ವಿಧಾನ, ಪ್ರಾಮುಖ್ಯತೆ ಇತ್ಯಾದಿಗಳನ್ನು ಪರಿಚಯಿಸುವ ಪ್ರಸ್ತಾವಿಕ ಬರಹ, ಎರಡು, ಸಂಶೋಧನ ವಿಷಯದ ತಾತ್ವಿಕ ಹಿನ್ನೆಲೆಯನ್ನು ಅಥವಾ ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳನ್ನು ಪರಿಚಯಿಸುವ ಅಧ್ಯಾಯ, ಮೂರು, ಕ್ಷೇತ್ರಕಾರ್ಯದ ಅಂಕಿ ಅಂಶಗಳ ಮೇಲೆ ಕೇಂದ್ರಿತವಾದ ಪ್ರಬಂಧವಾದರೆ ಕ್ಷೇತ್ರಕಾರ್ಯ ನಡೆಸಿದ ಪ್ರದೇಶದ (ಗ್ರಾಮ, ಊರು, ಪೇಟೆ, ಪಟ್ಟಣ ಇತ್ಯಾದಿಗಳ) ಒಟ್ಟಾರೆ ಪರಿಚಯವನ್ನು ಮಾಡುವ ಅಧ್ಯಾಯ, ನಾಲ್ಕು, ಸಂಶೋಧನೆಯ ಮುಖ್ಯ ಉದ್ದೇಶಗಳ ಚರ್ಚೆಗಳನ್ನು ನಡೆಸುವ ಅಧ್ಯಾಯಗಳು ಮತ್ತು ಐದು, ಸಾರಾಂಶ, ಪ್ರತಿ ಅಧ್ಯಾಯ ಒಳಗೊಳ್ಳಬೇಕಾಗಿರುವ ಮಾಹಿತಿಗಳ ಕಿರು ಪರಿಚಯ ಮಾಡಿಕೊಳ್ಳೋಣ. ಇಡೀ ಸಂಶೋಧನ ಪ್ರಬಂಧ ಏನನ್ನು ಹೇಳಲು ಪ್ರಯತ್ನಿಸುತ್ತಿದೆ ಎನ್ನುವುದರ ಸಂಕ್ಷಿಪ್ತ ಪರಿಚಯ ಪ್ರಸ್ತಾವನೆಯಲ್ಲಿ ಇರಬೇಕು. ಸಂಶೋಧನ ವಿಷಯಕ್ಕೆ ಸಂಬಂಧಿಸಿದ ಥಿಯರಿಗಳನ್ನು/ಈಗಾಗಲೇ ಸ್ಥಾಪಿತ ಸತ್ಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸುತ್ತಾ ಆ ಥಿಯರಿಗಳಿಂದ ರೂಪುಗೊಂಡ ನಿಲುವುಗಳು ಮತ್ತು ಅವುಗಳ ಹಿನ್ನೆಲೆಯಲ್ಲಿ ನಡೆದ ಅಧ್ಯಯನಗಳು ಅಥವಾ ಕಾರ್ಯಕ್ರಮಗಳು ಮತ್ತು ಅವುಗಳಿಂದ ಆದ ಮತ್ತು ಆಗುತ್ತಿರುವ ಬದಲಾವಣೆಗಳನ್ನು ಗುರುತಿಸಬೇಕು. ಈ ಎಲ್ಲದವುಗಳ ಮೇಲೆ ನಡೆದ ಮುಖ್ಯ ಅಧ್ಯಯನಗಳು, ಅವುಗಳು ತಳೆದ ತೀರ್ಮಾನಗಳು, ಅವುಗಳಲ್ಲಿನ ಕೊರತೆಗಳು ಇತ್ಯಾದಿಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸುತ್ತಾ ಇವುಗಳ ಹಿನ್ನೆಲೆಯಲ್ಲಿ ಸಂಶೋಧನ ವಿಷಯವನ್ನು ಸಮಸ್ಯೀಕರಣ ಅಧ್ಯಾಯದಲ್ಲಿ ವಿವರಿಸಿದ ವಿಧಾನವನ್ನು ಅನುಸರಿಸಿ ಸಮಸ್ಯೀಕರಿಸಬೇಕು. ಸಂಶೋಧನಾ ಸಮಸ್ಯೆಗಳು ಅಧ್ಯಯನದ ಉದ್ದೇಶಗಳನ್ನು ರೂಪಿಸಬೇಕು. ಅಧ್ಯಯನ ಉದ್ದೇಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಯಾವ ಮೂಲದಿಂದ ಮತ್ತು ಯಾವ ವಿಧಾನಗಳಿಂದ ಸಂಗ್ರಹಿಸಲಾಗಿದೆ ಮತ್ತು ವಿಶ್ಲೇಷಿಸಲಾಗಿದೆ

ಎನ್ನುವುದನ್ನು ನಿಖರವಾಗಿ ಹೇಳಬೇಕು. ಇದೇ ಸಂದರ್ಭದಲ್ಲಿ ಅಧ್ಯಯನದಲ್ಲಿ ಬಳಸಿರುವ ಪರಿಭಾಷೆಗಳನ್ನು, ವಿವಿಧ ಉದ್ದೇಶಗಳಿಗೆ ಬಳಸುವ ಮಾನದಂಡಗಳನ್ನು ಮುಂತಾದವುಗಳನ್ನು ನಿಖರವಾಗಿ ಗುರುತಿಸಬೇಕು. ಪ್ರಸ್ತಾವದ ಕೊನೆಯಲ್ಲಿ ಪ್ರಬಂಧದಲ್ಲಿರುವ ಅಧ್ಯಾಯಗಳು ಮತ್ತು ಪ್ರತಿ ಅಧ್ಯಾಯ ಹೇಳುವ ವಿಚಾರಗಳನ್ನು ಸಂಕ್ಷಿಪ್ತವಾಗಿ ಹೇಳಬೇಕು. ಅಧ್ಯಾಯಗಳ ವಿವರಗಳನ್ನು ಕೊಡುವ ಮುನ್ನ ಅಥವಾ ಮೊದಲು ಅಧ್ಯಯನದ ಇತಿಮಿತಿಗಳನ್ನು ಸ್ಪಷ್ಟಪಡಿಸಬಹುದು.

ಪ್ರಸ್ತಾವದ ನಂತರದ ಅಧ್ಯಾಯದಲ್ಲಿ ಈಗಾಗಲೇ ಮಂಡಿಸಿರುವ ಅಥವಾ ಸ್ಥಾಪಿತ ವಾದ ಸತ್ಯ/ವಾದಗಳ ವಿಸ್ತೃತ ವಿಮರ್ಶೆ ನಡೆಸಬೇಕು. ಈ ಅಧ್ಯಾಯ ಸಂಶೋಧಕರ ಅಧ್ಯಯನದ ಪ್ರಾಮುಖ್ಯತೆಯನ್ನು ಹೇಳುವುದರೊಂದಿಗೆ ಸಂಶೋಧಕರು ಯಾವೆಲ್ಲ ವಾದಗಳನ್ನು ಪರಿಗಣಿಸುತ್ತಿದ್ದಾರೆ. ಆ ವಾದಗಳನ್ನು ಯಾಕೆ ಪರಿಗಣಿಸುತ್ತಿದ್ದಾರೆ. ಪರಿಗಣಿಸುವ ವಾದಗಳಿಗೆ ಸಂಬಂಧಿಸಿರುವ ಇತರ ವಾದಗಳನ್ನು ಬಿಟ್ಟಿದ್ದರೆ ಯಾಕೆ ಬಿಟ್ಟಿದ್ದಾರೆ ಇತ್ಯಾದಿ ಸಂಗತಿಗಳನ್ನು ಹೇಳುತ್ತದೆ. ಸಂಶೋಧನೆಯನ್ನು ಸಾಂಪ್ರದಾಯಿಕ ದೃಷ್ಟಿಯಿಂದ ನೋಡುವವರು ಈ ಅಧ್ಯಾಯವನ್ನು ಅಧ್ಯಯನ ವಿಷಯದ ಮೇಲಿನ ತಾತ್ವಿಕ (ಥಿಯರೆಟಿಕಲ್) ನಿಲುವುಗಳನ್ನು ಚರ್ಚಿಸುವ ಅಧ್ಯಾಯವೆಂದು ಪರಿಗಣಿಸುತ್ತಾರೆ. ಅಂದರೆ ವಿಶ್ವದ ಎಲ್ಲ ಸಂಸ್ಕೃತಿಗಳನ್ನು ವಿವರಿಸಬಲ್ಲ ಕೆಲವೊಂದು ಥಿಯರಿಗಳು ಈಗಾಗಲೇ ಸ್ಥಾಪಿತವಾಗಿವೆ. ಈ ಸ್ಥಾಪಿತ ಸತ್ಯ ಅಥವಾ ಥಿಯರಿಗಳಿಂದ ಊಹೆಗಳನ್ನು ರೂಪಿಸಿಕೊಂಡು ಅವುಗಳನ್ನು ಪ್ರಪಂಚದ ವಿವಿಧ ಸಂಸ್ಕೃತಿಗಳಲ್ಲಿ ಪರೀಕ್ಷಿಸುವುದು ಸಂಶೋಧನೆಯ ಮುಖ್ಯ ಕೆಲಸ. ಇದನ್ನು ಸಂಶೋಧನೆಯ ಪರಿಭಾಷೆಯಲ್ಲಿ ಡಿಡಕ್ಟಿವ್ ವಿಧಾನವನ್ನು ಅನುಸರಿಸಿ ನಡೆಯುವ ಸಂಶೋಧನೆಯೆಂದು ವ್ಯಾಖ್ಯಾನಿಸುತ್ತಾರೆ. ಆದರೆ ಇಂದಿನ ಆಧುನಿಕೋತ್ತರ ಸಂದರ್ಭದಲ್ಲಿ ಈ ಬಗೆಯ ವಿಶ್ವಕ್ಕೆ ಅನ್ವಯವಾಗುವ ಥಿಯರಿಗಳನ್ನು ಚರ್ಚಿಸುವುದು ಬಿಡಿ ಊಹಿಸಿಕೊಳ್ಳುವುದು ಕೂಡ ಹಾಸ್ಯಾಸ್ಪದ ಎಂದಾಗಿದೆ. ಆದುದರಿಂದ ಈ ಅಧ್ಯಾಯವನ್ನು ಸಂಶೋಧನೆಯ ಸಾಂಪ್ರದಾಯಿಕ ದೃಷ್ಟಿಯಿಂದ ನೋಡುವುದು ಸರಿಯಲ್ಲ. ಹಾಗೆಂದು ಈ ಅಧ್ಯಾಯದಲ್ಲಿ ಈಗಾಗಲೇ ಸ್ಥಾಪಿತವಾದ ಸತ್ಯಗಳ ಬಗ್ಗೆ ಚರ್ಚೆನೇ ಇಲ್ಲ ಎಂದಲ್ಲ. ಖಂಡಿತವಾಗಿಯೂ ಈ ಅಧ್ಯಾಯವನ್ನು ಈಗಾಗಲೇ ಆಗಿರುವ ಅಧ್ಯಯನಗಳ ವಿಮರ್ಶೆಗೆ ಮೀಸಲಿಡಬೇಕು. ಆದರೆ ಹಿಂದಿನ ರೀತಿಯಲ್ಲಿ ಊಹೆಗಳನ್ನು ರೂಪಿಸಿಕೊಂಡು ವಿಶ್ವಕ್ಕೇ ಅನ್ವಯವಾಗುವ ಥಿಯರಿಗಳ ಪರೀಕ್ಷೆಯ ದೃಷ್ಟಿಯಿಂದಲ್ಲ. ಸ್ಥಳೀಯ ಪರಿಸರದಲ್ಲಿ ಅಥವಾ ಸಂಶೋಧಕರು ಕಾರ್ಯನಿರ್ವಹಿಸುವ ಸಂಶೋಧನ ಸಮುದಾಯದೊಳಗೆ ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳ ವಿಮರ್ಶೆಯನ್ನು ಈ ಅಧ್ಯಾಯದಲ್ಲಿ ಮಾಡಬಹುದು. ಈಗಾಗಲೇ ಮಂಡಿತವಾದಗಳನ್ನು ವಿಮರ್ಶಿಸುವ, ಅವುಗಳ ಇತಿಮಿತಿಗಳನ್ನು ಪರಿಚಯಿಸುವ, ಅವುಗಳು ಪರಿಗಣಿಸಿದ ಆಯಾಮಗಳನ್ನು ಗುರುತಿಸುವ, ಅವುಗಳು ಪರಿಗಣಿಸದಿರುವ ಆಯಾಮಗಳನ್ನು ಎತ್ತಿ ತೋರಿಸುವ, ತಮ್ಮ ವಾದವನ್ನು ಮಂಡಿಸಲು

ಹಿಂದಿನ ಸಂಶೋಧಕರು ಅನುಸರಿಸಿದ ವಿಧಾನಗಳ ಇತಿಮಿತಿಗಳನ್ನು ಹೇಳುವ ಮತ್ತು ಅವರುಗಳು ತಳೆದ ನಿಲುವುಗಳನ್ನು ಮತ್ತು ಅವುಗಳಿಂದ ಪ್ರೇರಿತ ಅಧ್ಯಯನಗಳು, ಆ ಅಧ್ಯಯನಗಳು ತಳೆದ ತೀರ್ಮಾನಗಳು, ಆ ತೀರ್ಮಾನಗಳಲ್ಲಿನ ಲೋಪದೋಷಗಳು ಅಥವಾ ಗಟ್ಟಿತನ ಇತ್ಯಾದಿಗಳನ್ನು ವಿಸ್ತಾರವಾಗಿ ಚರ್ಚಿಸಬೇಕು. ಈ ಎಲ್ಲದರ ಹಿನ್ನೆಲೆಯಲ್ಲಿ (ಈಗಾಗಲೇ ಆದ ಅಧ್ಯಯನಗಳ ವಿಶ್ಲೇಷಣೆ ಹಿನ್ನೆಲೆಯಲ್ಲಿ) ತಮ್ಮ ಅಧ್ಯಯನ ಎತ್ತಿರುವ ಅಥವಾ ಕೇಳುವ ಪ್ರಶ್ನೆಗಳು, ಆ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಅಗತ್ಯತೆ ಇತ್ಯಾದಿಗಳನ್ನು ವಿಸ್ತಾರವಾಗಿ ಈ ಅಧ್ಯಾಯದಲ್ಲಿ ಚರ್ಚಿಸಬಹುದು. ಈ ಅಧ್ಯಾಯದ ನಂತರ ಅಧ್ಯಯನ ಕೈಗೊಂಡ ಕ್ಷೇತ್ರವನ್ನು ಪರಿಚಯಿಸುವ ಅಧ್ಯಾಯವನ್ನು ರಚಿಸಲಾಗುವುದು.

ಕ್ಷೇತ್ರಕಾರ್ಯದ ಮಾಹಿತಿಯನ್ನು ಅತಿಯಾಗಿ ನೆಚ್ಚಿರುವ ಅಧ್ಯಯನಗಳಲ್ಲಿ ಈ ಅಧ್ಯಾಯದ ಅಗತ್ಯವಿದೆ. ಅಧ್ಯಯನ ಆಯ್ಕೆ ಮಾಡಿಕೊಂಡ ಕ್ಷೇತ್ರದ ಆಯ್ಕೆ ವಿಧಾನ, ಕ್ಷೇತ್ರ (ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಬದುಕಿನ) ಪರಿಚಯ, ಮಾದರಿ ಕುಟುಂಬಗಳ ಆಯ್ಕೆ ವಿಧಾನ ಮತ್ತು ಪರಿಚಯ ಇತ್ಯಾದಿಗಳನ್ನು ಎರಡನೇ ಅಧ್ಯಾಯದಲ್ಲಿ ವಿವರವಾಗಿ ಹೇಳಬಹುದು. ಸಂಶೋಧಕರು ತಮ್ಮ ಅಧ್ಯಯನಕ್ಕಾಗಿ ಯಾವುದೇ ಪ್ರದೇಶವನ್ನು, ತಮ್ಮ ಇಷ್ಟ ಬಂದ ಮಾನದಂಡವನ್ನು, ಮಾದರಿ ಆಯ್ಕೆ ವಿಧಾನವನ್ನು ಅನುಸರಿಸಬಹುದು. ಇದೊಂದು ಬಗೆಯಲ್ಲಿ ಯಾವುದೇ ವಿಷಯದ ಮೇಲೆ ಸಂಶೋಧನೆ ಮಾಡುವ ಸಂಶೋಧಕರ ಸ್ವಾತಂತ್ರ್ಯದಂತೆ. ಆದರೆ ಅಲ್ಲೂ ಕೂಡ ಸಂಶೋಧಕರು ತಮಗೆ ಅನ್ನಿಸಿದನ್ನೆಲ್ಲ ತಮಗೆ ಖುಷಿ ಬಂದಂತೆ ತಮ್ಮದೇ ವಿಧಾನದಲ್ಲಿ ಹೇಳುವ ಸ್ವಾತಂತ್ರ್ಯ ಇಲ್ಲ. ಬರಹಕ್ಕೆ ಸಂಶೋಧನ ಪ್ರಬಂಧದ ಪಟ್ಟ ಸಿಗಬೇಕಾದರೆ ಸಂಶೋಧನ ವಿಧಿವಿಧಾನಗಳನ್ವಯ ಸಂಶೋಧನ ವಿಷಯದ ಮೇಲೆ ಪ್ರಬಂಧ ರಚಿಸುವುದು ಕಡ್ಡಾಯ. ಅದೇ ರೀತಿಯಲ್ಲಿ ಕ್ಷೇತ್ರ ಆಯ್ಕೆಯನ್ನು, ಮಾದರಿ ಆಯ್ಕೆಯನ್ನು, ಮಾನದಂಡಗಳ ಆಯ್ಕೆಯನ್ನು ಸಂಶೋಧನ ಪರಿಭಾಷೆಗಳನ್ನು ಬಳಸಿಕೊಂಡು ಸಂಶೋಧಕರು ಸಮರ್ಥಿಸಿಕೊಳ್ಳಬೇಕಾಗುತ್ತದೆ. ಎಷ್ಟೋ ಬಾರಿ ಹಣಕಾಸು ಅಥವಾ ಸಮಯದ ಅಭಾವದಿಂದ ಬಹುತೇಕ ಸಂಶೋಧಕರು ತಮ್ಮ ಸ್ವಂತ ಊರಲ್ಲೇ ಸಂಶೋಧನೆ ನಡೆಸುತ್ತಾರೆ. ಇದು ತಪ್ಪಲ್ಲ. ಆದರೆ ತಮ್ಮ ಸ್ವಂತ ಊರನ್ನು ಹಣಕಾಸಿನ ಅಭಾವದಿಂದ ಅಥವಾ ಸಮಯದ ಅಭಾವದಿಂದ ಅಧ್ಯಯನ ಕ್ಷೇತ್ರವಾಗಿ ಬಳಸಿಕೊಂಡಿದ್ದೇನೆ ಎಂದರೆ ಸಂಶೋಧನ ವಿಧಿವಿಧಾನಗಳನ್ವಯ ಸರಿಬರುವುದಿಲ್ಲ. ಅಧ್ಯಯನ ಕ್ಷೇತ್ರ ಆಯ್ಕೆಯ ಮಾನದಂಡಗಳನ್ನು, ಸಂಶೋಧನಾ ಪ್ರಬಂಧದಲ್ಲಿ ಬರುವ ಇತರ ಮಾನದಂಡಗಳನ್ನು ನಿಖರವಾಗಿ ಮತ್ತು ಸ್ಪಷ್ಟವಾಗಿ ಹೇಳಬೇಕು ಮತ್ತು ಈ ಮಾನದಂಡಗಳನ್ನು ಯಾಕೆ ಬಳಸಲಾಗಿದೆ ಮತ್ತು ಇತರ ಮಾನದಂಡಗಳಿಂದ ಸಂಶೋಧಕರು ಬಳಸಿದ ಮಾನದಂಡಗಳು ಹೇಗೆ ಉತ್ತಮ ಎನ್ನುವುದನ್ನು ತರ್ಕಬದ್ಧವಾಗಿ ವಾದಿಸಬೇಕು. ಪ್ರಸ್ತಾಪ, ಈಗಾಗಲೇ ಆಗಿರುವ ಅಧ್ಯಯನಗಳ ವಿಮರ್ಶೆ ಮತ್ತು ಕ್ಷೇತ್ರ ಪರಿಚಯ ಆದ ನಂತರ ಸಂಶೋಧಕರು ಮಂಡಿಸಲಿರುವ ವಾದಗಳನ್ನು ಸಮರ್ಥಿಸುವ ಪ್ರಕ್ರಿಯೆ

ಆರಂಭವಾಗುತ್ತದೆ. ಅಧ್ಯಯನದ ಉದ್ದೇಶಗಳು ಸಂಶೋಧಕರು ಮಂಡಿಸಲಿಚ್ಛಿಸುವ ವಾದಗಳನ್ನು ಸೂಚಿಸುತ್ತವೆ. ಅಧ್ಯಯನದ ಪ್ರತಿ ಉದ್ದೇಶಕ್ಕೊಂದು ಅಧ್ಯಾಯವನ್ನು ರಚಿಸಬಹುದು ಅಥವಾ ಒಂದೆರಡು ಉದ್ದೇಶಗಳನ್ನು ಸೇರಿಸಿ ಅಧ್ಯಾಯಗಳನ್ನು ರಚಿಸಬಹುದು. ಅಧ್ಯಯನ ಉದ್ದೇಶಗಳಿಗೆ ಸಂಬಂಧಿಸಿದ ಅಥವಾ ಸಂಶೋಧಕರು ಮಂಡಿಸಲಿಚ್ಛಿಸುವ ವಾದಗಳನ್ನು ಮಂಡಿಸುವ ಅಧ್ಯಾಯಗಳನ್ನು ರಚಿಸುವ ವಿಧಾನವನ್ನು ಮುಂದಿನ ಭಾಗದಲ್ಲಿ ಪರಿಚಯಿಸಲಾಗಿದೆ.

ಅಧ್ಯಯನದ ಉದ್ದೇಶಗಳಿಗೆ ಸಂಬಂಧಿಸಿದ ಚರ್ಚೆಯನ್ನು ಈ ಅಧ್ಯಾಯಗಳಲ್ಲಿ ಮಾಡಬಹುದು. ಅಧ್ಯಯನದ ಉದ್ದೇಶಗಳಿಗೆ ಸಂಬಂಧಿಸಿದ ಚರ್ಚೆಯನ್ನು ಮಾಡುವಾಗ ಈ ಕೆಳಗಿನ ಕ್ರಮ ಅನುಸರಿಸಬಹುದು. ಮೊದಲಿಗೆ ಅಧ್ಯಯನದ ಉದ್ದೇಶಕ್ಕೆ ಸಂಬಂಧಿಸಿ ದಂತೆ ಈಗಾಗಲೇ ಆಗಿರುವ ಅಧ್ಯಯನಗಳು ತಳೆದಿರುವ ತೀರ್ಮಾನಗಳನ್ನು ಮಂಡಿಸಬೇಕು. ನಂತರ ತಮ್ಮ ಕ್ಷೇತ್ರಕಾರ್ಯದಿಂದ ಬಂದ ಮಾಹಿತಿಗಳನ್ನು ಮಂಡಿಸಬೇಕು. ಮೂರನೇ ಹಂತದಲ್ಲಿ ಈಗಾಗಲೇ ಆಗಿರುವ ಅಧ್ಯಯನಗಳ ತೀರ್ಮಾನಗಳನ್ನು ತಮ್ಮ ಕ್ಷೇತ್ರ ಕಾರ್ಯದಿಂದ ಬಂದ ಫಲಿತಗಳೊಂದಿಗೆ ಹೋಲಿಸಿ ನೋಡಬೇಕು. ಅವುಗಳ ನಡುವೆ ಹೋಲಿಕೆಯಿದ್ದರೆ, ಯಾಕೆ ಹೋಲಿಕೆ ಇದೆ? ವ್ಯತ್ಯಾಸ ಅಥವಾ ಭಿನ್ನತೆ ಇದ್ದರೆ, ಯಾಕೆ ವ್ಯತ್ಯಾಸ ಅಥವಾ ಭಿನ್ನತೆ ಇದೆ ಎಂದು ವಿವರಿಸುವ ಕೆಲಸ ಐದನೇ ಹಂತದಲ್ಲಿ ನಡೆಯುತ್ತದೆ. ಈ ಎಲ್ಲ ವಿಶ್ಲೇಷಣೆಗಳ ಹಿನ್ನೆಲೆಯಲ್ಲಿ ಅಧ್ಯಯನ ಉದ್ದೇಶಕ್ಕೆ ಸಂಬಂಧಪಟ್ಟಂತೆ ತಳೆದ ತೀರ್ಮಾನವನ್ನು ಪ್ರತಿ ಅಧ್ಯಾಯದ ಕೊನೆ ಭಾಗದಲ್ಲಿ ನೀಡಬಹುದು. ಅಧ್ಯಯನ ಉದ್ದೇಶಗಳ ಮೇಲಿನ ಪ್ರತಿ ಅಧ್ಯಾಯವನ್ನು ನಿರ್ದಿಷ್ಟವಾಗಿ ಈ ಕೆಳಗಿನಂತೆ ರಚಿಸಬಹುದು. ಅ. ಪೀಠಿಕೆ - ಹಿಂದಿನ ಅಧ್ಯಾಯದಲ್ಲಿ ಹೇಳಿರುವುದನ್ನು ಸಂಕ್ಷಿಪ್ತವಾಗಿ ಪರಿಚಯಿಸುತ್ತಾ ಈ ನಿರ್ದಿಷ್ಟ ಅಧ್ಯಾಯ ಏನು ಹೇಳುತ್ತದೆ ಮತ್ತು ಇದು ಹೇಗೆ ಹಿಂದಿನ ಅಧ್ಯಾಯದಲ್ಲಿ ಹೇಳಿರುವುದರ ಮುಂದುವರಿಕೆಯಾಗಿದೆ ಮತ್ತು ಇಲ್ಲಿನ ವಿವರಗಳು ಹೇಗೆ ಅಧ್ಯಯನ ಒಟ್ಟಾರೆ ಉದ್ದೇಶಗಳಿಗೆ ಪೂರಕವಾಗಿದೆ ಎನ್ನುವುದನ್ನು ಪೀಠಿಕೆ ಮೊದಲ ಭಾಗ ಹೇಳಬೇಕು. ನಂತರದ ಭಾಗದಲ್ಲಿ ನಿರ್ದಿಷ್ಟ ಅಧ್ಯಾಯದ ವ್ಯಾಪ್ತಿ ಮತ್ತು ವಿಂಗಡನೆ ಮತ್ತು ಪ್ರತಿ ಭಾಗ ಒಳಗೊಂಡಿರುವ ವಿವರಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸುವುದು. ಆ. ಅಧ್ಯಾಯದಲ್ಲಿ ಸಂಶೋಧಕರು ಮಂಡಿಸಲಿಚ್ಛಿಸಿರುವ ವಾದದ ಮೇಲೆ ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳನ್ನು ಪರಿಚಯಿಸುವುದು. ಅಧ್ಯಾಯವನ್ನು ಬೆಳೆಸುವಾಗ ಮೊದಲಿಗೆ ಈ ಅಧ್ಯಾಯದಲ್ಲಿ ಚರ್ಚಿಸಲಿರುವ ವಿಷಯದ ಮೇಲಿನ ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳನ್ನು (ಸೈದ್ಧಾಂತಿಕ ಚರ್ಚೆಗಳನ್ನು) ಮಂಡಿಸಬಹುದು. ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳನ್ನು (ಸೈದ್ಧಾಂತಿಕ ಚರ್ಚೆಗಳನ್ನು) ಮಂಡಿಸುವಾಗ ಸೈದ್ಧಾಂತಿಕ ಚರ್ಚೆಗಳು ಪ್ರತಿಪಾದಿಸುವ ನಿಲುವುಗಳು, ಅವುಗಳ ಮೇಲಿನ ವಿಮರ್ಶೆ ಮತ್ತು ಈಗಿನ ನಿಲುವು ಅಥವಾ ಪರಿವರ್ತಿತ ಅಥವಾ ಸುಧಾರಿತ ಸೈದ್ಧಾಂತಿಕ ನಿಲುವು - ಈ

ಕ್ರಮದಲ್ಲಿ ಮಂಡಿಸಬಹುದು. ಇ. ನಂತರದ ಭಾಗದಲ್ಲಿ ಸೈದ್ಧಾಂತಿಕ ನಿಲುವಿನ ಹಿನ್ನೆಲೆಯಲ್ಲಿ ನಡೆದ ಅಧ್ಯಯನಗಳು ಮತ್ತು ಅವುಗಳ ತೀರ್ಮಾನಗಳು ಮತ್ತು ಅವುಗಳ ಕೊರತೆಗಳು ಇತ್ಯಾದಿಗಳನ್ನು ಸಂಕ್ಷಿಪ್ತವಾಗಿ ಮಂಡಿಸಬಹುದು. ಈ. ಸಂಶೋಧಕರ ಅಧ್ಯಯನ ವಾದಗಳನ್ನು ಅಥವಾ ಫಲಿತಗಳನ್ನು ಮಂಡಿಸಬಹುದು. ಸಂಶೋಧಕರ ಅಧ್ಯಯನದ ವಾದಗಳನ್ನು/ಫಲಿತಗಳನ್ನು ಈಗಾಗಲೇ ಆಗಿರುವ ಅಧ್ಯಯನದ ವಾದಗಳೊಂದಿಗೆ / ಫಲಿತಗಳೊಂದಿಗೆ ಹೋಲಿಸಬೇಕು. ಒಂದು ವೇಳೆ ಈಗಾಗಲೇ ಆಗಿರುವ ಅಧ್ಯಯನಗಳು ವಾದಗಳು ಮತ್ತು ತಮ್ಮ ವಾದಗಳ/ಫಲಿತಗಳ ನಡುವೆ ಸಾಮ್ಯತೆ ಇದ್ದರೆ, ಯಾಕಿದೆ? ಸಾಮ್ಯತೆ ಇಲ್ಲದಿದ್ದರೆ, ಯಾಕಿಲ್ಲ? ಎನ್ನುವುದನ್ನು ಸಾಕ್ಷಿ, ಪುರಾವೆ, ದಾಖಲೆಗಳ ಸಮೇತ ವಿವರಿಸಬೇಕು. ಉ. ಅಧ್ಯಾಯದ ಕೊನೆಭಾಗದಲ್ಲಿ ನಿರ್ದಿಷ್ಟ ಅಧ್ಯಯನದ ಉದ್ದೇಶದ ಮೇಲೆ ಸಂಶೋಧಕರು ತಳೆದ ತೀರ್ಮಾನವನ್ನು ಸಾರಾಂಶ ರೂಪದಲ್ಲಿ ಕೊಡಬಹುದು. ಇದೇ ಭಾಗದಲ್ಲಿ ಮುಂದಿನ ಅಧ್ಯಾಯ ಏನು ಹೇಳುತ್ತದೆ ಎಂದು ತಿಳಿಸಿ ಅಧ್ಯಾಯವನ್ನು ಕೊನೆಗೊಳಿಸಬಹುದು. ಪ್ರಸ್ತಾವದಿಂದ ಆರಂಭಗೊಂಡು ಅಧ್ಯಾಯ ಒಂದರಿಂದ ಮುಂದುವರಿದು ಕೊನೆಯ ಅಧ್ಯಾಯದ ತನಕ ನಡೆದ ಎಲ್ಲ ಚರ್ಚೆಗಳನ್ನು ಸಾರಾಂಶ ರೂಪದಲ್ಲಿ ಕೊನೆ ಅಧ್ಯಾಯದಲ್ಲಿ ನೀಡಬಹುದು.

ಭಾಗ ೨

ಪ್ರಬಂಧ ರಚನೆಯಲ್ಲಿ ಅಥವಾ ವಾದ ಮಂಡನೆಯಲ್ಲಿ ಸಂಶೋಧಕರು ತಮ್ಮ ವಾದವನ್ನು ಸಮರ್ಥಿಸಲು ಸಂಗ್ರಹಿಸಿದ ಸಾಕ್ಷಿ, ಪುರಾವೆ, ದಾಖಲೆ ಇತ್ಯಾದಿಗಳನ್ನು ಬಳಸುವ ಕೆಲವೊಂದು ವಿಧಾನಗಳನ್ನು ಅಧ್ಯಾಯದ ಈ ಭಾಗದಲ್ಲಿ ವಿವರಿಸಲಾಗುವುದು. ಸಾಕ್ಷಿ, ಪುರಾವೆ, ದಾಖಲೆಗಳನ್ನು ಮಂಡಿಸುವ ವಿಧಾನವನ್ನು ಸಂಶೋಧನೆ ಪರಿಭಾಷೆಯಲ್ಲಿ ವಿಶ್ಲೇಷಣಾ ವಿಧಾನವೆಂದು ಕರೆಯುತ್ತಾರೆ. ಹಲವಾರು ವಿಶ್ಲೇಷಣಾ ವಿಧಾನಗಳಿವೆ. ಇಲ್ಲಿ ಮೂರು ವಿಶ್ಲೇಷಣಾ ವಿಧಾನಗಳನ್ನು-ತುಲನಾತ್ಮಕ, ಚಾರಿತ್ರಿಕ ಹಾಗೂ ವಿಷಯ ವಿಶ್ಲೇಷಣಾ ವಿಧಾನಗಳನ್ನು-ವಿವರಿಸಲಾಗಿದೆ. ಸಂಶೋಧನೆಯ ತಾತ್ವಿಕ ಹಿನ್ನೆಲೆಗನುಸಾರ ಅವುಗಳನ್ನು ಗುಣಾತ್ಮಕ ಅಥವಾ ಪರಿಮಾಣಾತ್ಮಕ ವಿಶ್ಲೇಷಣೆಗಳೆಂದು ವಿಂಗಡಿಸಿಕೊಳ್ಳಬಹುದು. ಮೊದಲಿಗೆ ತುಲನಾತ್ಮಕ ವಿಶ್ಲೇಷಣಾ ವಿಧಾನವನ್ನು ಪರಿಶೀಲಿಸುವ. ಸಾಮಾಜಿಕ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವುದು ಸಮಾಜ ಸಂಶೋಧನೆಯ ಬಹುಮುಖ್ಯ ಉದ್ದೇಶ. ಸಮಾಜ ಸಂಶೋಧನೆಯ ಈ ಉದ್ದೇಶವನ್ನು ಈಡೇರಿಸುವಲ್ಲಿ ತುಲನಾತ್ಮಕ ವಿಶ್ಲೇಷಣೆ ಹಿಂದಿನಿಂದಲೂ ಮುಖ್ಯ ಪಾತ್ರವಹಿಸಿದೆ. ತುಲನಾತ್ಮಕ ವಿಶ್ಲೇಷಣೆಯ ವಿವರಗಳನ್ನು ಅರ್ಥಮಾಡಿಕೊಳ್ಳಲು ಕಾರ್ಯಕಾರಣ ವಿಶ್ಲೇಷಣೆಯ ಮೂಲತತ್ತ್ವಗಳನ್ನು ಅರ್ಥಮಾಡಿಕೊಳ್ಳುವುದು ಅಗತ್ಯ. ಒಂದು ಸಂಗತಿಯಲ್ಲಿನ ಬದಲಾವಣೆ/ಬೆಳವಣಿಗೆ/ ಪರಿವರ್ತನೆಯಲ್ಲಿ ಮತ್ತೊಂದು ಸಂಗತಿಯ ಪಾತ್ರವನ್ನು ಗುರುತಿಸಲು ಕಾರ್ಯಕಾರಣ ವಿಶ್ಲೇಷಣೆಯನ್ನು ಬಳಸಲಾಗುತ್ತದೆ. ಪ್ರಪಂಚದಲ್ಲಿನ ಯಾವುದೇ ವಸ್ತು ಕೂಡ ಕಾರಣವಿಲ್ಲದ

ತನ್ನ ಸ್ಥಿತಿಯ ಬದಲಾವಣೆಗೆ ಒಳಗಾಗುವುದಿಲ್ಲ ಎನ್ನುವ ಭೌತ ವಿಜ್ಞಾನ ತತ್ತ್ವ ಕಾರ್ಯಕಾರಣ ವಿಶ್ಲೇಷಣೆಯ ಹಿಂದೆ ಕೆಲಸ ಮಾಡುತ್ತಿದೆ. ಸಮಾಜ ವಿಜ್ಞಾನದಲ್ಲಿ ಇದು ಹಲವಾರು ರೀತಿಯಲ್ಲಿ ಉಪಯೋಗವಾಗುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಭಿವೃದ್ಧಿ ನಡುವಿನ ಸಂಬಂಧದ ಉದಾಹರಣೆಯನ್ನು ಗಮನಿಸುವ. ಪಶ್ಚಿಮದ ಅಭಿವೃದ್ಧಿಯಲ್ಲಿ ವಿಜ್ಞಾನ ತಂತ್ರಜ್ಞಾನಗಳು ಸಕ್ರಿಯವಾದ ಪಾತ್ರ ವಹಿಸಿವೆ ಎನ್ನುವ ತೀರ್ಮಾನ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಭಿವೃದ್ಧಿ ನಡುವೆ ಸಂಬಂಧ ಕಲ್ಪಿಸಲು ಆಧಾರವಾಗಿದೆ. ಅಂದರೆ ಯಾವುದೇ ಸಮಾಜದಲ್ಲೂ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಅಳವಡಿಸುವ ಮೂಲಕ ಅಭಿವೃದ್ಧಿ ಸಾಧ್ಯ ಎನ್ನುವ ನಿಲುವಿಗೆ ಬರಲಾಗುವುದು. ಇದೇ ಪ್ರಮೇಯ ಸಣ್ಣ ರೂಪಗಳೆಂದರೆ ನೀರಾವರಿ ಮತ್ತು ಗ್ರಾಮೀಣಾಭಿವೃದ್ಧಿ ಸಂಬಂಧ, ಮಾಹಿತಿ ತಂತ್ರಜ್ಞಾನ ಮತ್ತು ಬಡತನ ನಿವಾರಣೆ, ಸಾರಿಗೆ ಸಂಪರ್ಕ ಮತ್ತು ನಿರುದ್ಯೋಗ ನಿವಾರಣೆ ಇತ್ಯಾದಿಗಳು. ಕಾರ್ಯಕಾರಣ ವಿಶ್ಲೇಷಣೆಯ ಮೂಲ ತತ್ತ್ವಗಳು ಇಂತಿವೆ.[೬] ಒಂದು, ಬದಲಾವಣೆಯ ಪ್ರೇರಕ (ಕಾರಣ) ಪರಿಣಾಮಕ್ಕಿಂತ (ಆಗುವ ಬದಲಾವಣೆಗಿಂತ) ಕಾಲದಲ್ಲಿ ಹಿಂದಿರಬೇಕು. ಎರಡು, ಕಾರಣಕ್ಕೆ ಮತ್ತು ಪರಿಣಾಮ ನೇರ ಸಂಬಂಧ ಇರಬೇಕು. ಮೂರು, ಕಾರಣ ಮತ್ತು ಕಾರ್ಯದ ನಡುವಿನ ಸಂಬಂಧದಲ್ಲಿ ಮೂರನೇ ಅಂಶದ ಪಾತ್ರ ಇರಬಾರದು. ನೀರಾವರಿ ಮತ್ತು ಗ್ರಾಮೀಣಾಭಿವೃದ್ಧಿ ಸಂಬಂಧದ ಉದಾಹರಣೆಯೊಂದಿಗೆ ಮೇಲಿನ ಮೂರು ತತ್ತ್ವಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ. ನೀರಾವರಿಯ ನಂತರವೇ (ಕೆರೆ, ಕಾಲುವೆ ಇತ್ಯಾದಿಗಳ ಮೂಲಕ ನೀರಾವರಿ) ಅಧ್ಯಯನಕ್ಕೆ ಒಳಪಡಿಸಿದ ಹಳ್ಳಿಯ ಕೃಷಿ ಸಂಬಂಧಿ ಚಟುವಟಿಕೆಗಳ ಪ್ರಮಾಣ ನೀರಾವರಿ ಇಲ್ಲದ ಹಳ್ಳಿಯ ಸ್ಥಿತಿಗೆ ಹೋಲಿಸಿದರೆ ಹೆಚ್ಚಿರಬೇಕು. ಕೃಷಿ ಮತ್ತು ಕೃಷಿ ಚಟುವಟಿಕೆಗಳ ಪ್ರಮಾಣದಲ್ಲಿನ ಏರಿಕೆ ಮತ್ತು ನೀರಾವರಿ ನಡುವಿನ ಸಂಬಂಧ ಸ್ಪಷ್ಟವಾಗಿರಬೇಕು ಅಥವಾ ಚಟುವಟಿಕೆಗಳಲ್ಲಿನ ಏರಿಕೆಯಲ್ಲಿ ನೀರಾವರಿಯೇತರ ಅಂಶಗಳ ಪಾತ್ರ ಇರಬಾರದು. ಈ ಎಲ್ಲ ಶರತ್ತುಗಳು ಈಡೇರಿದರೆ ಮಾತ್ರ ನೀರಾವರಿಯಿಂದ ಗ್ರಾಮೀಣಾಭಿವೃದ್ಧಿ ಎನ್ನುವ ಪ್ರಮೇಯ ಸರಿ. ಉದಾಹರಣೆಗೆ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳ ಏರಿಕೆಯಲ್ಲಿ ನೀರಾವರಿ ಜತೆಗೆ ಕಡಿಮೆ ಕೂಲಿ, ಉತ್ತಮ ಕೃಷಿ ಯಂತ್ರೋಪಕರಣಗಳ ಬಳಕೆ, ಉತ್ತಮ ಹಣಕಾಸು ಸೌಲಭ್ಯ ಇತ್ಯಾದಿಗಳು ಕೂಡ ಪಾತ್ರವಹಿಸುವ ಸಾಧ್ಯತೆ ಇದೆ. ಒಂದು ವೇಳೆ ಇವುಗಳು ಕೂಡ ಪಾತ್ರವಹಿಸಿದ್ದರೆ ನೀರಾವರಿಯಿಂದ ಗ್ರಾಮೀಣಾಭಿವೃದ್ಧಿ ಎನ್ನುವ ಪ್ರಮೇಯ ಸರಿ ಹೊಂದುವುದಿಲ್ಲ.

ಕಾರ್ಯಕಾರಣ ಸಂಬಂಧ ವಿವರಿಸಲು ಮತ್ತೊಂದು ಉದಾಹರಣೆ ಬಳಸುವ. ಉನ್ನತ ಶಿಕ್ಷಣ ಮತ್ತು ಉತ್ತಮ ಆದಾಯ ನಡುವಿನ ಸಂಬಂಧ ಅಳೆಯುವಾಗ ಈ ಕೆಳಗಿನ ಅಂಶಗಳನ್ನು ಪರಿಗಣಿಸಬೇಕಾಗುತ್ತದೆ. ಒಂದು, ಉನ್ನತ ಶಿಕ್ಷಣದ ನಂತರವೇ ಉತ್ತಮ ಆದಾಯ ಗಳಿಸಿರಬೇಕು. ಒಂದು ವೇಳೆ ಉನ್ನತ ಶಿಕ್ಷಣ ಪಡೆಯುವ ಮುನ್ನವೇ ಉತ್ತಮ ಆದಾಯ ಗಳಿಸಿದ್ದರೆ ಉನ್ನತ ಶಿಕ್ಷಣದಿಂದ ಆದಾಯ ಸುಧಾರಿಸಿದ್ದಲ್ಲ ಎಂದಾಗುತ್ತದೆ.

ಎರಡು, ಉನ್ನತ ಶಿಕ್ಷಣವುಳ್ಳವರ ಆದಾಯ ಕಡಿಮೆ ಶಿಕ್ಷಣವುಳ್ಳವರ ಆದಾಯಕ್ಕಿಂತ ಹೆಚ್ಚಿರಬೇಕು. ಒಂದು ವೇಳೆ ಕಡಿಮೆ ಶಿಕ್ಷಣ ಇದ್ದವರ ಆದಾಯ ಮತ್ತು ಉನ್ನತ ಶಿಕ್ಷಣವುಳ್ಳವರ ಆದಾಯದ ನಡುವೆ ವ್ಯತ್ಯಾಸ ಇಲ್ಲದಿದ್ದರೆ ಉನ್ನತ ಶಿಕ್ಷಣದಿಂದ ಆದಾಯ ಹೆಚ್ಚುತ್ತದೆ ಅಥವಾ ಉನ್ನತ ಶಿಕ್ಷಣ ಹೆಚ್ಚಿನ ಆದಾಯಕ್ಕೆ ದಾರಿ ಎನ್ನುವ ಪ್ರಮೇಯ ಸರಿಯಲ್ಲ ಎಂದಾಗುತ್ತದೆ. ಮೂರು, ಉನ್ನತ ಶಿಕ್ಷಣ ಮತ್ತು ಉತ್ತಮ ಆದಾಯ ನಡುವೆ ಸಂಬಂಧವನ್ನು ಕಲ್ಪಿಸುವಾಗ ಮೂರನೇ ಅಂಶದ ಪಾತ್ರ ಇದೆಯೇ ಎಂದು ಪರಿಗಣಿಸಬೇಕಾಗುತ್ತದೆ. ಉದಾಹರಣೆಗೆ ಪೋಷಕರ ಆರ್ಥಿಕ ಸ್ಥಿತಿಗತಿ. ಪೋಷಕರ ಉತ್ತಮ ಆರ್ಥಿಕ ಸ್ಥಿತಿ ಮಕ್ಕಳ ಶಿಕ್ಷಣ ಮಟ್ಟವನ್ನು ಮತ್ತು ಸಂಪನ್ಮೂಲದ ಸ್ಥಿತಿ ಎರಡನ್ನೂ ಪ್ರಭಾವಿಸಬಹುದು. ಉತ್ತಮ ಆರ್ಥಿಕ ಸ್ಥಿತಿ ಇರುವ ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದರ ಜತೆಗೆ ತಮ್ಮ ಆಸ್ತಿಯಲ್ಲಿ ಪಾಲನ್ನು ಕೊಟ್ಟು ಮಕ್ಕಳ ಆರ್ಥಿಕ ಸ್ಥಿತಿಯನ್ನು ಸುಧಾರಿಸಬಹುದು. ಆ ಸಂದರ್ಭಗಳಲ್ಲಿ ಉನ್ನತ ಶಿಕ್ಷಣ ಮತ್ತು ಉತ್ತಮ ಆದಾಯದ ನಡುವಿನ ಸಂಬಂಧ ಸಂದೇಹಾರ್ಹ.

ವಿಜ್ಞಾನದಲ್ಲಿ ಕಾರ್ಯಕಾರಣ ಸಂಬಂಧ ಪರೀಕ್ಷಿಸಲು ಪ್ರಯೋಗಗಳನ್ನು ನಡೆಸಲಾಗುತ್ತದೆ. ಉದಾಹರಣೆಗೆ ಯಾವುದೋ ಒಂದು ಬಗೆಯ ಚುಚ್ಚು ಮದ್ದಿನ ಪರಿಣಾಮವನ್ನು ಮಾಪನ ಮಾಡಲು ಪ್ರಾಣಿಗಳ ಮೇಲೆ ಪ್ರಯೋಗ ಮಾಡಲಾಗುವುದು. ಪ್ರಯೋಗ ಮಾಡುವಾಗ ಒಂದೇ ಜಾತಿಗೆ ಸೇರಿದ ಪ್ರಾಣಿಗಳ (ಇಲಿ, ಕೋತಿ, ಇತ್ಯಾದಿಗಳ) ಎರಡು ಗುಂಪುಗಳನ್ನು ಮಾಡಲಾಗುವುದು. ಒಂದು ಗುಂಪನ್ನು ಪರೀಕ್ಷಾ ಅಥವಾ ಪ್ರಯೋಗ ಗುಂಪೆಂದು ಮತ್ತೊಂದನ್ನು ನಿಯಂತ್ರಿತ ಗುಂಪೆಂದು ಗುರುತಿಸಲಾಗುವುದು. ಪರೀಕ್ಷಾ ಅಥವಾ ಪ್ರಯೋಗ ಗುಂಪಿಗೆ ಪರೀಕ್ಷಿಸಬೇಕಾಗಿರುವ ಚುಚ್ಚು ಮದ್ದನ್ನು ನೀಡಲಾಗುವುದು. ನಿಯಂತ್ರಿತ ಗುಂಪಿಗೆ ಚುಚ್ಚು ಮದ್ದನ್ನು ನೀಡಲಾಗುವುದಿಲ್ಲ. ಪರೀಕ್ಷಾ ಗುಂಪಿನ ಪ್ರಾಣಿಗಳಲ್ಲಿ ಆಗುವ ಬದಲಾವಣೆಯ ಆಧಾರದಲ್ಲಿ ಚುಚ್ಚು ಮದ್ದಿನ ಪರಿಣಾಮವನ್ನು ಮಾಪನ ಮಾಡಲಾಗುವುದು. ಇತ್ತೀಚಿನ ದಿನಗಳಲ್ಲಿ ಕೆಲವೊಂದು ಔಷಧಿಗಳನ್ನು ನೇರವಾಗಿ ಮನುಷ್ಯರ ಮೇಲೆ ಪ್ರಯೋಗಿಸಿ ಪರೀಕ್ಷಿಸಲಾಗುತ್ತಿದೆ. ಉದಾಹರಣೆಗೆ ಏಡ್ಸ್ ಕಾಯಿಲೆಯನ್ನು ಗುಣಪಡಿಸಲು ಅವಿಷ್ಕರಿಸುವ ಮದ್ದಿನ ಪರಿಣಾಮವನ್ನು ಮನುಷ್ಯರ ಮೇಲೆ ಪ್ರಯೋಗಿಸಿ ನಿರ್ಧರಿಸಲಾಗುವುದು. ಇದಕ್ಕಾಗಿ ಏಡ್ಸ್ ಕಾಯಿಲೆ ಇರುವ ಸುಮಾರು ಹತ್ತು ಜನರ ಎರಡು ಗುಂಪುಗಳನ್ನು ಕರೆಯಲಾಗುವುದು. ಪರೀಕ್ಷಾ ಅಥವಾ ಪ್ರಯೋಗ ಗುಂಪಿಗೆ ಏಡ್ಸ್ ನಿವಾರಣ ಮದ್ದನ್ನು ನೀಡಲಾಗುವುದು. ಮತ್ತೊಂದು ಗುಂಪಿಗೆ (ನಿಯಂತ್ರಿತ ಗುಂಪಿಗೆ) ಏಡ್ಸ್ ನಿವಾರಣ ಮದ್ದನ್ನು ನೀಡಲಾಗುವುದಿಲ್ಲ. ಪ್ರಯೋಗ ಅಥವಾ ಪರೀಕ್ಷಾ ಗುಂಪಿನಲ್ಲಿ ಆಗುವ ಬದಲಾವಣೆ ಆಧಾರದಲ್ಲಿ ಮದ್ದಿನ ಪರಿಣಾಮವನ್ನು ಲೆಕ್ಕ ಹಾಕಲಾಗುವುದು. ಸಮಾಜ ಸಂಶೋಧನೆಯಲ್ಲೂ ಈ ವಿಧಾನದ ಬಳಕೆ ಇದೆ. ಮೇಲಿನ ಎರಡು ಉದಾಹರಣೆಗಳಲ್ಲೂ ಹೆಚ್ಚು ಕಡಿಮೆ ಈ ಪರೀಕ್ಷಾ ಮತ್ತು

ನಿಯಂತ್ರಿತ ಗುಂಪುಗಳ ಬಳಕೆ ಆಗಿದೆ. ಗ್ರಾಮವೊಂದರ ಅಭಿವೃದ್ಧಿಯಲ್ಲಿ ನೀರಾವರಿ ಪಾತ್ರ ಅಳೆಯಲು ಹೆಚ್ಚು ಕಡಿಮೆ ಒಂದೇ ಸಾಮಾಜಿಕ, ಆರ್ಥಿಕ ರಾಜಕೀಯ ಮತ್ತು ಸಾಂಸ್ಕೃತಿಕ ಪರಿಸರವುಳ್ಳ ಎರಡು ಹಳ್ಳಿಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಅದರಲ್ಲಿ ಒಂದಕ್ಕೆ ನೀರಾವರಿ ವ್ಯವಸ್ಥೆ ಇದ್ದು ಮತ್ತೊಂದು ಹಳ್ಳಿಯಲ್ಲಿ ನೀರಾವರಿ ವ್ಯವಸ್ಥೆ ಇಲ್ಲ ಎನ್ನುವ ವ್ಯತ್ಯಾಸ ಮಾತ್ರ ಇರಬೇಕು. ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳನ್ನು ಪ್ರಭಾವಿಸುವ ಇತರ ಅಂಶಗಳಿರುವ ಹಳ್ಳಿಗಳು ಅಧ್ಯಯನಕ್ಕೆ ಯೋಗ್ಯವಾಗುವುದಿಲ್ಲ.

ಇಲ್ಲಿ ಎರಡು ಅಂಶಗಳು ಅಧ್ಯಯನ ವ್ಯಾಪ್ತಿಗೆ ಬರುತ್ತವೆ. ಒಂದು, ಬದಲಾವಣೆಗೆ ಅಥವಾ ಪರಿವರ್ತನೆಗೆ ಕಾರಣವಾಗುವ ಅಂಶ. ಇದನ್ನು ಸಮಾಜ ಸಂಶೋಧನಾ ಭಾಷೆಯಲ್ಲಿ ಸ್ವತಂತ್ರ ಪರಿವರ್ತಕ (ಇಂಡಿಪೆಂಡೆಂಟ್ ವೆರಿಯೆಬ್‌ಲ್) ಎಂದು ಕರೆಯುತ್ತಾರೆ. ಎರಡು, ಬದಲಾವಣೆ ಅಥವಾ ಪರಿವರ್ತನೆ ವ್ಯಕ್ತವಾಗುವ ಅಂಶ. ಇದನ್ನು ಅವಲಂಬಿತ ಪರಿವರ್ತಕ (ಡಿಪೆಂಡೆಂಟ್ ವೆರಿಯೆಬ್‌ಲ್) ಎಂದು ಗುರುತಿಸುತ್ತಾರೆ. ಮೇಲಿನ ಉದಾಹರಣೆಗಳಲ್ಲಿ ನೀರಾವರಿ ಮತ್ತು ಶಿಕ್ಷಣ ಸ್ವತಂತ್ರ ಪರಿವರ್ತಕಗಳಾದರೆ ಗ್ರಾಮೀಣಾಭಿವೃದ್ಧಿ ಮತ್ತು ಆದಾಯಗಳು ಅವಲಂಬಿತ ಪರಿವರ್ತಕಗಳಾಗುತ್ತವೆ. ಒಂದು ಅಂಶ ಸ್ವತಂತ್ರ ಅಥವಾ ಅವಲಂಬಿತ ಪರಿವರ್ತಕವಾಗಿದೆಯೇ ಎಂದು ನಿರ್ಧರಿಸುವುದು ಸುಲಭದ ಕೆಲಸವಲ್ಲ. ಒಂದೇ ಅಂಶ ಏಕಕಾಲದಲ್ಲಿ ಸ್ವತಂತ್ರ ಪರಿವರ್ತಕವೂ ಆಗಬಹುದು ಅಥವಾ ಅವಲಂಬಿತ ಪರಿವರ್ತಕವೂ ಆಗಬಹುದು. ಉದಾಹರಣೆಗೆ ಉನ್ನತ ಶಿಕ್ಷಣ ಮತ್ತು ಆದಾಯದ ನಡುವಿನ ಅಧ್ಯಯನದಲ್ಲಿ ಆದಾಯ ಎರಡೂ ಗುಣಗಳನ್ನು ಹೊಂದಿದೆ. ಮಧ್ಯ ವಯಸ್ಕನೊಬ್ಬನ ಶಿಕ್ಷಣ ಮತ್ತು ಆದಾಯದ ನಡುವಿನ ಸಂಬಂಧವನ್ನು ಪರೀಕ್ಷಿಸುವ ಸಂದರ್ಭದಲ್ಲಿ ಆದಾಯವನ್ನು ಡಿಪೆಂಡೆಂಟ್ ಪರಿವರ್ತಕವಾಗಿ ಪರಿಗಣಿಸುವುದರಲ್ಲಿ ವಿಶೇಷ ಸಮಸ್ಯೆ ಇಲ್ಲ. ಆದರೆ ಈ ಎರಡರ (ಶಿಕ್ಷಣ ಮತ್ತು ಆದಾಯ) ಸಂಬಂಧವನ್ನು ಪರೀಕ್ಷಿಸುವಾಗ ಕುಟುಂಬದ ಆದಾಯವನ್ನು ಪರಿಗಣಿಸಿದರೆ ಆದಾಯ ಸ್ವತಂತ್ರ ಪರಿವರ್ತಕವಾಗಿ ಕಂಡುಬರಬಹುದು. ಯಾಕೆಂದರೆ ಕುಟುಂಬವೊಂದರ ಆರ್ಥಿಕ ಸ್ಥಿತಿ(ಆದಾಯ) ವ್ಯಕ್ತಿಯ ಶಿಕ್ಷಣದ ಮಟ್ಟವನ್ನು ಪ್ರಭಾವಿಸಬಹುದು. ಹೀಗೆ ಸಮಾಜ ವಿಜ್ಞಾನದಲ್ಲಿ ಸ್ವತಂತ್ರ ಮತ್ತು ಡಿಪೆಂಡೆಂಟ್ ಪರಿವರ್ತಕಗಳನ್ನು ರೂಪಿಸಿ ಕೊಳ್ಳುವುದು ಸ್ವಲ್ಪ ಕಷ್ಟದ ಕೆಲಸ. ಇದೇ ರೀತಿಯಲ್ಲಿ ಪ್ರಯೋಗ ಅಥವಾ ಪರೀಕ್ಷಾ ಗುಂಪು ಮತ್ತು ನಿಯಂತ್ರಿತ ಗುಂಪುಗಳನ್ನು ಆಯ್ಕೆ ಮಾಡಿಕೊಳ್ಳುವುದು ಕೂಡ ಕಷ್ಟದ ಕೆಲಸ. ಸಮಾಜ ವಿಜ್ಞಾನದಲ್ಲಿ ಅಧ್ಯಯನಕ್ಕೆ ಒಳಗಾಗುವ ಸಂಗತಿಗಳು ವಿಜ್ಞಾನದ ಅಧ್ಯಯನದ ವಸ್ತುಗಳಂತೆ ಹಿಡಿತಕ್ಕೆ ಬರುವಂತವಲ್ಲ. ಸತತ ಚಲನಶೀಲವಾಗಿರುವ ಸಾಮಾಜಿಕ ಸಂಗತಿಗಳು ಸಮಾಜ ವಿಜ್ಞಾನದ ಅಧ್ಯಯನ ಸಂಗತಿಗಳು. ಪರೀಕ್ಷಾ ಗುಂಪುಗಳದ್ದೇ ಗುಣವುಳ್ಳ ನಿಯಂತ್ರಿತ ಗುಂಪುಗಳನ್ನು ಹುಡುಕುವುದು ಸಮಾಜ ಸಂಶೋಧನೆಯಲ್ಲಿ ಸಾಧ್ಯವಾಗಲಿಕ್ಕಿಲ್ಲ.

ಇಂತಹ ಸಂದರ್ಭಗಳಲ್ಲಿ ಪರೀಕ್ಷಾ ಗುಂಪಿನ ಅಥವಾ ಅಧ್ಯಯನಕ್ಕೆ ಒಳಗಾದ ಸಂಗತಿಗಳಲ್ಲಾಗುವ ಪರಿವರ್ತನೆಗಳನ್ನು ಒಟ್ಟಾರೆಯಲ್ಲಾಗುವ ಪರಿವರ್ತನೆಯೊಂದಿಗೆ ಹೋಲಿಸಿ ಸಾಮಾಜಿಕ ಪರಿವರ್ತನೆ ಬಗ್ಗೆ ತೀರ್ಮಾನಕ್ಕೆ ಬರಲಾಗುವುದು. ಉದಾಹರಣೆಗೆ ಪ್ರವಾಸೋಧ್ಯಮ ಮತ್ತು ಸಾಮಾಜಿಕ ಪರಿವರ್ತನೆ ನಡುವಿನ ಸಂಬಂಧವನ್ನು ಅಧ್ಯಯನ ಮಾಡಲು ಪ್ರವಾಸೋದ್ಯಮ ಇರುವ ಹಳ್ಳಿಯನ್ನು ಅಥವಾ ಊರನ್ನು ಪ್ರವಾಸೋದ್ಯಮ ಇಲ್ಲದ ಹಳ್ಳಿ ಅಥವಾ ಊರಿನೊಂದಿಗೆ ಹೋಲಿಸಬೇಕಾಗುತ್ತದೆ.[೧೦] ಪ್ರವಾಸೋದ್ಯಮ ಇರುವ ಊರನ್ನು ಆಯ್ಕೆ ಮಾಡುವುದು ಸಮಸ್ಯೆ ಅಲ್ಲ. ಆದರೆ ಪ್ರವಾಸೋದ್ಯಮ ಇರುವ ಹಳ್ಳಿಯ ಎಲ್ಲಾ ಲಕ್ಷಣಗಳಿರುವ (ಪ್ರವಾಸೋದ್ಯಮವನ್ನು ಹೊರತುಪಡಿಸಿ) ಮತ್ತೊಂದು ಹಳ್ಳಿಯನ್ನು ಆಯ್ಕೆ ಮಾಡುವುದು ಕಷ್ಟದ ಕೆಲಸ. ಇಂತಹ ಸಂದರ್ಭದಲ್ಲಿ ಪ್ರವಾಸೋದ್ಯಮ ದಿಂದ ಆದ ಸಾಮಾಜಿಕ ಪರಿವರ್ತನೆಗಳನ್ನು ಅಧ್ಯಯನ ಮಾಡಲು ಈ ಕೆಳಗಿನ ವಿಧಾನ ಗಳನ್ನು ಅನುಸರಿಸಬಹುದು. ಒಂದು, ತುಲನಾತ್ಮಕ ವಿಶ್ಲೇಷಣಾ ವಿಧಾನ. ಮತ್ತೊಂದು ಚಾರಿತ್ರಿಕ ವಿಶ್ಲೇಷಣಾ ವಿಧಾನ. ಕಾರ್ಯಕಾರಣ ಸಂಬಂಧ ವಿಶ್ಲೇಷಣೆ ಮತ್ತು ತುಲನಾತ್ಮಕ ವಿಶ್ಲೇಷಣೆ ನಡುವೆ ಸಾಕಷ್ಟು ಸಾಮ್ಯತೆಗಳಿವೆ. ಜತೆಗೆ ಕೆಲವೊಂದು ಸಣ್ಣಪುಟ್ಟ ವ್ಯತ್ಯಾಸಗಳಿವೆ. ಅವುಗಳಲ್ಲಿ ಪ್ರಮುಖ ಪರೀಕ್ಷಾ ಮತ್ತು ನಿಯಂತ್ರಿತ ಗುಂಪುಗಳ ಆಯ್ಕೆಗೆ ಸಂಬಂಧಿಸಿದ ಭಿನ್ನತೆ. ಕಾರ್ಯಕಾರಣ ವಿಶ್ಲೇಷಣೆಯಲ್ಲಿ ಎರಡು ಗುಂಪುಗಳನ್ನು (ಪರೀಕ್ಷಾ ಮತ್ತು ನಿಯಂತ್ರಿತ) ಆಯ್ಕೆ ಮಾಡಿಕೊಳ್ಳುವುದು ಅನಿವಾರ್ಯ. ತುಲನಾತ್ಮಕ ವಿಶ್ಲೇಷಣೆ ಒಟ್ಟಾರೆ ಪರಿಸರದಲ್ಲಿನ ಸಂಗತಿಗಳಿಗೆ ಅಧ್ಯಯನಕ್ಕೆ ಒಳಗಾಗುವ ಸಂಗತಿಗಳನ್ನು ಹೋಲಿಸಿ ತೀರ್ಮಾನಕ್ಕೆ ಅವಕಾಶ ಮಾಡಿಕೊಡುವ ಮೂಲಕ ಕಾರ್ಯಕಾರಣ ವಿಶ್ಲೇಷಣೆಯ ಮಿತಿಯನ್ನು ಮೀರಲು ಸಹಕರಿಸುತ್ತದೆ. ಪ್ರವಾಸೋದ್ಯಮ ಮತ್ತು ಸಾಮಾಜಿಕ ಪರಿವರ್ತನೆಯ ಉದಾಹರಣೆಯನ್ನು ಬಳಸಿಕೊಂಡು ಮುಂದುವರಿಯುವ. ಪ್ರವಾಸೋದ್ಯಮದಿಂದ ಆಗುವ ಸಾಮಾಜಿಕ ಪರಿವರ್ತನೆಗಳನ್ನು ಮಾಪನ ಮಾಡಲು ಕೆಲವೊಂದು ಸೂಚ್ಯಂಕಗಳನ್ನು ಗುರುತಿಸಿಕೊಳ್ಳಬೇಕು. ಕುಟುಂಬ ವ್ಯವಸ್ಥೆಯೊಳಗಿನ ಪರಿವರ್ತನೆ (ಅವಿಭಕ್ತ ಕುಟುಂಬದಿಂದ ವಿಭಕ್ತ ಕುಟುಂಬದ ಕಡೆಗೆ ಚಲಿಸುವುದು), ಮಹಿಳೆಯ ಸ್ಥಾನಮಾನ, ಲಿಂಗಾನುಪಾತ, ಶಿಕ್ಷಣದ ಮಟ್ಟ, ಆರೋಗ್ಯ ಮಟ್ಟ, ಸಾಮಾಜಿಕ ಏಣಿಶ್ರೇಣಿಯಲ್ಲಿನ ಪರಿವರ್ತನೆ ಇತ್ಯಾದಿಗಳು ಸಾಮಾಜಿಕ ಪರಿವರ್ತನೆಯನ್ನು ಮಾಪನ ಮಾಡಲು ಬಳಸುವ ಸಾಮಾನ್ಯ ಸೂಚ್ಯಾಂಕಗಳು. ಈ ಸೂಚ್ಯಂಕಗಳ ಮೇಲೆ ಪ್ರವಾಸೋದ್ಯಮ ಇರುವ ಹಳ್ಳಿಯಲ್ಲಿ ದೊರೆತ ಮಾಹಿತಿಯನ್ನು ಆ ಹಳ್ಳಿ ಇರುವ ತಾಲ್ಲೂಕು/ಜಿಲ್ಲೆ/ರಾಜ್ಯ/ದೇಶಗಳಲ್ಲಿನ ಮಾಹಿತಿಯೊಂದಿಗೆ (ಸೂಚ್ಯಂಕಗಳ ಮೇಲಿನ ಮಾಹಿತಿಯೊಂದಿಗೆ) ಹೋಲಿಸಬಹುದು. ಉದಾಹರಣೆಗೆ ಪ್ರವಾಸೋದ್ಯಮ ಇರುವ ಹಳ್ಳಿಯಲ್ಲಿನ ಲಿಂಗಾನುಪಾತ ಮತ್ತು ಮಹಿಳಾ ಶಿಕ್ಷಣ ಮಟ್ಟ ತಾಲ್ಲೂಕು, ಜಿಲ್ಲೆ, ರಾಜ್ಯ ಮತ್ತು ದೇಶದ ಲಿಂಗಾನುಪಾತ ಮತ್ತು ಮಹಿಳಾ ಶಿಕ್ಷಣ ಮಟ್ಟಕ್ಕಿಂತ ಉತ್ತಮವಿದ್ದರೆ ಪ್ರವಾಸೋದ್ಯಮ ಮತ್ತು ಸಾಮಾಜಿಕ ಪರಿವರ್ತನೆ ನಡುವೆ

ತಕ್ಕಮಟ್ಟಿನ ಸಂಬಂಧ ಇದೆಯೆನ್ನುವ ತೀರ್ಮಾನಕ್ಕೆ ಬರಬಹುದು. ಅಂತಿಮ ತೀರ್ಮಾನಕ್ಕೆ ಬರುವ ಮುನ್ನ ಪ್ರವಾಸೋದ್ಯಮವನ್ನು ಹೊರತುಪಡಿಸಿದ ಇತರ ಸಂಗತಿಗಳೇನಾದರೂ ಮೇಲಿನ ಸಾಮಾಜಿಕ ಪರಿವರ್ತನೆಗೆ ಕಾರಣವಾಗಿದೆಯೇ ಎಂದು ಪರೀಕ್ಷಿಸಬೇಕಾಗುತ್ತದೆ. ಒಂದು ವೇಳೆ ಪ್ರವಾಸೋದ್ಯಮವನ್ನು ಹೊರತುಪಡಿಸಿದ ಯಾವುದೇ ಕಾರಣ ಕೂಡ ಮೇಲಿನ ಪರಿವರ್ತನೆಯಲ್ಲಿ ಪಾತ್ರವಹಿಸಿಲ್ಲ ಎಂದಾದರೆ ಪ್ರವಾಸೋದ್ಯಮ ಮತ್ತು ಸಾಮಾಜಿಕ ಪರಿವರ್ತನೆ ನಡುವೆ ಸಂಬಂಧ ಇದೆ ಎಂದು ತೀರ್ಮಾನಿಸಬಹುದು.

ಮೇಲಿನ ಎಲ್ಲ ಉದಾಹರಣೆಗಳಲ್ಲೂ ಒಂದು ಸ್ವತಂತ್ರ ಪರಿವರ್ತಕ (ಇಂಡಿಪೆಂಡೆಂಟ್ ವೆರಿಯಬ್ಲ್) ಮತ್ತು ಡಿಪೆಂಡೆಂಟ್ ಪರಿವರ್ತಕ ನಡುವಿನ ಸಂಬಂಧದ ವಿಶ್ಲೇಷಣೆ ಇದೆ. ವಾಸ್ತವದಲ್ಲಿ ಯಾವುದೇ ಒಂದು ಸಾಮಾಜಿಕ ಆಗು ಹೋಗುಗಳು ಈ ಬಗೆಯಲ್ಲಿ ಕೇವಲ ಎರಡು ಸಂಗತಿಗಳಿಗೆ ಸೀಮಿತವಾಗಿರುವುದಿಲ್ಲ. ಹಲವಾರು ಸಂಗತಿಗಳು ಏಕಕಾಲದಲ್ಲಿ ಒಂದು ಘಟನೆಯ ಸುತ್ತ ಸಂಬಂಧ ಹೊಂದಿರಬಹುದು. ಉದಾಹರಣೆಗೆ ಉದ್ಯಮಿಯೊಬ್ಬನ ಕಾರ್ಯಕ್ಷಮತೆ ಮತ್ತು ಕಾರ್ಯಕ್ಷಮತೆಯನ್ನು ಪ್ರಭಾವಿಸುವ ಸಂಗತಿಗಳ ಮೇಲಿನ ಸಂಶೋಧನೆಯನ್ನು ಪರಿಶೀಲಿಸುವ. ಉದ್ಯಮಿಯ ಕಾರ್ಯಕ್ಷಮತೆಯನ್ನು ಆತನ ವ್ಯಾಪಾರ ಅಥವಾ ವಹಿವಾಟುಗಳು ಗಳಿಸುವ ಲಾಭದಿಂದ ಅಳೆಯಬಹುದು. ಹಲವಾರು ಸಂಗತಿಗಳು ಉದ್ಯಮಿಯ ಕಾರ್ಯಕ್ಷಮತೆಯನ್ನು ಪ್ರಭಾವಿಸಬಹುದು. ಉದ್ಯಮಿಯ ಶಿಕ್ಷಣ, ವ್ಯಾಪಾರದ ಅನುಭವ, ಸ್ವಂತ ಉಳಿತಾಯದ ಪ್ರಮಾಣ, ಕುಟುಂಬದ ಆರ್ಥಿಕ ಸ್ಥಿತಿ, ಆತನ ಅಥವಾ ಕುಟುಂಬದ ರಾಜಕೀಯ ಸಂಬಂಧಗಳೂ ಇತ್ಯಾದಿಗಳು. ಉದ್ಯಮಿಯ ಲಾಭ ನಷ್ಟಗಳು ನಿಂತಿರುವುದು ಸಮಯ ಸಂದರ್ಭಕ್ಕನುಸಾರ ವ್ಯವಹರಿಸುವ ಉದ್ಯಮಿಯ ಶಕ್ತಿಯ ಮೇಲೆ. ಉದಾಹರಣೆಗೆ ಉದ್ಯಮಿಯ ಸರಕಿಗೆ ಉತ್ತಮ ಬೇಡಿಕೆ ಇರುವ ಸಂದರ್ಭದಲ್ಲಿ ಸರಕುಗಳನ್ನು ತಕ್ಷಣದಲ್ಲಿ ಪೂರೈಸಲು ಸಾಧ್ಯವಾದರೆ ಮಾತ್ರ ಉದ್ಯಮಿ ಲಾಭ ಗಳಿಸಲು ಸಾಧ್ಯ. ಆ ಅವಕಾಶವನ್ನು ಕಳೆದುಕೊಂಡರೆ ಮತ್ತೊಂದು ಅವಕಾಶಕ್ಕಾಗಿ ಕಾಯಬೇಕು. ಮತ್ತೊಂದು ಅವಕಾಶ ಬಂದರೆ ಬಂತು ಇಲ್ಲದಿದ್ದರೆ ಇಲ್ಲ ಅಥವಾ ಅವಕಾಶ ಬರುವ ಸಂದರ್ಭದಲ್ಲಿ ಮಾರುಕಟ್ಟೆ ಸ್ಥಿತಿಯೇ ಬದಲಾಗಿರಬಹುದು. ಆದುದರಿಂದ ಸಿಕ್ಕ ಅವಕಾಶವನ್ನು ಬಳಸಿಕೊಳ್ಳುವುದು ಉದ್ಯಮಿಯ ಅಸ್ತಿತ್ವಕ್ಕೆ ತುಂಬಾ ಅಗತ್ಯ. ಅವಕಾಶವನ್ನು ಬಳಸಿಕೊಳ್ಳಲು ಉದ್ಯಮಿಗೆ ನೆರವಾಗುವ ಮಹತ್ತರವಾದ ಅಂಶವೆಂದರೆ ಹಣಕಾಸು ಪೂರೈಕೆ. ಹಣಕಾಸು ಪೂರೈಕೆಗೆ ಬೇಂಕ್ ಮತ್ತು ಇತರ ಅಧಿಕೃತ ಸಂಘಸಂಸ್ಥೆಗಳಿವೆ. ಆದರೆ ಅವುಗಳಿಂದ ಉದ್ಯಮಿಯ ತಕ್ಷಣದ ಹಣಕಾಸಿನ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಉದ್ಯಮಿಯ ಸ್ವಂತ ಉಳಿತಾಯ ಅಥವಾ ಕುಟುಂಬದ ಸದಸ್ಯರಿಂದ ಸಿಗುವ ಹಣಕಾಸಿನ ನೆರವು ಉದ್ಯಮಿಯ ಯಶಸ್ಸನ್ನು ಗಣನೀಯವಾಗಿ ಪ್ರಭಾವಿಸುತ್ತದೆ.[೨೫] ಹೀಗೆ ಇಲ್ಲಿ ಉದ್ಯಮಿಯ ಕಾರ್ಯಕ್ಷಮತೆ ಡಿಪೆಂಡೆಂಟ್ ವೇರಿಯೆಬಲ್ ಆಗುತ್ತದೆ. ಕಾರ್ಯಕ್ಷಮತೆಯನ್ನು ಪ್ರಭಾವಿಸುವ ಮೇಲೆ

ತಿಳಿಸಿದ ಅಂಶಗಳು ಸ್ವತಂತ್ರ ಪರಿವರ್ತಕಗಳಾಗುತ್ತವೆ. ಈ ಎಲ್ಲವು ಉದ್ಯಮಿಯ ಕಾರ್ಯಕ್ಷಮತೆಯನ್ನು ಹೇಗೆ ಪ್ರಭಾವಿಸುತ್ತವೆ ಮತ್ತು ಪ್ರತಿಯೊಂದರ ಪಾತ್ರ ಏನೆಂದು ಅರ್ಥಮಾಡಿಕೊಳ್ಳಬೇಕಾದರೆ ಮಲ್ಟಿಪಲ್ ರಿಗ್ರೆಶನ್ ವಿಶ್ಲೇಷಣೆ ಮಾಡಬೇಕಾಗುತ್ತದೆ. ಅಧ್ಯಾಯದ ಮುಂದಿನ ಭಾಗದಲ್ಲಿ ಚಾರಿತ್ರಿಕ ವಿಶ್ಲೇಷಣೆಯನ್ನು ಪರಿಚಯಿಸಲಾಗುವುದು.

ಚಾರಿತ್ರಿಕ ವಿಶ್ಲೇಷಣೆ

ಚಾರಿತ್ರಿಕ ವಿಶ್ಲೇಷಣೆ ಹಲವಾರು ಕಾರಣಗಳಿಗೆ ಮಹತ್ವ ಪಡೆದಿದೆ. ವರ್ತಮಾನವನ್ನು ಗಟ್ಟಿಗೊಳಿಸಲು, ಸತ್ಯವೆಂದು ನಂಬಿಕೊಂಡು ಬಂದಿರುವ ಸಂಗತಿಗಳ ನಿಜ ಸ್ವರೂಪ ತಿಳಿಯಲು, ಮೂರು, ಒಂದು ಸಾಮಾಜಿಕ ವಾಸ್ತವತೆಯ ಯುನಿವರ್ಸಲ್ ಅನ್ವಯಿಕತೆಯ ಸಾಧ್ಯತೆಯನ್ನು ಒರೆಹಚ್ಚಲು ಹಾಗೂ ನಾಲ್ಕು, ನಾವು ಎಲ್ಲಿಗೆ ಹೋಗಬೇಕೆನ್ನುವುದನ್ನು ನಿರ್ಧರಿಸಲು ನಾವು ಎಲ್ಲಿಂದ ಬಂದಿದ್ದೇವೆ ಎನ್ನುವುದರ ತಿಳುವಳಿಕೆ ಅಗತ್ಯ. ಈ ಎಲ್ಲ ಉದ್ದೇಶಗಳನ್ನು ಚಾರಿತ್ರಿಕ ವಿಶ್ಲೇಷಣೆಯಿಂದ ಮಾತ್ರ ಪೂರೈಸಲು ಸಾಧ್ಯ. ಚಾರಿತ್ರಿಕ ವಿಶ್ಲೇಷಣೆ ಮೇಲೆ ಮಾಹಿತಿ ನೀಡುವಾಗ ಒಂದಂಶವನ್ನು ಸ್ಪಷ್ಟಪಡಿಸುವ ಅಗತ್ಯ ಇದೆ. ಇಲ್ಲಿ ನೀಡುವ ಚಾರಿತ್ರಿಕ ವಿಶ್ಲೇಷಣೆಯ ವಿವರಣೆ ಚರಿತ್ರೆಯ ಸಂಶೋಧನೆಯನ್ನು ಗಮನದಲ್ಲಿಟ್ಟುಕೊಂಡು ಮಾಡಿಲ್ಲ. ಚರಿತ್ರೇತರ ಸಂಶೋಧನೆಗಳ ಸಂದರ್ಭದಲ್ಲಿ ಬಳಕೆಯಾಗುವ ಚಾರಿತ್ರಿಕ ಮಾಹಿತಿಗಳ ವಿಶ್ಲೇಷಣೆಯನ್ನು ಗಮನದಲ್ಲಿಟ್ಟುಕೊಂಡು ಇಲ್ಲಿನ ವಿವರಣೆಗಳಿವೆ.[೨] ಕಾರ್ಯಕರಣ ವಿಶ್ಲೇಷಣೆಯನ್ನು ಎಲ್ಲ ಸಂದರ್ಭಗಳಲ್ಲಿ ಮಾಡಲಾಗುವುದಿಲ್ಲ ಎಂದು ಪ್ರವಾಸೋದ್ಯಮ ಮತ್ತು ಸಾಮಾಜಿಕ ಪರಿವರ್ತನೆಯ ಅಧ್ಯಯನದ ಉದಾಹರಣೆಯಲ್ಲಿ ಕಂಡುಕೊಂಡಿದ್ದೇವೆ. ಆ ಸಂದರ್ಭದಲ್ಲಿ ತುಲನಾತ್ಮಕ ವಿಶ್ಲೇಷಣೆ ಅಥವಾ ಚಾರಿತ್ರಿಕ ವಿಶ್ಲೇಷಣಾ ವಿಧಾನವನ್ನು ಬಳಸಬಹುದೆಂದು ಹೇಳಲಾಗಿದೆ. ತುಲನಾತ್ಮಕ ವಿಶ್ಲೇಷಣಾ ವಿಧಾನದಿಂದ ಪ್ರವಾಸೋದ್ಯಮ ಮತ್ತು ಸಾಮಾಜಿಕ ಪರಿವರ್ತನೆ ನಡುವಿನ ಸಂಬಂಧವನ್ನು ಅಧ್ಯಯನ ಹೇಗೆ ಮಾಡಬಹುದೆನ್ನುವುದನ್ನು ಮೇಲಿನ ಪ್ಯಾರಾದಲ್ಲಿ ನೋಡಿದ್ದೇವೆ. ಇಲ್ಲಿ ಚಾರಿತ್ರಿಕ ವಿಶ್ಲೇಷಣಾ ವಿಧಾನವನ್ನು ಬಳಸುವ ಕ್ರಮವನ್ನು ತಿಳಿದುಕೊಳ್ಳಲು ಪ್ರಯತ್ನಿಸುವ. ಪುನಃ ಅದೇ ಪ್ರವಾಸೋದ್ಯಮದ ಉದಾಹರಣೆಯನ್ನು ತೆಗೆದುಕೊಳ್ಳುವ. ಪ್ರವಾಸೋದ್ಯಮದಿಂದಾಗುವ ಸಾಮಾಜಿಕ ಪರಿವರ್ತನೆಯನ್ನು ಮಾಪನ ಮಾಡಲು ಕುಟುಂಬ ವ್ಯವಸ್ಥೆಯೊಳಗಿನ ಪರಿವರ್ತನೆ (ಅವಿಭಕ್ತ ಕುಟುಂಬದಿಂದ ವಿಭಕ್ತ ಕುಟುಂಬದ ಕಡೆಗೆ ಚಲಿಸುವುದು), ಮಹಿಳೆಯ ಸ್ಥಾನಮಾನ, ಲಿಂಗಾನುಪಾತ, ಶಿಕ್ಷಣದ ಮಟ್ಟ, ಆರೋಗ್ಯದ ಮಟ್ಟ, ಸಾಮಾಜಿಕ ಏಣಿಶ್ರೇಣಿಯಲ್ಲಿನ ಪರಿವರ್ತನೆ ಇತ್ಯಾದಿ ಸೂಚ್ಯಂಕಗಳನ್ನು ಬಳಸಲಾಗಿದೆ. ಪ್ರವಾಸೋದ್ಯಮ ಹಳ್ಳಿಯಲ್ಲಿ ಶುರುವಾಗುವ ಮುನ್ನ ಈ ಸೂಚ್ಯಂಕಗಳ ಸ್ಥಿತಿಗತಿ ಏನೆಂದು ತಿಳಿದರೆ ಪ್ರವಾಸೋದ್ಯಮದಿಂದಾದ ಪರಿವರ್ತನೆಯನ್ನು ಅರಿತುಕೊಳ್ಳಬಹುದು. ಹಂಪೆಯ ಉದಾಹರಣೆಯನ್ನು ತೆಗೆದುಕೊಳ್ಳುವ. ತೊಂಬತ್ತರ ದಶಕದಲ್ಲಿ ಇದು ವರ್ಲ್ಡ್ ಹೆರಿಟೇಜ್ ಪಟ್ಟಿಗೆ

ಸೇರಿತು. ನಂತರದ ದಿನಗಳಲ್ಲಿ ಪ್ರವಾಸಿಗರ ಸಂಖ್ಯೆ, ಅದರಲ್ಲೂ ಪರದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚಿದೆ. ಹಂಪೆಯನ್ನು ನೋಡಲು ಬರುವ ಪ್ರವಾಸಿಗರಲ್ಲಿ ಕೆಲವರು ಹಂಪೆಯಲ್ಲೇ ಉಳಿದರೆ ಇನ್ನು ಕೆಲವರು ಹೊಸಪೇಟೆ ಹೊಟೇಲುಗಳಲ್ಲಿ ಮತ್ತು ಕಮಲಾಪುರದಲ್ಲಿರುವ ಪ್ರವಾಸೋದ್ಯಮ ಇಲಾಖೆಯವರ ವಸತಿ ನಿಲಯಗಳಲ್ಲಿ ಉಳಿಯುತ್ತಾರೆ. ಆರ್ಥಿಕವಾಗಿ ಕೆಳಸ್ಥಿತಿಯಲ್ಲಿರುವ ಪರದೇಶಿ ಪ್ರವಾಸಿಗರು ಹಂಪೆಯಲ್ಲೇ ಉಳಿಯುತ್ತಾರೆ. ಇವರ ಸೇವೆಗಾಗಿ ನೂರಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಅತಿಥಿ ಗೃಹಗಳು ಹಂಪೆಯಲ್ಲಿ ಆರಂಭವಾಗಿವೆ. ಜತೆಗೆ ಪ್ರವಾಸಿಗರ ಇತರ ಬೇಡಿಕೆಗಳನ್ನು ಪೂರೈಸಲು ಹೋಟೇಲುಗಳು, ಅಂಗಡಿಗಳು, ಮಸೇಜ್ ಶಾಪ್‌ಗಳು ಹಂಪೆಯಲ್ಲಿ ಆರಂಭವಾಗಿವೆ. ಹಲವಾರು ತಲೆಮಾರುಗಳಿಂದ ಹಂಪೆಯಲ್ಲಿಯೇ ವಾಸವಿರುವ ಕುಟುಂಬಗಳ ಜತೆಗೆ ನೆರೆಯ ಹಳ್ಳಿಗಳಿಂದ ವಲಸೆ ಬಂದ ಕುಟುಂಬಗಳು ಈ ಉದ್ಯಮಗಳನ್ನು ಆರಂಭಿಸಿದ್ದಾರೆ.[೯] ಪ್ರವಾಸೋದ್ಯಮ ಆರಂಭವಾಗುವ ಮುನ್ನ ಹಂಪೆಯಲ್ಲಿನ ಕುಟುಂಬಗಳ ಸಾಮಾಜಿಕ ಸ್ಥಿತಿಗತಿಗಳನ್ನು ಆರಂಭವಾದ ನಂತರದ ಸ್ಥಿತಿಗತಿಗಳಿಗೆ ಹೋಲಿಸುವ ಮೂಲಕ ಪ್ರವಾಸೋದ್ಯಮದಿಂದಾದ ಸಾಮಾಜಿಕ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಬಹುದು. ಹೀಗೆ ಚಾರಿತ್ರಿಕ ವಿಶ್ಲೇಷಣೆ ಕೂಡ ಒಂದು ಬಗೆಯ ತುಲನಾತ್ಮಕ ವಿಶ್ಲೇಷಣೆಯೇ ಆಗಿದೆ. ಇಲ್ಲಿ ಭೂತವನ್ನು ವರ್ತಮಾನಕ್ಕೆ ಹೋಲಿಸಲಾಗುತ್ತದೆ. ಆ ಮೂಲಕ ವರ್ತಮಾನವನ್ನು ಗಟ್ಟಿಗೊಳಿಸುವ ಅಥವಾ ಪ್ರಶ್ನಿಸುವ ಕೆಲಸ ನಡೆಯುತ್ತದೆ.

ಚಾರಿತ್ರಿಕ ವಿಶ್ಲೇಷಣೆಯನ್ನು ಕೇವಲ ವರ್ತಮಾನವನ್ನು ಗಟ್ಟಿಗೊಳಿಸಲು ಅಥವಾ ಪ್ರಶ್ನಿಸಲು ಬಳಸುವುದಿಲ್ಲ; ವರ್ತಮಾನದಲ್ಲಿ ಸತ್ಯವೆಂದು ನಂಬಿರುವ ಸಂಗತಿಗಳ ನಿಜ ಸ್ವರೂಪ ತಿಳಿಯಲು ಕೂಡ ಬಳಕೆಯಾಗುತ್ತಿದೆ. ಒಂದು ಪ್ರದೇಶದ ಅಭಿವೃದ್ಧಿಯನ್ನು ಅಳೆಯಲು ಲಿಂಗಾನುಪಾತವನ್ನು (ಪ್ರತಿ ಸಾವಿರ ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆ) ಬಳಸುವುದು ಸಾಮಾನ್ಯ. ಒಂದು ಪ್ರದೇಶದಲ್ಲಿ ಪ್ರತಿ ಸಾವಿರ ಪುರುಷರ ಸಂಖ್ಯೆಗೆ ಸಮ ಅಥವಾ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿದ್ದರೆ ಆ ಪ್ರದೇಶವನ್ನು ಲಿಂಗಾನುಪಾತದ ದೃಷ್ಟಿಯಿಂದ ಅಭಿವೃದ್ಧಿ ಹೊಂದಿದ ಪ್ರದೇಶವೆಂದು ತೀರ್ಮಾನಿಸಲಾಗುವುದು. ನನ್ನ ಪಿಹೆಚ್.ಡಿ ಅಧ್ಯಯನ ಸಂದರ್ಭದಲ್ಲಿ (ತೊಂಬತ್ತರ ದಶಕದಲ್ಲಿ) ದಕ್ಷಿಣ ಕನ್ನಡ ಜಿಲ್ಲೆಯ ಲಿಂಗಾನುಪಾತವನ್ನು ಪರೀಕ್ಷಿಸುತ್ತಿದ್ದೆ. ಆ ಸಂದರ್ಭದಲ್ಲಿ ಜಿಲ್ಲೆಯ ಲಿಂಗಾನುಪಾತ ಸಕರಾತ್ಮಕ ಚಿತ್ರಣವನ್ನು ನೀಡುತ್ತಿತ್ತು. ಜತೆಗೆ ಅಭಿವೃದ್ಧಿಯ ಇತರ ಮಾನದಂಡಗಳ ಪ್ರಕಾರ ಕೂಡ ಜಿಲ್ಲೆ ಎರಡು ಅಥವಾ ಮೂರನೇ ಸ್ಥಾನದಲ್ಲಿ (ರಾಜ್ಯದ ಸರಾಸರಿಗಳಿಗೆ ಹೋಲಿಸಿ) ಇತ್ತು.[೧೦] ಎಪ್ಪತ್ತರ ದಶಕದಲ್ಲಿ ಬಂದ ಅಭಿವೃದ್ಧಿಯ ಕೆಲವೊಂದು ಕಾರ್ಯಕ್ರಮಗಳು (ಭೂಸುಧಾರಣೆ, ಬ್ಯಾಂಕ್ ರಾಷ್ಟ್ರೀಕರಣ, ಕಡಿಮೆ ವೆಚ್ಚದ ಶಿಕ್ಷಣ ಇತ್ಯಾದಿ ಕ್ರಮಗಳು) ಜಿಲ್ಲೆಯ ಅಭಿವೃದ್ಧಿಯಲ್ಲಿ ಗಣನೀಯವಾದ ಪಾತ್ರವಹಿಸಿವೆ. ಎಪ್ಪತ್ತರ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿ ಮಟ್ಟ ರಾಜ್ಯದ ಇತರ ಜಿಲ್ಲೆಗಳಿಗಿಂತ ವಿಶೇಷ ಭಿನ್ನ ಇರಲಿಲ್ಲ.

ಅಂದರೆ ಎಪ್ಪತ್ತರ ಹಿಂದಿನ ದಶಕಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಲಿಂಗಾನುಪಾತ ನಕರಾತ್ಮಕ ಚಿತ್ರಣ ನೀಡಬೇಕು. ಅದನ್ನು ಪರಿಶೀಲಿಸಲು ಎಪ್ಪತ್ತರ ಹಿಂದಿನ ದಶಕಗಳ ದಕ್ಷಿಣ ಕನ್ನಡ ಜಿಲ್ಲೆಯ ಲಿಂಗಾನುಪಾತವನ್ನು ಪರೀಕ್ಷಿಸಿದೆ. ಪರಿಶೀಲನೆಯಿಂದ ದೊರಕಿದ ಮಾಹಿತಿ ನನ್ನ ಇಡೀ ಗ್ರಹಿಕೆಯನ್ನೇ ಬುಡಮೇಲುಗೊಳಿಸಿತು. ಸ್ವಾತಂತ್ರ್ಯ ನಂತರದ ಎಲ್ಲ ದಶಕಗಳಲ್ಲೂ ಜಿಲ್ಲೆ ಲಿಂಗಾನುಪಾತದ ಸಕರಾತ್ಮಕ ಚಿತ್ರಣವನ್ನು ನೀಡುತ್ತಿತ್ತು; ಅಷ್ಟು ಮಾತ್ರವಲ್ಲ ಸ್ವಾತಂತ್ರ್ಯ ಪೂರ್ವದಲ್ಲೂ ಜಿಲ್ಲೆಯ ಲಿಂಗಾನುಪಾತ ಸಕರಾತ್ಮಕವಾಗಿತ್ತು. ಅಂದರೆ ಎಲ್ಲ ಕಾಲ ಮತ್ತು ಪ್ರದೇಶಗಳಲ್ಲೂ ಲಿಂಗಾನುಪಾತಕ್ಕೂ ಮುಖ್ಯವಾಹಿನಿಯ ಅಭಿವೃದ್ಧಿ ಮಾಪಕಗಳಿಗೂ ಸಂಬಂಧ ಬೆಸೆಯುವುದು ಸರಿಯಲ್ಲವೆಂದಾಯಿತು. ಹೀಗೆ ವರ್ತಮಾನದಲ್ಲಿ ಸತ್ಯವೆಂದು ನಂಬಿಕೊಂಡಿರುವ ಹಲವಾರು ವಿಚಾರಗಳ ಭೂತವನ್ನು ಕೆದಕುತ್ತಾ ಹೋದರೆ ದೊರಕುವ ಸಂಗತಿಗಳು ಅವುಗಳ ನಿಜಸ್ವರೂಪವನ್ನು ಬಯಲು ಮಾಡುತ್ತವೆ.

ಆಧುನೀಕರಣ ಪೂರ್ವದ ಸಾಮಾಜಿಕ ಸ್ಥಿತಿಗತಿಯನ್ನು ವರ್ತಮಾನದ ಸಂಗತಿಗಳಿಗೆ ಹೋಲಿಸಿ ಆಧುನಿಕ (ವರ್ತಮಾನದ) ಬಗ್ಗೆ ತೀರ್ಮಾನಕ್ಕೆ ಬರುವುದು ಒಂದು ಸಾಮಾನ್ಯ ವಿಧಾನ. ಈ ಕೆಲಸವನ್ನು ಕೇವಲ ಸಂಶೋಧಕರು ಮಾತ್ರ ಮಾಡುತ್ತಾರೆ ಎನ್ನಲಾಗುವುದಿಲ್ಲ; ಜನ ಸಾಮಾನ್ಯರು ಕೂಡ ಮಾಡುತ್ತಾರೆ. ಯಾವುದೇ ವಿಚಾರ (ಸಾಮಾಜಿಕ ಮೌಲ್ಯಗಳಿರಬಹುದು ಅಥವಾ ಸಂಸ್ಥೆಗಳಿರಬಹುದು ಅಥವಾ ಜೀವನಮಟ್ಟ ಇರಬಹುದು) ತೆಗೆದುಕೊಳ್ಳಿ ಹಿಂದೆ ಒಳ್ಳೆಯದಿತ್ತು ಎನ್ನುವ ಮಾತನ್ನು ಹೇಳುವ ಕೆಲವು ಮಂದಿಯಾದರೂ ಸಿಗುತ್ತಾರೆ. ಗ್ರಾಮಪಂಚಾಯತ್ ಬಗ್ಗೆ ಅಧ್ಯಯನ ಮಾಡುವ ಸಂದರ್ಭದಲ್ಲಿ ಊರಿನ ಹಿರಿಯರಲ್ಲಿ ಹಿಂದಿನ ಪಂಚಾಯತ್ ವ್ಯವಸ್ಥೆ (ಸ್ವಾತಂತ್ರ್ಯ ಪೂರ್ವ ಮತ್ತು ಸುಮಾರು ಎಂಬತ್ತರ ದಶಕಗಳವರೆಗಿನ) ಉತ್ತಮವಾಗಿತ್ತೋ ಅಥವಾ ವರ್ತಮಾನದಲ್ಲಿರುವ ಪಂಚಾಯತ್ ವ್ಯವಸ್ಥೆ ಉತ್ತಮವೇ? ಎಂದು ಕೇಳಲಾಯಿತು.[೧೫] ಹಳ್ಳಿಯ ಮೇಲ್‌ವರ್ಗಕ್ಕೆ ಸೇರಿದ ವ್ಯಕ್ತಿಗಳು ಮತ್ತು ಕೆಳವರ್ಗದ ಹಿರಿಯರು ವರ್ತಮಾನದ ಪಂಚಾಯಿತಿಗೆ ಹೋಲಿಸಿದರೆ ಹಿಂದಿನ ಪಂಚಾಯತ್ ವ್ಯವಸ್ಥೆ ಉತ್ತಮವಾಗಿತ್ತು ಎನ್ನುವ ಅಭಿಪ್ರಾಯ ನೀಡಿದರು. ಹಿಂದಿನ ಪಂಚಾಯತ್‌ನ್ನು ವರ್ತಮಾನದ ಪಂಚಾಯತ್ ಹೋಲಿಸಿ ಉತ್ತಮವಾಗಿತ್ತು ಎನ್ನುವ ತೀರ್ಮಾನಕ್ಕೆ ಬರಲು ಅವರು ನೀಡಿದ ಮುಖ್ಯ ಕಾರಣಗಳು ಇಂತಿವೆ. ಒಂದು, ಹಿಂದಿನ ಪಂಚಾಯತ್ ಚುನಾವಣೆಗಳ ಸಂದರ್ಭದಲ್ಲಿ ಪಂಚಾಯತ್ ಅಧಿಕಾರಕ್ಕಾಗಿ ಗ್ರಾಮಸ್ಥರ ಮಧ್ಯೆ ಜಗಳಗಳಿರಲಿಲ್ಲ. ಎರಡು, ಪಂಚಾಯತ್ ಅಧ್ಯಕ್ಷರಿಗೆ ಊರಲ್ಲಿ ನಡೆಯುವ ಬಹುತೇಕ ವ್ಯವಹಾರಗಳ ಮೇಲೆ ಹಿಡಿತವಿತ್ತು. ಮೂರು, ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಬಹುತೇಕ ತಂಟೆ ತಕರಾರುಗಳನ್ನು ಊರಿನ ಪ್ರಮುಖರು ತೀರ್ಮಾನಿಸುತ್ತಿದ್ದರು. ಹಳ್ಳಿಯೊಳಗಿನ ತಕರಾರುಗಳನ್ನು ತೀರ್ಮಾನಿಸಲು ಕೋರ್ಟ್, ಕಚೇರಿ, ಪೋಲಿಸ್

ಠಾಣೆಗಳಿಗೆ ಹೋಗುವ ಅಗತ್ಯವಿರಲಿಲ್ಲ. ಮೂರು, ಪಂಚಾಯತ್ ಅಧ್ಯಕ್ಷರ ನಡವಳಿಕೆ ಉತ್ತಮವಾಗಿತ್ತು. ನಾಲ್ಕು, ಹಿಂದೆ ಪಂಚಾಯತ್‌ಗೆ ಯಾವುದೇ ಧನಸಹಾಯವಿರಲಿಲ್ಲ. ಆದಾಗ್ಯೂ ಊರಿನ ಅಭಿವೃದ್ಧಿಗೆ ಅಗತ್ಯವಿರುವ ಜವಾಬ್ದಾರಿಗಳನ್ನು ಪಂಚಾಯತ್ ನಿರ್ವಹಿಸುತ್ತಿತ್ತು. ಹಿಂದಿನ ವ್ಯವಸ್ಥೆಗಳ ಉತ್ತಮ ಗುಣಗಳನ್ನು ಪಟ್ಟಿ ಮಾಡುವ ಪ್ರಕ್ರಿಯೆಯಲ್ಲಿ ಇಂದಿನ ಪಂಚಾಯತ್‌ನ ಲೋಪದೋಷಗಳು ಅಡಗಿವೆ. ಹಿಂದಿನ ಪಂಚಾಯತ್ ವ್ಯವಸ್ಥೆ ಬಗ್ಗೆ ಗ್ರಾಮಸ್ಥರು ಹೊಂದಿರುವ ಅಭಿಪ್ರಾಯಗಳ ನಿಜ ಸ್ವರೂಪ ಅರ್ಥವಾಗಬೇಕಾದರೆ ಚಾರಿತ್ರಿಕ ವಿಶ್ಲೇಷಣೆ ಮಾಡಬೇಕಾಗುತ್ತದೆ.

ಇದೇ ಬಗೆಯ ಅಭಿಪ್ರಾಯವನ್ನು ಇತರ ವಿಚಾರಗಳಲ್ಲೂ ಕಾಣಬಹುದು. ವಸಾಹತು ಪೂರ್ವದಲ್ಲಿ ನೆಲ, ಜಲ, ಅರಣ್ಯ ಇತ್ಯಾದಿಗಳ ನಿರ್ವಹಣೆ ಕುರಿತು ತಮ್ಮದೇ ವ್ಯವಸ್ಥೆಗಳು ಇದ್ದವು. ಸಾಂಪ್ರದಾಯಿಕ ಸಮಾಜದಲ್ಲಿನ ನಿಕಟ ಮತ್ತು ಪರಸ್ಪರ ಅರಿತಿರುವ ಸಂದರ್ಭದಲ್ಲಿ ಸಮುದಾಯದ ಸಂಪನ್ಮೂಲ ಬಳಕೆ ಮತ್ತು ನಿರ್ವಹಣೆ ಕುರಿತಂತೆ ಸ್ವಯಂ ಪ್ರೇರಿತ ನಿಬಂಧನೆಗಳಿದ್ದವು. ಸ್ಥಳೀಯ ಸಂಪನ್ಮೂಲಗಳನ್ನು ಆಧರಿಸಿ ಬದುಕುತ್ತಿದ್ದ ಸಮುದಾಯಗಳಿಗೆ ಆ ಸಂಪನ್ಮೂಲಗಳ ಬಳಕೆ ಮತ್ತು ಸಂರಕ್ಷಣೆ ಕುರಿತು ತಿಳುವಳಿಕೆಯಿತ್ತು, ಜವಾಬ್ದಾರಿಯಿತ್ತು.[೨೬] ಆದರೆ ಆಧುನಿಕತೆ ಮುಚ್ಚಿಕೊಂಡಿದ್ದ ಸಮುದಾಯ ಬದುಕನ್ನು ತೆರೆದು ಇತರ ಸಮುದಾಯಗಳೊಂದಿಗೆ ಸಂಪರ್ಕ ಮತ್ತು ವಿನಿಮಯವನ್ನು ಕಲಿಸಿತು. ಈ ಸಂಪರ್ಕ ಮತ್ತು ವಿನಿಮಯ ಇಂದು ಸ್ಥಳೀಯ ಸಂಪನ್ಮೂಲಗಳ ಬಳಕೆಯನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಯೊಂದಿಗೆ ಜೋಡಿಸಿದೆ. ಹಾಗಾಗಿ ಸಂಪನ್ಮೂಲಗಳ ಬಳಕೆ ಕುರಿತಂತೆ ನಿರ್ಧಾರಗಳು ಇಂದು ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ ರೂಪಿತವಾಗುವುದಿಲ್ಲ. ಬದಲಿಗೆ ಮಾರುಕಟ್ಟೆಗಳ ಅಗತ್ಯಗಳಿಗೆ ಅನುಗುಣವಾಗಿ ಅಮೂರ್ತ ರೂಪದಲ್ಲಿ ಆಗುತ್ತಿವೆ. ಇದು ಎರಡು ರೀತಿಯ ದುಷ್ಪರಿಣಾಮಗಳಿಗೆ ಕಾರಣವಾಗಿದೆ. ಒಂದು, ಸಂಪನ್ಮೂಲಗಳ ಎಗ್ಗಿಲ್ಲದ ನಾಶ ಮತ್ತು ಎರಡು, ಸ್ಥಳೀಯ ಸಮುದಾಯಗಳು ಕೂಡ ಅವುಗಳ ಸಂರಕ್ಷಣೆ ಬಗ್ಗೆ ದಿವ್ಯ ನಿರ್ಲಕ್ಷ್ಯ ತೋರುವುದು. ಈ ಸಮಸ್ಯೆಗಳಿಂದ ಹೊರಬರಲು ಒಂದೇ ದಾರಿ- ಸಂಪನ್ಮೂಲಗಳ ನಿರ್ವಹಣೆಯಲ್ಲಿ ಸ್ಥಳೀಯ ಸಮುದಾಯಗಳು ಭಾಗವಹಿಸುವುದು. ತಮ್ಮ ಪರಿಸರದಲ್ಲಿನ ನೆಲ, ಜಲ, ಅರಣ್ಯ ಇತ್ಯಾದಿಗಳ ನಿರ್ವಹಣೆ ಮತ್ತು ಸಂರಕ್ಷಣೆಯ ಜವಾಬ್ದಾರಿಗಳನ್ನು ಸ್ಥಳೀಯ ಸಮುದಾಯಗಳು ವಹಿಸಿಕೊಳ್ಳಬೇಕೆಂದು ಪರಿಸರವಾದಿಗಳು ಮತ್ತು ಸಮುದಾಯವಾದಿಗಳು ವಾದಿಸುತ್ತಾರೆ. ಇದೇನು ಹೊಸ ಪ್ರಯೋಗವಲ್ಲ. ಕೆರೆ ಮತ್ತು ಇತರ ಜಲ ಸಂಪನ್ಮೂಲಗಳ ನಿರ್ವಹಣೆ ಕುರಿತು ಧಾರಾಳ ಮಾಹಿತಿ ನಮ್ಮ ಚರಿತ್ರೆಯಲ್ಲಿ ಸಿಗುತ್ತದೆ. ಕೆರೆ ಕಟ್ಟಿಸುವುದರಲ್ಲಿ ಊರಿನ ಧನಿಕರ, ವ್ಯಾಪಾರಿಗಳ, ದೇವಸ್ಥಾನಗಳ ಮತ್ತು ರಾಜರ ಪಾತ್ರ ಮಹತ್ವದ್ದು. ಆದರೆ ಅವುಗಳ ನಿರ್ವಹಣೆಗೆ ಮತ್ತು ಸಂರಕ್ಷಣೆಯಲ್ಲಿ ರೈತಾಪಿ ಜನರ ಪಾತ್ರ ಅಲ್ಲಗಳೆಯುವಂತಿರಲಿಲ್ಲ. ನಮ್ಮ ಹಿರಿಯರು ಮಾಡಿದ ಪ್ರಯೋಗಗಳಿಂದ ಇಂದಿನ ನಮ್ಮ ಸಮಸ್ಯೆಗಳಿಗೆ ಕೆಲವು

ಪರಿಹಾರಗಳಾದರೂ ಸಿಗಬಹುದು. ಈ ನಿಟ್ಟಿನಲ್ಲಿ ಪ್ರಮಾಣಿಕ ಪ್ರಯತ್ನ ಅಗತ್ಯವೆನ್ನುವ ವಾದಗಳಿವೆ. ಈ ನಿಲುವಿನ ನಿಜ ಸ್ವರೂಪ ತಿಳಿಯಬೇಕಾದರೆ ಚಾರಿತ್ರಿಕ ವಿಶ್ಲೇಷಣೆ ಮಾಡಬೇಕಾಗಿದೆ. ಸ್ಥಳೀಯ ಸಂಪನ್ಮೂಲಗಳ ನಿರ್ವಹಣೆಗೆ ವಸಾಹತುಪೂರ್ವದಲ್ಲಿದ್ದ ವ್ಯವಸ್ಥೆ ಮೇಲಿನ ಮಾಹಿತಿ ಬೇಕು. ವಸಾಹತು ಪೂರ್ವದಲ್ಲಿನ ಸಾಮಾಜಿಕ ಏಣಿ ಶ್ರೇಣಿಗಳು, ಭೂಮಿಯ ಒಡೆತನ, ಸಂಪನ್ಮೂಲಗಳ ಬಳಕೆ, ಸಂಪನ್ಮೂಲಗಳ ನಿರ್ವಹಣೆಗೆ ಇದ್ದ ಸಾಂಸ್ಥಿಕ ವ್ಯವಸ್ಥೆ, ಆ ವ್ಯವಸ್ಥೆಯಲ್ಲಿನ ಸದಸ್ಯತ್ವ, ನಿರ್ಧಾರ ತಳೆಯುವ ವಿಧಾನಗಳು, ನಿರ್ಧಾರ ತಳೆಯುವಲ್ಲಿ ಸಮಾಜ ವಿವಿಧ ಜಾತಿ ಅಥವಾ ಗುಂಪುಗಳ ಪಾತ್ರ ಇತ್ಯಾದಿಗಳು ವಸಾಹತುಪೂರ್ವದ ನಿರ್ವಹಣಾ ವ್ಯವಸ್ಥೆ ಮೇಲೆ ಬೆಳಕು ಚೆಲ್ಲುತ್ತವೆ.

ವಿಷಯ ವಿಶ್ಲೇಷಣೆ

ವಿಷಯ ವಿಶ್ಲೇಷಣೆ ಸಾಂಪ್ರದಾಯಿಕ ಸಮಾಜ ಸಂಶೋಧನಾ ವಿಧಾನದ ಕೊಡುಗೆ. ಇಲ್ಲೂ ಒಟ್ಟು ಸಂಖ್ಯೆಯಿಂದ ಅಧ್ಯಯನಕ್ಕೆ ಒಳಪಡಿಸಬೇಕಾಗಿರುವ ಮಾದರಿ ಸಂಖ್ಯೆಯನ್ನು(ಸೇಂಪ್ಲಿಂಗ್ ವಿಧಾನ ಬಳಸಿ)ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಆಯ್ಕೆ ಮಾಡಿಕೊಂಡು ಮಾದರಿಗಳಿಂದ(ಸೇಂಪ್‌ಲ್‌ಗಳಿಂದ)ಅಧ್ಯಯನದ ಉದ್ದೇಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು (ಮಾಹಿತಿ ಸಂಗ್ರಹದ ವಿವಿಧ ವಿಧಾನಗಳನ್ನು ಬಳಸಿಕೊಂಡು)ಸಂಗ್ರಹಿಸಲಾಗುತ್ತದೆ. ಸಂಗ್ರಹಿಸಿದ ಮಾಹಿತಿಯನ್ನು ವಿಷಯ ವಿಶ್ಲೇಷಣಾ ವಿಧಾನ ಮೂಲಕ ವಿಶ್ಲೇಷಿಸುವುದು ಈ ವಿಧಾನದ ಮುಖ್ಯ ಲಕ್ಷಣಗಳು. ಸಾಂಪ್ರದಾಯಿಕ ವಿಧಾನದಲ್ಲಿ ವ್ಯಕ್ತಿ/ಕುಟುಂಬ/ವಿಷಯಗಳ ಮಾದರಿಯನ್ನು (ಸೇಂಪಲ್) ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ವಿಷಯ ವಿಶ್ಲೇಷಣೆಯಲ್ಲಿ ವ್ಯಕ್ತಿ/ಕುಟುಂಬಗಳ ಬದಲು ಪಠ್ಯಗಳನ್ನು/ಅರ್ಥಗಳನ್ನು/ರೂಪಕಗಳನ್ನು (ಟೆಕ್ಸ್ಟ್/ಮೀನಿಂಗ್ಸ್/ಇಮೇಜಸ್) ಅಧ್ಯಯನಕ್ಕೆ ಒಳಪಡಿಸಲಾಗುವುದು. ಉದಾಹರಣೆಗೆ ಕಾರಂತರ ಕಾದಂಬರಿಗಳಲ್ಲಿ ಪರಿಸರ ಎನ್ನುವ ಸಂಶೋಧನಾ ಸಮಸ್ಯೆ. ಈ ಸಮಸ್ಯೆಯ ಅಧ್ಯಯನಕ್ಕೆ ಕಾರಂತರ ಎಲ್ಲ ಅಥವಾ ಕೆಲವು ಕಾದಂಬರಿಗಳನ್ನು ಅಧ್ಯಯನಕ್ಕೆ ಒಳಪಡಿಸಬಹುದು. ಸರ್ವೇ ವಿಧಾನದಲ್ಲಿ ವ್ಯಕ್ತಿ/ಕುಟುಂಬ/ವಿಷಯ ಇತ್ಯಾದಿಗಳ ಮಾದರಿ ಸಂಖ್ಯೆಯನ್ನು ನಿರ್ಧರಿಸಬೇಕಾಗುತ್ತದೆ. ಇದೇ ರೀತಿಯಲ್ಲಿ ಅಧ್ಯಯನಕ್ಕೆ ಒಳಗಾಗುವ ಪಠ್ಯಗಳ ಮಾದರಿ ಸಂಖ್ಯೆಯನ್ನು ನಿರ್ಧರಿಸ ಬೇಕಾಗುತ್ತದೆ. ಅಧ್ಯಯನಕ್ಕೆ ಒಳಗಾಗುವ ವ್ಯಕ್ತಿ/ಕುಟುಂಬಗಳ ಒಟ್ಟು ಸಂಖ್ಯೆಯ ಶೇಕಡಾ ಐದರಿಂದ ಹತ್ತರಷ್ಟು ಸಂಖ್ಯೆಯ ವ್ಯಕ್ತಿ/ಕುಟುಂಬಗಳನ್ನು ಅಧ್ಯಯನಕ್ಕೆ ಮಾದರಿಯಾಗಿ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.[೧೭] ಮಾದರಿ ಆಯ್ಕೆ ಆದ ನಂತರ ಕಾದಂಬರಿಗಳಲ್ಲಿ ಪರಿಸರದ ಉಲ್ಲೇಖ ಎಷ್ಟು ಬಾರಿ ಆಗಿದೆ. ಅಷ್ಟು ಮಾತ್ರವಲ್ಲ ಪರಿಸರದ ಮಹತ್ವ, ಪರಿಸರದ ವ್ಯಾಖ್ಯಾನ, ಆಚರಣೆ, ಪರಿಸರ ಮತ್ತು ಇತರ ಪಾತ್ರಗಳ ನಡುವಿನ ಸಂಬಂಧ, ಪರಿಸರದ ಬಗ್ಗೆ ಕಾದಂಬರಿಕಾರರ ನಿಲುವು ಇತ್ಯಾದಿಗಳನ್ನು ವಿಷಯ ವಿಶ್ಲೇಷಣೆಯ ಮೂಲಕ ತಿಳಿದುಕೊಳ್ಳಬಹುದು. ಮೇಲಿನ ಉದಾಹರಣೆಯಲ್ಲಿ ಸಾಹಿತ್ಯ ಕೃತಿಗಳ ವಿಶ್ಲೇಷಣೆಗೆ ವಿಷಯ ವಿಶ್ಲೇಷಣಾ ವಿಧಾನ

ಅನ್ವಯಿಸುವುದನ್ನು ನೋಡಿದ್ದೇವೆ. ಪಠ್ಯಗಳು ಹೊರಗೆಡಹುವ ಅರ್ಥವನ್ನು ತಿಳಿಯಲು ವಿಷಯ ವಿಶ್ಲೇಷಣಾ ವಿಧಾನವನ್ನು ಬಳಸಲಾಗಿದೆ. ಹಾಗೆಂದು ಈ ವಿಧಾನ ಕೇವಲ ಪಠ್ಯಗಳ ವಿಶ್ಲೇಷಣೆಗೆ ಸೀಮಿತ ಎಂದು ತಿಳಿಯಲಾಗುವುದಿಲ್ಲ. ಪಠ್ಯದ ವ್ಯಾಖ್ಯಾನ ಈ ವಿಧಾನದ ಬಹು ಉಪಯೋಗವನ್ನು ಪ್ರಭಾವಿಸುತ್ತದೆ. ಉದಾಹರಣೆಗೆ ವಾಣಿಜ್ಯ ಲೋಕದ ಜಾಹೀರಾತನ್ನು ಅಥವಾ ಸಾಂಸ್ಕೃತಿಕ ಲೋಕದ ಆಚರಣೆಗಳನ್ನು ಪಠ್ಯದ ರೂಪದಲ್ಲಿ ನೋಡಬಹುದು.[೧೮] ಜಾಹೀರಾತು ಅಥವಾ ಭೂತಾರಾಧನೆಯಂತಹ ಸಾಂಸ್ಕೃತಿಕ ಚಟುವಟಿಕೆಗಳ ವಿಶ್ಲೇಷಣೆಗೆ ವಿಷಯ ವಿಶ್ಲೇಷಣಾ ವಿಧಾನವನ್ನು ಬಳಸುವುದರ ಬಗ್ಗೆ ತಿಳಿದುಕೊಳ್ಳುವ. ಜಾಹೀರಾತು ಬಿಂಬಿಸುವ ಮಹಿಳೆ ಎನ್ನುವ ಸಂಶೋಧನಾ ವಿಷಯವನ್ನು ಉದಾಹರಣೆಯನ್ನಾಗಿ ತೆಗೆದುಕೊಳ್ಳುವ. ಪರಿಶೀಲಿಸಬೇಕಾದ ಜಾಹೀರಾತುಗಳ ಸಂಖ್ಯೆಯನ್ನು ಮೊದಲಿಗೆ ನಿರ್ಧರಿಸಿಕೊಳ್ಳಬೇಕು. ನಂತರ ಯಾವ ಜಾಹೀರಾತುಗಳನ್ನು ಸರಕು ಅಥವಾ ಸೇವೆ ಮಾರಾಟಗಳಿಗೆ ಸಂಬಂಧಿಸಿದ ಜಾಹೀರಾತುಗಳೇ ಅಥವಾ ಸರಕಾರಿ ಕಾರ್ಯಗಳನ್ನು ಪ್ರಚಾರ ಪಡಿಸುವ ಜಾಹೀರಾತುಗಳೇ? ಎನ್ನುವ ನಿರ್ಧಾರವಾಗಬೇಕು. ಜತೆಗೆ ಯಾವ ಕಾಲದಿಂದ ಯಾವ ಕಾಲದವರೆಗಿನ ಜಾಹೀರಾತುಗಳು? ಯಾವ ಮಾಧ್ಯಮಗಳಲ್ಲಿ ಪ್ರಸಾರವಾಗುವ ಜಾಹೀರಾತುಗಳು? ಇತ್ಯಾದಿ ಪ್ರಶ್ನೆಗಳನ್ನು ಉತ್ತರಿಸಿಕೊಳ್ಳಬೇಕಾಗುತ್ತದೆ. ಸುಮಾರು ಹತ್ತು ವರ್ಷಗಳಲ್ಲಿ ಟಿವಿ ಮಾಧ್ಯಮದಲ್ಲಿ ಸರಕಿನ ಮಾರಾಟಕ್ಕಾಗಿ ಬಳಸುವ ಜಾಹೀರಾತುಗಳಲ್ಲಿ ಮಹಿಳೆಯನ್ನು ಯಾವ ಪಾತ್ರದಲ್ಲಿ ತೋರಿಸುತ್ತಾರೆ? ಉಡುಗೆ ತೊಡುಗೆ ಮತ್ತು ಇತರ ಹಾವಭಾವ ಇತ್ಯಾದಿ ವಿಚಾರಗಳಲ್ಲಿ ಜಾಹೀರಾತು ಮಹಿಳೆಯನ್ನು ಯಾವ ರೂಪದಲ್ಲಿ ಬಿಂಬಿಸುತ್ತದೆ? ಜಾಹೀರಾತುಗಳಲ್ಲಿ ಮಹಿಳೆಯ ಜತೆ ಬರುವ ಇತರ ಪಾತ್ರಗಳು ಮತ್ತು ಮಹಿಳೆ ಮತ್ತು ಆ ಪಾತ್ರಗಳ ನಡುವಿನ ಸಂಬಂಧವೇನು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕು. ಮಹಿಳೆಯನ್ನು ತಾಯಿಯಾಗಿ, ತಂಗಿಯಾಗಿ, ಪತ್ನಿಯಾಗಿ, ದುಡಿಯುವ ಮಹಿಳೆಯಾಗಿ ಹೀಗೆ ಹಲವಾರು ರೂಪಗಳಲ್ಲಿ ಬಿಂಬಿಸಬಹುದು. ಗೌರವಾನ್ವಿತ ಮಹಿಳೆಯಾಗಿ ತೋರಿಸಬಹುದು ಅಥವಾ ಮಹಿಳೆಯನ್ನು ಕಾಮದ ಚಿಹ್ನೆಯಾಗಿ ಬಿಂಬಿಸಬಹುದು. ಜಾಹೀರಾತಿನಲ್ಲಿ ಬರುವ ಇತರ ಪಾತ್ರಗಳೊಂದಿಗೆ ಮಹಿಳೆಯ ಸಂಬಂದವನ್ನು ವಿವಿಧ ರೀತಿಯಲ್ಲಿ ತೋರಿಸಬಹುದು. ಸಾಂಪ್ರದಾಯಿಕ ಮಹಿಳೆಯಾಗಿ ಅಂದರೆ ಹಿರಿಯರ ನಿರ್ಧಾರಗಳನ್ನು ಪ್ರಶ್ನಿಸದೆ ಒಪ್ಪಿಕೊಳ್ಳುವ ಮಹಿಳೆಯ ರೂಪದಲ್ಲಿ ಅಥವಾ ಮಹಿಳೆಗೂ ಒಂದು ಸ್ವತಂತ್ರ ವ್ಯಕ್ತಿತ್ವ ಇದೆ ಎನ್ನುವ ರೂಪದಲ್ಲಿ ತೋರಿಸಬಹುದು. ಈ ಎಲ್ಲ ಅಂಶಗಳ ಮೇಲಿನ ವಿಶ್ಲೇಷಣೆ ಸಮಾಜದಲ್ಲಿನ ಮಹಿಳೆಯ ಸ್ಥಾನಮಾನವನ್ನು ಅರ್ಥಮಾಡಿಕೊಳ್ಳಲು ಸಹಕರಿಸುತ್ತವೆ.

ವಿಷಯ ವಿಶ್ಲೇಷಣಾ ವಿಧಾನವನ್ನು ಬಳಸಿಕೊಂಡು ಸಾಂಸ್ಕೃತಿಕ ಲೋಕದ ಪಠ್ಯಗಳನ್ನು ಅಧ್ಯಯನ ಮಾಡುವ ಕ್ರಮವನ್ನು ಅರ್ಥಮಾಡಿಕೊಳ್ಳಲು ದಕ್ಷಿಣ ಕನ್ನಡ ಜಿಲ್ಲೆಯ ಭೂತರಾಧನೆಯ ಉದಾಹರಣೆಯೊಂದಿಗೆ ಪ್ರಯತ್ನಿಸುವ. ಜಿಲ್ಲೆಯಲ್ಲಿ ಹಲವಾರು ವಿಧದ

ಭೂತಾರಾಧನೆಗಳಿವೆ. ಅವುಗಳಲ್ಲಿ ಯಾವುದಾದರು ಒಂದು ಭೂತರಾಧನೆಯನ್ನು ಮಾದರಿಯಾಗಿ ಆಯ್ಕೆ ಮಾಡಿಕೊಳ್ಳಬಹುದು. ಆಯ್ಕೆ ಮಾಡಿದ ಭೂತರಾಧನೆಯ ಆಚರಣೆಯನ್ನು ಆರಂಭದಿಂದ ಅಂತ್ಯದವರೆಗೆ ಅವಲೋಕಿಸಿ ಆಚರಣೆಯ ಸಂದರ್ಭದಲ್ಲಿ ನೆಡಯುವ ಎಲ್ಲ ಸಂಗತಿಗಳನ್ನು ದಾಖಲಿಸಿಕೊಳ್ಳಬೇಕು. ಆಚರಣಾಪೂರ್ವ ತಯಾರಿ, ಭೂತರಾಧನೆ ನಡೆಯುವ ಸ್ಥಳ, ಆಚರಣೆಯನ್ನು ನಡೆಸುವವರು, ಆಚರಣೆಯಲ್ಲಿ ಪಾಲುಗೊಳ್ಳುವ ಗ್ರಾಮಸ್ಥರು ಮತ್ತು ಅವರ ಪಾತ್ರ, ಭೂತದ ಪಾತ್ರಿಗಳು, ಪಾತ್ರಿಯ ಜತೆಗಿರುವ ಸದಸ್ಯರು ಮತ್ತು ಆಚರಣೆಯಲ್ಲಿ ಅವರ ಪಾತ್ರ, ಆಚರಣೆ ಸಂದರ್ಭದಲ್ಲಿ ಭೂತದ ಪಾತ್ರಿ ಹೇಳುವ ನುಡಿಗಟ್ಟುಗಳು, ಭೂತ ಮಾಡುವ ನ್ಯಾಯ ತೀರ್ಮಾನಗಳು, ಸೇರಿದ ಗ್ರಾಮಸ್ಥರನ್ನು ಭೂತ ನಡೆಸಿಕೊಳ್ಳುವ ಕ್ರಮ ಇತ್ಯಾದಿಗಳನ್ನು ಪಠ್ಯದೊಳಗೆ ಬರುವ ಅಧ್ಯಾಯಗಳಂತೆ ಪರಿಗಣಿಸ ಬಹುದು. ಇವುಗಳಿಗೆ ಸಂಬಂದಿಸಿದ ಮಾಹಿತಿಯನ್ನು ಅವಲೋಕನ ವಿಧಾನದಿಂದ ಸಂಗ್ರಹಿಸಬಹುದು. ವಿಷಯ ವಿಶ್ಲೇಷಣಾ ವಿಧಾನ ಮೂಲಕ ಈ ಎಲ್ಲ ಅಧ್ಯಾಯಗಳನ್ನು ವಿಶ್ಲೇಷಿಸಬಹುದು. ಉದಾಹರಣೆಗೆ ಆಚರಣಾಪೂರ್ವ ತಯಾರಿಯನ್ನು ಪರಿಶೀಲಿಸುವ. ಇಡೀ ಊರಿಗೆ ಸಂಬಂಧಿಸಿದ ಭೂತದ ಆರಾಧನೆ ಊರಿನ ಗೌಡರ ಅಥವಾ ಪಟೇಲರ ಅಥವಾ ಗುತ್ತಿನ ಮನೆಯಲ್ಲಿ ನಡೆಯುತ್ತದೆ. ಊರಿನ ಸಮಸ್ತರು ಒಂದಲ್ಲ ಒಂದು ರೂಪದಲ್ಲಿ ಆಚರಣೆಯಲ್ಲಿ ಪಾಲುಗೊಳ್ಳಬೇಕಾಗುತ್ತದೆ.[೧೯] ಕೆಲವರು ಹಣ್ಣು ಹಂಪಲು ಪೂರೈಸಿದರೆ, ಇನ್ನು ಕೆಲವರು ಕೋಳಿ, ಕುರಿ, ಮೇಕೆ ಇತ್ಯಾದಿಗಳನ್ನು ಪೂರೈಸಬೇಕು. ಮಡಿವಾಳರು ಮಡಿ ಬಟ್ಟೆ ಒದಗಿಸಿದರೆ ಗಾಣಿಗರು ಎಣ್ಣೆ ಪೂರೈಸಬೇಕು. ಆಚರಣೆಯಲ್ಲಿ ಪಾಲುಗೊಳ್ಳುವುದು ಕಡ್ಡಾಯ; ಊರವರಿಗೆ ಈ ವಿಚಾರದಲ್ಲಿ ಆಯ್ಕೆ ಇಲ್ಲ. ಊರಿನ ಸಾಮಾಜಿಕ ಏಣಿಶ್ರೇಣಿ ಪ್ರಕಾರ ಭೂತ ಗ್ರಾಮಸ್ಥರನ್ನು ಸಂಬೋಧಿಸಬಹುದು. ಮೇಲ್ ಜಾತಿ ಜನರನ್ನು ಬಹುವಚನದಲ್ಲಿ ಸಂಬೋಧಿಸಿದರೆ ಕೆಳಜಾತಿ ಜನರನ್ನು ಏಕವಚನದಲ್ಲಿ ಭೂತ ಸಂಬೋಧಿಸಬಹುದು. ಪ್ರಸಾದ ಕೊಡುವಾಗಲೂ ದಿನ ನಿತ್ಯದ ಬದುಕಿನಲ್ಲಿನ ಏಣಿಶ್ರೇಣಿಗಳನ್ನು ಅನುಸರಿಸಬಹುದು-ಮೇಲ್‌ಜಾತಿ ಜನರಿಗೆ ಮೊದಲು ಪ್ರಸಾದ ನೀಡಿ ನಂತರ ಕೆಳಜಾತಿ ಜನರಿಗೆ ನೀಡಬಹುದು. ಹೀಗೆ ವಿಷಯ ವಿಶ್ಲೇಷಣೆಯ ಮೂಲಕ ಭೂತರಾಧನೆಯ ಹಲವು ಆಯಾಮಗಳನ್ನು ಅರ್ಥಮಾಡಿಕೊಳ್ಳಬಹುದು.[೨೦]

ಅಡಿ/ಕೊನೆ ಟಿಪ್ಪಣಿ

ಟಿಪ್ಪಣಿ ಅಂದರೇನು? ಟಿಪ್ಪಣಿ ಯಾಕೆ ಕೊಡಬೇಕು? ಟಿಪ್ಪಣಿಯನ್ನು ಎಲ್ಲಿ ಕೊಡಬೇಕು? ಇತ್ಯಾದಿ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಲು ಅಧ್ಯಾಯದ ಈ ಭಾಗದಲ್ಲಿ ಪ್ರಯತ್ನಿಸಲಾಗಿದೆ. ಟಿಪ್ಪಣಿಗೆ ವಿವರಣೆ ಅಥವಾ ಲಘು ವ್ಯಾಖ್ಯಾನ ಎನ್ನುವ ಅರ್ಥ ಇದೆ. ಪ್ರಬಂಧದ ಮುಖ್ಯ ವಾದ ಮಂಡನೆಯಾಗುವ ಪುಟದ ಬುಡದಲ್ಲಿ ಟಿಪ್ಪಣಿ ನೀಡಿದರೆ ಅದು ಅಡಿ ಟಿಪ್ಪಣಿಯಾಗುತ್ತದೆ. ಮುಖ್ಯವಾದ ಮಂಡನೆಯಾಗುವ ಅಧ್ಯಾಯದ ಕೊನೆಗೆ ಟಿಪ್ಪಣಿ ನೀಡಿದರೆ ಅದು ಕೊನೆ ಟಿಪ್ಪಣಿಯಾಗುತ್ತದೆ. ವಿವರಣೆ ಅಥವಾ ವ್ಯಾಖ್ಯಾನ ಟಿಪ್ಪಣಿಯಾಗುವು

ದಾದರೆ ಅದು (ಪುಟದ) ಅಡಿಯಲ್ಲಿ ಅಥವಾ ಕೊನೆಯಲ್ಲಿ ಯಾಕೆ ಬರಬೇಕು? ಮುಖ್ಯ ಬರಹದಲ್ಲೇ ಯಾಕೆ ಬರಬಾರದು? ಯಾಕೆಂದರೆ ಟಿಪ್ಪಣೆಯಲ್ಲಿ ಬರುವ ವಿವರಣೆ ಅಥವಾ ವ್ಯಾಖ್ಯಾನವನ್ನು ಮುಖ್ಯ ಬರಹದಲ್ಲಿ ಬಳಸಿದಿದ್ದರೂ ನಮ್ಮ ವಾದ ಮಂಡನೆಗೆ ವಿಶೇಷ ಚ್ಯುತಿ ಬರುವುದಿಲ್ಲ. ಹಾಗಿದ್ದರೆ ಅದನ್ನು ಪುಟದ ಬುಡದಲ್ಲಿ ಅಥವಾ ಅಧ್ಯಾಯದ ಕೊನೆಯಲ್ಲಿ ಕೊಡುವುದಾದರೂ ಯಾಕೆ? ಯಾಕೆಂದರೆ ಟಿಪ್ಪಣೆ ಒಂದು ಬಗೆಯ ಶುಚಿತ್ವ ಇದ್ದಂತೆ; ಯಾವುದೇ ಸಂಗತಿಯನ್ನು ಶುಚಿತ್ವವಾಗಿ ಇಟ್ಟುಕೊಳ್ಳುವುದರಿಂದ ಆ ಸಂಗತಿಯ ಮೌಲ್ಯ ವರ್ಧಿಸುವುದಿಲ್ಲ. ಹಾಗೆಂದು ಶುಚಿತ್ವ ಇಲ್ಲವಾದರೆ ಖಂಡಿತವಾಗಿಯೂ ಮೌಲ್ಯ ಕುಂಠಿತವಾಗುತ್ತದೆ. ಉದಾಹರಣೆಗೆ ದಿನ ನಿತ್ಯ ಹಲ್ಲುಜ್ಜುವುದರಿಂದ ನಮ್ಮ ಆರೋಗ್ಯ ವೃದ್ಧಿಸುವುದಿಲ್ಲ. ಹಾಗೆಂದು ಹಲ್ಲುಜ್ಜದಿದ್ದರೆ ಖಂಡಿತವಾಗಿಯೂ ನಮ್ಮ ಆರೋಗ್ಯ ಕೆಡುತ್ತದೆ. ಇದೇ ರೀತಿಯಲ್ಲಿ ಟಿಪ್ಪಣೆ ಕೊಡು ವುದರಿಂದ ಪ್ರಬಂಧದ ವಾದ ಮಂಡನೆಗೆ ವಿಶೇಷ ಬಲ ಬರುವುದಿಲ್ಲ. ಹಾಗೆಂದು ಟಿಪ್ಪಣೆ ಕೊಡದಿದ್ದರೆ ಪ್ರಬಂಧ ವಾದ ಮಂಡನೆಯ ಬಲ ಖಂಡಿತವಾಗಿಯೂ ಕುಂಠಿತವಾಗುತ್ತದೆ. ಆದುದರಿಂದ ವಿಶೇಷ ಸಂದರ್ಭದಲ್ಲಿ ಮುಖ್ಯ ವಾದವನ್ನು ಬಲಪಡಿಸುವ ನಿಟ್ಟಿನಲ್ಲಿ ಹೆಚ್ಚಿನ ಮಾಹಿತಿಯನ್ನು ಟಿಪ್ಪಣೆ ರೂಪದಲ್ಲಿ ನೀಡಲಾಗುವುದು.

ಸಂಶೋಧನೆಯನ್ನು ಮತ್ತೊಬ್ಬರ ಹೆಗಲ ಮೇಲೆ ನಿಂತು ನೋಡುವ ಪ್ರಕ್ರಿಯೆ ಎಂದು ವ್ಯಾಖ್ಯಾನಿಸುವ ಕ್ರಮ ಇದೆ. ಈ ವ್ಯಾಖ್ಯಾನ ಚಾಲ್ತಿಗೆ ಬರಲು ಮುಖ್ಯ ಕಾರಣ ಅಧ್ಯಯನಕ್ಕೆ ಒಳಗಾಗುವ ಪ್ರತಿಯೊಂದು ವಿಷಯ ಅಥವಾ ಸಮಸ್ಯೆಯ ಮೇಲೆ ಈಗಾಗಲೇ ಸಾಕಷ್ಟು ಅಧ್ಯಯನಗಲಾಗಿರುತ್ತವೆ ಎನ್ನುವ ಗ್ರಹಿಕೆ. ಸಂಶೋಧಕರು ತಾವು ಅಧ್ಯಯನ ಮಾಡಲು ಹೊರಟಿರುವ ವಿಷಯ ಅಥವಾ ಸಮಸ್ಯೆ ಮೇಲೆ ಈಗಾಗಲೇ ಆಗಿರುವ ಅಧ್ಯಯನಗಳು ತಳೆದ ತೀರ್ಮಾನಗಳೊಂದಿಗೆ ಯಾವ ಸಂಬಂಧವನ್ನು ಇಟ್ಟುಕೊಂಡಿದ್ದಾರೆ ಎನ್ನುವುದು ದಾಖಲಾಗಬೇಕಾಗಿದೆ. ಕೆಲವು ಬಾರಿ ಸಂಶೋಧನ ವಿಷಯ ಅಥವಾ ಸಮಸ್ಯೆ ಮೇಲೆ ಈಗಾಗಲೇ ಆಗಿರುವ ಅಧ್ಯಯನಗಳ ತೀರ್ಮಾನಗಳನ್ನು ಭಾಗಶಃ ಒಪ್ಪಿಕೊಂಡು ಉಳಿದವುಗಳನ್ನು ಒಪ್ಪದಿರುವ ಸಾಧ್ಯತೆ ಇರಬಹುದು. ಒಪ್ಪದಿರುವ ಅಂಶ ವಿಶೇಷ ಮಹತ್ವದಲ್ಲದಿದ್ದರೆ ಆ ಅಂಶವನ್ನು ಟಿಪ್ಪಣೆ ರೂಪದಲ್ಲಿ ನೀಡಬಹುದು. ಇನ್ನು ಕೆಲವು ಸಂದರ್ಭಗಳಲ್ಲಿ ಈಗಾಗಲೇ ತಳೆದ ತೀರ್ಮಾನಗಳನ್ನು ಇನ್ನೂ ವಿಸ್ತರಿಸುವ ಸಾಧ್ಯತೆ ಇರಬಹುದು. ವಿಸ್ತರಿಸಲು ತಾವು ಹಲವಾರು ವಾದಗಳನ್ನು ಮತ್ತು ವಾದಗಳನ್ನು ಸಮರ್ಥಿಸಲು ಪುರಾವೆಗಳನ್ನು ಮಂಡಿಸಬೇಕಾಗುತ್ತದೆ. ಆ ವಾದ ಮತ್ತು ಪುರಾವೆಗಳಲ್ಲಿ ಕೆಲವು ತುಂಬಾ ಮಹತ್ವದ್ದು ಮತ್ತು ಕೆಲವು ನೀಡಿದರೂ ನಡೆಯುತ್ತದೆ ಅಥವಾ ನೀಡದಿದ್ದರೂ ನಡೆಯುತ್ತದೆ ಅನ್ನುವಂತಿರುತ್ತವೆ. ಮಹತ್ವದ ವಾದ ಮತ್ತು ಪುರಾವೆಗಳನ್ನು ಪ್ರಬಂಧದ ಮುಖ್ಯ ಭಾಗದಲ್ಲೇ ನೀಡಿ ತಮ್ಮ ವಾದ ಮಂಡನೆಗೆ ಅನಿವಾರ್ಯವಲ್ಲದ ವಾದಗಳನ್ನು ಮತ್ತು ಪುರಾವೆಗಳನ್ನು ಟಿಪ್ಪಣೆ ರೂಪದಲ್ಲಿ ನೀಡಬಹುದು. ಉದಾಹರಣೆಗೆ ಜನಸಾಮಾನ್ಯರ ಪ್ರಜ್ಞೆಯನ್ನು ರೂಪಿಸುವಲ್ಲಿ ಸ್ಥಳೀಯ ಕಲಾ ಪ್ರಕಾರಗಳು ಮುಖ್ಯ

ಭೂಮಿಕೆ ನಿಭಾಯಿಸುತ್ತವೆ ಎನ್ನುವ ವಾದವನ್ನು (ಅಡಿ/ಕೊನೆ) ಟಿಪ್ಪಣಿಯೊಂದಿಗೆ ಈ ಕೆಳಗಿನಂತೆ ಮಂಡಿಸಬಹುದು.

ಯಕ್ಷಗಾನ ಮತ್ತು ತಾಳಮದ್ದಲೆಗಳು ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟುವ ಮತ್ತು ನಿರ್ವಚನೆ ಮಾಡುವ ಕೆಲಸವನ್ನು ತುಂಬಾ ಪರಿಣಾಮಕಾರಿಯಾಗಿ ಮಾಡಿವೆ. ಇಲ್ಲಿ ಜನ ಸಾಮಾನ್ಯರ ಪ್ರಜ್ಞೆಯ ಭಾಗವಾಗಿರುವ ಸಾಂಸ್ಕೃತಿಕ ಮತ್ತು ಸಾಮಾಜಿಕ ಚರಿತ್ರೆಯ ಕುರಿತು ನಾನು ಹೇಳುತ್ತಿದ್ದೇನೆ. ಈ ಯಕ್ಷಗಾನ ಮಂಡಳಿಗಳು ವರ್ಷದ ಏಳೆಂಟು ತಿಂಗಳು ಜಿಲ್ಲೆಯ ಮೂಲೆ ಮೂಲೆಯಲ್ಲಿ ಯಕ್ಷಗಾನ ಪ್ರಸಂಗಗಳನ್ನು ಆಡಿ ತೋರಿಸುತ್ತವೆ. ಹಿಂದೇ ದೇವಿ ಮಹಾತ್ಮೆ, ಮೈಸಾಸುರ ಮರ್ಧಿನಿ ಇತ್ಯಾದಿ ವೈದಿಕ ಮೌಲ್ಯಗಳನ್ನು ಸಾರುವ ಯಕ್ಷಗಾನ ಪ್ರಸಂಗಗಳು ಚಾಲ್ತಿಯಲ್ಲಿದ್ದವು. ನಂತರದ ದಿನಗಳಲ್ಲಿ ಸಮಾಜದ ತಳಸ್ತರದ ಜನರ ಸಾಂಸ್ಕೃತಿಕ ವೀರರ ಯಕ್ಷಗಾನ ಪ್ರಸಂಗಗಳು ಮುಂಚೂಣಿಗೆ ಬಂದವು-ಕೋಟಿ ಚೆನ್ನಯ, ಅಬ್ಬಗ ದಾರಗ, ಸಿರಿ ಗಿಂಡೆ, ಬಪ್ಪನಾಡು ಕ್ಷೇತ್ರ ಮಹಾತ್ಮೆ ಇತ್ಯಾದಿ ಪ್ರಸಂಗ ಗಳು ಮುಂಚೂಣಿಗೆ ಬಂದವು. ಈ ಪ್ರಸಂಗಗಳು ದ.ಕ. ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರುವ ಬಿಲ್ಲವರ, ಬಂಟರ, ಬೆಸ್ತರ ಸಾಂಸ್ಕೃತಿಕ/ಸಾಮಾಜಿಕ ಚರಿತ್ರೆಯನ್ನು ಕಟ್ಟಿಕೊಟ್ಟಿವೆ.

೧. ಜಾನಪದ ಕಥನಗಳು ಯಕ್ಷಗಾನ ರೂಪದಲ್ಲಿ ಬಂದವೆಂದು ಖುಷಿ ಪಡುವ ಅಗತ್ಯವಿಲ್ಲವೆಂದು ಚಂದ್ರಶೇಖರ ದಾಮ್ಲೆಯವರು ಮಾತುಗಳು ಎಚ್ಚರಿಸುತ್ತವೆ. ಅವರ ಪ್ರಕಾರ, 'ಈ ಕಥೆಗಳ ಪ್ರದರ್ಶನದಲ್ಲೂ ಪುರಾಣ ಕಾಲದ ಊಳಿಗಮಾನ್ಯ ಸಮಾಜದ ಮೌಲ್ಯಗಳನ್ನೇ ಪ್ರತಿನಿಧಿಸಲಾಗುತ್ತಿದೆ. ಅದೃಷ್ಟವಾದ, ಜಾತಿಭೇದ, ಕರ್ಮ ಸಿದ್ಧಾಂತ ಹುಟ್ಟಿನಿಂದ ಅಸಮಾನತೆ ಮುಂತಾದ ಮೌಲ್ಯಗಳ ಪುನರ್ ಮಂಡನೆಯಾಗುತ್ತಿದೆ.' ಚಂದ್ರಶೇಖರ ದಾಮ್ಲೆ, 'ಯಕ್ಷಗಾನದಲ್ಲಿ ಪರಿವರ್ತನೆ - ವೇಗ ಮತ್ತು ವಿಸ್ತಾರ', ಪ್ರಭಾಕರ ಜೋಶಿ(ಸಂ), ಯಕ್ಷಗಾನ ಚಿಂತನೆ, ಮುಂಡಾಜೆ : ಶತಾಬ್ದಿ ವಿದ್ಯಾಲಯ ಸಮಿತಿ, ೧೯೯೦, ಪು.೧೭-೨೭.

ಸಂಶೋಧನೆ ಕೇವಲ ಈಗಾಗಲೇ ಆಗಿರುವ ಅಧ್ಯಯನಗಳ ಅಥವಾ ಪಠ್ಯಗಳ ವಿಮರ್ಶೆ ಮಾತ್ರವಲ್ಲ. ಸಂಶೋಧಕರ ಅನುಭವಗಳು ಕೂಡ ಸಂಶೋಧನೆಯ ಭಾಗವಾಗುತ್ತವೆ. ಸಂಶೋಧಕರ ಅನುಭವಗಳನ್ನು ಎರಡು ಬಗೆಯಲ್ಲಿ ವಿಂಗಡಿಸಿಕೊಳ್ಳಬಹುದು. ಒಂದು, ಸಂಶೋಧಕರ ಬದುಕಿನಿಂದ ಬಂದ ಅನುಭವಗಳು ಮತ್ತು ಎರಡು, ಸಂಶೋಧನೆಯ ವೈಧಾನಿಕತೆಯಿಂದ-ಕ್ಷೇತ್ರಕಾರ್ಯ, ಪಠ್ಯ ವಿಮರ್ಶೆ, ಈಗಾಗಲೇ ಆಗಿರುವ ಅಧ್ಯಯನಗಳ (ಪ್ರಕಟಿತ ಮತ್ತು ಅಪ್ರಕಟಿತ ಬರಹಗಳ) ವಿಮರ್ಶೆ, ಇತರ ಆನುಷಂಗಿಕ ಮಾಹಿತಿ ಸಂಗ್ರಹ ಇತ್ಯಾದಿಗಳಿಂದ ಪಡೆಯುವ ಅನುಭವಗಳು. ಪ್ರಬಂಧದ ವಾದ ಮಂಡನೆಗೆ ಅಗತ್ಯವಿರುವ ಸಂಶೋಧಕರ ಬದುಕಿನಿಂದ ಮತ್ತು ಸಂಶೋಧನೆಯ ವೈಧಾನಿಕತೆಯಿಂದ ಬರುವ ಮುಖ್ಯಾಂಶಗಳನ್ನು ಪ್ರಬಂಧದಲ್ಲಿ ನೀಡಬೇಕು. ಬದುಕಿನಿಂದ ಮತ್ತು ಸಂಶೋಧನೆಯ ವೈಧಾನಿಕತೆಯಿಂದ ಬರುವ ಆದರೆ ವಾದ ಮಂಡನೆಗೆ ಅನಿವಾರ್ಯವಲ್ಲದ ಅನುಭವಗಳನ್ನು

ಟಿಪ್ಪಣಿ ರೂಪದಲ್ಲಿ ನೀಡಬಹುದು. (ಅಡಿ/ಕೊನೆ) ಟಿಪ್ಪಣಿ ನೀಡುವಾಗ ಅನುಸರಿಸುವ ಸಾಮಾನ್ಯ ಕ್ರಮ ಇಂತಿದೆ. ಟಿಪ್ಪಣಿ ನೀಡಬೇಕಾಗಿರುವ ವಾಕ್ಯದ ಕೊನೆಯಲ್ಲಿ ಪ್ರಬಂಧದ ಬರಹಗಳಿಗಿಂತ ಭಿನ್ನವಾದ ಗುರುತನ್ನು ಮಾಡಬೇಕು. ಕೇವಲ ಒಂದೆರಡು ಟಿಪ್ಪಣಿಗಳನ್ನು ನೀಡುವುದಾದರೆ 'ಕೂಡಿಸು' ಅಥವಾ 'ನಕ್ಷತ್ರ' ಗುರುತುಗಳನ್ನು ಹಾಕಬಹುದು. ಹಲವಾರು ಟಿಪ್ಪಣಿಗಳನ್ನು ನೀಡುವಾಗ ಅಂಕೆಗಳನ್ನು (೧, ೨...) ಬಳಸುವುದು ಸೂಕ್ತ. ಇದೇ ಗುರುತುಗಳನ್ನು ('ಕೂಡಿಸು' ಅಥವಾ 'ನಕ್ಷತ್ರ' ಅಥವಾ ಅಂಕೆಗಳನ್ನು) ಅಡಿಟಿಪ್ಪಣಿ ನೀಡುವುದಾದರೆ ಪುಟದ ಕೊನೆಗೆ ಕೊನೆ ಟಿಪ್ಪಣಿಯಾದರೆ ಅಧ್ಯಾಯದ ಕೊನೆಗೆ ನೀಡಬೇಕು. ಟಿಪ್ಪಣಿ ಗುರುತುಗಳ ಮುಂದುಗಡೆಯಲ್ಲಿ ಟಿಪ್ಪಣಿಯ ವಿವರಗಳನ್ನು ನೀಡಬೇಕು. ಟಿಪ್ಪಣಿಯ ವಿವರಗಳನ್ನು ಪ್ರಕಟಿತ ಲೇಖನ ಅಥವಾ ಪತ್ರ ಅಥವಾ ಬರಹಗಳಿಂದ ಪಡೆದ ವಿವರಗಳಿದ್ದರೆ ಆ ಪ್ರಕಟಿತ ಲೇಖನ/ಪತ್ರ/ಬರಹದ ಮೂಲವನ್ನು ಉಲ್ಲೇಖದಲ್ಲಿ ಸೂಚಿಸಿದಂತೆ ದಾಖಲಿಸಬೇಕು.

ಗ್ರಂಥಸೂಚಿ

ಗ್ರಂಥಸೂಚಿಯನ್ನು ಪರಾಮರ್ಶನ ಬರಹಗಳ ಪಟ್ಟಿಯೆಂದು ವ್ಯಾಖ್ಯಾನಿಸಿಕೊಳ್ಳಬಹುದು. ಸಂಶೋಧನ ಪ್ರಬಂಧ ರಚನೆಗೆ ಬಳಸಿದ ಎಲ್ಲ ಪ್ರಕಟಿತ ಮತ್ತು ಅಪ್ರಕಟಿತ ಬರಹಗಳನ್ನು ಪರಾಮರ್ಶನ ಬರಹಗಳ ಪಟ್ಟಿಯಲ್ಲಿ ನೀಡಲಾಗುತ್ತದೆ. ಪರಾಮರ್ಶನ ಬರಹಗಳ ಪಟ್ಟಿಯನ್ನು 'ಅ' ಕರಾದಿ ಕ್ರಮದಲ್ಲಿ ನೀಡುವ ವಾಡಿಕೆಯಿದೆ. 'ಅ' ದಿಂದ ಆರಂಭವಾಗುವ ಎಲ್ಲ ಲೇಖಕರ ಹೆಸರುಗಳು ಕೊನೆಗೊಂಡ ನಂತರವೇ 'ಆ' ದಿಂದ ಆರಂಭವಾಗುವ ಲೇಖಕರುಗಳ ಪಟ್ಟಿ ಆರಂಭವಾಗುತ್ತದೆ. ಅದು ಮುಗಿದ ನಂತರ 'ಇ'; ಹೀಗೆ ಅಕರಾದಿ ರೂಪದಲ್ಲಿ ಪರಾಮರ್ಶನ ಬರಹಗಳ ಪಟ್ಟಿಯನ್ನು ನೀಡಬೇಕು. ಪರಾಮರ್ಶನ ಪಟ್ಟಿಯಲ್ಲಿ ನೀಡುವ ಗ್ರಂಥಗಳ ಈ ಕೆಳಗಿನ ವಿವರಗಳು ಗ್ರಂಥಸೂಚಿಯಲ್ಲಿರಬೇಕು. ೧. ಲೇಖಕರ ಹೆಸರು, ೨. ಪುಸ್ತಕ/ಲೇಖನ/ಪ್ರಬಂಧ/ವರದಿ/ಉಪನ್ಯಾಸದ ಹೆಸರು, ೩. ಪ್ರಕಟನೆಯ ಸ್ಥಳ, ೪. ಪ್ರಕಟಕರ ವಿಳಾಸ, ೫. ಪ್ರಕಟನೆಯ ಇಸವಿ ಮತ್ತು ಸಂಪಾದಿಸಿದ ಪುಸ್ತಕದಿಂದ ಅಥವಾ ಪತ್ರಿಕೆಗಳಿಂದ ಲೇಖನಗಳು ಪಡೆದ ಸಂದರ್ಭದಲ್ಲಿ ಆ ಲೇಖನ ಪ್ರಕಟವಾದ ಪುಟ ಸಂಖ್ಯೆ. ಲೇಖಕರ ಪುಸ್ತಕದ ವಿವರಗಳನ್ನು ನೀಡುವಾಗ ಪುಸ್ತಕದ ಹೆಸರನ್ನು ಇಟಾಲಿಕ್ ಮಾಡಬೇಕು. ಸಂಪಾದಿಸಿದ ಪುಸ್ತಕದಿಂದ ಮತ್ತು ಪತ್ರಿಕೆಗಳಿಂದ ಪಡೆದ ಲೇಖನದ ವಿವರಗಳನ್ನು ನೀಡುವಾಗ ಲೇಖನದ ಹೆಸರನ್ನು ಇನ್ ವರ್ಟೆಡ್ ಕೊಮದೊಳಗೆ (“ ”) ನೀಡಿ ಪುಸ್ತಕದ ಹೆಸರನ್ನು ಅಥವಾ ಪತ್ರಿಕೆಯ ಹೆಸರನ್ನು ಇಟಾಲಿಕ್ ಮಾಡಬೇಕು. ಮೇಲಿನ ನಿಯಮಗಳನ್ನು ಅನುಸರಿಸಿ ಗ್ರಂಥಗಳ ವಿವರಗಳನ್ನು ನೀಡುವ ಕೆಲವೊಂದು ಉದಾಹರಣೆಗಳನ್ನು ಗಮನಿಸುವ.

ಒಂದು, ಪುಸ್ತಕದ ವಿವರಗಳು - ಅ. ಮಾಧವ ಗಾಡ್ಗಿಲ್ ಅಂಡ್ ರಾಮಚಂದ್ರ ಗುಹಾ, *ಇಕಲಾಜಿ ಅಂಡ್ ಇಕ್ವಿಟಿ - ದಿ ಯೂಸ್ ಅಂಡ್ ಎಬ್ಯೂಸ್ ಆಫ್ ನೇಚರ್ ಇನ್*

ಕಾಂಟೆಂಪರರಿ ಇಂಡಿಯಾ, ನ್ಯೂಡೆಲ್ಲಿ : ಪೆಂಗ್ವಿನ್ ಬುಕ್ಸ್, ೧೯೯೫ ಆ. ಜೆನಾಬ್ ಬಾನು, *ಪೊಲಿಟಿಕ್ಸ್ ಆಫ್ ಕಮ್ಯುನಿಸಂ - ಎ ಪೊಲಿಟಿಕೋ ಹಿಸ್ಟೋರಿಕಲ್ ಎನಾಲಿಸ್ ಆಫ್ ಕಮ್ಯುನಲ್ ರಾಯಿಟ್ಸ್ ಇನ್ ಪೋಸ್ಟ್ ಇನ್‌ಪೆಂಡೆನ್ಸ್ ಇಂಡಿಯಾ ವಿದ್ ಸ್ಪೇಶಲ್ ರೆಫರೆನ್ಸ್ ಟು ಗುಜರಾತ್ ಆಂಡ್ ರಾಜಸ್ತಾನ್ ರಾಯಿಟ್ಸ್*, ಬಾಂಬೆ : ಪೋಪ್ಯುಲರ್ ಪ್ರಕಾಶನ್, ೧೯೮೯. ಎರಡು, ಸಂಪಾದಿಸಿದ ಪುಸ್ತಕದಿಂದ ಪಡೆದ ಲೇಖನದ ವಿವರಗಳು- ಆಶಿಸ್ ಬೇನರ್ಜಿ, ''ಕಂಪೇರಿಟಿವ್ ಕರ್ಫ್ಯೂ - ಚೇಂಜಿಂಗ್ ಡೈಮೆನ್ಸ್ ಆಫ್ ಕಮ್ಯುನಲ್ ಪೊಲಿಟಿಕ್ಸ್ ಇನ್ ಇಂಡಿಯಾ'', ವೀಣಾ ದಾಸ್ (ಸಂ), *ಮೀರರ್ಸ್ ಆಫ್ ವಾಯಿಲೆನ್ಸ್- ಕಮ್ಯುನಿಟೀಸ್, ರಾಯಿಟ್ಸ್ ಆಂಡ್ ಸರ್‌ವಾಯಿವರ್ಸ್ ಇನ್ ಸೌತ್ ಏಶಿಯಾ*, ನ್ಯೂಡೆಲ್ಲಿ : ಆಕ್ಸ್‌ಫರ್ಡ್ ಯುನಿರ್ವಸಿಟಿ ಪ್ರೆಸ್, ೧೯೯೦, ಪು.೩೭-೬೮. ಮೂರು, ಪತ್ರಿಕೆಗಳಿಂದ ಪಡೆದ ಲೇಖನದ ವಿವರಗಳು ಚಂದ್ರಶೇಖರ ದಾಮ್ಲೆ, 'ಇಂಪೇಕ್ಟ್ ಆಫ್ ಟೆನೆನ್ಸಿ ಲೆಜಿಸ್ಲೇಶನ್ ಆಂಡ್ ಚೇಂಜಿಂಗ್ ಆಗ್ರೇರಿಯನ್ ರಿಲೇಶನ್ಸ್ - ಎ ಕೇಸ್ ಆಫ್ ದಕ್ಷಿನ ಕನ್ನಡ ಡಿಸ್ಟ್ರಿಕ್ಟ್, ಕರ್ನಾಟಕ', *ಸೋಶಿಯಲ್ ಸಯಿಂಟಿಸ್ಟ್*, ವಾಲ್ಯೂಮ್ ೧೭, ನಂ.೧೧-೧೨, ನವೆಂಬರ್ - ಡಿಸೆಂಬರ್ ೧೯೮೯, ಪು.೮೩-೯೭. ನಾಲ್ಕು, ವರದಿಗಳ ವಿವರಗಳು- ಗವರ್ನ್‌ಮೆಂಟ್ ಆಫ್ ಕರ್ನಾಟಕ, ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್ - ಕರ್ನಾಟಕ ೨೦೦೫, ಬೆಂಗಳೂರು : ಡಿಪಾರ್ಟ್‌ಮೆಂಟ್ ಆಫ್ ಪ್ಲಾನಿಂಗ್ ಆಂಡ್ ಸ್ಟೇಟಿಸ್ಟಿಕ್ಸ್ ೨೦೦೬, ಐದು, ಅಪ್ರಕಟಿತ ಪ್ರಬಂಧಗಳ ವಿವರಗಳು. ವಾಲ್ಟರ್ ಡಿಸೋಜ ಗಲ್ಫ್ ಮೈಗ್ರೇಶನ್ ಅಂಡ್ ಇಟ್ಸ್ ಸೋಶಿಯೋ ಎಕನಾಮಿಕ್ ಇಂಪೇಕ್ಟ್, ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ ಅಪ್ರಕಟಿತ ಪಿಹೆಚ್.ಡಿ ಪ್ರಬಂಧ, ೨೦೦೪, ಆರು, ಅಪ್ರಕಟಿತ ಉಪನ್ಯಾಸಗಳ ವಿವರಗಳು- ಕೆ.ವಿ.ನಾರಾಯಣ, ''ಅಭಿವೃದ್ಧಿ ಮತ್ತು ಸಂಸ್ಕೃತಿ'' ಕನ್ನಡ ವಿಶ್ವವಿದ್ಯಾಲಯ-ಹಂಪಿ ಅಭಿವೃದ್ಧಿ ಅಧ್ಯಯನ ವಿಭಾಗ ಸಂಘಟಿಸಿದ 'ಭವಿಷ್ಯದ ಸುವರ್ಣ ಕರ್ನಾಟಕ' ವಿಚಾರ ಸಂಕಿರಣದಲ್ಲಿ ಮಂಡಿಸಿದ ಅಪ್ರಕಟಿತ ಪ್ರಬಂಧ, ೨೦೦೭.

ವಾದ ಮಂಡನೆಯೆನ್ನುವ ಈ ಅಧ್ಯಾಯದಲ್ಲಿ ಪ್ರಬಂಧ ರಚನೆ ಕುರಿತು ಚರ್ಚಿಸಲಾಗಿದೆ. ಪ್ರಬಂಧ ರಚನೆ ಕುರಿತು ಈಗಾಗಲೇ ಇರುವ ಕೆಲವು ಸಿದ್ಧ ಮಾದರಿಗಳನ್ನು ಪ್ರಶ್ನಿಸುವ ಜತೆಗೆ ಸಂಶೋಧಕರು ಇಚ್ಛಿಪಟ್ಟರೆ ಅನುಸರಿಸಬಹುದಾದ ಹೊಸ ಮಾದರಿಯನ್ನು ಪರಿಚಯಿಸಲು ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ. ಗುಣಾತ್ಮಕ ಹಾಗೂ ಪರಿಮಾಣಾತ್ಮಕ ಸಂಶೋಧನೆ ಎನ್ನುವ ವಿಂಗಡನೆಗಳು ಪ್ರಬಂಧ ಮಂಡನ ವಿಧಾನವನ್ನು ಕೂಡ ಪ್ರಭಾವಿಸಿವೆ. ಸಮಾಜ ಸಂಶೋಧನೆಯ ಆರಂಭಿಕ ಸಂಶೋಧಕರು ತಮ್ಮ ಅರಿವಿಗೆ ಬಾರದೆ ಪರಿಮಾಣಾತ್ಮಕ ವಿಧಾನದಲ್ಲಿ ಪ್ರಬಂಧ ಮಂಡಿಸುವುದು ನಡೆಯುತ್ತಿದೆ. ಇದಕ್ಕೆ ಬಹುಮುಖ್ಯ ಕಾರಣ ಬಹುತೇಕ ಸಮಾಜ ಸಂಶೋಧನ ಪ್ರಬಂಧಗಳು ಈ (ಪರಿಮಾಣಾತ್ಮಕ)

ವಿಧಾನದಲ್ಲಿ ಮಂಡನೆಯಾಗುವುದು. ಸಂಶೋಧನೆಯ ಎಲ್ಲ ಹಂತಗಳು ಮುಗಿದ ನಂತರ ಪ್ರಬಂಧ ರಚನೆ ಆರಂಭವಾಗುತ್ತದೆ. ಪ್ರಬಂಧ ರಚನೆಯಲ್ಲಿ ಸಂಗ್ರಹಿಸಿದ ಮಾಹಿತಿ ಮಾತ್ರ ಕೆಲಸ ಮಾಡಬೇಕು. ಸಂಶೋಧಕರು ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದು ಸಾಧ್ಯವಿಲ್ಲ. ಅಂಕಿ ಅಂಶಗಳು ಪ್ರಬಂಧ ರಚನೆಗೆ ಅನಿವಾರ್ಯ. ಇತ್ಯಾದಿ ಗುಣಲಕ್ಷಣಗಳಿಂದ ಪ್ರಬಂಧ ರಚನೆಯ ಸಾಂಪ್ರದಾಯಿಕ ಮಾದರಿ ಗುರುತಿಸಲ್ಪಡುತ್ತಿದೆ. ಈ ಮಾದರಿ ಈಗ ಮೌಲ್ಯ ಕಳೆದುಕೊಂಡಿದೆ. ಬದಲೀ ಪ್ರಬಂಧ ರಚನೆ ಮಾದರಿ ಚಾಲ್ತಿಯಲ್ಲಿದೆ. ಬದಲೀ ಮಾದರಿ ಪ್ರಕಾರ ಸಂಶೋಧನ ವಿಷಯ ಆಯ್ಕೆಯಿಂದಲೇ ಪ್ರಬಂಧ ರಚನೆ ಆರಂಭವಾಗುತ್ತದೆ. ಸಂಶೋಧನೆಯ ವಿವಿಧ ಹಂತಗಳಲ್ಲಿ ಪ್ರಬಂಧ ರಚನೆ ಪರಿಷ್ಕರಿಸಲ್ಪಡುತ್ತದೆ. ಪ್ರಬಂದ ರಚನೆಯ ಪ್ರತಿ ಹಂತದಲ್ಲೂ ಸಂಶೋಧನ ಪ್ರಬಂಧದ ಪುನರ್ ನಿರ್ವಚನೆ ಮತ್ತು ಪುನರ್ ರಚನೆ ನಡೆಯುತ್ತಿರುತ್ತದೆ. ಪ್ರಬಂಧ ರಚನೆಯಲ್ಲಿ ಅಥವಾ ವಾದ ಮಂಡನೆಯಲ್ಲಿ ಸಂಶೋಧಕರು ತಮ್ಮ ವಾದವನ್ನು ಸಮರ್ಥಿಸಲು ಸಂಗ್ರಹಿಸಿದ ಸಾಕ್ಷಿ, ಪುರಾವೆ, ದಾಖಲೆ ಇತ್ಯಾದಿಗಳನ್ನು ಬಳಸುವ ವಿಧಾನಗಳನ್ನು ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಮೂರು ವಿಶ್ಲೇಷಣಾ ವಿಧಾನಗಳನ್ನು-ತುಲನಾತ್ಮಕ, ಚಾರಿತ್ರಿಕ ಹಾಗೂ ವಿಷಯ ವಿಶ್ಲೇಷಣಾ ವಿಧಾನ ಗಳನ್ನು-ವಿವರಿಸಲಾಗಿದೆ. ಅಧ್ಯಾಯದ ಕೊನೆಭಾಗದಲ್ಲಿ ಪ್ರಬಂಧ ರಚನೆಯ ಕೆಲವೊಂದು ತಾಂತ್ರಿಕ ಅಂಶಗಳನ್ನು ಚರ್ಚಿಸಲಾಗಿದೆ. ಅಡಿ/ಕೊನೆ ಟಿಪ್ಪಣಿಗಳನ್ನು ಕೊಡುವುದು, ಪರಾಮರ್ಶನ ಪುಸ್ತಕಗಳ ಪಟ್ಟಿ ಕೊಡುವುದು ಇತ್ಯಾದಿಗಳನ್ನು ವಿವರಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಇದನ್ನೇ ಇನ್ನೊಂದು ರೀತಿಯಲ್ಲಿ ಅಥವಾ ಇನ್ನೂ ಸರಳವಾಗಿ ಹೇಳುವುದಾದರೆ ಸಂಶೋಧಕರು ಮಂಡಿಸಲಿಚ್ಛಿಸುವ ವಾದಗಳನ್ನು ಸಾಮಾಜೀಕರಣಗೊಳಿಸುವ ಪ್ರಕ್ರಿಯೆಯೇ ಪ್ರಬಂಧ ರಚನಾ ಪ್ರಕ್ರಿಯೆ ಅಥವಾ ಥೀಸಿಸ್ ರೂಪಿಸುವ ಪ್ರಕ್ರಿಯೆ ಎನ್ನಬಹುದು.

೨. ಈ ಕುರಿತು ಹೆಚ್ಚಿನ ವಿವರಗಳಿಗೆ ಲೆಸ್ಲಿ ಸ್ಟೀವನ್ ಸನ್ ಅಂಡ್ ಡೇವಿಡ್ ಸಿ., ಹಾಬ್ ಮೇನ್ ಅವರ *ಟೆನ್ ಥಿಯರೀಸ್ ಆಫ್ ಹ್ಯೂಮನ್ ನೇಚರ್*, ನ್ಯೂಯಾರ್ಕ್: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೮, ಪುಸ್ತಕ ನೋಡಬಹುದು.

೩. ಸಂಸ್ಕೃತಿಗಳ ಪ್ರತ್ಯೇಕತೆಯ ಬಗ್ಗೆ ವಿಶೇಷ ಒತ್ತು ನೀಡುವವರೆಂದರೆ ಮಾನವಶಾಸ್ತ್ರಜ್ಞರು. ಆದರೆ ಇದೊಂದು ಬಗೆಯಲ್ಲಿ ಪ್ರತ್ಯೇಕತೆ ಮತ್ತು ಯುನಿವರ್ಸಾಲಿಟಿಯ (ವಿಜ್ಞಾನದ ಕೊಡುಗೆ) ಹೆಸರಲ್ಲಿ ಎಂದೆಂದು ಸೇರದ ಎರಡು ವಿಭಿನ್ನ ಸಂಶೋಧನಾ ನಿಲುವುಗಳಿಗೂ ಕಾರಣವಾಯಿತು. ಆದರೆ ಇತ್ತೀಚಿನ ದಿನಗಳಲ್ಲಿ ಮಾನವಿಕದಲ್ಲಿ ಮಹತ್ವ ಪಡೆಯುತ್ತಿರುವ ಸಂಸ್ಕೃತಿ ಅಧ್ಯಯನ ಮತ್ತು ವಿಜ್ಞಾನದಲ್ಲಿ ಮಹತ್ವ ಪಡೆಯುತ್ತಿರುವ ಸಂಕೀರ್ಣತೆ ಅಧ್ಯಯನಗಳನ್ನು ಬಳಸಿಕೊಂಡು ಮೇಲೆ ತಿಳಿಸಿದ ಪ್ರತ್ಯೇಕತೆ ಮತ್ತು ಯುನಿವರ್ಸಾಲಿಟಿ ಭಿನ್ನತೆಗಳನ್ನು ಮೀರಬಹುದೆನ್ನುವ ವಾದಗಳು ಇವೆ. ಇವುಗಳ ಸಂಕ್ಷಿಪ್ತ ಪರಿಚಯಕ್ಕೆ ಇಮೆನ್ವಲ್ ವೆಲ್‌ಸ್ಟೇಯಿನ್ ಅವರ, 'ಸೋಶಿಯಲ್ ಸಯನ್ಸ್‌ಸ್ ಅಂಡ್ ಕ್ವೆಸ್ಟ್ ಫಾರ್ ಎ ಜಸ್ಟ್ ಸೊಸೈಟಿ', ಲೇಖನವನ್ನು ನೋಡಬಹುದು. ಈ ಲೇಖನ ಪಾರ್ಥನಾಥ ಮುಖರ್ಜಿ ಅಂಡ್ ಚಂದನ್ ಸೇನಾಗುಪ್ತಾ ಅವರ,

ಇಂಡಿಜೀನಿಟಿ ಅಂಡ್ ಯುನಿವರ್ಸಾಲಿಟಿ ಇನ್ ಸೋಶಿಯಲ್ ಸಯನ್ಸ್-ಎ ಸೌತ್ ಏಶಿಯನ್ ರೆಸ್ಪಾನ್ಸ್, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೨೦೦೪, ಪು.೬೬-೮೨ ಪುಸ್ತಕದಲ್ಲಿದೆ.

೪. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ಪುಸ್ತಕಗಳನ್ನು ನೋಡಬಹುದು. ಮಾಲ್ಕಮ್ ಕ್ರಿಕ್ ಅಂಡ್ ಬಿಲ್ ಗೆಡ್ಸ್ (ಸಂ), *ರಿಸರ್ಚ್ ಮೆಥಡ್ಸ್ ಇನ್ ದ ಫೀಲ್ಡ್*, ನ್ಯೂಡೆಲ್ಲಿ : ಅನ್‌ಮೋಲ್ ಪಬ್ಲಿಕೇಶನ್ಸ್, ೨೦೦೬, ವಿಕಿ ಎಲ್ ಪ್ಲಾನೋ ಕ್ಲರ್ಕ್ ಅಂಡ್ ಜಾನ್ ಡಬ್ಲ್ಯು ಕ್ರಾಸ್‌ವೆಲ್, *ದಿ ಮಿಕ್ಸಡ್ ಮೆಥಡ್ ರೀಡರ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೨೦೦೮

೫. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ಪುಸ್ತಕಗಳನ್ನು ನೋಡಬಹುದು. ಆಡ್ರಿಯನ್ ಹಾಲಿಡೇ, *ಡುಯಿಂಗ್ ಅಂಡ್ ರೈಟಿಂಗ್ ಕ್ವಾಲಿಟೆಟಿವ್ ರಿಸರ್ಚ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೨೦೦೭, ಆನ್ ಸೆಲ್ಮ್ ಸ್ಟ್ರಾಸ್ ಅಂಡ್ ಜೂಲಿಯೆಟ್ ಕಾರ್ಬಿನ್, *ಬೆಸಿಕ್ಸ್ ಆಫ್ ಕ್ವಾಲಿಟೆಟಿವ್ ರಿಸರ್ಚ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೧೯೯೮

೬. ಕಾಥಿ ಶರ್ಮೇಜ್, *ಕನ್‌ಸ್ಟ್ರಕ್ಟಿಂಗ್ ಗ್ರೌಂಡೆಡ್ ಥಿಯರಿ-ಎ ಪ್ರಾಕ್ಟಿಕಲ್ ಗೈಡ್ ಥ್ರೋ ಕ್ವಾಲಿಟೇಟಿವ್ ಎನಾಲೀಸಿಸ್*, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೨೦೦೬

೭. ಎಮ್.ಎನ್.ಶ್ರೀನಿವಾಸರ ರಿಮೆಂಬರ್ಡ್ ವಿಲೇಜ್ ಪುಸ್ತಕದ ಆರಂಭದ ಪುಟದಲ್ಲೇ ಸಂಶೋಧನ ಬರಹಗಳು ಕಾದಂಬರಿ ತರಹ ಇರಬೇಕೆನ್ನುವ ಸಂಶೋಧಕರ ಉಲ್ಲೇಖವಿದೆ. ಶ್ರೀನಿವಾಸರು ಗ್ರಾಮೀಣ ಬದುಕಿನ ಬಗ್ಗೆ ತಾವು ನಡೆಸಿದ ಕ್ಷೇತ್ರ ಕಾರ್ಯದಿಂದ ಸಂಗ್ರಹಿಸಿದ ಎಲ್ಲ ಮಾಹಿತಿಗಳನ್ನು ಕಳೆದು ಕೊಂಡಿದ್ದರು. ತಮ್ಮ ನೆನಪಿನಲ್ಲಿದ್ದ ಗ್ರಾಮೀಣ ಬದುಕಿನ ಆಧಾರದಲ್ಲಿ ರಿಮೆಂಬರ್ಡ್ ವಿಲೇಜ್ ಪುಸ್ತಕ ಬರೆದಿದ್ದಾರೆ. ಆದುದರಿಂದ ಸಂಶೋಧನ ಬರಹ ಕಾದಂಬರಿ ತರಹ ಇರಬೇಕೆನ್ನುವ ಮಾತನ್ನು ಉಲ್ಲೇಖಿಸಿರಬಹುದು(*ದಿ ರಿಮೆಂಬರ್ಡ್ ವಿಲೇಜ್*, ಡೆಲ್ಲಿ: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೭೬).

೮. ಪ್ರಬಂಧದಲ್ಲಿರಬೇಕಾದ ಅಧ್ಯಾಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ ಅನುಭವದ ಹಿನ್ನೆಲೆಯಲ್ಲಿ ಮತ್ತು ಸ್ವತಃ ಸಂಶೋಧನ ಬರಹಗಳನ್ನು ಮಂಡಿಸುವ ಸಂದರ್ಭದಲ್ಲಿ ಗಳಿಸಿದ ಅನುಭವದ ಹಿನ್ನೆಲೆಯಲ್ಲಿ ಕೊಡುತ್ತಿದ್ದೇನೆ. ಇಲ್ಲಿ ಕೊಟ್ಟಿರುವ ಕ್ರಮ ಒಂದು ಕ್ರಮ ಮಾತ್ರ; ಇದುವೇ ಅಂತಿಮವಲ್ಲ. ವಿದ್ಯಾರ್ಥಿಗಳಿಗೆ ಇದಕ್ಕಿಂತ ಉತ್ತಮವೆಂದು ಕಾಣುವ ಇತರ ವಿಧಾನಗಳನ್ನು ಕೂಡ ಪ್ರಬಂಧ ರಚನೆಯಲ್ಲಿ ಅನುಸರಿಸಬಹುದು.

೯. ಮೂಲತತ್ತ್ವಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕ್ಲೈವ್ ಸೀಲ್ ಅವರ, 'ಸ್ಟೆಟಿಸ್ಟಿಕಲ್ ರೀಸನಿಂಗ್- ಕಾಸಲ್ ಆರ್ಗ್ಯುಮೆಂಟ್ಸ್ ಅಂಡ್ ಮಲ್ಟಿವೇರಿಯೆಟ್ ಎನಾಲಿಸಿಸ್'ದಿಂದ ಪಡೆದಿದ್ದೇನೆ. ಅವರ ಈ ಲೇಖನ ಕ್ಲೈವ್ ಸೀಲ್(ಸಂ), *ರಿಸರ್ಚಿಂಗ್ ಸೊಸೈಟಿ ಅಂಡ್ ಕಲ್ಚರ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೧೯೯೯, ಪು.೧೮೦-೧೯೧, ಪುಸ್ತಕದಲ್ಲಿದೆ.

೧೦. ಈ ಉದಾಹರಣೆಯನ್ನು ಕೆ. ಸಿದ್ದಪ್ಪ ಅವರ, 'ಪ್ರವಾಸೋದ್ಯಮ ಮತ್ತು ಅಭಿವೃದ್ಧಿ - ಹಂಪಿಯ ಒಂದು ಅಧ್ಯಯನ' ಎನ್ನುವ ಅಪ್ರಕಟಿತ ಮಹಾಪ್ರಬಂಧದಿಂದ ಪಡೆಯಲಾಗಿದೆ. ಈ ಮಹಾಪ್ರಬಂಧವನ್ನು ಅವರು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ೨೦೦೨ರಲ್ಲಿ ಸಲ್ಲಿಸಿರುತ್ತಾರೆ.

೧೧. ಉದ್ಯಮತ್ವ ಮತ್ತು ಅದನ್ನು ಪ್ರಭಾವಿಸುವ ಪರಿವರ್ತಕಗಳ ವಿವರಗಳಿಗೆ ಚಂದ್ರ ಪೂಜಾರಿಯವರ, ಟ್ರೆಂಡ್ಸ್ ಇನ್ ಎಂಟರ್‌ಪ್ರನರ್‌ಶಿಪ್ ಅಂಡ್ ರೀಜನಲ್ ಡೆವಲಪ್‌ಮೆಂಟ್ - ಎ ಸ್ಟಡಿ ಆಫ್ ಸ್ಮಾಲ್ ಎಂಟರ್ ಪ್ರನರ್ಸ್ ಆಫ್ ಸೌತ್ ಕೆನರಾ', ಅಪ್ರಕಟಿತ ಮಹಾಪ್ರಬಂಧವನ್ನು ನೋಡ

ಬಹುದು. ಈ ಮಹಾಪ್ರಬಂಧವನ್ನು ಅವರು ಮಂಗಳೂರು ವಿಶ್ವವಿದ್ಯಾಲಯದ ಬುಸಿನೆಸ್ ಆಡ್ಮಿಮಿನಿಸ್ಟ್ರೇಸನ್ ವಿಭಾಗಗಕ್ಕೆ ೧೯೯೬ ಸಲ್ಲಿಸಿರುತ್ತಾರೆ.

೧೨. ಚರಿತ್ರೇತರ ಅಧ್ಯಯನಗಳಲ್ಲಿ ಚಾರಿತ್ರಿಕ ವಿಶ್ಲೇಷಣೆಯ ಮಹತ್ವಕ್ಕೆ ಸಂಬಂಧಿಸಿದ ವಿವರಗಳಿಗೆ ಕಾರ್ಟ್‌ರೈಟ್ ಮಿಲ್ಸ್ ಅವರ ಸೋಶಿಯಲಾಜಿಕಲ್ ಇಮೇಜಿನೇಶನ್ ಪುಸ್ತಕ ನೋಡಬಹುದು.

೧೩. ಕೆ. ಸಿದ್ದಪ್ಪ, ಪ್ರವಾಸೋದ್ಯಮ ಮತ್ತು ಅಭಿವೃದ್ಧಿ- ಹಂಪಿಯ ಒಂದು ಅಧ್ಯಯನ, ೨೦೦೨

೧೪. ೧೯೯೮ರ ಕರ್ನಾಟಕದ ಮಾನವ ಅಭಿವೃದ್ಧಿ ವರದಿ ಪ್ರಕಾರ ಜಿಲ್ಲೆ ಮೂರನೇ ಸ್ಥಾನದಲ್ಲಿದೆ. ಶಿಕ್ಷಣ, ಆರೋಗ್ಯ ಮತ್ತು ಆದಾಯ ಮತ್ತು ಮೂರು ಸೂಚ್ಯಂಕಗಳ ಆಧಾರದಲ್ಲಿ ಮಾನವ ಅಭಿವೃದ್ಧಿ ಇಂಡೆಕ್ಸ್‌ನ್ನು ಸಿದ್ಧಪಡಿಸಲಾಗುವುದು.

೧೫. ವಿವರಗಳಿಗೆ ಚಂದ್ರಪೂಜಾರಿಯವರ, *ದೇಶಿಯತೆಯ ನೆರಳಲ್ಲಿ ವಿಕೇಂದ್ರೀಕರಣ*, ವಿದ್ಯಾರಣ್ಯ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೦ ಪುಸ್ತಕ ನೋಡಬಹುದು.

೧೬. ಈ ಬಗೆಯ ವಾದಗಳಿಗೆ ಈ ಕೆಳಗಿನ ಪುಸ್ತಕಗಳನ್ನು ನೋಡಬಹುದು - ಮಾಧವ ಗಾಡ್ಗಿಲ್ ಆಂಡ್ ರಾಮಚಂದ್ರ ಗುಹ, *ಇಕಲಾಜಿ ಅಂಡ್ ಇಕ್ವಿಟಿ : ದಿ ಯೂಸ್ ಅಂಡ್ ಎಬ್ಯೂಸ್ ಆಫ್ ನೇಚರ್ ಇನ್ ಕಾಂಟೆಂಪರರಿ ಇಂಡಿಯಾ*, ನ್ಯೂಡೆಲ್ಲಿ : ಪೆಂಗ್ವಿನ್ ಬುಕ್ಸ್ , ೧೯೯೫. ಜೋದ ಎಸ್.ಎಸ್., ''ಕಾಮನ್ ಪ್ರೊಪರ್ಟಿ ರಿಸೋರ್ಸ್‌ಸ್''. ಇನ್ ರಾಮಚಂದ್ರ ಗುಹ (ಎಡಿಟೆಡ್). *ಸೋಶಿಯಲ್ ಇಕಲಾಜಿ*, ಡೆಲ್ಲಿ : ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೪ ಮತ್ತು ಅಶಿಸ್ ಕೊಥಾರಿ ಮತ್ತು ಇತರರು, *ಕಮ್ಯುನಿಟೀಸ್ ಅಂಡ್ ಕನ್‌ಸರ್ವೇಶನ್: ನೇಚುರಲ್ ರಿಸೋರ್ಸ್ ಮೇನೇಜ್‌ಮೆಂಟ್ ಇನ್ ಸೌತ್ ಅಂಡ್ ಸೆಂಟ್ರಲ್ ಏಶ್ಯಾ*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೧೯೯೮

೧೭. ಹಾಗೆಂದು ಅಧ್ಯಯನಕ್ಕೆ ಒಳಪಡಿಸಬೇಕಾದ ಟೆಕ್ಸ್ಟ್ /ರೂಪಕಗಳ ಮಾದರಿ ಸಂಖ್ಯೆ ಬಗ್ಗೆ ಖಚಿತ ನಿಲುವು ತಾಳುವುದು ಕಷ್ಟದ ಕೆಲಸ. ಸಂಶೋಧನಾ ವಿದ್ಯಾರ್ಥಿಗಳಲ್ಲಿ ಈ ಕುರಿತು (ಮಾದರಿಯ ಆಯ್ಕೆ ಕುರಿತು) ಸ್ವಾರಸ್ಯಕರ ನಿಲುವುಗಳಿವೆ. ಕೆಲವರ ಪ್ರಕಾರ ಮಾದರಿ ಸಂಖ್ಯೆಯನ್ನು ಡಿಗ್ರಿ ನಿರ್ಧರಿಸುತ್ತದೆ. ಸಿದ್ದಪಡಿಸುವ ಪ್ರಬಂಧ ಎಂ.ಫಿಲ್ ಡಿಗ್ರಿಗಾದರೆ ಹತ್ತರಿಂದ ಹದಿನೈದು ಕಾದಂಬರಿಗಳನ್ನು ಮಾದರಿಯಾಗಿ ಆಯ್ಕೆ ಮಾಡಿಕೊಳ್ಳಬಹುದು. ಪಿಹೆಚ್.ಡಿ ಡಿಗ್ರಿಗಾದರೆ ಕನಿಷ್ಠ ಇಪ್ಪತ್ತೈದು ಕಾದಂಬರಿಗಳನ್ನಾದರೂ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.

೧೮. ಬಹುತೇಕ ಸಮಾಜ ಸಂಶೋಧಕರು ವಿಷಯ ವಿಶ್ಲೇಷಣೆಯನ್ನು ಮಾಡುತ್ತಿರುತ್ತಾರೆ. ಉದಾಹರಣೆಗೆ ಈಗಾಗಲೇ ಆದ ಅಧ್ಯಯನಗಳ ಸಮೀಕ್ಷೆ ಸಂದರ್ಭದಲ್ಲಿ ವಿಷಯ ವಿಶ್ಲೇಷಣೆ ನಡೆಯುತ್ತಿರುತ್ತದೆ. ಅದೇ ರೀತಿಯಲ್ಲಿ ಯಾವುದೋ ಒಂದು ಕ್ಷೇತ್ರದ ಅಭಿವೃದ್ಧಿ ನೀತಿಯ ಕುರಿತ ಸುಮಾರು ಹತ್ತು ವರ್ಷದ ಬೆಳವಣಿಗೆ ಕೂಡ ವಿಷಯ ವಿಶ್ಲೇಷಣೆಯನ್ನು ಬೇಡುತ್ತದೆ. ಆದರೆ ಇಲ್ಲೆಲ್ಲೂ ವಿಷಯ ವಿಶ್ಲೇಷಣಾ ವಿಧಾನವನ್ನು ಅನುಸರಿಸಲಾಗಿದೆ ಎಂದು ಘೋಷಿಸುವುದಿಲ್ಲ.

೧೯. ಭೂತಾರಾಧನೆಗೆ ಸಂಬಂಧಿಸಿದ ವಿವರಗಳಿಗೆ ಚಿನ್ನಪ್ಪ ಗೌಡರ *ಭೂತಾರಾಧನೆ-ಜಾನಪದೀಯ ಅಧ್ಯಯನ*, ಮಂಗಳಗಂಗೋತ್ರಿ : ಮದಿಪು ಪ್ರಕಾಶನ, ೧೯೯೦. ಪುಸ್ತಕ ನೋಡಬಹುದು.

೨೦. ವಿವರಗಳಿಗೆ ಚಂದ್ರ ಪೂಜಾರಿಯವರ, `ಫಾರ್ಮ್‌ಡ್/ಕನ್‌ಸ್ಟ್ರಕ್ಟಡ್ ಕಮ್ಯುನಿಟೀಸ್ ಅಂಡ್ ಕಮ್ಯುನಲಿಸಂ - ಎ ಸ್ಟಡಿ ಆಫ್ ಗ್ರೋಥ್ ಆಫ್ ಕಮ್ಯುನಲಿಸಂ ಇನ್ ಕೋಸ್ಟಲ್ ಕರ್ನಾಟಕ'. *ಇಂಡಿಯನ್ ಜರ್ನಲ್ ಆಫ್ ಸೆಕ್ಯುಲರಿಸಂ*, ವಾಲ್ಯೂಂ ೪, ನಂ.೧, ಏಪ್ರಿಲ್-ಜೂನ್ ೨೦೦೦, ಪು.೧-೨೭, ಲೇಖನ ನೋಡಬಹುದು.

೧೦

ಸಾರಾಂಶ

ಆರಂಭಿಕ ಸಂಶೋಧಕರ ಸಂಶೋಧನ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಈ ಪುಸ್ತಕ ರಚಿತವಾಗಿದೆ. ಸಂಶೋಧನೆ ಅಂದರೇನು? ಯಾಕೆ ಸಂಶೋಧನೆ? ಹೇಗೆ ಸಂಶೋಧನೆ? ಇತ್ಯಾದಿ ಪ್ರಶ್ನೆಗಳು ಬಹುತೇಕ ಆರಂಭಿಕ ಸಂಶೋಧಕರನ್ನು ಕಾಡುತ್ತವೆ. ಈ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲು ಈ ಪುಸ್ತಕದ ವಿವಿಧ ಅಧ್ಯಾಯಗಳಲ್ಲಿ ಪ್ರಯತ್ನಿಸಿದ್ದೇನೆ. ಸಂಶೋಧನೆಯನ್ನು ಸತ್ಯ/ವಾದದ ಪ್ರತಿಪಾದನೆಯೆಂದು ವ್ಯಾಖ್ಯಾನಿಸಿದ್ದೇನೆ. ಈಗಾಗಲೇ ಸ್ಥಾಪಿತ ಸತ್ಯ/ವಾದಗಳೊಂದಿಗೆ ಸಂವಾದ ನಡೆಸಿ ಸಂಶೋಧಕರು ತಮ್ಮ ಸತ್ಯ/ವಾದವನ್ನು ಪ್ರತಿಪಾದನೆ ಮಾಡುತ್ತಾರೆ. ಈಗಾಗಲೇ ಸ್ಥಾಪಿತ ಸತ್ಯ/ವಾದಗಳೊಂದಿಗೆ ಸಂವಾದ ನಡೆಸುವುದು ಇಲ್ಲಿ ಬಹುಮುಖ್ಯ ಅಂಶ. ಈಗಾಗಲೇ ಸ್ಥಾಪಿತ ಎಲ್ಲ ಬಗೆಯ ಸತ್ಯ/ವಾದಗಳೊಂದಿಗೆ ಸಂವಾದ ನಡೆಸಿ ಸತ್ಯ ಪ್ರತಿಪಾದನೆ ನಡೆದರೆ ಪ್ರತಿಪಾದಿತ ಸತ್ಯ ಹೆಚ್ಚು ವಸ್ತುನಿಷ್ಠ ಎನ್ನಬಹುದು. ಆದುದರಿಂದ ಇಲ್ಲಿ ವಸ್ತುನಿಷ್ಠತೆಯ ಪರೀಕ್ಷೆ ಪೊಸಿಟಿವಿಸ್ಟ್‌ಗಳು ಮುಂದಿಡುವ ಊಹೆಗಳ (ಹೈಪೋಥಿಸಿಸ್ ಟೆಸ್ಟಿಂಗ್) ಪರೀಕ್ಷೆಯಲ್ಲ. ಲೋಕಲ್ ಮತ್ತು ಗ್ಲೋಬಲ್ ಸ್ಥಾಪಿತ ಸತ್ಯಗಳೊಂದಿಗೆ ಸಂವಾದ ನಡೆಸಿ ಸತ್ಯ/ವಾದ ಪ್ರತಿಪಾದನೆ ನಡೆಸುವುದು ಇಲ್ಲಿ ವಸ್ತುನಿಷ್ಠತೆಯ ಬಹು ದೊಡ್ಡ ಪರೀಕ್ಷೆ. ಲೋಕಲ್ ಹಾಗೂ ಗ್ಲೋಬಲ್ ಸ್ಥಾಪಿತ ಸತ್ಯಗಳು ಅಧಿಕಾರವನ್ನು, ಸಂಪನ್ಮೂಲಗಳನ್ನು, ಸ್ಥಾನಮಾನಗಳನ್ನು ಸಮಾಜದ ವಿವಿಧ ವ್ಯಕ್ತಿ/ಕುಟುಂಬ/ಗುಂಪುಗಳ ನಡುವೆ ಅಸಮಾನವಾಗಿ ಹಂಚುವಲ್ಲಿ ಬಹುದೊಡ್ಡ ಪಾತ್ರವಹಿಸುತ್ತವೆ. ಸಂಪನ್ಮೂಲಗಳ, ಸ್ಥಾನಮಾನಗಳ ಅಸಮಾನ ಹಂಚುವಿಕೆಗೆ ಕಾರಣವಾಗಿರುವ ಸತ್ಯ/ವಾದಗಳನ್ನು ಅಲ್ಲಗೆಳೆದು ಹೊಸ ಸತ್ಯ/ವಾದಗಳನ್ನು ಮುಂಚೂಣಿಗೆ ತರುವುದು ಸಂಶೋಧನೆಯ ಬಹುದೊಡ್ಡ ಜವಾಬ್ದಾರಿ. ಬಹುತೇಕ ಸಂಶೋಧನೆಗಳು, ಅದರಲ್ಲೂ ಸಮಾಜ ಸಂಶೋಧನೆ, ಆಧುನಿಕ ಕ್ಷೇತ್ರದ ಸ್ಥಾಪಿತ ಸತ್ಯಗಳ ಬಗ್ಗೆ ಮಾತ್ರ ಹೆಚ್ಚಿನ ಗಮನಹರಿಸುತ್ತಿದೆ. ಆದರೆ ಲೋಕಲ್ ಸ್ಥಾಪಿತ ಸತ್ಯಗಳು ವ್ಯಕ್ತಿ/ಕುಟುಂಬಗಳ

ಬದುಕನ್ನು ಗಾಢವಾಗಿ ಕಾಡುತ್ತಿವೆ. ಆದುದರಿಂದ ಸಮಾಜ ಸಂಶೋಧನೆ ಲೋಕಲ್ ಸ್ಥಾಪಿತ ಸತ್ಯ/ವಾದಗಳನ್ನು ಗಂಭೀರವಾಗಿ ಪರಿಗಣಿಸುವುದು ಮತ್ತು ಅವುಗಳೊಂದಿಗೆ (ಲೋಕಲ್ ಸ್ಥಾಪಿತ ಸತ್ಯ/ವಾದಗಳೊಂದಿಗೆ) ಸಂವಾದ ನಡೆಸುವುದು ಅನಿವಾರ್ಯ.

ಸ್ಥಾಪಿತ ಸತ್ಯ/ವಾದಗಳನ್ನು ಅಲ್ಲಗೆಳೆದು ಹೊಸ ಸತ್ಯ/ವಾದಗಳನ್ನು ಸ್ಥಾಪಿಸಿದರೆ ಅಧಿಕಾರ, ಸಂಪನ್ಮೂಲ, ಸ್ಥಾನಮಾನಗಳ ಅಸಮಾನ ಹಂಚುವಿಕೆ ಸರಿ ಹೋಗಬಹುದೇ? ಎನ್ನುವುದು ಎರಡನೇ ಪ್ರಶ್ನೆ. ಸಂಶೋಧನೆ ಮತ್ತು ಸಾಮಾಜಿಕ ಪರಿವರ್ತನೆ ನಡುವಿನ ಸಂಬಂಧ ಮತ್ತು ಈ ಪ್ರಶ್ನೆ ನಡುವೆ ನೇರ ಸಂಬಂಧ ಇದೆ. ಸಂಶೋಧನೆ ಮತ್ತು ಸಾಮಾಜಿಕ ಪರಿವರ್ತನೆಯ ಸಂಬಂಧವನ್ನು ಈಗ ಮೂರು ಬಗೆಯಲ್ಲಿ ಕಟ್ಟಿಕೊಳ್ಳಲಾಗಿದೆ. ಒಂದು, ಸಂಶೋಧನ ಫಲಿತವನ್ನು ಅಧಿಕಾರ ಬಳಸಿಕೊಂಡು (ಅಭಿವೃದ್ಧಿ ನೀತಿಗಳ ರೂಪದಲ್ಲಿ, ಕಾರ್ಯಕ್ರಮಗಳಲ್ಲಿ, ಕಾಯ್ದೆ ಕಾನೂನುಗಳಲ್ಲಿ) ಪರಿವರ್ತನೆಗೆ ಪ್ರಯತ್ನಿಸು ವುದು, ಎರಡು, ಸಂಶೋಧನ ಫಲಿತವನ್ನು ಜನರು ಬಳಸಿಕೊಂಡು ಸಾಮಾಜಿಕ ಚಳವಳಿಗಳ ಮೂಲಕ ಪರಿವರ್ತನೆಗೆ ಪ್ರಯತ್ನಿಸುವುದು, ಮೂರು, ಈ ಎರಡರ ಮಿಶ್ರಣ ಅಂದರೆ ಸಂಶೋಧನ ಫಲಿತವನ್ನು ಅಧಿಕಾರ ಮತ್ತು ಜನರು ಬಳಸಿಕೊಂಡು ಪರಿವರ್ತನೆಗೆ ಪ್ರಯತ್ನಿಸುವುದು. ಈ ಮೂರು ಬಗೆಯ ಸಂಬಂಧವನ್ನು ಸ್ವಲ್ಪ ವಿಮರ್ಶಾತ್ಮಕವಾಗಿ ನೋಡುವ ಅಗತ್ಯವಿದೆ. ಸಂಶೋಧನ ಫಲಿತವನ್ನು ಚಾಲ್ತಿಯಲ್ಲಿಡುವ ಅಧಿಕಾರ ಬಳಸಿಕೊಂಡು ಸಾಮಾಜಿಕ ಪರಿವರ್ತನೆಗೆ ಪ್ರಯತ್ನಿಸಬೇಕಾದರೆ ಸಂಶೋಧನ ಫಲಿತಗಳು ಅಧಿಕಾರ ಪ್ರತಿಪಾದಿಸುವ ಆಸಕ್ತಿಗಳನ್ನು, ಲೋಕದೃಷ್ಟಿಗಳನ್ನು ಪ್ರತಿಪಾದಿಸಬೇಕು. ಹಲವು ಬಾರಿ ಯಾವುದೋ ಒಂದು ಸಂಶೋಧನೆಯಲ್ಲಿ ಅಡಗಿರುವ ಆಸಕ್ತಿ ಅಥವಾ ಲೋಕದೃಷ್ಟಿಗಳು ಸಾಮಾನ್ಯ ಓದುಗರಿಗೆ ಅರ್ಥವಾಗುವ ರೀತಿಯ ಸರಳವಾಗಿ ಗೋಚರವಾಗದಿರಬಹುದು. ಇವುಗಳು (ಆಸಕ್ತಿ, ಲೋಕದೃಷ್ಟಿ, ಇತ್ಯಾದಿಗಳು) ಸಂಶೋಧನೆಯ ತಾತ್ವಿಕತೆ, ಪರಿಭಾಷೆ, ಭಾಷೆ ಇತ್ಯಾದಿಗಳ ಮೂಲಕ ತಮ್ಮ ಹಿಡಿತವನ್ನು ಸಾಧಿಸುತ್ತವೆ. ತಾತ್ವಿಕತೆ, ಪರಿಭಾಷೆ, ಭಾಷೆ ಇತ್ಯಾದಿಗಳ ಸ್ಪಷ್ಟತೆ ಇಲ್ಲದೆ ನಡೆಯುವ ಸಂಶೋಧನೆಗಳಲ್ಲಿ ಈ ಬಗೆಯ ಆಸಕ್ತಿ ಅಥವಾ ಲೋಕದೃಷ್ಟಿ ಗಳು ಸ್ಪಷ್ಟವಾಗಿ ವ್ಯಕ್ತವಾಗದಿರಬಹುದು. ಇದೇ ರೀತಿಯಲ್ಲಿ ಅಧಿಕಾರ ಕೂಡ ಹಲವು ಬಾರಿ ಜ್ಞಾನ ಸೃಷ್ಟಿ ಮತ್ತು ಪರಿವರ್ತನೆ ಬಗ್ಗೆ ವಿಶೇಷ ಮಹತ್ವ ನೀಡುವುದಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಅಧಿಕಾರ ಮತ್ತು ಸಂಶೋಧನೆ ಸೃಷ್ಟಿಸುವ ಜ್ಞಾನದ ನಡುವಿನ ಸಂಬಂಧದ ಬಗ್ಗೆ ಅನುಕೂಲಸ್ಥರಿಗೆ, ರಾಜಕೀಯ ಪಕ್ಷಗಳಿಗೆ, ಮಠಮಂದಿರಗಳಿಗೆ ಸ್ಪಷ್ಟತೆ ಇದೆ. ಇದರಿಂದಾಗಿ ಇವರುಗಳು ತಮ್ಮ ತಮ್ಮ ಆಸಕ್ತಿಗಳನ್ನು ಪ್ರತಿನಿಧಿಸುವ ಜ್ಞಾನವನ್ನು ಮಾತ್ರ ಮುಂಚೂಣಿಗೆ ತರುತ್ತಾರೆ. ಆದುದರಿಂದ ಸಂಶೋಧನೆ ಉತ್ಪಾದಿಸುವ ಜ್ಞಾನವನ್ನು ಅಧಿಕಾರ ಬಳಸಿಕೊಂಡು ಸಾಮಾಜಿಕ ಪರಿವರ್ತನೆಗೆ ಪ್ರಯತ್ನಿಸುವ ಸಾಧ್ಯತೆಗಳು ಇದ್ದರೂ ಅದು ಈಗಾಗಲೇ ಸ್ಥಾಪಿತ

ವಾದ ಅಧಿಕಾರ, ಸ್ಥಾನಮಾನ ಇತ್ಯಾದಿಗಳನ್ನು ವಿಶೇಷವಾಗಿ ಪ್ರಭಾವಿಸದೆ ಇದ್ದರೆ ಮಾತ್ರ ಉತ್ಪಾದಿತ ಜ್ಞಾನವನ್ನು ಅಧಿಕಾರ ಬಳಸಿಕೊಳ್ಳುವ ಸಾಧ್ಯತೆ ಇದೆ.

ಸಂಶೋಧನ ಫಲಿತವನ್ನು ಜನರು ಬಳಸಿಕೊಂಡು (ಚಳವಳಿ, ಸಂಘಟನೆ, ರಾಜಕೀಯ ಇತ್ಯಾದಿಗಳ ಮೂಲಕ) ಸಾಮಾಜಿಕ ಪರಿವರ್ತನೆಗೆ ಪ್ರಯತ್ನಿಸುವುದು ಎರಡನೇ ದಾರಿ. ಈ ಗುರಿ ಸಾಧನೆಯಾಗಬೇಕಾದರೆ ಸಂಶೋಧಿತ ಜ್ಞಾನ ಜನಸಾಮಾನ್ಯರ ಪ್ರಜ್ಞೆಯ ಭಾಗವಾಗಬೇಕು. ಆದರೆ ಈಗಿನ ಸಂಶೋಧನ ಪ್ರಕ್ರಿಯೆ ಸಮಾಜ/ಅರ್ಥ/ರಾಜಕೀಯ ಸಂಬಂಧಗಳನ್ನು ಹೊಸ ಬಗೆಯಲ್ಲಿ ರೂಪಿಸಿಕೊಳ್ಳಲು ಪೂರಕವಾಗುವ ವಿಚಾರಗಳನ್ನು ಕೊಡುವುದಕ್ಕೆ ತನ್ನ ಜವಾಬ್ದಾರಿಯನ್ನು ಸೀಮಿತಗೊಳಿಸಿದಂತೆ ಕಾಣುತ್ತದೆ. ಹೊಸ ವಿಚಾರಗಳನ್ನು ಕೊಟ್ಟ ಕೂಡಲೇ ಸಮಾಜ ಹೊಸ ಬಗೆಯಲ್ಲಿ ನಿರ್ಮಾಣವಾಗುವುದಿಲ್ಲ. ಹೊಸ ಸಮಾಜ ನಿರ್ಮಾಣವಾಗಬೇಕಾದರೆ ಅವುಗಳಿಗೆ (ಸಂಶೋಧಕರು ಪ್ರತಿಪಾದಿಸುವ ಹೊಸ ಸಾಮಾಜಿಕ/ಆರ್ಥಿಕ/ರಾಜಕೀಯ ಸಂಬಂಧಗಳಿಗೆ) ಜನರ ಬೆಂಬಲ ಅಥವಾ ಒಪ್ಪಿಗೆ ಬೇಕು ಮತ್ತು ಸಂಪನ್ಮೂಲ ಕೂಡ ಬೇಕು. ಇವುಗಳನ್ನು-ಜನರ ಒಪ್ಪಿಗೆ ಮತ್ತು ಸಂಪನ್ಮೂಲಗಳನ್ನು - ಕ್ರೋಢೀಕರಿಸುವ ಕುರಿತು ಸಮಾಜ ಅಧ್ಯಯನಕಾರರು ಹೊಸ ಬಗೆಗಳನ್ನು ಶೋಧಿಸಬೇಕು. ಮೇಲಿನ ಎರಡೂ ವಿಚಾರಗಳನ್ನು-ಹೊಸ ಸಮಾಜ/ಅರ್ಥ/ರಾಜಕೀಯದ ವಿಚಾರ ಮತ್ತು ಅದಕ್ಕೆ ಜನರ ಒಪ್ಪಿಗೆ ಪಡೆಯುವ ಮತ್ತು ಸಂಪನ್ಮೂಲ ಕ್ರೋಢೀಕರಿಸುವ ಹೊಸ ವಿಧಾನಗಳಿಗೆ ಸಂಬಂಧಿಸಿದ ವಿಚಾರಗಳನ್ನು-ಜನರು ತಮ್ಮದಾಗಿಸಿಕೊಳ್ಳಲು ಪೂರಕವಾಗುವ ಅಥವಾ ಜನರ ಪ್ರಜ್ಞೆಯ ಭಾಗವಾಗಿಸುವ ವಿವಿಧ ಮಾರ್ಗಗಳನ್ನು ಕೂಡ ಸಮಾಜ ಅಧ್ಯಯನಕಾರರು ಶೋಧಿಸಬೇಕು. ಆದರೆ ಈ ಕ್ಷೇತ್ರದಲ್ಲಿ ಬಾರಿ ದೊಡ್ಡ ಸೋಲನ್ನು ಸಮಾಜ ಸಂಶೋಧನೆ ಅನುಭವಿಸುತ್ತಿದೆ. ಇದು ಕೇವಲ ಥಿಯರಿ ಅಥವಾ ವೈಧಾನಿಕತೆ ಅಥವಾ ಭಾಷೆಯ ಸಮಸ್ಯೆಯಲ್ಲ. ಜ್ಞಾನ ಉತ್ಪಾದನೆಯ ಸಾಂಸ್ಥಿಕ ಚೌಕಟ್ಟುಗಳ ಶ್ರೇಣಿಕೃತ ಇರುವಿಕೆ ಮತ್ತು ಜ್ಞಾನವನ್ನು ಜನರತ್ತ ಒಯ್ಯುವ ಸಂಸ್ಥೆಗಳ ಮತ್ತು ಮಾಧ್ಯಮಗಳ ಹತೋಟಿಯ ಪ್ರಶ್ನೆ ಇಲ್ಲಿ ದೊಡ್ಡ ಭೂಮಿಕೆ ನಿಭಾಯಿಸುತ್ತಿವೆ. ಜ್ಞಾನ ಉತ್ಪಾದನೆಗೂ ಆಸಕ್ತಿಗಳಿಗೂ ಇರುವ ನೇರ ಸಂಬಂಧ ಕುರಿತು ಹಿಂದಿನ ಅಧ್ಯಾಯಗಳಲ್ಲಿ ಸಾಕಷ್ಟು ಚರ್ಚಿಸಿದ್ದೇವೆ. ಈ ಸಂಬಂಧ ಸಂಶೋಧನೆಗೆ ಹಲವಾರು ಒಪ್ಪಿತ ಚೌಕಟ್ಟುಗಳ ಸೃಷ್ಟಿಗೆ ಮತ್ತು ಅವುಗಳ ಶ್ರೇಣಿಕೃತ ಇರುವಿಕೆಗೆ ಕಾರಣವಾಗಿದೆ. ಇದೇ ರೀತಿಯಲ್ಲಿ ಜ್ಞಾನ ಉತ್ಪಾದನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು ನಮ್ಮಲ್ಲಿ ಬಹುತೇಕರಿಗೆ ಅವರ ಭೌತಿಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಒಂದು ಮಾರ್ಗ ಕೂಡ ಆಗಿದೆ. ಆದುದರಿಂದ ಬಹುತೇಕರು ಹೆಚ್ಚು ಭೌತಿಕ ಸವಲತ್ತುಗಳನ್ನು ಕೊಡಬಹುದಾದ ಜ್ಞಾನ ಉತ್ಪಾದನೆಯ ಸಾಂಸ್ಥಿಕ ಚೌಕಟ್ಟುಗಳೊಂದಿಗೆ ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇದು ಸಾಧ್ಯವಾಗಬೇಕಾದರೆ

ಯಜಮಾನಿಕೆಯಲ್ಲಿರುವ (ಅಧಿಕಾರಸ್ಥರ) ಥಿಯರಿ, ವಿಧಾನ, ಪರಿಭಾಷೆ ಇತ್ಯಾದಿಗಳನ್ನು ಜೀರ್ಣಿಸಿಕೊಳ್ಳುವುದು ಅನಿವಾರ್ಯ. ಇದರ ಪರಿಣಾಮವಾಗಿ ಒಬ್ಬ ಉತ್ತಮ ಸಮಾಜ ಸಂಶೋಧಕರೆಂದು ಗುರುತಿಸಿಕೊಳ್ಳಬೇಕಾದರೆ ಅವರು ಪ್ರತಿಷ್ಠಿತ ಸಂಶೋಧಕರಿಂದ (ರಿಸರ್ಚ್ ಕಮ್ಯುನಿಟಿಯಿಂದ) ಗುರುತಿಸಿಲ್ಪಟ್ಟರೆ ಸಾಕು. ಯಾವ ಸಮಾಜವನ್ನು ಅಧ್ಯಯನ ಮಾಡುತ್ತಾರೋ ಆ ಸಮಾಜ ಮತ್ತು ಅಲ್ಲಿನ ಜನರು ಅಧ್ಯಯನಕಾರರನ್ನು ಗುರುತಿಸುವ ಅಗತ್ಯವಿಲ್ಲ. ಹೀಗೆ ಸಮಾಜ ಅಧ್ಯಯನಕಾರರಿಗೆ ಯುನಿವರ್ಸಲ್‌ನೊಂದಿಗೆ ಗುರುತಿಸಿಕೊಳ್ಳುವುದು ಅನಿವಾರ್ಯವಾಗುತ್ತದೆಯೇ ಹೊರತು ಸ್ಥಳೀಯ ಪರಿಸರದೊಂದಿಗೆ ಗುರುತಿಸಿಕೊಳ್ಳುವುದು (ಅಂದರೆ ಅಧ್ಯಯನಕಾರರಾಗಿ) ಅನಿವಾರ್ಯವಾಗುವುದಿಲ್ಲ. ಹೀಗಾಗಿ ತಮ್ಮ ಪರಿಸರವನ್ನು ಅರ್ಥಮಾಡಿಕೊಳ್ಳಲು ಪೂರಕವಾಗುವ ತಮ್ಮದೇ ಕೆಟಗರಿಗಳನ್ನು ಸೃಷ್ಟಿಸಿಕೊಳ್ಳುವುದು ಸಮಾಜ ಅಧ್ಯಯನಕಾರರಿಗೆ ಬಹುದೊಡ್ಡ ಚಾಲೆಂಜ್ ಆಗಿದೆ.

ಸಂಶೋಧನೆಯಿಂದ ಉತ್ಪಾದಿತ ಜ್ಞಾನ ಹಲವಾರು ಮಾರ್ಗಗಳ ಮೂಲಕ ಸಮಾಜದ ವಿವಿಧ ವರ್ಗಗಳನ್ನು ತಲುಪುತ್ತದೆ. ಶೈಕ್ಷಣಿಕ ಸಂಸ್ಥೆಗಳು, ಪಾಲಿಸಿ ಪರ ಲಾಬಿ ಮಾಡುವ ಸಂಸ್ಥೆಗಳು, ಸರಕಾರಿ ಸಂಸ್ಥೆಗಳು, ಸರಕಾರೇತರ ಸಂಸ್ಥೆಗಳು, ವಿವಿಧ ಚಳವಳಿಗಳು, ರಾಜಕೀಯ ಪಕ್ಷಗಳು, ಸಿವಿಲ್ ಸೊಸೈಟಿ ಸಂಘಟನೆಗಳು, ಅಧ್ಯಯನ ಪತ್ರಿಕೆಗಳು, ವಿಚಾರ ಸಂಕಿರಣ, ಕಮ್ಮಟ, ಪ್ರೆಸ್ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮ ಇತ್ಯಾದಿಗಳ ಮೂಲಕ ಉತ್ಪಾದಿತ ಜ್ಞಾನ ಜನರನ್ನು ತಲುಪುತ್ತದೆ. ಇವುಗಳಲ್ಲಿ ಕೆಲವು ಸಾರ್ವಜನಿಕ (ಘೋಷಿತ) ಹಿತಾಸಕ್ತಿಗಳಿಗಾಗಿ ಹಾಗೂ ಸಂಪನ್ಮೂಲಗಳ ಮೂಲಕ ನಡೆದರೆ ಇನ್ನು ಕೆಲವು ಖಾಸಗಿ ಹಿತಾಸಕ್ತಿ ಹಾಗೂ ಸಂಪನ್ಮೂಲಗಳ ಮೂಲಕ ನಡೆಯುತ್ತಿವೆ. ಖಾಸಗಿ ಸಂಪನ್ಮೂಲಗಳಿಂದ ಹುಟ್ಟಿಕೊಳ್ಳುವ ಸಂಸ್ಥೆಗಳು ಹಾಗೂ ಮಾಧ್ಯಮಗಳು ಖಂಡಿತವಾಗಿಯೂ ಖಾಸಗಿ ಆಸಕ್ತಿಗಳನ್ನು ಪ್ರತಿನಿಧಿಸುವ ಜ್ಞಾನವನ್ನು ಹೆಚ್ಚು ಹೆಚ್ಚು ಜನರತ್ತ ಒಯ್ಯಬಹುದು. ಸಮಸ್ಯೆಯಿರುವುದು ಸಾರ್ವಜನಿಕ ಸಂಪನ್ಮೂಲಗಳಿಂದ ಸೃಷ್ಟಿಯಾದ ಸಂಸ್ಥೆಗಳು ಜ್ಞಾನವನ್ನು ಒಯ್ಯುವುದರ ಕುರಿತು. ಇವುಗಳು ತಾತ್ವಿಕವಾಗಿ ಸಂವಿಧಾನದಲ್ಲಿ ಹೇಳಿರುವ ಸಮಾಜವನ್ನು ರೂಪಿಸಲು ಪೂರಕವಾದ ಜ್ಞಾನವನ್ನು ಉತ್ಪಾದಿಸಬೇಕು ಮತ್ತು ಜನರತ್ತ ಒಯ್ಯಬೇಕು. ಆದರೆ ನಮ್ಮಂತಹ ಬಹುರೂಪಿ ಸಮಾಜದಲ್ಲಿ ಇಂತಹ ಸಂಸ್ಥೆಗಳು ಕಾರ್ಯರೂಪಕ್ಕೆ ಬರುವಾಗ ಅವುಗಳ ಮೂಲ ಉದ್ದೇಶಗಳು ಮತ್ತು ಅವುಗಳ ಕಾರ್ಯ ನಿರ್ವಹಣೆ ನಡುವೆ ಸಾಕಷ್ಟು ಅಂತರ ಸೃಷ್ಟಿಯಾಗುವ ಸಾಧ್ಯತೆಗಳಿವೆ. ಸಮಾಜದಲ್ಲಿರುವ ಎಲ್ಲ ಗುಣಲಕ್ಷಣಗಳು ಈ ಸಂಸ್ಥೆಗಳಲ್ಲೂ ಪ್ರತಿಫಲಿತವಾಗುತ್ತವೆ. ಬಹುತೇಕ ಸಂಸ್ಥೆ ಗಳಲ್ಲಿ ಅವುಗಳ ಆರಂಭಿಕ ಹಂತದಲ್ಲಿ ಸ್ಥಳೀಯ ಮೇಲ್ವರ್ಗಗಳು ದೊಡ್ಡ ಸಂಖ್ಯೆಯಲ್ಲಿದ್ದುದರಿಂದ ಸಹಜವಾಗಿ ಅವರುಗಳ ಮೌಲ್ಯಗಳೇ ಸಂಸ್ಥೆಯ ಮೌಲ್ಯಗಳಾಗಿ ಪರಿವರ್ತಿತಗೊಂಡ ಉದಾಹರಣೆಗಳು

ಸಾಕಷ್ಟಿವೆ. ಮೀಸಲಾತಿ, ಸಾಮಾಜಿಕ ನ್ಯಾಯ ಇತ್ಯಾದಿ ಕಾರಣಗಳಿಗಾಗಿ ತಳಸ್ತರದ ಜನರು ಸಾಕಷ್ಟು ಪ್ರಮಾಣದಲ್ಲಿ ಇಂತಹ ಸಂಸ್ಥೆಗಳಲ್ಲಿ ಅವಕಾಶ ಪಡೆದಿರಬಹುದು. ಆದರೆ ಈ ಬಗೆಯಲ್ಲಿ ಅವಕಾಶ ಪಡೆದ ತಳಸ್ತರದ ಜನರು ತಮ್ಮ ತಕ್ಷಣದ ಸಮಸ್ಯೆಗಳ ಪರಿಹಾರಕ್ಕೆ ಹೆಚ್ಚಿನ ಆದ್ಯತೆ ಕೊಡುವುದರಿಂದ ಸಂಸ್ಥೆಯ ಮೌಲ್ಯಗಳನ್ನು ಪರಿವರ್ತಿಸುವುದಕ್ಕೆ ವಿಶೇಷ ಗಮನ ಕೊಡದಿರುವ ಸಾಧ್ಯತೆನೂ ಇದೆ. ಇದರಿಂದಾಗಿ ಬಹುತೇಕ ಸಂದರ್ಭದಲ್ಲಿ ಸಂಸ್ಥೆಯೊಳಗಿನ ವ್ಯವಹಾರಗಳು ಸಂಸ್ಥೆಗಳ ಮೂಲ ಧ್ಯೇಯೋದ್ದೇಶಗಳಿಗಿಂತ ಭಿನ್ನವಾಗಿ ನಡೆಯುತ್ತಿರಬಹುದು. ಎಷ್ಟೋ ಸಂದರ್ಭಗಳಲ್ಲಿ ಜ್ಞಾನ ಉತ್ಪಾದಿಸುವವರ ದಿನನಿತ್ಯದ ಬದುಕು ಮತ್ತು ಅವರು ತಮ್ಮ ಸಂಶೋಧನೆ, ಬರಹ ಇತ್ಯಾದಿಗಳಲ್ಲಿ ಪ್ರತಿಪಾದಿಸುವ ಮೌಲ್ಯಗಳಿಗು ಸಂಬಂಧನೇ ಇಲ್ಲದ ಸ್ಥಿತಿ ಇರಬಹುದು. ಜ್ಞಾನ ಉತ್ಪಾದಿಸುವವರನ್ನು ಹತ್ತಿರದಿಂದ ನೋಡುವವರು ಇಂತಹ ಇಬ್ಬಂದಿತದಿಂದ ರೋಸಿ ಇಂತವರು ಸೃಷ್ಟಿಸುವ ಜ್ಞಾನವನ್ನು ಗಂಭೀರವಾಗಿ ಪರಿಗಣಿಸದಿರಬಹುದು. ಇನ್ನು ದೂರ ಇರುವವರನ್ನು ಉತ್ಪಾದಿತ ಜ್ಞಾನ ವಿವಿಧ ಮಾಧ್ಯಮಗಳ ಮೂಲಕ ತಲುಪಬೇಕಾಗಿದೆ. ಬಹುತೇಕ ಮಾಧ್ಯಮಗಳು ಇಂದು ಕಮರ್ಶಿಯಲ್ ಆಗಿ ವ್ಯವಹರಿಸುವುದು ಸಹಜವಾಗಿದೆ. ಇಂತಹ ಮಾಧ್ಯಮಗಳು ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆ ಇರುವುದಕ್ಕೆ (ಕೆಲವು ಬಾರಿ ತಾವೇ ಸೃಷ್ಟಿಸಿದ ಬೇಡಿಕೆಗೆ) ಹೆಚ್ಚಿನ ಆದ್ಯತೆ ಕೊಡುತ್ತವೆ. ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ಸಂಗತಿಗಳು ಜನಸಾಮಾನ್ಯರ ಹಿತಾಸಕ್ತಿಗಳಿಗೆ ಪೂರಕವಾಗಿವೆ ಎನ್ನಲಾಗುವುದಿಲ್ಲ. ಹೀಗೆ ಸಂಶೋಧನೆ ಮತ್ತು ಸಾಮಾಜಿಕ ಪರಿವರ್ತನೆ ಸಂಬಂಧ ಸರಳ ಮತ್ತು ಸ್ಪಷ್ಟ ರೂಪದಲ್ಲ; ಅಮೂರ್ತರೂಪದ್ದು ಮತ್ತು ಸಂಕೀರ್ಣವಾದದ್ದು.

ಸಾಮಾಜಿಕ ಪರಿವರ್ತನೆಗೆ ಪೂರಕವಾಗುವ ಸಂಶೋಧನೆಯನ್ನು ಹೇಗೆ ಮಾಡಬೇಕೆನ್ನುವ ವಿಚಾರ - ಸಮಸ್ಯೆ ಆಯ್ಕೆಯಿಂದ ಪ್ರಬಂಧ ರಚನೆ ತನಕ ಹಲವಾರು ಅಂಶಗಳನ್ನು ಒಳಗೊಂಡಿವೆ. ಇವುಗಳನ್ನು ಪುಸ್ತಕದ ನಾಲ್ಕು, ಐದು, ಆರು, ಏಳು ಮತ್ತು ಎಂಟನೇ ಅಧ್ಯಾಯಗಳಲ್ಲಿ ವಿವರಿಸಿದ್ದೇನೆ. ವಿಷಯ ಆಯ್ಕೆಗೆ ಸಂಬಂಧಿಸಿದ ಚರ್ಚೆಯಲ್ಲಿ ಯಾವ ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕೆನ್ನುವುದಕ್ಕಿಂತ ಹೇಗೆ ಸಂಶೋಧನಾ ವಿಷಯ ಆಯ್ಕೆ ಮಾಡಿಕೊಳ್ಳಬೇಕು ಎನ್ನುವ ವಿಚಾರಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಸಂಶೋಧಕರ ಸಮಸ್ಯೆಯೇ ಸಂಶೋಧನಾ ವಿಷಯವಾದರೆ ಅಥವಾ ವಿಷಯದೊಂದಿಗೆ ಸಂಶೋಧಕರು ಗುರುತಿಸಿಕೊಂಡರೆ ಸಂಶೋಧನೆ ಉತ್ತಮವಾಗಬಹುದೆಂಬ ನಿಲುವನ್ನು ಪುಸ್ತಕ ತಾಳುತ್ತದೆ. ಇದೇ ಸಂದರ್ಭದಲ್ಲಿ ಸಂಶೋಧನ ವಿಷಯ ಮತ್ತು ಸಂಶೋಧಕರ ನಡುವೆ ಅಂತರ ಇರಬೇಕು ಎನ್ನುವ ನಿಲುವು ಕೂಡ ಮಹತ್ವ ಪಡೆದಿದೆ. ಈ ನಿಲುವು (ಅಂತರವನ್ನು ಬಯಸುವ ನಿಲುವು) ವಿಜ್ಞಾನದ ವಿಧಾನದಿಂದ ಬಂದಿದೆ. ಹಾಗೆಂದು ಅದನ್ನು

ಸಾರಾಸಗಟಾಗಿ ತಿರಸ್ಕರಿಸುವಂತಿಲ್ಲ. ಯಾಕೆಂದರೆ ಜ್ಞಾನ ಸಂಪಾದನೆಯ ಕಾರ್ಯದಲ್ಲಿ ತೊಡಗಿದವರು ವಿವಿಧ ಸಮುದಾಯ ಹಾಗೂ ವರ್ಗಗಳ ಹಿನ್ನೆಲೆಯಿಂದ ಬಂದಿರುತ್ತಾರೆ. ಅವರು ತಮ್ಮ ಸಮುದಾಯ ಅಥವಾ ವರ್ಗ ಆಸಕ್ತಿಯನ್ನು ಸಕ್ರಿಯವಾಗಿಟ್ಟುಕೊಂಡು ಸಂಪಾದಿಸುವ ಜ್ಞಾನ ಪಕ್ಷಪಾತಿಯಾಗಿರುವ ಸಾಧ್ಯತೆ ಇದೆ. ಪಕ್ಷಪಾತಿಯಾದ ಜ್ಞಾನ ಸಮಗ್ರತೆಯ ಒಳಿತಿನ ದೃಷ್ಟಿಯಿಂದ ಉಪಯೋಗವಿಲ್ಲ. ಆ ಕಾರಣಕ್ಕಾಗಿ ಜ್ಞಾನ ಸಂಪಾದನೆಗೆ ಒಂದು ವಿಧದ ಐಸೋಲೇಶನ್ ಅಗತ್ಯ ಇದೆ ಎನ್ನುವ ವಾದಕ್ಕೂ ಮಹತ್ವ ಇದೆ. ಸಂಶೋಧಕರು ಮತ್ತು ವಿಷಯದ ಸಂಬಂಧ ಕುರಿತ ವಾಗ್ವಾದಕ್ಕೆ ಪರಿಹಾರವನ್ನು ವೇಬರನ ಸೂತ್ರದಲ್ಲಿ ಕಂಡುಕೊಳ್ಳಲಾಗಿದೆ. ಆತನ ಸೂತ್ರ ಪ್ರಕಾರ ಸಂಶೋಧನೆಯ ಮೊದಲ ಮತ್ತು ಕೊನೆಯ ಹಂತದಲ್ಲಿ ಸಂಶೋಧಕರು ವಿಷಯದೊಂದಿಗೆ ಗುರುತಿಸಿಕೊಂಡರೆ ತೊಂದರೆಯಿಲ್ಲ. ಆದರೆ ಮಾಹಿತಿ ಸಂಗ್ರಹ ಮತ್ತು ವಿಶ್ಲೇಷಣಾ ಸಂದರ್ಭದಲ್ಲಿ ಅಥವಾ ಎರಡನೇ ಹಂತದಲ್ಲಿ ವಸ್ತುನಿಷ್ಠವಾಗಿರುವುದು ಅಗತ್ಯ. ಸಂಶೋಧನಾ ವಿಷಯ ಆಯ್ಕೆ ಸಂದರ್ಭದಲ್ಲಿ ಸಮಯ, ಹಣಕಾಸು ಜತೆಗೆ ಅಂಕಿ ಅಂಶಗಳ ಅಥವಾ ಮಾಹಿತಿ ಲಭ್ಯತೆಯನ್ನು ಕೂಡ ಪರಿಗಣಿಸಬೇಕೆಂದು ತಿಳಿಸಲಾಗಿದೆ.

ಸಮಸ್ಯೀಕರಣ ಅಧ್ಯಾಯದಲ್ಲಿ ಯಾಕೆ ಸಮಸ್ಯೀಕರಿಸಬೇಕು ಎನ್ನುವ ವಿಚಾರದ ಮೇಲೆ ಹೆಚ್ಚಿನ ಗಮನ ಹರಿಸಲಾಗಿದೆ. ಹಲವಾರು ಕಲ್ಪಿತ ಅಥವಾ ರಚಿತ ಸಿದ್ಧಾಂತಗಳು ಮತ್ತು ನಂಬಿಕೆಗಳು ಮಾನವನ ನಡುವೆ ಕಂದರಗಳನ್ನು ಸೃಷ್ಟಿಸಿವೆ. ಹಲವಾರು ಶತಮಾನ ಗಳಿಂದ ಅವುಗಳನ್ನು ನಂಬಿಕೊಂಡು ಬಂದಿರುವುದರಿಂದ ಅಥವಾ ಪ್ರಶ್ನಿಸದೆ ಆಚರಿಸಿಕೊಂಡು ಬಂದಿರುವುದರಿಂದ ಅವುಗಳು ಒಂದು ಬಗೆಯ ಪ್ರಾಕೃತಿಕ ಸತ್ಯದ ಸ್ಥಾನವನ್ನು ಪಡೆದಿವೆ. ಪ್ರಾಕೃತಿಕ ಸತ್ಯಗಳನ್ನು ಒಪ್ಪಿಕೊಳ್ಳುವುದು ಬಿಟ್ಟರೆ ಬೇರೆ ದಾರಿನೇ ಇಲ್ಲ ಎನ್ನುವ ಸ್ಥಿತಿ ಇದೆ. ಸೂರ್ಯ ಪೂರ್ವದಲ್ಲಿ ಉದಯಿಸುವುದು ಅಥವಾ ಭೂಮಿ ಸೂರ್ಯನ ಸುತ್ತ ತಿರುಗುವುದು ಇತ್ಯಾದಿಗಳನ್ನು ಒಪ್ಪಿಕೊಳ್ಳದೆ ಬೇರೆ ದಾರಿನೇ ಇಲ್ಲ. ಹಲವಾರು ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳು ಮತ್ತು ನಂಬಿಕೆಗಳು ಹೆಚ್ಚು ಕಡಿಮೆ ಇದೇ ಸ್ಥಾನವನ್ನು ಪಡೆದಿವೆ. ಮಹಿಳೆ ಪುರುಷನಿಗಿಂತ ಕೆಳಗಿನ ಸ್ಥಾನದಲ್ಲಿರುತ್ತಾಳೆ, ದಲಿತ ಸಮಾಜದ ಅಂಚಿನಲ್ಲಿರಬೇಕಾದವ, ಅಲ್ಪಸಂಖ್ಯಾತರು ನಮ್ಮವರಲ್ಲ, ಸಮಾಜದಲ್ಲಿ ಏಣಿಶ್ರೇಣಿ ಇರುವುದು ಸಹಜ ಇತ್ಯಾದಿ ವಿಚಾರಗಳು ಒಂದು ಬಗೆಯ ಸರ್ವಸತ್ಯದ ರೂಪು ಪಡೆದಿವೆ. ಆದುದರಿಂದ ಆ ನಂಬಿಕೆಗಳ ಅನುಸಾರ ಸಾಮಾಜಿಕ ವ್ಯವಹಾರ ನಡೆಯುವುದು ಸಹಜವಾಗುತ್ತದೆ. ಇದೊಂದು ಪ್ರಶ್ನಿಸಬೇಕಾದ ಅಥವಾ ಸಮಸ್ಯೀಕರಿಸಬೇಕಾದ ವಿಚಾರಗಳೆಂದು ಅನ್ನಿಸುವುದೇ ಇಲ್ಲ. ಇವುಗಳು ಸಹಜ ಅಲ್ಲ, ಇವುಗಳು ಪ್ರಾಕೃತಿಕ ಸತ್ಯಗಳಲ್ಲ ಎಂದಾಗಬೇಕಾದರೆ ಈ ಎಲ್ಲವನ್ನು ಪ್ರಶ್ನಿಸಬೇಕಾಗುತ್ತದೆ. ಈ ಎಲ್ಲ ಕಾರಣಗಳಿಗಾಗಿ ಸಮಸ್ಯೆ ಅಥವಾ ಸಮಸ್ಯೀಕರಣ ಸಂಶೋಧನೆ ಮತ್ತು ಸಂಶೋಧನ ಪ್ರಸ್ತಾವದ ಅಡಿಪಾಯವಾಗಬೇಕೆಂದು

ವಾದಿಸಿದ್ದೇನೆ. ಈಗಾಗಲೇ ಆಗಿರುವ ಅಧ್ಯಯನಗಳಲ್ಲಿ ಸಂಶೋಧನ ವಿಷಯದ ಮೇಲೆ ಕೇಳಿದ ಮುಖ್ಯ ಪ್ರಶ್ನೆಗಳು? ಆ ಪ್ರಶ್ನೆಗಳಿಗೆ ಪಡೆದ ಉತ್ತರಗಳು? ಆ ಉತ್ತರಗಳ ಬಗ್ಗೆ ಸಂಶೋಧಕರ ನಿಲುವು? ಒಂದು ವೇಳೆ ಸಂಶೋಧಕರು ಆ ಉತ್ತರಗಳನ್ನು ತಿರಸ್ಕರಿಸುವುದಾದರೆ ಕಾರಣಗಳು? ಸಂಶೋಧಕರು ಇದೇ ಪ್ರಶ್ನೆಯನ್ನು ಬೇರೆ ಯಾವ ದೃಷ್ಟಿಯಿಂದ ನೋಡಲಿಚ್ಛಿಸುತ್ತಾರೆ? ಇತ್ಯಾದಿ ಪ್ರಶ್ನೆಗಳನ್ನು ಕೇಳುವ ಕೆಲಸವನ್ನು ಸಮಸ್ಯೀಕರಣದ ಹಂತದಲ್ಲಿ ಮಾಡಲಾಗುವುದು. ಸಮಸ್ಯೀಕರಣ ಹಂತದಲ್ಲಿ ಎತ್ತಿದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಅಥವಾ ಸಂಶೋಧನ ವಿಷಯದ ಯಾವೆಲ್ಲ ಮಗ್ಗುಲುಗಳನ್ನು ಪರೀಕ್ಷಿಸಲು ಪ್ರಸಕ್ತ ಸಂಶೋಧನೆ ಪ್ರಯತ್ನಿಸುತ್ತದೆ ಎನ್ನುವುದನ್ನು ಅಧ್ಯಯನ ಉದ್ದೇಶಗಳು ತಿಳಿಸುತ್ತವೆ. ಅಧ್ಯಯನ ಉದ್ದೇಶಗಳು ಅಧ್ಯಯನ ಊಹೆಗಳನ್ನು ನಿರ್ಧರಿಸುತ್ತವೆ ಎನ್ನಲಾಗಿದೆ. ಉದ್ದೇಶಗಳು ಸಂಶೋಧಕರು ಏನನ್ನು ಮಾಡಲು ಹೊರಟಿದ್ದಾರೆ ಎಂದು ತಿಳಿಸಿದರೆ ಊಹೆಗಳು ಅಧ್ಯಯನಕ್ಕೆ ಮುನ್ನವೇ ಅಧ್ಯಯನ ನಂತರ ಬರುವ ತೀರ್ಮಾನಗಳನ್ನು ಹೇಳುತ್ತವೆ. ಆದುದರಿಂದಲೇ ಊಹೆಗಳನ್ನು ಪೂರ್ವತೀರ್ಮಾನಗಳೆಂದು ಹೇಳುವುದು. ಅಧ್ಯಯನ ಉದ್ದೇಶಗಳು ಊಹೆಗಳನ್ನು ಮಾತ್ರ ನಿರ್ಧರಿಸುವುದಿಲ್ಲ; ಅಧ್ಯಯನ ವಿಧಾನಗಳನ್ನು ಕೂಡ ನಿರ್ಧರಿಸುತ್ತವೆ. ಉದ್ದೇಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಯಾವ ಮೂಲದಿಂದ ಮತ್ತು ಯಾವ ವಿಧಾನಗಳಿಂದ ಸಂಗ್ರಹಿಸಲಾಗುವುದು ಮತ್ತು ಸಂಗ್ರಹಿಸಲಾದ ಮಾಹಿತಿಯನ್ನು ಹೇಗೆ ವಿಶ್ಲೇಷಿಸಲಾಗುವುದು ಇತ್ಯಾದಿ ವಿವರಗಳನ್ನು ಅಧ್ಯಯನ ವಿಧಾನದಲ್ಲಿ ನೀಡಬೇಕಾಗಿದೆ.

ಈಗಾಗಲೇ ಮಂಡಿತವಾದ ವಾದಗಳ ಸಂಗ್ರಹದ ಜತೆಗೆ ಹೊಸ ಸಾಕ್ಷಿ ಪುರಾವೆಗಳ ಸಂಗ್ರಹ ವಾದ ಪ್ರತಿಪಾದನೆಗೆ ಅಗತ್ಯ. ಈಗಾಗಲೇ ಮಂಡಿತವಾದ ವಾದಗಳು ಹಲವು ರೂಪದಲ್ಲಿರುತ್ತವೆ. ಲೇಖನ, ಪುಸ್ತಕ, ಪ್ರಬಂಧ, ವರದಿ ಇತ್ಯಾದಿ ಬರಹ ರೂಪದಲ್ಲಿರಬಹುದು ಮತ್ತೆ ಕೆಲವು ಮೌಖಿಕ ರೂಪದಲ್ಲಿರಬಹುದು. ಈ ಮೂಲಗಳಿಂದ ಮಾಹಿತಿ ಸಂಗ್ರಹಿಸುವಾಗ ಅನುಸರಿಸಬೇಕಾದ ಕೆಲವು ಎಚ್ಚರಿಕೆಗಳನ್ನು ಅಧ್ಯಾಯದಲ್ಲಿ ಕೊಡಲಾಗಿದೆ. ಈ ಎಲ್ಲ ಎಚ್ಚರಿಕೆಗಳ ಮುಖ್ಯ ಉದ್ದೇಶ ವಿವಿಧ ಮೂಲಗಳಲ್ಲಿ ಮಂಡಿತವಾದ ವಾದಗಳ ಸಾಚಾತನವನ್ನು ಪರೀಕ್ಷಿಸುವುದು. ವ್ಯಕ್ತಿಗಳು, ಸಂಸ್ಥೆಗಳು, ಪಕ್ಷಗಳು ಪ್ರಕಟಿಸುವ ವರದಿಗಳು ಬಹುತೇಕ ಸಂದರ್ಭದಲ್ಲಿ ಅವುಗಳ ಸಕರಾತ್ಮಕ ಅಂಶಗಳನ್ನು ಮಾತ್ರ ವರದಿ ಮಾಡಿ ನಕರಾತ್ಮಕ ಅಂಶಗಳನ್ನು ಬಚ್ಚಿಡುವ ಸಾಧ್ಯತೆಗಳಿವೆ. ಇದೇ ರೀತಿಯಲ್ಲಿ ಸಂಶೋಧನ ಪ್ರಬಂಧಗಳು, ಲೇಖನಗಳು ಕೂಡ ವಿವಿಧ ಆಸಕ್ತಿಗಳನ್ನು ಪ್ರತಿನಿಧೀಕರಿಸುತ್ತಿವೆ. ಇವುಗಳು ಪ್ರತಿನಿಧಿಸುವ ಆಸಕ್ತಿಗಳನ್ನು ಅರ್ಥಮಾಡಿಕೊಳ್ಳುವುದು ಇವುಗಳ ಅರ್ಥಪೂರ್ಣ ಬಳಕೆಗೆ ಅನಿವಾರ್ಯ. ವಾದ ಪ್ರತಿಪಾದನೆಗೆ ಈಗಾಗಲೇ ಮಂಡಿತವಾದ ವಾದಗಳ ಜತೆಗೆ ಹೊಸ ಸಾಕ್ಷಿ, ಪುರಾವೆಗಳ ಅಗತ್ಯವಿದೆ. ಇವುಗಳನ್ನು ವ್ಯಕ್ತಿ, ಸಂಸ್ಥೆ ಇತ್ಯಾದಿ ಮೂಲಗಳಿಂದ ಪಡೆಯಬಹುದು. ದಿನನಿತ್ಯದ ಬದುಕಿನಲ್ಲಿ ಪ್ರಪಂಚವನ್ನು ನೋಡುವ ಮತ್ತು ಗ್ರಹಿಸುವ

ವಿಧಾನಗಳಿಂದ ಈ ಮಾಹಿತಿಯನ್ನು ಸಂಗ್ರಹಿಸಬಹುದು. ಇವುಗಳ ಜತೆಗೆ ಈ ಮೂಲ ಗಳಿಂದ ಮಾಹಿತಿ ಸಂಗ್ರಹಿಸಲು ಪ್ರತ್ಯೇಕವಾದ ವಿಧಾನಗಳಿವೆ. ಗುಂಪು ಚರ್ಚೆ, ಅವಲೋಕನ, ಸಂದರ್ಶನ, ಪ್ರಶ್ನಾವಳಿ ಎನ್ನುವ ನಾಲ್ಕು ಪ್ರತ್ಯೇಕ ವಿಧಾನಗಳನ್ನು ಅಧ್ಯಾಯದಲ್ಲಿ ಪರಿಚಯಿಸಲಾಗಿದೆ. ಈ ಎಲ್ಲವನ್ನು ಪ್ರತಿಯೊಬ್ಬರು ತಮ್ಮ ತಮ್ಮ ದಿನನಿತ್ಯದ ಬದುಕಿನಲ್ಲಿ ವಿವಿಧ ಪ್ರಮಾಣದಲ್ಲಿ ಮತ್ತು ಗುಣಮಟ್ಟದಲ್ಲಿ ಆಚರಿಸುತ್ತಿದ್ದೇವೆ. ಸಂಶೋಧನೆಗೆ ದಿನನಿತ್ಯದ ಬದುಕಿನಲ್ಲಿ ಆಚರಣೆಯಲ್ಲಿರುವ ಅವಲೋಕನ, ಗುಂಪುಚರ್ಚೆ, ಸಂದರ್ಶನ, ಪ್ರಶ್ನಾವಳಿಗಳು ಸಾಕಾಗುವುದಿಲ್ಲ. ಸಂಶೋಧನೆ ಬಯಸುವ ಮಾಹಿತಿಯನ್ನು ಸಂಶೋಧನೆಯ ಉದ್ದೇಶ ತೀರ್ಮಾನಿಸುತ್ತದೆ. ಮಾಹಿತಿಯ ಮೂಲ ಮತ್ತು ಸಂಗ್ರಹಿಸುವ ವಿಧಾನ ತೀರ್ಮಾನವಾದ ನಂತರ ನಿರ್ಧಾರವನ್ನು ಕಾರ್ಯರೂಪಕ್ಕೆ ತರಬೇಕಾಗುತ್ತದೆ. ಒಂದು ಮೂಲ ಅಥವಾ ಒಂದು ವಿಧಾನಕ್ಕೆ ಅಂಟಿಕೊಂಡರೆ ಸಂಶೋಧಕರ ವಾದ ಪ್ರತಿಪಾದನೆಗೆ ಬೇಕಾಗಿರುವ ಹೊಸ ಸಾಕ್ಷಿ, ಪುರಾವೆಗಳ ಸಂಗ್ರಹ ಕಷ್ಟಸಾಧ್ಯ.

ಈ ಬಗೆಯಲ್ಲಿ ಸಂಗ್ರಹಿಸಿದ ಸಾಕ್ಷಿ, ಪುರಾವೆಗಳನ್ನು ಬಳಸಿಕೊಂಡು ಹೇಗೆ ವಾದ ಮಂಡಿಸಬಹುದೆನ್ನುವ ಚರ್ಚೆಯನ್ನು ವಾದ ಮಂಡನೆಯೆನ್ನುವ ಅಧ್ಯಾಯದಲ್ಲಿ ಮಾಡಲಾಗಿದೆ. ಪ್ರಬಂಧ ರಚನೆ ಕುರಿತು ಈಗಾಗಲೇ ಇರುವ ಕೆಲವು ಸಿದ್ಧ ಮಾದರಿಗಳನ್ನು ಪ್ರಶ್ನಿಸುವ ಜತೆಗೆ ಸಂಶೋಧಕರು ಇಚ್ಛೆಪಟ್ಟರೆ ಅನುಸರಿಸಬಹುದಾದ ಹೊಸ ಮಾದರಿಯನ್ನು ಪರಿಚಯಿಸಲು ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ. ಗುಣಾತ್ಮಕ ಹಾಗೂ ಪರಿಮಾಣಾತ್ಮಕ ಸಂಶೋಧನೆ ಎನ್ನುವ ವಿಂಗಡನೆಗಳು ಪ್ರಬಂಧ ಮಂಡನಾ ವಿಧಾನವನ್ನು ಕೂಡ ಪ್ರಭಾವಿಸಿವೆ. ಸಮಾಜ ಸಂಶೋಧನೆಯ ಆರಂಭಿಕ ಸಂಶೋಧಕರು ತಮ್ಮ ಅರಿವಿಗೆ ಬಾರದೆ ಪರಿಮಾಣಾತ್ಮಕ ವಿಧಾನದಲ್ಲಿ ಪ್ರಬಂಧ ಮಂಡಿಸುವುದು ನಡೆಯುತ್ತಿದೆ. ಇದಕ್ಕೆ ಬಹುಮುಖ್ಯ ಕಾರಣ ಬಹುತೇಕ ಸಮಾಜ ಸಂಶೋಧನ ಪ್ರಬಂಧಗಳು ಈ (ಪರಿಮಾಣಾತ್ಮಕ) ವಿಧಾನದಲ್ಲಿ ಮಂಡನೆಯಾಗುವುದು. ಸಂಶೋಧನೆಯ ಎಲ್ಲ ಹಂತಗಳು ಮುಗಿದ ನಂತರ ಪ್ರಬಂಧ ರಚನೆ ಆರಂಭವಾಗುತ್ತದೆ. ಪ್ರಬಂಧ ರಚನೆಯಲ್ಲಿ ಸಂಗ್ರಹಿಸಿದ ಮಾಹಿತಿ ಮಾತ್ರ ಕೆಲಸ ಮಾಡಬೇಕು. ಸಂಶೋಧಕರು ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದು ಸಾಧ್ಯವಿಲ್ಲ. ಅಂಕಿ ಅಂಶಗಳು ಪ್ರಬಂಧ ರಚನೆಗೆ ಅನಿವಾರ್ಯ ಇತ್ಯಾದಿ ಗುಣಲಕ್ಷಣಗಳಿಂದ ಪ್ರಬಂಧ ರಚನೆಯ ಸಾಂಪ್ರದಾಯಿಕ ಮಾದರಿ ಗುರುತಿಸಲ್ಪಡುತ್ತಿದೆ. ಈ ಮಾದರಿ ಈಗ ಮೌಲ್ಯ ಕಳೆದುಕೊಂಡಿದೆ. ಬದಲೀ ಪ್ರಬಂಧ ರಚನ ಮಾದರಿ ಚಾಲ್ತಿಯಲ್ಲಿದೆ. ಬದಲೀ ಮಾದರಿ ಪ್ರಕಾರ ಸಂಶೋಧನ ವಿಷಯ ಆಯ್ಕೆಯಿಂದಲೇ ಪ್ರಬಂಧ ರಚನೆ ಆರಂಭ ವಾಗುತ್ತದೆ. ಸಂಶೋಧಣೆಯ ವಿವಿಧ ಹಂತಗಳಲ್ಲಿ ಪ್ರಬಂಧ ರಚನೆಯು ಪರಿಷ್ಕರಿಸಲ್ಪಡುತ್ತದೆ. ಪ್ರಬಂಧ ರಚನೆಯ ಪ್ರತಿ ಹಂತದಲ್ಲು ಸಂಶೋಧನ ಪ್ರಬಂಧದ ಪುನರ್‌ನಿರ್ವಚನೆ ಮತ್ತು

ಪುನರ್‌ರಚನೆ ನಡೆಯುತ್ತಿರುತ್ತದೆ. ಪ್ರಬಂಧ ರಚನೆಯಲ್ಲಿ ಅಥವಾ ವಾದ ಮಂಡನೆಯಲ್ಲಿ ಸಂಶೋಧಕರು ತಮ್ಮ ವಾದವನ್ನು ಸಮರ್ಥಿಸಲು ಸಂಗ್ರಹಿಸಿದ ಸಾಕ್ಷಿ, ಪುರಾವೆ, ದಾಖಲೆ ಇತ್ಯಾದಿಗಳನ್ನು ಬಳಸುವ ವಿಧಾನಗಳನ್ನು ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಮೂರು ವಿಶ್ಲೇಷಣಾ ವಿಧಾನಗಳನ್ನು-ತುಲನಾತ್ಮಕ, ಚಾರಿತ್ರಿಕ ಹಾಗೂ ವಿಷಯ ವಿಶ್ಲೇಷಣಾ ವಿಧಾನಗಳನ್ನು-ವಿವರಿಸಲಾಗಿದೆ. ಪ್ರಬಂಧ ರಚನೆಯ ಕೆಲವೊಂದು ತಾಂತ್ರಿಕ ಅಂಶಗಳನ್ನು -ಅಡಿ/ಕೊನೆ ಟಿಪ್ಪಣಿಗಳನ್ನು ಕೊಡುವುದು, ಪರಾಮರ್ಶನ ಪುಸ್ತಕಗಳ ಪಟ್ಟಿ ಕೊಡುವುದು ಇತ್ಯಾದಿಗಳನ್ನು ಇದೇ ಅಧ್ಯಾಯದ ಕೊನೆಭಾಗದಲ್ಲಿ ನೀಡಲಾಗಿದೆ.

ಪರಾಮರ್ಶನ ಪುಸ್ತಕಗಳು

೧. ಬೆನಡಿಕ್ಟ್ ಆಂಡರ್ ಸನ್, *ಇಮೇಂಜಿನ್ಡ್ ಕಮ್ಯುನಿಟೀಸ್-ರಿಫ್ಲೆಕ್ಷನ್ಸ್ ಆನ್ ದಿ ಒರಿಜಿನ್ ಆಂಡ್ ಸ್ಪ್ರೆಡ್ ಆಫ್ ನೇಶನಲಿಸಂ,* ಲಂಡನ್: ವಾರ್ಸೋ, ೧೯೮೩.

೨. ಪಾರ್ಥಚಟರ್ಜಿ 'ಹೂಸ್ ಇಮೇಜಿನ್ಡ್ ಕಮ್ಯುನಿಟಿ', ಇನ್ ಪಾರ್ಥ ಚಟರ್ಜಿ, *ದಿ ಪಾರ್ಥ ಚಟರ್ಜಿ ಒಮ್ನಿಬಸ್,* ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೯

೩. ಇವಾ ಇಜನಿ ಹೇಲಿ, *ಸೋಶಿಯಲ್ ಚೇಂಜ್-ದಿ ಎಡ್ವಂಟ್ ಆಂಡ್ ಮೆಚುರೇಶನ್ ಆಫ್ ಮೊಡರ್ನ್ ಸೊಸೈಟಿ,* ಲಂಡನ್: ರೌಟ್ಲ್‌ಡ್ಜ್ ಆಂಡ್ ಕೆಗನ್ ಪೌಲ್, ೧೯೮೧.

೪. ಎಂಕೀ ಎಮ್ ಎಮ್ ಹೂಗ್‌ವೆಲ್ಟ್, *ಸೋಶಿಯಲಾಜಿ ಆಫ್ ಡೆವಲಪಿಂಗ್ ಸೊಸೈಟಿ,* ಲಂಡನ್: ಮೆಕ್ ಮಿಲನ್ ಪ್ರೆಸ್, ೧೯೭೬

೫. ಎವರೆಟ್ ಇ ಹೇಗನ್, *ಆನ್ ದಿ ಥಿಯರಿ ಆಫ್ ಸೋಶಿಯಲ್ ಚೇಂಜ್-ಹಾ ಎಕನಾಮಿಕ್ ಗ್ರೋಥ್ ಬಿಗಿನ್ಸ್,* ನ್ಯೂಯಾರ್ಕ್: ಪೆಪ್ಪರ್ ಆಂಡ್ ಸೈಮನ್ಸ ಇಂಕ್, ೧೯೬೨

೬. ಪಿ. ಬೋರ್ಡಿ, *ರಿಪ್ರೊಡಕ್ಷನ್ ಇನ್ ಎಜುಕೇಶನ್ : ಸೊಸೈಟಿ ಆಂಡ್ ಕಲ್ಚರ್,* ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೨೦೦೦

೭. ಜೆ.ಬೈರನ್, 'ಲಿಂಗ್ವಿಸ್ಟಿಕ್ಸ್ ಆಂಡ್ ದಿ ಸ್ಟಡಿ ಆಫ್ ಲೇಂಗ್ವೇಜ್ ಸ್ಟೇಂಡರ್ಡೈಸೇಶನ್', *ಕರೆಂಟ್ ಎಂಥ್ರೋಪಲಾಜಿ,* ೧೯(೨), ೧೯೨೮

೮. ಪಿಯರ್ ಆರ್ ಡೇಸನ್ ಮತ್ತು ಅಬ್ದೆಜಲೀಲ್ ಅಕ್ಕರಿ (ಸಂ), *ಎಜುಕೇಶನಲ್ ಥಿಯರೀಸ್ ಆಂಡ್ ಪ್ರಾಕ್ಟೀಸಸ್ ಫ್ರೊಮ್ ದಿ ಮೇಜಾರಿಟಿ ವರ್ಲ್ಡ್,* ನ್ಯೂಡೆಲ್ಲಿ, ಸೇಜ್ ಪಬ್ಲಿಕೇಶನ್ಸ್, ೨೦೦೮

೯. ಅಜಿತ್ ಕೆ. ಮೊಂತಿ, ಮಿನಾತಿ ಪಾಂಡೆ, ರಾಬರ್ಟ್ ಪಿಲಿಪ್‌ಸನ್, (ಸಂ), *ಮಲ್ಟಿಲಿಂಗ್ವಲ್ ಎಜುಕೇಶನ್ ಫಾರ್ ಸೋಶಿಯಲ್ ಜಸ್ಟೀಸ್,* ನ್ಯೂಡೆಲ್ಲಿ, ಓರಿಯಂಟ್ ಬ್ಲೇಕ್ ಸ್ವೇನ್, ೨೦೦೯

೧೦. ವಿ. ಸೆಬೇಸ್ಟಿಯನ್, 'ಗಾಂಧಿ ಆಂಡ್ ದಿ ಸ್ಪೆಂಡರ್ಡ್ ಡೈಸೇಶನ್ ಆಫ್ ಗುಜರಾಥಿ', *ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*, ವಾಲ್ಯೂಂ XLIV, ನಂ.೩೧, ಆಗಸ್ಟ್ ೨೦೦೯.

೧೧. ಸುಖದೇವ್ ಥೋರಟ್(ಸಂ), *ಹೈಯರ್ ಎಜುಕೇಶನ್ ಇನ್ ಇಂಡಿಯಾ - ಇಸ್ಯೂಸ್ ರಿಲೇಟೆಟ್ ಟು ಎಕ್ಸಾಪನ್‌ಶನ್, ಇನ್ ಕ್ಲುಸಿವ್ ನೆಸ್, ಕ್ವಾಲಿಟಿ ಆಂಡ್ ಫಿನಾನ್ಸ್*, ನ್ಯೂಡೆಲ್ಲಿ : ಯುನಿವರ್ಸಿಟಿ ಗ್ರಾಂಟ್ಸ್ ಕಮಿಶನ್, ೨೦೦೮

೧೨. ಸೋಮನ್ ಚಟ್ಟೋಪಾಧ್ಯಾಯ, 'ದಿ ಮಾರ್ಕೆಟ್ ಇನ್ ಹೈಯರ್ ಎಜುಕೇಶನ್-ಕನ್‌ಸರ್ನ್ ಫಾರ್ ಇಕ್ವೀಟಿ ಆಂಡ್ ಕ್ವಾಲಿಟಿ', *ಎಕಾನಮಿಕ್ ಆಂಡ್ ಪೊಲಿಟಿಕಲ್ ಮೀಕ್ಲಿ*, ವಾಲ್ಯೂಂ XLIV, ನಂ.೨೯, ಜುಲೈ ೨೦೦೯

೧೩. ಎಂ.ಎಸ್.ಎಸ್.ಪಾಂಡ್ಯನ್, 'ಸೋಶಿಯಲ್ ಸಯನ್ಸ್ ಇನ್ ಸೌತ್ ಇಂಡಿಯಾ', *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*, ಆಗೋಸ್ಟ್ ೩೧, ೨೦೦೨

೧೪. ಚಂದ್ರ ಪೂಜಾರಿ, *ಸಂಶೋಧನ ಜವಾಬ್ದಾರಿ*, ವಿದ್ಯಾರಣ್ಯ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೦೦೮

೧೫. ಚಂದ್ರ ಪೂಜಾರಿ, *ರಾಜಕೀಯದ ಬಡತನ*, ಹೊಸಪೇಟೆ: ಸಿದ್ಧಾರ್ಥ ಪ್ರಕಾಶನ, ೨೦೦೮

೧೬. ದೀಪಾಂಕರ್ ಗುಪ್ತಾ, *ಮಿಸ್ಟೇಕನ್ ಮೊಡರ್ನಿಟಿ - ಇಂಡಿಯಾ ಬಿಟ್ವೀನ್ ವರ್ಲ್ಡ್*, ನ್ಯೂಡೆಲ್ಲಿ : ಹಾರ್ಪರ್ ಕೊಲಿನ್ಸ್, ೨೦೦೦

೧೭. ಅಶುತೋಶ್ ವಾರ್ಷಿನಿ, *ಎಥ್ನಿಕ್ ಕಾಂಫ್ಲಿಕ್ಟ್ಸ್ ಆಂಡ್ ಸಿವಿಲ್ ಸೊಸೈಟಿ- ಹಿಂದೂಸ್ ಆಂಡ್ ಮುಸ್ಲಿಮ್‌ಸ್ ಇನ್ ಇಂಡಿಯಾ*, ಯೇಲ್: ಯೇಲ್ ಯುನಿವರ್ಸಿಟಿ ಪ್ರೆಸ್, ೨೦೦೨

೧೮. ಮುಜಾಪರ್ ಅಸಾದಿ, 'ಕರ್ನಾಟಕ - ಕಮ್ಯುನಲ್ ವಾಯಿಲೆನ್ಸ್ ಇನ್ ಕೋಸ್ಟಲ್ ಬೆಲ್ಟ್', *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*, ಸಂಚಿಕೆ ೩೪, ಸಂಖ್ಯೆ ೮, ಫೆಬ್ರವರಿ ೧೯೯೯, ಪು.೪೭೬-೪೮೮

೧೯. ಎಂ.ಚಂದ್ರ ಪೂಜಾರಿ, 'ಫಾರ್ಮ್‌ಡ್/ಕನ್‌ಸ್ಟ್ರಕ್ಟೆಡ್ ಕಮ್ಯುನಿಟೀಸ್ ಆಂಡ್ ಕಮ್ಯುನಲಿಸಂ- ಎ ಸ್ಟಡಿ ಆಫ್ ಗ್ರೋಥ್ ಆಫ್ ಕಮ್ಯುನಲಿಸಂ ಇನ್ ಕೋಸ್ಟಲ್ ಕರ್ನಾಟಕ', *ಇಂಡಿಯನ್ ಜರ್ನಲ್ ಆಫ್ ಸೆಕ್ಯುಲರಿಸಂ*, ಸಂಚಿಕೆ ೪, ಸಂಖ್ಯೆ ೧, ಏಪ್ರಿಲ್ - ಜೂನ್ ೨೦೦೦, ಪು.೧-೨೭

೨೦. ಕಾರ್ಲ್‌ಮಾರ್ಕ್ಸ್, *ಕ್ಯಾಪಿಟಲ್-ಎ ಕ್ರೀಟೀಕ್ ಆಫ್ ಪೊಲಿಟಿಕಲ್ ಎಕನಾಮಿ-೩ ವಾಲ್ಯೂಮ್ಸ್*, ಮಾಸ್ಕೋ : ಪ್ರೊಗ್ರೆಸ್ ಪಬ್ಲಿಷರ್ಸ್, ೧೯೮೪

೨೧. ರಾಡ್ನಿಹಿಲ್ಟನ್(ಸಂ), *ದಿ ಟ್ರಾಶಿನ್ ಫ್ರಮ್ ಫ್ಯೂಡಲಿಸಂ ಟು ಕ್ಯಾಪಿಟಲಿಸಂ*, ಲಂಡನ್: ಆನ್ ವಿನ್ ಬ್ರದರ್ಸ್, ೧೯೭೮

೨೨. ಮೌರಿಸ್ ಡಾಬ್, *ಸ್ಟಡೀಸ್ ಇನ್ ದಿ ಡೆವಲಪ್‌ಮೆಂಟ್ ಆಫ್ ಕ್ಯಾಪಿಟಲಿಸಂ,* ಲಂಡನ್: ರೊಟ್‌ಲೆಡ್ಜ್ ಅಂಡ್ ಕೆಗನ್‌ಪೌಲ್, ೧೯೬೩

೨೩. ಎಲೆನ್ ಮೆಸಿನ್ಸ್‌ವುಡ್, *ದಿ ಒರಿಜಿನ್ ಆಫ್ ಕ್ಯಾಪಿಟಲಿಸಂ,* ನ್ಯೂಯಾರ್ಕ್: ಮಂಥ್ಲಿ ರಿವೀವ್ ಪ್ರೆಸ್, ೧೯೯೯, ೪

೨೪. ಲಿಯೋ ಹ್ಯೂಬರ್‌ಮೆನ್, *ಮೇನ್ಸ್ ವರ್ಲ್ಡ್‌ಲಿ ಗೂಡ್ಸ್,* ನ್ಯೂಡೆಲ್ಲಿ : ಪೀಪ್ ಲ್ಸ್ ಪಬ್ಲಿಶಿಂಗ್ ಹೌಸ್, ೧೯೮೯

೨೫. ಆಂಡ್ರೆ ಗುಂಥರ್ ಫ್ರೆಂಕ್, *ಡಿಪೆಂಡೆಂಟ್ ಎಕ್ಯುಮ್ಯುಲೇಶನ್ ಅಂಡ್ ಅಂಡರ್ ಡೆವಲಪ್‌ಮೆಂಟ್,* ಲಂಡನ್ : ಮೆಕ್‌ಮಿಲನ್ ಪ್ರೆಸ್, ಲಿಮಿಟೆಡ್, ೧೯೮೨.

೨೬. ರಜನಿ ಕೊಥಾರಿ, *ರಿಥಿಂಕಿಂಗ್ ಡೆವಲಪ್ ಮೆಂಟ್-ಇನ್ ಸರ್ಚ್ ಆಫ್ ಹ್ಯೂಮನ್ ಆಲ್ಟರ್‌ನೇಟಿವ್ಸ್,* ಡೆಲ್ಲಿ : ಅಜಂತಾ ಪಬ್ಲಿಕೇಶನ್ಸ್, ೧೯೮೮

೨೭. ಎಸ್ಕೋಬಾರ್, *ಎನ್‌ಕೌಂಟರಿಂಗ್ ಡೆವಲಪ್‌ಮೆಂಟ್ - ದಿ ಮೇಕಿಂಗ್ ಅಂಡ್ ಅನ್‌ಮೇಕಿಂಗ್ ಆಫ್ ದಿ ಥರ್ಡ್ ವರ್ಲ್ಡ್,* ಪ್ರಿನ್ಸ್‌ಟನ್ : ಪ್ರಿನ್ಸ್‌ಟನ್ ಯುನಿವರ್ಸಿಟಿ ಪ್ರೆಸ್, ೧೯೯೫

೨೮. ಜೋನ್ ಹೇರಿಸ್, 'ಎಂಟಿನೋಮಿಸ್ ಆಫ್ ಎಂಪವರ್‌ಮೆಂಟ್-ಒಬ್ಸರ್ ವೇಶನ್ಸ್ ಆನ್ ಸಿವಿಲ್ ಸೊಸೈಟಿ ಅಂಡ್ ಅರ್ಬನ್ ಗವರ್ನೆನ್ಸ್ ಇನ್ ಇಂಡಿಯಾ', *ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ,* ವಾಲ್ಯೂಮ್ XL ನಂ.೨೬, ಜೂನ್ ೨೦೦೭, ಪು.೨೭೧೬-೨೪

೨೯. ಪವನ್ ಕೆ. ಕುಮಾರ್, *ದಿ ಗ್ರೇಟ್ ಇಂಡಿಯನ್ ಮಿಡ್ಲ್ ಕ್ಲಾಸ್,* ನ್ಯೂಡೆಲ್ಲಿ: ಪೆಂಗ್ವಿನ್ ಬುಕ್ಸ್, ೧೯೯೯

೩೦. ರತಿ ರಪೇಕರ್, *ಎ ಟೆಕ್ಸ್ಟ್ ಬುಕ್ ಆಫ್ ಸೋಶಿಯಲ್ ರಿಸರ್ಚ್,* ಡೆಲ್ಲಿ: ಡೊಮಿನೆಂಟ್ ಪಬ್ಲಿಷರ್ಸ್, ೨೦೦೪

೩೧. ಮನೋಜ್ ಶರ್ಮ, *ರಿಸರ್ಚ್ ಮೆಥಡಾಲಜಿ,* ನ್ಯೂಡೆಲ್ಲಿ: ಅನ್ ಮೋಲ್ ಪಬ್ಲಿಕೇಶನ್ಸ್, ೨೦೦೪

೩೨. ಅರವಿಂದ್ ಕುಮಾರ್, *ರಿಸರ್ಚ್ ಮೆಥಡಾಲಜಿ ಇನ್ ಸೋಶಿಯಲ್ ಸಯನ್ಸ್,* ನ್ಯೂಡೆಲ್ಲಿ: ಸರೂಪ್ ಅಂಡ್ ಸನ್ಸ್, ೨೦೦೨

೩೩. ಡೇವಿಡ್ ಹಾಲ್ ಅಂಡ್ ಇರ್ನೆ ಹಾಲ್, *ಪ್ರಾಕ್ಟಿಕಲ್ ಸೋಶಿಯಲ್ ರಿಸರ್ಚ್,* ಲಂಡನ್ : ಮೆಕ್‌ಮಿಲನ್ಸ್ ಪ್ರೆಸ್, ಲಿಮಿಟೆಡ್, ೧೯೯೬

೩೪. ಪೀಟರ್ ಹೆಚ್ ಮಾನ್, *ಮೆಥಡ್ ಆಫ್ ಸೋಶಿಯಲ್ ಇನ್‌ವೆಸ್ಟಿಗೇಶನ್,* ನ್ಯೂಯಾರ್ಕ್: ಬೆಸಿಲ್ ಬ್ಲೇಕ್‌ವೆಲ್, ೧೯೮೫

೩೫. ಆಂಡ್ರ್ಯುಸೇಯರ್, *ಮೆಥಡ್ ಇನ್ ಸೋಶಿಯಲ್ ಸಯನ್ಸ್ - ಎ ರಿಯಲಿಸ್ಟ್ ಎಪ್ರೋಚ್,* ಲಂಡನ್: ಹಚ್ಚಿನ್‌ಸನ್, ೧೯೮೪

೩೬. ಥಾಮಸ್ ಕುನ್, *ದಿ ಸ್ಟ್ರಕ್ಚರ್ ಆಫ್ ಸೈಯಿಂಟಿಪಿಕ್ ರೆವಲ್ಯೂಶನ್*, ಚಿಕಾಗೋ: ಚಿಕಾಗೋ ಯುನಿರ್ವಸಿಟಿ ಪ್ರೆಸ್, ೧೯೭೦
೩೭. ಡೆವಿಡ್ ಲಾಜರ್, 'ಸಿಲೆಕ್ಟೆಡ್ ಇಸ್ಯೂಸ್ ಇನ್ ದಿ ಫಿಲೋಸಫಿ ಆಫ್ ಸೋಶಿಯಲ್ ಸಯನ್ಸ್‌ಸ್', 'ಕ್ಲೈವ್ ಸೀಲ್ (ಸಂ), *ರಿಸರ್ಚಿಂಗ್ ಸೊಸೈಟಿ ಅಂಡ್ ಕಲ್ಚರ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೧೯೯೮
೩೮. ರಾಜರಾಮ ಹೆಗಡೆ, *ಲೌಕಿಕ-ಅಲೌಕಿಕ-ಭಾರತೀಯ ಇತಿಹಾಸದಲ್ಲಿ ಪ್ರಭುತ್ವ ರಚನೆ ಮತ್ತು ಮತ ಸಂಪ್ರದಾಯಗಳು*, ಮಲ್ಲಾಡಿಹಳ್ಳಿ: ಆನಂದಕಂದ ಗ್ರಂಥಮಾಲೆ, ೨೦೦೧
೩೯. ಕೆ.ಚಿನ್ನಪ್ಪ ಗೌಡ, *ಭೂತಾರಾಧನೆ-ಜಾನಪದೀಯ ಅಧ್ಯಯನ*, ಮಂಗಳ ಗಂಗೋತ್ರಿ: ಮದಿಪು ಪ್ರಕಾಶನ, ೧೯೯೦
೪೦. ಕೆ.ಆರ್.ಪೊಪ್ಪರ್, *ದಿ ಲಾಜಿಕ್ ಆಫ್ ಸೈಯಿಂಟಿಫಿಕ್ ಡಿಸ್ಕವರಿ*, ನ್ಯೂಯಾರ್ಕ್: ಬೇಸಿಕ್ ಬುಕ್ಸ್, ೧೯೫೯
೪೧. ಎನ್.ಆರ್.ಹೇನ್‌ಸನ್, *ಪೇಟರ್ನ್ಸ್ ಆಫ್ ಡಿಸ್ಕವರಿ-ಎನ್ ಎನ್‌ಕ್ವಯರಿ ಇನ್ ಟು ದಿ ಕನ್‌ಸ್ಚುವಲ್ ಫೌಂಡೇಶನ್ ಆಫ್ ಸಯನ್ಸ್*, ಕೇಂಬ್ರಿಡ್ಜ್: ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್, ೧೯೫೮
೪೨. ಇವಾನ್ಸ್ ಪ್ರಿಚರ್ಡ್, 'ದಿ ಕಂಪೇರಿಟೀವ್ ಮೆಥಡ್ಸ್ ಇನ್ ಸೋಶಿಯಲ್ ಅಂಥ್ರಪಾಲಜಿ', *ಇನ್ ದಿ ಪೋಸಿಶನ್ ಆಫ್ ವಿಮೆನ್ ಇನ್ ಪ್ರಿಮಿಟಿವ್ ಸೊಸೈಟೀಸ್ ಅಂಡ್ ಅದರ್ ಎಸ್ಸೇಸ್*, ಲಂಡನ್ : ಫೇಬರ್ ಆಂಡ್ ಫೇಬರ್, ೧೯೬೫
೪೩. ಇವಾನ್ಸ್ ಪ್ರಿಚರ್ಡ್, *ಸೋಶಿಯಲ್ ಅಂಥ್ರಪಾಲಜಿ*, ಲಂಡನ್ : ಕೊಹೆನ್ ಆಂಡ್ ವೆಸ್ಟ್, ೧೯೫೧
೪೪. ಫೇಬಿಯನ್, *ಟೈಮ್ ಅಂಡ್ ದಿ ಅದರ್*, ನ್ಯೂಯಾರ್ಕ್: ಕೊಲಂಬಿಯಾ ಯುನಿವರ್ಸಿಟಿ ಪ್ರೆಸ್, ೧೯೮೩
೪೬. ಆಂಡ್ರೆ ಬಿಟೆ, *ಸೋಶಿಯಲಾಜಿ-ಎಸ್ಸೇಸ್ ಆನ್ ಎಪ್ರೋಚ್ ಅಂಡ್ ಮೆಥಡ್*, ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೨೦೦೨
೪೭. ಜಾನ್ ಸ್ಟರಕ್ (ಸಂ), *ಸ್ಟ್ರಕ್ಚರಲಿಸಂ ಅಂಡ್ ಸಿನ್ಸ್ ಫ್ರೊಮ್ ಲೆವಿಸ್ಟ್ರಾಸ್ ಟು ಡೆರಿಡಾ*, ಆಕ್ಸ್‌ಫರ್ಡ್: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೭೯
೪೮. ಜಾನ್ ಸ್ಟರಕ್, *ಸ್ಟ್ರಕ್ಚರಲಿಸಂ*, ಆಕ್ಸ್‌ಫರ್ಡ್: ಬ್ಲೇಕ್ ವೆಲ್ ಪಬ್ಲಿಷಿಂಗ್, ೨೦೦೩
೪೯. ಲೆವಿಸ್ಟ್ರಾಸ್, *ಮಿಥ್ ಅಂಡ್ ಮೀನಿಂಗ್*, ಲಂಡನ್ : ರಾಟ್ ಲೆಡ್ಜ್, ೨೦೦೧
೫೦. ಪ್ರಣಾಬ್ ಬರ್ಧನ್ , 'ಡಿಸೆಂಟ್ರಲೈಸೇಶನ್ ಆಫ್ ಗವರ್ನೆನ್ಸ್ ಆಂಡ್ ಡೆವಲಪ್ ಮೆಂಟ್', *ಜರ್ನಲ್ ಆಫ್ ಎಕಾನಮಿಕ್ ಪರ್ಸ್‌ಪೆಕ್ಟಿವ್*, ವಾ.೧೬, ನಂ.೪, ೨೦೦೨ ಇನ್ ವಿನೋದ್ ವ್ಯಾಸುಲು, 'ಟ್ರಾನ್ಸ್ ಪಾರ್ ಮೇಶನ್ ಇನ್ ಗವರ್ನೆನ್ಸ್ ಸಿನ್ಸ್

೧೯೯೦ಸ್-ಸಮ್ ರಿಫ್ಲೆಕ್ಷನ್ಸ್', *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,* ವಾ.೩೯, ನಂ.೨೩, ಜೂನ್ ೨೦೦೪, ಪು.೨೩೭೭-೮೫

೫೧. ಇಗ್ನೇಸಿಯೋ ರೆಮನೆಟ್ 'ದಿ ಒನ್ ಆಂಡ್ ಒನ್ಲಿ ವೇ ಆಫ್ ಥಿಂಕಿಂಗ್, 'ಮಜೀದ್ ರೆಹಮಾನ್ ಆಂಡ್ ವಿಕ್ಟೋರಿಯಾ ಬೋತ್ರೆ (ಸಂ), *ದಿ ಪೋಸ್ಟ್ ಡೆವಲಪ್‌ಮೆಂಟ್ ರೀಡರ್,* ಲಂಡನ್: ಜೆಡ್ ಬುಕ್ಸ್, ೧೯೯೭, ಪು.೧೭೯-೮೧

೫೨. ಜೇಮ್ಸ್ ಪೆಟ್ರಾಸ್, 'ದಿ ನ್ಯೂ ಕಲ್ಚರಲ್ ಡೊಮಿನೇಶನ್ ಬೈ ದಿ ಮೀಡಿಯಾ', *ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,* ಆಗೋಸ್ಟ್, ೧೯೯೪

೫೩. ವಿಲ್ ಫ್ರೆಡ್ ಪರೆಟೋ, *ದಿ ಮೈಂಡ್ ಆಂಡ್ ಸೊಸೈಟಿ,* ಮಿನಿಯೋಪೊಲಿಸ್ : ಯುನಿವರ್ಸಿಟಿ ಆಫ್ ಮಿನಿಸೋಟ ಪ್ರೆಸ್, ೧೯೧೬

೫೪. ಬರ್ಟ್ ಎನ್ ಆಡಮ್ಸ್ ಆಂಡ್ ಆರ್ ಎ ಸೈದಿ, *ಸೋಶಿಯಲಾಜಿಕಲ್ ಥಿಯರಿ,* ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೨೦೦೧

೫೫. ಟೋನಿ ಬಾರ್ ನೆಟ್, *ಸೋಶಿಯಲಾಜಿ ಆಂಡ್ ಡೆವಲಪ್‌ಮೆಂಟ್,* ಲಂಡನ್: ರಾಟ್‌ಲೆಡ್ಜ್, ೧೯೮೮

೫೬. ಎಲ್.ಪಿ.ವಿದ್ಯಾರ್ಥಿ, *ಟ್ರೆಂಡ್ಸ್ ಇನ್ ವರ್ಲ್ಡ್ ಆಂಥ್ರೋಪಲಾಜಿ,* ಡೆಲ್ಲಿ: ಕನ್ ಸಫ್ಟ್ ಪಬ್ಲಿಕೇಶನ್ ಕಂಪೆನಿ, ೧೯೭೯

೫೭. ಮೆಕ್‌ಲೇಂಡ್, *ದಿ ಎಚೀವಿಂಗ್ ಸೊಸೈಟಿ,* ಬಾಂಬೆ: ವಕೀಲ್ಸ್, ಪೆಪರ್ ಆಂಡ್ ಸೈಮನ್ಸ್ ಲಿಮಿಟೆಡ್, ೧೯೬೧

೫೮. ರಾಘವೇಂದ್ರ ರಾವ್, *ಇಮೇಜಿನಿಂಗ್ ಅನ್‌ಇಮೇಜಿನೇಬಲ್ ಕಮ್ಯುನಿಟೀಸ್-ಪೊಲಿಟಿಕಲ್ ಆಂಡ್ ಸೋಶಿಯಲ್ ಡಿಸ್ಕೋರ್ಸ್ ಇನ್ ಮಾಡರ್ನ್ ಕರ್ನಾಟಕ,* ವಿದ್ಯಾರಣ್ಯ: ಪ್ರಸಾರಾಂಗ, ಕ.ವಿ.ಹಂ., ೨೦೦೦

೫೯. ಮೆಕಿಂತೋಶ್, 'ಕ್ವಶ್ಚನಿಂಗ್ ದ ಸ್ಟೇಟ್ ', ವೈಟ್ಸ್, ಮೆಕಿಂತೋಶ್ ಮತ್ತು ಹೆವಿಟ್ (ಸಂ), *ಡೆವಲಪ್‌ಮೆಂಟ್ ಪಾಲಿಸಿ ಆಂಡ್ ಪಬ್ಲಿಕ್ ಆಕ್ಷನ್,* ಆಕ್ಸ್‌ಫರ್ಡ್: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೨

೬೦. ಉಪೇಂದ್ರ ಬಕ್ಷಿ ಆಂಡ್ ಬಿಕು ಪರೇಕ್(ಸಂ), *ಕ್ರೈಸಿಸ್ ಆಂಡ್ ಚೇಂಜ್ ಇನ್ ಕಾಂಟೆಂಪರರಿ ಇಂಡಿಯಾ,* ನ್ಯೂಡೆಲ್ಲಿ: ಸೇಜ್ ಪಬ್ಲಿಕೇಷನ್ಸ್, ೧೯೯೫

೬೧. ಪ್ರಣಾಬ್ ಬರ್ಧನ್, *ಪೊಲಿಟಿಕಲ್ ಎಕಾನಮಿ ಆಫ್ ಡೆವಲಪ್‌ಮೆಂಟ್ ಇನ್ ಇಂಡಿಯಾ,* ಆಕ್ಸ್‌ಫರ್ಡ್: ಆಕ್ಸ್‌ಫರ್ಡ್ ಯುನಿರ್ವಸಿಟಿ ಪ್ರೆಸ್, ೧೯೮೪

೬೨. ಸುಮಿತ್ ಸರ್ಕಾರ್, 'ದಿ ಬಿ.ಜೆ.ಪಿ.ಬಾಂಬ್ ಆಂಡ್ ಎಸ್ಪೆಕ್ಟ್ಸ್ ಆಫ್ ನೇಶನಲಿಸಂ'. *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ,* ವಾಲ್ಯೂಮ್ ೩೩, ನಂ.೨೭, ೧೯೯೮

೧೩. ಚಿರಂಜೀವ್ ಸೇನ್, 'ದಿ ಬಜೆಟ್, ಗವರ್ನಮೆಂಟ್ ಸ್ಟೈಲ್ ಅಂಡ್ ಸಸ್ಟೇಯಿನೆಬಿಲಿಟಿ ಆಫ್ ಎಕಾನಮಿಕ್ ಡೆವಲಪ್ ಮೆಂಟ್ ಇನ್ ಇಂಡಿಯಾ', *ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ*, ವಾಲ್ಯೂಮ್ ೩೩, ನಂ.೪೫, ೧೯೯೮

೧೪. ಗವರ್ನಮೆಂಟ್ ಆಫ್ ಇಂಡಿಯಾ, ಎಕಾನಮಿಕ್ ಸರ್ವೇ, ೧೯೯೮-೯೯, ನ್ಯೂಡೆಲ್ಲಿ: ಮಿನಿಸ್ಟ್ರಿ ಆಫ್ ಫಿನಾನ್ಸ್, ೧೯೯೯

೧೫. ರುಡಾಲ್ಪ್ ಅಂಡ್ ಸುಸಾನ್ ಹೋಬರ್ ರುಡಾಲ್ಫ್, *ಇನ್ ಪರ್‌ಸ್ಯೂಟ್ ಆಫ್ ಲಕ್ಷ್ಮೀ - ದಿ ಪೊಲಿಟಿಕಲ್ ಎಕಾನಮಿ ಆಫ್ ಇಂಡಿಯನ್ ಸ್ಟೇಟ್*, ಲಂಡನ್ : ಚಿಕಾಗೋ: ಯುನಿವರ್ಸಿಟಿ ಪ್ರೆಸ್, ೧೯೮೭

೧೬. ಸುಗತ ಬೋಸ್ ಅಂಡ್ ಆಯೇಶ ಜಲಾಲ್ (ಸಂ), *ನೇಶನಲಿಸಂ, ಡೆಮಾಕ್ರಸಿ ಅಂಡ್ ಡೆವಲಪ್‌ಮೆಂಟ್- ಸ್ಟೇಟ್ ಅಂಡ್ ಪೊಲಿಟಿಕ್ಸ್ ಇನ್ ಇಂಡಿಯಾ*, ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್ , ೧೯೯೯

೧೭. ಸುಭಾಸ್ ಚೋಪ್ರಾ, 'ಹೋಲ್ಡಿಂಗ್ ದಿ ಸ್ಟೇಜ್ ಎಕೌಂಟೇಬ್‌ಲ್ ಫಾರ್ ಹಂಗರ್', *ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ*, ವಾಲ್ಯೂಮ್ XLIV, ನಂ.೩೩, ಆಗೋಸ್ಟ್ ೨೧, ೨೦೦೯, ಪು.೮-೧೩

೧೮. ಅರ್ಜುನ್ ಸೇನ್ ಗುಪ್ತಾ, ನೇಶನಲ್ ಕಮಿಶನ್ ಫಾರ್ ಎಂಟರ್‌ಪ್ರಸೈಸ್ ಇನ್ ದಿ ಅನ್‌ಒರ್ಗನೈಸ್‌ಡ್ ಸೆಕ್ಟರ್, ನ್ಯೂಡೆಲ್ಲಿ: ಗವರ್ನ್‌ಮೆಂಟ್ ಆಫ್ ಇಂಡಿಯಾ, ೨೦೦೮

೧೯. ಕರ್ನಾಟಕ ಸರಕಾರ, ಮಾನವ ಅಭಿವೃದ್ಧಿ ವರದಿ-೨೦೦೫, ಬೆಂಗಳೂರು: ಪ್ಲಾನಿಂಗ್ ಅಂಡ್ ಸ್ಟೆಟಿಸ್ಟಿಕ್ಸ್ ಇಲಾಖೆ, ೨೦೦೬

೨೦. ಮನೋಹರ್ ಯಾದವ್, *ಸೋಶಿಯೋ ಎಕಾನಮಿಕ್ ಸರ್ವೇ ಆಫ್ ಶೆಡ್ಯುಲ್ಡ್ ಕಾಸ್ಟ್ಸ್ ಅಂಡ್ ಶೆಡ್ಯುಲ್ಡ್ ಟ್ರೈಬ್ಸ್ ಇನ್ ಕರ್ನಾಟಕ*, ಬೆಂಗಳೂರು: ಇನ್ ಸ್ಟಿಟ್ಯುಟ್ ಫಾರ್ ಸೋಶಿಯಲ್ ಅಂಡ್ ಎಕಾನಮಿಕ್ ಚೇಂಜ್, ೨೦೦೩

೨೧. ಶ್ರೀಧರ್ ಕುಂದ್, ಪವರ್ಟಿ, ಇನ್‌ಕ್ವಾಲಿಟಿ ಅಂಡ್ ಸೋಶಿಯಲ್ ಡೆವಲಪ್‌ಮೆಂಟ್ ಇನ್ ರೂರಲ್ ಇಂಡಿಯಾ- ಪೇಪರ್ ಪ್ರಸೆಂಡೆಡ್ ಇನ್. ಎನ್.ಐ.ಆರ್.ಡಿ., ಫೌಂಡೇಶನ್ ಡೇ ಸೆಮಿನಾರ್, ನವೆಂಬರ್ ೨೦೦೫

೨೨. ಜೆ.ಟೋಯೆ, *ಡೈಲೆಮಾಸ್ ಆಫ್ ಡೆವಲಪ್‌ಮೆಂಟ್-ರಿಫ್ಲೆಕ್ಷನ್ಸ್ ಆನ್ ದಿ ಕೌಂಟರ್ ರೆವೋಲ್ಯುಶನ್ ಇನ್ ಡೆವಲಪ್‌ಮೆಂಟ್ ಎಕಾನಮಿಕ್ಸ್*, ಆಕ್ಸ್‌ಫರ್ಡ್: ಬ್ಲೇಕ್ ವೆಲ್, ೧೯೯೩

೨೩. ವರ್ಲ್ಡ್ ಬೇಂಕ್, ಸ್ಟ್ರೆಂಥನಿಂಗ್ ಲೋಕಲ್ ಗವರ್ನ್‌ಮೆಂಟ್ಸ್ ಇನ್ ಸಬ್ ಸಹರಾ ಆಫ್ರಿಕಾ, ವಾಶಿಂಗ್‌ಟನ್ ಡಿ.ಸಿ.: ವರ್ಲ್ಡ್ ಬೇಂಕ್, ೧೯೯೦

೭೪. ಜೋಸೆಫ್ ಸ್ಟಿಲ್ಜ್, *ಗ್ಲೋಬಲೈಸೇಶನ್ ಆಂಡ್ ಇಟ್ಸ್ ಡಿಸ್‌ಕಂಟೆಂಟ್ಸ್*, ನ್ಯೂಡೆಲ್ಲಿ, ಪೆಂಗ್ವಿನ್ ಬುಕ್ಸ್, ೨೦೦೨
೭೫. ಅಂಡ್ರೆ ಬಿಟೆ, 'ಸೋಶಿಯಲಾಜಿ ಆಂಡ್ ಕಾಮನ್', ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ವಾಲ್ಯೂಮ್ ೩೧, ನಂ.೩೫, ೩೬ ಮತ್ತು ೩೭, ೧೯೯೬, ಪು.೨೩೬೧-೬೫
೭೬. ಆಂಡ್ರೆ ಬಿಟೆ, *ಸೋಶಿಯಲಾಜಿ - ಎಸ್ಸೇಸ್ ಆನ್ ಅಪ್ರೋಚಸ್ ಆಂಡ್ ಮೆಥಡ್ಸ್*, ನ್ಯೂಡೆಲ್ಲಿ : ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೨೦೦೨
೭೭. ಎಡ್ವರ್ಡ್ ಸೈದ್, *ಓರಿಯಂಟಲಿಸಂ*, ಪೆಂಗ್ವಿನ್ ಬುಕ್ಸ್, ೧೯೯೧
೭೮. ಜೂಲಿಯನ್ ಬೆಂಡ, *ದಿ ಟ್ರೇಶನ್ ಆಫ್ ದಿ ಇಂಟೆಲೆಕ್ಚುವಲ್ಸ್*, ನ್ಯೂಯಾರ್ಕ್: ನಾರ್ಟನ್, ೧೯೬೯
೭೯. ಕಥ್ಲಿನ್ ಗಪ್ , 'ಆಂಥ್ರೋಪಾಲಜಿ ಆಂಡ್ ಇಂಪಿರಿಯಲಿಸಂ, 'ಇನ್ ಬಾಬ್ಬಿ ಎಸ್ ಒರ್ಜ್ ಆಂಡ್ ತಿಲಕ್ ಡಿ. ಗುಪ್ತಾ (ಸಂ), *ಹಿಸ್ಟರಿ ಹೇಸ್ ಇಟ್ ಹೆಪನ್ಡ್ - ಸಿಲೆಕ್ಟೆಡ್ ಆರ್ಟಿಕಲ್ಸ್ ಫ್ರಮ್ ಮಂಥ್ಲಿ ರಿವೀವ್* , ೧೯೪೯, ಕಲ್ಕತ್ತಾ : ಕಾರ್ನರ್ ಸ್ಟೋನ್ ಪಬ್ಲಿಕೇಶನ್ಸ್, ೧೯೯೮
೮೦. ಮಾರ್ಟಿನ್ ಹೊಲಿಸ್, *ದಿ ಪಿಲಾಸಫಿ ಆಫ್ ಸೋಶಿಯಲ್ ಸಯನ್ಸ್-ಎನ್ ಇಂಟ್ರೊಡಕ್ಷನ್*, ಕೇಂಬ್ರಿಡ್ಜ್ : ಕೇಂಬ್ರಿಡ್ಜ್ ಯುನಿವರ್ಸಟಿ ಪ್ರೆಸ್, ೨೦೦೦
೮೧. ಇಮ್ಮೆನ್ವಲ್ ವೆಲ್‌ಸ್ಟೇಯಿನ್ ಮತ್ತು ಇತರರು, *ಒಪನ್ ದಿ ಸೋಶಿಯಲ್ ಸಯನ್ಸ್-ರಿಪೋರ್ಟ್ ಆಫ್ ದಿ ಗುಲ್‌ಬೆಕಿಯನ್ ಕಮಿಶನ್ ಆನ್ ದಿ ರಿಸ್ಟ್ರಕ್ಚರಿಂಗ್ ಆಫ್ ದಿ ಸೋಶಿಯಲ್ ಸಯನ್ಸ್‌ಸಸ್*, ನ್ಯೂಡೆಲ್ಲಿ : ವಿಸ್ತಾರ್ ಪಬ್ಲಿಕೇಶನ್ಸ್, ೧೯೯೮
೮೨. ಟಾಲ್ಕಾಟ್ ಪಾರ್ಸನ್, *ಟುವರ್ಡ್ಸ್ ಎ ಜನರಲ್ ಥಿಯರಿ ಆಫ್ ಆ್ಯಕ್ಷನ್*, ನ್ಯೂಯಾರ್ಕ್: ಹಾರ್ಪರ್ ಆಂಡ್ ರೋ, ೧೯೫೧
೮೩. ಟಾಲ್ಕಟ್ ಪಾರ್ಸನ್, *ಸ್ಟ್ರಕ್ಚರ್ ಆಂಡ್ ಪ್ರೊಸಸ್ ಇನ್ ಇಂಡಸ್ಟ್ರಿಯಲ್ ಸೊಸೈಟಿ*, ಗ್ಲೆನ್‌ಕೋ : ದಿ ಫ್ರಿ ಪ್ರೆಸ್, ೧೯೬೦
೮೪. ಬರ್ಟ್ ಎಫ್ ಹೊಸ್‌ಲಿಡ್ಜ್, *ಸೋಶಿಯಲಾಜಿಕಲ್ ಎಸ್ಪೆಕ್ಟ್ಸ್ ಆಫ್ ಎಕನಾಮಿಕ್ ಗ್ರೋಥ್*, ನ್ಯೂಯಾರ್ಕ್ : ದಿ ಫ್ರಿ ಪ್ರೆಸ್, ೧೯೬೬
೮೫. ಆರ್ ಎಲ್ ಕರಿ ಆಂಡ್ ಎಲ್ ಐ ವೇಡ್, *ಎ ಥಿಯರಿ ಆಫ್ ಪೊಲಿಟಿಕಲ್ ಎಕ್ಸ್ ಚೇಂಜ್*, ಎಂಗೇಲ್ ವುಡ್ ಕ್ಲಿಫ್ಸ್ ಎನ್ ಜೆ : ಪ್ರೆಂಟೈಸ್ ಹಾಲ್ ಇಂಕ್, ೧೯೬೮
೮೬. ಮೇಕ್ಸ್ ವೇಬರ್, *ಎಕಾನಮಿ ಆಂಡ್ ಸೊಸೈಟಿ*, ಬರ್ ಕ್ಲೇ : ಯುನಿವರ್ಸಿಟಿ ಆಫ್ ಕ್ಯಾಲಿಪೋರ್ನಿಯ ಪ್ರೆಸ್, ೧೯೭೮
೮೭. ಟಾಲ್ಕಾಟ್ ಪಾರ್ಸನ್, ''ಒನ್ ದ ಕನ್ ಸ್ಪಟ್ ಆಫ್ ಪಾಪ್ಯುಲೆನ್ಸ್ '', ಆಮೇರಿಕನ್ ಫಿಲೋಸಪಿಕಲ್ ಸೊಸೈಟಿ ಪ್ರೊಸಿಡಿಂಗ್ಸ್, ವಾಲ್ಯೂಮ್ ೧೦೭, ಪು.೨೩೨-೬೨

೮೮. ಸಾರಾ ಜೋಸೆಫ್, *ಪೊಲಿಟಿಕಲ್ ಥಿಯರಿ ಆಂಡ್ ಪವರ್*, ನ್ಯೂಡೆಲ್ಲಿ: ಫೌಂಡೇಶನ್ ಬುಕ್ಸ್, ೧೯೮೮
೮೯. ಮೈಕೆಲ್ ಡಿ ಯೇಟ್ಸ್, *ನೇಮಿಂಗ್ ದಿ ಸಿಸ್ಟಮ್- ಇನಿಕ್ವಾಲಿಟಿ ಆಂಡ್ ವರ್ಕ್ ಇನ್ ದಿ ಗ್ಲೋಬಲ್ ಎಕಾನಮಿ*, ಕಾರಗ್‌ಪುರ್: ಕಾರ್ನರ್ ಸ್ಟೋನ್ ಪಬ್ಲಿಕೇಶನ್ಸ್, ೨೦೦೩
೯೦. ತಿಯೋಡೋರ್ ಶಾನಿನ್, 'ದಿ ಐಡಿಯ ಆಫ್ ಪ್ರೊಗ್ರೆಸ್, 'ಮಜಿದ್ ರೆಹನೇಮ ಆಂಡ್ ವಿಕ್ಟೋರಿಯ (ಸಂ), *ದಿ ಪೋಸ್ಟ್ ಡೆವಲಪ್ ಮೆಂಟ್ ರೀಡರ್*, ಲಂಡನ್: ದಿ ಜೆಡ್ ಬುಕ್ಸ್, ೧೯೯೭, ಪು.೬೫-೭೦
೯೧. ಲೂವಿಸ್ ಡುಮೋ, *ಫ್ರೂಮ್ ಮಂಡೆವಿಲಿ ಟು ಮಾರ್ಕ್ಸ್, ದಿ ಜನೆಸಿಸ್ ಆಂಡ್ ದಿ ಟ್ರಿಂಪ್ ಆಫ್ ಎಕಾನಮಿಕ್ ಐಡಿಯಲಾಜಿ*, ಚಿಕಾಗೋ: ಯುನಿವರ್ಸಿಟಿ ಆಫ್ ಚಿಕಾಗೋ ಪ್ರೆಸ್, ೧೯೭೭
೯೨. ಯೋಗೇಶ್ ಅಟಲ್, *ಸೋಶಿಯಲ್ ಸಯನ್ಸ್‌ಸಸ್ ಇನ್ ಏಶಿಯಾ*, ನ್ಯೂಡೆಲ್ಲಿ: ಅಭಿನವ್ ಪಬ್ಲಿಕೇಶನ್ಸ್, ೧೯೭೪
೯೩. ಎನ್ ಪಾರ್ಥ ಮುಖರ್ಜಿ, *ಇಂಡಿಯನ್ ಸೋಶಿಯಲಾಜಿ-ರಿಫ್ಲೆಕ್ಷನ್ಸ್ ಆಂಡ್ ಇನ್ ಟ್ರೋಸ್ಪೆಕ್ಷನ್ಸ್*, ಬಾಂಬೆ: ಪೊಪ್ಯುಲರ್ ಪ್ರಕಾಶನ್, ೧೯೮೬
೯೪. ಪಾರ್ಥನಾಥ ಮುಖರ್ಜಿ ಆಂಡ್ ಚಂದ್ರಸೇನ್ ಗುಪ್ತ(ಸಂ), *ಇಂಡಿಜೀನಿಟಿ ಆಂಡ್ ಯುನಿರ್ವಸಾಲಿಟಿ ಇನ್ ಸೋಶಿಯಲ್ ಸಯನ್ಸ್*, ನ್ಯೂಡೆಲ್ಲಿ, ಸೇಜ್ ಪಬ್ಲಿಕೇಶನ್ಸ್, ೨೦೦೪
೯೫. ಅನಂತ್ ಕುಮಾರ್ ಗಿರಿ (ಸಂ), *ಕ್ರಿಯೇಟಿವ್ ಸೋಶಿಯಲ್ ರಿಸರ್ಚ್ - ರಿಥಿಂಕಿಂಗ್ ಥಿಯರಿಸ್ ಆಂಡ್ ಮೆಥಡ್ಸ್*, ನ್ಯೂಡೆಲ್ಲಿ: ವಿಸ್ತಾರ್ ಪಬ್ಲಿಕೇಶನ್ಸ್, ೨೦೦೪
೯೬. ಲೆಸ್ಲಿ ಸ್ಟೀವನ್ ಸನ್ ಆಂಡ್ ಡೇವಿಡ್ ಸಿ. ಹಾಬ್ ಮೇನ್, *ಟೆನ್ ಥಿಯರೀಸ್ ಆಫ್ ಹ್ಯೂಮನ್ ನೇಚರ್*, ನ್ಯೂಯಾರ್ಕ್: ಆಕ್ಸ್ ಪರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೮
೯೭. ಹೇನ್ಸ್‌ಶ್ ಜಾರ್ಜ್ ಗಾಡಮರ್, *ಟ್ರುಥ್ ಆಂಡ್ ಮೆಥಡ್*, ಲಂಡನ್: ಕಾಂಟಿನಮ್, ೨೦೦೫
೯೮. ವಿಲಿಯಂ ಡಿಲ್ತಿ, *ಸಿಲೆಕ್ಟೆಡ್ ರೈಟಿಂಗ್ಸ್*, ಟ್ರಾನ್ಸ್‌ಲೇಟೆಡ್ ಆಂಡ್ ಎಡಿಟೆಡ್ ಬೈ ಹೆಚ್.ಪಿ.ರಿಕ್‌ಮೆನ್, ಕೇಂಬ್ರಿಡ್ಜ್: ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್, ೧೯೭೬
೯೯. ಪಾರ್ಥನಾಥ ಮುಖರ್ಜಿ, ಮೆಥಡಲಾಜಿ ಇನ್ ಸೋಶಿಯಲ್ ರಿಸರ್ಚ್, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೨೦೦೦
೧೦೦. ಗುರುಪ್ರೀತ್ ಮಹಾಜನ್, *ಎಕ್ಸ್‌ಪ್ಲಾನೇಸನ್ ಆಂಡ್ ಅಂಡರ್‌ಸ್ಟೇಂಡಿಂಗ್ ಇನ್ ದಿ ಹ್ಯೂಮನ್ ಸಯನ್ಸ್‌ಸ್*, ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೭

೧೧೧. ಸಿ ಎಸ್ ರಿಶರ್ಟ್ ಅಂಡ್ ಎಸ್ ಎಫ್ ರೆಲೀಸ್, 'ಕ್ವಾಲಿಟೇಟಿವ್ ಅಂಡ್ ಕ್ವಾಂಟಿಟೇಟಿವ್ ಇನ್ ಕ್ವಯರಿಸ್ ಆರ್ ನಾಟ್ ಇನ್ ಕಾಂಪಿಟೇಬಲ್ - ಕಾಲ್ ಫಾರ್ ಎ ನ್ಯೂ-ಪರ್‌ಸ್ಪೆಕ್ಟೀವ್', ಇನ್ ಸಿ ಎಸ್ ರಿಶರ್ಟ್ ಅಂಡ್ ಎಸ್ ಎಫ್ ರೆಲೀಸ್(ಸಂ), *ಕ್ವಾಲಿಟೇಟಿವ್ ಕ್ವಾಂಟಿಟೇಟಿವ್ ಡಿಬೇಟ್ - ನ್ಯೂ ಪರ್‌ಸ್ಪೆಕ್ಟೀವ್ಸ್*, ಸಾನ್‌ಫ್ರಾನ್ಸಿಸ್ಕೊ : ಜಸ್ಸಿ ಬೇಸ್, ೧೯೯೪

೧೧೨. ಮಾರ್ಗರೇಟ್ ಮೀಡ್, *ಆಂಥ್ರೊಪಲಾಜಿ - ಎ ಹ್ಯೂಮನ್ ಸಯನ್ಸ್, ಸಿಲೆಕ್ಟೆಡ್ ಪೇಪರ್ಸ್ ೧೯೩೯-೧೯೬೦*, ಟೊರೆಂಟೋ: ವೇನ್ ನಸ್ಟ್ರೇಂಡ್ ಕಂಪೆನಿ, ೧೯೬೪

೧೧೩. ಇ. ಆರ್ ಹೌಸ್, 'ಇಂಟಗ್ರೇಟಿಂಗ್ ದಿ ಕ್ವಾಲಿಟೇಟಿವ್ ಅಂಡ್ ಕ್ವಾಂಟಿಟೇಟಿವ್', ಇನ್ ಸಿ ಎಸ್ ರಿಶರ್ಟ್ ಅಂಡ್ ಎಸ್ ಎಫ್ ರೆಲೀಸ್(ಸಂ), *ಕ್ವಾಲಿಟೇಟಿವ್ ಕ್ವಾಂಟಿಟೇಟಿವ್ ಡಿಬೇಟ್ - ನ್ಯೂ ಪರ್‌ಸ್ಪೆಕ್ಟೀವ್ಸ್*, ಸಾನ್‌ಫ್ರಾನ್ಸ್ ಸಿಸ್ಕೊ: ಜಸ್ಸಿ ಬೇಸ್, ೧೯೯೪

೧೧೪. ಅಮಾತ್ಯ ಸೇನ್, *ಡೆವಲಪ್‌ಮೆಂಟ್ ಯಾಸ್ ಫ್ರೀಡಮ್*, ನ್ಯೂಡೆಲ್ಲಿ : ಆಕ್ಸ್ ಫರ್ಡ್ ಯುನಿವರ್ಸಿಟಿ ಪ್ರೆಸ್, ೨೦೦೦

೧೧೫. ಡೇವಿಡ್ ಎಲ್ ಮೊರ್ಗನ್, 'ಪೆರಾಡೈಮ್ಸ್ ಲೋಸ್ಟ್ ಅಂಡ್ ಪೆರಾಡೈಮ್ಸ್ ಗೈನ್ಡ್ - ಮೆಥಡಲಾಜಿಕಲ್ ಇಂಪ್ಲಿಕೇಶನ್ಸ್ ಆಫ್ ಕಂಬೈನಿಂಗ್ ಕ್ವಾಲಿಟೇಟಿವ್ ಅಂಡ್ ಕ್ವಾಂಟಿಟೇಟಿವ್ ಮೆಥಡ್ಸ್, 'ಇನ್ ವಿಕಿ ಎಲ್ ಪ್ಲಾನೋ ಕ್ಲರ್ಕ್ ಅಂಡ್ ಜಾನಶ್ ಡಬ್ಲ್ಯು ಕ್ರಾಸ್ ವೆಲ್, *ದಿ ಮಿಕ್ಸಡ್ ಮೆಥಡ್ ರೀಡರ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೨೦೦೮, ಪು.೨೭-೬೫

೧೧೬. ರಾಬರ್ಟ್ ಮರ್ಟನ್ ''ಇನ್ ಸೈಡರ್ ಅಂಡ್ ಔಟ್ ಸೈಡರ್ - ಚಾಪ್ಟರ್ ಇನ್ ದಿ ಸೋಶಿಯಲಾಜಿ ಆಫ್ ನೋಲೆಡ್ಜ್'', *ಅಮೇರಿಕನ್ ಜರ್ನಲ್ ಆಫ್ ಸೋಶಿಯಲಾಜಿ*, ವಾಲ್ಯೂಮ್ ೭೮, ನಂ.೧, ಜುಲೈ ೧೯೭೨, ಪು.೯-೪೭

೧೧೭. ವಿಕೀ ಎಲ್ ಪ್ಲಾನೋ ಅಂಡ್ ಜಾನ್ ಡಬ್ಲ್ಯು ಕ್ರಾಸ್ ವೆಲ್, *ದಿ ಮಿಕ್ಸಡ್ ಮೆಥಡ್ಸ್ ರೀಡರ್*, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಶನ್ಸ್, ೨೦೦೮

೧೧೮. ಜೇಮ್ಸ್ ಡಿ ಪೇಬಿಯನ್(ಸಂ), *ಮೈಕಲ್ ಫುಕೋ-ಎಸೆಯಿನ್ಸಿಯಲ್ ವರ್ಕ್ಸ್ ಆಫ್ ಫುಕೋ ೧೯೫೪-೧೯೮೪*, ವಾಲ್ಯೂಂ-೩, ಲಂಡನ್ : ಪೆಂಗ್ವಿನ್ ಬುಕ್ಸ್, ೧೯೯೪

೧೧೯. ಚಂದ್ರಪೂಜಾರಿ, *ಜನಾಯೋಜನೆ - ಹೈದರಾಬಾದ್ ಕರ್ನಾಟಕದ ಅನುಭವಗಳು*, ವಿದ್ಯಾರಣ್ಯ : ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೪

೧೨೦. ನೀರಾಚಂದೋಕೆ, *ಬಿಯಾಂಡ್ ಸೆಕ್ಯುಲರಿಸಂ - ದಿ ರೈಟ್ಸ್ ಆಫ್ ರಿಲಿಜಿಯಸ್ ಮೈನಾರಿಟೀಸ್*, ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೧

೧೨೧. ಮಾಧವ ಗಾಡ್ಗಿಲ್ ಅಂಡ್ ರಾಮಚಂದ್ರ ಗುಹ, *ಇಕಲಾಜಿ ಅಂಡ್ ಇಕ್ವಿಟಿ, ದಿ ಯೂಸ್ ಅಂಡ್ ಎಬ್ಯೂಸ್ ಆಫ್ ನೇಚರ್ ಇನ್ ಕಾಂಟೆಂಪರರಿ ಇಂಡಿಯಾ*, ನ್ಯೂಡೆಲ್ಲಿ : ಪೆಂಗ್ವಿನ್ ಬುಕ್ಸ್ , ೧೯೯೫

೧೧೨. ರಜನಿ ಕೊಥಾರಿ, *ಸ್ಟೇಟ್ ಎಗೇಯಿನ್‌ಸ್ಟ್ ಡೆಮಾಕ್ರಸಿ: ಇನ್‌ಸರ್ಚ್ ಆಫ್ ಹ್ಯೂಮನ್ ಗವರ್ನೆನ್ಸ್*, ಡೆಲ್ಲಿ : ಅಜಂತಾ ಪಬ್ಲಿಷರ್ಸ್, ೧೯೮೮

೧೧೩. ಆಸಿಸ್ ನಂದಿ, ''ಕಲ್ಚರ್, ಸ್ಟೇಟ್ ಆಂಡ್ ರಿಡಿಸ್ಕವರಿ ಆಫ್ ಇಂಡಿಯನ್ ಪೊಲಿಟಿಕ್ಸ್'', *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*, ವಾ.೧೯, ೧೯೮೪, ಪು.೨೦೭೮-೮೩

೧೧೪. ಜೋದ ಎನ್.ಎಸ್., ''ಕಾಮನ್ ಪ್ರೊಪರ್ಟಿ ರಿಸೋರ್ಸ್‌ಸ್'', ಇನ್ ರಾಮಚಂದ್ರ ಗುಹ(ಎಡಿಟೆಡ್), *ಸೋಶಿಯಲ್ ಇಕಲಾಜಿ*, ಡೆಲ್ಲಿ: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೪, ೫

೧೧೫. ಮಹಮ್ಮದ್ ಮೊಹಿದ್ದೀನ್ ಅಬ್ದುಲ್ಲ, *ರೂರಲ್ ಡೆವಲಪ್ ಮೆಂಟ್ ಇನ್ ಬಾಂಗ್ಲಾದೇಶ್, ಪ್ರೊಬ್ಲೆಮ್ಸ್ ಆಂಡ್ ಪ್ರೊಸ್‌ಪೆಕ್ಟ್ಸ್*, ಡಾಕ್ಕಾ: ನೂರ್ ಜಹಾನ್ ಬೇಗಂ, ೧೯೭೯

೧೧೬. ರಾಬರ್ಟ್ ಪುನಮ್, *ಮೇಕಿಂಗ್ ಡೆಮಾಕ್ರಸಿ ವರ್ಕ್, ಸಿವಿಕ್ ಟ್ರೆಡಿಸನ್ಸ್ ಇನ್ ಮೊಡರ್ನ್ ಇಟಲಿ*, ಪ್ರಿನ್ಸ್‌ಟನ್: ಪ್ರಿನ್ಸ್ ಟನ್ ಯುನಿವರ್ಸಿಟಿ ಪ್ರೆಸ್, ೧೯೯೩

೧೧೭. ಜೋನ್ ಹೇರಿಸ್, *ಡಿಪೊಲಿಟಿಸೈಜಿಂಗ್ ಡೆವಲಪ್‌ಮೆಂಟ್: ದಿ ವರ್ಲ್ಡ್ ಬ್ಯಾಂಕ್ ಆಂಡ್ ಸೋಶಿಯಲ್ ಕ್ಯಾಪಿಟಲ್*, ನ್ಯೂಡೆಲ್ಲಿ: ಲೆಫ್ಟ್ ವರ್ಡ್‌ಬುಕ್ಸ್ , ೨೦೦೧

೧೧೮. ಜಿಷ್ಣುದಾಸ್, 'ಇನ್ ಸ್ಟಿಟ್ಯುಷನ್ಸ್ ಆಂಡ್ ಇನ್ ಸೆಂಟಿವ್ಸ್ ಇನ್ ಎ ಗರ್ ವಾಲ್ ವಿಲೇಜ್ - ೧', *ಎಕಾನಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ*, ಸಂ.೩೫, ಸಂಖ್ಯೆ ೪೯, ಡಿಸೆಂಬರ್ ೨೦೦೦, ಪು.೪೩೩೭-೪೪

೧೧೯. ಟಾಟಾ ಎನರ್ಜಿ ರಿಸರ್ಚ್ ಇನ್ ಸ್ಟಿಟ್ಯೂಟ್, ನ್ಯಾಷನಲ್ ಸ್ಟಡಿ ಆನ್ ಜಾಯಿಂಟ್ ಫಾರೆಸ್ಟ್ ಮೆನೇಜ್‌ಮೆಂಟ್, ನ್ಯೂಡೆಲ್ಲಿ: ಮಿನಿಸ್ಟ್ರಿ ಫಾರ್ ಎನ್‌ವೈರನ್‌ಮೆಂಟ್ ಆಂಡ್ ಫಾರೆಸ್ಟ್, ೧೯೯೭

೧೨೦. ಸಕ್ಸೇನಾ ಎನ್.ಸಿ. ಮತ್ತು ಮಧು ಸರೀನ್, 'ದಿ ವೆಸ್ಟರ್ನ್‌ಘಾಟ್ ಫಾರೆಸ್ಟ್ರಿ ಆಂಡ್ ಎನ್‌ವೈರನ್‌ಮೆಂಟ್ ಪ್ರಾಜೆಕ್ಟ್ - ಎ ಪ್ರಿಲಿಮಿನರಿ ಅಸೆಸ್‌ಮೆಂಟ್, 'ಇನ್ ರೋಜರ್ ಜೆಫ್ರಿ ಮತ್ತ ನಂದಿನಿ ಸುಂದರ್ (ಸಂ), ಎ ನ್ಯೂ *ಮೋರಲ್ ಎಕಾನಮಿ ಫಾರ್ ಇಂಡಿಯನ್ ಫಾರೆಸ್ಟ್ಸ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಷನ್, ೧೯೯೯

೧೨೧. ಔಟ್ ರೀಚ್, ಸೋಶಿಯಲ್ ಇಂಪೇಕ್ಟ್ ಸ್ಟಡಿ ಫಾರ್ ಡಿಪಾರ್ಟ್‌ಮೆಂಟ್ ಆಫ್ ಇಂಟರ್‌ನೇಶನಲ್ ಡೆವಲಪ್‌ಮೆಂಟ್ ಆಂಡ್ ಕರ್ನಾಟಕ ಫಾರೆಸ್ಟ್ ಡಿಪಾರ್ಟ್ ಮೆಂಟ್ ಆನ್ ವೆಸ್ಟರ್ನ್‌ಘಾಟ್ ಜೆ ಎಫ್ ಎಮ್ ಪ್ರೋಗಾಮ್ ಇನ್ ಕರ್ನಾಟಕ, ಬೆಂಗಳೂರು: ಔಟ್ ರೀಚ್, ೧೯೯೮

೧೨೨. ಹೀಥರ್ ಬ್ರನ್‌ಸೆಲ್, 'ಫೆಮಿನಿಸ್ಟ್ ಮೆಥಡಲಾಜಿ', ಕ್ಲೈವ್ ಸೀಲ್(ಸಂ), *ರಿಸರ್ಚಿಂಗ್ ಸೊಸೈಟಿ ಆಂಡ್ ಕಲ್ಚರ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೧೯೯೮

೧೨೩. ಚಂದ್ರ ಪೂಜಾರಿ, *ಸಂಶೋಧಕರು ಮತ್ತು ಕ್ಷೇತ್ರಕಾರ್ಯ*, ವಿದ್ಯಾರಣ್ಯ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೧೨೪. ಕಾಥಿ ಶರ್ಮೇಜ್, *ಕನ್‌ಸ್ಟ್ರಕ್ಟಿಂಗ್ ಗ್ರೌಂಡೆಂಡ್ ಥಿಯರಿ - ಎ ಪ್ರಾಕ್ಟಿಕಲ್ ಗೈಡ್ ಥ್ರೋ ಕ್ವಾಲಿಟೇಟಿವ್ ಎನಾಲಿಸಿಸ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೨೦೦೬

೧೨೫. ಜೋಸೆಪ್ ಗಿಬಾಲ್ಡಿ ಮತ್ತು ವಾಲ್ಟರ್ ಎಸ್ ಎಶರ್ಟ್, *ಎಂಎಲ್‌ಎ ಹೇಂಡ್ ಬುಕ್ ಫಾರ್ ರೈಟರ್ಸ್ ಆಫ್ ರಿಸರ್ಚ್ ಪೇಪರ್ಸ್*, ಬೆಂಗಳೂರು: ಎಫಿಲಿಯೆಟೆಡ್ ಇಸ್ಟ್ ವೆಸ್ಟ್ ಪ್ರವೈಟ್ ಲಿಮಿಟೆಡ್, ೧೯೮೮

೧೨೬. ಅಡ್ರಿಯನ್ ಹಾಲಿಡೇ, *ಡುಯಿಂಗ್ ಆಂಡ್ ರೈಟಿಂಗ್ ಕ್ವಾಲಿಟೀಟಿವ್ ರಿಸರ್ಚ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೨೦೦೭

೧೨೭. ಜೆ.ಎ.ಸಿ.ಬ್ರೌನ್, *ದಿ ಸೋಶಿಯಲ್ ಸೈಕಲಾಜಿ ಆಫ್ ಇಂಡಸ್ಟ್ರೀಸ್*, ಗ್ರೇಟ್ ಬ್ರಿಟನ್: ಪೆಂಗ್ವಿನ್ ಬುಕ್ಸ್, ೧೯೭೪

೧೨೮. ವಿಲಿಯಂ ಜೆ. ಗುಡೇ ಮತ್ತು ಪೌಲ್ ಕೆ.ಹೆಟ್., *ಮೆಥಡ್ಸ್ ಇನ್ ಸೋಶಿಯಲ್ ರಿಸರ್ಚ್*, ಸಿಂಗಾಪೂರ್: ಮೆಕ್‌ಗ್ರೋಹಿಲ್ ಬುಕ್ ಕಂಪೆನಿ, ೧೯೫೨

೧೨೯. ವಾಲ್ಟರ್ ಫೆರ್ನಾಡೀಸ್ ಮತ್ತು ಪಿಲಿಪ್ ವೇಗಾಸ್, *ಪಾರ್ಟಿಸಿಪೇಟರಿ ಆಂಡ್ ಕನ್‌ವೆನ್‌ಶನಲ್ ರಿಸರ್ಚ್ ಮೆಥಡಲಾಜಿಸ್*, ನ್ಯೂಡೆಲ್ಲಿ: ಇಂಡಿಯನ್ ಸೋಶಿಯಲ್ ಇನ್ಸಿಟ್ಯೂಟ್, ೧೯೮೫

೧೩೦. ಪಿ. ಫಯರ್‌ಬೆಂಡ್, *ಎಗೆನೆಸ್ಟ್ ಮೆಥಡ್*, ಲಂಡನ್:ನ್ಯೂಲೆಫ್ಟ್ ರಿವ್ಯೂ, ೧೯೭೫

೧೩೧. ವಿಲ್‌ಮೆನ್ ಎಂ. ಆಂಡ್ ಕಾಂಟರ್ ಆರ್.ಎ.(ಸಂ), *ಎನದರ್ ವಾಯಿಸ್-ಫೆಮಿನಿಸ್ಟ್ ಪರ್ಸಪೆಕ್ಟೀವ್ಸ್ ಆನ್ ಸೋಶಿಯಲ್ ಲೈಫ್ ಆಂಡ್ ಸೋಶಿಯಲ್ ಸಯನ್ಸ್*, ನ್ಯೂಯಾರ್ಕ್: ಆ್ಯಂಕರ್ ಪಬ್ಲಿಕೇಶನ್ಸ್, ೧೯೭೪

೧೩೨. ಪಾರ್ಥನಾಥ ಮುಖರ್ಜಿ (ಸಂ), *ಮೆಥಡ್ ಇನ್ ಸೋಶಿಯಲ್ ರಿಸರ್ಚ್-ಡಯಲೆಮಾಸ್ ಆಂಡ್ ಪರ್ಸ್‌ಪೆಕ್ಟೀವ್ಸ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೨೦೦೦

೧೩೩. ಮಾಲ್ಕಮ್ ಕ್ರಿಕ್ ಆಂಡ್ ಬಿಲ್‌ಗೆಡ್ಸ್ (ಸಂ), *ರಿಸರ್ಚ್‌ಮೆಥಡ್ಸ್ ಇನ್ ದ ಫೀಲ್ಡ್*, ನ್ಯೂಡೆಲ್ಲಿ : ಆನ್‌ಮೋಲ್ ಪಬ್ಲಿಕೇಶನ್ಸ್, ೨೦೦೬,

೧೩೪. ಆನ್‌ಸೆಲ್ಮ್ ಸ್ಟ್ರಾಸ್ ಆಂಡ್ ಜೂಲಿಯೆಟ್ ಕಾರ್ಬಿನ್, *ಬೆಸಿಕ್ಸ್ ಆಫ್ ಕ್ವಾಲಿಟೆಟಿವ್ ರಿಸರ್ಚ್*, ನ್ಯೂಡೆಲ್ಲಿ: ಸೇಜ್ ಪಬ್ಲಿಕೇಶನ್ಸ್, ೧೯೯೮

೧೩೫. ಚಂದ್ರ ಪೂಜಾರಿ, *ದೇಶಿಯತೆಯ ನೆರಳಲ್ಲಿ ವಿಕೇಂದ್ರೀಕರಣ*, ವಿದ್ಯಾರಣ್ಯ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೦

ಪರಿಶೀಲನ ವರದಿ ೧

ನೀವು ಬರೆದು ಮುಗಿಸಿದ ''ಸಂಶೋಧನೆ-ಏನು? ಏಕೆ? ಹೇಗೆ?'' ಎಂಬ ಕೃತಿಯ ಹಸ್ತಪ್ರತಿಯನ್ನು ಓದಿದೆ. ಸಂಶೋಧನೆಯ ಬಗ್ಗೆ ಆಸಕ್ತಿ ಇರುವವರಿಗೆ ಅದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡುವವರಿಗೆ ಮುಟ್ಟುವಂಥಾ, ಅವರು ಓದಿ ತಮ್ಮ ಅಭಿಪ್ರಾಯಗಳನ್ನು ಬದಲಿಸಬೇಕಾಗುವ, ಅಥವಾ ಕದಲಿಸಬೇಕಾಗುವ ನಿಟ್ಟಿನಲ್ಲಿ ಒಂದು ಪ್ರೌಢ ಕೃತಿಯನ್ನು ಬರೆದಿದ್ದೀರಿ. ಅದಕ್ಕಾಗಿ ನೀವು ಅಭಿನಂದನಾ ಯೋಗ್ಯರು.

ಸಂಶೋಧನೆಯು ಈಗ ಹೊಟ್ಟೆಪಾಡಿಗಾಗಿ ನಡೆಯುವುದೇ ಹೆಚ್ಚು. ಅದನ್ನು ನಡೆಸುವವರಿಗೆ ಯಾವ ನಿರ್ದೇಶನವಾಗಲೀ, ವಿಷಯದ ಬಗ್ಗೆ ಚರ್ಚೆಯಾಗಲೀ, ಮಾರ್ಗದರ್ಶನವಾಗಲೀ ಅನಗತ್ಯ. ಆದರೆ ಸಂಶೋಧನೆಯು ಡಿಗ್ರಿ ಕಸಿಯುವ ಹುನ್ನಾರವಾಗದೆ ಒಂದು ಬೌದ್ಧಿಕ ಕಾರ್ಯಕ್ರಮವೆಂದು ತಿಳಿದಾಗ ಅದರ ಚೌಕಟ್ಟು, ವಿಧಾನಗಳು, ಹೊಣೆಗಾರಿಕೆ ಇವೆಲ್ಲವೂ ಗಂಭೀರ ವಿಷಯವಾಗುತ್ತವೆ. ಸಂಶೋಧನೆಯು ಬರೇ ಬೆವರಿಳಿಸುವ ಕಾಯಕ ಮಾತ್ರವಲ್ಲ. ಒಂದು ಜಿಜ್ಞಾಸೆಯ ವಸ್ತುವಾಗಿ ಪರಿಣಮಿಸಬೇಕು. ವೈಧಾನಿಕತೆ ಮೇಲಿನ ಬರಹಗಳು ಸಂಶೋಧನಾ ವಿಧಾನಗಳ ಬಗ್ಗೆ ನೀಡಬಹುದಾದ ಕೈಪಿಡಿಯಾಗಿ ಅಷ್ಟೇ ಅಲ್ಲ; ಅದರೊಳಗಿರುವ ಸೈದ್ಧಾಂತಿಕ ನೆಲೆ, ಸಾಮಾಜಿಕ ಸೆಲೆ ಮುಂತಾದವುಗಳನ್ನು ಉತ್ಖನನ ಮಾಡುವುದೂ ಅವಶ್ಯ. ಅಂದರೆ ಸಂಶೋಧನೆ ನಡೆಯುವುದು ಗ್ರಂಥಾಲಯಗಳಲ್ಲಿ ಅಥವಾ ವಿಷಯಕ್ಕೆ ಸಂಬಂಧಪಟ್ಟ ನಿಗದಿತ ಕ್ಷೇತ್ರಕಾರ್ಯಗಳಲ್ಲಿ ಮಾತ್ರವಲ್ಲ(ಎಷ್ಟೋ ಬಾರಿ ಅಷ್ಟಾದರೂ ಆದರೆ ಸಾಕೆನ್ನುವ ಶೀಘ್ರ ಸುಖದ ಕಲ್ಪನೆಯನ್ನು ನಾವು ಇಟ್ಟು ಕೊಳ್ಳಬೇಕಾಗುವ ಪರಿಸ್ಥಿತಿ ನಿರ್ಮಾಣವಾಗಿದೆ). ಆದರೆ ನಿಜವಾದ ಅರ್ಥದಲ್ಲಿ ಸಂಶೋಧನೆ ನಡೆಯುವುದು ಸಾಮಾಜಿಕ ಸ್ತರದಲ್ಲಿ. ಸಮಾಜವು ಸಮಾಜಮುಖಿಯಾಗಿ ನಡೆಸುವ ಕ್ಷಕಿರಣ, ವಿಶ್ಲೇಷಣೆಗಳು ನಿಜವಾದ ಸಂಶೋಧನೆ. ಅದರ ಸಾಮಗ್ರಿ ವಿಧಾನಗಳೆಲ್ಲವೂ ಈ ಮೇಲಿನ ಚೌಕಟ್ಟಿನೊಳಗೆ ಸೇರಿವೆ. ಈ ಸತ್ಯವನ್ನು ತಿಳಿಯದೇ ಎಷ್ಟೋಬಾರಿ ಸಂಶೋಧನೆಯನ್ನು ಒಂದು ನಿರ್ಲಿಪ್ತವಾದ ಪ್ರಕ್ರಿಯೆ ಎಂದು ತಿಳಿಯು ವುದುಂಟು. ನಿರ್ಲಿಪ್ತತೆಯನ್ನು ವಸ್ತುನಿಷ್ಠತೆಗೆ ಸಮೀಕರಿಸಿಕೊಂಡು, ಸಂಶೋಧನೆಯು ಸರ್ವಕಾಲಿಕ ನಿಜ ಸತ್ಯದ ಅರಸುವಿಕೆ ಅಥವಾ ಗ್ರಹಿಕೆ ಎಂಬ ಮಂಡನೆ ಅಪರೂಪದ್ದೇನಲ್ಲ.

ಇದು ಕೇಳಲು ರಮ್ಯವಾದರೂ ವಾಸ್ತವದಿಂದ ದೂರ. ಅದರಲ್ಲಿ ಅನೇಕ ಪದರುಗಳು, ದ್ವಂದ್ವಗಳು, ತಾಕಲಾಟಗಳು, ಆಶಯಗಳು, ದುಃಖದುಮ್ಮಾನಗಳು, ವಿಜಯಗಳು, ನಿರಾಶೆಗಳು ಒಳಗೊಂಡಿವೆ. ಶ್ರೇಣೀಕೃತ ಸಮಾಜವು ನಗ್ನಸತ್ಯ. ಅದು ಬದಲಾಗುವ ಬದಲಾಗಬೇಕಾದ ಸಮಾಜ. ಇದನ್ನು ನೋಡದೆ, ಅಥವಾ ಧಿಕ್ಕರಿಸಿ ಸಮಾಜ ಅಧ್ಯಯನ ಅಥವಾ ಸಂಶೋಧನೆ ಅಸಾಧ್ಯ. ಸಂಶೋಧನೆಯ ಏನು, ಏಕೆ, ಹೇಗೆಗಳ ಇಡೀ ಚರ್ಚೆಯಲ್ಲಿ ನೀವು ಈ ಎಲ್ಲ ವಿಚಾರವನ್ನು ಮುಂದಿಟ್ಟು, ಮುಂದುವರಿದಿರುವುದು ಗಮನಾರ್ಹ. ವಿಜ್ಞಾನ ಸಂಶೋಧನೆಯೇ ನಿರ್ಲಿಪ್ತವಾಗಿ ನಡೆಯೊಲ್ಲ ಎಂಬ ಥಾಮಸ್ ಕುನ್ ಅವರ ವಾದ ಸಮಾಜ ಅಧ್ಯಯನಕ್ಕೆ ಇನ್ನೂ ಹೆಚ್ಚಾಗಿ ಅನ್ವಯಿಸುತ್ತದೆ. ಸತ್ಯದ ಏಕರೂಪವನ್ನು ನಿರಾಕರಿಸುವುದು ದುಷ್ಟತನವೇನಲ್ಲ. ಪರ್ಯಾಯವಾಗಿ ಅದು ಅನೇಕ ಸತ್ಯಗಳ ಅಸ್ತಿತ್ವ ಹಾಗೂ ಅವುಗಳು ಬದಲಾಗುವ ನಿರಂತರ ಸಾಧ್ಯತೆಯನ್ನು ಒಪ್ಪಿಕೊಳ್ಳುತ್ತದೆ. ಸಮಾಜದ ಸಮಸ್ಯೆಗಳು ನಮ್ಮ ಸಮಸ್ಯೆಗಳಾಗುದು ನಾವು ಅವುಗಳನ್ನು ನಮ್ಮ ದೃಷ್ಟಿಯಲ್ಲಿ ನೋಡಿದಾಗ. ಇಲ್ಲವಾದರೆ ಅವುಗಳು ಗಾಳಿಯಲ್ಲಿ ಬಿಕನಾಸಿಗಳಾಗಿ ತೇಲಾಡುವ ಸಮಸ್ಯೆ ಗಳಾಗುತ್ತವೆ. ಅವುಗಳನ್ನು ನೋಡುವುದು ಅಥವಾ ಬಿಡುವುದು ನಮ್ಮ ಕ್ಷಣಿಕ ಆಸಕ್ತಿಯನ್ನು ಅವಲಂಬಿಸುತ್ತದೆ. ಸಮಾಜದ ಅಧ್ಯಯನ, ಸಂಶೋಧನೆಗಳು ಸಮಾಜದ ವಿವಿಧ ಘಟಕಗಳ ಭಾವನಾ ತೀವ್ರತೆ, ಬದ್ಧತೆಗಳನ್ನು ಪ್ರತಿ ಬಿಂಬಿಸಬೇಕು. ಆಗಲೇ ಅದು ಅರ್ಥಪೂರ್ಣವಾಗುತ್ತದೆ. ನಿಮ್ಮ ಕೃತಿಯಲ್ಲಿ ಈ ಎಲ್ಲಾ ವಿಚಾರಗಳನ್ನು ವಿಸ್ತೃತವಾಗಿ ಪ್ರತಿಪಾದಿಸಿದ್ದೀರಿ. ಆ ಕಾರಣದಿಂದ ನಿಮ್ಮ ಕೃತಿಯು ಒಂದು ಪ್ರತ್ಯೇಕವಾದ ಮೌಲ್ಯ ಕೃತಿಯಾಗಿ ಹೊರಬಂದಿದೆ. ಸಂಶೋಧನೆಯ ಹಳೆಯ ಜಾಡಿನಲ್ಲಿ ಪ್ರಾಮಾಣಿಕವಾಗಿ ಮುಂದುವರಿಯುವ ಜನಕ್ಕೆ ಇದು ಒಪ್ಪಿಗೆಯಾಗದೇ ಇರಬಹುದು. ಆದರೆ ಸಂಶೋಧನೆಯ ಸಾಮಾಜಿಕ ಬದ್ಧತೆಯು ಅದನ್ನು ಹೊಸದಾರಿಯಲ್ಲಿ ಕೊಂಡೊಯ್ಯಲು ಸಾಧ್ಯ. ನಮ್ಮ ಆಲೋಚನಾ ಕ್ರಮಗಳನ್ನು ವಿರಚಿಸಿದಾಗಲೇ ಹೊಸತು ಹುಟ್ಟಲು ಸಾಧ್ಯ. ಈ ನಿಟ್ಟಿನಲ್ಲಿ ನಿಮ್ಮ ಕೃತಿಯು ಖಂಡಿತಾ ಸೋಲಲಾರದು ಎಂಬ ಭರವಸೆ ನನಗಿದೆ.

ಬಿ. ಸುರೇಂದ್ರರಾವ್

ಪರಿಶೀಲನ ವರದಿ ೨

ಡಾ. ಚಂದ್ರ ಪೂಜಾರಿಯವರು ಬರೆದ ಈ ಹೊತ್ತಿಗೆ ('ಸಂಶೋಧನೆ-ಏನು? ಏಕೆ? ಹೇಗೆ?')ಯಲ್ಲಿ ಸಂಶೋಧನೆಯನ್ನು ಕೈಗೊಳ್ಳಲು ಹೊರಡುವವರಿಗೆ ಮತ್ತು ಈಗಾಗಲೇ ಸಂಶೋಧನೆಯಲ್ಲಿ ತೊಡಗಿರುವವರಿಗೆ ಬೇಕಾದ ಹತ್ತಾರು ಸಂಗತಿಗಳು ಅಡಕವಾಗಿವೆ. ಇಂತಹ ಉದ್ದೇಶದ ಬರವಣಿಗೆಗಳು ಸಾಮಾನ್ಯವಾಗಿ ಇಂಗ್ಲಿಶ್ ಇಲ್ಲವೇ ಬೇರೊಂದು ನುಡಿಯಲ್ಲಿರುವ ಬರವಣಿಗೆಗಳ ಪೇಲವ ನಕಲುಗಳಾಗಿರುತ್ತವೆ. ಆದರೆ ಈ ಹೊತ್ತಗೆ ಅಂತಹ ಕೈಪಿಡಿಗಳ ಮಾದರಿಯನ್ನು ಅನುಸರಿಸಿಲ್ಲ. ಬದಲಿಗೆ ಸಂಶೋಧನೆಯ ತಾತ್ವಿಕ ಚೌಕಟ್ಟುಗಳನ್ನು ಹಲವು ನೆಲೆಗಳಲ್ಲಿ ಪರಿಚಯಿಸುತ್ತಲೇ ಓದುವವರು ತಮ್ಮದೇ ಆದ ಬಗೆಯಲ್ಲಿ ಚಿಂತನೆಯಲ್ಲಿ ತೊಡಗುವಂತೆ ಮಾಡಬಲ್ಲುದಾಗಿದೆ.

ಸಾಮಾಜಿಕ ವಿಷಯಗಳಲ್ಲಿ ಸಂಶೋಧನೆಯಲ್ಲಿ ತೊಡಗುವವರು ಆಯ್ದುಕೊಂಡ ವಿಷಯವನ್ನು ಸಮಸ್ಯೆಯನ್ನಾಗಿ ಪರಿವರ್ತಿಸಿಕೊಳ್ಳುವುದು ಹೇಗೆ ಎಂಬ ಪ್ರಶ್ನೆಯನ್ನು ಯಾವಾಗಲೂ ಎದುರಿಸುತ್ತಿರುತ್ತಾರೆ. ಆದರೆ ಹೆಚ್ಚು ಜನರು ಇದಕ್ಕೆ ಉತ್ತರವನ್ನು ಕಂಡುಕೊಳ್ಳುವ ಬದಲು ಈವರೆಗೆ ನಡೆದಿರುವ ಸಂಶೋಧನೆಗಳ ಫಲಿತಗಳನ್ನು ಆಧರಿಸಿ ತಮ್ಮ ಶೋಧಗಳನ್ನು ವಿಸ್ತರಿಸುವ ಇಲ್ಲವೇ ಆ ಫಲಿತಗಳನ್ನು ಕ್ರೋಢೀಕರಿಸುವ ಸುಲಭದ ಹಾದಿಗಳನ್ನು ಹಿಡಿಯುತ್ತಿರುತ್ತಾರೆ. ಅಲ್ಲದೆ ಸಂಶೋಧನೆಯ ವಿಧಾನಗಳ ಹಿಂದಿನ ತಾತ್ವಿಕ ನೆಲೆಗಳನ್ನು ಕಂಡುಕೊಳ್ಳುವ ಗೋಜಿಗೂ ಹೋಗುವುದಿಲ್ಲ. ಎಷ್ಟೋ ಜನರು ವಿಧಾನಗಳ ಹಿಂದೆ ಒಂದು ತಾತ್ವಿಕ ನೆಲೆ ಇರುತ್ತದೆ ಎನ್ನುವುದನ್ನು ನಂಬಲೂ ಸಿದ್ಧರಿಲ್ಲ. ಇಂತಹ ಪರಿಸರದಲ್ಲಿ ಚಂದ್ರಪೂಜಾರಿಯವರು ತಮ್ಮ ಬರಹಗಳ ಮೂಲಕ ತಿಳುವಳಿಕೆಯನ್ನು ನೀಡಲು ಮುಂದಾಗಿರುವುದು ಅಭಿನಂದನೀಯ ಸಂಗತಿಯಾಗಿದೆ.

ಡಾ.ಪೂಜಾರಿಯವರು ತಮ್ಮ ಹಿಂದಿನ ಬರಹಗಳಿಗಿಂತ ಈ ಹೊತ್ತಿಗೆಯ ಬರಹದಲ್ಲಿ ಕೆಲವು ಹೊಸ ದಾರಿಗಳನ್ನು ತುಳಿದಿದ್ದಾರೆಂದು ನಾನು ತಿಳಿಯುತ್ತೇನೆ. ಈ ಹಿಂದೆ ಸಂಶೋಧನೆಯನ್ನು ಕುರಿತ ಅವರ ಬರವಣಿಗೆ ಹೆಚ್ಚು ರ್‍ಯಾಡಿಕಲ್ ಎನ್ನಬಹುದಾದ ಧಾಟಿಯಲ್ಲಿತ್ತು. ಅಂದರೆ ಪ್ರಚಲಿತ ವಿಧಾನಗಳ ಇಕ್ಕಟ್ಟು ಮತ್ತು ಮಿತಿಗಳನ್ನು ಎತ್ತಿ ಹೇಳುವ ಕಡೆ ಅವರ ಗಮನ ಹೆಚ್ಚು ಕೇಂದ್ರೀಕೃತವಾಗಿತ್ತು. ಅದು ತಪ್ಪೇನೂ ಅಲ್ಲವಾದರೂ

ಹೊಸಬರಿಗೆ ಆದರಿಂದ ತಮ್ಮದೇ ದಾರಿಯನ್ನು ಕಂಡುಕೊಳ್ಳಲು ಹೆಚ್ಚಿನ ನೆರವು ಸಿಗುವಂತಿರಲಿಲ್ಲ. ಸಂಶೋಧನೆಯನ್ನು ಕುರಿತಂತೆ ಒಂದು ವಾದವನ್ನು ಹೂಡುವ ಆಸಕ್ತಿ ಆ ಬರಹದಲ್ಲಿ ಕಾಣುತ್ತಿತ್ತು. ಆದರೆ ಈ ಹೊತ್ತಿಗೆಯಲ್ಲಿ ಡಾ.ಪೂಜಾರಿಯವರು ಹೆಚ್ಚು ಒಳಗೊಳ್ಳುವ ಹಾದಿಯನ್ನು ಹುಡುಕಿದ್ದಾರೆ. ವಿವಿಧ ಬಗೆಗಳ ಮೂಲಕವೇ, ಅವುಗಳನ್ನು ಪೂರ್ಣವಾಗಿ ನಿರಾಕರಿಸದೆಯೂ ತಮ್ಮ ವಾದವನ್ನು ಮಂಡಿಸುವ ಬಗೆಯೊಂದನ್ನು ಕಂಡುಕೊಂಡಿದ್ದಾರೆ. ಇದರಿಂದ ಘರ್ಷಣೆಯ ಹಾದಿಯನ್ನು ಬಿಟ್ಟು ಕೊಟ್ಟಂತಾಗಿದೆ. ಇದರಿಂದಾಗಿ ಈ ಹೊತ್ತಿಗೆಯು ಓದುಗರಲ್ಲಿ ಪಡೆದುಕೊಳ್ಳುವ ಪ್ರತಿಕ್ರಿಯೆಯ ಬಗೆಗೆ ನನಗೆ ಕುತೂಹಲವಿದೆ.

ಡಾ.ಕೆ.ವಿ.ನಾರಾಯಣ

"ಸಂಶೋಧನೆ–ಏನು? ಏಕೆ? ಹೇಗೆ?" ಎನ್ನುವ ಈ ಕೃತಿಯಲ್ಲಿ ಸಂಶೋಧನೆಯ ಸಾಂಪ್ರದಾಯಿಕ ವ್ಯಾಖ್ಯಾನ ಮತ್ತು ಸಂಶೋಧನೆಯ ದೃಷ್ಟಿಕೋನಗಳನ್ನು ಬದಲಾಯಿಸಲು ಪೂರಕವಾಗುವ ಸಾಕಷ್ಟು ನೆಲೆಗಳನ್ನು ನೀಡಿರುವುದು ವಿಶೇಷವಾಗಿದೆ. ಸಂಶೋಧನೆಯನ್ನು ಸತ್ಯ/ವಾದದ ಪ್ರತಿಪಾದನೆಯೆಂದು ವ್ಯಾಖ್ಯಾನಿಸಿರುವ ಇವರು, ಈಗಾಗಲೇ ಸ್ಥಾಪಿತ ಸತ್ಯ/ವಾದಗಳೊಂದಿಗೆ ಸಂವಾದ ನಡೆಸಿ ತಮ್ಮ ಸತ್ಯ/ವಾದವನ್ನು ಪ್ರತಿಪಾದನೆ ಮಾಡುವುದು ಮತ್ತು ಈಗಾಗಲೇ ಸ್ಥಾಪಿತವಾದ ಸತ್ಯ/ವಾದಗಳೊಂದಿಗೆ ಸಂವಾದ ನಡೆಸುವುದು ಇಲ್ಲಿ ಬಹುಮುಖ್ಯ ಅಂಶ. ಈಗಾಗಲೇ ಸ್ಥಾಪಿತವಾದ ಎಲ್ಲ ಬಗೆಯ ಸತ್ಯ/ವಾದಗಳೊಂದಿಗೆ ಸಂವಾದ ನಡೆಸಿ ಸತ್ಯ/ಪ್ರತಿಪಾದನೆ ನಡೆದರೆ ಪ್ರತಿಪಾದಿತ ಸತ್ಯ ಹೆಚ್ಚು ವಸ್ತುನಿಷ್ಠ ಎಂದು ಚಂದ್ರ ಪೂಜಾರಿ ಅವರು ವಾದಿಸಿದ್ದಾರೆ. ಆದುದರಿಂದ ಇಲ್ಲಿ ವಸ್ತುನಿಷ್ಠತೆಯ ಪರೀಕ್ಷೆ ಪೊಸಿಟಿವಿಸ್ಟ್‌ಗಳು ಮುಂದಿಡುವ ಊಹೆಗಳ (ಹೈಪೋಥಿಸಿಸ್ ಟೆಸ್ಟಿಂಗ್) ಪರೀಕ್ಷೆಯಲ್ಲ. ಲೋಕಲ್ ಮತ್ತು ಗ್ಲೋಬಲ್ ಸ್ಥಾಪಿತ ಸತ್ಯಗಳೊಂದಿಗೆ ಸಂವಾದ ನಡೆಸಿ ಸತ್ಯ/ವಾದ ಪ್ರತಿಪಾದನೆ ನಡೆಸುವುದು ಇಲ್ಲಿ ವಸ್ತುನಿಷ್ಠೆಯ ಬಹುದೊಡ್ಡ ಪರೀಕ್ಷೆ. ಲೋಕಲ್ ಹಾಗೂ ಗ್ಲೋಬಲ್ ಸ್ಥಾಪಿತ ಸತ್ಯಗಳು ಅಧಿಕಾರವನ್ನು, ಸಂಪನ್ಮೂಲಗಳನ್ನು, ಸ್ಥಾನಮಾನಗಳನ್ನು ಸಮಾಜದ ವಿವಿಧ ವ್ಯಕ್ತಿ/ಕುಟುಂಬ/ಗುಂಪುಗಳ ನಡುವೆ ಅಸಮಾನವಾಗಿ ಹಂಚುವಲ್ಲಿ ಬಹುದೊಡ್ಡ ಪಾತ್ರ ವಹಿಸುತ್ತವೆ. ಸಂಪನ್ಮೂಲಗಳ ಸ್ಥಾನಮಾನಗಳ ಅಸಮಾನ ಹಂಚುವಿಕೆಗೆ ಕಾರಣವಾಗಿರುವ ಸತ್ಯ/ವಾದಗಳನ್ನು ಅಲ್ಲಗಳೆದು ಹೊಸ ಸತ್ಯ/ವಾದಗಳನ್ನು ಮುಂಚೂಣಿಗೆ ತರುವುದು ಸಂಶೋಧನೆಯ ಬಹುದೊಡ್ಡ ಜವಾಬ್ದಾರಿ ಕೂಡ ಎನ್ನುವುದು ಈ ಬರಹದ ಬಹುಮುಖ್ಯ ವಾದವಾಗಿ ಕಂಡುಬರುತ್ತದೆ. ಸಂಶೋಧನ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿರುವ ಈ ಗ್ರಂಥ ಇದೀಗ ಮರುಮುದ್ರಣವಾಗುತ್ತಿದೆ. ಮರುಮುದ್ರಿಸಲು ಒಪ್ಪಿದ ಡಾ. ಚಂದ್ರ ಪೂಜಾರಿ ಅವರಿಗೆ ಕನ್ನಡ ವಿಶ್ವವಿದ್ಯಾಲಯ ಅಭಾರಿಯಾಗಿದೆ.

ಡಾ. ಎ. ಮುರಿಗೆಪ್ಪ
ಕುಲಪತಿ

₹ ೧೬೦/-

ISBN 938099488-5
ISBN : 978-93-80994-88-8